ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಅಜ್ಜಯ್ಯ ಸಿ.

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೪

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಅಜ್ಜಯ್ಯ .ಸಿ

ಮಾರ್ಗದರ್ಶಕರು

ಡಾ. ಮೊಗಳ್ಳಿ ಗಣೇಶ್

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬

ಪ್ರಮಾಣ ಪತ್ರ

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಮೊಗಳ್ಳಿ ಗಣೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30/9/06

ಸ್ಥಳ : ವಿದ್ಯಾರಣ್ಯ

(ಅಜ್ಜಯ್ಯ .ಸಿ)
ಪಿಎಚ್.ಡಿ. ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬


ದೃಢೀಕರಣ ಪತ್ರ

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಶ್ರೀ ಅಜ್ಜಯ್ಯ .ಸಿ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30/9/06
ಸ್ಥಳ : ವಿದ್ಯಾರಣ್ಯ

(ಡಾ. ಮೊಗಳ್ಳಿ ಗಣೇಶ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಹೈದ್ರಾಬಾದ್ ಕರ್ನಾಟಕ ಅಲೆಮಾರಿ ಸಮುದಾಯಗಳ ಕ್ಷೇತ್ರಕಾರ್ಯ ಮಾಡಿದ ಜಿಲ್ಲೆಗಳು



<u>ಪರಿವಿಡಿ</u>

ಅಧ್ಯಾಯ ೧

ಪ್ರವೇಶ - ವ್ಯಾಪ್ತಿ - ವಿಧಾನ

ಪ್ರವೇಶ - ವ್ಯಾಪ್ತಿ - ವಿಧಾನ

ಪ್ರವೇಶ

ವೈವಿಧ್ಯತೆಯ ತತ್ವವನ್ನು ಆಧರಿಸಿ ನಿಂತಿರುವ ಮಾನವ ಸಮಾಜವು ಸಾಮ್ಯತೆಯನ್ನು ಹೊಂದಿದೆ ಎಂದು ಹೇಳಲಾಗದು. ಹಾಗೆಯೆ ಸಮಾಜದ ಸದಸ್ಯರು ಪಡಿಯಚ್ಚುಗಳೇನು ಅಲ್ಲ. ಪರಸ್ಪರರು ಭಿನ್ನವಾಗಿದ್ದಾರೆ. ಈ ಭಿನ್ನತೆಯಿಂದ ಸಮಾಜದಲ್ಲಿ ಮೆರಗು, ಜೀವಕಳೆಯಿದೆ. ಸಮಾಜದಲ್ಲಿ ಸಾಮ್ಯತೆ ಸಾದೃಶ್ಯಗಳು ಇದ್ದರೆ ಅಂತಹ ಸಮಾಜವು ವಿಕಾಸದ ಅನಂತ ಪಯಣವನ್ನು ಮಾಡಲಾರದು. ಸಾಮಾಜಿಕ ಜೀವನವು ರೋಮಾಂಚನಕಾರಿಯಾಗಿರಲು ಕಾರಣ ವೈವಿಧ್ಯತೆ. ವೈವಿಧ್ಯತೆಯಿಂದ ಸಮಾಜದಲ್ಲಿ ಅನೇಕ ಬಗೆಯ ಸಾಧ್ಯತೆಗಳು ಸವಾಲುಗಳು ಸಂಕೀರ್ಣ ತಾಕಲಾಟಗಳು ಉದ್ಭವಿಸುತ್ತವೆ. ಇಂತಹ ಸಂಘರ್ಷದ ಒಳಗಿದ್ದುಕೊಂಡೆ ಸಮುದಾಯಗಳು ತಮ್ಮ ತಮ್ಮ ಚಹರೆಗಾಗಿ ಸಮಾಜೋ-ಆರ್ಥಿಕ ವ್ಯವಸ್ಥೆಯ ಜೊತೆಗೆ ಮುಖಾಮುಖಿಯಾಗುತ್ತಿರುತ್ತವೆ. ಅಸಮಾನತೆ ಸೃಷ್ಟಿಯಲ್ಲಿಯೆ ಇದೆ ಎಂಬುದನ್ನು ತಿಳಿಸಿದ ಸಮುದಾಯಗಳಿವೆ. ಅದನ್ನು ನಂಬಿ ಸತ್ಯವಿರಬಹುದೆಂದು ನಂಬಿದ ಸಮುದಾಯಗಳೂ ಇವೆ. ಎರಡು ಸಮುದಾಯಗಳು ಪ್ರಭೇದದ ಮೂಲಕ ತಮ್ಮ ತಮ್ಮ ಬದುಕನ್ನು ಕಟ್ಟಿಕೊಂಡಿವೆ. ಭೇದ ಪ್ರಭೇದಗಳನ್ನೊಳಗೊಂಡ ವಯಸ್ಸು, ಲಿಂಗ, ವೃತ್ತಿ, ಪ್ರವೃತ್ತಿ, ವಾಸದ ನೆಲೆ, ನಂಬಿಕೆ, ಸಾಂಸ್ಕೃತಿಕ ನಡವಳಿಕೆ ವೈಯಕ್ತಿಕ ಸಾಮರ್ಥ್ಯ ಮುಂತಾದವುಗಳ ಆಧಾರದ ಮೇಲೆ ಜನರನ್ನು ಬೇರೆ ಬೇರೆ ಅಂತಸ್ತುಗಳಲ್ಲಿ ನಿಯುಕ್ತಿಗೊಳಿಸುವ ಮತ್ತು ವಿವಿಧ ಬಗೆಯ ಪಾತ್ರಗಳನ್ನು ನಿರ್ವಹಿಸುವಂತೆ ಮಾಡುವ ವಿದ್ಯಮಾನ ಎಲ್ಲಾ ಸಮಾಜಗಳಲ್ಲೂ ಕಂಡು ಬರುವಂತದಾಗಿರುತ್ತದೆ. ಈ ಬಗೆಯ ವಿದ್ಯಮಾನವನ್ನು ಸಾಮಾಜಿಕ ಪ್ರಭೇದ ಎಂದು ಕರೆಯಬಹುದು.

ವೃತ್ತಿಗಳು ನಿರ್ವಹಿಸುವ ಪಾತ್ರ ಮತ್ತು ಸಾಮಾಜಿಕ ಅಂತಸ್ತಿನ ಆಧಾರದ ಮೇಲೆ ಶ್ರೇಷ್ಠ-ಕನಿಷ್ಠ, ಉಚ್ಚ-ನೀಚ, ಮೇಲು-ಕೀಳು ಎಂದು ವರ್ಗೀಕರಿಸುವ ಪರಿಪಾಟವಿದೆ. ಅಂದರೆ ಜನರನ್ನು ವಿಭಿನ್ನ ಸ್ತರಗಳನ್ನಾಗಿ ವರ್ಗೀಕರಿಸುವ ಒಂದು ವ್ಯವಸ್ಥೆಯು ಜೀವಂತವಾಗಿದೆ. ಸ್ತರೀಕರಣವಿಲ್ಲದ ಸಮಾಜವನ್ನು ಕಾಣಲು ಸಾಧ್ಯವೆ ಇಲ್ಲ ಎನ್ನಬಹುದು. ಯಾವುದೆ ಸಮಾಜ ಅಲ್ಲಿಯ ವ್ಯಕ್ತಿಗಳಿಗೆ ಸಮಾನ ಅಂತಸ್ತುಗಳನ್ನು ನೀಡುವುದಾಗಲಿ ಪ್ರತಿಯೊಂದು ಕಾರ್ಯ ನಡೆಸುವ ಸಾಮರ್ಥ್ಯ ಹೊಂದುವುದಾಗಲಿ ಸಾಧ್ಯವಿಲ್ಲ. ಸರ್ವಬಗೆಯ ಸಾಮಾನ ಅವಕಾಶಗಳನ್ನು ಎಂದೆಂದಿಗೂ ಕೊಡದಿರುವುದು ನಮ್ಮ ಕಣ್ಣೆದುರಿಗೆ ಇದೆ. ಭಾರತಿಯ ಸಮಾಜದಲ್ಲಿ ಕಾಣಬರುವಷ್ಟು ವೈವಿಧ್ಯ ಮತ, ಜಾತಿ, ಕುಲ, ಧರ್ಮ ಮುಂತಾದವುಗಳು

ಪ್ರಪಂಚದ ಮತ್ತಾವ ದೇಶದಲ್ಲಿಯೂ ಕಾಣಲು ಅಸಾಧ್ಯ. ಪ್ರತಿಯೊಂದು ಜಾತಿಯ ಇತಿಹಾಸವನ್ನು ಶೋಧಿಸಲು ಹೊರಟಾಗ ಕುಲ, ಧರ್ಮ, ಪಂಥ ಮತ್ತು ಜಾತಿಯಲ್ಲಿ ಶಾಸ್ತ್ರ, ಪುರಾಣಗಳು, ಐತಿಹ್ಯ ಹಾಗೂ ದಂತಕಥೆಗಳಿಂದ ಮೌಖಿಕವಾದಂತ ಪೂರ್ವ ಇತಿಹಾಸವನ್ನು ಪಡೆದುಕೊಂಡಿವೆ. ಪ್ರತಿಯೊಂದು ಕುಲವು ತನ್ನತನವನ್ನು ಉಳಿಸಿಕೊಳ್ಳುವುದರ ಜೊತೆಗೆ ತನ್ನದೆ ಆದ ಸಂಸ್ಕೃತಿ ಶ್ರೇಷ್ಠತೆ ಆಚಾರ-ವಿಚಾರಗಳನ್ನು ಅಳವಡಿಸಿಕೊಂಡು ಮತ್ತು ಮುಂದುವರಿಸಿಕೊಂಡು ಬಂದಿದ್ದನ್ನು ಕಾಣಬಹುದಾಗಿದೆ. ಚಾತುರ್ವರ್ಣಾಶ್ರಮ ಧರ್ಮಗಳನ್ನು ಸೃಷ್ಟಿಸಿ ಬೋಧಿಸಿ, ಬೆಳೆಸಿ, ಬೆಳಗಿಸಿದ ಈ ಭಾರತದಲ್ಲಿ ಯಾವ ಮಟ್ಟದ ಸ್ಥಿತಿಯಿದೆಯೆಂದರೆ ಮುಂದೊಂದು ದಿನ ಬಲಯುತವಾಗಿರುವ ಜಾತಿ ಸಂಘಗಳೆ ಈ ದೇಶವನ್ನು ಆಳುವ ಸ್ಥಿತಿಬಂದರು ಆಶ್ಚರ್ಯಪಡಬೇಕಿಲ್ಲ. ಪ್ರಾಚೀನ ಕಾಲದಿಂದಲೂ ಜನಸಂಖ್ಯೆ ಏರಿದಂತೆಲ್ಲಾ ಹಲವು ಕುಯುಕ್ತಿ ಬುದ್ಧಿ ಜೀವಿಗಳು ಈ ನೆಲದಲ್ಲಿನ ಧರ್ಮ ನೀತಿಗಳನ್ನು ಮಾರ್ಮಿಕವಾಗಿ ತಮ್ಮ ಸ್ವಾರ್ಥ ಸಾಧನೆಗೆ ಅಳವಡಿಸಿಕೊಳ್ಳಲು ಪ್ರಯತ್ನಿಸಿ ನಿಧಾನವಾಗಿಯಾದರು ಸಫಲರಾದರು. ಕ್ರಮೇಣ ಚಾತುರ್ವರ್ಣಾಶ್ರಮದ ನೆರಳಿನಲ್ಲಿ ಔದ್ಯೋಗಿಕ ತಾರತಮ್ಯ ಮೇಲು-ಕೀಳು ಉತ್ತಮ-ಅಧಮ ಶ್ರೇಷ್ಠ-ಕನಿಷ್ಠ ಶುದ್ಧ-ಅಶುದ್ಧ ಇತ್ಯಾದಿ ಅನುಚಿತ ಭಾವನೆಗಳ ವಿಷ ಬೀಜಗಳನ್ನು ಬಿತ್ತಿ ಅಸಂಖ್ಯಾತ ದುರ್ಭಾವನೆಗಳ ಜನರ ಸಮೂಹವನ್ನೆ ರೂಪಿಸಿ ಸಂಘಟಿಸಿದ್ದಾಗಿದೆ. ವಿಪರ್ಯಾಸವೆಂದರೆ ಅನ್ಯ ದೇಶಿಯವರಿಗೆ ಈ ಹೊಲಸು ಭಾವನೆಗಳನ್ನು ತೃಣವು ಕೂಡ ತಿಳಿಯದಂತೆ ಗುಪ್ತವಾಗಿಟ್ಟು ಯಾವುದೆ ಅಮಾಯಕ ಭಾವನೆಗಳಿಲ್ಲವೆಂಬಂತೆ ವರ್ತಿಸಿದೆ. ತಾವು ಸದ್ಭಾವನೆ ಸಹೋದರತೆ ಸಮಾನತೆ ಮತ್ತು ಸುಸಂಸ್ಕೃತ ನಾಗರಿಕತೆಯನ್ನು ಹೊಂದಿದ್ದೆವೆಂದು ಸಾರುವ ಅಣಕು ಅಭಿನಯ ತೋರಿಸಿದ್ದಾಗಿದೆ.

ಮೇಲ್ವರ್ಗವನ್ನು ಹೊರತುಪಡಿಸಿ ಬೇರೆಯಾರು ವೇದಶಾಸ್ತ್ರ, ಪುರಾಣ, ಉಪನಿಷತ್ತುಗಳನ್ನು ಓದುವುದು ಇಲ್ಲವೆ ಮನನ ಮಾಡುವುದು ಅಸಾಧ್ಯವೆಂದು, ಆಕಸ್ಮಾತ್ ಅಂತಹ ಸಂದರ್ಭ ಕಂಡು ಬಂದಿದ್ದೆ ಆದರೆ ನಾಲಿಗೆಯನ್ನು ಸೀಳಬೇಕು, ಸೀಸ ಕಾಯಿಸಿ ಬಾಯಲಿ ಸುರಿಯಬೇಕು ಎಂಬಿತ್ಯಾದಿ ಅಮಾನುಷ ನಿಯಮಗಳನ್ನು ಸೂಚಿಸಿ ತಮ್ಮ ಸ್ವಾರ್ಥ ಸಾಧನೆಯನ್ನು ವೃದ್ಧಿಗೊಳಿಸಿದ್ದನ್ನು ನೋಡ ಬಹುದಾಗಿದೆ.

ಮಾನವನು ಮಾನವನ ಬಾಂಧವ್ಯದಲ್ಲಿ ಇದಕ್ಕಿಂತ ಹೆಚ್ಚಿನ ಅನ್ಯಾಯವೆಸಗಿರುವ ಬೇರೆ ಯಾವ ಜನಾಂಗಗಳೂ ದೊರೆಯಲಾರರು. ಜ್ಞಾನವು ಯಾವ ಜನಾಂಗದ ಸ್ವತ್ತಾಗದೆ ಅಥವಾ ಆ ವರ್ಗದ ಆಸ್ತಿಯಾಗದೆ ಇಡಿ ಮಾನವ ಕುಲದಲ್ಲಿ ಮೀಸಲಾಗಿದೆ ಎಂಬ ಸಾಮಾನ್ಯ ನಿಯಮವನ್ನು ಬದಿಗೊತ್ತಿ ಸರ್ವ ಸ್ವಾರ್ಥಿಗಳಾಗಿ ವರ್ತಿಸಿದವರ ಹಾಗೂ ವರ್ತಿಸುವವರ ನೆನಪು ಸಹ ಘೋರತನವಾದದ್ದಾಗಿದೆ. ಅಂದು ಮಾಡಿದ ಈ ಅಮಾನವಿಯ ಕೃತ್ಯಗಳೂ ಇಂದಿಗೂ ಕೂಡ ಚಾಲ್ತಿಯಲ್ಲಿದ್ದು. ಕೆಲವರು ಬುದ್ಧಿ ಜೀವಿಗಳಾಗಿ ಸ್ಥಿತಿವಂತರಾದರೆ ಮತ್ತೆ ಕೆಲವರು ಶ್ರಮ ಜೀವಿಗಳಾಗಿ ಇನ್ನೂ ಕೆಲವರು ನೆಲ-ನೆಲೆ ಎರಡೂ ಇಲ್ಲದೆ ಈ ಜನವರ್ಗದಲ್ಲಿ ಒಂದಿಲ್ಲೊಂದು ರೀತಿಯ ಸೇವೆ ಸಲ್ಲಿಸುತ್ತಾ ಮನೋರಂಜನೆ ನೀಡಿ, ಶುಶ್ರೂಕರಾಗಿ ಅಂತಃಕರಣದ ಭಾವನೆಗಳನ್ನಿಟ್ಟುಕೊಂಡು ಒಪ್ಪತ್ತಿನ ಊಟಕ್ಕಾಗಿ ಅಲೆದಾಡುತ್ತಲೇ

ಇದ್ದಾರೆ. ಇದು ವರ್ಗದಲ್ಲಿ ಅಂಟಿಕೊಂಡಿರುವ ದೊಡ್ಡ ಕಳಂಕವಾಗಿದೆ. ಹಾಗದರೆ ಇದರಲ್ಲಿ ಯಾರ ತಪ್ಪು ಎಂಬುದನ್ನು ಬೆನ್ನತ್ತಿದಾಗ ಮತ್ತೆ ಅದೆ ಉತ್ತರ ಒಬ್ಬರು ಮತ್ತೊಂದು ವರ್ಗದವನ ಉದ್ಯೋಗವನ್ನು ಅನುಕರಿಸಬಾರದು ತನ್ನ ಪಾರಂಪಾರಿಕ ಉದ್ಯೋಗವನ್ನೆ ಮುಂದುವರೆಸಿಕೊಂಡು ಅದರಿಂದಲೆ ಮೋಕ್ಷವನ್ನು ಪಡೆಯಬೇಕೆಂಬುದು, ತತ್ಪರಿಣಾಮ ಶ್ರಮಿಕನು ಶ್ರಮಿಸುತ್ತಲೆ ಆಸ್ತಿವಂತನು ಆಸ್ತಿವಂತನಾಗುತ್ತಲೆ ಅಲೆಮಾರಿ ಅಲೆಮಾರಿಯಾಗಿಯೆ ಮುಂದುವರಿಯುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂದರೆ ದುಡಿಮೆಯ ಪ್ರತಿಫಲ ಮತ್ತು ಕಾಲಗತಿಗಳ ಏರುಪೇರುಗಳನ್ನು ಸಹ ಗಮನಿಸದೆ ಧನಿಕರ ಸುಖಕ್ಕಾಗಿಯೆ ತಮ್ಮ ಪ್ರಾಣಗಳನ್ನು ತೆತ್ತಿದ್ದಾರೆ. ಇಂತಹ ಚಾಣಾಕ್ಷ ತಂತ್ರಗಳನ್ನು ಉಪಯೋಗಿಸಿ ಪ್ರಭಾವ ಬೀರಿದ ಈ ಬುದ್ಧಿ ಜೀವಿಗಳೆ ದೈವಾಂಶ ಸಂಭೂತರು ಯಾವುದೆ ಕಾರಣಕ್ಕೂ ಇವರ ನಿಯಮ ಮೀರ ಕೂಡದು. ಮೀರಿದ್ದೆ ಆದರೆ ಶಾಪಗ್ರಸ್ತರಾಗಬೇಕಾಗುತ್ತದೆ. ತಮ್ಮ ಹತ್ತಿರವಿರುವ ಎಲ್ಲಾ ಸಂಪತ್ತನ್ನು ಇವರಿಗೆ ದಾನಮಾಡಬೇಕು ಎಂಬ ಮೂಢ ಭಾವನೆಯನ್ನು ಇವರ ಮನದಲ್ಲಿ ಅಚ್ಚೊತ್ತಿದ್ದಾಗಿದೆ. ತಮ್ಮ ಪ್ರತಿಷ್ಠೆ ಪ್ರತಿಷ್ಠಾಪಿಸಿಕೊಂಡಿದ್ದಾಗಿದೆ. ಈ ನಿಯಮಗಳು ಹಾಗೆಯೆ ಮುಂದುವರಿಯಲು ಕಾರಣವೆನಿರಬಹುದು ಎಂದರೆ ಇವರಲ್ಲಿಯೆ ಇದ್ದ ಕೆಲವರು ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ಸಲುವಾಗಿ ಇಲ್ಲಸಲ್ಲದ ಕಥೆಗಳನ್ನು ಸೃಷ್ಟಿ ಮಾಡಿ, ದೊಡ್ಡ ದೊಡ್ಡ ಗ್ರಂಥಗಳನ್ನು ಬರೆಯಲಾಗಿದೆ. ಈ ತೆರನಾಗಿ ಬಂದ ಗ್ರಂಥಗಳೂ ರಾಜ-ಮಹಾರಾಜರ ಆರ್ಶಿವಾದದಿಂದ ಬೆಳಕನ್ನು ಕಂಡುಕೊಂಡಿರಬೇಕು. ಅಂದಿದ್ದ ಧರ್ಮ ಮಠಗಳ ವಿವಿಧ ಸಮುದಾಯಗಳ ಧರ್ಮಗುರುಗಳು ತಮ್ಮ ಜಾತಿಯ ಶ್ರೇಷ್ಠತೆ ಗಿಟ್ಟಿಸಿಕೊಳ್ಳಲು ಗ್ರಂಥ ರಚನೆಗೆ ಪ್ರೋತ್ಸಹ ಕೊಟ್ಟಿರಬೇಕು. ನಂತರ ನಿಧಾನವಾಗಿ ಪರವಿರೋಧ ಬರವಣಿಗೆಗಳು ಬಂದು ಅವುಗಳೆ ಜ್ಞಾನ ಶಾಖೆಗಳಾಗಿ ಮುಂದುವರಿದಿವೆ. ಏಕೆಂದರೆ ಒಂದು ವರ್ಗದ ಇತಿಹಾಸ ಬರೆಯುವಾಗ ಆ ಸಮುದಾಯದ ಹತ್ತಿರ ಹೋಗದೆ ತಾವಾಗಿಯೆ ಗ್ರಂಥಗಳನ್ನು ರಚನೆ ಮಾಡಿರುವಸಾಧ್ಯತೆಯೆ ಹೆಚ್ಚು. ಇಂತಹ ಹಲವಾರು ಶಾಪದಲ್ಲಿ ಸಿಲುಕಿಕೊಂಡವರಲ್ಲಿ ಅಲೆಮಾರಿಗಳು ಪ್ರಮುಖರು. ಇಂತಹ ಸಮುದಾಯಗಳನ್ನು ಕುರಿತು ನೀವೆ ಭೂಮಿ ಮೇಲಿನ ಗಾನಗಂಧರ್ವರು ಎಂದು ಬೆನ್ನುತ್ತಟ್ಟಿದ್ದಿದೆ. ಮತ್ತೊಂದಡೆ ಇವರನ್ನು ಆಪ್ತ-ಗುಪ್ತದಳರಾಗಿ, ಸಾಗಾಟಿಕೆಗಾಗಿ, ಮನೋರಂಜನೆಗಾಗಿ, ಶುಕುನ ಕೇಳಲಿಕ್ಕಾಗಿ, ವಂಶವಳಿ ಹೇಳಲಿಕ್ಕಾಗಿ, ನೀವೆ ಇತಿಹಾಸ ಪುನಃ ನೆನಪಿಸುವ ಕುರುಹುಗಳೂ ಎಂದು ಚೆನ್ನಾಗಿ ಬಣ್ಣಿಸಿದ್ದಾಗಿದೆ. ನೀವು ಅನುಸರಿಸುವ ಕಸುಬುಗಳಿಂದಲೆ ನೀವು ಮೋಕ್ಷ ಕಾಣಬೇಕು ಇವೆ ನಿಮಗೆ ಅನ್ನ ನೀಡುವ ಮೂಲಗಳೆಂದು ನೀವು ಇದನ್ನು ಬಿಟ್ಟು ಮತ್ತೊಂದು ಆದಾಯದ ಮೂಲದಲ್ಲಿ ಹೋಗಬಾರದೆಂದು ಹೇಳಿದ್ದಾಗಿದೆ. ಅವರು ಕೂಡ ಇದನ್ನು ಆಜ್ಞೆ ಎಂಬಂತೆ ಸ್ವೀಕರಿಸಿ ಆ ನಿಟ್ಟಿನಲ್ಲಿಯೆ ಸೇವೆಸಲ್ಲಿಸುತಿದ್ದಾರೆ. ನಿಜಸ್ಥಿತಿಯೆಂದರೆ ಅಲೆಮಾರಿಗಳ ಮೂಲ ಬದುಕಿಗೆ ಪ್ರವೇಶ ಮಾಡಿದಾಗ ದಿಗ್ಭ್ರಮೆಗೊಳ್ಳುವ ಬದುಕಿನ ದೃಶ್ಯಗಳು ತೆರೆದುಕೊಳ್ಳುತ್ತವೆ. ಅಂತಹ ಅಲೆಮಾರಿಗಳ ಬದುಕನ್ನು ಅದರಲ್ಲೂ ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಶೋಧಿಸಿ ವಿಶ್ಲೇಷಿದ್ದೇನೆ.

ಈ ನನ್ನ ಅಧ್ಯಯನದಲ್ಲಿ ಅಲೆಮಾರಿಗಳ ಎಲ್ಲಾ ಅಂಶಗಳನ್ನು ನಾನು ಶೋಧಿಸಿದ್ದೇನೆಂದಲ್ಲ.

ನನ್ನ ಸೀಮಿತ ಕಾಲವಧಿ ಮತ್ತು ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಮುದಾಯಗಳಿಗೆ ಅನ್ಯಾಯ ಮಾಡದಂತೆ ಸಂಶೋಧನೆಗೆ ದಕ್ಕೆ ಬಾರದಂತೆ ಅಧ್ಯಯನ ಕೈಗೊಂಡು ದಾಖಲಿಸಿ ಮುಂದಿಡುತಿದ್ದೇನೆ. ಆದ್ದರಿಂದ ಈ ಅಧ್ಯಯನವೆ ಅಂತ್ಯ ಮತ್ತು ಇಲ್ಲಿನ ವಿಶ್ಲೇಷಣೆಯೆ ಆತ್ಯಂತಿಕವೆಂದು ಭಾವಿಸಿಲ್ಲ ಸಂಶೋಧನೆಗೆ ನ್ಯಾಯ ಒದಗಿಸಿದ್ದೆನೆಂಬ ಧೃಡ ವಿಶ್ವಾಸ ನನ್ನದಾಗಿದೆ.

ಅಧ್ಯಯನದ ಪ್ರಾಮುಖ್ಯತೆ

ಭಾರತ ದೇಶದಲ್ಲಿ ಹಲವಾರು ಸಮುದಾಯಗಳು ನೆಲೆಗೊಂಡಿವೆ. ಕೆಲವು ಸಮುದಾಯಗಳು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಕಂಡುಕೊಂಡು ಮುಖ್ಯವಾಹಿನಿಗೆ ಬಂದಿವೆ. ಕೆಲವು ಅಲೆಮಾರಿಗಳಂತಹ ಸಮುದಾಯಗಳು ನೆಲೆನಿಲ್ಲದೆ ಅಲೆದಾಡುತ್ತಲೆ ಇವೆ. ದೇಶದ ಉದ್ದಗಲಕ್ಕೂ ಅಲೆಮಾರಿಗಳು ಕಂಡುಬರುತಿದ್ದು. ತಮ್ಮ ಜೀವನ ಶೈಲಿ, ಆಚಾರ-ವಿಚಾರ, ಸಂಪ್ರದಾಯ, ಆಡಳಿತವ್ಯವಸ್ಥೆ, ಕಸುಬುಗಳಿಂದ ವಿಶಿಷ್ಟರಾಗಿದ್ದಾರೆ. ಇಂತಹ ಮುಗ್ಧ ಅಮಾಯಕ ಅಲೆಮಾರಿ ಸಮುದಾಯಗಳ ಅಧ್ಯಯನಗಳೂ ಕಡಿಮೆ ಎಂದೆ ಹೇಳಬಹುದು. ಆಧುನಿಕ ಸಮಾಜದಲ್ಲಿ ಸಂಸ್ಕೃತಿಯ ಅನನ್ಯತೆಗಳೂ ಜಾಗತೀಕರಣದಲ್ಲಿ ಮರೆಯಾಗುವುದಕ್ಕಿಂತ ಮೊದಲು ಅಲೆಮಾರಿ ಸಮುದಾಯಗಳ ಅಧ್ಯಯನ ಮಾಡಬೇಕಾಗಿರುವುದು ಅನಿವಾರ್ಯ ಮತ್ತು ಪ್ರಾಮುಖ್ಯತೆಯಾಗಿದೆ. ಅಲೆಮಾರಿ ಸಮುದಾಯಗಳೂ ತಮ್ಮದೆ ವಿಶಿಷ್ಟ ರೀತಿಯ ಗುಣಲಕ್ಷಣಗಳನ್ನು ತಮ್ಮ ಗರ್ಭದಲ್ಲಿ ಅಡಗಿಸಿಟ್ಟು ಕೊಂಡು ಹೊಟ್ಟೆಪಾಡಿನ ಗಂಜಿಗಾಗಿ ಸದಾ ಅಲೆಯುತ್ತಲೆ ಇದ್ದಾರೆ,

ಈ ಸಮುಗಾಯಗಳ ಸಾಮಾಜಿಕ ಅಧ್ಯಯನದಲ್ಲಿ ತಮ್ಮದೆ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ ಇಂದಿನ ಶೀಘ್ರ ಪ್ರಗತಿಯ ಬದಲಾವಣೆಯ ಸಾಮಾಜಿಕ ಜೀವನದಲ್ಲಿ ಇಂತಹ ಮುಗ್ಧ ಸಮುದಾಯದಂತ ಹಲವು ಸಮುದಾಯಗಳ ಸಂಪ್ರದಾಯಿಕ ಜೀವನ ಶೈಲಿಯನ್ನು ಬದಲಾಯಿಸಿ ಬಿಡುವ ಸಾಧ್ಯತೆಗಳಿವೆ. ಹೀಗಾಗಿ ಈ ಸಮುದಾಯದ ಸಂಸ್ಕೃತಿಯ ಉತ್ತಮ ಗುಣಗಳನ್ನು ಪುನರ್ ಸಂಪಾದನೆ ಮಾಡಿ ವಿಶ್ಲೇಷಿಸುವ ಅವಶ್ಯಕತೆಯಿದೆ. ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಂಡು ಬಿಡಾರದಲ್ಲಿ ವಾಸಿಸಿ, ಮಾಸಲಾದ ಚಿಂದಿ ಬಟ್ಟೆಯನ್ನು ಧರಿಸಿ, ಬಡತನದ ಬೇಗೆಯಲ್ಲಿ ಬೇಯುತ್ತಾ, ಬದುಕು ಸಾಗಿಸುತ್ತಿದ್ದಾರೆ. ಇಂತಹ ಸಮುದಾಯಗಳ ಬದುಕಿನ ಚಿತ್ರಣವನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿ ಆಗಬೇಕಿದೆ. ಈ ದೃಷ್ಟಿಯಿಂದ ಅಲೆಮಾರಿ ಸಮುದಾಯಗಳ ಕುರಿತಾದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ನೆಲೆಯಲ್ಲಿ ಅಧ್ಯಯನ ಮಾಡಿರುವುದು ಪ್ರಮುಖವಾಗಿದೆ.

ಕೆಲವೆ ಕೆಲವು ಅಲೆಮಾರಿ ಸಮುದಾಯಗಳ ಕುರಿತಾದ ಸಂಪ್ರದಾಯ ಆಚಾರ-ವಿಚಾರ ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಒಂದೊಂದು ಸಮುದಾಯದ ಪ್ರತ್ಯೇಕ ಅಧ್ಯಯನ ಮತ್ತು ಬಿಡಿ ಲೇಖನಗಳನ್ನು ಮಾತ್ರ ದೊರೆಯುತ್ತವೆ. ಹೈದ್ರಾಬಾದ್ ಕರ್ನಾಟಕದ ವ್ಯಾಪ್ತಿ ಮಾಡಿಕೊಂಡು ಪ್ರದೇಶದ ಒಟ್ಟಾರೆ ಅಲೆಮಾರಿ ಸಮುದಾಯಗಳ ಅಧ್ಯಯನ ನಡೆದಿಲ್ಲ. ಆದ್ದರಿಂದ ಈ ಅಧ್ಯಯನವು

ಹೈದ್ರಾಬಾದ್ ಕರ್ನಾಟಕಕ್ಕೆ ಸೀಮಿತ ಮಾಡಿಕೊಂಡು, ಅಲೆಮಾರಿಗಳ ಬದುಕನ್ನು ಕಟ್ಟಿಕೊಡುವ ಹೊಸ ಪ್ರಯತ್ನ ಈದಾಗಿದೆ. ಆದ್ದರಿಂದ ಅಧ್ಯಯನವು ಪ್ರಾಮುಖ್ಯತೆ ಪಡೆದುಕೊಳ್ಳಬಲ್ಲದು.

ಊಹೆಗಳು

೧. ಅಲೆಮಾರಿ ಸಮುದಾಯಗಳು ಇನ್ನೂ ಪಾರಂಪಾರಿಕ ಕಸುಬುಗಳಿಂದ ಬದುಕನ್ನು ಸಾಗಿಸುತ್ತಿದ್ದಾರೆ.

೨. ಅಲೆಮಾರಿ ಸಮುದಾಯಗಳನ್ನು ಕಸುಬಿಗೆ ಅನುಗುಣವಾಗಿ ಪ್ರದೇಶದ ಅನುಗುಣವಾಗಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ.

೩. ಒಂದೊತ್ತಿನ ಗಂಜಿಗಾಗಿ ಪ್ರದೇಶದಿಂದ ಪ್ರದೇಶದಲ್ಲಿ ಅಲೆಯುತ್ತಲಿದ್ದಾರೆ.

೪. ಜಾತಿ ವ್ಯವಸ್ಥೆಯು ಅಲೆಮಾರಿಗಳ ಮೇಲೆ ಪ್ರಭಾವ ಬೀರಿದೆ.

೫. ತಮ್ಮ ಸಂವಿಧಾನದಡಿಯಲ್ಲಿ ಬದುಕಿಗೆ ಚಾಲನೆ ಮತ್ತು ನಿಯಂತ್ರಣವಿದೆ.

೬. ಸ್ತ್ರೀಯರಿಗೂ ಪುರುಷರಂತೆ ಸಮಾನ ಬಾಳನ್ನು .ಕೊಡಲಾಗಿದೆ.

೭. ಪ್ರಾಣಿ ಪಕ್ಷಿಗಳೂ ಇಂದಿಗೂ ಅಲೆಮಾರಿಗಳ ಸಂಗಾತಿಗಳಾಗಿವೆ.

೮. ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ.

೯. ಆಧುನಿಕತೆಗೆ ಹೊಂದಿಕೊಳ್ಳಲಾರದೆ ಪೂರ್ಣವಾಗಿ ಬಿಡಲು ಆಗದೆ ಗೊಂದಲದಲ್ಲಿದ್ದಾರೆ.

೧೦. ಜಾಗತೀಕರಣ ತಂತ್ರಜ್ಞಾನ ಮತ್ತು ಧಾರ್ಮಿಕ ಮೌಲ್ಯಗಳಲ್ಲಿಯ ವ್ಯತ್ಯಾಸ ಇವರ ಬದುಕಿನ ಮೇಲೆ ಪ್ರಭಾವ ಬೀರುತ್ತಿದೆ.

ಉದ್ದೇಶ

ಯಾವುದೆ ಒಂದು ಸಮುದಾಯದ ಅಧ್ಯಯನವೆಂದರೆ ಕೇವಲ ಅವರ ಮನೆ, ಆಚರಣೆ, ಸಂಪ್ರದಾಯ, ಆಚಾರ-ವಿಚಾರ ಮಾಡದೆ, ಹುಟ್ಟಿನಿಂದ ಸಾಯುವವರೆಗೂ ಸಂಭವಿಸಬಹುದಾದ ಎಲ್ಲಾ ಬಗೆಯ ಸನ್ನಿವೇಶಗಳನ್ನು ಒಂದೊಂದು ಮಗ್ಗಲುಗಳಾಗಿ ಅಧ್ಯಯನಿಸುವುದು ಅವಶ್ಯಕ. ಆದರೆ ಇದು ನನ್ನ ಪ್ರಮುಖ ಉದ್ದೇಶವಲ್ಲ. ನನ್ನ ಪ್ರಮುಖ ಉದ್ದೇಶ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆಯು ಯಾವ ತರಹದ್ದು ಇತರರ ಸಾಮಾಜಿಕ ವ್ಯವಸ್ಥೆಗೂ, ಇವರ ಸಾಮಾಜಿಕ ವ್ಯವಸ್ಥೆಗೂ ಇರುವ ವ್ಯತ್ಯಾಸವೇನು? ಸಮಾಜಶಾಸ್ತ್ರಜ್ಞರ ಅಭಿಪ್ರಾಯದಂತೆ ಈ ಸಮುದಾಯಗಳ ಸಾಮಾಜಿಕ ರಚನೆ ಇದೆಯೆ ಅಥವಾ ಇವರ ಅಭಿಪ್ರಾಯಕ್ಕಿಂತ ಭಿನ್ನವಾಗಿದೆಯೆ? ಮತ್ತು ಯಾವ ಯಾವ ಅಂಶಗಳ ಮೂಲಕ ತಮ್ಮ ಸಾಮಾಜಿಕ ರಚನೆಯನ್ನು ರಚಿಸಿಕೊಂಡಿದ್ದಾರೆ. ಅಂತ ಅಂಶಗಳಾವುವು? ಅಂತಹ ಅಂಶಗಳು ಅನಿವಾರ್ಯವೆ? ಮತ್ತು ಆ ಅಂಶಗಳೆ ಸಮುದಾಯದ ರಕ್ಷಾಕವಚವೆ, ಅವರ ಅಂಶಗಳೆ ಅವರ ಬದುಕನ್ನು ನುಂಗಿಕೊಂಡಿಯೆ? ಎಂಬಿತ್ಯಾದಿ ಪ್ರಶ್ನೆಗಳನಿಟ್ಟುಕೊಂಡು ತುಂಬಾ ಸೂಕ್ಷ್ಮವಾಗಿ ಅವರ ಒಡನಾಟದಲ್ಲಿದ್ದುಕೊಂಡು, ನೋವು-ನಲಿವುಗಳನ್ನು ಹಂಚಿಕೊಂಡು, ಅವರ ಸಾಮಾಜಿಕ ರಚನೆಯ ಪರಿಯನ್ನು ಕಂಡುಕೊಂಡು ಇಲ್ಲಿ ದಾಖಲಿಸಲಾಗಿದೆ.

ಇನ್ನು ಇವರ ಆರ್ಥಿಕ ಬದುಕಿಗೆ ಬಂದಾಗ ಇನ್ನು ವಿಚಿತ್ರವಾದ ರಚನೆಯನ್ನು ಕಂಡುಕೊಳ್ಳಲಾಗಿದೆ. ಈ ಸಮುದಾಯದಲ್ಲಿ ಯಾವ ಯಾವ ಮೂಲಗಳಿಂದ ಆದಾಯ ಬರುತ್ತಿದೆ ಆ ಆದಾಯದಿಂದ ಹೊಟ್ಟೆ ತುಂಬುತ್ತಿದೆಯೆ ಆ ಆದಾಯದ ಮೂಲಗಳೂ ಆ ಸಮುದಾಯದಲ್ಲಿ ಅನಿವಾರ್ಯವೆ ಅಂತ ವೃತ್ತಿಗಳು ಯಾವುದು ಆ ವೃತ್ತಿಗಳ ವೈಶಿಷ್ಟವೇನು? ಆ ವೃತ್ತಿಗೆ ಜನರ ಪ್ರತಿಕ್ರಿಯೆ ಹೇಗಿದೆ? ಇಂತಹ ವೃತ್ತಿಗಳಲ್ಲಿ ಸ್ತ್ರೀ-ಪುರುಷರ ಮತ್ತು ಮಕ್ಕಳ ಪಾಲುದಾರಿಕೆ ಎಷ್ಟಿದೆ? ಮತ್ತು ಸಾಕು ಪ್ರಾಣಿ ಮತ್ತು ಪಕ್ಷಿಗಳು ಆ ವೃತ್ತಿಗೆ ಹೇಗೆ ನೆರವಾಗುತ್ತಿವೆ ಎಂಬಿತ್ಯಾದಿ ಅಂಶಗಳನ್ನಿಟ್ಟುಕೊಂಡು ತುಂಬಾ ವೈಜ್ಞಾನಿಕವಾಗಿ ಆರ್ಥಿಕರಚನೆಯನ್ನು ಕಂಡುಕೊಂಡು, ದಾಖಲಿಸುವುದು ಮತ್ತೊಂದು ಪ್ರಮುಖ ಉದ್ದೇಶವಾಗಿದೆ.

ಮಾನವನನ್ನು ಅಧ್ಯಯನ ಮಾಡುವುದು ತುಂಬಾ ತೊಂದರೆ ಏಕೆಂದರೆ ಇವತ್ತು ಹೀಗಿದ್ದರೆ ನಾಳೆ ಹೇಗಿರುತ್ತಾನೆಂಬುದು ಹೇಳುವುದು ಅಸಾಧ್ಯ ಹಾಗೂ ನಿರ್ಣಯ ಮಾಡುವುದು ತುಂಬಾ ಕಷ್ಟ. ಅದರಲ್ಲೂ ಅಲೆಮಾರಿಗಳ ಅಧ್ಯಯನ ಮಾಡುವುದಂತೂ ಇನ್ನೂ ಪ್ರಾಯಾಸದ ಕೆಲಸವಾಗಿದೆ. ಕಾರಣ ಇವತ್ತು ಈ ಊರಲ್ಲಿ ಉಳಿದುಕೊಂಡರೆ ನಾಳೆ ಮತ್ತೊಂದೂರಿನಲ್ಲಿ, ನಾಡಿದ್ದು ಇನ್ನೊಂದೂರಲ್ಲಿ ಅಲೆಯುತ್ತ ಜೀವಿಸುತ್ತಾರೆ. ಇಂತಹ ಸಮುದಾಯಗಳು ಸಮೀಕ್ಷೆಗೂ ಸಿಗದೆ ಶಿಸ್ತಿನ ಅಧ್ಯಯನದಲ್ಲಿ ಸಿಗದೆ ಅತಂತ್ರವಾಗಿ ಅಲೆದಾಡುತ್ತಾರೆ. ಆದರೂ ಕೂಡ ಅನಿವಾರ್ಯವಾಗಿ ಈ ಸಮುದಾಯಗಳನ್ನು ಅಲಕ್ಷಿಸದೆ ಅವರಲ್ಲಿ ಅವಿತಿರುವ ಸಂವೇದನೆಗಳನ್ನು ಹೊರತೆಗೆಯಬೇಕಾದದ್ದು ಅಧ್ಯಯನಕಾರರ ಆದ್ಯ ಕರ್ತವ್ಯ. ಇದನ್ನು ಕೇವಲ ಹೊರತೆಗೆದು ಪುಸ್ತಕದಲ್ಲಿ ದಾಖಲಿಸದೆ, ಅವರ ಸಮಸ್ಯೆಗಳೇನು? ಬದುಕಿನ ಅವಾಂತರಗಳೇನು? ಈಗಿನ ಸ್ಥಿತಿ ಹೇಗಿದೆ? ನಾಳೆ ಹೇಗಿರಬಹುದು? ಮತ್ತೆ ಮುಂದೆ ಹೇಗಿರಬೇಕೆಂದು ಬಯಸುತ್ತಾರೆ? ಮತ್ತು ಇವರ ಅಭಿವೃದ್ಧಿ ಯಾವ ತೆರನಾಗಿರಬೇಕು ಅವರು ಹೇಗೆ ಬಯಸುತ್ತಾರೆ ಎಂಬಿತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕ್ಷೇತ್ರಕಾರ್ಯಮಾಡಿ ಸಮಸ್ಯೆಗೆ ಪರಿಹಾರ ಹುಡುಕುವುದು ಸಂಶೋಧನೆಯ ಮತ್ತೊಂದು ಪ್ರಮುಖ ಉದ್ದೇಶವಾಗಿದೆ.

ವ್ಯಾಪ್ತಿ

ಅಲೆಮಾರಿಗಳು ಎಲ್ಲಿಯು ನೆಲೆನಿಲ್ಲದೆ ಅಲೆಯುತ್ತಿರುತ್ತಾರೆ. ಆದರೂ ಗ್ರಾಮ ಮತ್ತು ನಗರ ಪ್ರದೇಶ ಮತ್ತು ಕಾಡಿನ ಹೊರ ಮತ್ತು ಒಳಭಾಗಗಳಲ್ಲಿ ಅಲ್ಪಸ್ವಲ್ಪ ದಿವಸಗಳಾದರು ತಾತ್ಕಾಲಿಕವಾಗಿ ನೆಲೆನಿಂತು ತಮ್ಮ ಕಸುಬನ್ನು ಮುಗಿಸಿಕೊಂಡು ಮತ್ತೆ ಮುಂದಿನ ಪ್ರದೇಶಗಳಿಗೆ ಹೋಗುತ್ತಾರೆ. ಹೀಗೆ ತಾತ್ಕಾಲಿಕವಾಗಿ ನೆಲೆನಿಂತ ದಿನಗಳಲ್ಲಿ ಕ್ಷೇತ್ರಕಾರ್ಯ ಮಾಡುವುದು ಅನಿವಾರ್ಯವಾಗಿದೆ. ಇಂತಹ ಸಮುದಾಯಗಳೂ ಇವತ್ತು ಈ ಊರಲ್ಲಿ ಉಳಿದುಕೊಂಡಾಗ ಕ್ಷೇತ್ರಕಾರ್ಯ ಮಾಡಿ ಮತ್ತೆ ಮುಂದಿನ ಮಾಹಿತಿಗಾಗಿ ಕ್ಷೇತ್ರದಲ್ಲಿ ಹೋದಾಗ ಅಲ್ಲಿರುವುದಿಲ್ಲ. ಬೇರೆ ಯಾವುದೊ ಊರಿಗೆ ಹೋಗಿರುತ್ತಾರೆ. ಆದ್ದರಿಂದ ಅವರ ಹಿಂದೆಯೆ ಹೋಗಿ ನಮಗೆ ಬೇಕಾದ ಮಾಹಿತಿ ಪಡೆಯುವುದು ಅನಿವಾರ್ಯ ಈ ಸಮುದಾಯಗಳೂ ಸಮಗ್ರ ಸಮೀಕ್ಷೆಗೂ ಸಿಗದೆ ಅಲೆಯುತ್ತಿರುತ್ತಾರೆ. ಅದಕ್ಕಾಗಿ ಇವರ ಮಾಹಿತಿ

ಪಡೆಯಲು ವ್ಯಾಪ್ತಿಯನ್ನು ಇಲ್ಲಿಗೆ ಎಂದು ಸೀಮಿತ ಮಾಡಿಕೊಳ್ಳುವುದು ತಪ್ಪಾಗುತ್ತದೆ. ಆದರೂ ಒಂದು ಚೌಕಟ್ಟು ಬೇಕಾಗುವುದರಿಂದ ಅಧ್ಯಯನದ ದೃಷ್ಟಿಯಿಂದ ಸಮಯವನ್ನು ಮುಖ್ಯವಾಗಿಟ್ಟುಕೊಂಡು ಇವರು ಹೆಚ್ಚಾಗಿ ಅಲೆದಾಡುವ ಬಯಲು ಪ್ರದೇಶವಾದ ಹೈದ್ರಾಬಾದ್ ಕರ್ನಾಟಕವನ್ನು ನನ್ನ ವ್ಯಾಪ್ತಿಗೆ ಸೀಮಿತ ಮಾಡಿಕೊಂಡಿದ್ದೇನೆ. ಈ ಪ್ರದೇಶಗಳಲ್ಲಿ ಬಳ್ಳಾರಿ, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳಗಳಾದ ಐದು ಜಿಲ್ಲೆಗಳನ್ನು ಒಳಗೊಂಡಿದ್ದು ಈ ಜಿಲ್ಲೆಗಳಲ್ಲಿ ಕಾಣಬರುವ ಹಲವಾರು ಅಲೆಮಾರಿ ಸಮುದಾಯಗಳನ್ನು ಅಧ್ಯಯನ ಮಾಡಿದ್ದೇನೆ.

ಅಧ್ಯಯನದ ವಿಧಾನಗಳು

ನನ್ನ ಸಂಶೋಧನೆಗೆ ಮಿತಿಯಿರುವ ಸಮಯದಲ್ಲಿ ಪ್ರಮಾಣಿಕ ಕ್ಷೇತ್ರಕಾರ್ಯ ಮಾಡಿದ್ದೇನೆ. ಇಂತಹ ಸಮುದಾಯಗಳಲ್ಲಿ ಮಾಹಿತಿ ಪಡೆಯಲು ಬಳಸುವ ವಿಧಾನಗಳು ತುಂಬ ಉಪಯುಕ್ತವಾದುದು. ಏಕೆಂದರೆ ಯಾವ ಯಾವ ವಿಧಾನಗಳಿಂದ ಅಲೆಮಾರಿಗಳ ಮಾಹಿತಿ ದೊರೆಯುತ್ತದೆಯೊ ಅಂತಹ ವಿಧಾನಗಳನ್ನು ಚಾಚುತಪ್ಪದೆ ಅಳವಡಿಸಿಕೊಂಡು ಅಧ್ಯಯನ ನಡೆಸಲಾಗಿದೆ. ವೈಜ್ಞಾನಿಕವಾದ ಮಾಹಿತಿ ಪಡೆಯಲು ಅಥವಾ ಜ್ಞಾನಸಂಪಾದನೆಗೆ ಬಳಸುವ ಮಾರ್ಗಗಳೆ ವಿಧಾನಗಳು. ಈ ವಿಧಾನಗಳು ಸಾಮಾಜಿಕ ಸಂಶೋಧನೆಗೆ ತುಂಬಾ ಉಪಯುಕ್ತ. ಇದು ಮಾನವರ ಅಧ್ಯಯನವಾಗಿರುವುದರಿಂದ ವಿಧಾನಗಳು ಬದಲಾಗುತ್ತಲೆ ಇರುತ್ತವೆ. ಆದರೆ ಯಾವ ವಿಧಾನಗಳ ಅವಶ್ಯಕತೆ ಇದೆಯೊ ಅಂತಹ ವಿಧಾನಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ. ಅವು ಈ ಕೆಳಗಿನಂತಿವೆ,

ವಿಷಯ ಅಧ್ಯಯನ ವಿಧಾನ

ಅಧ್ಯಯನದಲ್ಲಿ ಸಂಬಂಧಿಸಿದಂತೆ ನಾನು ಈ ಪ್ರದೇಶದಲ್ಲಿ ಸುತ್ತಾಡಿ ಇವರ ಬಗ್ಗೆ ಇರುವ ಲೇಖನ ಜೊತೆಗೆ ಅವರ ಅನುಭವ ಹಾಗೂ ವಿಷಯಗಳನ್ನು ಕೇಳಿಕೊಂಡು ಚರ್ಚಿಸಲಾಗಿದೆ. ಇಲ್ಲಿ ಸಂಪರ್ಮೂಲ ವ್ಯಕ್ತಿಗಳಿಂದಲೂ ವಿಷಯವನ್ನು ತಿಳಿದುಕೊಂಡು ಅಧ್ಯಯನ ಮಾಡಲಾಗಿದೆ.

ಅವಲೋಕನ ವಿಧಾನ

ಕ್ಷೇತ್ರಕಾರ್ಯಗಳಲ್ಲಿ ಮಾಹಿತಿ ಪಡೆಯಲು ಈ ವಿಧಾನ ಅನಿವಾರ್ಯ. ಇಲ್ಲಿ ಎರಡು ತರಹದ ಅವಲೋಕನ ವಿಧಾನ ಬಳಸಿಕೊಂಡಿದ್ದೇನೆ. ಅದರಲ್ಲಿ

ಸಹಭಾಗಿ ಅವಲೋಕನ : ಈ ಸಮುದಾಯಗಳ ಜೊತೆಯಲ್ಲಿ ಭಾಗಿಯಾಗಿ ನೋವು ನಲಿವುಗಳನ್ನು ಹಂಚಿಕೊಂಡು ಅಧ್ಯಯನದಲ್ಲಿ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಿವುದು.

ಅಂತರ ಅವಲೋಕನ : ದೂರವಿದ್ದುಕೊಂಡು ಈ ಸಮುದಾಯಗಳ ಚಲನವಲನಗಳನ್ನು ಗಮನಿಸಿ ಅವರ ಸಂಪೂರ್ಣ ಚಟುವಟಿಕೆಗಳನ್ನು ಅವರಿಗೆ ಗೊತ್ತಿಲ್ಲದಂತೆ ವೀಕ್ಷಿಸಿ ಅಧ್ಯಯನದಲ್ಲಿ ಮಾಹಿತಿ ಪಡೆಯುವುದು.

ತೌಲಾನಿಕ ವಿಧಾನ

ಅಧ್ಯಯನದ ವಿಧಾನದಲ್ಲಿ ತೌಲಾನಿಕ ವಿಧಾನ ಅವಶ್ಯಕವಾಗಿದೆ. ಅಲೆಮಾರಿಗಳ ವಿಚಾರವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ವಿಷಯ-ವಿಚಾರ ವ್ಯತ್ಯಾಸವಿರುತ್ತದೆ ಆದ್ದರಿಂದ ವಿಷಯಗಳನ್ನು ಸಂಗ್ರಹಿಸಿ ತೌಲನಿಕವಾಗಿ ಹೇಳುವಲ್ಲಿ ಈ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿ ವಿಧಾನ

ಸಮುದಾಯಗಳ ಮಾಹಿತಿ ಪಡೆಯಲು ಪ್ರಶ್ನಾವಳಿಗಳು ಅನಿವಾರ್ಯ ಆದ್ದರಿಂದ ಈ ಸಮುದಾಯಗಳಿಗೆ ಸಂಬಂಧಿಸಿದಂತೆ ಚರ್ಚಿಸಿ ಸೂಕ್ತ ಪ್ರಶ್ನಾವಳಿ ತಯಾರಿಸಿಕೊಂಡು ಅವರಿಂದ ಮಾಹಿತಿ ಪಡೆದ್ದಿದ್ದೇನೆ. ಹಾಗೂ ಪ್ರಮುಖ ಪ್ರಶ್ನೆಗಳ ಜೊತೆಗೆ ಸಂದರ್ಭಕ್ಕಾನುಗುಣವಾಗಿ ಉಪ ಪ್ರಶ್ನೆಗಳನ್ನು ಕೇಳುವುದರೊಂದಿಗೆ ಅವರಿಂದ ಮಾಹಿತಿ ಪಡೆದಿರುತ್ತೇನೆ.

ಸಂದರ್ಶನ ವಿಧಾನ

ಸಮುದಾಯಗಳಲ್ಲಿ ಹಿರಿಯರು, ಸ್ತ್ರೀಯರು, ಪುರುಷರು, ಮಕ್ಕಳನ್ನೊಳಗೊಂಡು ಸಂದರ್ಶನ ಕಾರ್ಯವನ್ನು ಮಾಡಿರುತ್ತೇನೆ.

ಸಂಖ್ಯಾಶಾಸ್ತ್ರೀಯ ವಿಧಾನ

ಸಂದರ್ಭಗಳಗನುಗುಣವಾಗಿ ಅಂಕಿ ಅಂಶಗಳನ್ನು ಉಪಯೋಗಿಸಿಕೊಂಡು ಮಾಹಿತಿ ಪಡೆಯಲಾಗಿದೆ.

ಐತಿಹಾಸಿಕ ವಿಧಾನ

ಹೈದ್ರಾಬಾದ್ ಕರ್ನಾಟಕದಲ್ಲಿ ಅಲೆಮಾರಿಗಳ ಅಧ್ಯಯನಕ್ಕೆ ಅಗತ್ಯವಿರುವ ಗ್ರಂಥಗಳನ್ನು, ಸರ್ಕಾರಿ ಪ್ರಕಟಣೆಗಳು, ಪತ್ರಿಕೆಯಲ್ಲಿರುವ ಲೇಖನಗಳೂ ಮತ್ತು ಇತರೆ ಅಂಕಿ ಅಂಶಗಳನ್ನು ಬಳಸಿಕೊಂಡು ಅಧ್ಯಯನದಲ್ಲಿ ಉಪಯೋಗಿಸಿಕೊಂಡಿರುತ್ತೇನೆ.

ಧ್ವನಿಮುದ್ರಣ ಮತ್ತು ಛಾಯಾಚಿತ್ರ ವಿಧಾನ

ಸಮುದಾಯಗಳ ವಕ್ತೃಗಳಿಂದ ಸಂದರ್ಶನದ ಸಮಯದಲ್ಲಿ ಅವರು ಹೇಳಿಕೊಂಡ ಸಮುದಾಯದ ಬವಣೆಗಳನ್ನು ಹಾಗೂ ಅವರ ಜೀವನದ ನೈಜತೆಯನ್ನು ಮೂಡಿಸುವ ಗುಡಾರ, ಊಟ, ವಸತಿ, ವೇಷಭೂಷಣ ಇನ್ನಿತರ ಹಲವಾರು ಚಿತ್ರಣಗಳು ಛಾಯಾಚಿತ್ರ ತೆಗೆಯಲಾಗಿದೆ. ಅಧ್ಯಯನದ ಮಾಹಿತಿಗಾಗಿ ಬಳಸಿಕೊಳ್ಳಲು ಅವರ ಧ್ವನಿಮುದ್ರಿತ ಶೇಖರಣೆ ಮಾಡಿರುತ್ತೇನೆ.

ಮಾದರಿ ವಿಧಾನ

ಅಧ್ಯಯನದ ವ್ಯಾಪ್ತಿಯಲ್ಲಿ ಹಲವಾರು ಅಲೆಮಾರಿ ಸಮುದಾಯಗಳು ಕಂಡುಬರುವುದರಿಂದ ಹಾಗೂ ಅವರು ನೆಲೆ ನಿಲ್ಲದವರಾಗಿರುವುದರಿಂದ ಸಮಗ್ರ ಸಮೀಕ್ಷೆ ಮತ್ತು ಎಲ್ಲಾ ಕುಟುಂಬಗಳ

ನಿಖರ ಮಾಹಿತಿ ಪಡೆಯಲು ಕಷ್ಟ. ಆದ್ದರಿಂದ ಅಧ್ಯಯನದಲ್ಲಿ ೧೭ ಅಲೆಮಾರಿ ಸಮುದಾಯಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಒಂದು ಅಲೆಮಾರಿ ಸಮುದಾಯದಿಂದ ಒಂದು ಜಿಲ್ಲೆಗೆ ೨೦ ಜನರಂತೆ, ೧೬ ಸಮುದಾಯಗಳಿಂದ ಐದು ಜಿಲ್ಲೆಯಲ್ಲಿ ೧೬೦೦ ಜನ ಆಯ್ಕೆಮಾಡಿಕೊಂಡು, ಉಳಿದ ಇನ್ನೊಂದು ಅಲೆಮಾರಿ ಸಮುದಾಯದಿಂದ ೩೫ ಜನ ಆಯ್ಕೆ ಮಾಡಿಕೊಂಡಿದ್ದೇನೆ. ಒಟ್ಟಾರೆಯಾಗಿ ೧೬೩೫ ಜನರನ್ನೊಳಗೊಂಡ ಮಾದರಿ ಆಯ್ಕೆಯ ಅಧ್ಯಯನವಾಗಿದೆ.

* ಪ್ರತ್ಯೇಕ್ಷ ಅನುಭವಗಳನ್ನೇ ಹೆಚ್ಚಾಗಿ ನಂಬಿಕೊಂಡಿದ್ದೇನೆ.
* ನನಗೆ ತಿಳಿಯಲಾರದ ಭಾಷೆಯನ್ನು ತಿಳಿಯಲು ಇದೆ ಭಾಷೆ ಬಲ್ಲವರನ್ನು ಜೊತೆಯಲ್ಲಿಟ್ಟು ಕೊಂಡು ಕ್ಷೇತ್ರಕಾರ್ಯ ಮಾಡಲಾಗಿದೆ.
* ಅಡಿಟಿಪ್ಪಣಿಗಳು ಹೆಚ್ಚಿರುವುದಿಲ್ಲ ಕ್ಷೇತ್ರಕಾರ್ಯ ಪ್ರಧಾನ ಭಾಗವಾಗಿದೆ.

ಅಧ್ಯಾಯ ೨

ಹೈದ್ರಾಬಾದ್ ಕರ್ನಾಟಕ ಮತ್ತು ಅಲೆಮಾರಿ ಸಮುದಾಯಗಳು

೨.೧. ಹೈದ್ರಾಬಾದ್ ಕರ್ನಾಟಕದ ಸಂಕ್ಷಿಪ್ತ ಪರಿಚಯ

೨.೨. ಅಲೆಮಾರಿ ಪದ ಪರಿಚಯ

೨.೩. ಅಲೆಮಾರಿ ಸಮುದಾಯಗಳ ಸಂಕ್ಷಿಪ್ತ ಪರಿಚಯ

೨.೪ ಅಲೆಮಾರಿಗಳ ಮೂಲ ಹುಡುಕಾಟ

ಹೈದ್ರಾಬಾದ್ ಕರ್ನಾಟಕ ಮತ್ತು ಅಲೆಮಾರಿ ಸಮುದಾಯಗಳು

ರಾಜ್ಯದ ಉತ್ತರಭಾಗದಲ್ಲಿರುವ ಐದು ಜಿಲ್ಲೆಗಳನ್ನೊಳಗೊಂಡಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಒಣಹವೆಯಿಂದ ಕೂಡಿದ್ದು, ಹೆಚ್ಚಾಗಿ ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪುಮಣ್ಣಿನಿಂದ ಕೂಡಿದ ಬಹು ವಿಶಾಲವಾದ ಬಯಲು ನಾಡಾಗಿದೆ. ಒಣ ಬೇಸಾಯ, ಬರಗಲಾದ ನೆರಳಿನಲ್ಲಿ ಅರೆ ಕೃಷಿ ಕಾರ್ಮಿಕರರು ಈ ಪ್ರದೇಶದಲ್ಲಿ ಹೆಚ್ಚು ಕಂಡುಬರುವರು. ಐಷಾರಾಮದ ವೈಭವಯುತ ಜೀವನವಿಲ್ಲದ, ಅಪಾರ ದೈವಭಕ್ತಿಯೊಂದಿಗೆ ಸಂಬಂಧಗಳನ್ನು ಹೆಣೆದುಕೊಂಡು ಸಂಗೀತ, ಕಲೆ ಪ್ರದರ್ಶನ ಕಲೆಗಳ ಗೌರವ ಕೊಡುವವರಾಗಿದ್ದಾರೆ. ತಳ ಸಮುದಾಯಗಳು ಉತ್ಪಾದಿಸುವ ಕರಕುಶಲ ವಸ್ತುಗಳೂ ಈ ಭಾಗದ ಜನತೆಗೆ ಬಹು ಇಷ್ಟವಾಗುವುದರಿಂದ ಅಲೆಮಾರಿ ಸಮುದಾಯಗಳು ವಾಸದ ನೆಲೆಯಾಗಿ ಆಶ್ರಯಿಸುತ್ತಿದ್ದಾರೆ.

ಅಲೆಮಾರಿ ಸಮುದಾಯಗಳು ಈ ಜಿಲ್ಲೆಗಳನ್ನೆ ವಾಸ ಸ್ಥಾನವಾಗಿ ರೂಪಿಸಿಕೊಳ್ಳುವ ಕಾರಣ ತಮ್ಮ ಜೊತೆಯಲ್ಲಿ ಬೆರೆತುಕೊಂಡ ಇವರ ಸಂಗಾತಿಗಳಾದ ಪಶುಸಂಪತ್ತುಗಳು ತಂಗಲು ವಿಶಾಲವಾದ ಬಯಲು ಇರುವುದರಿಂದ, ಬಿಡಾರ ಹೂಡಲು ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಸೂಕ್ತ ಸ್ಥಳವಾಗಿದೆ. ಬಯಲು ಜಾಗ ದೊರೆಯುವುದರಿಂದ ಗ್ರಾಮ ಅಥವಾ ನಗರಗಳು ಬಹಳಷ್ಟು ಜನಸಂಖ್ಯೆಯಿಂದ ಕೂಡಿರುವ ಕಾರಣ ಇವರಿಗೆ ಸೂಕ್ತವಾಗಿದೆ. ಇಲ್ಲಿ ಬೆಳೆಯುವ ಆಹಾರಗಳಾದ ಭತ್ತ, ಜೋಳ, ರಾಗಿ, ಕಡಲೆ, ನವಣೆ ಇತ್ಯಾದಿಗಳಿಂದ ಆಹಾರದ ರೂಪದಲ್ಲಿ ರೊಟ್ಟಿ, ಮುದ್ದೆ, ಅನ್ನ ದೊರೆಯುವುದರಿಂದ ಈ ಪ್ರದೇಶವನ್ನು ಇಷ್ಟಪಡುತ್ತಾರೆ.

ಮಲೆನಾಡು ಪ್ರದೇಶಗಲ್ಲಿ ಊರುಗಳೆ ಅತಿ ಕಡಿಮೆ ಇರುವುದು. ಮೂರು ನಾಲ್ಕು ಮನೆಗಳು ಒಂದು ಊರು. ಅದು ಬೆಟ್ಟ-ಗುಡ್ಡಗಳಿಂದ ಕೂಡಿದ್ದಾಗಿದೆ. ಗುಡ್ಡದ ಇಳಿಜಾರಿನಲ್ಲಿರುವುದರಿಂದ ಬಿಡಾರ ಹೂಡುವುದು ಕಷ್ಟ. ಗುಡಾರ ಹೂಡಿದರು ಕೆಲವೆ ಮನೆಗಳು ಇರುವುದರಿಂದ ಭಿಕ್ಷೆಯು ದೊರೆಯಲಾರದು. ಅಧಿಕ ಭತ್ತ ಬೆಳೆಯವುದರಿಂದ ಅನ್ನವನ್ನೆ ಹೆಚ್ಚಾಗಿ ಭಿಕ್ಷೆಗೆ ಹಾಕುವುದರಿಂದ ಈ ಸಮುದಾಯಗಳು ಇಷ್ಟಪಡುವುದಿಲ್ಲ. ಕಾರಣ ಮಿಶ್ರ ಆಹಾರವನ್ನು ಉಪಯೋಗಿಸುವ ಪದ್ಧತಿಗೆ ಹೊಂದಿಕೊಂಡು ಮತ್ತು ಬಯಲು ಪ್ರದೇಶದಲ್ಲಿ ಬೇಟೆಯಾಡಲು ಅನುಕೂಲಕರವಾಗಿದೆ. ಮಲೆನಾಡು ಗಳಲ್ಲಿ ವಿಷ ಜಂತುಗಳ ಆತಂಕವಿದೆ. ಅಲೆಮಾರಿಗಳು ಪ್ರದರ್ಶನ ಕಲೆಗಳನ್ನು ಇಂತಹ ಜನಸಂದಣಿ ಇರುವ ಪ್ರದೇಶದಲ್ಲಿ ಪ್ರದರ್ಶಿಸಬಹುದು. ಮಲೆನಾಡುಗಳಲ್ಲಿ ಜನಸಂದಣಿ ಕಡಿಮೆ. ವರ್ಷ ಪೂರ್ತಿಯಾಗಿ

ಪ್ರದರ್ಶನ ಕಲೆಯಿಂದ ಭಿಕ್ಷಾಟನೆ ಮಾಡಬಹುದು. ಮಲೆನಾಡು ಪ್ರದೇಶದಲ್ಲಿ ವಿಪರೀತ ಮಳೆಯಿಂದ ಪ್ರದರ್ಶನ ಕಲೆಗಳನ್ನು ಪ್ರದರ್ಶಿಸಲು ತೊಂದರೆಯಾಗುತ್ತದೆ.

ಅಲೆಮಾರಿಗಳು ಉತ್ಪಾದಿಸುವ ಕೃಷಿ ಉಪಕರಣಗಳು, ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ಸಾಮಾಗ್ರಿಗಳು, ಧಾರ್ಮಿಕ ವಸ್ತುಗಳು ಇತ್ಯಾದಿ ವಸ್ತುಗಳು ತಾವು ವಾಸಿಸುವ ಕಡೆಗಳಲ್ಲಿ ಮನೆಬಾಗಿಲಿಗೆ ತಲುಪಿಸುವುದರಿಂದ ಈ ಭಾಗದ ಜನತೆ ಇಷ್ಟಪಡುತ್ತಾರೆ. ಪೂರ್ಣ ಪ್ರಮಾಣದಲ್ಲಿ ಅಲ್ಲದಿದ್ದರೂ ಅಲ್ಪವಾದರು ಆಹಾರ, ಹಣ, ವಸ್ತುಗಳು, ಬಟ್ಟೆಗಳು ನೀಡಿ ಪಡೆಯುತ್ತಾರೆ. ಹೆಚ್ಚಾಗಿ ಧಾರ್ಮಿಕ ಕಲಹಗಳು ಸಂಭವಿಸುವುದಿಲ್ಲ. ಎಲ್ಲಾ ಧರ್ಮದವರನ್ನು ಪ್ರೀತಿಸುವ ಅಲೆಮಾರಿಗಳು ಈ ಪ್ರದೇಶದಲ್ಲಿ ತಮ್ಮ ವೃತ್ತಿಗಳನ್ನು ಕೈಗೊಳ್ಳುತ್ತಾರೆ. ಮಲೆನಾಡಿನಂತಹ ಪ್ರದೇಶದಲ್ಲಿ ಎಷ್ಟೆ ಭಿಕ್ಷೆ ದೊರೆತರು ಈ ಪ್ರದೇಶವನ್ನೆ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಜಿಲ್ಲೆಗಳ ವಾತವರಣ ಮೈಗೂಡಿಸಿ ಕೊಂಡವರಾಗಿದ್ದಾರೆ. ಹಿಂದುಳಿದ ಪ್ರದೇಶದಲ್ಲಿ ಹಿಂದುಳಿದವರೆ ಆಶ್ರಯ ನೀಡುವವರಾಗಿರುವುದರಿಂದ ಈ ಪ್ರದೇಶದಲ್ಲಿ ಅಲೆಮಾರಿಗಳು ಅಲೆಯುತ್ತಿದ್ದಾರೆ. ಆದ್ದರಿಂದಲೆ ಅಲೆಮಾರಿ ಸಮುದಾಯಗಳಿಗೆ ಬಹು ಇಷ್ಟವಾದ ಪ್ರದೇಶವಾಗಿದೆ. ಇಲ್ಲಿ ಸುಮಾರು ೨೦ ಕ್ಕೂ ಆಧಿಕ ವಿವಿಧ ಬಗೆ ಬಗೆಯ ಅಲೆಮಾರಿ ಸಮುದಾಯಗಳಿವೆ.

೨.೧. ಹೈದ್ರಾಬಾದ್ ಕರ್ನಾಟಕದ ಸಂಕ್ಷೀಪ್ತ ಪರಿಚಯ

ಪ್ರಸ್ತುತ ಸಂಶೋಧನೆಯು ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಅಧ್ಯಯನದ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡಿರುವುದರಿಂದ ಈ ಪ್ರದೇಶದ ಪರಿಚಯ ಮತ್ತು ನೆಲೆಯಲ್ಲಿ ಅಲೆಯುತ್ತಿರುವ ಇದರ ಅಲೆಮಾರಿಗಳ ಪರಿಚಯ ಮಾಡಬೇಕಾದುದು ಅಗತ್ಯವಾದದು. ಜೊತೆಗೆ ಅಲೆಮಾರಿಗಳಿಗೆ ಈ ಪ್ರದೇಶವು ಏಕೆ ಇಷ್ಟವಾಗಿದೆ? ಇಂತಹ ಜಿಲ್ಲೆಗಳಲ್ಲಿ ಬದುಕು ಸಾಗಿಸುವುದಕ್ಕೆ ಏನು ಕಾರಣ? ಈ ಪ್ರದೇಶವನ್ನು ಬಿಟ್ಟರೆ ಬೇರೊಂದು ಜಿಲ್ಲೆಗಳಲ್ಲಿ ಜೀವನಸಾಗಿಸಲು ಎಷ್ಟರ ಮಟ್ಟಿಗೆ ಸಾಧ್ಯ? ಇವರು ಅಲೆಯುವುದಕ್ಕಾಗಿ ಇಂತಹ ಪ್ರದೇಶವನ್ನೆ ಏಕೆ ಆಯ್ಕೆ ಮಾಡಿಕೊಂಡಿದ್ದಾರೆ? ಎಂಬುದನ್ನು ಸಮಗ್ರವಾಗಿ ಅಲ್ಲದಿದ್ದರು, ಸಂಕ್ಷಿಪ್ತವಾಗಿಯಾದರು ವಿವರಣೆ ನೀಡಬೇಕಾಗಿರುವುದು ಅನಿವಾರ್ಯವಾಗಿದೆ.

ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ೪ ಕಂದಾಯ ವಿಭಾಗಗಳಾಗಿ ರಚನೆ ಮಾಡಿದ್ದು, ಅವುಗಳೆಂದರೆ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಗಳಾಗಿವೆ. ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪ್ರದೇಶವೆ ಗುಲ್ಬರ್ಗ ವಿಭಾಗ. ಇದನ್ನೆ 'ಹೈದ್ರಾಬಾದ್ ಕರ್ನಾಟಕ'ವೆಂದು ಕರೆಯಲಾಗಿದೆ. ಹೈದ್ರಾಬಾದ್ ಕರ್ನಾಟಕದ ಐದು ಜಿಲ್ಲೆಗಳನ್ನೊಳಗೊಂಡಿದೆ. ಅವುಗಳಾದ ಗುಲ್ಬರ್ಗ, ಬೀದರ್, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ. "೧೯೫೬ರ ಮುಂಚಿನ ವರ್ಷಗಳಲ್ಲಿ ಬಳ್ಳಾರಿಯು ಬೆಂಗಳೂರು ವಿಭಾಗದಲ್ಲಿತ್ತು. ನಂತರ ೧೯೫೬ರಲ್ಲಿ ಕರ್ನಾಟಕ ಏಕೀಕರಣಗೊಂಡ ಪ್ರಯುಕ್ತ ಮತ್ತೆ ಪರಿಷ್ಕರಿಸಿ ೧೯೬೬ರ ಫೆಬ್ರುವರಿ ೧೦ ರಿಂದ ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ವಿಭಾಗದಿಂದ ತೆಗೆದು, ಗುಲ್ಬರ್ಗ ಕಂದಾಯ ವಿಭಾಗದಲ್ಲಿ ಸೇರ್ಪಡೆ ಮಾಡಲಾಗಿದೆ."[1]

ಈ ಪ್ರದೇಶವು ಸಾಮ್ರಾಜ್ಯ ಮತ್ತು ರಾಜಶಾಹಿ ಆಡಳಿತದಲ್ಲಿ ಒಳಪಟ್ಟಿರುವುದು ಮತ್ತು ಐತಿಹಾಸಿಕವಾಗಿ ದಾಖಲೆಯಾಗಿರುವುದು ಚರಿತ್ರೆಯಲ್ಲಿ ನೋಡಬಹುದಾಗಿದೆ. ಇಲ್ಲಿ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಬಹುಮನಿ ಸುಲ್ತಾನರು ಮತ್ತು ನಿಜಾಮ ಶಾಹಿಗಳು ಆಳ್ವಿಕೆಯಿಂದ ಈ ನಾಡಿನಲ್ಲಿ ತನ್ನದೆ ಆದ ವೈಶಿಷ್ಟ್ಯ ಛಾಪು ಮೂಡಿಸಿದೆ ಹಾಗೂ ಐತಿಹ್ಯವಿದೆ.

ಚಾರಿತ್ರಿಕವಾಗಿ

"ದಕ್ಷಿಣ ತಕ್ಷಶಿಲೆಯೆಂದೆ ಪ್ರಸಿದ್ಧವಾದ ನಾಗಾವಿಯು ಪ್ರಮುಖ ಶೈಕ್ಷಣಿಕ ಕೇಂದ್ರವಾಗಿತ್ತು."[2] ಮಧ್ಯಕಾಲಿನ ಇತಿಹಾಸದಲ್ಲಿ ಖ್ಯಾತ ರಾಜಮನೆತನದ ರಾಷ್ಟ್ರಕೂಟರು "ಮಾನ್ಯಖೇಟವನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದರು."[3] ಇದು ಗುಲ್ಬರ್ಗದ ಸೇಡಂ ತಾಲ್ಲೂಕಿನಲ್ಲಿದೆ. ಇಂದು ಮಾನ್ಯಖೇಟವನ್ನು 'ಮುಳಖೇಡ' ಎಂದು ಕರೆಯಲಾಗುತ್ತಿದೆ. ೧೪ನೇ ಶತಮಾನದಲ್ಲಿ ಗುಲ್ಬರ್ಗ ದೆಹಲಿಯ ಸುಲ್ತಾನ ಮಹ್ಮದ್ ಬೀನ್ ತುಘಲಕ್‌ನ ಆಡಳಿತದಲ್ಲಿ ಒಳಪಟ್ಟಿತ್ತು. "ಕ್ರಿ.ಶ. ೧೩೪೭ರಲ್ಲಿ ಬಹುಮನಿ ರಾಜ್ಯ ಸ್ಥಾಪಿಸಿದರ ಫಲವಾಗಿ ಗುಲ್ಬರ್ಗ ಅಲ್ಲಾವುದ್‌ದಿನ್ ಹಸನ್‌ಗಂಗೂ ಬಹುಮನ್ ಷಾನ ರಾಜಧಾನಿಯಾಗಿತ್ತು."[4] ಅಷ್ಟೆ ಅಲ್ಲದೆ, ಔರಂಗಜೇಬನ ದಂಡೆಯಾತ್ರೆಯ ಪ್ರಯುಕ್ತ ಈ ಪ್ರದೇಶ ಆತನ ಕೈವಶವಾಯಿತು. ನಂತರ ಅಸಮರ್ಥ ದೊರೆಗಳು ಬಂದುದರಿಂದ ನಿಜಾಮ ಮುಲ್ಕ್‌ನ ತನ್ನ ಪರಾಕ್ರಮಿಯಿಂದ ಪ್ರಧಾನಿಯಾಗಿ, ನಂತರ ಆ ಪದವಿ ತಿರಸ್ಕರಿಸಿದನು. ಕ್ರಿ.ಶ. ೧೭೨೪ರಲ್ಲಿ ಮೊಘಲರ ಸುಬೇರಧಾರ ಮುಝುಬರ್ ಖಾನ್‌ನನ್ನು ಸೋಲಿಸಿದನು. ತದನಂತರ ಔರಂಗಬಾದ್ ಪ್ರದೇಶವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಹೈದ್ರಾಬಾದ್‌ನ್ನು ತಮ್ಮ ಅಧೀನದಲ್ಲಿ ವಶಪಡಿಸಿಕೊಂಡು, ರಾಜ್ಯಭಾರ ಮಾಡಿದನು.

ಹೈದ್ರಾಬಾದ್ ಕರ್ನಾಟಕ ಪ್ರಾಂತಿಯ ಆಡಳಿತದಲ್ಲಿ ಸುರುಪುರ ಪ್ರದೇಶ ಒಳಗೊಂಡಿತ್ತು. ಸುರುಪುರದಲ್ಲಿ ರಾಜವೆಂಕಟಪ್ಪ ನಾಯಕ ಆಡಳಿತ ನಡೆಸುವ ಸಂದರ್ಭ ಬ್ರಿಟಿಷ್‌ರ ದಮನಕ್ಕೆ ಒಳಗಾಗಿದುರ ಪ್ರಯುಕ್ತ ಸುರುಪುರ ನಿಜಾಮರ ವಶವಾಯಿತು. "ಕ್ರಿ.ಶ. ೧೭೨೪ ರಿಂದ ೧೯೪೮ರ ಸೆಪ್ಟೆಂಬರ್ ರವರೆಗೆ ಬೀದರ್, ರಾಯಚೂರು ಒಳಗೊಂಡಂತೆ ಈ ಮನೆತನದವರ ಕೈವಶವಾಯಿತು."[5] ಬೀದರ್ ಗುಲ್ಬರ್ಗ ವಿಭಾಗದಲ್ಲಿ ಜಿಲ್ಲೆಯಾಯಿತು. ಮುಂಚಿತ ಅವಧಿಯಲ್ಲಿ ರಾಷ್ಟ್ರಕೂಟರು ಹಾಗೂ ಬಾದಾಮಿ ಕಲ್ಯಾಣ ಚಾಲುಕ್ಯರ ಅಧೀನದಲ್ಲಿತು. ತದನಂತರ ಬಹುಮನಿ ಸುಲ್ತಾನರ ಆಡಳಿತದಲ್ಲಿ ಒಳಗೊಂಡಿತು. ೧೭೪೨ರಲ್ಲಿ ಹೈದ್ರಾಬಾದ್ ನಿಜಾಮನ ಕೈ ಸೇರಿದ್ದರಿಂದ "೧೯೫೬ರಲ್ಲಿ ರಾಜ್ಯ ಪುನರ್ ವಿಂಗಡಣೆಯ ಸಮಯದಲ್ಲಿ ನಾಲ್ಕು ತಾಲ್ಲೂಕುಗಳು ಮಾತ್ರ ದಕ್ಕಿದವು."[6]

ತುಂಗ ಮತ್ತು ಕೃಷ್ಣನದಿಗಳ ಮಧ್ಯದಲ್ಲಿ ಹರಡಿಕೊಂಡಿರುವ ರಾಯಚೂರು ಜಿಲ್ಲೆಯಲ್ಲಿ ಮೌರ್ಯರು, ಕದಂಬರು, ಬಾದಾಮಿ ಚಾಲುಕ್ಯರು, ಸೆವುಣರು ಹಾಗೂ ವಿಜಯನಗರ ಅರಸರ ಸಾಮ್ರಾಜ್ಯ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರ ಪತನವಾದ ನಂತರ ಗೋಲ್ಕಂಡ ಅಹಮ್ಮದ್ ನಗರ ಬಿಜಾಪುರದ ಸುಲ್ತಾನರ ಕೈವಶವಾಗಿತ್ತು. ೧೮೫೩ರಲ್ಲಿ ಕಂಪನಿ ಒಪ್ಪಂದಂತೆ ಬ್ರಿಟಿಷ್‌ರ ವಶವಾಗಿ ಮುಂದೆ, ೧೮೫೮ರಲ್ಲಿ

ನಿಜಾಮನ ಆಡಳಿತದಲ್ಲಿ ಬಂದಿತು. ತದನಂತರದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹೋರಾಟಗಳು ನಡೆಯುತ್ತಲೆ ಹೈದ್ರಾಬಾದ್ ಕರ್ನಾಟಕದಲ್ಲಿ ಬ್ರಿಟಿಷ್ ಹಾಗೂ ಮುಸ್ಲಿಂ ಆಳ್ವಿಕೆ ವಿಮುಕ್ತಿಗೊಳಿಸಲು, ಅಲ್ಲಿನ ಬುದ್ಧಿಜೀವಿಗಳು, ಜನಸಾಮಾನ್ಯರು, ಎಲ್ಲಾ ಸಮುದಾಯದ ಜನರು ಅವಿರತರಾಗಿದ್ದವು. ಆದರೂ ೧೯೪೭ರ ಅಗಸ್ಟ್ ೧೫ರಂದು ಭಾರತ ಸ್ವತಂತ್ರವಾದರು ಕೂಡ, ಹೈದ್ರಾಬಾದ್ ನಿಜಾಮರ ರಾಜನಾದ ಮೀರ್ ಉಸ್ಮಾನ್ ಅಲಿ ನಿಜಾಮ್ ಬಹದ್ದೂರ್‌ರವರು ಭಾರತದ ಒಕ್ಕೂಟದಲ್ಲಿ ಸೇರಿಸದೆ, ಸ್ವತಂತ್ರವೆಂದು ಘೋಷಿಸಿಕೊಂಡನು. ಇದನ್ನು ಹತ್ತಿಕ್ಕಲು ಅನೇಕ ಹೋರಾಟಗಳು ನಡೆಸಿದ್ದರಿಂದ ಪರಿಣಾಮ ವಿಕೋಪಕ್ಕೆ ತಿರುಗಿತು. "ಭಾರತದ ಅಂದಿನ ಗೃಹಮಂತ್ರಿಯಾಗಿದ್ದ ಸರದಾರ್ ವಲ್ಲಭಾಯಿ ಪಾಟೇಲ್‌ರು ಭಾರತ ಸೇನೆಯನ್ನು ಈ ಪ್ರದೇಶದಲ್ಲಿ ಕಳುಹಿಸಿ ನಿಜಾಮರ ಆಳ್ವಿಕೆ ಕೊನೆಯಗೊಳಿಸಿ, ಸೆಪ್ಟೆಂಬರ್ ೧೮, ೧೯೪೮ ರಂದು ಭಾರತ ಸರ್ಕಾರವು ಹೈದ್ರಾಬಾದ್ ಪ್ರದೇಶವನ್ನು ವಿಮೋಚನಾ ಸ್ವಾತಂತ್ರ್ಯವೆಂದು ಘೋಷಿಸಲಾಗಿ ತನ್ನ ಒಕ್ಕೂಟದಲ್ಲಿ ಸೇರಿಸಿಕೊಂಡಿತು."[7]

ಹೀಗೆ ಹೈದ್ರಾಬಾದ್ ಕರ್ನಾಟಕ ಮುಸ್ಲಿಂ ದೊರೆಗಳ ಅಟ್ಟಹಾಸದಲ್ಲಿ ಚದುರಿಹೋಗಿತ್ತು. ಆದ್ದರಿಂದ ಇಲ್ಲಿನ ಪ್ರದೇಶಕ್ಕೆ ಹೈದ್ರಾಬಾದ್ ಕರ್ನಾಟಕವೆಂದು ಕರೆಯಲಾಯಿತು. ರಾಜ್ಯಗಳ ಪುನರ್ ವಿಂಗಡಣೆಯಾದಾಗ ಅಂದು ಬಳ್ಳಾರಿಯಲ್ಲಿದ್ದ ಆದೋನಿ, ಆಲೂರು, ರಾಯದುರ್ಗ ಆಂಧ್ರ ಪ್ರದೇಶದಲ್ಲಿ ವರ್ಗವಾದವು. ಪರಿಣಾಮ "೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಪ್ರಾಂತ್ಯದಲ್ಲಿ ಸೇರಿಸಲಾಯಿತು. ೧೯೫೬ರಲ್ಲಿ ಮೈಸೂರು ಪ್ರಾಂತ ಮೈಸೂರು ರಾಜ್ಯವಾಯಿತು."[8]

"೧೯೭೩ರಲ್ಲಿ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ"[9] ಈ ನಾಡನ್ನು ಕರ್ನಾಟಕವೆಂದು ಮರು ನಾಮಕರಣ ಮಾಡಲಾಯಿತು. ಆಡಳಿತ ದೃಷ್ಟಿಯಿಂದ ನಾಲ್ಕು ಕಂದಾಯ ವಿಭಾಗ ಮಾಡಿದ್ದರಿಂದ ಬಳ್ಳಾರಿಯು ಬೆಂಗಳೂರು ವಿಭಾಗದಲ್ಲಿ ಸೇರಿಸಲಾಯಿತು. ಆದರೆ ಪ್ರಾದೇಶಿಕ ಸಮಾನತೆ ತರಲು ಪುನಃ ಪರಿಷ್ಕರಿಸಿದಾಗ ೧೯೬೬ರಲ್ಲಿ ಬಳ್ಳಾರಿ ಜಿಲ್ಲೆಯನ್ನು ಬೆಂಗಳೂರು ಕಂದಾಯ ವಿಭಾಗದಿಂದ ಬೇರ್ಪಡಿಸಿ, ಗುಲ್ಬರ್ಗ ಕಂದಾಯ ವಿಭಾಗದಲ್ಲಿ ಸೇರಿಸಲಾಯಿತು. ಇದರಿಂದ ಬಳ್ಳಾರಿ ಹೈದ್ರಾಬಾದ್ ಕರ್ನಾಟಕದಲ್ಲಿ ವಿಲೀನವಾಯಿತು.

ಭೌಗೋಳಿಕ ಪರಿಸರ

ನನ್ನ ಸಂಶೋಧನಾ ವ್ಯಾಪ್ತಿ ಪ್ರದೇಶವಾದ "ಹೈದ್ರಾಬಾದ್ ಕರ್ನಾಟಕ" ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿದೆ. ಇದು ಐದು ಜಿಲ್ಲೆಗಳಾದ ಗುಲ್ಬರ್ಗ, ಬೀದರ್, ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡಿದೆ. ಹಾಗೆಯೆ "ಮೂವತ್ತೊಂದು ತಾಲ್ಲೂಕುಗಳನ್ನು ಒಳಗೊಂಡ ಈ ಜಿಲ್ಲೆಗಳು ಒಣಹವೆಯಿಂದ ಕೂಡಿರುತ್ತದೆ."[10] ಬೀಳುವ ಮಳೆಯ ಪ್ರಮಾಣ ೭೮೯ ಸೆಂ.ಮೀ. ಜೇಡಿ ಮರಳು ಮಿಶ್ರಿತ ಮಣ್ಣಿನಿಂದ ಕೂಡಿದೆ. ಅಲ್ಲಲ್ಲಿ ಕೆಂಪು ಮಣ್ಣಿನ ಭೂಮಿಯು ದೊರೆಯುತ್ತದೆ. ಇಲ್ಲಿನ ಮುಖ್ಯಬೆಳೆಗಳಾದ ಬಿಳಿಜೋಳ, ತೊಗರಿ, ಗೋಧಿ, ಶೇಂಗಾ, ಭತ್ತ, ಸೂರ್ಯಕಾಂತಿ ಮೆಣಸಿನಕಾಯಿ, ಹೆಸರು ಮತ್ತು ಕಡಲೆ ಇತ್ಯಾದಿಗಳ ದವಸದಾನ್ಯಗಳನ್ನು ಬೆಳೆಯಿಸಿ, ವರ್ಷದ ಎರಡು ಬೆಳೆಗಳನ್ನು ಪಡೆಯುವುದುಂಟು. ಕೃಷ್ಣ ಭೀಮ, ತುಂಗಭದ್ರ, ಕಾರಂಜಿ ಹರಿವ ನದಿಗಳಾಗಿವೆ.

ಗುಲ್ಬರ್ಗ್

ಉತ್ತರದಿಂದ ದಕ್ಷಿಣಕ್ಕೆ ಇಳಿಜಾರಾಗಿದೆ. ಇದು ದಖ್ಖನ್ ಪ್ರಸ್ಥಭೂಮಿ ಹೌದು. ಈ ಭಾಗ "ಸಮುದ್ರಮಟ್ಟದಿಂದ ೩೦೦ ರಿಂದ ೬೦೦ ಮೀಟರ ಎತ್ತರದಲ್ಲಿದೆ."[11] ಮೊದಲು ಹೇಳುವಂತೆ ಒಣಹವೆಯಿಂದ ಕೂಡಿದ "ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೭೧೫.೫ ಮೀ. ಬೇಸಿಗೆಯಲ್ಲಿ ಗರಿಷ್ಠ ಉಷ್ಣತೆ ೪೦° ಸೆ. ನಿಂದ ೪೫° ಸೆ. ವರೆಗೂ ಏರುತ್ತದೆ. ಚಳಿಗಾಲದಲ್ಲಿ ರಾತ್ರಿಯ ಉಷ್ಣತೆ ೧೧°ಸೆ"[12] ನಷ್ಟಕ್ಕೆ ಇಳಿಯುತ್ತದೆ. ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣವನ್ನು ೧೬.೨೨೪ ಚ.ಕಿ.ಮೀ. ಹೊಂದಿದೆ.

ಬೀದರ್

ಬೀದರ್ ಕರ್ನಾಟಕ ರಾಜ್ಯದ ಉತ್ತರದ ತುದಿಯಲ್ಲಿದ್ದು, ದಖ್ಖನ್ ಪ್ರಸ್ಥಭೂಮಿಯ ಒಂದು ಭಾಗವಾಗಿದೆ. ಇಲ್ಲಿನ ಭೂ ಸಂಬಂಧ ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ಅಂಟಿಕೊಂಡಿದೆ. "ಜಿಲ್ಲೆಯ ಒಟ್ಟು ವಿಸ್ತೀರ್ಣ ೫೪೫೮ ಚ.ಕಿ.ಮೀ."[13] ಸಮುದ್ರದ ಮಟ್ಟದಿಂದ "೨೨೦೬ ಅಡಿ ಎತ್ತರವಿದೆ"[14]. "ದಕ್ಷಿಣೋತ್ತರವಾಗಿ ೭೬°-೪೨ ದಿಂದ ೭೭°-೭೯ ರೇಖಾಂಶಗಳವರೆಗೂ ಪೂರ್ವ ಪಶ್ಚಿಮವಾಗಿ ೧೭°-೩೫ ದಿಂದ ೧೮°-೨೫ ಅಕ್ಷಾಂಶಗಳವರೆಗೂ ಹರಡಿಕೊಂಡಿದೆ."[15] ಸರಾಸರಿ ವಾರ್ಷಿಕ ಮಳೆಯು ೯೦೭.೫ ಮೀ.ಗಳಿಷ್ಟಿದೆ.

ಬಳ್ಳಾರಿ

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿ ಬಳ್ಳಾರಿ ಇದೆ. ಅಂದರೆ ಅದು ಪೂರ್ವದ ಕಡೆಗೆ ಇದೆ. "ಜಿಲ್ಲೆಯ ಒಟ್ಟು ವಿಸ್ತೀರ್ಣ ೧೮೬೮ ಕಿ.ಮೀ.ಗಳಿಷ್ಟಿದೆ."[16] "ಬೇಸಿಗೆಯಲ್ಲಿ ೪೦° ಸೆ. ನಿಂದ ೪೫° ಸೆ. ವರೆಗೂ ಒಣಹವೆಯನ್ನು ಹೊಂದಿರುತ್ತದೆ."[17] ಸರಾಸರಿ ವಾರ್ಷಿಕ ಮಳೆ ೫೧೮ ಮಿ.ಮೀಗಳಿಷ್ಟಿದೆ. "ಉತ್ತರ ಅಕ್ಷಾಂಶ ೧೪°-೩೦° ಹಾಗೂ ೭೫° ರಿಂದ ೪೦° ವರೆಗೂ ಮತ್ತು ೭೭° ರಿಂದ ೧೧°ವರೆಗೂ ರೇಖಾಂಶವನ್ನು ಹೊಂದಿದೆ." ಸಮುದ್ರ ಮಟ್ಟದಿಂದ ೨೨೯° ೩೦° ಅಡಿ ಎತ್ತರವಿದೆ."[18]

ರಾಯಚೂರು

ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿದ್ದು ರಾಯಚೂರು ಪೂರ್ವ ಭಾಗದಲ್ಲಿದೆ. ಭೂ ಸಂಬಂಧ ಆಂಧ್ರಪ್ರದೇಶ ಮತ್ತು ಕರ್ನಾಟಕದ ಗುಲ್ಬರ್ಗ ಜಿಲ್ಲೆ ಸಂಬಂಧಹೊಂದಿದೆ. ಸಮುದ್ರ ಮಟ್ಟದಿಂದ ೧೨೦೦ ಇದರಿಂದ ೧೬೧೧ ಮೀಟರ್‌ನಷ್ಟು ಎತ್ತರದಲ್ಲಿದೆ. "ಉತ್ತರ ಅಕ್ಷಾಂಶ ೧೫°-೧೦ ೧೬°-೧೦ರ ವರೆಗೂ ಪೂರ್ವ ರೇಖಾಂಶ ೭೫°-೪೦ ರಿಂದ ೭೭°-೫೦ರ ವರೆಗೂ ಹರಡಿದೆ."[19] ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೬೦೦ ಮಿ.ಮೀಟರ್. ಒಟ್ಟು ವಿಸ್ತೀರ್ಣ ೮೪೫೮ ಚ.ಕಿ.ಮೀ.

ಕೊಪ್ಪಳ

ಕರ್ನಾಟಕ ರಾಜ್ಯದ "ಈಶಾನ್ಯ ಭಾಗದಲ್ಲಿ ಕೊಪ್ಪಳ ಜಿಲ್ಲೆಯಿದ್ದು. ಇದರ ಭೌಗೋಳಿಕ ಒಟ್ಟಾರೆ ವಿಸ್ತೀರ್ಣ ೫೫೫೯ ಚ.ಕಿ.ಮೀನಷ್ಟಿದೆ."[20] ೭೫°-೭೬ ರೇಖಾಂಶ, ೧೫°-೧೫ ಅಕ್ಷಾಂಶವನ್ನು ಹೊಂದಿದೆ.

ಸಮುದ್ರ ಮಟ್ಟದಿಂದ ೫೨೩.೦೪ ಮೀಟರ್ ಎತ್ತರದಲ್ಲಿದೆ. ಗರಿಷ್ಠ ಸರಾಸರಿ ಉಷ್ಣತೆ ೩೯° ಸೆ. ಗರಿಷ್ಠ ೪೩° ಸೆ. ಕನಿಷ್ಠ ಸರಾಸರಿ ತಾಪಮಾನವು ೧೭°-೫೦ ಆಗಿರುತ್ತದೆ.

ತ್ರಿಕೋನ ಕೃತಿ ಹೊಂದಿರುವ ಕೊಪ್ಪಳ ಜಿಲ್ಲೆಯು ಬಾಗಲಕೋಟೆ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಂದ ಸುತ್ತುವರಿದಿದೆ. ಉತ್ತರದ ತುದಿ ವಿಸ್ತೃತವಾಗಿದ್ದು ದಕ್ಷಿಣದ ತುದಿ ಚೂಪಾಗಿದೆ. ಒಣ ಹವೆಯಿಂದ ಕೂಡಿದ ವಿಶಾಲವಾದ ಪ್ರದೇಶವಾಗಿದೆ. "೧೯೯೮ರಲ್ಲಿ ಆಗಸ್ಟ್ ೧೫ರ ಜಿಲ್ಲಾವಾರು ವಿಂಗಡಣೆಯ ಸಂದರ್ಭದಲ್ಲಿ ಕೊಪ್ಪಳವು ರಾಯಚೂರು ಜಿಲ್ಲೆಯಿಂದ ಭಾಗವಾಗಿ ಸ್ವತಂತ್ರ ಜಿಲ್ಲಾಕೇಂದ್ರವಾಯಿತು."[21] ಇದಕ್ಕೂ ಮುಂಚೆ ರಾಯಚೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿತ್ತು.

೨೦೦೧ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದ ಜನಸಂಖ್ಯೆ ೫೨,೮೫೦,೫೬೨ ಇದೆ. ೨೦೦೧ರ ಜನಗಣತಿ ಪ್ರಕಾರ ಹೈದ್ರಾಬಾದ್ ಕರ್ನಾಟಕದ ಜನಸಂಖ್ಯೆ, ಒಟ್ಟು ಸಾಕ್ಷರರು ಒಟ್ಟು ಪರಿಶಿಷ್ಟರನ್ನು ಈ ಕೆಳಗಿನಂತೆ ನೋಡಬಹುದು.

ಕ್ರ. ಸಂ.	ಜಿಲ್ಲೆಗಳು	ಒಟ್ಟಾರೆ ಜನಸಂಖ್ಯೆ	ಒಟ್ಟಾರೆ ಸಾಕ್ಷರರು	ಒಟ್ಟು ಪರಿಶಿಷ್ಟರ ಜನಸಂಖ್ಯೆ
೧	ಗುಲ್ಬರ್ಗ	೩,೧೩೦,೯೨೨	೧,೨೯೭,೪೪೫	೮೭೧,೭೯೦
೨	ಬೀದರ್	೧,೫೦೨,೩೭೩	೭೬೮,೩೫೮	೪೮೧,೦೩೧
೩	ರಾಯಚೂರು	೧,೬೬೯,೭೬೨	೬೭೬,೭೯೯	೬೨೦,೩೧೮
೪	ಕೊಪ್ಪಳ	೧,೧೯೬,೦೮೯	೫೩೪,೫೪೭	೩೨೩,೭೯೭
೫	ಬಳ್ಳಾರಿ	೨,೦೨೭,೧೪೦	೯೮೦,೪೮೩	೭೩೮,೮೫೬

೨.೨ ಅಲೆಮಾರಿ ಪದ ಪರಿಚಯ

ಮಾನವರ ಸಾಮಾಜಿಕ ವ್ಯವಸ್ಥೆಗೆ ದೀರ್ಘವಾದ ಇತಿಹಾಸವಿದೆ. ಅವರು ಮೊದಲು ಆದಿವಾಸಿಯಾಗಿದ್ದರು. ಕಾಲ ಉರುಳಿದಂತೆ ಮೊದಲ ವೃತ್ತಿಗಳಿಂದ ಹೊರ ಬರುತ್ತಲೆ ಭಿನ್ನ ವೃತ್ತಿಗಳನ್ನು ಕಂಡುಕೊಂಡರು. ವೈವಿಧ್ಯಮಯ ಬದುಕನ್ನು ಕಂಡುಕೊಂಡಿರುವುದು ಎಲ್ಲರಿಗೂ ಗೊತ್ತಿರುವ ಸಾಮಾಜಿಕ ವಿಷಯವಾಗಿದೆ. ಆದರೆ ಕೆಲವೊಂದು ಮಾನವ ಸಮುದಾಯಗಳು ಯಾವುದೆ ಸಾಂಸ್ಕೃತಿಕ, ತಂತ್ರಜ್ಞಾನ, ಆಧುನಿಕ ಬಿರುಗಾಳಿ ಬೀಸಿದರು, ಯಾವುದೆ ಬಿರುಗಾಳಿಗೆ ಬಗ್ಗದೆ, ತಮ್ಮ ಮೂಲ ಪರಂಪರೆಯೊಂದಿಗೆ ತಮ್ಮ ಸಾಂಸ್ಕೃತಿಕ ಕಲೆಗಳೊಂದಿಗೆ ಜೀವನವನ್ನು ಸಂದರ್ಭಗಳನುಸಾರಾವಾಗಿ ನಿರ್ವಹಿಸುತ್ತಾ ಬಂದಿದ್ದಾರೆ. ಅನ್ಯ ಸಂಸ್ಕೃತಿಯ ಅನ್ಯಾಯವನ್ನು ಎದುರಿಸುತ್ತ, ಪ್ರತ್ಯೇಕವಾಗಿಯೆ ಜೀವಿಸುತ್ತಿರುವ ಸಮುದಾಯವೆ ಅಲೆಮಾರಿ ಸಮುದಾಯಗಳಾಗಿವೆ.

ಅಲೆಮಾರಿ ಸಮುದಾಯ ಎಂದು ಪರಿಗಣಿಸಿರುವುದರಿಂದ ಅಲೆಮಾರಿ ಎಂದರೇನು? ಎಂಬದು ಪ್ರಸ್ತಾಪವಾಗಬೇಕಾಗಿದೆ. ಜೀವನ ನಿರ್ವಹಣೆಗಾಗಿ ಉನ್ನತ ಹುದ್ದೆಗಳ ಹಾಗೂ ಉನ್ನತ ಪದವಿ ವ್ಯಾಸಂಗ ಮಾಡಿರುವ ಪರಿಣಿತರು, ದೇಶ ವಿದೇಶಗಳಲ್ಲಿ ತಿರುಗುವ ಉದ್ಯೋಗಿ ಮತ್ತು ಆಧುನಿಕ ವಿದ್ಯಾವಂತ ಅಲೆಮಾರಿ ಜನ ಈ ಪದದ ಕಕ್ಷೆಗೆ ಬರುವುದಿಲ್ಲ. ನೌಕರಿಗಾಗಿ ತಮ್ಮ ಮೂಲಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಹೋಗಿಬರುವ ಜನಸಮುದಾಯವು ಈ ಪದದ ಕಕ್ಷೆಗೆ ಬರುವುದಿಲ್ಲ. ವ್ಯಾಪಾರದ ಉದ್ದೇಶಕ್ಕಾಗಿ ನೆಲೆನಿಂತು, ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಸಂಚರಿಸುವ ಸಮುದಾಯವು ಈ ಕಕ್ಷೆಗೆ ಬರುವುದಿಲ್ಲ."[22]

ಗ್ರಾಮ ಮತ್ತು ನಗರ ಸಂಸ್ಕೃತಿಯ ಪ್ರಭಾವಕ್ಕೆ ಸಂಪೂರ್ಣ ಒಳಗಾಗದೆ ಅದರಿಂದ ದೂರವಿದೆ. ನಿರ್ಗತಿಕರಾಗಿ, ಧಾರ್ಮಿಕ ಭಿಕ್ಷಾಟನೆ, ಸ್ಮಶಾನದಲ್ಲಿ ವಾಸ, ಸಮುದಾಯದ ಕಾಯಕ, ಪ್ರಾಣಿಗಳ ಜೊತೆಯಲ್ಲಿ, ಇತರರಿಗಿಂತ ಭಿನ್ನ ಪದ್ಧತಿ ರೂಢಿಸಿಕೊಂಡು ತಮ್ಮ ಮೂಲ ವೃತ್ತಿಗಳಿಂದ ಒಂದೂರಿನಿಂದ ಮತ್ತೊಂದೂರಿಗೆ ಅಲೆಯುವ ಅಥವಾ ಚಾಲನೆ ಸ್ಥಿತಿಯಲ್ಲಿರುವ ಸಮುದಾಯವನ್ನು ಅಲೆಮಾರಿ ಸಮುದಾಯ ಎನ್ನಬಹುದು. ಅಥವಾ ಪಾರಂಪಾರಿಕ ಸಮಾಜದಲ್ಲಿ ಆಧುನಿಕ ಬದುಕಿನ ನಿರ್ವಹಣೆಯ ಮೂಲಕ ಒಪ್ಪತ್ತಿನ ಊಟದ ಅನ್ವೇಷಣೆಯಲ್ಲಿ ೨೧ನೆ ಶತಮಾನದಲ್ಲೂ ಅಲೆದಾಡುವ ಸಾಮಾಜಿಕ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಸಮುದಾಯಗಳನ್ನು ಇಲ್ಲಿ ಅಲೆಮಾರಿಗಳು ಎಂದು ಪರಿಭಾವಿಸಲಾಗಿದೆ.

ಅಧ್ಯಯನದಲ್ಲಿ ಆಯ್ದುಕೊಂಡ ಅಲೆಮಾರಿ ಸಮುದಾಯಗಳು ಜಾತಿ ಶ್ರೇಣಿಯ ಕೆಳಗೆ ಬರುವವರಾಗಿದ್ದಾರೆ. ಆ ಮೂಲಕ ತಮ್ಮದೆ ಜೀವನ ಪದ್ಧತಿಯೊಂದಿಗೆ ಬದುಕನ್ನು ಹರಸಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಿರುತ್ತಾರೆ. ಎಲ್ಲಿ ತಮಗೆ ಯೋಗ್ಯವಾದ ಪ್ರದೇಶವೆಂದು ಅಂದುಕೊಳ್ಳುವರು. ಅಂತಹ ಕಡೆಗಳಲ್ಲಿ ಅಂದರೆ ಸ್ಮಶಾನದ ಭಾಗ, ಊರಿನ ಕೊನೆಯ ಪ್ರದೇಶ, ನೀರು ಹರಿಯುವ ಸ್ಥಳ, ಶಾಲಾಮೈದಾನ, ಸಂತೆ, ರೈಲ್ವೆನಿಲ್ದಾಣ, ಬಸ್‌ನಿಲ್ದಾಣ, ಚಲನಚಿತ್ರಗಳ ಹಿಂಭಾಗ ಇತ್ಯಾದಿ ಸ್ಥಳಗಳಲ್ಲಿ ಕೆಲವು ದಿನಗಳವರೆಗೆ ಗುಡಾರಗಳನ್ನು ನಿರ್ಮಿಸಿ ಉಳಿದುಕೊಳ್ಳುವರು. ತರುವಾಯ ಅಲ್ಲಿಂದ ಮುಂದಿನ ಪ್ರದೇಶದಲ್ಲಿ ಸಂಚರಿಸುತ್ತಾ ಇರುತ್ತಾರೆ. ಈ ಚಲಿಸುವ ಬದುಕಿನ ಸಾಗಟದಲ್ಲಿ ಹಸಿವು, ನೋವು, ಹಿಂಸೆ, ಅವಮಾನಗಳು, ದುಃಖ ನಿಂದನೆಗಳೊಂದಿಗೆ ಕಷ್ಟಗಳನ್ನು ಅನುಭವಿಸಿ ತಮ್ಮ ಶ್ರೇಷ್ಠತೆ ಉಳಿಸಿಕೊಂಡು ನೆಲೆನಿಂತ ಸಮುದಾಯಗಳೊಂದಿಗೆ ಮುಖಾಮುಖಿಯಾಗಿ ಜೀವನ ನಡೆಸುತ್ತಿದ್ದಾರೆ.

೨.೩ ಅಲೆಮಾರಿ ಸಮುದಾಯಗಳ ಸಂಕ್ಷಿಪ್ತ ಪರಿಚಯ

ಅಧ್ಯಯನದಲ್ಲಿ ಆಯ್ದುಕೊಂಡ ಅಲೆಮಾರಿ ಸಮುದಾಯಗಳ ಸಂಕ್ಷಿಪ್ತ ಪರಿಚಯವನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

೧. ಬುಡ್ಗಜಂಗಮರು (Budgajangam)

ಬುಡಕಟ್ಟಿನ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನು ಹೊಂದಿರುವ ಸಮುಧಾಯವೆಂದರೆ ಬುಡ್ಗಜಂಗಮ ಸಮುದಾಯ. ಬುಡ್ಗಜಂಗಮರು ಮೂಲತಃ ಧಾರ್ಮಿಕ ಭಿಕ್ಷಾಟನೆಗಾರರು. ಇವರು ಮೊದಲು ಗುಡ್ಡ-ಬೆಟ್ಟಗಳಲ್ಲಿ, ಅರಣ್ಯ ಪ್ರದೇಶಗಳಲ್ಲಿ, ಬಯಲು ಸರಹದ್ದುಗಳಲ್ಲಿ ಜೀವನ ನಡೆಸುವವರಾಗಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಹಳ್ಳಿ ಮತ್ತು ಮೇಟ್ರೊಪಾಲಿಸಿಟಿಯವರೆಗೂ ತಮ್ಮ ಕಲಾತ್ಮಕತೆಯ ಭಿಕ್ಷಾಟನೆಗಳೊಂದಿಗೆ ಜೀವನ ನಿರ್ವಹಣೆ ಮಾಡುತ್ತಿರುವರು. ಬುಡ್ಗಜಂಗಮ ಕರ್ನಾಟಕದಲ್ಲಿನ ಅತಿದೊಡ್ಡ ಸಮುದಾಯವಾಗಿದೆ. ಕ್ರಿ.ಸಂ. ೧೯ರಲ್ಲಿ ಪರಿಶಿಷ್ಟಜಾತಿ ಪಟ್ಟಿಗೆ ಸೇರಿಸಲಾಗಿದೆ.

ಎಡ್ಗರ್ ಥರಸ್ಟನ್‌ರವರ ಪ್ರಕಾರ ಬುಡ್ಗ ಜಂಗಮರು ತಿರುಪತಿಯಲ್ಲಿನ ಗಂಗಮ್ಮ ಜಾತ್ರೆಯ ಹಬ್ಬದಲ್ಲಿ ತಮ್ಮ ವೇಷ ಬದಲಿಸಿಕೊಂಡು ಭಿಕ್ಷೆ ಬೇಡುವ ತೆಲುಗು ಮೂಲದವರು. ಇವರು ವಿವಿಧ ರೀತಿಯ ವೇಷಗಳಲ್ಲಿ ಜನರಿಗೆ ಕಾಣಿಸಿಕೊಳ್ಳುತ್ತಾ ಜನರಿಗೆ ಸಾಂಸ್ಕೃತಿಕ ಬಗ್ಗೆ ತಿಳಿಸುತ್ತಾ, ಸಂಗೀತದ ಮೂಲಕ ಜಾನಪದ ಕಥೆಗಳನ್ನು ಹೇಳುವಲ್ಲಿ ನಿಪುಣರಾಗಿದ್ದಾರಂತೆ. ಭಿಕ್ಷೆಗಾಗಿ ಸ್ಥಳದಿಂದ ಸ್ಥಳಕ್ಕೆ ಹೋಗುತ್ತಾರೆ. ಬೇರೆ ಬೇರೆ ಕಾರಣಗಳಿಂದಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವುದುಂಟು.

ಉತ್ತರ ಕರ್ನಾಟಕದಲ್ಲಿ ಇವರನ್ನು ಬಹುರೂಪಿ, ಹಗಲುವೇಷ, ಬಾಳಸಂತೋಷಿ, ಮಾಳಜಂಗಮರು ಎಂದು ಕರೆಯುತ್ತಾರೆ. ಭಿಕ್ಷಾಟನೆಗಾಗಿ ವಿವಿಧ ರೀತಿಯ ವೇಷಗಳನ್ನು ಧರಿಸುವುದುಂಟು. ಪೌರಾಣಿಕ ವೇಷಧರಿಸುವ ರಾಮ, ಕೃಷ್ಣ, ಭೀಮ, ರಾವಣ, ಹನುಮಂತ, ನಾರದ ಇತ್ಯಾದಿ ಪಾತ್ರಗಳ ಮೂಲಕ ವೇಷಗಳನ್ನು ಹಾಗೂ ಸಂಗೀತದ ಮೂಲಕ ಬೀದಿ ಬೀದಿಗಳಲ್ಲಿ ಪ್ರದರ್ಶನದಿಂದ ಮಾಡುತ್ತಾರೆ. ಈ ಪ್ರದರ್ಶನದಿಂದ ಭಿಕ್ಷೆ ಬೇಡುವುದುಂಟು.

ದಕ್ಷಿಣ ಕರ್ನಾಟಕದಲ್ಲಿ ಭೈರಾಗಿ, ಮಾಳಸನ್ಯಾಸಿ, ಜಂಗಾಲಿ, ಕುರುಕುರುಮಾಮ, ಗೊರವಯ್ಯ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಬಹುರೂಪಿ, ಭೈರಾಗಿಗಳನ್ನು ಹಿಂದುಳಿದ ವರ್ಗ(OBC)ಗಳ ಪಟ್ಟಿಗೆ ಸೇರಿಸಲಾಗಿದೆ. "ಬುಡ್ಗಜಂಗಮ್ ಎಂಬ ಪದವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ."

ಆರಾಧ್ಯ ದೈವ : ಬುಡ್ಗಜಂಗಮರು ಮಾರಮ್ಮ, ದುರುಗಮ್ಮ, ಸುಂಕ್ಲಮ್ಮ, ರೇಣುಕಾ ಯಲ್ಲಮ್ಮ, ಗುರುಮೂರ್ತಿ, ತಿಮ್ಮಪ್ಪ, ಗಂಗಮ್ಮ ದೇವತೆಗಳನ್ನು ಪೂಜಿಸುತ್ತಾರೆ. ಯುಗಾದಿ, ಶಿವರಾತ್ರಿ ಹಬ್ಬಗಳನ್ನು ಆಚರಿಸಿಕೊಳ್ಳುತ್ತಾರೆ.

ಭಾಷೆ : ತೆಲುಗು ಮತ್ತು ಕನ್ನಡ ಭಾಷೆ ಮಾತನಾಡುತ್ತಾರೆ. ಕನ್ನಡ ಬರೆಯುವುದಕ್ಕೆ ಬರುವುದಿಲ್ಲ. ಬುಡ್ಗ ಭಾಷೆ ಹೆಚ್ಚಾಗಿ ಬಳಸುವುದುಂಟು.

ಸಾಕ್ಷರತೆ : "ಸಾಕ್ಷರತೆ ಪ್ರಮಾಣ ಶೇ. ೧ ಕ್ಕಿಂತ ಕಡಿಮೆ ಇದೆ."[೩]

ನೆಲೆ : ಇವರು ಕರ್ನಾಟಕದಾದ್ಯಂತ ನೆಲೆಸಿದ್ದಾರೆ. ಅವುಗಳಾದ ಬಳ್ಳಾರಿ, ರಾಯಚೂರು, ಕೊಪ್ಪಳ, ಗುಲ್ಬರ್ಗ, ಕೋಲಾರ ಮತ್ತು ಬೆಂಗಳೂರು ಗ್ರಾಮಂತರ ಪ್ರದೇಶದಲ್ಲಿ ನೆಲೆಸಿದ್ದಾರೆ. ಹಾಗೂ ಆಂಧ್ರಪ್ರದೇಶದಲ್ಲಿ ಕೆಲವು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

ಸಾಮಾಜಿಕ ಸ್ಥಾನ : ಬುಡ್ಗಜಂಗಮರು ಸಮಾಜದಲ್ಲಿ ಯಾವುದೆ ಸ್ಥಾನಮಾನಗಳನ್ನು ಪಡೆದುಕೊಂಡಿಲ್ಲ. ಒಂದ್ಹೋತ್ತಿನ ಊಟ ಹಾಗೂ ನೀರು ಸಹ ದೊರೆಯದೆ ಬದುಕನ್ನು ಸಾಗಿಸುವ ಅಲೆಮಾರಿಯಾಗಿದೆ.

ಆಹಾರ ಪದ್ಧತಿ : ಇವರು ಮಾಂಸಹಾರಿಗಳು, ಬೇಟೆ ಇವರಿಗೆ ಮೂಲವಾದ ಪ್ರವೃತ್ತಿ. ಇವರು ಇಲಿ, ಬೆಕ್ಕು, ಪಕ್ಷಿ, ಆಮೆ, ನೀರುಕೋಳಿ, ಮೀನು, ಏಡಿ ಇತ್ಯಾದಿ ಮಾಂಸವನ್ನು ತಿನ್ನುತ್ತಾರೆ. ಆದರೆ ದನದ ಮಾಂಸ ಇವರಲ್ಲಿ ನಿಷೇಧವಾಗಿದೆ.

ಆಚರಣೆಗಳು : ಹುಟ್ಟು ಮತ್ತು ಸಾವಿನ ಸೂತಕಗಳನ್ನು ಆಚರಿಸುತ್ತಾರೆ.

೨. ಡೊಂಬರು (Dombaru)

ವಿಶಿಷ್ಟ ರೂಪದ ಕಸರತ್ತು ಮತ್ತು ರಂಜನೆ ಕಲೆಯನ್ನು ಹೊಂದಿದ ಡೊಂಬರನ್ನು ಬ್ರಿಟಿಷ್‌ರು ಅಪರಾಧಿಗಳೆಂದು ಪರಿಗಣಿಸಿದ್ದರು. ಇವರ ವೃತ್ತಿ ಡೊಂಬರಾಟ. ಡೊಂಬರ ಸಮುದಾಯವು ಸ್ವಾತಂತ್ರ್ಯ ಪೂರ್ವ ಮತ್ತು ಆಧುನಿಕ ಸಮಾಜದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರಂತರ ಜೀವನೋಪಾಯಕ್ಕಾಗಿ ಅಲೆಯುತ್ತಲೆಯಿದ್ದಾರೆ. ಅವರ ಕಸುಬುಗಳಿಂದ ಜನರಿಗೆ ಮನೋರಂಜನೆ ನೀಡುತ್ತಾರೆ. ಉತ್ತರ ಭಾರತದಲ್ಲಿ ಇವರಿಗೆ 'ಡೊಂಸಿ' ಎಂದು ಕರೆಯುತ್ತಾರೆ. ನಂತರದ ದಿನಗಳಲ್ಲಿ ಇವರನ್ನು ಜಾಡಮಾಲಿಗಳಾಗಿ ಬಳಸಿಕೊಳ್ಳಲಾಗುತಿತ್ತು. ಶವಸಾಗಾಣಿಕೆ ವೃತ್ತಿಗಳನ್ನು ಅನುಸರಿಸುತ್ತಿದ್ದರು. ಇವರು ಆಂಧ್ರ ಮೂಲದವರೆಂದು ಹೇಳಿಕೊಳ್ಳುತ್ತಾರೆ. ೧೯೮೧ರ ಜನಗಣತಿ ಪ್ರಕಾರ ಧಾರವಾಡ, ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಇವರ ಜನಸಂಖ್ಯೆ ೧೨,೯೫ ಇದೆ ಎಂದು ತಿಳಿದುಬಂದಿದೆ. ಕರ್ನಾಟಕದಲ್ಲಿ ಡೊಂಬರನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ.

ಪರ್ಯಾಯ ಪದ: ಡೊಂಬ, ಡೊಂಬರ, ಡೊಂಮ, ಡೊಮ್ಮರ, ಕೊಲ್ಲಟಿಗ

ಗೋತ್ರ : ಕಾಣಿಸದವರು, ಪಿಡಸಿದವರು, ಮಲ್ಲಿಹೂವಿನವರು, ಮೂಡುಲರು, ಕರಹಗೇರು

ಕುಲದೇವತೆ : ಹುಲಿಗೆಮ್ಮ, ಎಲ್ಲಮ್ಮ, ವೆಂಕಟೇಶ್ವರ, ನಾಗನಾಥ ಇತ್ಯಾದಿ.

ಸಾಕ್ಷರತೆ : "ಶೇ. ೪ ಕ್ಕಿಂತ ಕಡಿಮೆಯಿದೆ."[24]

ಭಾಷೆ : ಲಿಪಿ ಇಲ್ಲದ ಡೊಂಬರ ಭಾಷೆಯನ್ನು ಮಾತನಾಡುತ್ತಾರೆ. ಹಾಗೂ ಎಲ್ಲ ಪ್ರಾದೇಶಿಕ ಭಾಷೆಗಳು ಇವರಿಗೆ ತಿಳಿದಿವೆ.

ನೆಲೆ : ಕರ್ನಾಟಕದಲ್ಲಿ ಬೀದರ್‌ನಿಂದ ಚಾಮರಾಜನಗರದವರೆಗೂ ವಾಸಮಾಡುವುದುಂಟು. ಮುಖ್ಯವಾಗಿ ಬಳ್ಳಾರಿ, ದಾವಣಗೆರೆ, ಕೊಪ್ಪಳ ಮತ್ತು ಬಾಗಲಕೋಟೆಯಲ್ಲಿ, ಪ್ರಮುಖ ಸ್ಥಳಗಳಲ್ಲಿ ನೆಲೆಸಿದ್ದಾರೆ.

ಸಮಾಜದ ಸ್ಥಾನ : ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತ ಸಮುದಾಯಗಳಂತೆ ಕಂಡುಬರುತ್ತಾರೆ. ಇವರ ಪ್ರದರ್ಶನಕಲೆಪ್ರಮುಖ ವೃತ್ತಿಯಾಗಿದೆ.

ಆಹಾರ ಪದ್ಧತಿ : ಇವರು ಮಾಂಸಹಾರಿಗಳು ಆದರೆ, ದನದ ಮಾಂಸ ನಿಷೇಧವಾಗಿದೆ.

ಆಚರಣೆ : ಹಿಂದುಗಳ ಆಚರಣೆಗಳಂತೆ ಇವರು ಸಹ ಹಬ್ಬ, ಜಾತ್ರೆ, ಮದುವೆ ಮತ್ತು ಶವ ಸಂಸ್ಕಾರಗಳನ್ನು ಆಚರಿಸುತ್ತಾರೆ. ಮದುವೆಯಲ್ಲಿ ವರದಕ್ಷಿಣೆ ಚಾರಿಯಲ್ಲಿ ಇರುವುದಿಲ್ಲ. ವಧುದಕ್ಷಿಣೆಯಿದೆ. ಪ್ರಾಚೀನ ಕಾಲದಿಂದ ಸ್ವಾತಂತ್ರ್ಯದವರೆಗೂ ದೇವದಾಸಿ ಪದ್ಧತಿ ಇವರಲ್ಲಿದೆ. ಆದರೆ ಆಧುನಿಕ ಪ್ರಭಾವದಿಂದ ದೇವದಾಸಿ ಪದ್ಧತಿಗಳಿಂದ ಹೊರಬಂದಿರುತ್ತಾರೆ.

ಉದ್ಯೋಗ : ಡೊಂಬರಾಟ, ಕೃಷಿಕಾರ್ಮಿಕರು, ಗುಡಿಕೈಗಾರಿಕೆಗಳಿಂದ ಬಾಚಣಿಕೆ ತಯಾರಿಕೆ, ಮುದ್ದೆಕೋಲು, ಬುಟ್ಟಿಗಳು ಇತ್ಯಾದಿ ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಕೊಡಗಳು, ಬಕೇಟ್ ವ್ಯಾಪಾರ ಇತರೆ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

೩. ದಕ್ಕಲಿಗ (Dakkaliga)

ಅಲೆಮಾರಿಗಳಾದ ದಕ್ಕಲಿಗ ಸಮುದಾಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಂತೆ ಕಂಡುಬರುತ್ತಾರೆ. ಹರಿಜನ, ಮಾದಿಗ ಸಮುದಾಯದವರು ದಕ್ಕಲಿಗ ಸಮುದಾಯದವರನ್ನು ಮುಟ್ಟುವುದಿಲ್ಲ. ಅಸ್ಪೃಶ್ಯರಿಗಿಂತಲೂ ಕೀಳು ಜಾತಿಯವರೆಂದು ಭಾವಿಸುತ್ತಾರೆ. ಮಾದಿಗರ ಕೇರಿಯ ಹತ್ತಿರಬಂದು ಭಿಕ್ಷೆಯನ್ನು ಬೇಡಬೇಕಾಗಿದೆ. ಅವರ ಮನೆಗಳ ಹತ್ತಿರ ಹಾಗೂ ಒಳಗೆ ಪ್ರವೇಶವಿಲ್ಲ. ಹೊಲೆಯ ಮತ್ತು ಮಾದಿಗರು ದಕ್ಕಲಿಗರನ್ನು ಹೀನಾಯ ದೃಷ್ಟಿಯಲ್ಲಿ ಕಾಣುವುದುಂಟು.

ದಕ್ಕಲಿಗರು ಮಾದಿಗರ ಓಣಿಗಳು ಅಥವಾ ಕೇರಿಗಳಲ್ಲಿ ಬರುವುದಕ್ಕಿಂತ ಮುಂಚೆಯೆ ಅವರಿಗೆ ತಿಳಿಸಿದಾಗ ಅವರೆಲ್ಲರೂ ಒಟ್ಟುಗೂಡಿ ಕೇರಿಯಿಂದ ಭಿಕ್ಷೆಯನ್ನು ಸಂಗ್ರಹಿಸಿ ದಕ್ಕಲಿಗರಿಗೆ ಕೊಡುತ್ತಾರೆ. ಅದನ್ನು ಸ್ವೀಕರಿಸಿ ಅಲ್ಲಿಂದಲೆ ಹಿಂತಿರುಗಬೇಕು. ಇವರು ಮಾದಿಗ ಸಮುದಾಯದಿಂದ ಭಿಕ್ಷೆಯನ್ನು ಮಾತ್ರ ಸ್ವೀಕರಿಸುತ್ತಾರೆ. ದಕ್ಕಲಿಗರು ಮಾದಿಗರ ಮಕ್ಕಳು ಎಂದು ಭಾವಿಸಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ದಕ್ಕಲಿಗರ ಸಮುದಾಯವನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಲಾಗಿದೆ.

ಪರ್ಯಾಯ ಪದ : ದಕ್ಕಲ, ದಕ್ಕಲದರ, ದಕ್ಕಲಿಗ, ದೊಕ್ಕಲಿಗರು.

ಬಳಿ : ಪೆದ್ದರೆಡಿಸ್ಸ್, ಚಿನ್ನರೆಡ್ಡಿಸ್, ಕಾರುಯಲ್, ಪಾಟಸವಲ್, ಗಣಚಾರೋಳ್, ರಾಮ ಚೋಳ್, ಮ್ಯಾಕ್‌ಲೋಳ, ಪೋಗುಲೋರು, ಈರ್ಲೆಲ್, ರೇಣು ಕುಂಟಿಲ್, ಪೆದ್ದನೋರವರ್

ಕುಲದೇವತೆ : ಮಾರೆಮ್ಮ, ದುರ್ಗಮ್ಮ, ಚೌಡಮ್ಮ, ಗುತ್ತೆಮ್ಮ, ಹುಲಿಗೆಮ್ಮ, ಭೀಮವ್ವ, ಎಲ್ಲಮ್ಮ, ಕರಿಯಮ್ಮ, ಉಚ್ಚೆಂಗೆಮ್ಮ, ಆಂಜನೇಯ, ಭರಮಪ್ಪ ಇತ್ಯಾದಿ.

ಭಾಷೆ : ಮೊರಗು ಎಂಬ ಭಾಷೆ ಮಾತನಾಡುತ್ತಾರೆ. ಈ ಭಾಷೆಗೆ ಲಿಪಿ ಇರುವುದಿಲ್ಲ. ಇದರ ಜೊತೆಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳನ್ನು ಮಾತನಾಡುತ್ತಾರೆ.

ಸಾಕ್ಷರತೆ : "ಶೇ. ೨ ಕ್ಕಿಂತ ಕಡಿಮೆ ಇದೆ."[25]

ನೆಲೆ : ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಚಿಕ್ಕಮೆಗಳಗೆರೆ, ರಾಯಚೂರು ಜಿಲ್ಲೆಯ ಕೋಡೆಕಲ್ಲು, ಮಹಾಲಿಂಗಾಪುರ ಮೆಟ್ರಿ, ಬೆಂಗಳೂರು ಮತ್ತು ತುಮಕೂರು ಗಳಲ್ಲಿ ಕಂಡುಬರುತ್ತಾರೆ.

ಸಾಮಾಜಿಕ ಸ್ಥಾನ : ಹೊಲೆಯ ಮತ್ತು ಮಾದಿಗರು ಇವರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ಇವರು ಭಿಕ್ಷಾಟನೆಯನ್ನು ಮಾದಿಗರಿಂದ ಪಡೆಯುತ್ತಾರೆ.

ಆಹಾರ ಪದ್ಧತಿ : ಮಾಂಸಹಾರಿ ಹಾಗೂ ಸಸ್ಯಹಾರಿ.

ಉದ್ಯೋಗ : ಬೇಟೆ, ವ್ಯವಸಾಯ ಮತ್ತು ಮಾದಿಗ ಸಮುದಾಯದ ಹತ್ತಿರ ಭಿಕ್ಷೆಯನ್ನು ಕೇಳುವುದುಂಟು.

೪. ಗೋಸಂಗಿ / ಗೋಸಾಯಿ (Gosangi/Gosai)

ಗೋಸಂಗಿಯು ದೊಡ್ಡ ಅಲೆಮಾರಿ ಸಮುದಾಯವಾಗಿದೆ. ಗೋಸಂಗಿ ಎಂಬ ಪದ ಗೋಸಿಕ, ಗೋಸಿಕಲ್ಲು, ಗೋಸ್ತಿಕ ಎಂಬುವುದರಿಂದ ಬಂದಿದೆ. ಈ ಸಮುದಾಯ ಹಿಂದೆ ದನಗಳ ಮೇಯಿಸುವ ವೃತ್ತಿಯಲ್ಲಿ ಒಳಗೊಂಡಿದ್ದರಂತೆ. ದನಗಳ ಅಪಾರ ಕಾಳಜಿವಹಿಸಿದ್ದರಿಂದ ಇದೆ ವೃತ್ತಿಯನ್ನು ಅನುಸರಿ ಸುವುದರಿಂದ ಗೋಸಂಗಿ ಎಂದು ಕರೆದಿರಬಹುದು. ಗೋಸಂಗಿ ಸಮುದಾಯ ಉತ್ತರ ಹಾಗೂ ದಕ್ಷಿಣ ಭಾರತ ಕಡೆಗಳಿಂದ ಬಂದವರಾಗಿದ್ದಾರೆ. ಗೋಸಂಗಿ ಎಂಬ ಹೆಸರು 'ಗೋ-ಸ್ವಾಮಿ' ಅಂದರೆ 'ದನಗಳ ಒಡೆಯ' ಎಂಬ ಅರ್ಥಕೊಡುವುದು.

ಪರ್ಯಾಯ ಪದ : ಗೋಸಂಗಿ, ಗೋಸಾಯಿ, ದಾವುರಿಗೋಸಾಯಿ, ಗೋಪರು, ಗಂಧದೆಣ್ಣೆಯವರು ಅತ್ತರ್‌ವಾಲ್ ಇತ್ಯಾದಿಗಳು ಕರೆಯುವುದುಂಟು. ಗೋಸಂಗಿ ಸಮುದಾಯ ಕರ್ನಾಟಕದಲ್ಲಿ ಕೆಲವು ಜಿಲ್ಲೆಗಳಲ್ಲಿ ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಲಾಗಿದೆ. ಇನ್ನೂಳಿದ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗ ಓಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ.

ಬಳಿ : ಚವಾವಡೆ, ಚೌವ್ಹಾನ್, ಸಿಂಧೆ, ಸೋಲಂಕಿ, ಪಡಿಯರ್, ದಿಲ್ಲಿವಾಲ, ಕೋಲಿ, ಜಾದವ, ಕೊತ್ವಾಲ್, ಮುಲ್ಯಾಳಿ, ವೇನಗಿ, ಗೆಲೋತ, ದಂಡ, ಪವಾರ, ದೇವಾಂಗಿ, ಕತ್ರಿ, ಮಟ್ಟರ್ ಇತ್ಯಾದಿ.

ಕುಲದೇವತೆ : ಸೀತಲದೇವಿ, ಲಕ್ಷ್ಮೀ, ಮರಿಯಾದೇವಿ, ಚಾಮುಂಡಿ, ಮೈಲಾರಲಿಂಗ, ಆಂಜನೇಯ, ದುರ್ಗದೇವಿ.

ಭಾಷೆ : ಗೋಸಂಗಿ ಭಾಷೆ ಮತ್ತು ಪ್ರಾದೇಶಿಕ ಭಾಷೆ ಹಾಡುವರು.

ಸಾಕ್ಷರತೆ : "ಶೇ. ೩ ಕ್ಕಿಂತ ಕಡಿಮೆ ಇದೆ."[೨೬]

ನೆಲೆ : ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಅಲೆಯುತ್ತಿದ್ದಾರೆ. ಹಾಗೂ ಅಲ್ಲಲ್ಲಿ ನೆಲೆಸಿದ್ದಾರೆ.

ಸಾಮಾಜಿಕ ಸ್ಥಾನ: ಎಲ್ಲಾ ಸಮುದಾಯದವರಿಂದ ಭಿಕ್ಷೆಯನ್ನು ಬೇಡುತ್ತಾರೆ. ಆದರೆ ಇವರು ಅಸ್ಪೃಶ್ಯರಲ್ಲ.

ಆಚರಣೆ : ಗೋಸಂಗಿಗಳು ಹೋಳಿಹಬ್ಬ ಆಚರಿಸುತ್ತಾರೆ. ಈ ಹಬ್ಬವನ್ನು ದೊಡ್ಡಹಬ್ಬವೆಂದು ಭಾವಿಸುತ್ತಾರೆ. ಕಾಮದಹನ ಮಾಡಿ, ಕುರಿ ದಾನ ಮಾಡುವುದುಂಟು. ದೀಪಾವಳಿ ಹಬ್ಬದಲ್ಲಿ ಪಂಜುಗಳನ್ನು ಹಚ್ಚಿಕೊಂಡು ತಮ್ಮ ಮನೆಯ ಸುತ್ತ ತಿರುಗುತ್ತಾರೆ. ದಸಾರ ಹಬ್ಬವನ್ನು ಸಹ ಆಚರಿಸಿಕೊಳ್ಳುತ್ತಾರೆ.

ಉದ್ಯೋಗ : ಭಿಕ್ಷಾಟನೆ, ಸುಗಂಧ ದ್ರವ್ಯವಾದ ಗಂಧದ ಎಣ್ಣೆ ಮಾರಾಟ. ಬಕೇಟ್ ರೀಪೆರಿ, ಹಲ್ಲುಕಟ್ಟುವುದು, ಕಿವಿಯಲ್ಲಿ ಕೂಕಣೆ ತೆಗೆಯುವುದು.

೫. ಕಿಳ್ಳೇ / ಶಿಳ್ಳೆಕ್ಯಾತ್ (Sillekyatha/Killekyatha)

ಶಿಳ್ಳೆಕ್ಯಾತ ಅಲೆಮಾರಿ ಸಮುದಾಯವಾಗಿದ್ದು ಪರಿಶಿಷ್ಟ ಜಾತಿಯಲ್ಲಿ ಸೇರಿಸಲಾಗಿದೆ. ೧೯೮೧ರ ಜನಗಣತಿ ಪ್ರಕಾರ "ಇವರ ಒಟ್ಟು ಜನಸಂಖ್ಯೆ ೭,೮೬೮. ಪುರುಷರು ೩೯೯೭ ಸ್ತ್ರೀಯರು ೩೮೭೧ ಕಂಡುಬರುವುದು." ಇವರು ಮಹಾರಾಷ್ಟ್ರದಿಂದ ವಲಸೆಯಾಗಿ ಬಂದವರು ಎಂಬ ಐತಿಹ್ಯವಿದೆ.

ಪರ್ಯಾಯ ಪದ : ಶಿಳ್ಳೆಕ್ಯಾತ, ಕಿಳ್ಳೆಕ್ಯಾತ, ಬುಂಡೆಬೆಸ್ತ, ಕಟುಬ ಹಾಗೂ ಗೊಂಬೆರಾಮರು ಇತ್ಯಾದಿಗಳು. ಪ್ರಾದೇಶಿಕವಾರುಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಸಿಳ್ಳೆಕ್ಯಾತ. ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಿಳ್ಳೆಕ್ಯಾತ. ಹಿಂದುಳಿದ ವರ್ಗದ ಓಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬುಂಡೆ ಬೆಸ್ತರು, ಹೈದ್ರಬಾದ್, ಬಾಂಬೆ, ಕರ್ನಾಟಕ ದಲ್ಲಿ 'ಕಟುಬ' ಎಂದು ಕರೆಯಲಾಗುತ್ತದೆ. ಸಂವಿಧಾನಾತ್ಮಕವಾಗಿ ಇವರಿಗೆ ಮೀಸಲಾತಿ ಕೊಟ್ಟಿದ್ದರು. ೫೦ ವರ್ಷಗಳಿಂದ ಅವುಗಳ ಉಪಯೋಗಪಡೆಯುವಲ್ಲಿ ವಿಫಲರಾಗಿದ್ದಾರೆ.

ಬಳಿ : ಅಟಕ, ನೆಕವಾರ, ಪಾಚಂಗಿ, ಸಿಂದ್ಯಾ, ಸಾಳ್ವೆ, ಸಾಸ್ನೀಕ, ಮಾಹರೆ, ಸಿಂಗಾನ, ದುರ್ವೆ, ವಕುಡಾ, ದೇರಕಾರ, ಧುಮಾಲೆ, ಕಾಕುಡೆ, ಗಾಕೊಡೆ.

ಕುಲದೇವತೆ : ಕೊಲ್ಲಾಪುರ ಮಹಾಲಕ್ಷ್ಮಿ, ರೇಣುಕಾ ಯಲ್ಲಮ್ಮ, ಚಾಮುಂಡೇಶ್ವರಿ, ಗಾಳಿಮಾರಮ್ಮ, ದುರುಗಮ್ಮ, ಗಡಿದುರುಗಮ್ಮ, ಏಳುಕೋಟಿ ಮೈಲಾರಲಿಂಗ, ಬ್ರಹ್ಮ, ಈಶ್ವರ.

ಭಾಷೆ : ಮರಾಠಿ ಮಾತೃಭಾಷೆಯಾಗಿದೆ. ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆ, ಲಿಪಿಗಾಗಿ ಕನ್ನಡ ಬಳಸುವುದುಂಟು.

ಸಾಕ್ಷರತೆ : "ಶೇ. ೨ ಕ್ಕಿಂತ ಕಡಿಮೆ ಇದೆ."[27]

ನೆಲೆಗಳು : ಇವರು ನಾಡಿನ ಅನೇಕ ಭಾಗಗಳಲ್ಲಿ ಕಂಡುಬರುವುದುಂಟು. ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ತುಮಕೂರು, ಮಂಡ್ಯ, ಮೈಸೂರು, ಗುಲ್ಬರ್ಗ, ಬೀದರ್, ಕೊಪ್ಪಳ, ಬಳ್ಳಾರಿ ಹಾಗೂ ಬಾಂಬೆಗಳಲ್ಲಿ ನೆಲೆಸಿದ್ದಾರೆ.

ಆಹಾರ ಪದ್ಧತಿ : ಮಾಂಸಹಾರಿಗಳು, ಆದರೆ ಗೋಮಾಂಸವನ್ನು ತಿನ್ನುವುದಿಲ್ಲ. ಇವರಲ್ಲಿ ಸ್ತ್ರೀಯರು ಮತ್ತು ಪುರುಷರಿಬ್ಬರೂ ಮಧ್ಯಪಾನ ಸೇವನೆ ಮಾಡುತ್ತಾರೆ. (ಹಬ್ಬ, ಮದುವೆಗಳಲ್ಲಿ ಮಾತ್ರ) ಮೀನುಗಾರರಾಗಿದ್ದರಿಂದ ದಿನ ಮೀನುಗಳನ್ನು ಊಟಕ್ಕಾಗಿ ಬಳಸುತ್ತಾರೆ.

ಆಚರಣೆ : ಹುಟ್ಟು ಮತ್ತು ಸಾವುಗಳ ಸೂತಕ, ಶವಸಂಸ್ಕಾರದಲ್ಲಿ ಶವ ಸುಡುತ್ತಾರೆ. ವಿವಾಹ ವಧುವಿನ ಮನೆಯ ಹತ್ತಿರ ಮಾಡುವುದುಂಟು. ವರದಕ್ಷಿಣೆ ಜಾರಿಯಲಿಲ್ಲ. ವಿವಾಹ ಸಮಯದಲ್ಲಿ ಕುಲದೇವತೆ ಪೂಜೆ ನಡೆಸುತ್ತಾರೆ.

ಉದ್ಯೋಗ : ಹಬ್ಬ ಮತ್ತು ಜಾತ್ರೆ, ಉತ್ಸವಗಳಲ್ಲಿ ಚಿತ್ರಗಳನ್ನು ತೋರಿಸುವ ಕಲೆಯಿದೆ. ಮೀನು ಹಿಡಿಯುವ ಮಹಿಳೆಯರು ಹಚ್ಚೆ ಹಾಕುವರು. ವೃದ್ಧರು ಭಿಕ್ಷಾಟನೆಯನ್ನು ಮಾಡುವುದುಂಟು. ಕೃಷಿಕೂಲಿ ಕೆಲಸವನ್ನು ನಿರ್ವಹಿಸುತ್ತಾರೆ. ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಸೂಕ್ಷ್ಮವಾಗಿದೆ.

೬. ಸಿಂಧೋಳ್ಳು (Sindhollu)

ಸಿಂಧೋಳ್ಳು ಸಮುದಾಯವು ಪ್ರಮುಖ ಅಲೆಮಾರಿ ಸಮುದಾಯವಾಗಿದ್ದು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದೆ ವೃತ್ತಿ ಮಾಡುವ ದುರುಗ ಮುರುಗಿ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಲಾಗಿದೆ. ಮೂಲತಃ ಆಂಧ್ರಪ್ರದೇಶದಿಂದ ಬಂದವರೆಂದು ಗುರುತಿಸಬಹುದಾಗಿದೆ.

ಪರ್ಯಾಯ ಪದ : ದುರುಗಮುರುಗಿ, ಸುಂಕಲಮ್ಮನೊರು, ಕೂಗಮ್ಮನೊರು, ಬುರ್ರಬುರ್ರ ಪೋಚಮ್ಮ, ಬೆಂಕಿಮಾರಿಯರ್, ಪೂಜಾರಿ, ಪೋತರಾಜ, ಉರಿಮಾರಿಯರ್, ದುರುಗಮ್ಮನ ಆಡಿಸೋರು ಇತ್ಯಾದಿಗಳು ಕರೆಯುವುದುಂಟು.

ಕುಲಗಳು : ರಾಹುಲೋಳ್, ದ್ಯಾನಮಲೋರ್, ಸಿಂದ್ಯಾಲೋರ್, ಚಿನ್ನಿನೋಳ್, ತುಮ್ಮಲೋರ್ ಹೀಗೆ ೧೫ ಕ್ಕೂ ಅಧಿಕ ಬೆಡಗುಗಳಿವೆ.

ಕುಲದೇವರು : ಮಾರಮ್ಮ, ದುರುಗಮ್ಮ, ಈರನಾಗಮ್ಮ, ಸುಂಕಲಮ್ಮ, ಕೂಗಮ್ಮ, ಪೋತರಾಜ, ಮುನಿಸ್ವಾಮಿ.

ಭಾಷೆ : ಮಾತೃಭಾಷೆ ತೆಲುಗು. ಪ್ರಾದೇಶಿಕ ಭಾಷೆ ಮಾತನಾಡುತ್ತಾರೆ.

ಸಾಕ್ಷರತೆ : "ಶೇ. ೧೮ರಷ್ಟು"[28]

ನೆಲೆಗಳು : ಗುಲ್ಬರ್ಗ, ಕೊಪ್ಪಳ, ರಾಯಚೂರು, ಬಳ್ಳಾರಿ, ಬೀದರ್, ಮೈಸೂರು, ಬೆಂಗಳೂರು, ಹಾಸನ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಹಾವೇರಿ, ಧಾರವಾಡ, ಹುಬ್ಬಳಿ ಇತ್ಯಾದಿ ರಾಜ್ಯದ್ಯಾಂತ.

ಆಹಾರ : ಮಾಂಸ ಮತ್ತು ಸಸ್ಯಹಾರಿಗಳು.

ಆಚರಣೆ : ಸಂಪ್ರದಾಯದ ಪ್ರಕಾರ ಆಚರಣೆಗಳನ್ನು ಮಾಡುತ್ತಾರೆ. ಸ್ತ್ರೀಯರಿಗೆ ವಿವಾಹದ ಆಯ್ಕೆ ಸ್ವಾತಂತ್ರ ಹಾಗೂ ಕೂಡಿಕೆ ಮತ್ತು ವಿಧವಾವಿವಾಹ, ಕನ್ಯಾಶುಲ್ಕವಿದೆ.

ವೃತ್ತಿ : ಧಾರ್ಮಿಕ ಭಿಕ್ಷಾಟನೆ, ಅಲ್ಲಲ್ಲಿ ಸಣ್ಣ-ಪುಟ್ಟ ವ್ಯಾಪಾರಗಳು, ಮೀನು ಹಿಡಿಯವುದು.

ಸಾಮಾಜಿಕ ಸ್ಥಾನ: ದಲಿತರಂತೆ ಸ್ಥಾನಮಾನಗಳಾಗಿವೆ.

೭. ಸಿಕ್ಕಲಿಗರು (Sikkaligar)

ಸಿಕ್ಕಲಿಗರು ವಿಶಿಷ್ಟ ಅಲೆಮಾರಿ ಸಮುದಾಯವಾಗಿದ್ದು ಪರಿಶಿಷ್ಟ ಜಾತಿಯಲ್ಲಿ ಸೇರಿಸಲಾಗಿದೆ. ಸಿಕ್ಕಲಿಗ ಎಂಬ ಪದವು ಅರೆಬಿಕ್ ಶಬ್ದವಾಗಿದೆ. ಇದರ ಅರ್ಥ ಹೊಳಪು. ಅಂದರೆ ಸಲಕರಣೆಗಳಿಗೆ ಹೊಳಪು ಕೊಡುವುದು ಮತ್ತು ಸಲಕರಣೆಗಳನ್ನು ಉತ್ಪಾದಿಸುವ ಅಲೆಮಾರಿ ಸಮುದಾಯವಾಗಿದೆ.

ಪರ್ಯಾಯ ಪದ : ಸಿಕ್ಕಲರು, ಸಿಕ್ಲಿಗಾರ್ರು, ಸಿಕ್ಕೊಲ್ಲರು, ಶಿಕ್ಕಲಿಗಳು.

ಕುಲಗಳು : ಸಂಗಾಲ, ವಜ್ಜಲ, ಬೈಲಲ, ಪಂಚನಾ, ಕನನ.

ದೇವರು : ಕರಿಯವ್ವ, ದ್ಯಾಮವ್ವ, ಮೈಲಾರ ಮತ್ತು ಗುಜರಾತ್ ದೇವರು ಹಾಗೂ ದೇವತೆಗಳು.

ಸಾಕ್ಷರತೆ : "ಶೇ. ೨ ರಷ್ಟು"[29]

ನೆಲೆಗಳು : ಗುಲ್ಬರ್ಗ, ಬೀದರ್, ಕೊಪ್ಪಳ, ಧಾರವಾಡ, ಬೆಳಗಾಂ, ಬಿಜಾಪುರ ಇತ್ಯಾದಿ.

ಆಹಾರ : ಮಾಂಸಹಾರಿ ಮತ್ತು ಸಸ್ಯಹಾರಿಗಳು

ಭಾಷೆ : ಡೋಂಗ್ರಿ ಮಿಶ್ರಿತ ಗುಜರಾತಿ ಹಾಗೂ ಆಯಾ ಪರಿಸರದ ಅನುಗುಣವಾದ ಭಾಷೆ ಮಾತನಾಡುವರು.

ವೃತ್ತಿ : ಸಲಕರಣೆ ಹೊಳಪು, ಗೃಹೋಪಯೋಗಿ ವಸ್ತುಗಳ ಉತ್ಪಾದನೆ, ಸಣ್ಣಪುಟ್ಟ ವ್ಯಾಪಾರ, ಕೂಲಿ.

ಆಚರಣೆ : ಕುಲದ ಸಂಪ್ರದಾಯದಂತೆ ಆಚರಿಸುವರು.

ಸಾಮಾಜಿಕ ಸ್ಥಾನ: ಕೆಳಮಟ್ಟದ ಸ್ಥಾನಮಾನವಿದೆ.

೮. ಬೈಲುಪತ್ತಾರ್ (Bailpattara)

ಬೈಲುಪತ್ತಾರರು ಅಲೆಮಾರಿ ಸಮುದಾಯವಾಗಿದ್ದು ಓಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಬೈಲು ಪದದ ಅರ್ಥ ಬಯಲು ಅಥವಾ ಮುಕ್ತವಾದ ಸ್ಥಳ. ಪತ್ತಾರ್ ಎಂದರೆ ತಯಾರಿಸು ಎಂದರ್ಥ ಬಯಲಿನಲ್ಲಿ ವಸ್ತುಗಳನ್ನು ತಯಾರಿಸುವುದು. ಹೆಚ್ಚಾಗಿ ಅಲಂಕಾರಿಕ ಸಾಮಾನುಗಳನ್ನು ತಯಾರಿಸುತ್ತಾರೆ.

ಪರ್ಯಾಯ ಪದ : ಪರದೇಶಿ, ಸೋನರ್, ಕಂಸತ್, ಬೈಲುಕಮ್ಮ, ಬಯಲು ಅಕ್ಕಸಾಲಿಗ, ಬೈಲುಪತ್ರು ಇತ್ಯಾದಿ.

ಕುಲಗಳು : ಗೌಡ್ಕ, ಮಂಗೋಲಿ, ಪ್ರದಾನ, ಮೋಕನವಾಡ್, ಸೋಸವರ್ ಇತ್ಯಾದಿ.

ಕುಲ ದೇವರು : ಅಡವಿ ದುರುಗಮ್ಮ, ಸೀತಾಮ್ಮ, ಮಾರ್ಗಬಾಯಿ.

ಭಾಷೆ : ಮಾತೃಭಾಷೆ ಒರಿಯಾ, ಆಯಾಯ ಪ್ರದೇಶದ ಅನುಗುಣವಾಗಿ ವಿವಿಧ ಭಾಷೆಗಳನ್ನು ಮಾತನಾಡುವರು.

ನೆಲೆಗಳು : ಗುಲ್ಬರ್ಗ, ಕೊಪ್ಪಳ, ಬಳ್ಳಾರಿ, ಬೀದರ್, ಬಿಜಾಪುರ ಹಾಗೂ ರಾಜ್ಯದ್ಯಂತ ಅಲ್ಲಲ್ಲಿ ಹರಡಿಕೊಂಡಿದ್ದಾರೆ.

ಆಹಾರ : ಮಾಂಸ ಹಾಗೂ ಸಸ್ಯಹಾರಿಗಳು.

ಸಾಕ್ಷರತೆ : "ಶೇ. ೧.೫ ರಷ್ಟು"[30]

ಆಚರಣೆ : ಕುಲದ ಪದ್ಧತಿಯ ಮೂಲಕ ಆಚರಿಸುವರು. ವಿಧವಾ-ವಿಧುರ ವಿವಾಹ, ಕನ್ಯಾ ಶುಲ್ಕವಿದೆ.

ಸಾಮಾಜಿಕ ಸ್ಥಾನ: ದಲಿತರ ಸ್ಥಾನಮಾನಗಳನ್ನು ಹೊಂದಿದೆ.

೯. ರಾಜಗೊಂಡ (Rajagonda)

ರಾಜಗೊಂಡರು ವಿಶಿಷ್ಟ ವೈದ್ಯಪದ್ಧತಿಯ ಅಲೆಮಾರಿ ಸಮುದಾಯವಾಗಿದ್ದು ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಲಾಗಿದೆ. ರಾಜಗೊಂಡರನ್ನು 'ರಾಜ ವೈದ್ಯ' ಅಂದರೆ ರಾಜರುಗಳಿಗೆ ವೈದ್ಯ ಸೇವೆ ಮಾಡುತ್ತಿದ್ದವರು. ಆದ್ದರಿಂದ ಇಂದಿಗೂ ವೈದ್ಯಪದ್ಧತಿಯನ್ನು ನಂಬಿದ್ದಾರೆ.

ಪರ್ಯಾಯ ಪದ : ಗೊಂಡ್ರು, ಗಿಡಮೂಲಿಕೇರು, ರಾಜವೈದ್ಯ.

ಕುಲಗಳು : ಸಡಮಾಕಿ, ಸುಸ್ನಾಕೆ, ಕುಮ್ರಾ, ಆತ್ರಾಮ, ರಾಹಿಸಿಡು ಹೀಗೆ ಲಕ್ಕೂ ಅಧಿಕ ಕುಲಗಳಿವೆ.

ದೇವರು : ಮಾರಿಯಮ್ಮ, ಕಾಳಿಕಮ್ಮ ಇತ್ಯಾದಿ.

ಭಾಷೆ : ಗೊಂಡಿ ಮಾತೃಭಾಷೆಯಾಗಿದೆ. ಆಯಾ ಪ್ರದೇಶದ ಅನುಗುಣವಾಗಿ ವಿವಿಧ ಭಾಷೆಗಳನ್ನು ಮಾತನಾಡುವರು.

ನೆಲೆಗಳು : ಬೀದರ್, ಹರಿಹರ, ಬೆಂಗಳೂರು ಇತರೆ ಕಡೆಗಳಲ್ಲಿ.

ಸಾಮಾಜಿಕ ಸ್ಥಾನ: ಕೆಳಗಿನ ಸ್ಥಾನಗಳಾಗಿವೆ.

ಸಾಕ್ಷರತೆ : "ಶೇ. ೧ ರಷ್ಟಾಗಿದೆ."[31]

ಆಚರಣೆ : ಕುಲದ ಸಂಪ್ರದಾಯದ ಪ್ರಕಾರ ಆಚರಿಸುತ್ತಾರೆ. ವಿಧುರ, ವಿಧವಾ ವಿವಾಹ ಹಾಗೂ ಕನ್ಯಾಶುಲ್ಕವಿದೆ.

ಆಹಾರ : ಮಾಂಸಹಾರಿ ಮತ್ತು ಸಸ್ಯಹಾರಿಗಳು.

ವೃತ್ತಿ : ಗಿಡಮೂಲಿಕೆಯ ಔಷಧಿಗಳನ್ನು ಕೊಡುವುದು, ಇತರೆ ವ್ಯಾಪಾರಗಳು.

೧೦. ಹೆಳವರು (Helava)

ಹೆಳವರು ಅತ್ಯಂತ ದೊಡ್ಡ ಅರೆ-ಅಲೆಮಾರಿ ಸಮುದಾಯವಾಗಿದೆ. ಹೆಳವ ಎಂದರೆ ಕುಂಟ ಅಥವಾ ಕಾಲಿಲ್ಲದವನು ಎಂಬ ಅರ್ಥವನ್ನು ಕೊಡುತ್ತದೆ. ಹೇಳುವವರು > ಹೆಳವರು ಎನ್ನುವುದನ್ನು ಸೂಚಿಸುತ್ತದೆ. ವಂಶಾವಳಿ ಹೇಳುವ ಸಮುದಾಯವಾಗಿದೆ. ಇವರನ್ನು ಓಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ.

ಪರ್ಯಾಯ ಪದ : ಹೆಳವ, ಯನಾದಿ, ಪಿಚ್ಚಗುಂಟ್ಲಳ್ಳು, ಗಂಟೆಹೆಳವ, ಎತ್ತಿನ ಹೆಳವ, ಚಾಪೆ ಹೆಳವ, ಹಂದಿ ಹೆಳವ, ದೂದಿ ಹೆಳವ, ಮದ್ದಿನ ಹೆಳವ, ಸಾಧು ಹೆಳವ ಇತ್ಯಾದಿ.

ಕುಲಗಳು : ಮುದ್ದುವೀರರು, ಪುರುವಂತರು ಸಂಜಲರು, ಹೂವಿನವರು, ಎಲಿಯವರು, ಸಂಲಿಂಗದವರು.

ದೇವರು : ಕುಕ್ಕುವಾಡಮ್ಮ, ಮಾತಂಗೆಮ್ಮ, ಸವದತ್ತಿಯಲ್ಲಮ್ಮ.

ಭಾಷೆ : ಕನ್ನಡ, ತೆಲುಗು, ಮರಾಠಿ ಮಾತನಾಡುವರು.

ಸಾಕ್ಷರತೆ : "ಶೇ. ೦.೫ ರಷ್ಟಿದೆ."[32]

ನೆಲೆಗಳು : ಕೊಪ್ಪಳ, ಬಳ್ಳಾರಿ, ಗುಲ್ಬರ್ಗ, ಬೀದರ್, ರಾಯಚೂರು ಹಾಗೂ ರಾಜ್ಯಾದ್ಯಾಂತ ಹರಡಿಕೊಂಡಿದ್ದಾರೆ.

ಆಚರಣೆ : ಕುಲದ ಸಂಪ್ರದಾಯದ ಪ್ರಕಾರ ಆಚರಿಸುತ್ತಾರೆ. ವಿಧವೆ ವಿವಾಹ, ವಿಧುರ ವಿವಾಹ ಹಾಗೂ ಕನ್ಯಾಶುಲ್ಕವಿದೆ.

ಆಹಾರ : ಮಾಂಸಹಾರಿ ಹಾಗೂ ಸಸ್ಯಹಾರಿ ಸೇವನೆ.

ಸಾಮಾಜಿಕ ಸ್ಥಾನ: ಕೆಳಗಿನ ಸ್ಥಾನಮಾನಗಳು.

ವೃತ್ತಿ : ವಂಶಾವಳಿ ಹೇಳುವುದು, ಪಶುಸಂಗೋಪನೆ, ಕೂಲಿ ಹಾಗೂ ಅಲ್ಲಲ್ಲಿ ಕೃಷಿ ಮಾಡುವರು.

೧೧. ಗೊಂದಲಿಗರು (Gondhali)

ಗೊಂದಲಿಗರು ಪ್ರಮುಖ ಅರೆ-ಅಲೆಮಾರಿ ಸಮುದಾಯವಾಗಿದೆ. ಶಿವಶಕ್ತಿ ಆರಾಧಿಸುವ ದ್ರಾವಿಡ ಜನಾಂಗದವರಾಗಿ, ದಕ್ಷಿಣ ಭಾರತದ ಕಡೆಯಿಂದ ವಲಸೆ ಬಂದವರು ಎಂಬುದು ಮೂಲ ಐತಿಹ್ಯವಿದೆ. ಗೊಂದಲ ಪದದ ಅರ್ಥ ಗೊಂದಲ ಹಾಕುವುದು. ಅಂದರೆ ಪುರಾಣ ಹಾಗೂ ಪೌರಾಣಿಕ ಕಥೆಗಳನ್ನು ರಾಗಬದ್ಧವಾಗಿ ಹಾಡುವ ಸಮುದಾಯವಾಗಿದೆ. ಅಂಬಭವಾನಿ ಕಥೆಯನ್ನು ಪ್ರಸಾರ ಮಾಡುವರು.

ಪರ್ಯಾಯ ಪದ : ಜ್ಯೋಷಿ, ಗೊಂದಲರು, ಬುಡಬುಡಕೆಯವರು, ಗೊಂಧಳಿ ಇತ್ಯಾದಿ.

ಕುಲಗಳು : ಪಾಚಂಗಿ, ತಿಥಿ, ಇಂಗುಳೆ, ಉಗುಡ, ಗುರು, ಬೈಸಿ, ಗಣಚಾರಿ, ನವಲೆ, ಜಾದವ್ ಇತ್ಯಾದಿ.

ಕುಲ ದೇವರು : ದ್ಯಾಮವ್ವ, ಅಂಬಭವಾನಿ, ದುರ್ಗಾದೇವಿ, ಜಾದವ್.

ಸಾಕ್ಷರತೆ : "ಶೇ. ೨ ರಷ್ಟಿದೆ."[33]

ಭಾಷೆ : ಮರಾಠಿ ಮತ್ತು ಆಯಾ ಪ್ರದೇಶದ ಅನುಗುಣವಾಗಿ ಅಲ್ಲಿ ಭಾಷೆಗಳನ್ನು ಮಾತನಾಡುತ್ತಾರೆ.

ನೆಲೆಗಳು : ಗುಲ್ಬರ್ಗ, ಬಳ್ಳಾರಿ, ಬೀದರ್, ಕೊಪ್ಪಳ, ರಾಯಚೂರು ಹಾಗೂ ರಾಜ್ಯಾದ್ಯಾಂತ ಅಲ್ಲಲ್ಲಿ ಹರಡಿಕೊಂಡಿದ್ದಾರೆ.

ಆಹಾರ : ಮಾಂಸಹಾರಿ ಹಾಗೂ ಸಸ್ಯಹಾರಿಗಳು.

ಆಚರಣೆ : ಕುಲದ ಸಂಪ್ರದಾಯದಂತೆ ಆಚರಣೆ, ವಿಧವೆ ವಿವಾಹ ಹಾಗೂ ಕನ್ಯಾಶುಲ್ಕವಿದೆ.

ಸಾಮಾಜಿಕ ಸ್ಥಾನ: ಕೆಳಗಿನ ಸ್ಥಾನಮಾನಗಳು.

ವೃತ್ತಿ : ಗೊಂದಲ ಹಾಕುವುದು, ಕಥೆ ಹೇಳುವುದು, ಧಾರ್ಮಿಕ ಭಿಕ್ಷಾಟನೆ, ವ್ಯಾಪಾರ ಹಾಗೂ ಕೃಷಿ ಕೂಲಿಗಳಾಗಿ ದುಡಿಯುವುದು.

೧೨. ಕೊರವ (Korava)

ಕೊರವ ದೊಡ್ಡ ಅರೆ-ಅಲೆಮಾರಿ ಸಮುದಾಯವಾಗಿದ್ದು ಬ್ರಿಟಿಷರ್ ಕಾಲದಲ್ಲಿ ಅಪರಾಧಿ ಬುಡಕಟ್ಟು ಎಂದು ಪರಿಗಣಿಸಲಾಗಿತ್ತು. ಕೊರಮ, ಕೊರಚ ಎಂಬ ಪದ ಕುರು, ಭವಿಷ್ಯ ಎಂಬುದರಿಂದ ಬಂದಿದೆ. ತೆಲುಗಿನಲ್ಲಿ ಎರಕುಲದವರೆಂದು ಕರೆಯುತ್ತಾರೆ. ೧೯೮೧ರ ಜನಗಣತಿಯ ಪ್ರಕಾರ ೭೯.೧೬೭ ಜನಸಂಖ್ಯೆ ಹೊಂದಿದ್ದಾರೆ.

ಪರ್ಯಾಯ ಪದ : ಕೊರಮಶೆಟ್ಟಿ, ಕೊರಚ, ಕೊರಮ, ಕುಂಚಿ ಕೊರವ, ಭಜಂತ್ರಿ.

ಕುಲಗಳು : ಸಾತಾಡಿ, ಮಾಯಂದ್ರ, ಗುತಿ, ಮಾನಪಾಡಿ, ಕವಾಡಿ.

ಭಾಷೆ : ಕುರು ಮಾತೃಭಾಷೆಯಾಗಿದೆ. ಪ್ರಾದೇಶಿಕವಾಗಿ ಕನ್ನಡ, ತೆಲುಗು, ತಮಿಳು ಹಾಗೂ ಇತರೆ ಭಾಷೆಗಳನ್ನು ಮಾತನಾಡುವರು.

ಸಾಕ್ಷರತೆ : "ಶೇ. ೮ ರಷ್ಟಿದೆ."[34]

ಕುಲ ದೇವರು : ಯಲ್ಲಮ್ಮ, ಗಂಗಮ್ಮ, ಮರಿಯಮ್ಮ ಮತ್ತು ಮೌನೇಶ್ವರ.

ನೆಲೆಗಳು : ಬೀದರ್, ಗುಲ್ಬರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ, ಬೆಂಗಳೂರು, ಮೈಸೂರು, ಕೋಲಾರ ಇತ್ಯಾದಿ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

ಸಾಮಾಜಿಕ ಸ್ಥಾನ: ಅಸ್ಪೃಶ್ಯರಂತೆ ನಡೆಸಿಕೊಳ್ಳಲಾಗುವುದು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಕೆಳಮಟ್ಟದ ಸ್ಥಾನಮಾನಗಳನ್ನು ಹೊಂದಿದೆ.

ಆಹಾರ : ಮಾಂಸಹಾರಿ ಹಾಗೂ ಸಸ್ಯಹಾರಿಗಳು.

ಆಚರಣೆ : ಎಲ್ಲಾರೀತಿಯ ಆಚರಣೆಗಳನ್ನು ಆಚರಿಸುತ್ತಾರೆ. ಶವಸಂಸ್ಕಾರದಲ್ಲಿ ಶವವನ್ನು ಸುಡುತ್ತಾರೆ.

ವೃತ್ತಿ : ಹಗ್ಗ-ಬುಟ್ಟಿ ಹೆಣೆಯುವುದು, ಕೃಷಿ ಉಪಯೋಗಿ ವಸ್ತುಗಳ ತಯಾರಿಕೆ, ಹಚ್ಚೆ, ಕೊರವಂಜಿ, ಕೃಷಿ, ವ್ಯಾಪಾರ, ರಿಪೇರಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

೧೩. ಚನ್ನದಾಸರು (Channadasaru)

ಚನ್ನದಾಸರು ಬಹುದೊಡ್ಡ ಅಲೆಮಾರಿ ಸಮುದಾಯವಾಗಿದೆ. ಶಂಖ, ಜಾಗಟೆ, ನಾಮಹಾಕಿಕೊಂಡು ಗೋಪಾಳ ಬುಟ್ಟಿ ತೆಗೆದುಕೊಂಡು, ದೇವರ ಹೆಸರಲ್ಲಿ ಭಿಕ್ಷೆ ಬೇಡುವರು. ತಂಬೂರಿ ಹಿಡಿದು ಕೀರ್ತನೆ ಹಾಡುವಿಕೆ ಮತ್ತು ಆಟವನ್ನು ಆಡುತ್ತಾರೆ. ಇವರನ್ನು ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗಿದೆ.

ಪರ್ಯಾಯ ಪದ : ಚನ್ನದಾಸರು, ದೊಂಬಿದಾಸ, ಕೋಲೆಬಸವ, ಮಾಲಿದಾಸ, ಹೊಲೆಯದಾಸ, ಬೇಡದಾಸ, ಶಂಖದಾಸ, ಆಟದಾಸ, ಹೆಣ್ಣುದಾಸ.

ಕುಲಗಳು : ಮೈಲಾರೊಳ್ಳು, ಕುಂದೊಳ್ಳು, ಗೋಧೋಳ್ಳು, ಕಂಚುಮೊಳ್ಳು, ಗಾಧಿರೊಳ್ಳು, ಎದುರೊಳ್ಳು, ಮಿನಗಲೋರು, ಶೆಟ್ಟಲೆರು ಹೀಗೆ ೩೦ಕ್ಕೂ ಹೆಚ್ಚು ಕುಲಗೋತ್ರಗಳಿವೆ.

ಕುಲ ದೇವರು : ತಿರುಪತಿ ವೆಂಕಟರಮಣ, ಕಬ್ಬಾಳಮ್ಮ, ಯಲ್ಲಮ, ಗಡ್ಡೆಕೆಂಪಮ್ಮ, ಕನ್ನಂಬಡಮ್ಮ, ಹುಲಿಯಮ್ಮ, ಮಾರಿಯಮ್ಮ ಇತ್ಯಾದಿ.

ಭಾಷೆ : ಮಾತೃಭಾಷೆ ತೆಲುಗು. ಆಯಾ ಪ್ರದೇಶದ ಅನುಗುಣವಾಗಿ ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ.

ಸಾಕ್ಷರತೆ : "ಶೇ. ೩ ರಷ್ಟಿದೆ."[35]

ನೆಲೆಗಳು : ಕೊಪ್ಪಳ, ರಾಯಚೂರು, ಬೀದರ್, ಗುಲ್ಬರ್ಗ, ಬಳ್ಳಾರಿ ಉಳಿದಂತೆ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

ಆಹಾರ : ಮಾಂಸಹಾರಿ ಮತ್ತು ಸಸ್ಯಹಾರಿಗಳಾಗಿದ್ದಾರೆ.

ಆಚರಣೆ : ಆಯಾ ಕುಲದ ಸಂಪ್ರದಾಯದಂತೆ ಆಚರಣೆ. ವಿಧವಾ ವಿವಾಹ, ಕೂಡಿಕೆ, ವಿಧುರವಿವಾಹ, ತೆರಪದ್ಧತಿಯಿದೆ.

ಸಾಮಾಜಿಕ ಸ್ಥಾನ: ದಲಿತರಂತಿದೆ ಆದರೆ ಅಸ್ಪೃಶ್ಯರಲ್ಲ.

ವೃತ್ತಿ : ಧಾರ್ಮಿಕ ಭಿಕ್ಷಾಟನೆ, ಸಣ್ಣ-ಪುಟ್ಟ ವ್ಯಾಪಾರ, ದಾಸರಾಟ, ಕೋಲೆಬಸವನಾಟ ಹಾಗೂ ಕೃಷಿ ಕೂಲಿಗಳಾಗಿ ದುಡಿಯುತ್ತಿದ್ದಾರೆ.

೧೪. ಸುಡುಗಾಡುಸಿದ್ಧರು (Sudugadusidda)

ಸುಡುಗಾಡು ಸಿದ್ಧರು ಪ್ರಮುಖ ಅಲೆಮಾರಿ ಸಮುದಾಯವಾಗಿದ್ದು ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಸುಡುಗಾಡು ಸಿದ್ಧ ಎಂಬ ಪದದ ಅರ್ಥ ಶವದಹನ ಮಾಡುವ ಸ್ಥಳದ ಒಡೆಯರೆಂದು, ಸ್ಮಶಾನದ ಒಡೆಯವರಾದರಿವರು. ಸ್ಮಶಾನದಲ್ಲಿ ಮಂತ್ರ-ಯಂತ್ರ- ತಂತ್ರಗಳಿಗೆ ಸಂಬಂಧಿಸಿದಂತೆ ಸಾಧನೆಯಲ್ಲಿ ಸಿದ್ಧಿಗಳಾಗಿದ್ದಾರೆ. ಥರ್ಸ್ಟನ್‌ರವರು ೧೯೦೯ರಲ್ಲಿ ಸುಡುಗಾಡು ಸಿದ್ಧರನ್ನು ಕುರಿತು ಹೀಗೆ ದಾಖಲಿಸುತ್ತಾರೆ. ಸ್ಮಶಾನದಲ್ಲಿ ವಾಸವಾಗಿ, ಸಾಮಾನ್ಯವಾಗಿ ಶವಗಳ ಅಂತ್ಯಕ್ರಿಯೆಗಳ ಮೂಲಕ ಜನರಿಗೆ ನೆರವಾಗುವ ಸಮುದಾಯವೆಂದು. ಸಿದ್ದಪ್ಪ ದೇವರ ಕೃಪೆಯಿದೆ ಎಂದು ನಂಬುತ್ತಾರೆ.

ಪರ್ಯಾಯ ಪದ : ತೆಲುಗುಜಂಗಮ, ಕಾಟಿಪಾಪ, ಮಸಣಜೋಗಿ, ಬಾಳಸಂತೋಷಿ, ಅಡಿಕೆಸಿದ್ಧ, ಕಾಡುಸಿದ್ಧರು, ಸಿದ್ಧಯ್ಯಗಳು, ರಾಮಕೊಂಡಿಗಳು, ಭೈರಾಗಿ ಇತ್ಯಾದಿ.

ಕುಲಗಳು : ವಿಭೂತಿ, ಪತ್ರೊಳ್ಳು, ಬಾದಿಗೊಳ್ಳು, ರುದ್ರಾಕ್ಷಿ, ಶ್ರೀಶೈಲ, ಮುಗ್ಗೊಳ್ಳು, ತಿರುಪತಿಮಳ್ಳು ಹೀಗೆ ೩೦ಕ್ಕೂ ಅಧಿಕ ಕುಲಗಳು ಅಥವಾ ಬೆಡಗುಗಳು ಇವೆ.

ಭಾಷೆ : ಮಾತೃಭಾಷೆ ತೆಲುಗು, ಆಯಾ ಪ್ರದೇಶದ ಅನುಗುಣವಾಗಿ ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ.

ಸಾಕ್ಷರತೆ : "ಶೇ. ೫ ರಷ್ಟಿದೆ."[36]

ನೆಲೆಗಳು : ಗುಲ್ಬರ್ಗ, ಕೊಪ್ಪಳ, ರಾಯಚೂರು, ಬಳ್ಳಾರಿ, ಬೀದರ್ ಹಾಗೂ ರಾಜ್ಯದ್ಯಾಂತ ಅಲ್ಲಲ್ಲಿ ಹರಡಿಕೊಂಡಿದ್ದಾರೆ.

ಸಾಮಾಜಿಕ ಸ್ಥಾನ: ಕೆಳಸ್ಥಾನವಿದೆ. ಅಸ್ಪೃಶ್ಯರಲ್ಲ.

ಆಹಾರ : ಮಾಂಸಹಾರಿ ಹಾಗೂ ಸಸ್ಯಹಾರಿಗಳು. ಮಧ್ಯಪಾನ, ಧೂಮಪಾನ ಸೇವಿಸುತ್ತಾರೆ.

ಆಚರಣೆ : ಸಂಪ್ರದಾಯದ ಪ್ರಕಾರ ಆಚರಣೆ. ವಿಧವಾವಿವಾಹ, ಕನ್ಯಾಶುಲ್ಕವಿದೆ.

ವೃತ್ತಿ : ಜಾದು, ಮಂತ್ರ, ತಂತ್ರದ ವಿದ್ಯೆಗಳು, ಭಿಕ್ಷಾಟನೆ, ಸಣ್ಣ-ಪುಟ್ಟ ವ್ಯಾಪಾರ, ಕೃಷಿ, ಕೂಲಿಕೆಲಸಗಳು.

೧೫. ಹಕ್ಕಿ-ಪಿಕ್ಕಿ (Hakkipikki)

ಹಕ್ಕಿ-ಪಿಕ್ಕಿ ಸಮುದಾಯವು ಅಲೆಮಾರಿ ಸಮುದಾಯವಾಗಿದ್ದು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲಾಗಿದೆ. ಮೂಲತಃ ಗುಜರಾತ್ ಮತ್ತು ರಾಜಸ್ಥಾನ್ ಕಡೆಯಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ವಲಸೆ ಬಂದವರಾಗಿದ್ದಾರೆ. ಹಕ್ಕಿ-ಪಿಕ್ಕಿ ಎಂದರೆ ಹಕ್ಕಿಯನ್ನು ಅಥವಾ ಪಕ್ಷಿಗಳನ್ನು ಹಿಡಿಯುವವರು ಎಂದರ್ಥ.

ಪರ್ಯಾಯ ಪದ : ಶಿಕಾರಿ, ನೀರಶಿಕಾರಿ, ಅಡವಿಚೆಂಚು, ಹಕ್ಕಿಪಿಕ್ಕಿ, ಅರಣ್‌ಶಿಕಾರಿ, ಪಾರ್ಧಿ, ರಾಜ್‌ಪಾರ್ಧಿ ಇತ್ಯಾದಿ.

ಕುಲಗಳು : ಗುಜರಾತೊ, ಪನ್ವಾರ್, ಕಾಳಿವಾಳ್ಗೊ, ಮೇವಾಡೊ.

ಭಾಷೆ : ವಾಘ್ರಿ ಮಾತೃಭಾಷೆಯಾಗಿದೆ. ಜೊತೆಯಲ್ಲಿ ಆಯಾ ಪ್ರದೇಶಗಳಿಗನುಗುಣವಾಗಿ ವ್ಯವಹಾರಿಕ ಭಾಷೆಗಳನ್ನಾಡುತ್ತಾರೆ.

ಸಾಕ್ಷರತೆ : "ಶೇ. ೫ ರಷ್ಟಿದೆ."[37]

ನೆಲೆಗಳು : ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗ, ಬೀದರ್ ಮತ್ತು ರಾಜ್ಯದ್ಯಾಂತ ಹರಡಿಕೊಂಡಿದ್ದಾರೆ.

ಆಹಾರ : ಸಸ್ಯಹಾರಿ ಹಾಗೂ ಮಾಂಸಹಾರಿಗಳು.

ಆಚರಣೆ : ಕುಲದ ಸಂಪ್ರದಾಯದಂತೆ ಆಚರಣೆಗಳು ನಡೆಯುತ್ತವೆ. ವಿಧವಾವಿವಾಹ, ಕನ್ಯಾಶುಲ್ಕವಿದೆ. ಶವಸಂಸ್ಕಾರ ಹೂಳುತ್ತಾರೆ.

ಸಮಾಜಿಕ ಸ್ಥಾನ: ಕೆಳಗಿನ ಸ್ಥಾನಗಳಾಗಿವೆ.

ವೃತ್ತಿ : ಅಲಂಕಾರ, ಗೃಹೋಪಯೋಗಿ ವಸ್ತು ಉತ್ಪಾದನೆ. ಮಾರಾಟ, ಬೇಟೆ, ಕೂಲಿ ಕೆಲಸ ಕೈಗೊಂಡಿದ್ದಾರೆ.

೧೬. ಹಂದಿಜೋಗಿ (Handijogi)

ಹಂದಿಜೋಗಿ ಸಮುದಾಯವು ಅರೆ-ಅಲೆಮಾರಿ ಸಮುದಾಯವಾಗಿದ್ದು ಇವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಹಿಂದೆ ಹಂದಿಗಳನ್ನು ಸಾಕಿಕೊಂಡು ಕಥನಗಳನ್ನು ಹೇಳಿಕೊಂಡು ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದರಂತೆ. ಈಗ ಅಲ್ಲಲ್ಲಿ ನೆಲೆನಿಂತು ಕುಲಕಸುಬುಗಳ ಜೊತೆಯಲ್ಲಿ ಕೃಷಿ ಮತ್ತು ವ್ಯಾಪಾರ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ೧೯೦೧ರ ವರದಿಯ ಪ್ರಕಾರ ಎಲ್.ಕೆ. ಅನಂತ

ಅಯ್ಯರ್‌ರವರು ತೆಲುಗು ವರ್ಗದ ಭಿಕ್ಷುಕರೆಂದು ಹೇಳಿದ್ದಾರೆ. ಜೋಗಿ ಎಂಬ ಪದವು ಬಹಳ ವ್ಯಾಪಕವಾಗಿ ಬಳಸಲಾಗುತ್ತಿದೆ. ಮೊಂಡರು, ಹೆಳವರು, ಗೊರವರು ಸಹ ಜೋಗಿ ಎಂದು ಕರೆದು ಕೊಳ್ಳುತ್ತಾರೆ. ಭೈರವೇಶ್ವರ ಹಾಗೂ ಚುಂಚನಗಿರಿ ಭಕ್ತರೆಲ್ಲರು ಜೋಗಿ ಎಂದು ಕರೆದು ಕೊಳ್ಳುತ್ತಾರೆ. ೧೯೮೧ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ೯,೬೩೧ ರಷ್ಟಿದೆ.

ಪರ್ಯಾಯ ಪದ : ಹಂದಿಚಿಕ್ಕ, ಹಂದಿಗೊಲ್ಲ, ಡಬ್ಬಜೋಗಿ, ಎಣ್ಣೆಜೋಗಿ ಇತ್ಯಾದಿ ಹೆಸರಿನಿಂದ ಕರೆಯುತ್ತಾರೆ.

ಕುಲಗಳು : ಬಿಂದವಳ್ಳು, ಚಾರುಕುನವಳ್ಳು, ದಾಸರಿಪುರವಳ್ಳು, ಗೋದಿವಳ್ಳು, ಹಿಂಡುಕುರಿವಳ್ಳು, ಜಾಲಿವಳ್ಳು, ಮೋಪರಿವಳ್ಳು, ವರಿಗಂಟವಳ್ಳು, ಸಿರಿಪರವಳ್ಳು, ಸೋಮತನವ್ಳು, ಸಪ್ಪದಿವಳ್ಳು, ತರವಳ್ಳು, ವಾದಿಪಿಲ್ಲವಳ್ಳು, ಉಲಉಲ್ಲವಳ್ಳು ಇತ್ಯಾದಿ.

ಕುಲದೇವರು : ಯಲ್ಲಮ್ಮ, ಮಾರಮ್ಮ, ಮಜೋರಮ್ಮ, ದಡಾರದಮ್ಮ, ತಿರುಪತಿ ವೆಂಕಟೇಶ್ವರ, ನಂದಿಶ್ವರ, ನಂಜುಂಡೇಶ್ವರ. ಸುಂಕಪ್ಪಮಲೆ, ಸಿದ್ದೇಶ್ವರ.

ಭಾಷೆ : ತೆಲುಗು ಮಾತೃಭಾಷೆಯಾಗಿದೆ. ಆಯಾ ಪ್ರದೇಶದ ವ್ಯವಹಾರಿಕ ಭಾಷೆಗಳನ್ನಾಡುತ್ತಾರೆ.

ಸಾಕ್ಷರತೆ : "ಶೇ. ೮ ರಷ್ಟಿದೆ."[38]

ನೆಲೆಗಳು : ಬಳ್ಳಾರಿ, ಬೀದರ್, ಕೊಪ್ಪಳ, ಗುಲ್ಬರ್ಗ ಮತ್ತು ಇತರೆ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

ಸಾಮಾಜಿಕ ಸ್ಥಾನ: ಅಸ್ಪೃಶ್ಯರಲ್ಲ ಆದರೂ ಸಾಮಾಜಿಕವಾಗಿ ಕಡಿಮೆ ಸ್ಥಾನಮಾನಗಳಿವೆ.

ಆಹಾರ : ಮಾಂಸಹಾರಿ ಮತ್ತು ಸಸ್ಯಹಾರಿಗಳಾಗಿದ್ದಾರೆ.

ಆಚರಣೆ : ವರದಕ್ಷಿಣೆ ಇಲ್ಲ, ವಧುದಕ್ಷಿಣೆಯಿದೆ. ವಿಧವಾವಿವಾಹಗಳು ನಡೆಯುತ್ತವೆ. ಸರಳ ವಿವಾಹವಿಚ್ಛೆದನ ವ್ಯವಸ್ಥೆಯಿದೆ. ಸಂಪ್ರದಾಯದ ಆಚರಣೆಗಳನ್ನು ಮಾಡುವರು.

ವೃತ್ತಿ : ಇತ್ತೀಚೆಗೆ ನೆಲೆನಿಲ್ಲುತ್ತಿರುವ ಪರಿಣಾಮ ಸಂಘಗಳನ್ನು ಕಟ್ಟಿಕೊಂಡು ಸಂಘಟಿತರಾಗುವ ಹಾದಿಯಲ್ಲಿದ್ದಾರೆ. (ಉದಾ: ಕೂಡ್ಲಿಗಿ ತಾಲ್ಲೂಕಿನ ಭಿಷ್ಟೆಹಳ್ಳಿ ಗ್ರಾಮ.)

೧೭. ಅಡವಿಚೆಂಚರು (Adavichencha)

ಸದಾ ಕಾಲ ಅಡವಿಯಲ್ಲಿ ಬದುಕು ನಡೆಸುವ ಸಮುದಾಯವಾದ ಅಡವಿಚೆಂಚರು ಊರಿನ ಜನರೊಂದಿಗೆ ಹೆಚ್ಚು ಸಂಪರ್ಕವಿರುವುದಿಲ್ಲ. ಯಾರಾದರೂ ಬಂದರೆ ಅನುಮಾನದಿಂದ ನೋಡುತ್ತಾರೆ. ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಲಾಗಿದೆ. ಮಧ್ಯಭಾರತದ ವಿಂಧ್ಯ ಪರ್ವತಗಳಿಂದ ವಲಸೆ ಬಂದವರಾಗಿದ್ದಾರೆ.

ಪರ್ಯಾಯ ಪದ : ಚೆಂಚು, ಅಡವಿಚೆಂಚಲು, ಶಿಕಾರಿಗಳು, ಪಾರ್ಧಿಗಳು, ಚೆಂಚುರುಲು, ಚೆಂಚುವಾಡು.

ಕುಲಗಳು : ಸೌಂಡ್ಯ, ಖಾಂಚ್, ಖಾಂಜಿಡಾಗರೋ, ರೂಪಟಿಲ್ಲಾ, ಕೊರಬ್ಯಾ, ಪಿಂಪಳಚಾ, ಲಿಂಗ್ಯಾಜ, ಇಕೋತಿ.

ಕುಲದೇವರು : ಓಬಳೇಶ್ವರ ಸ್ವಾಮಿ, ಚೆಂಚುದೇವಿ.

ನೆಲೆಗಳು : ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಯಡ್ರಮ್ಮನ ಹಳ್ಳಿ, ಗುಲ್ಬರ್ಗ ಇತ್ಯಾದಿ.

ಭಾಷೆ : ಗುಜರಾತಿ, ಲಂಬಾಣಿ ಮಿಶ್ರಿತ ಭಾಷೆ.

ಸಾಕ್ಷರತೆ : "ಶೇ. ೧ ರಷ್ಟಿದೆ."[39]

ಆಹಾರ : ಮಾಂಸಹಾರಿ ಮತ್ತು ಸಸ್ಯಹಾರಿಗಳು.

ಆಚರಣೆ : ಸಂಗಾತಿಗಳ ಆಯ್ಕೆಯಲ್ಲಿ ಸ್ವತಂತ್ರ, ವಿಧವಾವಿವಾಹ ತೆರಪದ್ಧತಿ ಇರುತ್ತದೆ.

ಸಾಮಾಜಿಕ ಸ್ಥಾನ: ಕೆಳಗಿನ ಸ್ಥಾನಗಳಿವೆ. ಜನರು ಅಪರಾಧಿ ಮನೋಭಾವದಿಂದ ನೋಡುವರು.

ವೃತ್ತಿ : ಕಾಡು ಉತ್ಪನ್ನ ಸಂಗ್ರಹ, ಬೇಟೆ, ಆಯುಧಗಳ ಸಾಣಿ ಹಿಡಿಯುವುದು.

೨.೪ ಅಲೆಮಾರಿಗಳ ಮೂಲ ಹುಡುಕಾಟ

ಯಾವುದೆ ಸಮುದಾಯದ ಮೂಲವನ್ನು ಶೋಧಿಸಿದರು ನಿರ್ದಿಷ್ಟವಾಗಿ ಇಂತಹದೆ ಮೂಲದಿಂದ ಬಂದವರು. ಇವರಿಂದಲೆ ಬಂದವರು. ಇಂತಹ ಸ್ಥಳದಿಂದಲೆ ಬಂದವರೆಂದು ಹೇಳುವುದು ಕಠಿಣವಾದ ಕಾರ್ಯ. ಇದೆ ಮೂಲವೆಂದು ಹೇಳುವುದು ಕೂಡ ಕಷ್ಟವಾದದು. ಆ ಸಮುದಾಯ ಎಲ್ಲಿ ಜೀವಿಸಲು, ಅನುಕೂಲವಾದ ವಾತವರಣ, ಕಾಡಿನ ಸಂಪನ್ಮೂಲ, ನೀರಿನ ಸಂಪನ್ಮೂಲ ಹಾಗೂ ಹೇರಳವಾಗಿ ಭಿಕ್ಷೆ ದೊರೆಯುವಸ್ಥಳಗಳು. ಬೇಟೆಗೆ ಅನುಕೂಲಕರವಾದ ಸ್ಥಳಗಳು ಮತ್ತು ವ್ಯಾಪಾರಕ್ಕಾಗಿ ಎಲ್ಲೆಲ್ಲಿ ಅನುಕೂಲ ವಾಗುತ್ತದೆಯೊ ಅಲ್ಲೆಲ್ಲ ನೆಲೆಸಿರುವುದನ್ನು ಕಾಣಬಹುದಾಗಿದೆ.

ಮೂಲ ಎಲ್ಲಿ ಎಂಬುದು ನಿಖರವಾಗಿ ಹೇಳುವುದು ಕಷ್ಟದ ಕೆಲಸ. ಮೂಲದ ಬಗ್ಗೆ ಕೆದಕುತ್ತಾ ಹೋದಂತೆಲ್ಲಾ ಇವರ ಸೃಷ್ಟಿ ಪುರಾಣಗಳಿಂದ ಮತ್ತು ವಕ್ತೃಗಳಿಂದ ಬಂದಿರುವ ಮಾಹಿತಿಯು ತುಂಬಾ ವಿಚಿತ್ರವಾಗಿದೆ. ಒಬ್ಬರು ಬಳ್ಳಿಯಿಂದ ಜನಿಸಿದರೆ ಮತ್ತೊಬ್ಬರು ಮಂತ್ರದಿಂದ, ಶಿವನಿಂದ, ದೇವಾನು ದೇವತೆಗಳಿಂದ, ಶಾಪದಿಂದ, ಪ್ರಾಣಿ-ಪಕ್ಷಿಗಳಿಂದ, ಋಷಿಗಳಿಂದ ಹೀಗೆ ನಾನಾ ರೀತಿಯಲ್ಲಿ ಸೃಷ್ಟಿಯಾಗಿ ಬಂದಿದ್ದನ್ನು ಕಾಣಬಹುದಾಗಿದೆ. ಆದಿಮಕಾಲದಲ್ಲಿ ಪ್ರಾಣಿಯಂತಿದ್ದ ಮಾನವ ಹಂತಹಂತವಾಗಿ ಬೇರೆ ಬೇರೆ ಆಯಾಮಗಳಲ್ಲಿ ಬೆಳೆದು ಬಂದಿದ್ದಾನೆ. ಈ ಹಂತಗಳಲ್ಲಿ ಬದುಕಿನ ಏನೆಲ್ಲಾ ಘಟನೆಗಳಾದ ಪ್ರಕೃತಿ ವಿಕೋಪ, ವಿಪರೀತ ಮಳೆ, ಚಳಿ, ಬಿಸಿಲು, ಕ್ರೂರ ಮೃಗಗಳ ಹಾವಳಿ ಆಹಾರದ ಅಭಾವ ಬೇಟೆಯ ತುಡಿತ ವ್ಯಾಪಾರದ ಅಮಲು ಬ್ರಿಟಿಷರ್ ಮತ್ತು ಸ್ಥಳೀಯರ ಆಡಳಿತದಿಂದ ಬೇಸತ್ತು ಮತ್ತು ಕೆಲವೊಂದು ಮುಸ್ಲಿಂ ದೊರೆಗಳಿಂದ ಹಿಂಸೆಯನ್ನು ಅನುಭವಿಸಿ ಬಂದವರಾಗಿದ್ದಾರೆ. ಇಂತಹ

ಸಮುದಾಯಗಳನ್ನು ಅಂದಿನ ಆಳುವ ವರ್ಗವು ಧರ್ಮದ ಪ್ರಚಾರಕ್ಕಾಗಿ, ಸೇವೆಗಾಗಿ ಇನ್ನಿತರ ಕಾರಣಗಳಿಗಾಗಿ ಬಳಸಿಕೊಂಡಿದ್ದರು. ವೈವಿಧ್ಯಮಯ ಸ್ಥಳಗಳಲ್ಲಿ ಚದುರಿ ಹಂಚಿಹೋದ ಸಮುದಾಯಗಳು ಅಲೆಮಾರಿಗಳಾಗಿ ವಾಸದ ನೆಲೆ-ನೆಲವಿಲ್ಲದೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಲೆ ಇದ್ದಾರೆ. ಆಳುವ ಸಮುದಾಯದ ದಬ್ಬಾಳಿಕೆಗೆ ತಲೆಮರೆಸಿಕೊಂಡು ಕಾಡಿಗೆ ಪ್ರವೇಶಿಸಿ ಹಸಿವನ್ನು ಹಿಂಗಿಸಿಕೊಳ್ಳಲು ಅಡ್ಡದಾರಿ ತುಳಿದಿರಬೇಕು. ಇದನ್ನು ಅಂದಿನ ಸರ್ಕಾರ ಅಪರಾಧಿ ಬುಡಕಟ್ಟು ಎಂದು ಹಣೆಪಟ್ಟಿಕಟ್ಟಿದೆ. ಕೆಲವು ಅಲೆಮಾರಿಗಳು ತಮ್ಮ ಮೂಲ ಕಸುಬುಗಳಿಂದಲೆ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಭಿಕ್ಷೆಬೇಡಿಕೊಂಡು ಜೀವಿಸುತ್ತಿದ್ದಾರೆ. ಆದ್ದರಿಂದ ಅಲೆಮಾರಿಗಳ ಮೂಲ ಹುಡಕಾಟ ತುಂಬಾ ಕಷ್ಟಕರ. ಶೋಧಿಸಿದರು ಸಮಗ್ರ ಮಾಹಿತಿಗಳು ದೊರೆಯದಿರುವುದು. ಹೀಗಾಗಿ ಅಲೆಮಾರಿಗಳ ಮೂಲ ಶೋಧಿಸುವುದೆ ಮುಖ್ಯ ಉದ್ದೇಶವಾಗಿರದೆ, ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನವಿಟ್ಟುಕೊಂಡು ಅಲೆಮಾರಿಗಳ ನೈಜತೆಯ ಸಾಮಾಜಿಕ, ಆರ್ಥಿಕ ರಚನೆ ಯಾವ ರೀತಿಯಾಗಿದೆ ಎಂಬುದನ್ನು ಈ ಸಂಶೋಧನೆಯಿಂದ ತಿಳಿದುಕೊಳ್ಳಬಹುದಾಗಿದೆ. ಹಾಗೂ ಅಧ್ಯಯನದ ವ್ಯಾಪ್ತಿಯಲ್ಲಿ ಸುಮಾರು ೧೭ಕ್ಕೂ ಅಧಿಕ ಅಲೆಮಾರಿ ಸಮುದಾಯಗಳು ಕಂಡುಬರುತ್ತವೆ. ಆದುದರಿಂದ ಅಲೆಮಾರಿಗಳ ಮೂಲದ ಶೋಧನೆಗಿಂತ ಸಮಾಜೋ-ಆರ್ಥಿಕ ವ್ಯವಸ್ಥೆಗೆ ಹೆಚ್ಚು ಒತ್ತು ಕೊಟ್ಟಿರುವುದು ಸಂಶೋಧನೆಯ ಮೂಲ ಉದ್ದೇಶವಾಗಿದೆ.

ಅಡಿಟಿಪ್ಪಣಿ

೧. ಬಳ್ಳಾರಿ ಜಿಲ್ಲಾ ಗೆಝೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು. ಪು.೯೧

೨,೩,೪. ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ, ೨೦೦೨, ದೊಡ್ಡನ ಪಾಟೀಲ್, (ಹೈದ್ರಾಬಾದ್ ಕರ್ನಾಟಕ ಅನುಲಕ್ಷಿಸಿ), ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೧

೫. ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ, ೨೦೦೨, ದೊಡ್ಡನ ಪಾಟೀಲ್., (ಹೈದ್ರಾಬಾದ್ ಕರ್ನಾಟಕ ಅನುಲಕ್ಷಿಸಿ), ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೫

೬,೭. ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ, ೨೦೦೨, ದೊಡ್ಡನ ಪಾಟೀಲ್, (ಹೈದ್ರಾಬಾದ್ ಕರ್ನಾಟಕ ಅನುಲಕ್ಷಿಸಿ), ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೬

೮,೯. ಭೌತಿಕ ಮೂಲಭೂತ ಸೌಕರ್ಯ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ, ೨೦೦೨, ದೊಡ್ಡನ ಪಾಟೀಲ್, (ಹೈದ್ರಾಬಾದ್ ಕರ್ನಾಟಕ ಅನುಲಕ್ಷಿಸಿ), ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೬

೧೦,೧೧. ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ, ಕೃಷ್ಣಾ ಜೆ., ೨೦೦೨, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೭

೧೨,೧೩. ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ, ಕೃಷ್ಣಾ ಜೆ., ೨೦೦೨, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೭

೧೪. ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ, ಕೃಷ್ಣಾ ಜೆ., ೨೦೦೨, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬೮

೧೫. ಬೀದರ್ ಜಿಲ್ಲೆಯ ಟೋಕ್ರಿ ಕೋಳಿ ಬುಡಕಟ್ಟು ಒಂದು ಸಾಂಸ್ಕೃತಿಕ ಅಧ್ಯಯನ, ಹೇಮಲತಾ ಗಣಪತಿರಾವ್ ವಡ್ಡೆ, ೨೦೦೨, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪

೧೬,೧೭. ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಸುಜಾತ ಅಕ್ಕಿ, ೨೦೦೪, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೬

೧೮. ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಸುಜಾತ ಅಕ್ಕಿ, ೨೦೦೪, ಪಿಎಚ್.ಡಿ ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೬

೧೯. ಹೈದ್ರಾಬಾದ್ ಕರ್ನಾಟಕ ವಿಮೋಚನೆ ಹೋರಾಟದಲ್ಲಿ ಕೊಪ್ಪಳ ಜಿಲ್ಲೆಯ ಶಿಬಿರಗಳು, ಶರಣಪ್ಪ ಉಮಚಗಿ, ೨೦೦೪, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೩

೨೦,೨೧. ಹೈದ್ರಾಬಾದ್ ಕರ್ನಾಟಕ ವಿಮೋಚನೆ ಹೋರಾಟದಲ್ಲಿ ಕೊಪ್ಪಳ ಜಿಲ್ಲೆಯ ಶಿಬಿರಗಳು, ಶರಣಪ್ಪ ಉಮಚಗಿ, ೨೦೦೪, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೬

೨೨. ಬುಡಕಟ್ಟು ಅಧ್ಯಯನ, ಡಾ. ಹಿ.ಚಿ. ಬೋರಲಿಂಗಯ್ಯ., ಎ.ಎಸ್. ಪ್ರಭಾಕರ್, ೨೦೦೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೧೦೦

೨೩, ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೯

೨೪. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೧೭

೨೫. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು.೧೯

೨೬. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು

ಮೂರ್ತಿ. (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೨೨

೨೭. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೨೮

೨೮. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೩೪

೨೯. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೪೯

೩೦. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೪೩

೩೧. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೩೭

೩೨. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೪೮

೩೩. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೪೫

೩೪. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೨೬

೩೫. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೧೪

೩೬. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೩೧

೩೭. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾದಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೩೯

೩೮. ಕರ್ನಾಟಕ ರಾಜ್ಯ ಅಲೆಮಾರಿ, ಅರೆ-ಅಲೆಮಾರಿ ಸಮುದಾಯಗಳ ಪಾರ್ಶ್ವನೋಟ, (ಸಂ) ಬಾಲಗುರು ಮೂರ್ತಿ, (ಸಹ ಸಂಪಾಚಕ) ಡಾ. ಕೆ.ಎಂ.ಮೈತ್ರಿ, ೨೦೦೫, ಕರ್ನಾಟಕ ರಾಜ್ಯ ಅಲೆಮಾರಿ ಅರೆ-ಅಲೆಮಾರಿಗಳ ಒಕ್ಕೂಟ, ಬೆಂಗಳೂರು. ಪು. ೨೪

೩೯. ವಕ್ತೃ: ಶಿಕಾರಿ ರಾಮು (೩೨), ಹಕ್ಕಿ-ಪಿಕ್ಕಿ, ಶಿಕಾರಿ ಕಾಲೋನಿ ಕಂಪ್ಲಿ, ಹೊಸಪೇಟೆ ತಾ. ಬಳ್ಳಾರಿ ಜಿ.

ಅಧ್ಯಾಯ ೩

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆ

೩.೧. ಅಲೆಮಾರಿಗಳ ಸಾಮಾಜಿಕ ರಚನೆ ಮತ್ತು ಮೌಲ್ಯ

೩.೨. ಅಲೆಮಾರಿಗಳ ಕುಟುಂಬ ವ್ಯವಸ್ಥೆ

೩.೩. ಅಲೆಮಾರಿಗಳ ಜಾತಿ ಮತ್ತು ಉಪಜಾತಿಗಳ ರಚನೆ

೩.೪. ಅಲೆಮಾರಿಗಳ ಲಿಂಗ ಸಂಬಂಧ

೩.೫. ಅಲೆಮಾರಿಗಳ ವಾಸದ ನೆಲೆ ಮತ್ತು ಅಲೆದಾಟ

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆ

ವ್ಯವಸ್ಥೆಯು ಪ್ರತಿಯೊಂದು ವಸ್ತು-ವಸ್ತುವಿನ ನಡುವೆ, ಜೀವಿ-ಜೀವಿಗಳ ನಡುವೆ ವ್ಯವಸ್ಥಿತವಾಗಿ ಏರ್ಪಟ್ಟಿರುತ್ತದೆ. ವ್ಯವಸ್ಥೆ ಇರದಿದ್ದರೆ ಮಾಡಬೇಕಾದ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ವ್ಯವಸ್ಥೆ ಇದ್ದರೇನೆ ಒಂದು ಸಮುದಾಯಕ್ಕಾಗಲಿ, ಒಂದು ವಸ್ತುವಿಗಾಗಲಿ ಮೌಲ್ಯ ಬರುವುದು. ಹೀಗಾಗಿ ಪ್ರತಿ ಮಾನವ ಸಮಾಜಗಳಲ್ಲಿ ಒಂದಲ್ಲ ಒಂದು ರೀತಿಯ ವ್ಯವಸ್ಥೆ ಇರುತ್ತದೆ. ಅಂತಹ ವ್ಯವಸ್ಥೆಯು ಆ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ರಚನೆಯ ಮೇಲೆ ರಚಿತಗೊಂಡಿರುತ್ತದೆ. ಸಾಮಾಜಿಕ ವ್ಯವಸ್ಥೆಯ ಮೂಲಕ ಸಮುದಾಯವು ಏನನ್ನು- ಪೂರೈಸಬೇಕೊ ಅದನ್ನು ಪೂರೈಸಲು ಸಾಧ್ಯ. ಇಲ್ಲವೆಂದರೆ ಪೂರೈಸುವುದು ಅಸಾಧ್ಯ. ವ್ಯವಸ್ಥೆಯೊಳಗೆ ಒಂದಕ್ಕೊಂದು ಸಂಬಂಧಗಳು ಬೆಸೆಯುವುದರೊಂದಿಗೆ ಸಮಷ್ಠಿ ರೂಪಪಡೆದು ಕಾರ್ಯಗತಗೊಳ್ಳುತ್ತವೆ.

ವ್ಯವಸ್ಥೆಯು ಒಂದು ನಿರ್ಣಯಿಸಿದ ಗುರಿ ಅಥವಾ ಉದ್ದೇಶಕ್ಕಾಗಿ ಇಲ್ಲವೆ ಅನಿವಾರ್ಯ ಸಂದರ್ಭದಲ್ಲಿ ರೂಪಿತಗೊಂಡಿರಬಹುದು. ಒಂದು ಸಮುದಾಯವು ತನ್ನ ಕೆಲಸ ಕಾರ್ಯಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪೂರೈಸಲು ತನ್ನದೆ ಆದ ಪ್ರಭಾವಬೀರುತ್ತದೆ. ವ್ಯವಸ್ಥೆಯ ಸ್ವರೂಪವೆಂದರೆ ಒಬ್ಬ ಸದಸ್ಯನ ಮಧ್ಯ ರಚಿತವಾಗದೆ ಇಬ್ಬರು ಮತ್ತು ಅದಕ್ಕೂ ಹೆಚ್ಚಿನ ಸದಸ್ಯರ ನಡುವೆ ರಚಿತಗೊಂಡಿರುತ್ತದೆ. ಇದು ಸಂಬಂಧಗಳನ್ನು ತಳುಕು ಹಾಕುವ ಸಾಮಾಜಿಕ ಸಂಬಂಧಗಳ ಕೊಂಡಿಯಾಗಿದೆ. ಒಂದು ಸಮುದಾಯದ ನಡುವೆ ರೂಪಿತಗೊಂಡ ವ್ಯವಸ್ಥೆಯು ಸಮುದಾಯದ ಏಳ್ಗೆಗಾಗಿ, ಅದರಡಿಯಲ್ಲಿ ಬರುವ ನಿಯಮ, ರೀತಿ-ನೀತಿ, ಮೌಲ್ಯಗಳಿಗನುಗುಣವಾಗಿ ಕ್ರಿಯೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸುತ್ತದೆ. ಅದು ಕೇವಲ ನಿಗದಿತ ಸಮಯವನ್ನು ಇಟ್ಟುಕೊಳ್ಳದೆ ನಿರಂತರವಾಗಿ ಕಾರ್ಯನಿರತವಾಗಿರುತ್ತದೆ. ವ್ಯವಸ್ಥೆಯ ಗುರಿ ಕೇವಲ ಕ್ರಿಯೆಗಳನ್ನು ನಿರ್ವಹಿಸುವುದಷ್ಟೆ ಅಲ್ಲದೆ, ವ್ಯವಸ್ಥೆಯಲ್ಲಿ ಬರುವ ಸದಸ್ಯರನ್ನು ಸದಕಾಲ ಕ್ರಿಯಾಶೀಲರಾಗಿರುವಂತೆ ಪ್ರೇರೇಪಿಸುತ್ತಿರುತ್ತದೆ.

ವ್ಯವಸ್ಥೆಯೊಳಗೆ ಒಬ್ಬನು ಮತ್ತೊಬ್ಬನನ್ನು ಅನುಸರಿಸುವಂತೆ ತಪ್ಪುಗಳನ್ನು ನಿಯಂತ್ರಿಸುತ್ತದೆ. ಹಾಗೂ ಸದಸ್ಯರನ್ನು ಒಂಟಿಯಾಗಿ ಬಿಡದೆ, ಯಾವಾಗಲೂ ಸಾಮೂಹಿಕವಾಗಿಯೆ ಎಲ್ಲರೂ ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಎಂಬ ಸಹಬಾಳ್ವೆಯ ಸಾಂಕೇತದಂತೆ ಮುನ್ನಡೆಸುತ್ತಿರುತ್ತದೆ. ಇದರ ವ್ಯಾಪ್ತಿಯು ಸೀಮಿತವಾಗಿರದೆ, ಬಹುವಿಶಾಲವಾಗಿ ಆವರಿಸಿಕೊಂಡಿದೆ. ಇಂತಹ ವ್ಯವಸ್ಥೆಯು ಸಮುದಾಯದ ನಿಯಮ ಸಂಪ್ರದಾಯಕಷ್ಟೆ ಬದ್ಧವಾಗಿರದೆ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ

ವಲಯಕ್ಕೂ ಪಸರಿಸಿ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಯೊಂದಿಗೆ ಸಂಬಂಧಗಳ ಬೆಸುಗೆಯಾಗಿ ಕಾರ್ಯನಿರ್ವಹಿಸುತ್ತದೆ.

ಈ ತೆರನಾದ ಸಾಮಾಜಿಕ ವ್ಯವಸ್ಥೆಯು ಎಲ್ಲಾ ಸಮುದಾಯಗಳಲ್ಲೂ ಕಂಡುಬರುವುದು ಸಹಜವಾದರು, ಎಲ್ಲಾ ಸಮುದಾಯಗಳಲ್ಲೂ ಒಂದೇ ರೀತಿಯಾದ ಸಾಮಾಜಿಕ ವ್ಯವಸ್ಥೆ ರಚಿತವಾಗಿರುತ್ತದೆ ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಮೊದಲೆ ಹೇಳಿದ ಹಾಗೆ ವ್ಯವಸ್ಥೆಯು ಆರ್ಥಿಕ ರಚನೆ ಸಮುದಾಯಗಳ ಸಂಬಂಧಗಳ ಸಮಷ್ಠಿತನದ ಭಾಗವಹಿಸುವಿಕೆ, ನಡೆದು ಕೊಳ್ಳುವಿಕೆ, ಪರಿಸರ, ಕಾಲ, ಸ್ಥಳ ಮತ್ತು ಸಂದರ್ಭಕ್ಕನುಸಾರವಾಗಿ ರಚಿತಗೊಂಡಿರುತ್ತದೆ. ಉದಾಹರಣೆ ನೆಲೆನಿಂತವರ ಸಾಮಾಜಿಕ ವ್ಯವಸ್ಥೆಗೂ, ಅಲೆಮಾರಿ ಸಮುದಾಯಗಳ ಸಾಮಾಜಿಕ ವ್ಯವಸ್ಥೆಗೂ ಭಿನ್ನತೆಯನ್ನು ಕಾಣಬಹುದು. ನೆಲೆನಿಂತವರ ಆರ್ಥಿಕ ವ್ಯವಸ್ಥೆ, ಸಂಬಂಧಗಳ ವ್ಯವಸ್ಥೆ, ಸಮುದಾಯದ ಗಾತ್ರ, ಸೀಮಿತ ಪ್ರದೇಶ ಒಂದು ರೀತಿಯಾದರೆ, ಅಲೆಮಾರಿಗಳದ್ದು ಇದಕ್ಕೆ ತೀರ ಭಿನ್ನವಾದ ಅಂದರೆ ಸಂಚಾರಿ ಸಾಮಾಜಿಕ ವ್ಯವಸ್ಥೆ. ಇಲ್ಲಿ ಇವರ ಗುರಿ-ಉದ್ದೇಶಗಳೆ ಬೇರೆ. ಸಾಮಾಜಿಕ ರಚನೆಯ ಅಂಶಗಳೆ ಬೇರೆ. ಅದರಂತೆ ನೆಲೆನಿಂತ ಸಮುದಾಯಗಳ ರಚನೆ ಬೇರೆ ಗುರಿ-ಉದ್ದೇಶಗಳು ಬೇರೆ. ಇನ್ನೂ ಸೂಕ್ಷ್ಮವಾಗಿ ನೋಡಿದಾಗ ಜಾತಿ ವ್ಯವಸ್ಥೆಯ ಅಡಿಯಲ್ಲಿ ಸಾಮಾಜಿಕ ವ್ಯವಸ್ಥೆಯು ಭಿನ್ನ ರೂಪವನ್ನು ಪಡೆದುಕೊಂಡಿರುತ್ತದೆ.

ಸಾಮಾಜಿಕ ಸಂದರ್ಭಗಳನುಸಾರವಾಗಿ ಎರಡು ಸಮುದಾಯಗಳ ಸಾಮಾಜಿಕ ವ್ಯವಸ್ಥೆಯು ಭಿನ್ನವಾಗಿದ್ದು, ಅವರವರ ಸಮುದಾಯಕ್ಕನುಗುಣವಾಗಿ ಗುರಿ-ಉದ್ದೇಶಗಳನ್ನು ಈಡೇರಿಸಿಕೊಳ್ಳುತ್ತಾರೆ. ಪ್ರತಿಯೊಂದು ಸಮುದಾಯದಲ್ಲಿ ಆಕಸ್ಮಿಕವಾಗಿ ಒಬ್ಬ ಸದಸ್ಯನು ಆ ಸಮುದಾಯದೊಂದಿಗೆ ಗುರುತಿಸಿಕೊಳ್ಳಲು ನಿಷ್ಕ್ರಿಯವಾದರೆ ಕೂಡಲೆ ಆ ಸಮುದಾಯವೆ ಅದರ ಬಗ್ಗೆ ಲಕ್ಷವಹಿಸಿ ಎಲ್ಲಿ ಎಡವಿದೆ ಎಂಬುದನ್ನು ಪತ್ತೆಮಾಡಿ, ಎಂದಿನಂತೆಯೆ ಕ್ರಿಯಾಶೀಲವಾಗಿರುವಂತೆ ಎಚ್ಚರಿಸಲಾಗುತ್ತದೆ. ಈ ರೀತಿಯ ವ್ಯವಸ್ಥೆಗೆ ಅಣಿಯಾಗಲು ಮಾನವನ ಪ್ರಾಥಮಿಕ ಸಂಸ್ಥೆ ಎಂದೆ ಹೆಗ್ಗಳಿಕೆ ಪಾತ್ರವಾದ ಕುಟುಂಬದಲ್ಲಿ. ಬಾಲ್ಯದಿಂದಲೆ ಸಂಸ್ಕಾರ ನೀಡಲಾಗುತ್ತದೆ. ಹಾಗಾದರೆ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆ ಯಾವತರದ್ದು? ಅದರ ವಿಶಿಷ್ಟ ಸ್ವರೂಪವೇನು? ಎಂಬ ಕೂತೂಹಲ ಮೂಡಬಹುದು. ಆದುದರಿಂದ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆಯ ಸತ್ಯಸತ್ಯೆತೆಯನ್ನು ವಿಶ್ಲೇಷಿಸಲಾಗಿದೆ. ವ್ಯವಸ್ಥೆಯು ಅಲೆಮಾರಿಗಳದ್ದೆ ಆದ ಸಾಮಾಜಿಕ ರಚನೆಯ ಮೇಲೆ ರೂಪಪಡೆದಿದೆ.

೩.೧ ಅಲೆಮಾರಿಗಳ ಸಾಮಾಜಿಕ ರಚನೆ ಮತ್ತು ಮೌಲ್ಯ

ಮಾನವನು ಏಕಾಂಗಿಯಾಗಿ ಜೀವನ ನಡೆಸುವುದು ಅಸಾಧ್ಯವಾದುದು. ಏಕೆಂದರೆ ಅವನು ಸಮಾಜ ಜೀವಿ. ಈ ಜೀವಿಯು ಇನ್ನೊಂದು ಜೀವಿಯ ಜೊತೆ ಸ್ನೇಹ, ಸಹಕಾರ, ಪ್ರೀತಿ-ವಿಶ್ವಾಸಗಳನ್ನು ಬೆಳೆಸಿಕೊಂಡು ಜೀವಿಸಬೇಕಾಗುತ್ತದೆ. ಈ ವ್ಯವಸ್ಥೆಗೆ ಮುಖ್ಯ ಕಾರಣ ಆತನ ಬಯಕೆಗಳು ಅಪರಿಮಿತ, ಆ ಬಯಕೆಗಳನ್ನು ಪೂರೈಸಿಕೊಳ್ಳಲು ಒಂದು ರಚನೆಯು ಬೇಕಾಗುತ್ತದೆ. ರಚನೆ ಇಲ್ಲದಿದ್ದರೆ ಬಯಕೆಗಳನ್ನು ಈಡೇರಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ರಚನೆ ಇಲ್ಲದೆ ಜೀವನ ಜೀವಹೋದ ದೇಹದಂತೆ

ಶೂನ್ಯವಾಗಿ ಬಿಡುತ್ತದೆ. ಆದುದರಿಂದ ಮಾನವನಿಗೆ ರಚನೆಯು ಅನಿವಾರ್ಯವಾಗಿದೆ. ಸಮಾಜದಲ್ಲಿ ಜೀವಿಸುವ ಮಾನವರು ಕೂಡಿಕೊಂಡು ರಚಿಸಿಕೊಂಡಿರುವ ಸಾಮಾಜಿಕ ಸಂಬಂಧಗಳು ಸಾಮಾಜಿಕ ರಚನೆ ಎಂದೆನಿಸಿಕೊಂಡರೆ ರಚನೆ ಎಂದರೇನು? ಎಂಬುದನ್ನು ತಿಳಿಯುವುದು ಅವಶ್ಯವಾಗಿದೆ.

"ರಚನೆ' ಎಂಬ ಪದವು Structure ಎಂಬ ಆಂಗ್ಲ ಅನುವಾದವಾಗಿದೆ. ಇದರ ಅರ್ಥ ವಿವಿಧ ಭಾಗಗಳ ನಡುವಿನ ಕ್ರಮಬದ್ಧವಾದ ಜೋಡಣೆ ಎಂದರ್ಥ. ಒಂದು ಕಟ್ಟಡಕ್ಕೆ ರಚನೆಯಿದೆ, ಒಂದು ವಾಕ್ಯದಲ್ಲಿ ರಚನೆಯಿದೆ, ಸಂಗೀತದಲ್ಲಿ ರಚನೆಯಿದೆ, ಪ್ರಾಣಿಗೂ ಒಂದು ರಚನೆಯಿದೆಯೊ ಹಾಗೂ ಸಮಾಜಕ್ಕೂ ಒಂದು ರಚನೆ ಇದೆ."[1] ಈ ರೀತಿಯ ರಚನೆಯನ್ನು ತಿಳಿಯಬೇಕಾದರೆ ಮೊದಲು ಆ ಸಮಾಜವನ್ನು ಚೆನ್ನಾಗಿ ಅಭ್ಯಾಸಿಸಬೇಕಾಗುತ್ತದೆ. ತದನಂತರ ಬೇರೆ ಬೇರೆಯಾಗಿ ನೋಡಿ ಹೋಲಿಸಿ ತಿಳಿಯಬೇಕಾಗುತ್ತದೆ. ಉದಾಹರಣೆ ಒಂದು ಕಟ್ಟಡ ಕಟ್ಟಲು ಪರಿಕರಗಳಾದ ಕಲ್ಲು, ಮಣ್ಣು, ಕಬ್ಬಿಣ, ನೀರು, ಸಿಮೆಂಟ್, ಕಟ್ಟಿಗೆ, ಗಾಜು ಇತ್ಯಾದಿಗಳೆಲ್ಲವೂ ಅತ್ಯವಶ್ಯಕವಾಗಿದೆ. ಇವೆಲ್ಲ ಇದ್ದರೂ ಕೂಡ ಕಟ್ಟಡ ಆಗಲಾರದು ಅವುಗಳು ಯಾವ ಯಾವ ಹಂತದಲ್ಲಿ ಯಾವ ಯಾವ ಪ್ರಮಾಣದಲ್ಲಿ ಹೇಗೆ, ಎಲ್ಲಿ, ಜೋಡಿಸಬೇಕೆಂಬುದನ್ನು ಆಲೋಚನಾ ಕ್ರಮದಿಂದ ಜೋಡಿಸಬೇಕಾಗುತ್ತದೆ. ಆಗ ಅದು ಒಂದು ರಚನೆ ಎಂದೆನಿಸಿಕೊಳ್ಳುತ್ತದೆ.

ವಿಜ್ಞಾನದ ಅಂಗ ರಚನಾಶಾಸ್ತ್ರದಲ್ಲಿ ಕ್ರಮಬದ್ಧವಾದ ಜೋಡಣೆಗೆ ರಚನೆ ಎಂಬ ಅರ್ಥವನ್ನು ನೋಡಬಹುದಾಗಿದೆ. "೧೬ನೇ ಶತಮಾನದಲ್ಲಿ ಅಖಂಡ ವ್ಯವಸ್ಥೆ ಭಾಗಗಳ ನಡುವಿನ ಪರಸ್ಪರ ಸಂಬಂಧ ಸೂಚಿಸಲು ಈ ಪದವನ್ನು ಉಪಯೋಗಿಸುತ್ತಿದ್ದರು."[2] ಆದರೆ ೧೮೫೦ರ ನಂತರ ಹರ್ಬರ್ಟ್ ಸ್ಪೆನ್ಸರ್ ಎಂಬ ಸಮಾಜಶಾಸ್ತ್ರ ತತ್ವಜ್ಞಾನಿಯು ರಚನೆ ಎಂಬ ಪದಕ್ಕೆ ಹೊಸ ಅರ್ಥಕೊಟ್ಟು, ಸಮಾಜ ಶಾಸ್ತ್ರದಲ್ಲಿ ಅಳವಡಿಸಿದನು. ಅಂದಿನಿಂದ ಸಮಾಜಶಾಸ್ತ್ರದಲ್ಲಿ ಈ ಪದವು ಜನಪ್ರಿಯವಾಯಿತು. ಈ ಪದವನ್ನು ಜೈವಿಕ ಹೋಲಿಕೆಗಳಿಂದ ಪ್ರಭಾವಿತವಾಗಿ ರಚನೆಯ ಪದವನ್ನು ಸಮಾಜ ಮತ್ತು ಜೈವಿಕ ಶರೀರದಲ್ಲಿ ಹೋಲಿಸಿ, ತನ್ನದೆ ಆದ ಹೊಸ ವಿಷಯ ಮಂಡಿಸಿದನು. ಮಾನವನ ಶರೀರವು ಹೇಗೆ ಒಂದಕ್ಕೊಂದು ಬೆಸೆದುಕೊಂಡು ವಿಕಾಸಗೊಳ್ಳುತ್ತದೆಯೊ ಅದೆ ರೀತಿಯಾಗಿ ಸಮಾಜವು ಒಂದಕ್ಕೊಂದು ಬೆಸೆದುಕೊಂಡು ವಿಕಾಸಗೊಳ್ಳುತ್ತದೆ ಎಂಬುದನ್ನು ತೋರಿಸಿಕೊಟ್ಟನು.

ಕಟ್ಟಡ ರಚನೆಯಲ್ಲಿ ಪರಿಕರಗಳ ಮೂಲಕ ಜೋಡಣೆಯಾದರೆ ಸಮಾಜದಲ್ಲಿ ವ್ಯಕ್ತಿಗಳ ಮೂಲಕ ಜೋಡಣೆಯಾಗಿದೆ. ಸಾಮಾಜಿಕ ಜೀವನದಲ್ಲಿ ಅಂತಸ್ತು, ಬದಲಾವಣೆ, ಚಲನೆ ಹಾಗೂ ಸ್ಥಾನಮಾನ ಬದಲಾದರೂ ಎಂದಿನಂತೆಯೆ ಕಾರ್ಯನಿರ್ವಹಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಉದಾಹರಣೆ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು ವಿಧ್ಯಾರ್ಥಿಗಳಿಬ್ಬರ ಸಂಬಂಧದಲ್ಲಿ ತಮಗೆ ನಿಯೋಜಿತ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವರ ಅವಧಿ ಮುಗಿದ ಮೇಲೆ ಅಲ್ಲಿಂದ ನಿರ್ಗಮಿಸುತ್ತಾರೆ ಮತ್ತೆ ಹೊಸ ವಿದ್ಯಾರ್ಥಿಗಳು ಹೊಸ ಅಧ್ಯಾಪಕರು ಬರುತ್ತಾರೆ. ಉದ್ದೇಶ ಮಾತ್ರ ಹಾಗೆಯೆ ಇರುತ್ತದೆ. ಉದಾ: ರಾಜಕೀಯ ಸಮೂಹ, ಧಾರ್ಮಿಕ, ಕಾರ್ಮಿಕ ಸಮೂಹವನ್ನು ನೋಡಬಹುದು. ಹೇಗೆ

ಮಾನವಶರೀರವು ತನ್ನ ರಚನೆಯನ್ನು ಕಾಯ್ದುಕೊಳ್ಳುತ್ತದೆಯೊ ಸಮಾಜವು ತನ್ನ ರಚನೆಯನ್ನು ಕಾಯ್ದುಕೊಳ್ಳುತ್ತದೆ. ಪಾತ್ರಗಳನ್ನು ನಿರ್ವಹಿಸುವ ವ್ಯಕ್ತಿಗಳು ಅಥವಾ ಸದಸ್ಯರು ಬದಲಾದರು ಪಾತ್ರ ನಿರ್ವಹಣೆ ಹಾಗೆಯೆ ಮುಂದುವರಿಯುತ್ತಿರುತ್ತದೆ. ಈ ತೆರನಾಗಿ ವಿಶ್ಲೇಷಣೆಗೊಂಡು ಸಮಾಜಶಾಸ್ತ್ರದಲ್ಲಿ ಸಾಮಾಜಿಕ ಹೊಸ ಛಾಪನ್ನು ಮೂಡಿಸಿದೆ. ಸಾಮಾಜಿಕ ಸಂಗತಿಗಳನ್ನು ವಿಶ್ಲೇಷಿಸಲು ಮಾನವಶಾಸ್ತ್ರಜ್ಞರು ಸಾಮಾಜಿಕ ರಚನೆಯ ಪರಿಕಲ್ಪನೆಯನ್ನು ಹೊರಗೆಳೆದರು. ೧೮೫೦ ರಿಂದಲೂ ಸಾಮಾಜಿಕ ರಚನೆಗೆ ವಾದ-ವಿವಾದಗಳಿವೆ. ಇಲ್ಲಿಯತನಕವೂ ಸಾಮಾಜಿಕ ರಚನೆಯು ಸ್ಪಷ್ಟವಾದ ವ್ಯಾಖ್ಯಾನವನ್ನು ಪಡೆದು ಕೊಂಡಿಲ್ಲ. ಆದರೆ ಸಾಮಾಜಿಕ ರಚನೆಯು ಸಾಮಾಜಿಕ ಜೀವನದಲ್ಲಿ ಅನಿವಾರ್ಯವೆಂದೆನಿಸಿದೆ. ವಿವಿಧ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಜ್ಞರು ಸಾಮಾಜಿಕ ರಚನೆಯ ಬಗ್ಗೆ ತಮ್ಮದೆ ಆದ ವಿಚಾರಗಳನ್ನು ನೀಡಿದ್ದಾರೆ.

ಹರ್ಬರ್ಟ್ ಸ್ಪೆನ್ಸರ್ : ಮಾನವನ ಪಂಚೇಂದ್ರಿಯಗಳಿಂದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಹಾಗೂ ಮೊದಲಾದ ಪರಸ್ಪರ ಅಂಗಗಳೊಂದಿಗೆ ಸಂಬಂಧವನ್ನು ಹೊಂದಿಕೊಂಡಿದೆ. ಹಾಗೂ ಜೈವಿಕ ರಚನೆಯಾಗಿದೇ ಅದರಂತೆ ಸಮಾಜವು ಕುಟುಂಬ, ವಿವಾಹ, ಆರ್ಥಿಕತೆ, ಧರ್ಮ, ರಾಜ್ಯ ಇತ್ಯಾದಿ ಪರಸ್ಪರ ಸಂಕೀರ್ಣ ಅಂಗಗಳೊಂದಿಗೆ ಸಂಬಂಧ ಬೆಳೆಸಿಕೊಂಡು ಸಮಗ್ರ ರಚನೆಯಾಗಿದೆ. ಮತ್ತು ಪ್ರತಿಯೊಂದು ಅಂಗಕ್ಕೂ ತನ್ನದೆ ಆದ ನಿರ್ದಿಷ್ಟ ಕಾರಣ ಮತ್ತು ಕಾರ್ಯಗಳು ಇರುತ್ತವೆ.

೧. ಸಮಾಜ ಮತ್ತು ಮಾನವ ಶರೀರ ಬೆಳವಣಿಗೆ ಹೊಂದುತ್ತವೆ. ಉದಾ: ಮಗು ದೊಡ್ಡದಾಗುವುದು, ಹಳ್ಳಿ ಪಟ್ಟಣವಾಗುವುದು.

೨. ಗಾತ್ರದಲ್ಲಿ ಸಮಾಜ ಮತ್ತು ಶರೀರ ಸಂಕೀರ್ಣಗೊಳ್ಳುತ್ತವೆ.

೩. ಬೆಳೆದಂತೆ ಅದರ ಕಾರ್ಯಗಳು ಹೆಚ್ಚುತ್ತವೆ.

೪. ಶರೀರ ಹೇಗೆ ತನಗೆ ತಾನೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಲ್ಲದೊ ಅದೆ ತೆರನಾಗಿ ಸಮಾಜ ತನ್ನದೆ ಆದ ಕಾರ್ಯಗಳನ್ನು ನಿರ್ವಹಿಸುತ್ತದೆ.

ಭೇದಗಳು

೧. ಅವಯವಗಳು ಶರೀರದ ಭಾಗಗಳಾಗಿವೆ ಆದರೆ ಸಮಾಜದ ಅಂಗಗಳು ಸ್ವತಂತ್ರವಾಗಿವೆ.

೨. ಅವಯವಗಳಲ್ಲಿ ವೈಚಾರಿಕತೆ ಕಡಿಮೆ ಆದರೆ ಸಮಾಜದಲ್ಲಿ ವಿಚಾರ ಶಕ್ತಿ ಹೆಚ್ಚಿರುತ್ತದೆ.

೩. ಜೀವಿಯ ಅಂಗಗಳು ನಿರ್ದಿಷ್ಟ ಕ್ರಿಯೆಗಳಿಗೆ ಒಳಪಟ್ಟಿರುತ್ತವೆ. ಆದರೆ ಸಮಾಜದ ಸಂಸ್ಥೆಗಳು ಒಳಪಟ್ಟಿರುವುದಿಲ್ಲ.

೪. ಶರೀರಕ್ಕೆ ಸಾವಿದೆ ಆದರೆ ಸಮಾಜಕ್ಕೆ ಸಾವಿಲ್ಲ.

ಹೀಗೆ ಸ್ಪೆನ್ಸರ್ ಶರೀರ ಮತ್ತು ಸಮಾಜದ ಹೋಲಿಕೆಗಳನ್ನು ಕೊಟ್ಟು ಆದರ ಮೂಲಕ ಸಾಮಾಜಿಕ ರಚನೆಯನ್ನು ಅರ್ಥೈಸಿದನು. ಆದರೂ ಕೊನೆಗೆ ಭೇದ ಗುರುತಿಸಿದ. ಸಾಮಾಜಿಕ ರಚನೆಗೆ ನಿಖರವಾದ

ನಿಲುವು ಹೇಳುವಲ್ಲಿ ಗೊಂದಲಕ್ಕೀಡಾದ. ಆದರೆ ಸಮಾಜದ ರಚನೆ ಇದೆ ಎಂಬುದನ್ನು ಸಾಬೀತು ಪಡಿಸಿರುವುದು ಶ್ಲಾಘನೀಯ.

ರ್‍ಯಾಡ್‌ಕ್ಲಿಪ್‌ಬ್ರೋನ್ : "ಸಾಂಸ್ಥಿಕ ನಿಯಮಗಳಿಂದ ರೂಪಿತವಾದ ಕ್ರಮಬದ್ಧವಾದ ಸಾಮಾಜಿಕ ಸಂಬಂಧಗಳಿಗೆ ಅಥವಾ ವ್ಯಕ್ತಿಗಳ ಕ್ರಮಬದ್ಧವಾದ ಜೋಡಣೆಯನ್ನು ಸಾಮಾಜಿಕ ರಚನೆ ಎಂದು ಕರೆದರು."[3] ಅಂದರೆ ಜನರ ನಡುವೆ ವಾಸ್ತವಿಕವಾಗಿರುವ ಸಾಮಾಜಿಕ ಸಂಬಂಧಗಳ ಬಲೆಯನ್ನು ಸಾಮಾಜಿಕ ರಚನೆ ಎನ್ನಬಹುದು ಎಂದಿದ್ದಾರೆ. ಇವರ ದೃಷ್ಟಿಯಲ್ಲಿ ರಚನೆಯು ಏಣಿ-ಶ್ರೇಣಿಯ ಮೂಲಕ ಜೋಡಣೆಯಾಗಿರುವುದನ್ನು ಕಾಣುತ್ತೇವೆ.

ಉದಾ: ವಾಕ್ಯಕ್ಕೆ, ವಸ್ತುವಿಗೆ ಮತ್ತು ಪ್ರಾಣಿಗೆ ರಚನೆ ಇರುವುದನ್ನು ಕಾಣಬಹುದು. ಕ್ರಮವಾದ ರಚನೆಯನ್ನು ಬೇರೆ ಬೇರೆ ಮಾಡಿದರೂ ಭಾಗಗಳೂ ಒಂದಕ್ಕೊಂದು ಅಂಟಿಕೊಂಡಿರುತ್ತವೆ. ಉದಾಹರಣೆ ದೇಹದ ಯಾವುದೆ ಒಂದು ಭಾಗ ತೆಗೆದರೆ ಇಡಿ ಶರೀರ ತನ್ನ ಕೆಲಸ ಕಾರ್ಯಗಳನ್ನು ಕಡಿತಗೊಳಿಸುತ್ತದೆ. ಅಥವಾ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತದೆ. ಪರಿಣಾಮ ಕೆಲಸ ಕಾರ್ಯಗಳು ಸ್ಥಗಿತಗೊಳ್ಳುವುದರ ಜೊತೆಗೆ ದೇಹದ ಮೇಲೆ ದುಷ್ಪರಿಣಾಮಗಳು ಬೀರುತ್ತದೆ. ಆದುದರಿಂದ ಯಾವುದೆ ಕಾರ್ಯ ನಿರ್ವಹಿಸಬೇಕಾದರೆ, ಅದಕ್ಕೆ ತನ್ನದೆ ಆದ ರಚನೆ ಬೇಕಾಗುತ್ತದೆ. ಇಲ್ಲಿ ವ್ಯಕ್ತಿಗಳು ಕೇವಲ ಶರೀರವಲ್ಲ ಪಡೆದಿರುವ ಪಾತ್ರಗಳು ತುಂಬಾ ಮಹತ್ವದಾಗಿವೆ. ಉದಾಹರಣೆ ಕುಟುಂಬದಲ್ಲಿ ಅಣ್ಣ-ತಮ್ಮ, ಅಕ್ಕ-ತಂಗಿ ಇರುತ್ತಾರೆ ಅಂದರೆ ಇಲ್ಲಿ ಎಲ್ಲರೂ ವ್ಯಕ್ತಿಗಳೆ ಅವರ ಪಾತ್ರಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ. ಆದ್ದರಿಂದ ವ್ಯಕ್ತಿಗಳನ್ನು ಕ್ರಮಬದ್ಧವಾಗಿ ಸಂಘಟಿಸಬೇಕಾದುದು ಅಗತ್ಯವಾಗಿದೆ. ದೇಹ ಹೇಗೆ ಬೆಳವಣಿಗೆಯ ಹಂತಗಳಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಯನ್ನು ಕಾಣುತ್ತವೆಯೊ, ಅದೆ ರೀತಿಯಾಗಿ ರಚನೆಯಲ್ಲಿ ಬದಲಾವಣೆ ಕಾಣುವುದು ಸಾಧ್ಯವಾಗಿದೆ. ಉದ್ದೇಶ ಮಾತ್ರ ಒಂದೆಯಾಗಿರುತ್ತದೆ. ಅದರ ಮಾದರಿ ಮುಂದುವರಿಯುತ್ತದೆ. ಉದಾ: ತಂದೆ ಕುಟುಂಬದಲ್ಲಿ ಧೀನವಾದರೂ ಮಕ್ಕಳು ಯಾವ ಕಾರ್ಯನಿರ್ವಹಿಸಬೇಕೊ ಆ ಕಾರ್ಯನಿರ್ವಹಿಸುತ್ತಾರೆ. ಇಲ್ಲಿ ಸಂಘ-ಸಂಸ್ಥೆಗಳು ಉದ್ದೇಶ ಮತ್ತು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ರಚನೆಯು ಈ ಕೆಳಗಿನ ಅಂಶಗಳ ಮೂಲಕ ಸಂಘಟನೆಗೊಂಡಿರುತ್ತದೆಂದು ತಿಳಿಸುತ್ತಾರೆ.

೧. ರಚನೆಯು ವಿವಿಧ ಭಾಗಗಳಿಂದ ನಿರ್ಮಾಣ.

೨. ವಿವಿಧ ಭಾಗಗಳೊಂದಿಗೆ ಕ್ರಮಬದ್ಧವಾದ ಸಂಘಟನೆಯಿರಬೇಕು.

೩. ಏಣಿ-ಶ್ರೇಣಿ ವ್ಯವಸ್ಥೆಯು ಕಡ್ಡಾಯ.

೪. ಎಲ್ಲಾ ಭಾಗಗಳ ನಡುವೆ ಅನೂನ್ಯ ಸಂಬಂಧಗಳಿರುತ್ತವೆ.

೫. ಮಾನವನ ಮಧ್ಯ ಪ್ರಭೇದ.

೬. ಪ್ರಾದೇಶಿಕ ಕಲ್ಪನೆಯ ಮೇಲೆ ಆಧಾರಿತವಾಗಿ ರಚಿತಗೊಂಡಿರುತ್ತದೆ.

೭. ಇದು ಚಲಿಸುತ್ತಿರುತ್ತದೆ.

ಹೀಗೆ ಸಾಮಾಜಿಕ ರಚನೆಯು ವೈವಿಧ್ಯಮಯವಾದ ಪಾತ್ರಗಳನ್ನು ನಿರ್ವಹಿಸಲು ಕ್ರಮಬದ್ಧವಾದ ರಚನೆಯಾಗಿದೆ ಎಂಬುದನ್ನು ರ್‍ಯಾಡ್‌ಕ್ಲಿಫ್‌ಬ್ರೋನ್ ತಿಳಿಸುತ್ತಾರೆ.

ನ್ಯಾಡಲ್ ಎಸ್.ಎಫ್. : ಸಾಮಾಜಿಕ ರಚನೆಯ ಬಗ್ಗೆ ನ್ಯಾಡಲ್‌ರವರ ಕೊಡುಗೆಯು ಬಹು ಅಪರೂಪವಾದದ್ದು. ಏಕೆಂದರೆ ಇವರ ವಾದ ಇತರರಿಗಿಂತಲೂ ವಿಶೇಷವಾಗಿದೆ. ಕ್ರಮಬದ್ಧ ಜೋಡಣೆಯು ಬದಲಾಗುತ್ತಿದ್ದರು ಮಾಡುವ ಕೆಲಸ ಕಾರ್ಯಗಳು ಸ್ಥಿರವಾಗಿರುತ್ತವೆ. ಅವು ಈ ಕೆಳಗಿನಂತಿವೆ.

೧. ಸಾಮಾಜಿಕ ವ್ಯವಸ್ಥೆ ಮತ್ತು ಸಂಘಟನೆಗಳ ಸಂಬಂಧಗಳು ಅನಿವಾರ್ಯವಾಗಿವೆ.

೨. ಸಾಮಾಜಿಕ ಸಂಬಂಧಗಳು ಅಂತಃಕ್ರಿಯೆ ಮಾದರಿಗಳಾಗಿವೆ.

೩. ವ್ಯಕ್ತಿಗಳ ಸಂಬಂಧವು ಅಂತರಸಂಬಂಧವಾಗಿರುತ್ತವೆ.

೪. ಸಾಮಾಜಿಕ ಸಂಸ್ಥೆಗಳಿಗೆ ಪರಿಸರ ಮುಖ್ಯವಾಗಿರುತ್ತದೆ.

ಈ ಮೇಲಿನ ಅಂಶಗಳು ಸಾಮಾಜಿಕ ರಚನೆಯನ್ನು ಸಂಘಟಿಸಲು ಬೇಕೆಬೇಕು. ಸಂಘಟಿಸುವಾಗ ಬದಲಾವಣೆ ಆಗಬಹುದಾದರೂ ರಚನೆಯು ಎಂದಿನಂತೆಯೆ ಮುಂದುವರಿಯುತ್ತದೆ. ಏಕೆಂದರೆ ಸಮಾಜ ದಲ್ಲಿ ಜನರು ಸುತ್ತು ವಾಸಿಸುವ ಪ್ರದೇಶ, ಆಚರಿಸುವ ನಿಯಮಗಳು, ವರ್ತನೆಗಳು ಇತ್ಯಾದಿಗಳ ಮೂಲಕ ರಚನೆಯು ತನ್ನ ಅಸ್ಥಿತ್ವ ಕಾಪಾಡಿಕೊಳ್ಳುತ್ತದೆ. ಇಂತಹ ನಿಯಮಗಳು ಆ ರಚನೆಗೆ ಸಹಾಯಕ ವಾಗಿವೆ.

ಮೆರಿಯನ್ ಜೆ. ಲೈವ್ : ಯಾವುದೆ ಒಂದು ರಚನೆಯಾಗಿದೆ ಎಂದರೆ, ಅಲ್ಲಿ ಕಾರ್ಯದ ಅವಶ್ಯಕತೆಯಿಂದ ಆಗಿರುತ್ತದೆ ಎಂದು ತಿಳಿಯಬೇಕೆಂದು ಹೇಳುತ್ತಾರೆ. ಯಾವುದೆ ಕಾರ್ಯಗಳನ್ನು ಪೂರೈಸಬೇಕಾದರೂ ಒಂದು ಕ್ರಮಬದ್ಧವಾದ ರಚನೆ ಬೇಕಾಗುತ್ತದೆ. ಆ ರಚನೆ ಇಲ್ಲದಿದ್ದರೆ ಆ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ಇಂತಹ ಕಾರ್ಯಕ್ಕೆ ಅನುಕೂಲವಿದ್ದರೆ ಅದನ್ನು 'Structure' ಎಂತಲೂ ಅದರಿಂದ ಅಡಚಣೆಯಾದರೆ Dis-Structure ಎಂತಲೂ ಕರೆಯಬಹುದು. ಏಕೆಂದರೆ ಯಾವುದೆ ಒಂದು ಸಾಮಾಜಿಕ ವ್ಯವಸ್ಥೆ ಕಾಪಾಡುವ ಅಂಶವನ್ನು ಯುಪಂಕ್ಷನ್ ಎಂತಲೂ ಅದರಿಂದ ಹಾನಿಯಾದರೆ ಡಿಸ್‌ಪಂಕ್ಷನ್ ಎಂದು ಹೇಳಬಹುದು. ಒಂದು ಸಾಮಾಜಿಕ ರಚನೆಯು ಅಗತ್ಯವಾಗಿ ೧. ರಚನೆಯಲ್ಲಿರುವ ಅಂಶ ಯಾವುವು ೨. ಕಾರ್ಯಗಳ ಪರಿಣಾಮಗಳಾವುವು ೩. ಯಾವ ಕಾರ್ಯಗಳು ನಡೆಯುತ್ತವೆ ಎಂಬುದನ್ನು ತಿಳಿಯಬೇಕಾಗುತ್ತದೆ. ಈ ಅಂಶಗಳೆ ರಚನೆಯ ದಿಕ್ಸೂಚಿ. ಒಂದು ಸಮಾಜ ನಾಶವಾಗಬೇಕಾದರೆ ಕೆಲವೊಂದು ಅಂಶಗಳು ಕಾರಣವಾಗಿವೆ.

೧. ನಾಶ ಹೊಂದುವುದು ಇಲ್ಲಿ ಸದಸ್ಯರನ್ನು ಹೊರ ಹಾಕುವುದರಿಂದ

೨. ಎಲ್ಲರೂ ಎಲ್ಲರಲ್ಲಿಯೂ ಯುದ್ಧ ಮಾಡಿ ನಾಶ ಹೊಂದುವುದರಿಂದ

೩. ತಮ್ಮ ಮೂಲ ಸಮಾಜ ಬಿಟ್ಟು ಬೇರೊಂದು ಸಮಾಜದಲ್ಲಿ ಸೇರುವುದು

೪. ಮಾನವರ ಉದಾಶೀನತೆಯಿಂದ ಸಮಾಜ ಸಂಪೂರ್ಣವಾಗಿ ನಾಶವಾಗುತ್ತದೆ.

ಸಂಬಂಧ ಮುಂದುವರಿಯಬೇಕಾದರೆ

೧. ಲೈಂಗಿಕ ಅವಶ್ಯಕತೆ ಪೂರೈಸಲು - ಕುಟುಂಬ ರಚನೆ.

೨. ಪಾತ್ರಗಳ ಹೊಂದಾಣಿಕೆ ಮತ್ತು ವೈವಿಧ್ಯತೆಯಲ್ಲಿ ಏಕತೆ.

೩. ಒಬ್ಬರಿಗೊಬ್ಬರು ಸಂಪರ್ಕ ಹೊಂದುವುದು.

೪. ಗುರಿ ಮತ್ತು ಜ್ಞಾನದಲ್ಲಿ ಸಮಾನತೆ.

೫. ಸಾಮಾಜೀಕರಣಗೊಳಿಸುವಿಕೆ ಜೈವಿಕತೆಯಿಂದ ಸಾಮಾಜಿಕತೆಗೆ ಪೋಷಿಸುವುದು.

೬. ಯಾವುದೆ ಸದಸ್ಯರು ಸಮಾಜದಲ್ಲಿ ಧಕ್ಕೆ ಮಾಡಿದರೆ ನಿಯಂತ್ರಿಸುವುದು. ಹೀಗೆ ಸಮಾಜವು ಕಳಕೊಂಡದ್ದನ್ನು ಪುನಃ ಪಡೆಯಬೇಕಾದರೆ ಅಗತ್ಯವಾಗಿ ಮೇಲಿನ ಅಂಶಗಳು ಬೇಕೇ ಬೇಕು. ಆದ್ದರಿಂದಲೆ ಸಾಮಾಜಿಕ ರಚನೆ ಮತ್ತು ಸಾಮಾಜಿಕ ಕಾರ್ಯಗಳು ಒಂದು ನಾಣ್ಯದ ಎರಡು ಮುಖಗಳು ಎಂದಿದ್ದಾರೆ. ಕಾರ್ಯಕ್ಕೆ ರಚನೆ ಬೇಕು, ರಚನೆಗೆ ಕಾರ್ಯಗಳ ಪ್ರೋತ್ಸಹ ಬೇಕು.

ಕ್ಲಾಡ್ ಲೆವಿಸ್ಟ್ರಾಸ್ : ಇವರು ಮುಖ್ಯವಾಗಿ ಆದಿವಾಸಿಗಳ ಬಂಧುತ್ವ ವ್ಯವಸ್ಥೆ ಮತ್ತು ಅವರ ಪುರಾಣಗಳ ಬಗ್ಗೆ ಅಧ್ಯಯನ ಮಾಡಿದರು. ಆ ಮೂಲಕ ಆದಿವಾಸಿಗಳ ಕುಲ ಪದ್ಧತಿಯ ವ್ಯವಸ್ಥೆ ಗುರುತಿಸಿದರು. ಅವರು ಆದಿವಾಸಿಗಳ ಕುರಿತು ತಮ್ಮದೆ ಆದ ಸ್ಪಷ್ಟ ತಿಳುವಳಿಕೆಯಿದೆ ಎಂಬ ನಿಲುವು ತಾಳಿದರು.

ಸಾಮಾಜಿಕ ರಚನೆಯನ್ನು ಮಾದರಿಗಳ ಮೂಲದಿಂದ ಸಾಮಾಜಿಕ ಸಂಬಂಧಗಳನ್ನು ಅರ್ಥಮಾಡಿ ಕೊಂಡು, ಪರಿಹಾರ ಕಂಡುಕೊಳ್ಳಬೇಕೆಂದರು. ಇವರ ಪ್ರಮುಖ ವಾದವೆಂದರೆ ಸಾಮಾಜಿಕ ರಚನೆಗೆ ಸಾಮಾಜಿಕ ಸಂಬಂಧಗಳೆ ಕಾರಣವಾಗಲಾರವು ಆ ರಚನೆಗೆ ತನ್ನದೆಯಾದ ಸತ್ಯತೆ ಮತ್ತು ಬದ್ಧತೆಯಿದೆ. ಏಕೆಂದರೆ ಇಂದಿನ ಕುಟುಂಬಗಳು ಉಪಯೋಗಿಸುವ ಸಂಕೇತಗಳು ಈ ಹಿಂದೆ ಪ್ರಾಣಿ ಮತ್ತು ನೈಸರ್ಗಿಕ ವಸ್ತುಗಳಿಂದ ಉಗಮಗೊಂಡಿವೆ. ಈ ರೀತಿಯ ಸಂಕೇತಗಳೆ ಮುಂದೆ ಸಂಬಂಧಗಳನ್ನು ಬೆಸೆಯಲು ಸಹಾಯಕವಾದವು. ಏಕೆಂದರೆ ಆದಿವಾಸಿಗಳ ಕಟ್ಟು ಕಥೆಗಳನ್ನು ಸೂಕ್ಷ್ಮವಾಗಿ ವಿಚಾರಿಸಿದಾಗ ಕಂಡು ಬರುವವು. ಆದುದರಿಂದ ಇಂದಿನ ಸಾಮಾಜಿಕ ರಚನೆಗೆ ಮುಖ್ಯ ಕಾರಣ ನಿಯಮ ಅಥವಾ ಸಂಕೇತಗಳು ಕಾರಣವಾಗಿವೆ. ಇವು ಸಾಂದರ್ಭಿಕವಾಗಿ ರಚನೆಗೊಂಡಿರುತ್ತವೆ. ಈ ಎರಡು ಸತ್ಯಗಳಾದ ೧. ಅಬ್‌ಸ್ಟ್ರಾಕ್ಟ್ ಸತ್ಯಾಂಶ (ಗಹನ) ೨. ಕಾಂಕ್ರಿಟ್ ಸತ್ಯಾಂಶ (ಪ್ರತ್ಯೆಕ್ಷ) ಸತ್ಯಗಳು ಸಾಮಾಜಿಕ ರಚನೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ ಎಂದಿದ್ದಾರೆ.

ಮಾರ್ಟಿನ್ ಆರ್.ಕೆ. : ಇವರು ಸಾಮಾಜಿಕ ರಚನೆಗೆ ತಮ್ಮದೆ ಕೊಡುಗೆ ನೀಡಿದ್ದಾರೆ. ೧೯೩೫ರಲ್ಲಿ ಮೊಟ್ಟಮೊದಲ ಬಾರಿಗೆ Social Structure and Ahomo ಎಂಬ ಸಿದ್ಧಾಂತ ಮಂಡಿಸಿದರು. ಸಾಮಾಜಿಕ ರಚನೆಯು ಬದಲಾವಣೆಯಾಗುವುದಕ್ಕೆ ಮುಖ್ಯಕಾರಣ ವ್ಯಕ್ತಿ ಮತ್ತು ಅವನ ಪ್ರಕ್ರಿಯೆಗಳಲ್ಲಿ ಸಾಮಾಜಿಕ ಕ್ರಿಯೆ ಮತ್ತು ಪರಿವರ್ತನೆ ಕಾರಣವಾಗುತ್ತವೆ. ಅವು ಈ ಕೆಳಗಿನಂತಿವೆ,

೧. ಸಾಮಾಜಿಕ ರಚನೆ ಮತ್ತು ಸಾಮಾಜಿಕ ಜೀವನದಲ್ಲಿ ವ್ಯತ್ಯಾಸ.

೨. ಸಾಮಾಜಿಕ ಅಂತಸ್ತಿನ ಮೂರು ರೂಪಗಳಲ್ಲಿ ವ್ಯತ್ಯಾಸ.

೩. ಸಾಮಾಜಿ ರಚನೆಯು ವಿವಿಧ ರೂಪಿಕೆ ಪಡೆದಿರುತ್ತದೆ.

ಸಾಮಾಜಿಕ ರಚನೆ : ಸಾಮಾಜಿಕ ರಚನೆ ಎಂದರೆ ವಿವಿಧ ವ್ಯಕ್ತಿಗಳನ್ನೊಳಗೊಂಡ ವ್ಯವಸ್ಥೆ ಇದು. ಅಮೂರ್ತ ರೂಪದ್ದು. ವ್ಯವಸ್ಥಿತವಾದ ಸಂಬಂಧಗಳನ್ನು ಒಳಗೊಂಡಿದೆ. ನಾವು ಇವುಗಳನ್ನು ಊಹಿಸಿಕೊಳ್ಳಬಹುದೆ ವಿನಹ, ಕಣ್ಣಿನಿಂದ ನೋಡುವುದಾಗಲಿ ಅಥವಾ ಮುಟ್ಟುವುದು ಅಸಾಧ್ಯ.

ಸಾಮಾಜಿಕ ಜೀವನ : ಇದು ಕಣ್ಣಿಗೆ ಕಾಣುತ್ತಿದ್ದು ಮೂರ್ತರೂಪಡೆದಿದೆ. ಇವು ನೈಜ ಸನ್ನಿವೇಶಗಳನ್ನು ಒಳಗೊಂಡಿರುತ್ತವೆ. ಚೆನ್ನಾಗಿ ನೋಡುವ ಮೂಲಕ ಪರಿಶೀಲಿಸಬಹುದು. ಸಾಮಾಜಿಕ ರಚನೆಯಲ್ಲಿ ಸಾಮಾಜಿಕ ಸಂಬಂಧಗಳು ಒಂದು ದೊಡ್ಡ ಬಲೆಯಾಗಿದ್ದರು ಕೂಡ, ಸಂಬಂಧಗಳು ಏರ್ಪಟ್ಟಾಗ ಕ್ರಿಯೆ-ಪ್ರಕ್ರಿಯೆಯಾಗಿ ಕಂಡುಬಂದಾಗ ಸಾಮಾಜಿಕ ಜೀವನವಾಗುತ್ತದೆ. ಆದರೆ ಜೀವನ ಕಣ್ಣಿಗೆ ಕಾಣುತ್ತದೆ. ರಚನೆ ಕಣ್ಣಿಗೆ ಕಾಣುವುದಿಲ್ಲ. ಆದ್ದರಿಂದ ರಚನೆ ಮತ್ತು ಜೀವನ ಒಂದು ನಾಣ್ಯದ ಎರಡು ಮುಖಗಳೆಂದು ಹೇಳುತ್ತಾರೆ.

ಜನರು ಹೊಂದಿರುವ ಅಂತಸ್ತುಗಳಿಂದ ರಚನೆಯು ನಿರ್ದಿಷ್ಟ ವ್ಯಕ್ತಿಗಳಿಂದ ತುಂಬಲ್ಪಟ್ಟಿರುತ್ತದೆ. ಉದಾಹರಣೆ ಡಾಕ್ಟರ್, ವಿದ್ಯಾರ್ಥಿ, ತಂದೆಯ ಸ್ಥಾನ ಇವುಗಳನ್ನು ಎಲ್ಲರೂ ತುಂಬಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಂದು ಅಂತಸ್ತು ಕೂಡ ಒಂದು ಮೈಲುಗಲ್ಲಾಗಿದೆ. ಆದುದರಿಂದ ಆ ಜನರು ಯಾವ ಬಗೆಯ ಸಂಬಂಧಗಳನ್ನು ಹೊಂದಿದ್ದಾರೆ ಎಂಬುದನ್ನು ಅಂತಸ್ತುಗಳು ತಿಳಿಸಿಕೊಡುತ್ತವೆ. ಡಾಕ್ಟರ್ ಸ್ಥಾನದಲ್ಲಿ ರೋಗಿಯ ಯೋಗಕ್ಷೆಮ, ದಯಾಳು ಗುಣ ಕಾಣಬೇಕಾಗಿದೆ ಮತ್ತು ಇದಕ್ಕೆ ಅರ್ಹತೆಯ ಅಗತ್ಯತೆಯಿದೆ. ಹಾಗೆಯೆ ವಿದ್ಯಾರ್ಥಿಯು ವಿದ್ಯಾಸಂಸ್ಥೆಯ ನೀತಿ ನಿಯಮಗಳಿಗೆ ಒಳಪಟ್ಟು, ತನ್ನ ಕರ್ತವ್ಯಗಳನ್ನು ನಿರ್ವಹಿಸಿ ಹಕ್ಕುಗಳನ್ನು ಕೇಳಬೇಕಾಗುತ್ತದೆ. ತಂದೆಯು ಕುಟುಂಬದ ಜವಬ್ದಾರಿಯುತ ಸದಸ್ಯನಾಗಿ ಇತರೆ ಸದಸ್ಯರ ಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರಿ ತನ್ನ ಕಾರ್ಯಗಳನ್ನು ನಿಭಾಯಿಸಬೇಕಾಗುತ್ತದೆ.

ಸಾಮಾಜಿಕ ರಚನೆಯು ವಿವಿಧ ರೂಪಗಳು : ಸಾಮಾಜಿಕ ರಚನೆಯಲ್ಲಿ ಪ್ರತಿಯೊಬ್ಬ ಸದಸ್ಯನು ಭಿನ್ನರೀತಿಯ ಅಂತಸ್ತುಗಳನ್ನು ಹೊಂದಿರುತ್ತಾರೆ. ಆ ಅಂತಸ್ತುಗಳ ಮೂಲಕವೆ ತನ್ನ ರಚನೆ ಕಟ್ಟಿಕೊಂಡಿರುತ್ತಾರೆ. ಈ ಕೆಳಗಿಂತೆ ಮೂರು ರೂಪಗಳು,

೧. ನಿಯಮತೆ

೨. ಅನುಕೂಲತೆ

೩. ಆದರ್ಶ ರೂಪ

೧. **ನಿಯಮತೆ :** ಪ್ರತಿಯೊಂದು ಸಮುದಾಯದಲ್ಲಿ ಒಂದು ಅಂತಸ್ತು ಇದ್ದೆ ಇರುತ್ತದೆ. ಇವು ತನ್ನದೆ ಆದ ನೀತಿ ನಿಯಮಗಳನ್ನು ಹೊಂದಿರುತ್ತದೆ. ಅದರ ಅಗತ್ಯಕ್ಕೆ ತಕ್ಕಂತೆ ನಿಯಮಗಳ ಮೂಲಕ ವರ್ತಿಸಬೇಕು ಇಲ್ಲಿ ಪಾತ್ರಗಳು ಮೇಳೈಸಿಕೊಂಡಿರುತ್ತವೆ. ವ್ಯಕ್ತಿಯೊಬ್ಬ ಒಂದು ಅಂತಸ್ತನ್ನು ಪಡೆಯುವ ಮೂಲಕ ಪಾತ್ರಗಳೊಡನೆ ಸಂಬಂಧ ಹೊಂದಿರುತ್ತಾನೆ. ಪಾತ್ರಗಳು ಎಂದರೆ ಸಮಾಜವು ವ್ಯಕ್ತಿಯ ಅಂತಸ್ತಿಗೆ ತಕ್ಕಂತೆ ಹೇಗೆ ನಡೆದುಕೊಳ್ಳಬೇಕು ಎಂದು ತಿಳಿಸುತ್ತದೆ. ಉದಾ: ತಂದೆ-ತಾಯಿ ಇವರ ಸಂಬಂಧಗಳು ಹೇಗಿವೆ? ಹೇಗಿರಬೇಕು? ಯಾವ ನಿಯಮ ಅನುಸರಿಸಬೇಕು? ಎಂದು ತಿಳಿಸುತ್ತದೆ.

೨. **ಅನುಕೂಲತೆ :** ಪಾತ್ರಗಳಿಗೆ ತಕ್ಕಂತೆ ಅನುಕೂಲತೆ ಪಡೆಯುವುದು.

೩. **ಆದರ್ಶರೂಪ :** ನಿಯಂತ್ರಣ ಮತ್ತು ಕಾರ್ಯ ಚಟುವಟಿಕೆಗಳನ್ನು ತಿಳಿಸುವ ದೀವಿಗೆಗಳಾಗಿವೆ. ಹೀಗೆ ಸಾಮಾಜಿಕ ರಚನೆಗೆ ನೀತಿ-ನಿಯಮಗಳು ಬೆಸೆದುಕೊಂಡಿವೆ. ಇಲ್ಲಿಯ ತನಕ ರಚನೆ ಮತ್ತು ಸಾಮಾಜಿಕ ರಚನೆಯ ರಚನಾತ್ಮಕತೆಯ ಅನಿವಾರ್ಯತೆ, ಸಾಧಕ ಭಾದಕ ಮತ್ತು ಈ ರಚನೆಯ ಬಗ್ಗೆ ಮಾನವ ಮತ್ತು ಸಮಾಜಶಾಸ್ತ್ರಜ್ಞರ ವಿಭಿನ್ನ ಅಭಿಪ್ರಾಯಗಳನ್ನು ತಿಳಿದುಕೊಂಡೆವು. ಇವರು ಹೇಳುವ ಕೊನೆಯ ಮಾತು "ರಚನೆಯಿಲ್ಲದೆ ಮಾನವ ಸಂಬಂಧಗಳಿಲ್ಲ". ಎಲ್ಲ ಸಮುದಾಯಗಳಲ್ಲಿಯೂ ಸಾಮಾಜಿಕ ರಚನೆಯನ್ನು ಗುರುತಿಸಬಹುದು. ಕೆಲವೊಂದರಲ್ಲಿ ಭಿನ್ನತೆ ಕಾಣಬಹುದಾದರೂ ಕೆಲವೊಂದು ಗುಣಗಳು ಇರಲೇ ಬೇಕಾಗುತ್ತದೆ ಎಂದಿದ್ದಾರೆ.

ಅದರಂತೆ ಅಲೆಮಾರಿಗಳ ಸಾಮಾಜಿಕ ರಚನೆಯು ಯಾವ ತರಹದ್ದು? ಯಾವ ಯಾವ ಅಂಶಗಳ ಮೂಲಕ ರಚನೆಯನ್ನು ರಚಿಸಿಕೊಂಡಿದ್ದಾರೆ? ಆ ರಚನೆಗೆ ಮೌಲ್ಯಗಳ ಕೊಡುಗೆಗಳೇನು? ಸಾಮಾಜಿಕ ರಚನೆಗೆ ಮೌಲ್ಯಗಳು ಅನಿವಾರ್ಯವೆ? ಎಂಬುದನ್ನು ತಿಳಿಯಬೇಕಾಗುವುದು. ಎಲ್ಲಾ ಸಮುದಾಯಗಳಲ್ಲೂ ಇರುವಂತೆ ಅಲೆಮಾರಿಗಳಲ್ಲೂ ಸಾಮಾಜಿಕ ರಚನೆ ಇರುತ್ತದೆ ಎಂಬುದನ್ನು ಮೇಲ್ನೋಟದಲ್ಲಿ ಕಾಣಬಹುದಾದರು. ಒಳಹೊಕ್ಕು ನೋಡಿದಾಗ ನೆಲೆನಿಂತ ಮತ್ತು ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಭಿನ್ನತೆಯನ್ನು ಗುರುತಿಸಬಹುದು.

೩.೧.೧. ಅಲೆಮಾರಿಗಳ ಸಾಮಾಜಿಕ ರಚನೆಯ ಸ್ವರೂಪ

ಮಾನವಶಾಸ್ತ್ರ ಮತ್ತು ಸಮಾಜಶಾಸ್ತ್ರಜ್ಞರ ಅಭಿಪ್ರಾಯದಂತೆ ಪ್ರತಿಯೊಂದು ಸಮುದಾಯಗಳಲ್ಲೂ ಸಾಮಾಜಿಕ ರಚನೆ ಇರುತ್ತದೆ. ಅದರಂತೆ ಅಲೆಮಾರಿಗಳಲ್ಲಿ ಒಂದು ಸಾಮಾಜಿಕ ರಚನೆಯಿದೆ. ಅಲೆಮಾರಿಗಳ ಸಾಮಾಜಿಕ ರಚನಾವ್ಯವಸ್ಥೆಯಲ್ಲಿ ಸಂಬಂಧಗಳು, ತುಂಬ ಗಟ್ಟಿಯಾಗಿವೆ. ಪ್ರತಿಯೊಬ್ಬ ಸದಸ್ಯರ ನಡುವೆ ಸಾಮರಸ್ಯವಿದ್ದು ಹಿರಿಯ ಕಿರಿಯರ ನಡುವೆ ಅನೂನ್ಯವಾದ ಸಂಬಂಧಗಳು ನೆಂಟರ ಬಗ್ಗೆ ಗೌರವಧಾರಗಳು, ಗಂಡ-ಹೆಂಡತಿ ನಡುವೆ ಪ್ರೇಮ-ಭಾವಗಳು ಹಾಗೂ ಸಮಾನ ಸ್ಥಾನಮಾನಗಳು ಇರುವುದರಿಂದ ಒಂದೊತ್ತು ಗಂಜಿಯಾದರು ದೊರೆಯುತ್ತದೆ. ಏಕೆಂದರೆ ಪುರುಷರಷ್ಟೆ ದುಡಿಮೆಯ ಕೇಂದ್ರವಾಗದೆ ಸ್ತ್ರೀಯರಿಗೂ ಸಮಾನತೆ ಮತ್ತು ಸ್ವಾತಂತ್ರ ಕೊಟ್ಟಿದ್ದರಿಂದ ದುಡಿಮೆಯಲ್ಲಿ

ಸಹಭಾಗಿತ್ವವಿದೆ. ಆದುದರಿಂದ ಹೊರಗಡೆ ಹೋಗಿ ದುಡಿಯುವವರಾಗಿದ್ದಾರೆ. ಆದರೂ ಅಲೆಮಾರಿಗಳಲ್ಲಿ ಅದೇಕೊ ಒಂದು ರೀತಿಯ ಅಸಹಜವಾದ ವ್ಯವಸ್ಥೆ ಇದೆ. ಅದೆಂದರೆ ಬಹುಪತ್ನಿತ್ವವನ್ನು ಹೊಂದಿರಲೆ ಬೇಕೆಂದು, ಇಲ್ಲವಾದರೆ ನಮ್ಮ ವಂಶದಲ್ಲಿ ಅವಮಾನವೆಂದು ತಿಳಿಯುತ್ತಾರೆ. ಇದರಿಂದ ಇಬ್ಬರ ಹೆಂಡಿರ ನಡುವೆ ಜಗಳವಾಗಿ ಸಂಸಾರಗಳೂ ವಿಘಟನೆಗೊಳ್ಳುವ ಮುನ್ಸೂಚನೆಗಳು ಹೆಚ್ಚು. ಇವರ ಸಾಮಾಜಿಕ ರಚನಾ ವ್ಯವಸ್ಥೆಯಲ್ಲಿ ಏಣಿ-ಶ್ರೇಣಿ ವ್ಯವಸ್ಥೆಯಿದ್ದರು ಸಮಯ ಬಂದಾಗ ಸಂಘಟಿತರಾಗಿ ತಮ್ಮ ಸಮುದಾಯಗಳ ನಿಯಮವನ್ನು ಪಾಲಿಸುತ್ತಾರೆ. ಪ್ರತಿ ಸದಸ್ಯರಿಗೂ ಸ್ವತಂತ್ರ ಕೊಟ್ಟಿದ್ದಾರೆ. ಅಗತ್ಯ ಇದ್ದಾಗ ನಿಯಂತ್ರಿಸುತ್ತಾರೆ. ಸಂಚಾರಿ ಬದುಕಿನಲ್ಲಿ ಸಾಮಾಜಿಕ ರಚನೆಯು ಸಂಚಾರಿಯಾಗಿಯೆ ಮುನ್ನಡೆದಿದೆ. ನೆಲೆನಿಂತ ಸಮುದಾಯಗಳು ವೈಭವದ ಜೀವನ ಕನಸು ಕಂಡರೆ ಅಲೆಮಾರಿಗಳು ಒಂದೊತ್ತಿನ ಊಟಕ್ಕೂ, ಕನಸನ್ನು ಕಾಣದೆ, ಬದುಕಿನೊಂದಿಗೆ ಹೋರಾಟ ಮಾಡುತ್ತಿದ್ದಾರೆ. ಇಂತಹ ಸಮುದಾಯಗಳು ಈ ಕೆಳಗಿನ ಅಂಶಗಳ ಮೂಲಕ ಸಾಮಾಜಿಕ ರಚನೆಯನ್ನು ಹೆಣೆದು ಕೊಂಡಿದ್ದಾರೆ.

೩.೧.೨. ಅಲೆಮಾರಿಗಳ ಸಾಮಾಜಿಕ ರಚನೆಯ ಲಕ್ಷಣಗಳು

ವ್ಯಕ್ತಿ-ವ್ಯಕ್ತಿಗಳ ನಡುವೆ ಸಂಬಂಧ ಬೆಸೆಯುವಿಕೆ

ಸಮುದಾಯಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗಳ ನಡುವೆ ಸಂಬಂಧಗಳು ಏರ್ಪಟ್ಟಿರುತ್ತವೆ. ಸಂಬಂಧಿಕ ರಲ್ಲದೆ ಬೇರೆ ಹೊರಗಿನ ವ್ಯಕ್ತಿಗಳೂ ಈ ಸಮುದಾಯದಲ್ಲಿರುವುದಿಲ್ಲ. ಸಂಬಂಧಿಕರ ಮಧ್ಯ ಸಂಬಂಧಗಳು ಬೆಸೆದುಕೊಂಡಿರುತ್ತವೆ. ಉದಾ: ತಂದೆ-ಮಗ, ತಾಯಿ-ಮಗಳು, ಅಣ್ಣ-ತಮ್ಮ, ಅಕ್ಕ-ತಂಗಿ ಹೀಗೆ ಸಂಬಂಧ ಗಳು ಇಂದು ಮತ್ತು ಮುಂದೆಯೂ ಎಂದೆಂದಿಗೂ ಮುಂದುವರಿಯುವವು. ಕುಟುಂಬಗಳು ಒಡೆದರು, ಹೊಸ ಸಂಬಂಧಗಳೊಂದಿಗೆ ಮತ್ತೆ ಹೊಸ ರೂಪ ಪಡೆದುಕೊಂಡು ಕುಟುಂಬದ ನೀತಿ ನಿಯಮಗಳಿಗನು ಗುಣವಾಗಿ ಕೆಲಸ ಕಾರ್ಯಗಳು ಮುಂದುವರಿಯುವು.

ವಿವಾಹವ ಕೇವಲ ಗಂಡ-ಹೆಂಡತಿಯರ ಸಂಬಂಧಗಳಾಗಿರದೆ, ಎರಡು ಕುಟುಂಬಗಳ ಸಂಬಂಧ ವಾಗಿರುತ್ತದೆ. ಇಂತಹ ಸಂಬಂಧಗಳು ಶಾಶ್ವತ ಸಂಬಂಧಗಳಾಗಿರುತ್ತವೆ. ಕುಟುಂಬದಲ್ಲಿ ಸಮುದಾಯದ ಸದಸ್ಯರೆ ಇರುತ್ತಾರೆಯೆ ಹೊರತು, ಬೇರೊಂದು ಕುಟುಂಬದ ಸದಸ್ಯರು ಇರಲು ಇಷ್ಟಪಡುವುದಿಲ್ಲ. ವ್ಯಕ್ತಿ ವ್ಯಕ್ತಿಗಳ ನಡುವೆ ಆರಂಭಗೊಂಡ ಗಂಡ-ಹೆಂಡತಿಯ ಸಂಬಂಧ ಎರಡು ಕುಟುಂಬಗಳ ಸಂಬಂಧವಾಗಿ ರೂಪಾಂತರ ಪಡೆಯಬಹುದೆ ವಿನಹ ನೇರವಾಗಿ ಬೇರೊಂದು ಕುಟುಂಬದ ಸದಸ್ಯರು ಇರಲಾರರು.

ವ್ಯಕ್ತಿ-ವ್ಯಕ್ತಿಗಳ ನಡುವೆ ವ್ಯತ್ಯಾಸ

ಒಂದೆ ಕುಟುಂಬದಲ್ಲಿ ಬದುಕುತಿದ್ದರು ಒಂದೆ ತೆರನಾದ ಸಂಸ್ಕೃತಿ ಜೀರ್ಣಿಸಿಕೊಂಡರು ವ್ಯಕ್ತಿ ವ್ಯಕ್ತಿಗಳ ನಡುವೆ ವ್ಯತ್ಯಾಸವನ್ನು ಕಾಣುತ್ತೇವೆ. ಉದಾ: ಲಿಂಗ ಸಂಬಂಧ ತೆಗೆದುಕೊಂಡರೆ ಸ್ತ್ರೀ-ಪುರುಷರ ನಡುವೆ ವ್ಯತ್ಯಾಸವಿದೆ. ಇವರಿರ್ವರು ತಮಗೆ ನಿಯೋಜಿತವಾದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ವೈವಿಧ್ಯಮಯ ಪಾತ್ರ ಮತ್ತು ಕರ್ತವ್ಯ ಹಾಗೂ ಜವಬ್ದಾರಿಗಳಿರುತ್ತವೆ.

ಆದರೂ ಸ್ತ್ರೀ-ಪುರುಷರಿಬ್ಬರು ಕೂಡಿ ಕುಟುಂಬಕ್ಕೆ ಶ್ರಮಿಸುವುದನ್ನು ಕಾಣುತ್ತೇವೆ. ಇವರಲ್ಲಿ ಯಾರು ಮೇಲಲ್ಲಾ; ಯಾರು ಕೀಳಲ್ಲ ಇಬ್ಬರ ನಡುವೆ ಸಮಾನತೆ ಕಾಣುತ್ತೇವೆ. ಜೈವಿಕವಾಗಿ ಮಾತ್ರ ವ್ಯತ್ಯಾಸ ಗುರುತಿಸಬಹುದಾಗಿದೆ. ಉಳಿದಂತೆ ಸಂಬಂಧಗಳಲ್ಲಿ ವ್ಯತ್ಯಾಸಗಳಿರುವುದಿಲ್ಲ.

ಸಹಕಾರ

ಮಾನವನ ಇಡಿಯ ಜೀವನವು ಸಹಕಾರದ ಮೇಲೆ ನಿಂತಿದೆ. ಏಕೆಂದರೆ ಒಂಟಿಯಾಗಿ ನಿಲ್ಲುವ ಬಲ ಯಾರಿಗೂ ಇಲ್ಲ, ಸಮುದಾಯಕ್ಕೆ ಅಂಟಿಕೊಂಡರೆ ಬಲವೆ ಎಲ್ಲ ಒಂಟಿತನದ ಬದುಕು ಬದುಕೆ ಅಲ್ಲ. ದಿನ ನಿತ್ಯವು ಬೇಕು ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸಹಕಾರ ಅಗತ್ಯವಾಗಿದೆ.

ಸಹಾಕರವೆಂದರೆ ಒಟ್ಟಿಗೆ ಸೇರಿ ಅಥವಾ ಕೂಡಿಕೊಂಡು ಬಾಳುವುದು ಎಂಬರ್ಥ ಕೊಡುತ್ತದೆ. ಒಂದು ಜೀವಿಗೆ ಮತ್ತೊಂದು ಜೀವಿಯ ಅವಶ್ಯಕತೆ ಇದೆ ಹಾಗೂ ಇರಲೆಬೇಕಾಗಿದೆ. ಇಂದಿನ ಮಾನವ ಸಂತತಿ ಮುಂದುವರಿದು ಇಲ್ಲಿಯ ತನಕ ಮತ್ತು ಮುಂದೆಯು ಮುಂದುವರಿಯಬೇಕಾದರೆ ಸಹಕಾರದಿಂದ ಮಾತ್ರ. ಸ್ತ್ರೀ-ಪುರುಷರಿಬ್ಬರು ಸಹಕಾರದ ಅಡಿಯಲ್ಲಿಯೆ ಕೂಡಿಕೊಂಡು ತಮ್ಮ ಬದುಕನ್ನು ಕಟ್ಟಿ ಕೊಳ್ಳುತ್ತಾರೆ. ಪರಿಣಾಮ ತಮ್ಮದೆ ಆದ ಕುಟುಂಬ ಜಾರಿಗೆ ಬರುವುದು. ಆ ಕುಟುಂಬ ಮೂಲಭೂತವಾದ ಅವಶ್ಯಕತೆಯನ್ನು ಪೂರೈಸುವುದು. ಗಂಡ-ಹೆಂಡತಿಯರಿಬ್ಬರ ದುಡಿಮೆಯ ಸಹಕಾರದಿಂದಲೆ ಮುನ್ನಡೆ ಯುವುದು.

ತಂದೆ-ತಾಯಿಗಳೊಂದಿಗೆ ಮಕ್ಕಳ ಸಂಬಂಧವೂ ಅಷ್ಟೆ ಮುಖ್ಯವೆನಿಸುತ್ತದೆ. ತಮ್ಮ ಕುಲಪದ್ಧತಿಯ ಕೆಲಸ ಕಾರ್ಯಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡು ಪ್ರೀತಿ ವಿಶ್ವಾಸಗಳಿಂದ ವರ್ತಿಸುತ್ತಾರೆ. ಆಕಸ್ಮಾತ್ ಯಾವುದಾದರೂ ಕೆಲಸ ಕಾರ್ಯಕ್ಕೈಗೊಂಡಾಗ ಮಕ್ಕಳು ಸಹಕರಿಸದಿದ್ದರೆ, ಕೆಲಸ ಕಾರ್ಯಗಳು ಸ್ಥಗಿತ ಗೊಂಡು ತಂದೆ-ತಾಯಿಯರಲ್ಲಿ ನಿರುತ್ಸಾಹ ಮೂಡುತ್ತದೆ. ಕಾರಣ ಅದರಿಂದ ಕುಟುಂಬದಲ್ಲಿ ಯಾವ ಸದಸ್ಯರೊಂದಿಗೆ ಯಾವ ಸದಸ್ಯರು ಹೇಗೆ ವರ್ತಿಸಬೇಕು? ವರ್ತನೆಗೆ ಇತರರ ಸಹಕಾರ ಹೇಗಿರಬೇಕೆಂಬು ದನ್ನು ಕುಟುಂಬವು ತಿಳಿಯಪಡಿಸುವುದು. ಆ ಕುಟುಂಬದ ಸದಸ್ಯರೊಂದಿಗೆ ಮಾತ್ರವಲ್ಲದೆ ತಮ್ಮವರೆ ಆದ ದೂರದ ಸಂಬಂಧಿಗಳ ಕೂಡ ನೆಂಟಸ್ಥಿಕೆಯ ಸಹಕಾರ, ಸಹೋದರ ಸಹಕಾರವು ಇರುವುದು. ಸಹಕಾರವನ್ನು ಯಾವುದೆ ಕಾರಣಕ್ಕೂ ದುರುಪಯೋಗಪಡಿಸಿಕೊಳ್ಳುವುದಿಲ್ಲ.

ಹೊಂದಾಣಿಕೆ

ಮಾನವ ಪ್ರಾಯೋಗಿಕ ಜೀವನದಲ್ಲಿ ಹೊಂದಾಣಿಕೆಯು ಅತಿ ಮಹತ್ವದ ಪಾತ್ರವಹಿಸುತ್ತದೆ. ಹೊಂದಾಣಿಕೆಯು ಮಾನವನ ಸಾಮಾಜಿಕ ಸಂಬಂಧಗಳನ್ನು ಬೆಸೆಯುತ್ತದೆ. ಆಕಸ್ಮಿಕವಾಗಿ ಸಂಘರ್ಷಗಳು ಸಂಭವಿಸಿದರೆ ಕುಟುಂಬ ಅಥವಾ ಸಂಬಂಧಗಳೆ ಭಗ್ನಗೊಳ್ಳುತ್ತವೆ. ಮತ್ತೆ ಮೊದಲಿನ ಸ್ಥಿತಿಗೆ ಮರುಳ ಬೇಕಾದರೆ ಹೊಂದಾಣಿಕೆಯು ಬೇಕಾಗಿದೆ. ಅಸಹಕಾರದ ವ್ಯಕ್ತಿಗಳನ್ನು ಕೂಡಿಸಿ ಏತಕ್ಕಾಗಿ ಸಂಘರ್ಷ ಏರ್ಪಟಿತು ಎಂದು ತಿಳಿದು ಇಬ್ಬರಿಗೂ ವಿಶ್ವಾಸ ಬರುವಂತೆ ತಿಳಿಹೇಳಿ, ಸ್ನೇಹದಿಂದ ಬೆಸುಗೆಗೊಳ್ಳುವಂತೆ ಅವರುಗಳ ಜೊತೆ ಸಹಕಾರದಿಂದ ಇರುವಂತೆ ಹೊಂದಾಣಿಕೆ ಮಾಡಲಾಗುತ್ತದೆ.

ಗಂಡ-ಹೆಂಡತಿಯರಲ್ಲಿ ವಿರಸ ಉಂಟಾಗಿ ವಿಚ್ಛೇದನ ಪಡೆಯಲು ಮುಂದಾದರೆ, ಕುಲದ ಮುಖಂಡರು ಇಬ್ಬರನ್ನು ಕರೆಸಿಕೊಂಡು ಸಮಸ್ಯೆಯನ್ನು ತಿಳಿದು ಇಬ್ಬರ ನಡುವೆ ಮನಸ್ತಾಪಗಳ ಬೇರುಗಳನ್ನು ಕಿತ್ತು, ಹಾಕಿ ಸಮಧಾನಕರ ಮಾತುಗಳನ್ನಾಡುತ್ತಾರೆ. ಸಹಕಾರ ಆ ಮೂಲಕ ಒಬ್ಬರು ಇನ್ನೊಬ್ಬರ ಮೇಲೆ ದೋಷಾರೋಪಣೆ ಮಾಡುವ ಬದಲು, ಹೊಂದಾಣಿಕೆಯಿಂದ ಹೊಂದಿಕೊಂಡು ಹೋಗಿರಿ ಎಂದು ತಿಳಿಸುತ್ತಾರೆ. ತಂದೆಯ ಮಾತನ್ನು ಮಗನು ಕೇಳದಿರಬಹುದು, ಅಂತಹ ಸಂದರ್ಭದಲ್ಲಿ ಮುಖಂಡರ ಮೂಲಕ ಹೊಂದಾಣಿಕೆಯಾಗುತ್ತದೆ. ಅಲೆಮಾರಿಗಳು ಬೀಡುಬಿಟ್ಟಿರುವ ಸ್ಥಳದಲ್ಲಿ ಇನ್ನಿತರ ಸಮುದಾಯ ಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ವಾಸಿಸಿ ಮತ್ತೆ ತಮ್ಮ ಮುಂದಿನ ಪ್ರಯಾಣವನ್ನು ಮಾಡುವರು. ಒಟ್ಟಾರೆಯಾಗಿ ಅಲೆಮಾರಿಗಳು ಸಾಮಾಜಿಕ ರಚನೆಯನ್ನು ಹೊಂದಾಣಿಕೆಯಿಂದ ರಚಿಸಿಕೊಳ್ಳುತ್ತಾರೆ.

ಸಮಾನ ಉದ್ದೇಶ ಮತ್ತು ಏಕತಾಭಾವನೆ

"ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಪ್ರೀತಿ ವಿಶ್ವಾಸಕ್ಕೆ ಬರವಿಲ್ಲ" ಎಂದು ತಿಳಿದುಕೊಂಡಿರುವವರಾದ ಅಲೆಮಾರಿಗಳು ಪರಸ್ಪರ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಾರೆ. ಹಸಿವನ್ನು ಹಿಂಗಿಸಿಕೊಳ್ಳುವುದೆ ಪ್ರಮುಖ ಉದ್ದೇಶವಾದದ್ದು. ಇದಕ್ಕಾಗಿ ಏನೆಲ್ಲಾ ಕಷ್ಟಗಳನ್ನು ಎದುರಿಸಿ ಒಂದೊತ್ತಿನ ಊಟ ದೊರೆತರೆ ಮತ್ತೊಂದು ಬಾರಿಗೆ ಸಿಗುತ್ತದೆಂದು ಹೇಳಲಾಗುವುದು. ಹಾಗೆಯೆ ಸಮುದಾಯದಲ್ಲಿ ಲಿಂಗ ತಾರತಮ್ಯವಿರಬಹುದು. ಆಪತ್ತು ಬಂದಾಗ ಸ್ವಂತ ನನಗೆ ಬಂದಿದೆ ಎಂದು ತಿಳಿದು ಬೇರೆಯವರ ಕಷ್ಟಗಳಲ್ಲಿ ಭಾಗಿಯಾಗುವರು. ತಮ್ಮ ವಿರುದ್ಧ ಯಾವ ಸಮುದಾಯವಾದರೂ ತೊಂದರೆ ಮಾಡುತ್ತದೆಂದರೆ ಜಾಗ್ರತರಾಗಿ ಅಲ್ಲಿಂದ ಜಾಗ ಖಾಲಿ ಮಾಡುತ್ತಾರೆ.

ಕುಲ ಅಥವಾ ಬಳ್ಳಿ ಆಧಾರದ ಮೇಲೆ

"ಕುಲ'ವೆಂದರೆ ವಂಶಾನುಕ್ರಮದ ಬಂಧುಗಳ ಸಂಬಂಧಗಳ ಆಧಾರದ ಮೇಲೆ ರಚಿತವಾಗಿರುತ್ತದೆ. ಸಮುದಾಯದ ಸದಸ್ಯರೆಲ್ಲರೂ ಕಾಲ್ಪನಿಕವಾದ ಪೂರ್ವಜರ ವಂಶಾವಳಿಯ ಜೊತೆಗೆ ಸಂಬಂಧವಿದೆ ಎಂದು ನಂಬುತ್ತಾರೆ."[4] ಇಲ್ಲಿ ಕುಲವನ್ನು ಮರ, ಬಳ್ಳಿ, ಪ್ರಾಣಿ, ಪಕ್ಷಿ ಕೆಲವೊಂದು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದರ್ಭಕ್ಕೆ ತಕ್ಕಂತೆ ರಚಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ "ಕುಲವು ಒಬ್ಬ ನಿರ್ದಿಷ್ಟ ಪೂರ್ವಜರಿಂದ ಉದ್ಭವಿಸಿದ ಸಂಬಂಧಿಕರ ಒಂದು ಸಮೂಹ". ವಂಶಾವಳಿಯನ್ನು ಮೂಲ ದಂಪತಿಗಳಿಂದ ಗುರುತಿಸಲಾಗುವುದು. ಒಮ್ಮೊಮ್ಮೆ ಕುಟುಂಬ ದೊಡ್ಡದಾಗಿ ಬೇರೆ ಬೇರೆಯಾದರೂ ತಮ್ಮ ಪೂರ್ವಜರು ಒಬ್ಬರೆ, ಅವರಿಂದ ಸೃಷ್ಟಿಯಾಗಿದ್ದೇವೆ ಎಂಬ ನಂಬಿಕೆ ಅಲೆಮಾರಿಗಳಲ್ಲಿದೆ.

ಕುಲದಲ್ಲಿ ಹೊರ ಬಾಂಧವ್ಯ ವಿವಾಹಕ್ಕೆ ಆಸ್ಪದ ಕೊಡುತ್ತದೆ. ಒಳಬಾಂಧವ್ಯ ವಿವಾಹಕ್ಕೆ ನಿಷೇಧವಿದೆ. ಏಕೆಂದರೆ ಒಂದು ಕುಲ ಅಥವಾ ಬಳ್ಳಿ ಉಳ್ಳವರೆಲ್ಲರೂ ಸಹೋದರ-ಸಹೋದರಿಯರೆಂಬ ಮನೋಭಾವ ಇದೆ. ಕುಲಗಳಲ್ಲಿ ಎರಡು ಪ್ರಕಾರ ಕಾಣಬಹುದು.

೧. ತಂದೆಯ ಕುಲ

೨. ತಾಯಿಯ ಕುಲ

೧. **ತಂದೆಯ ಕುಲ** : ಪುರುಷ ತಂದೆಯು ಕುಲದ ಮುಖಂಡ ಮತ್ತು ಮೂಲವಾಗಿರುತ್ತಾನೆ. ಇವರ ವ್ಯಾಪ್ತಿಯಲ್ಲಿ ಮಕ್ಕಳು ಸಹೋದರ, ಸಹೋದರಿಯರು ಮತ್ತು ಸಹೋದರರ ಮಕ್ಕಳು ಬರುತ್ತಾರೆ. ಆದರೆ ತಂದೆಯ ಸಹೋದರಿಯರ ಮಕ್ಕಳು ಇದರಲ್ಲಿ ಬರಲಾರರು.

೨. **ತಾಯಿಯ ಕುಲ** : ಸ್ತ್ರೀಯು ಕುಲದ ಮೂಲವಾಗಿದ್ದಾಳೆ. ಇವರ ವ್ಯಾಪ್ತಿಯಲ್ಲಿ ಆಕೆಯ ಮಕ್ಕಳು. ಸಹೋದರಿಯರು ಸೋದರರು ಮತ್ತು ಸಹೋದರಿಯರ ಮಕ್ಕಳು ಬರುತ್ತಾರೆ. ಆದರೆ ಸಹೋದರರ ಮಕ್ಕಳು ಬರಲಾರರು. ಒಂದೆ ರಕ್ತ ಸಂಬಂಧಗಳಿಂದ ಬಂದವರೆಲ್ಲ ಸಂಬಂಧಿಕರು. ಒಂದೆ ಕುಲ ಅಥವಾ ಬಳ್ಳಿಯಿಂದ ಬಂದವರೆಲ್ಲರೂ ಸಹೋದರರೆ ಅದುದರಿಂದ ಇವರ ಸಂಬಂಧವೂ ಸಹೋದರ ಸಂಬಂಧವಾಗಿರುತ್ತದೆ. ಆದ್ದರಿಂದ ಪರಸ್ಪರ ಕೊಡುಕೊಳ್ಳುವಿಕೆಗಳು ನಡೆಯಲಾರವು. ಬೆಸ ಬೆಡಗಿನಲ್ಲಿ ವಿವಾಹಕ್ಕೆ ಊನವಿಲ್ಲ.

ಉದಾ: ಸಿಂದ್ಯಾಲೋಳ್ - ಸಿಂದ್ಯಾಲೋಳ್ = ಸಮಬೆಡಗು
ಸಿಂದ್ಯಾಲೋಳ್ - ರಾವ್‌ಲೋಳ್ = ಬೆಸ ಬೆಡಗು

ಹೀಗೆ ಸಮ ಮತ್ತು ಬೆಸ ಬೆಡಗುಗಳನ್ನು ಕಾಣುತ್ತೇವೆ. ಪ್ರತಿಯೊಂದು ಮನೆತನಕ್ಕೂ ಒಂದು ನಿರ್ದಿಷ್ಟ ಹೆಸರಿರುತ್ತದೆ. ಇಂತಹ ಕುಲದ ವ್ಯವಸ್ಥೆಯಲ್ಲಿ ಅವರ ಸಹೋದರರು ಮಾತ್ರ ಶಾಶ್ವತವಾಗಿರ ಬಹುದೆ ವಿನಹಃ, ಬೇರೊಬ್ಬರು ಇರುವಂತಿಲ್ಲ. ಕೇವಲ ಅತಿಥಿಗಳಾಗಿ ಬಂದು ಹೊಗುತ್ತಾರೆ. ಆದ್ದರಿಂದ ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಕುಲ ತುಂಬಾ ಮಹತ್ವದ ಪಾತ್ರವಹಿಸುತ್ತದೆ.

ಏಣಿ-ಶ್ರೇಣಿ ವ್ಯವಸ್ಥೆ

ವೈವಿಧ್ಯತೆಯು ನಿಸರ್ಗದ ನಿಯಮವಾಗಿದೆ, ಅದರಂತೆ ಮಾನವರ ಸಮಾಜವೂ ವೈವಿಧ್ಯತೆಯಿಂದ ಕೂಡಿದೆ. ರೂಪ, ಗುಣ, ಕೆಲಸಕಾರ್ಯ, ಬೌದ್ಧಿಕತೆ ಇತ್ಯಾದಿಗಳಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಈ ವೈವಿಧ್ಯತೆಗೆ ತಕ್ಕಂತೆ ಕಾರ್ಯಗಳಲ್ಲಿ ಮತ್ತು ಸ್ಥಾನಮಾನಗಳಲ್ಲಿ ಏಣಿ-ಶ್ರೇಣಿ ವ್ಯವಸ್ಥೆಯನ್ನು ಕಾಣುತ್ತೇವೆ. ಇಲ್ಲಿ ದೊಡ್ಡವರು ಚಿಕ್ಕವರೆಂಬ ಏಣಿ-ಶ್ರೇಣಿ ಹಾಗೂ ಕೆಲಸ ಕಾರ್ಯಗಳಲ್ಲೂ ಏಣಿ-ಶ್ರೇಣಿಗಳಿರುತ್ತವೆ.

ಉದಾ: ೧. ಒಂದೇ ವೃತ್ತಿಯಲ್ಲಿ ತೊಡಗುವ ವೇಷಗಾರರ ಆಟದಲ್ಲಿ ತಂದೆಯು ಹಾರ್ಮೋನಿಯಂ ನುಡಿಸಿದರೆ, ಮಗನು ತಬಲ ನುಡಿಸುವನು. ಇನ್ನೊಬ್ಬನು ಆ ತಾಳ ಮತ್ತು ಲಯಕ್ಕೆ ತಕ್ಕಂತೆ ಹಾವ-ಭಾವಗಳನ್ನು ತೋರಿಸುತ್ತಾ ಅಭಿನಯಿಸುವನು.

೨. ಡೊಂಬರಲ್ಲಿ ಮಹಿಳೆಯು ನರ್ತನೆ ಹಾಗೂ ತಂತಿಯ ಮೇಲೆ ನಡೆದರೆ ಪುರುಷನು ಉಳಿದ ಕಸರತ್ತಿನಲ್ಲಿ ತೊಡಗುವನು. ಹೀಗೆ ಚಿಕ್ಕವರು ಮತ್ತು ದೊಡ್ಡವರು ತಮ್ಮ ಯೋಗತ್ಯೆಗೆ ತಕ್ಕಂತೆ ಸ್ಥಾನಮಾನ ಪಡೆದು ಸೀಮಿತವಾದ ಕಸುಬುಗಳಲ್ಲಿ ತೊಡಗುವರು.

ನಿರೀಕ್ಷೆಗಳು

ಯಾವುದೆ ಸಮುದಾಯಗಳಲ್ಲಿ ನಿರೀಕ್ಷೆಗಳನ್ನು ಕಾಣಬಹುದಾಗಿದೆ. ಕುಟುಂಬದ ಸದಸ್ಯರು ಹೀಗೆ ಇರಬೇಕು ಮತ್ತು ಇಂತಹ ನೀತಿ ನಿಯಮಗಳಿಗೆ ಬದ್ಧವಾಗಿ ವರ್ತಿಸಬೇಕೆಂಬ ಆಶಾ ಭಾವನೆ

ಹೊಂದಿರುವುದು ಸಹಜವಾಗಿದೆ. ಸದಸ್ಯನು ಯಾವ ತರಹದ ಕೆಲಸಗಳಲ್ಲಿ ಭಾಗಿಯಾಗಬೇಕು ಮತ್ತು ಭಾಗಿಯಾಗಬಾರದು ಎಂಬುದನ್ನು ನಿರೀಕ್ಷಿಸುತ್ತದೆ. ಕುಟುಂಬದ ಗೌರವಗಳನ್ನು ಉಳಿಸಲು ಸದಸ್ಯರು ನಿಯಮಪಾಲನೆ ಮಾಡಬೇಕು. ಕುಟುಂಬದಲ್ಲಿ ಸದಸ್ಯರೆಲ್ಲರಿಗೂ ಒಳಗೊಂಡಂತೆ ಸಾಮಾನ್ಯ ನಿಯಮಗಳಿರುತ್ತವೆ. ಆ ನಿಯಮಗಳ ಮೂಲಕ ಅನಿಸಿಕೆಗಳನ್ನು ಅನುಸರಿಸಬೇಕಾಗುತ್ತದೆ. ಇಂತಹ ಗುಣಗಳನ್ನೆ ಕೌಟುಂಬಿಕ ನಿರೀಕ್ಷೆಗಳೆಂದು ಕರೆಯಲಾಗಿದೆ.

ಆ ನಿರೀಕ್ಷೆಗೆ ಸದಸ್ಯರು ಸ್ಪಂದಿಸದಿದ್ದಾಗ ಆ ಕುಟುಂಬದ ಕಾರ್ಯ ಚಟುವಟಿಕೆಗಳಲ್ಲಿ ಅಸ್ತವ್ಯಸ್ತತೆ ಕಾಣುತ್ತೇವೆ. ಇಲ್ಲವೆ ಕಲಹಗಳು ಸಂಭವಿಸುತ್ತವೆ. ಅಲೆಮಾರಿಗಳ ನಿರೀಕ್ಷೆಗೂ ನೆಲೆನಿಂತಿವರ ನಿರೀಕ್ಷೆಗೂ ಭಿನ್ನತೆ ಇದೆ. ನೆಲೆನಿಂತವರೂ ನಮ್ಮ ಹುಡುಗ ಇಂಥ ಶಿಕ್ಷಣ ಪಡೆಯಬೇಕು ಇಂತಹದೆ ಕೆಲಸವನ್ನು ಮಾಡಬೇಕು, ರಾಜಕೀಯದಲ್ಲಿ ಸೇರಬೇಕು, ಸುಸಂಸ್ಕೃತನಾಗಬೇಕು, ಸರ್ಕಾರಿ ನೌಕರಿಯಲ್ಲಿರಬೇಕು, ಶ್ರೀಮಂತನಾಗಬೇಕು, ಇತರರು ನಮಗೆ ಗೌರವ ಕೊಡುವಂತೆ ಸರಿಸಮಾನರಾಗಿ ಸಮಾಜದಲ್ಲಿರಬೇಕೆಂದು ನಿರೀಕ್ಷೆಗಳಿರುತ್ತವೆ.

ಅಲೆಮಾರಿಗಳು ತಮ್ಮ ಸಮುದಾಯದ ವೃತ್ತಿ ಕಸುಬುಗಳಾದ ಡೊಂಬರಾಟವನ್ನೆ ಮುಂದುವರಿಸ ಬೇಕು. ಜನರನ್ನು ರಂಜಿಸಬೇಕು, ಸಮುದಾಯದಲ್ಲಿ ಒಳ್ಳೆಯ ಆಟಗಾರನೆಂಬ ಹೆಸರುಗಳಿಸಬೇಕು, ನಮ್ಮ ಹುಡುಗ ನನಗಿಂತ ಒಳ್ಳೆ ವೇಷಗಾರನಾಗಬೇಕು ಎಂಬಿತ್ಯಾದಿ ಕಸುಬುಗಳ ನಿರೀಕ್ಷೆಗಳಾದರೆ, ವೈವಾಹಿಕ ನಿರೀಕ್ಷೆಯು ಇರುತ್ತವೆ. ನಮ್ಮ ತಂಗಿಯ ಮಗಳನ್ನೆ ನನ್ನ ಮಗನಿಗೆ ಮಾಡಿಕೊಳ್ಳಬೇಕು. ಯಾವುದೆ ಕಾರಣಕ್ಕೂ ಬೇರೆ ಹುಡುಗಿ ನಮ್ಮ ಮನೆಯ ಸೊಸೆಯಾಗಿ ಬರಬಾರದೆಂಬ ನಿರೀಕ್ಷೆಗಳನ್ನಿಟ್ಟು ಕೊಂಡಿರುತ್ತಾರೆ. ಆದರೆ ಇದಕ್ಕೆ ವಿರೋಧವಾಗಿ ನಡೆದುಕೊಂಡರೆ ಮನ ಪರಿವರ್ತಿಸುತ್ತಾರೆ. ಅದು ಆಗದಿದ್ದಾಗ ಸಮುದಾಯದಿಂದ ಉಚ್ಚಾಟನೆ ಮಾಡುತ್ತಾರೆ.

ಸ್ಥಾನ-ಮಾನದಲ್ಲಿ ಚಲನೆ

ಸಮುದಾಯದಲ್ಲಿ ವ್ಯಕ್ತಿಯ ಸ್ಥಾನ-ಮಾನಗಳಲ್ಲಿ ಚಲನೆಯನ್ನು ಕಾಣಬಹುದಾಗಿದೆ. ಇದು ಅನಿವಾರ್ಯ ಏಕೆಂದರೆ ಸ್ಥಾನದಲ್ಲಿ ಸ್ಥಿರತೆ ಕಂಡುಕೊಳ್ಳುವುದು ಅಸಾಧ್ಯ. ಆಕಸ್ಮಾತ್ ಕಂಡುಕೊಂಡರೆ, ಸತ್ವಹೀನವಾಗಿ ಬಿಡುತ್ತದೆ. ಒಂದು ಸ್ಥಾನವನ್ನು ಹೊಂದಿದ ವ್ಯಕ್ತಿ ಅವನ ಅವಸಾನದ ನಂತರ ಆ ಸ್ಥಾನದಲ್ಲಿ ಮತ್ತೊಬ್ಬ ವ್ಯಕ್ತಿ ಬರಬೇಕಾಗುತ್ತದೆ. ಇಲ್ಲವಾದರೆ ಸಮುದಾಯದ ಕಾರ್ಯಚಟುವಟಿಕೆಗಳು ಸ್ಥಗಿತ ಗೊಳ್ಳುತ್ತವೆ. ಮೊದಲು ತಂದೆಯು ಆ ಸಮುದಾಯದ ಸಂಚಾಲಕನಾಗಿರುತ್ತಾನೆ. ಆತನ ಮರಣದ ನಂತರ ಆ ಸ್ಥಾನಕ್ಕೆ ಹಿರಿಯ ಮಗನು ಬರುವನು. ಆತನು ತಂದೆಯು ನಿರ್ವಹಿಸುತ್ತಿದ್ದ ಕೆಲಸ ಕಾರ್ಯ ಗಳನ್ನು ನಿರ್ವಹಿಸುತ್ತಾನೆ. ಚಲನೆ ಕಂಡುಬಂದರೂ ಮೂಲ ತತ್ವವು ಮಾತ್ರ ಎಂದಿನಂತೆಯೆ ಇರುತ್ತದೆ. ಸಂದರ್ಭ ಬಂದಾಗ ಸಮುದಾಯದ ಒಳಿತನ್ನು ಗಮನದಲ್ಲಿಟ್ಟುಕೊಂಡು ರೂಪಾಂತರವಾಗುತ್ತದೆ. ಹೀಗೆ ಅಲೆಮಾರಿಗಳೂ ತಮ್ಮ ಸ್ಥಾನಮಾನದಲ್ಲಿ ಚಲನೆಯನ್ನು ಕಾಣುತ್ತಾರೆ.

ಪ್ರಭೇದತೆ

ಪ್ರತಿಯೊಂದು ಸಮೂಹದಲ್ಲಿ ಪ್ರಭೇದತೆ ಕಾಣುತ್ತೇವೆ. ಇದು ಪ್ರಕೃತಿಯ ನಿಯಮ. ಹೇಗೆ ದೊಡ್ಡದು-ಚಿಕ್ಕದು; ಒಳ್ಳೆಯದು-ಕೆಟ್ಟದ್ದು ಎಂದು ಹೇಳುತ್ತವೆಯೊ ಮತ್ತೊಂದಡೆ ಅದರ ಗುಣ ಅಳತೆ ಮಾಡುತ್ತೇವೆ. ಒಂದು ಸಮುದಾಯದಲ್ಲಿ ಸದಸ್ಯರೆಲ್ಲರೂ ಒಂದೆ ರೀತಿಯಲ್ಲಿ ಕಂಡುಬರುವುದಿಲ್ಲ. ಇಲ್ಲಿ ತಂದೆ-ಮಗನ ನಡುವೆ ಪ್ರಭೇದ ಕಾಣಬಹುದು. ತಂದೆಯ ಕೆಲಸ ಕಾರ್ಯಗಳೆ ಬೇರೆ; ಮಗನ ಕೆಲಸ ಕಾರ್ಯಗಳೆ ಬೇರೆ ಆತನಿಗೆ ಸಿಗುವ ಗೌರವವೆ ಬೇರೆ; ಈತನಿಗೆ ಸಿಗುವ ಗೌರವವೆ ಬೇರೆ. ಹಾಗೆಯೆ ಸ್ತ್ರೀ ಮತ್ತು ಪುರುಷರಿಬ್ಬರಿಗೂ ಪ್ರಭೇದತೆಯನ್ನು ಗೌರವದಲ್ಲಿ ಮತ್ತು ಕೆಲಸದಲ್ಲೂ ಕಾಣುತ್ತೇವೆ.

ಕೌಟುಂಬಿಕ ವ್ಯವಸ್ಥೆಯ ಮೂಲಕ

ಒಂದು ಸಮಾಜವು ರೂಪತಾಳಬೇಕಾದರೆ ಕೌಟುಂಬಿಕ ವ್ಯವಸ್ಥೆಯು ಬೇಕಾಗಿದೆ. ಕೌಟುಂಬಿಕ ವ್ಯವಸ್ಥೆಯು ಎಲ್ಲಾ ಸಾಮಾಜಿಕ ಸಂಸ್ಥೆಗಳ ತಾಯಿಬೇರು. ಈ ಸಂಸ್ಥೆಯಿಂದ ಸದಸ್ಯರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾರೆ. ಕುಟುಂಬದಲ್ಲಿ ಭಗ್ನತೆ ಉಂಟಾದಾಗ ಸಮಾಜದ ಕಾರ್ಯ ಕಲಾಪಗಳು ಸ್ಥಗಿತಗೊಳ್ಳುವವು.

ಸಮುದಾಯ ತನ್ನ ಬಯಕೆ ಪೂರೈಸಿಕೊಳ್ಳಲು ಸ್ತ್ರೀ-ಪುರುಷರು ವಿವಾಹ ಬಂಧನದ ಮೂಲಕ ಕೂಡಿಕೊಂಡು ತಮ್ಮ ಲೈಂಗಿಕ ಬಯಕೆ ಈಡೇರಿಸಿಕೊಂಡು ಸಂತಾನಭಿವೃದ್ಧಿ ಕೈಗೊಳ್ಳುವರು. ಸಂತಾನದ ಪ್ರಾರಂಭ ಬೆಳೆಯುತ್ತದೆ. ಮಗು ಜನಿಸಿದ ನಂತರ ಕುಟುಂಬ ಲವಲವಿಕೆಯಿಂದ ಕಂಡುಬರುವುದುಂಟು. ಲಾಲನೆ-ಪಾಲನೆ ಸಮಯದಲ್ಲಿ ಇದನ್ನು ಪಡೆಯಲು ಆ ಕುಟುಂಬ ಕಂಕಣ ಬದ್ಧವಾಗಿ ದುಡಿಯುತ್ತದೆ. ಆ ಮೂಲಕ ಮತ್ತೊಂದು ಕುಟುಂಬದಲ್ಲಿ ಜೋಗುಳ ಹಾಡುತ್ತದೆ. ಇಂತಹ ಕುಟುಂಬಗಳು ಸದಸ್ಯರಿಗೆ ಕೇವಲ ಆಶ್ರಯ ತಾಣವಾಗಿರದೆ, ಪ್ರತಿಯೊಬ್ಬ ವ್ಯಕ್ತಿಗಳ ಮೇಲೆ ಜವಬ್ದಾರಿಯುತ ಪ್ರಭಾವ ಬೀರುತ್ತದೆ. ಪರಿಣಾಮ ಸಾಮಾಜಿಕ ರಚನೆಯನ್ನು ಬಿಗಿಯಾಗಿ ರೂಪಿಸುತ್ತದೆ.

ಪಾತ್ರಗಳ ಪೋಷಣೆ

ಸ್ತ್ರೀ-ಪುರುಷರಿಬ್ಬರೂ ಕುಟುಂಬದಲ್ಲಿ ತಮಗೆ ನಿಯೋಜಿತವಾಗಿರುವ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ಸಮುದಾಯದಲ್ಲಿ ನ್ಯೂನತೆ ಕಂಡುಬರುತ್ತದೆ. ಸ್ತ್ರೀಯರು ತಮಗೆ ಸಂಬಂಧಪಟ್ಟ ಕೆಲಸಗಳಾದ ಸ್ವಚ್ಛತೆ, ದುಡಿಮೆ, ಮನೆ ಕೆಲಸಗಳಾದ ಅಡಿಗೆ, ದವಸಗಳ ಸಂಗ್ರಹಣೆ, ಕಟ್ಟಿಗೆ ತರುವುದು, ಪಾತ್ರೆಗಳು ಮತ್ತು ಬಟ್ಟೆಗಳನ್ನು ಸ್ವಚ್ಛತೆಮಾಡುವುದು. ಒಟ್ಟಾರೆಯಾಗಿ ಸದಸ್ಯರೊಂದಿಗೆ ಸಹಬಾಳ್ವೆಯಿಂದ ತಮ್ಮ ಪಾತ್ರಕ್ಕೆ ತಕ್ಕಂತೆ ಪೋಷಣೆ ಮಾಡುತ್ತಾರೆ. ಇದರಂತೆ ಸ್ತ್ರೀ-ಪುರುಷರಿಬ್ಬರು ತಮ್ಮ ಕಾರ್ಯಗಳನ್ನು ಮಾಡುವ ಮೂಲಕ ಹೆಂಡತಿಗೆ ಗಂಡನಾಗಿ, ಮಗನಿಗೆ ತಂದೆಯಾಗಿ, ತಂದೆ-ತಾಯಿಗೆ ಮಗನಾಗಿ, ತಂಗಿ-ತಮ್ಮನಿಗೆ ಅಣ್ಣನಾಗಿ, ಅಣ್ಣ-ಅಕ್ಕರಿಗೆ ತಮ್ಮನಾಗಿ ವೈವಿಧ್ಯಮಯ ಪಾತ್ರಗಳನ್ನು

ಪೋಷಣೆ ಮಾಡುತ್ತಾ ಬರುವುದುಂಟು. ಹೀಗೆ ಅಲೆಮಾರಿಗಳೂ ತಮ್ಮ ಪಾತ್ರಕ್ಕೆ ತಕ್ಕಂತೆ ವರ್ತಿಸುವರು. ಪಾತ್ರಗಳ ಪೋಷಣೆಯು ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ.

ಸಾಮುದಾಯಿಕ ಮನೋಭಾವನೆ

ಸಾಮಾಜಿಕ ರಚನೆಯಲ್ಲಿ ಸಾಮುದಾಯಿಕ ಭಾವನೆಯು ಅತಿ ಮುಖ್ಯವಾಗಿರುತ್ತದೆ. ಇಲ್ಲಿ ನಾವು ನಮ್ಮವರು, ನನ್ನ ಜನ ಎಂಬ ಭಾವನೆಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ನಾವೆಲ್ಲರೂ ಒಂದೆ ಸಮುದಾಯದಲ್ಲಿ ಸೇರಿದವರು, ಇದು ನಮ್ಮ ಸಮುದಾಯವೆಂಬ ಮನೋಭಾವನೆಯೆ ಸಮುದಾಯಿಕ ಭಾವನೆಯಾಗಿದೆ. ಅಲೆಮಾರಿಗಳು ಪರಸ್ಪರ ಸುಖ-ದುಃಖಗಳಲ್ಲಿ ಭಾಗಿಯಾಗುತ್ತ ಹೊಸ ಆಸಕ್ತಿ ಒಲವುಗಳನ್ನು ಬೆಳೆಸುವುದರೊಂದಿಗೆ ಪರಸ್ಪರ ಆತ್ಮಿಯಭಾವನೆಯನ್ನು ಕಾಣಬಹುದಾಗಿದೆ. ಸಮಾನ ಅಭಿರುಚಿ, ದೃಷ್ಟಿಕೋನ, ಜೀವನಶೈಲಿ ಗಟ್ಟಿಯಾದ ಬೆಸುಗೆಯಿಂದ ಕೂಡಿದೆ. ಇದರಿಂದ ಮಾನಸಿಕವಾಗಿ ನೆಮ್ಮದಿಯಿಂದ ಇರುವುದು ಹಾಗೂ ಎಲ್ಲಿಯೆ ಹೋಗಲಿ ಅಲೆಮಾರಿಗಳು ಒಂದೆ ಕಡೆ ವಾಸಿಸುತ್ತಾರೆ. ಇದರಿಂದ ಆತ್ಮಬಲ ಮತ್ತು ಸ್ಥೈರ್ಯವು ವೃದ್ಧಿಯಾಗುತ್ತದೆ.

ಅಂತರಕ್ರಿಯೆ ಅಂತರ ಸಂಬಂಧಗಳು

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅರಳುವುದು ಅಂತರಕ್ರಿಯೆಯ ಮೂಲಕ. ಮಾನವನ ಸಮಸ್ತ ಚಟುವಟಿಕೆಗಳು ಅಂತರ ಕ್ರಿಯೆಯ ಆಧಾರವಾಗಿವೆ. ಏಕೆಂದರೆ ಒಂದು ಸಮೂಹ ಜೀವನದಲ್ಲಿ ಪರಸ್ಪರ ಅರಿವು ಬೇಕಾಗುವುದು. ಆ ಅರಿವು ಅಂತರಕ್ರಿಯೆ ಮತ್ತು ಅಂತರ ಸಂಬಂಧಗಳ ಮೂಲಕ ಏರ್ಪಡುತ್ತದೆ. ಸಮುದಾಯದಲ್ಲಿ ಒಬ್ಬ ವ್ಯಕ್ತಿಯು ಏನನ್ನು ಮಾಡಲಾರ, ಆತನು ಇತರರೊಂದಿಗೆ ಹೊಂದಾಣಿಕೆಯಾಗಬೇಕಾಗಿದೆ. ಸಹಕಾರ ಸ್ವಾಂಗಿಕರಣಗಳ ಮೂಲಕ ಹೊಂದಿಕೊಂಡರೆ, ಅವರುಗಳ ವ್ಯಕ್ತಿತ್ವ ಅರಳುತ್ತವೆ.

ಸ್ವಾಂಗೀಕರಣ

ಸ್ವಾಂಗೀಕರಣವೆಂದರೆ ಒಂದು ಸಮುದಾಯದ ಸಂಸ್ಕೃತಿಯನ್ನು ಬೇರೊಂದು ಸಮುದಾಯವು ಅಳವಡಿಸಿಕೊಳ್ಳುವುದು. ಇದು ಅಲೆಮಾರಿಗಳಲ್ಲಿ ಕಡಿಮೆಯೆಂದೆ ಹೇಳಬಹುದು. ಏಕೆಂದರೆ ಇಲ್ಲಿಯವರೆಗೆ ಅಲೆಮಾರಿಗಳು ತಮ್ಮವೆ ಆದ ಪ್ರತ್ಯೇಕ ಸಂಸ್ಕೃತಿಯೊಂದಿಗೆ ಜೀವನ ಮಾಡುತ್ತಾ ಬಂದಿದ್ದಾರೆ. ಆದರೆ ಪರಿಸರಕ್ಕೆ ಹಾಗೂ ಅಲ್ಲಿನ ಸಂಸ್ಕೃತಿಗೆ ಹೊಂದಿಕೊಂಡು ಇರುವಷ್ಟು ಕಾಲವಿದ್ದು ಮತ್ತೆ ಮುಂದಿನ ಸಂಸ್ಕೃತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಆದರೂ ತಮ್ಮ ಮೂಲ ಸಂಸ್ಕೃತಿಯನ್ನು ಕಳಚಿಕೊಳ್ಳಲಾರರು.

ಸಂಕೇತಗಳು

ಸಾಮಾಜಿಕ ರಚನೆಯಲ್ಲಿ ಸಂಕೇತಗಳ ಮಹತ್ವ ತುಂಬಾ ಪ್ರಭಾವಕಾರಿಯಾಗಿದೆ. ಆ ಸಂಕೇತಗಳು ಒಂದು ಸಮುದಾಯದಿಂದ ಮತ್ತೊಂದು ಸಮುದಾಯವನ್ನು ಬೆಸೆಯುವ ಅಂಶಲಕ್ಷ್ಮಿಯಾಗಿದೆ. ಸಂಕೇತಗಳು ಆಯಾ ಸಮುದಾಯಕ್ಕೆ ಅನ್ವಯಗೊಂಡಂತೆ ಅಳವಡಿಕೆಯಾಗಿರುತ್ತವೆ. ನೆಲೆನಿಂತ ಕೆಲವರಲ್ಲಿ ಕಾರು,

ಬಂಗಲೆ, ಎಸ್ಟೇಟುಗಳು, ಶ್ರೀಮಂತಿಕೆಯ ಸಂಕೇತಗಳಾದರೆ ಅಲೆಮಾರಿಗಳಿಗೆ ದೇವರು, ದೇವತೆ, ಬಳ್ಳಿ, ಮರ ಇತ್ಯಾದಿಗಳು ಸಂಕೇತವಾಗಿವೆ. ಆ ಸಂಕೇತದ ಚಿಹ್ನೆಗಳ ಮೂಲಕ ಅಲೆಮಾರಿಗಳು ಎಲ್ಲಿಯೇ ಅಲೆದಾಡಿದರೂ ಗುರುತು ಹಿಡಿದು ಆತ್ಮೀಯವಾಗಿ ಬೆರೆಯುತ್ತಾರೆ. ಮತ್ತು ತಾತ್ಕಾಲಿಕವಾಗಿ ಒಂದು ಕಡೆ ನೆಲೆಸಲು ಮುಂದಾಗುತ್ತಾರೆ.

ಧರ್ಮ ಮತ್ತು ಸಾಮಾಜಿಕ ರಚನೆ ಸಂಬಂಧ

ಧರ್ಮ ತುಂಬಾ ವಿಶಾಲವಾದ ಮತ್ತು ಚರ್ಚಿತವಾಗುವ ವಿಷಯವಾಗಿದೆ. ಆದರೆ ಇಲ್ಲಿ ಧರ್ಮ ಒಂದು ಸಮಾಜದ ಅಥವಾ ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಶಿಸ್ತನ್ನು ಮೂಡಿಸುವ ದೃಷ್ಟಿಯಿಂದ ಮಾತ್ರ ನೋಡಬಹುದಾಗಿದೆ. ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಅಗತ್ಯಕ್ಕೆ ಅನುಗುಣವಾಗಿ ಬೇಕಾದ ಶಿಸ್ತು ನಡವಳಿಕೆಯ ಚೌಕಟ್ಟು ಕಲಿಸುವ ಒಂದು ಸಾಧನವಾಗಿದೆ. ಇದನ್ನು ಒಟ್ಟುಗೂಡಿಸಿ ಆಚರಿಸುವುದರಿಂದ ಸಾಮಾಜಿಕ ರಚನೆಯಲ್ಲಿ ಸದಸ್ಯರಿಗೆ ಒಂದೆ ರೀತಿಯ ಭಾವನೆ ಮೂಡಲು ಸಾಧ್ಯ ವಾಗುತ್ತದೆ. ಶ್ರದ್ಧೆ-ಶ್ರಮ, ಜೀವನ-ವಿಧಾನ, ಆಚರಣೆ-ನಂಬಿಕೆಗಳು ಆ ಸಮುದಾಯದಲ್ಲಿ ಸದಸ್ಯರಿಗೆ ಬಿತ್ತರಿಸುತ್ತದೆ ಹಾಗೂ ಮಾರ್ಗದರ್ಶನ ನೀಡಿ ಆದೇಶಿಸುತ್ತದೆ. ಸಂದರ್ಭಗಳನುಸಾರವಾಗಿ ದಂಡಿಸುತ್ತದೆ ಜೊತೆಗೆ ಸ್ಥೈರ್ಯ, ತಾಳ್ಮೆ, ಗೌರವಗಳು, ಸಂಬಂಧಗಳಲ್ಲಿ ಹೇಗೆ ಬಳಕೆಯಾಗಬೇಕೆಂದು ತಿಳಿಸುತ್ತದೆ.

ವಿಶೇಷವಾಗಿ ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಧರ್ಮ ಸ್ತ್ರೀಯರಿಗೆ ಪ್ರಾಧಾನ್ಯತೆ ಕೊಡುತ್ತದೆ. ಹೆಚ್ಚಿನ ಆರಾಧ್ಯ ಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ. ದುಡಿಮೆಯಿಂದ ಹಿಡಿದು ಎಲ್ಲಾ ಹಂತದ ಎಲ್ಲ ಸಂದರ್ಭಗಳಲ್ಲೂ ಪುರುಷರಷ್ಟೆ ಸ್ತ್ರೀಯರಿಗೂ ಸ್ಥಾನಮಾನಗಳನ್ನು ಕೊಡಲಾಗಿದೆ. ಯಾರೂ ಯಾರಿಗೂ ಗುಲಾಮನಾಗುವ ಅಥವಾ ದಾಸಿಯಾಗುವ ಪ್ರಮೇಯವಿಲ್ಲದ ಸಹಬಾಳ್ವೆಯ ಮಂತ್ರದೊಂದಿಗೆ ಬದುಕು ಸಾಗುತ್ತಿದೆ. ಇಂತಹ ಧರ್ಮ ಸಾಮಾಜಿಕ ರಚನೆಗೆ ಮುಳುವಾಗಿಲ್ಲ. ಸಾಮಾಜಿಕ ರಚನೆಯಲ್ಲಿ ಧರ್ಮಕ್ಕೆ ವಿಶೇಷವಾದ ಒತ್ತು ನೀಡಲಾಗಿದೆ.

೩.೧.೩. ಸಾಮಾಜಿಕ ರಚನೆಯಲ್ಲಿ ಮೌಲ್ಯಗಳ ಪಾತ್ರ

ಆಧುನಿಕ ಅಬ್ಬರದ ತಂತ್ರಜ್ಞಾನ ಕಾಲವಾದ ಇಂದು ಮಾನವನ ಸಂಬಂಧಗಳು ಯಾಂತ್ರಿಕವಾಗಿವೆ. ಹಣ, ಅಂತಸ್ತು ಸ್ಪರ್ಧೆ ಇತ್ಯಾದಿ ಕಲಹಗಳು ಸಾಮಾನ್ಯವಾಗಿವೆ. ಇದರಿಂದ ಕೊಲೆ, ಭಯೋತ್ಪಾದನೆ, ಸುಳ್ಳು, ಮೋಸ, ವಂಚನೆಗಳು ನಿರ್ಭೀತಿಯಿಂದ ಗರಿಬಿಚ್ಚತೊಡಗಿವೆ. ಪರಿಣಾಮ ನೆಮ್ಮದಿಯ ಬದುಕು ಕಲ್ಪನೆಯಾಗಿದೆ. ಕಾರಣ ಇಂದು ತಾನು ಅಳವಡಿಸಿಕೊಂಡಿರುವ ಜೀವನಕ್ರಮ ಮತ್ತು ನಿಯಮಗಳು ಕ್ರೂರಿತನಕ್ಕೆ ಪ್ರಚೋದನೆಗಳಾಗಿವೆ. ಈ ರೀತಿಯ ಪ್ರಚೋದನೆಯಿಂದ ದೂರವಿದ್ದು ಮೋಸ, ವಂಚನೆ, ಹಿಂಸೆ ವೃತ್ತದಿಂದ ಪ್ರತ್ಯೇಕವಾಗಿ ಜೀವಿಸುವ ಅಲೆಮಾರಿ ಸಮುದಾಯಗಳು ಸಹಬಾಳ್ವೆಯ ಚಿಲುಮೆಗಳಾಗಿವೆ.

ಜೀವನದ ಭಯಾನಕ ಸಂಘರ್ಷಗಳ ಸುಳಿಯಲ್ಲಿ ಕಾಲವಶವಾಗದೆ, ಸಂಕಷ್ಟದಲ್ಲಿದ್ದು ನೆಮ್ಮದಿಯ

ಬದುಕನ್ನು ಬದುಕುತ್ತಿವೆ. ಈ ರೀತಿಯ ಬದುಕು ಬಾಳಿಕೊಂಡಿರುವುದಕ್ಕೆ ಮುಖ್ಯ ಕಾರಣ, ಸಾಮಾಜಿಕ ರಚನೆಯಲ್ಲಿ ಅಳವಡಿಸಿಕೊಂಡಿರುವ ನೈತಿಕ ಮೌಲ್ಯಗಳಾಗಿವೆ. ಈ ಮೌಲ್ಯಗಳು ಸಮುದಾಯದ ಕಾರ್ಯ ಕಲಾಪಗಳು ಸುಗಮವಾಗಿ ನೆರವೇರುವಂತೆ ಸಹಕರಿಸುವುದರ ಜೊತೆಗೆ ದಾರಿ ತಪ್ಪುವ ಸಂದರ್ಭದಲ್ಲಿ ನಿಯಂತ್ರಣ ಮಾಡುತ್ತವೆ. ಹಾಗದರೆ ಮೌಲ್ಯಗಳು ಎಂದರೇನು? ಇದರ ಗುಣಗಳೇನು? ಇದರ ಕಾರ್ಯಗಳೇನು? ಹೇಗೆ ಈ ಮೌಲ್ಯಗಳೂ ಅಲೆಮಾರಿಗಳ ಸಾಮಾಜಿಕ ರಚನೆಗೆ ಆಧಾರಸ್ತಂಭವಾಗಿವೆ? ಆ ಮೌಲ್ಯಗಳೆ ಬದುಕನ್ನು ನುಂಗಿವೆಯೆ? ಎಂಬುದು ಮುಖ್ಯವೆನಿಸುತ್ತದೆ. ಮೌಲ್ಯಗಳು ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಜೇಡರಬಲೆಯಂತೆ ಹಾಸುಹೊಕ್ಕಾಗಿದೆ.

'ಮೌಲ್ಯ'ವೆಂದರೆ ಇಂಗ್ಲಿಷ್‌ನಲ್ಲಿ ವ್ಯಾಲ್ಯೂ(Value) ಎಂದರ್ಥ. ಮೌಲ್ಯ ಎಂದರೆ ಜನರು ಬಯಸುವ ವಸ್ತುಗಳ ಮಾಪನಮಾಡುವ ಸಾಧನವಾಗಿದೆ. ಅಂದರೆ ಇವು ಸಮಾಜದ ಮನೋಭಾವ, ಅಭಿಪ್ರಾಯ, ವರ್ತನೆ, ಗುಣ, ವಸ್ತು, ಧ್ಯೇಯ, ಗುಂಪು, ವ್ಯಕ್ತಿಗಳು ಇತ್ಯಾದಿಗಳೆಲ್ಲವನ್ನು ಮೌಲ್ಯಮಾಪನ ಮಾಡುತ್ತದೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸಿವೆ. ಇಂತಹ ಮೌಲ್ಯಗಳಿಗಾಗಿ ಸಮುದಾಯ ಪ್ರೀತಿ, ಮನ್ನಣೆ, ಗೌರವ, ಬದ್ಧತೆ, ತ್ಯಾಗ, ಸೇವಾ ಮನೋಭಾವ, ಆದರ್ಶ ಎಲ್ಲವನ್ನು ಧಾರೆ ಎರೆಯುವುದು. ಮೌಲ್ಯ ಸಮುದಾಯದ ಚಾಲನಾ ಶಕ್ತಿಯಾಗಿ ದಿಕ್ಸೂಚಿಯಂತೆ ಕೆಲಸ ಮಾಡುತ್ತವೆ.

ಮೌಲ್ಯಕ್ಕೆ ವಿವಿಧ ರೀತಿಯ ಅರ್ಥಗಳಿವೆ ಅರ್ಥಶಾಸ್ತ್ರದಲ್ಲಿ ಮೌಲ್ಯವೆಂದರೆ ಬೆಲೆ. ಒಂದು ವಸ್ತುವಿನ ಮೌಲ್ಯ ಎಷ್ಟು ಎಂದರ್ಥ. ರಾಜ್ಯಶಾಸ್ತ್ರ, ನೀತಿಶಾಸ್ತ್ರ, ಸೌಂದರ್ಯಶಾಸ್ತ್ರದಲ್ಲಿ ದಾರ್ಶನಿಕ ಹಿನ್ನೆಲೆಯಿದೆ. ಆದರೆ ಸಮಾಜಶಾಸ್ತ್ರದಲ್ಲಿ ವಿಶಿಷ್ಟ ಅರ್ಥಪಡೆದುಕೊಂಡು, ಪ್ರಮುಖ ಅಂಗವೆಂದು ಭಾವಿಸಲಾಗಿದೆ. ಮೌಲ್ಯಗಳೂ ಸಾಮಾಜಿಕ ರಚನೆಯ ಮೌಲ್ಯಯುತ ಆಧಾರ ಸ್ತಂಭಗಳಾಗಿವೆ. ಈ ಮೌಲ್ಯಗಳಿಲ್ಲದಿದ್ದರೆ ರಚನೆಯು ದೇಹದಲ್ಲಿ ಮೂಳೆ ತೆಗೆದ ದೇಹದಂತೆ ಆಗುತ್ತದೆ. ಸಮುದಾಯದಲ್ಲಿ ಕಾರ್ಯಕಲಾಪಗಳು ಹೇಗೆ ನಡೆಯುತ್ತವೆ, ಎಂದು ಮೌಲ್ಯಮಾಪನ ಮಾಡುವ ಜೊತೆಗೆ ಹೇಗೆ ನಡೆಯಬೇಕು ಮತ್ತು ಅದರ ಲೋಪದೋಷಗಳೇನು? ಎಂದು ತಿಳಿಸುವ ಅಂತರಕ್ರಿಯೆಗಳಾಗಿವೆ. ಕಾರ್ಯವಿಧಾನ ನೋವು-ನಲಿವು, ಪಾತ್ರಗಳ ಪೋಷಣೆಯಲ್ಲಿ ಸಾರ್ಥಕತೆ ನಿರ್ಧರಿಸುವಲ್ಲಿ ಮತ್ತು ಹೇಗೆ ನಿಭಾಯಿಸುತ್ತಿದ್ದಾರೆ ಎಂದು ಪರೀಕ್ಷಿಸಿ ನೋಡುವ ಮಾನದಂಡಗಳಾಗಿವೆ.

ಸದಸ್ಯರ ನಡತೆಯನ್ನು ಪರೀಕ್ಷಿಸಿ, ಅಂಗೀಕರಿಸಿ ಉತ್ತಮ ಮಾರ್ಗದಲ್ಲಿ ಕೊಂಡ್ಯೊಯುತ್ತದೆ. ಇತರರಿಗೆ ತೊಡಕುಂಟಾಗದೆ, ನಡವಳಿಕೆಗಳನ್ನು ನಿಗದಿಪಡಿಸಿ ಆತನ ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುತ್ತದೆ. ಸಮುದಾಯದ ಸದಸ್ಯರು ಹಿರಿಯ ಸದಸ್ಯರಿಗೆ ಕಿರಿಯ ಸದಸ್ಯರು ಗೌರವ ಕೊಡಬೇಕು, ಮತ್ತು ಅವರ ಅನಿಸಿಕೆಯ ಪ್ರಕಾರ ನಡೆಯಬೇಕು, ಯಾವುದಾದರೂ ತೊಂದರೆಗಳೂ ಬಂದರೆ ದುಡುಕಿ ನಿರ್ಧಾರ ತೆಗೆದುಕೊಳ್ಳಲಾರದು. ಹಿರಿಯರ ಸಲಹೆ ಕೇಳಬೇಕು. ಏಕೆಂದರೆ ಹಿರಿಯ ಸದಸ್ಯರು ಹಿಂದೆ ಅಂತ ಸ್ಥಿತಿಯನ್ನು ಅನುಭವಸಿದವರಾಗಿದ್ದಾರೆ. ಇಲ್ಲವೆ ಅನುಭವಿಸಿದವರನ್ನು ಕಣ್ಣಾರೆ ಕಂಡವರಾಗಿದ್ದಾರೆ. ಆ ಅನುಭವಗಳು ಯಾವುದು ಒಳ್ಳೆಯ ಮಾರ್ಗ ಯಾವುದು ಅಹಿತಕರ ಮಾರ್ಗ, ಎಂಬುದನ್ನು

ಪರೀಕ್ಷಿಸಿ, ಈ ಮಾರ್ಗದಲ್ಲಿ ನಡೆಯಿರಿ ಇದರ ಮೂಲಕ ಕೆಲಸಗಳು ನೇರವೇರುತ್ತವೆ ಎಂದು ತಿಳಿಸುತ್ತದೆ. ಸಮುದಾಯದಲ್ಲಿ ಹಾಗಾಗಿ ಮೌಲ್ಯಗಳು ಉತ್ತಮದಾರಿಗಳಾಗಿವೆ. ಆ ಮೂಲಕ ಸಾಮಾಜಿಕ ರಚನೆಗೆ ಭದ್ರಬುನಾದಿ ಹಾಕುತ್ತವೆ. ಮೌಲ್ಯದ ವಿಸ್ತಾರ ಬಹುವಿಶಾಲವಾಗಿದೆ. *ಪಾರ್ಸನ್ಸ್* : "ಸಾಮಾಜಿಕ ಕ್ರಮಗಳನ್ನು ಕಾಯ್ದುಕೊಳ್ಳಲು ಜನರು ಹಂಚಿಕೊಂಡು ನಿಯಮಗಳೇ ಮೌಲ್ಯ ಎನ್ನುತ್ತಾರೆ."[5] ಇದೇ ರೀತಿ "ಯಾವುದು ಸೂಕ್ತವಾದುದು ಮತ್ತು ಮಹತ್ವವಾದುದೆಂದು ಜನರು ಕಲ್ಪಿಸಿ ಸ್ವೀಕರಿಸುತ್ತಾರೊ ಅದನ್ನು ಮೌಲ್ಯ ಎನ್ನಬಹುದು."[6] ಯಂಗ್ ಮತ್ತು ಮ್ಯಾಕ್‌ರವರ ಅಭಿಪ್ರಾಯವಾಗಿದೆ.

೩.೧.೪. ಮೌಲ್ಯಗಳ ಗುಣಗಳು ಮತ್ತು ಕಾರ್ಯಗಳು

ಮೌಲ್ಯಗಳ ಗುಣಗಳು

೧. ಮೌಲ್ಯಗಳು ಒಬ್ಬ ವ್ಯಕ್ತಿಯಿಂದ ನಿರ್ಮಿತವಾಗಿರುವುದಿಲ್ಲ. ಅನೇಕ ಜನರಿಂದ ನಿರ್ಮಿಸಲ್ಪಟ್ಟಿರುವುದೊಂದಿಗೆ ಮನ್ನಿಸಲ್ಪಟ್ಟು ರೂಢಿಯಲ್ಲಿ ಬಂದಿರುತ್ತದೆ.

೨. ಸಮಾಜದಲ್ಲಿ ಗಂಭೀರ ಪರಿಣಾಮ ಬೀರುತ್ತವೆ ಮತ್ತು ಅವಶ್ಯಕತೆ ಈಡೇರಿಸಿ ಆ ಸಮುದಾಯದ ರಕ್ಷಣೆ ಹಾಗೂ ಸಂಬಂಧಗಳನ್ನು ಕಲ್ಪಿಸುವ ಮಹಾನ್ ಶಕ್ತಿಯಾಗಿವೆ.

೩. ಸಂವೇಗಗಳನ್ನು ಒಳಗೊಂಡಿರುತ್ತದೆ. ಅಂದರೆ ಮೌಲ್ಯಗಳಿಗಾಗಿ ಜನರು ಜೀವಿಸುತ್ತಾರೊ ಅಥವಾ ಮೌಲ್ಯಗಳೆ ಜನರಿಗಾಗಿಯೆ ಇವೆಯೊ ಎಂಬುವಷ್ಟರ ಮಟ್ಟಿಗೆ ಬೆಸೆದುಕೊಂಡಿರುತ್ತವೆ.

೪. ಮೌಲ್ಯಗಳಿಗಾಗಿ ಅನೇಕ ಜನರು ಹೋರಾಟ, ತ್ಯಾಗ, ಬಲಿದಾನ, ಅಪಾರ ಕಷ್ಟ-ನಷ್ಟ, ಬಹಿಷ್ಕಾರ ಇತ್ಯಾದಿಗಳನ್ನು ಅನುಭವಿಸಿದ್ದಾರೆ.

೫. ಸಮುದಾಯದಿಂದ ಸಮುದಾಯಕ್ಕೆ ಹಾಗೂ ಪೀಳಿಗೆಯಿಂದ ಪೀಳಿಗೆಗೆ ಭಿನ್ನ ಮತ್ತು ವಿಭಿನ್ನವಾಗಿ ಬದಲಾಗುತ್ತವೆ ಹಾಗೂ ಬದಲಾದಂತೆ ಹೊಸರೂಪ ಪಡೆಯುತ್ತವೆ.

ಮೌಲ್ಯಗಳ ಕಾರ್ಯಗಳು

೧. ಸಾಮಾಜಿಕವಾಗಿ ಮನ್ನಿಸಲ್ಪಟ್ಟ ವಸ್ತುವನ್ನು ಪಡೆಯಲು ಹಂಬಲಿಸುತ್ತವೆ.

೨. ಆದರ್ಶ ರೀತಿ-ನೀತಿಗಳನ್ನು ಅರಿತುಕೊಂಡು ಕ್ರಿಯಾಶೀಲರಾಗಿರುವಂತೆ ಪ್ರೇರೇಪಿಸುತ್ತವೆ.

೩. ಸಮಾಜದಲ್ಲಿ ಯಾವ ರೀತಿ ಜೀವಿಸಿದರೆ ಗೌರವ ಸಿಗುತ್ತದೆ ಎಂಬ ಅರಿವನ್ನು ಮೂಡಿಸುತ್ತವೆ.

೪. ಸಾಮಾಜಿಕ ವ್ಯವಸ್ಥೆಯಲ್ಲಿ ನೈತಿಕ ಒತ್ತಡದಿಂದ ನಿಯಂತ್ರಿಸಿ, ಪ್ರೋತ್ಸಹ ನೀಡುತ್ತದೆ. ಹಾಗೂ ಸಮಾಜ ವಿರೋಧಿಗಳಿಗೆ ನಾಚಿಕೆ, ಅಸಹ್ಯ, ದುರ್ವರ್ತನೆಯ ಸ್ಥಾನಮಾನಗಳನ್ನು ಗುರುತಿಸುತ್ತವೆ.

೫. ಮೌಲ್ಯಗಳು ಸಮುದಾಯ ಏಕತೆ ತರಲು ಶ್ರಮಿಸುತ್ತದೆ. ಅದರ ಮೌಲ್ಯಗಳನ್ನು ನಂಬುವ ಜನರು ನಾವೆಲ್ಲರೂ ಒಂದೆ ಎಂಬ ಭಾವನೆ ಬರಲು ಪರಸ್ಪರ ಸಮುದಾಯಗಳ ಜೊತೆಯಲ್ಲಿ ಬಹುಮುಖ್ಯಪಾತ್ರವಹಿಸುತ್ತದೆ.

ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಮೌಲ್ಯಗಳು ಹೇಗೆ ಆಧಾರಸ್ತಂಭಗಳಾಗಿವೆ ಎಂಬುದನ್ನು ನೋಡಬಹುದಾಗಿದೆ.

ಅಲೆಮಾರಿ ಸಮುದಾಯಗಳು ಅಂತರಜಾತಿಯ ಪ್ರೇಮವಿವಾಹವನ್ನು ವಿರೋಧಿಸುತ್ತಾ ಬಂದಿದ್ದಾರೆ. ಯಾವುದೆ ಕಾರಣಕ್ಕೂ ಇಂತಹ ವಿವಾಹಕ್ಕೆ ಆಸ್ಪದ ಕೊಡಲಾರರು. ಆ ಮೂಲಕ ತಮ್ಮದೆ ಸಮುದಾಯ ದಲ್ಲಿ ವಿವಾಹ ಜರಗಿಸುತ್ತಾರೆ. ಇದರಿಂದ ಅವರ ಮತ್ತು ಸಂಬಂಧಿಕರ ಮಧ್ಯೆ ಸುಮಧುರ ಸಂಬಂಧ ಬೆಳೆವುದು. ಇಲ್ಲವಾದರೆ ಸಮುದಾಯಗಳೆರಡು ವಿರುದ್ಧ ದಿಕ್ಕಿನಲ್ಲಿ ಪಯಣಿಸಬೇಕಾಗುತ್ತದೆ ಪರಿಣಾಮ ಬದುಕಲ್ಲಿ ಬಿರುಗಾಳಿ ಬೀಸಿ ಏನು ಮಾಡಬೇಕಿತ್ತೊ ಅದನ್ನು ಮಾಡದೆ ನಿಶಕ್ತರಾಗಬೇಕಾಗುತ್ತದೆ. ಆಕಸ್ಮಿಕವಾಗಿ ಅಂತರಜಾತಿಯ ವಿವಾಹಗಳು ನಡೆದಿದ್ದರೆ ಅವರನ್ನು ಕುಟುಂಬದಿಂದ ಹೊರ ಹಾಕಲಾಗುತ್ತದೆ. ಇದು ಕೇವಲ ವಿವಾಹಕಷ್ಟೆ ಸೀಮಿತವಾಗಿರದೆ, ಕಳ್ಳತನ, ಮೋಸ, ಸುಳ್ಳು, ವಂಚನೆ ಒಂದೆ ರಕ್ತ ಸಂಬಂಧಿಗಳಲ್ಲಿ ಕಂಡುಬಂದರೆ, ಅತ್ತೆ-ಚಿಕ್ಕಮ್ಮ ಇವರುಗಳ ನಡುವೆ ಅನೈತಿಕ ಸಂಬಂಧಗಳು ಕಂಡುಬಂದರೆ, ಸಮುದಾಯದ ಪಂಚಾಯಿತಿ ಮೂಲಕ ಸಮುದಾಯದ ಮುಖಂಡರೆಲ್ಲರೂ ಸೇರಿ ತಪ್ಪು ಮಾಡಿರುವ ವ್ಯಕ್ತಿಗಳಿಗೆ ಉಗ್ರವಾದ ಶಿಕ್ಷೆ ಹಾಗೂ ದಂಡಗಳನ್ನು ವಿಧಿಸುವುದುಂಟು. ಅಪಾರಾಧಿ ಸ್ಥಾನದಲ್ಲಿದ್ದವರಿಗೆ ಸಮುದಾಯದಿಂದ ಉಚ್ಚಾಟಿಸಲಾಗುವುದು. ಇಂತಹ ಮೌಲ್ಯಗಳಿರುವುದರಿಂದ ಯುವಕ-ಯುವತಿಯರು ಪ್ರೇಮ ಮತ್ತು ಅಂತರಜಾತಿಯ ವಿವಾಹದಿಂದ ಬಹುದೂರವಾಗಿ ಉಳಿದು ಕೊಂಡಿದ್ದಾರೆ. ಇದರಿಂದ ತಮ್ಮ ಸಂಬಂಧಿಕರಲ್ಲಿಯೆ ವಿವಾಹ ಮಾಡಿಕೊಂಡು ಅನ್ಯೂನ್ಯವಾಗಿರಬೇಕೆಂದು ಅಲೆಮಾರಿಗಳ ಮೌಲ್ಯ ಅಗ್ರಹಿಸುತ್ತದೆ.

ಸಮುದಾಯದ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಮೌಲ್ಯಗಳು ಸ್ಪಂದಿಸುತ್ತವೆ ಗಂಡ-ಹೆಂಡತಿಯರ ಜೀವನದಲ್ಲಿ ವಿರಸ ಮೂಡಿದಾಗ ವಿಚ್ಛೇದನದ ಒಳಗಾಗುವ ಸಂದರ್ಭದಲ್ಲಿ ಕುಲದ ಮುಖಂಡರ ಸಮ್ಮುಖದಲ್ಲಿ ಪತಿ-ಪತ್ನಿಯರಿಬ್ಬರನ್ನು ಕರೆದು ಅರೋಪಗಳನ್ನು ತಿಳಿದು ಇಬ್ಬರಲ್ಲೂ ಸಮಭಾವನೆಗಳು ಮೂಡುವಂತೆ ಪ್ರೇರೆಪಿಸುವುದುಂಟು. ಗಂಡು-ಹೆಣ್ಣುಗಳು ಕೇವಲ ವಿಚ್ಛೇದನದಿಂದ ನೆಮ್ಮದಿಯತ್ತ ಜೀವನ ಬಾಳಲು ಅಸಾಧ್ಯವಾದದು. ಒಂದೆ ನಾಣ್ಯದ ಎರಡು ಮುಖಗಳಂತಿರುವ ಗಂಡ-ಹೆಂಡತಿರಿಬ್ಬರನ್ನು ಬಿಟ್ಟು ಇನ್ನೊಬ್ಬರು ಬಾಳ ಕೂಡದೆಂಬ ಆದರ್ಶದ ಮೂಲಕ ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಅವಕಾಶವಿದೆ.

"ಓಡುತ್ತಿರುವ ಕುದುರೆಯು ಮುಗ್ಗರಿಸುವುದು ಸಹಜವೆಂಬಂತೆ ಹುಟ್ಟಿದವರು ಸಾಯಲೇಬೇಕು" ಆದರೆ ಸಾವು ಅವಧಿಗೆ ಮುನ್ನ ಬಂದರೆ ಸ್ಥಿತಿಯು ಬದಲಾಗುತ್ತದೆ. ಆಕಸ್ಮಿಕವಾಗಿ ಅಲೆಮಾರಿಗಳ ಕುಟುಂಬದಲ್ಲಿ ಗಂಡ ಸತ್ತರೆ ಆತನ ವಿಧವೆ ಅತ್ತಿಗೆಯನ್ನು ವರಿಸುವ ಪದ್ಧತಿ ಇದೆ. ಇದು ಅವಳ ಒಪ್ಪಿಗೆ ಇದ್ದರೆ ಮಾತ್ರ, ಇಲ್ಲವಾದರೆ ಅದು ಸಾಧ್ಯವಾಗದಿದ್ದಾಗ ಸಾಯುವ ತನಕವೂ ಗಂಡನ ಮನೆಯಲ್ಲಿ ಅಥವಾ ಮಕ್ಕಳ ಜೊತೆ ಜೀವಿಸಬಹುದು. ಕುಟುಂಬದಲ್ಲಿ ಸದಸ್ಯರಿಗೆ ಹೇಗೆ ಗೌರವಗಳು ದೊರೆಯುವವೊ ಅದೆ ರೀತಿಯಾಗಿ ಸ್ಥಾನಮಾನಗಳು ದೊರೆಯುತ್ತವೆ.

ಅಲೆಮಾರಿಗಳ ಮೌಲ್ಯಗಳ ಧೋರಣೆಯು ತುಂಬಾ ಉದಾರಿತನ. ಹಾಗೂ ಸಮಾನತೆಯಿಂದ ಕೂಡಿದೆ. ಹಬ್ಬ ಹರಿದಿನಗಳಲ್ಲಿ ಪುರುಷರು ಮತ್ತು ಸ್ತ್ರೀ ಜೊತೆಗೂಡಿ ಹಾಡಿ ಕುಣಿಯುವ ಮೂಲಕ ಸಂತೋಷಪಟ್ಟರೆ. ಸ್ವತಂತ್ರವಾಗಿ ದುಡಿಯುವ ಅವಕಾಶವನ್ನು ಪಡೆದುಕೊಂಡಿದ್ದಾರೆ. ಸಣ್ಣ-ಪುಟ್ಟ ವ್ಯಾಪಾರದಿಂದ ಹಿಡಿದು ಅಂತರಾಷ್ಟ್ರೀಯ ವ್ಯಾಪಾರದ ತನಕವೂ ಪ್ರವೇಶ ಪಡೆದಿದ್ದಾರೆ. ವಿಮಾನಗಳ ಮೂಲಕ ಏಕಾಂಗಿಗಳಾಗಿಯೆ ಚತುರತೆಯಿಂದ ವ್ಯಾಪಾರ ಮಾಡುವುದುಂಟು. ಕಚ್ಚಾವಸ್ತುಗಳ ಸಂಗ್ರಹದಿಂದ ಹಿಡಿದು ಜೀವನದ ಪ್ರಮುಖ ವಿಷಯಗಳಲ್ಲಿ ಸಂಪೂರ್ಣವಾಗಿ ಭಾಗಿಯಾಗಿದ್ದಾಳೆ. ಪುರುಷರು ಮಾತ್ರ ಸ್ವತಂತ್ರ ಅನುಭವಿಸುವುದು ನ್ಯಾಯವಲ್ಲ, ಆದುದರಿಂದ ಕುಟುಂಬದ ಒಂದು ಭಾಗವಾಗಿರುವ ಸ್ತ್ರೀಯು ಅನುಭವಿಸಲಿ ಎಂಬುದಾಗಿದೆ. ಆಡಂಬರದ ಮದುವೆಗಿಂತ ಅರಿತುಕೊಂಡು ಆಗುವ ಮದುವೆ ಶ್ರೇಷ್ಠ ಎನ್ನುತ್ತಾರೆ. ವೈವಾಹಿಕ ಆಯ್ಕೆಯಲ್ಲಿ ತೊಂದರೆಗಳು ಇರುವುದಿಲ್ಲ ಕಾರಣ ತಮ್ಮ ಸಮುದಾಯಗಳ ವೃತ್ತಿಯಲ್ಲಿ ಒಬ್ಬರಿಗೊಬ್ಬರು ಒಡನಾಡಿಗಳಾಗಿರುವುದರಿಂದ ಮತ್ತು ಹತ್ತಿರದ ಸಂಬಂಧಿಗಳೊಂದಿಗೆ ವಿವಾಹ ಬೆಸೆಯುವುದರಿಂದ ಸಲುಗೆಯಿಂದ ವಿವಾಹಕ್ಕೆ ಸಮ್ಮತಿಸಲಾಗುವುದು.

ಸಮುದಾಯದ ದೇವಸ್ಥಾನ ಇಲ್ಲವೆ ಬಿಡಾರಗಳಲ್ಲಿ ಕುಲ ಮುಖಂಡರ ನೇತೃತ್ವದಲ್ಲಿ ಸಹೋದರಮಾವನ ಪೌರೋಹಿತ್ಯದಲ್ಲಿ ನಡೆಸಲಾಗುವುದು. ಇತಂಹ "ವಿವಾಹಗಳಲ್ಲಿ ಸಂಪತ್ತಿಗಿಂತ ಸಂಬಂಧವೆ ಪ್ರಧಾನ"ವಾಗಿರುವುದು ಕಂಡುಬರುತ್ತದೆ. ಸಂಪತ್ತು ನೆಲೆನಿಂತವರ ರೂಪಕವಾದರೆ, ಸಂಬಂದ ನೆಲೆ ನಿಲ್ಲದವರ ರೂಪಕವಾಗಿದೆ. ಏಕೆಂದರೆ "ತಾಮ್ರದ ಕಾಸು ತಂದೆ ಮಕ್ಕಳ ಸಂಬಂಧ ಹಾಳು ಮಾಡುತ್ತದೆ" ಎಂಬ ಜನಪದ ನುಡಿಯಂತೆ "ಸಂಪತ್ತು ಸಂಬಂಧ ಬೆಸೆಯುವ ಬದಲು ಸಂಬಂಧ ಮುರಿಯುವುದು" ಎಂಬ ಅಲೆಮಾರಿಗಳ ನೈತಿಕತೆಯ ತಿರುಳಾಗಿದೆ. ಸಂಪತ್ತಿಗಾಗಿಯೆ ಕೊಲೆ-ದರೋಡೆ-ಸುಲಿಗೆಗಳು ನಡೆದಿರುವುದು ಸತ್ಯ. ಈ ಸಂಪತ್ತು ನಮಗೆ ಬೇಡ ಸ್ನೇಹದಿಂದ ತುಂಬಿದ ಸಂಪತ್ತೆ ದೊಡ್ಡ ಸಂಪತ್ತೆಂದು ತಿಳಿಯುವವರಾಗಿದ್ದಾರೆ. ಇದು ಅಲೆಮಾರಿಗಳ ಸಾಮಾಜಿಕ ರಚನೆಯ ಮೌಲ್ಯದ ವಿಶಾಲ ಗುಣವಾಗಿದೆ.

ವರದಕ್ಷಿಣೆಯು ಸಾಮಾಜಿಕ ಸಮಸ್ಯೆಯಾಗಿದೆ. ಈ ಸಮಸ್ಯೆ ಈಗಷ್ಟೆ ಅಲ್ಲ ಶತಶತಮಾನಗಳಿಂದಲೂ ಹೊಡೆದಾಟ, ಬಡಿದಾಟ, ಕೊಲೆ ಸುಲಿಗೆ ನಡೆದಿರುವುದು ಸಾಮಾನ್ಯ ವಿಷಯವಾಗಿದೆ. ಇಂತಹ ವರದಕ್ಷಿಣೆ ಯಿಂದ ಎಷ್ಟೋ ಯುವತಿಯವರು ವರದಕ್ಷಿಣೆ ಕೊಡಲು ಅಸಮರ್ಥರಾಗಿ ವಿವಾಹದಿಂದ ಬಹುದೂರ ವಿದ್ದಾರೆ. ಆತ್ಮಹತ್ಯೆಯಂತ ಕೃತ್ಯಗಳಲ್ಲಿಯೂ ತೊಡಗಿದ್ದಾರೆ. ಮತ್ತಿತರರು ವಯಸ್ಸಾದವರನ್ನು ರೋಗಗ್ರಸ್ತ ರನ್ನು ವಿಧರರನ್ನೊ ವಿವಾಹವಾಗಿ, ನರಕಯಾತನೆ ಅನುಭವಿಸುತ್ತಿದ್ದಾರೆ. ಈ ಘಟನೆಗಳು ನೆಲೆನಿಂತವರಲ್ಲಿ ಸರ್ವೆಸಾಮಾನ್ಯವಾಗಿದೆ. ಆದರೆ ಅಲೆಮಾರಿಗಳು ಭಿನ್ನವಾದ ವ್ಯವಸ್ಥೆಯಲ್ಲಿ ನಡೆಸುವರು. ನೆಲೆನಿಂತವರಲ್ಲಿ ಹಣ ಹಿಡಿದುಕೊಂಡು ಹುಡುಗಿಯ ತಂದೆಯು ವರನನ್ನು ಶೋಧಿಸಿದರೆ, ಅಲೆಮಾರಿಗಳಲ್ಲಿ ಹುಡುಗನ ತಂದೆಯು ತೆರ (ಕನ್ಯಾಶುಲ್ಕ) ಹಿಡಿದುಕೊಂಡು ಹುಡುಗಿಯನ್ನು ಹುಡುಕುವದಾಗಿದೆ. ಆ ಶುಲ್ಕವನ್ನು ಹುಡುಗಿಯ ತಂದೆಗೆ ವಧು ದಕ್ಷಿಣೆಯಾಗಿ ನೀಡಿ ವಿವಾಹ ಮಾಡಿಕೊಂಡು ಬರುವ ಪದ್ಧತಿಯಿದೆ.

ವಧುದಕ್ಷಿಣೆಯು ಮೇಲ್ನೋಟದಲ್ಲಿ ವಿವಾಹಕ್ಕಾಗಿ ಕೊಡುವ ಧನಸಹಾಯವೆಂದಾದರು ಅಂತರಿಕದ ಸತ್ಯಸಂಗತಿ ಎಂದರೆ ಚಿಕ್ಕವಳಿಂದ ಮದುವೆಯ ವಯಸ್ಸಿನವರೆಗೂ ಪಾಲನೆ-ಪೋಷಣೆಯನ್ನು ಮಾಡಿ ವಿವಾಹ ಮಾಡುವ ತಂದೆ-ತಾಯಿಗಳಿಗೆ ಕೃತಜ್ಞತೆ ತಿಳಿಸುವ ಸಲುವಾಗಿ ಕೊಡುವ ಗೌರವದ ಕಾಣಿಕೆಯಾಗಿದೆ.

ಸ್ತ್ರೀ-ಪುರುಷರಿಬ್ಬರು ಯಾವುದಾದರೂ ಸಂದರ್ಭದಲ್ಲಿ ತಪ್ಪು ಮಾಡಿದಾಗ ತಮ್ಮ ಕುಲದಿಂದ ಕೆಲವೊಂದು ವಿಧಿ-ವಿಧಾನಗಳ ಮೂಲಕ ಶುದ್ಧಿಕರಿಸಬೇಕಾಗುತ್ತದೆ. ಮುಖ್ಯಸ್ಥರು ಕುಲದ ಒಳಗಡೆ ಪ್ರವೇಶ ಮಾಡಿಕೊಳ್ಳುತ್ತಾರೆ. ಚಪ್ಪಲಿಯಿಂದ ಹೊಡೆಸಿಕೊಂಡವರು, ಜಾತಿಗೆ ನಿಂದನೆ ಬಗೆದವರು, ಅನೈತಿಕ ಸಂಬಂಧ ಬೆಳೆಸಿದವರು, ಕೊಲೆ-ಸುಲಿಗೆ ಮಾಡಿದವರು, ಇತ್ಯಾದಿಗಳು. ಇಂತಹ ತಪ್ಪುಗಳನ್ನು ಮಾಡಿದವರಿಗೆ ಜಾತಿಯ ಮುಖಂಡರು ಅಥವಾ ಮುಖ್ಯಸ್ಥರು ನಾಲಿಗೆ ಸುಡುವ ಮೂಲಕ ಮತ್ತು ಗೋವಿನ ಮೂತ್ರ ಸಿಂಪಡಿಸುವುದು ಮತ್ತು ದಂಡ ವಿಧಿಸಿ ಶುದ್ಧಿಕರಣ ಮಾಡುವುದುಂಟು.

ರಕ್ತಸಂಬಂಧಿಕರಾದ ಅಕ್ಕ-ತಂಗಿ, ಅತ್ತೆ-ಚಿಕ್ಕಮ್ಮ, ಅತ್ತಿಗೆ ಮುಂತಾದವರ ಕೂಡ ಅನೈತಿಕ ಸಂಬಂಧದ ವಿಷಯವು ಸಮುದಾಯದಲ್ಲಿ ತಿಳಿದಾಗ ತಪ್ಪು ಮಾಡಿರುವ ವ್ಯಕ್ತಿ ಮತ್ತು ಮಹಿಳೆಯನ್ನು ಕರೆಸಿಕೊಂಡು ಇಬ್ಬರಿಗೂ ಕಠಿಣವಾದ ಶಿಕ್ಷೆಕೊಡಲಾಗುವುದು. ಪವಿತ್ರ ಸ್ಥಳವೆನಿಸಿದ ದೇವರ ಗುಡಿ, ನ್ಯಾಯ ಪಂಚಾಯತಿ ಮಾಡುವ ಸ್ಥಳಗಳಾದ ನೀರು ಹರಿಯುವ ಸ್ಥಳ, ಸ್ಮಶಾನ ಭಾಗದಲ್ಲಿ ನ್ಯಾಯ ಪಂಚಾಯತಿ ಮಾಡುವುದುಂಟು. ಹಬ್ಬ, ಹುಣ್ಣಿಮೆ, ಅಮವಾಸ್ಯೆಯಂತಹ ದಿನಗಳಲ್ಲಿ ಸೂತಕ ಕಳೆಯುವ ತನಕ ಲೈಂಗಿಕ ಸಂಬಂಧದಲ್ಲಿ ಕಡಿವಾಣ ಹಾಕಲಾಗಿದೆ. ಸೂತಕ ಕಳೆಯುವ ಮೊದಲು ಕ್ರಿಯೆಯಲ್ಲಿ ತೊಡಗಿದರೆ ಪಿರ್ಯಾದಿದಾರರು ಪಿರ್ಯಾದಿ ಮಾಡಿದರೆ ಆತನನ್ನು ಪಂಚಾಯಿತಿಯು ಶಿಕ್ಷಿಸುವುದು. ಬೇಟೆಗೆ ತಂದ ಬೇಟೆಯನ್ನು ಆ ಕುಟುಂಬ ಮಾತ್ರ ಸ್ವೀಕರಿಸದೆ, ಉಳಿದವರಿಗೂ ಹಂಚಿ ಊಟ ಮಾಡುವ ಸಹಕಾರತೆಯಿದೆ. ಯಾವುದೋ ಸಂದರ್ಭದಲ್ಲಿ ಒಮ್ಮೆ ಕೊಟ್ಟಮಾತಿಗೆ ಮಾತು ತಪ್ಪುದಂತೆ ಹಾಗೂ ನುಡಿದಂತೆ ನಡೆಯುವರು. ಸಾಲ ಇತ್ಯಾದಿಗಳನ್ನು ಮನ್ನ ಮಾಡದೆ, ತಡವಾದರು ನೀಡಿದ ಸಾಲವನ್ನು ಮುಟ್ಟಿಸಿ ಸಾಲದಿಂದ ಋಣಮುಕ್ತರಾಗುತ್ತಾರೆ. ಅಲೆಮಾರಿಗಳ ಸಾಮಾಜಿಕ ರಚನೆಯಲ್ಲಿ ಅಡಿಪಾಯವಾಗಿರುವ ಮೌಲ್ಯಗಳು ಅವರ ಬದುಕನ್ನು ವ್ಯಾಪಿಸಿ ವಿಶೇಷತೆಯನ್ನು ಕಾಯ್ದುಕೊಳ್ಳುವಂತೆ ಮಾಡಿದೆ. ಇದೆ ಮೌಲ್ಯಗಳು ಇನ್ನೊಂದೆಡೆ ಬದುಕಲ್ಲಿ ವ್ಯಾಪ್ತಿ ಮೀರಿ ಹೋಗದಂತೆ ಅಡ್ಡಗೋಡೆಯಾಗಿ ನಿಂತಿವೆ. ಆಕಸ್ಮಾತ್ ಆ ಗೋಡೆಯನ್ನು ಮೀರಿ ನಡೆದರೆ ಉಳಿದ ಸಮುದಾಯವು ಆತನನ್ನು ದೋಷಿಸುವುದರ ಜೊತೆಗೆ, ಕುಲದಿಂದ ಹೊರ ಹಾಕಲಾಗುತ್ತದೆ. ತಮ್ಮ ಸಮುದಾಯದ ಕಸುಬನ್ನು ಬಿಟ್ಟು ಬೇರೆ ಕೆಲಸದಲ್ಲಿ ತೊಡಗಿದರೆ ಮೌಲ್ಯಗಳು ದೂಷಿಸುತ್ತವೆ.

ಮೌಲ್ಯಗಳ ಕೆಲವು ಅವಗುಣಗಳು

೧. ತಮ್ಮ ವೃತ್ತಿಯಲ್ಲಿ ಮುಂದುವರೆಯಬೇಕೆಂಬುದು ಆಶಾಭಾವನೆಯಾಗಿದೆ.

೨. ದೇವರು ನಮ್ಮನ್ನು ಸೃಷ್ಟಿಸಿದ್ದಾನೆಂಬ ಅತಿಯಾದ ನಂಬಿಕೆ.

೩. ಅಗತ್ಯಕ್ಕಿಂತ ಹೆಚ್ಚು ದುಡಿಯಬಾರದೆಂಬುದು ಮನೋಭಾವನೆಯಾಗಿದೆ.

೪. ನಿಧಿಗಳು ದೊರೆತರೆ ದೇವರಿಗೆ ಅರ್ಪಿಸಬೇಕೆಂಬುದು.

೫. ದೇವರ ಶಾಂತಿಗಾಗಿ ಹರಕೆ ರೂಪದಲ್ಲಿ ಬಲಿ ಕೊಡಬೇಕೆಂಬ ನಿಯಮವಿದೆ.

೬. ಒಂದು ಸ್ಥಳದಲ್ಲಿ ಕೊನೆಯತನಕ ವಾಸವಾದರೆ ದೇವರು ಕ್ಷಮಿಸುವುದಿಲ್ಲ ಎನ್ನುವುದೆ ಆಂತರಿಕವಾಗಿದೆ.

೭. ಅಂತರ್ಜಾತಿ ಮತ್ತು ಪ್ರೇಮ ವಿವಾಹ ಆಗಬಾರದು.

೮. ದೇವರ ಶಾಪದಿಂದ ಖಾಯಿಲೆಗಳು ಬರುತ್ತವೆ, ಆದ್ದರಿಂದ ದೇವರಿಗೆ ದಿನನಿತ್ಯ ನಡೆದು ಕೊಳ್ಳಬೇಕಾಗಿದೆ.

೯. ಖಾಯಿಲೆಗಳು ಬಂದಾಗ ಆಸ್ಪತ್ರೆಗಳಿಗೆ ಹೋಗಬಾರದು ಎಂಬ ನಿಯಮವಿದೆ. ಇದರ ಫಲವಾಗಿ ಬೂದಿ, ನಿಂಬೆ ಹಣ್ಣುಗಳಿಂದ ಹಾಗೂ ಮಾಟ ಮಂತ್ರಗಳಿಂದ ಗುಣಪಡಿಸಿಕೊಳ್ಳಬೇಕೆಂದು ಇವರಲ್ಲಿ ಬೇರೂರಿದೆ.

೧೦. ಪಂಚಾಯಿತಿಯ ತೀರ್ಮಾನ ಅಂತಿಮ ತೀರ್ಮಾನವೆಂದು ಮುಖ್ಯಸ್ಥರು ಭಾವಿಸಿಕೊಳ್ಳುವರು.

೧೧. ವ್ಯಾಪಾರದಲ್ಲಿ ಮೋಸ ಮಾಡಬಾರದೆಂಬುದು.

೧೨. ವೃತ್ತಿ ಮಾಡುವಾಗ ರಕ್ತವನ್ನು ಅರಿಸಬೇಕೆಂಬುದು.

೧೩. ದೇವರಿಗೆ ಅರಬೆತ್ತಲೆ ಸೇವೆ ಮಾಡಬೇಕು.

೧೪. ಋತುಮತಿ ಆಗುವ ಮೊದಲೆ ವಿವಾಹ ಮಾಡಬೇಕೆಂಬ ದೃಢನಿರ್ಧಾರ.

ಈ ಮೇಲಿನ ಎಲ್ಲಾ ನಂಬಿಕೆಗಳಿಂದ ತಮ್ಮ ಬದುಕನ್ನು ಅವಸಾನದ ಅಂಚಿಗೆ ತಳ್ಳಿಕೊಳ್ಳುತ್ತಿದ್ದಾರೆ. ಕಾರಣ ಹಿಂದಿನಿಂದಲೂ ಸಮುದಾಯದೊಂದಿಗೆ ಅಂಟಿಕೊಂಡು ಬಂದಿರುವುದು. ಇವರ ಕಸುಬು ಜೀವ ಹೋಗುವವರೆಗೂ ಮುಂದುವರೆಸಿಕೊಂಡು ಹೋಗುವುದು ಎಂದು ಹೇಳುವುದುಂಟು.

ಮೌಲ್ಯಗಳಿಂದ ತಮ್ಮ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳನ್ನು ಮಾಡಲು ಮುಂದುವರಿಯಲು ಬರುವರ ಸಂಖ್ಯೆ ತುಂಬಾ ವಿರಳ. ತಮ್ಮದೆ ವೃತ್ತಿಯನ್ನು ಮುಂದುವರೆಸಿಕೊಂಡು ಅರೆಹೊಟ್ಟೆಯ ಬದುಕು ಸಾಗಿಸುವವರಾಗಿದ್ದಾರೆ. ಅಲೆಮಾರಿಗಳಲ್ಲಿ ನಂಬಿಕೆಗಳಿಗೆ ಮೊದಲ ಸ್ಥಾನ ನೀಡಲಾಗಿದೆ. ಯಾವುದೆ ಅಲೆಮಾರಿಗಳು ಧಾರ್ಮಿಕ ವಿಷಯದಲ್ಲಿ ತುಂಬಾ ಪಾತ್ರವಹಿಸಿರುತ್ತಾರೆ. ಅವರು ದೇವರುಗಳಿಗೆಗೋಸ್ಕರ ಅರೆಬೆತ್ತಲೆ ಸೇವೆ, ದೀರ್ಘ ನಮಸ್ಕಾರ ಸೇವೆ, ದೇವರ ಮುಂದೆ ಬಲಿ ಮಾಡುವುದು. ಹೀಗೆ ಅನೇಕ ರೀತಿಗಳಲ್ಲಿ ಸೇವೆಸಲ್ಲಿಸುವುದುಂಟು.

ಸರ್ಕಾರ ಇವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಮನೆಯಲ್ಲಿ ವಾಸಮಾಡದೆ ಮನೆಯ ಮುಂದೆ ಬಿಡಾರ ಹೂಡಿಕೊಂಡು ವಾಸಿಸುವರು. ಅ ಮನೆಯಲ್ಲಿ ವಾಸಿಸಿದರೆ ದೇವರು ಕ್ಷಮಿಸುವುದಿಲ್ಲವಂತೆ. ಅಲ್ಲಿ ಕೇವಲ ಕೆಲವು ದಿವಸಗಳವರೆಗೂ ಇರುತ್ತಾರೆ. ಬೇರೆಯವರಿಗೆ ಮಾರಾಟ ಮಾಡಿ ಅಥವಾ ಬಾಡಿಗೆಯನ್ನು ನೀಡಿ ಮುಂದಿನ ಊರುಗಳಿಗೆ ತಮ್ಮ ಅಲೆಮಾರಿ ಬದುಕನ್ನು ಸಾಗಿಸುತ್ತಾರೆ. ಒಂದೆಡೆ

ನೆಲೆನಿಂತರೆ ಸಮಸ್ಯೆಗಳು ಉಂಟಾಗುತ್ತದೆ. ಮಾನಸಿಕ ನೆಮ್ಮದಿ ಹಾಳಗುತ್ತದೆ. ಸಂಚಾರದಲ್ಲಿ ಸದಾ ಮುಂದುವರೆದು ಬದುಕನ್ನು ನಡೆಸಬೇಕೆಂದು ದೇವರ ಆರ್ಶಿವಾದ ಇದೆ ಎನ್ನುತ್ತಾರೆ.

ವ್ಯಾಪಾರದಲ್ಲಿ ಅತಿಯಾದ ಲಾಭ ಪಡೆಯಬಾರದು ಸ್ವಲ್ಪ ಪ್ರಮಾಣದ ಲಾಭದಲ್ಲಿ ತೃಪ್ತರಾಗ ಬೇಕೆಂದು ಇವರ ನೀತಿಯಾಗಿದೆ. ಹೆಚ್ಚಿನ ಲಾಭದಿಂದ ಮುಂದಿನ ಜನ್ಮದಲ್ಲಿ ದೇವರು ಪ್ರಾಣಿಯಾಗಿ ಹುಟ್ಟಿಸುತ್ತಾನೆ. ಸ್ವರ್ಗದಲ್ಲಿ ನಮಗೆ ಯಮನು ವಿಪರೀತ ಕಿರುಕುಳ ನೀಡುತ್ತಾನೆ ಎಂಬುದು ಆಳವಾದ ನಂಬಿಕೆಯಿದೆ. ಮದುವೆ ಆಗುವ ಮೊದಲು ಋತುಮತಿಯಾದರೆ ಮನೆತನದಲ್ಲಿ ಕೆಡಕು ಬರುವುದುಂಟು. ಆದಕಾರಣ ಋತುಮತಿ ಆಗುವ ಮೊದಲೆ ವಿವಾಹ ಮಾಡಿಸುತ್ತಾರೆ. ಇದರಿಂದ ಹೆಣ್ಣುಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮಗಳ ಪ್ರಭಾವ ಬೀರುತ್ತದೆ. ಚಿಕ್ಕ ವಯಸ್ಸಿನಲ್ಲಿ ಸಾವುಗಳು ಸಂಭವಿಸುವ ಸಾಧ್ಯತೆಗಳು ಒಮ್ಮೊಮ್ಮೆ ಕಂಡುಬರುವುದುಂಟು. ಹೀಗಾಗಿ ಸಂಸಾರಿಕ ಜೀವನ ನಡೆಸುವುದು ಕಷ್ಟವಾಗುವುದು. ಆಧುನೀಕರಣದಲ್ಲಿ ಬಾಲ್ಯವಿವಾಹ ನಿಷೇಧಿಸಿದರೂ, ಈ ಪದ್ಧತಿಯನ್ನು ಅಲೆಮಾರಿಗಳು ಬಿಟ್ಟಿರುವುದಿಲ್ಲ. ಬಾಲ್ಯವಿವಾಹಗಳಿಗಾಗಿ ಮೌಲ್ಯಗಳನ್ನು ಸ್ವೀಕರಿಸಿಕೊಂಡು, ಸಾಮಾಜಿಕ ಜೀವನದಲ್ಲಿ ತಮ್ಮದೆ ಆದ ಸಾಮಾರಸ್ಯದ ಬದುಕನ್ನು ಕಂಡುಕೊಂಡಿದ್ದಾರೆ.

ಹೀಗೆ ಅಲೆಮಾರಿ ಸಮುದಾಯಗಳ ಸಾಮಾಜಿಕ ರಚನೆಗೆ ಭದ್ರವಾದ ಬುನಾದಿಯನ್ನು ಹಾಕಿದ ಮೌಲ್ಯಗಳು ಎಲ್ಲೋ ಹಾದಿ ತಪ್ಪುತ್ತಿದೆ. ಬದಲಾದ ಸಂದರ್ಭಗಳಿಗನುಗುಣವಾಗಿ ಸುಧಾರಣೆಯ ಕೆಲಸದಲ್ಲಿ ಸಮುದಾಯವು ಪ್ರಯತ್ನಿಸಬೇಕಾಗಿದೆ. ಉತ್ತಮ ಜೀವನದ ಕನಸು ಕಾಣಬೇಕಾಗಿದೆ. ಕೆಲವು ಅಹಿತಕರ ನಿಯಮಗಳನ್ನು ಪರಿಷ್ಕರಿಸಿ ಉತ್ತಮ ಮೌಲ್ಯಗಳನ್ನಷ್ಟೆ ಅಳವಡಿಸಿಕೊಂಡು ಸಾಮಾಜಿಕ ರಚನೆಯು ಬಿಗಿಯಾಗಬೇಕಾಗಿದೆ.

೩.೨. ಅಲೆಮಾರಿಗಳ ಕುಟುಂಬ ವ್ಯವಸ್ಥೆ

ಸಮಾಜದ ಮೂಲಭೂತ ಸಂಸ್ಥೆ ಎಂದರೆ ಕುಟುಂಬ. ಕುಟುಂಬ ಅತ್ಯಂತ ಸಣ್ಣ, ಸಂಸ್ಥೆಯೆಂದೆನಿಸಿ ಕೊಂಡಿದೆ. ಇತರೆ ಎಲ್ಲಾ ಸಾಮಾಜಿಕ ಸಂಸ್ಥೆಗಳು ನಿಂತಿರುವುದು ಕುಟುಂಬದ ಮೇಲೆ. ಮಾನವರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾ ಬಂದಿದ್ದಾರೆ. "ಕುಟುಂಬವು ಇಲ್ಲದೆ ಯಾವ ಸಮಾಜವು ಹೊರತಾಗಿಲ್ಲ."[7] ಎಲ್ಲಾ ಸಮುದಾಯಗಳಲ್ಲೂ ಒಂದಲ್ಲ ಒಂದು ರೀತಿಯ ಕುಟುಂಬ ವ್ಯವಸ್ಥೆ ಇರುತ್ತದೆ. ಇದು ವಿವಿಧ ಕ್ಷೇತ್ರಗಳಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ತನ್ನ ಸ್ಥಾನಮಾನ ಗಳನ್ನು ಕಾಯ್ದುಕೊಂಡು ಬಂದಿದೆ. ಸಮಾಜದಲ್ಲಿ ಕುಟುಂಬ ಅತ್ಯಾವಶ್ಯಕವಾಗಿದೆ.

ಸಮಾಜದ ಪ್ರತಿ ಕುಟುಂಬವು ಮಾನವ ಮಾನವರ ನಡುವೆ ಸಂಪರ್ಕಕಲ್ಪಿಸಿದೆ. ಸದಸ್ಯರ ಭವಿಷ್ಯಕ್ಕೆ ತಳಪಾಯ ಹಾಕಿದೆ. ಕುಟುಂಬ ಸಂಕುಚಿತ ಮತ್ತು ಸ್ವಾರ್ಥತೆಗೂ ಮುಖ್ಯವಾಗಿದೆ. ಕಾರಣ ಪ್ರತಿಕುಟುಂಬವು ಬಯಸುವುದೆನೆಂದರೆ ನಮ್ಮ ಕುಟುಂಬದ ಸದಸ್ಯರು ಕ್ಷೇಮವಾಗಿರಬೇಕು, ಗೌರವಯುತವಾಗಿರಬೇಕು. ನಮ್ಮ ಕುಟುಂಬದ ಸದಸ್ಯರು ಅನಾಹುತದಲ್ಲಿ ಬಲಿಯಾಗಬಾರದು, ಅಂತಹ ಸಂದರ್ಭದಲ್ಲಿ ಕುಟುಂಬದ

ಸದಸ್ಯರೆಲ್ಲರು ಭಾಗವಹಿಸಬೇಕು. ಬೇರೊಂದು ಕುಟುಂಬದ ಹಿತಕ್ಕಿಂತ ನಮ್ಮ ಕುಟುಂಬವೆ ಮುಖ್ಯವೆಂಬ ಸಂಕುಚಿತ ಮನೋಭಾವನೆಯನ್ನು ಪ್ರತಿಕುಟುಂಬದಲ್ಲಿ ಕಂಡುಬರುವುದುಂಟು. ಆ ಮೂಲಕ ಸೀಮಿತ ವ್ಯಾಪ್ತಿಯೊಳಗೆ ಕಾರ್ಯಚಟುವಟಿಕೆಗಳು ನಡಾವಳಿಯನ್ನು ರಚಿಸಿಕೊಂಡಿರುತ್ತದೆ.

"ಒಂದು ಜನಸಮೂಹವನ್ನು ಕುಟುಂಬ ಜೀವನದ ಸಂಕೋಲೆಗಳಿಂದ ಬಿಡಿಸಿದರೆ ಅದು ಯಾವ ಅತಂಕವಿಲ್ಲದೆ ಒಂದೆ ಮನಸ್ಸಿನಿಂದ ಇಡಿಯ ಸಮಾಜದ ಸುಖ ಸಾಧನೆಗೆ ನಿರಂತರವಾಗಿ ದುಡಿಯುತ್ತದೆ ಎನ್ನುವ ಮೂಲಕ ಕುಟುಂಬದ ಸ್ವಾರ್ಥತೆಯನ್ನು ಎತ್ತಿಹಿಡಿದಿದ್ದಾರೆ. ಇಂತಹ ಸ್ವಾರ್ಥತೆಯ ಕುಟುಂಬಕ್ಕೆ ಅನಿವಾರ್ಯ. ಏಕೆಂದರೆ ಮಾನವನ ವಿಕಾಸಕ್ಕೆ ಮತ್ತು ತನ್ನ ಸ್ವಯಂ ಪ್ರಜ್ಞೆಯನ್ನು ಗುರುತಿಸಲು ಇದೊಂದು ಕೇಂದ್ರಬಿಂದು. ಮಾನವನಲ್ಲಿ ಸದಾ ಜಾಗೃತವಾಗಿರುವ ಲೈಂಗಿಕ ಪ್ರವೃತ್ತಿಯಾಗಿ ಹತೋಟಿಗೆ ಒಳಪಡಿಸುವುದು. ಮಾನವ ಸಂತಾನ ಮುಂದುವರಿಕೆಯ ನಿರಂತರತೆಯನ್ನು ಕಾಪಾಡುವುದು ಇಂತಹ ಸಂಸ್ಥೆಯಿಂದಲೆ" ಎಂದು ಅರಿಸ್ಟಾಟಲ್ ಅಭಿಪ್ರಾಯವಾಗಿದೆ.

೩.೨.೧. ಕುಟುಂಬದ ಉಗಮ ಮತ್ತು ಬೆಳವಣಿಗೆ

ಕುಟುಂಬ ಉಗಮ ಮತ್ತು ಬೆಳವಣಿಗೆಯನ್ನು ಹುಡುಕುತ್ತಾ ಹೋದಂತೆ ಭಿನ್ನ-ವಿಭಿನ್ನವಾದ ತಿರುವುಗಳು ಕಾಣುವುದುಂಟು. ಇಂತಹ ಕುಟುಂಬ ಉಗಮವನ್ನು ತಿಳಿಯಲು ಅನೇಕ ಮಾನವ ಮತ್ತು ಸಾಮಾಜಿಕ ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಹಾಗೂ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. "ವಿಕಾಸವೆ ಎಲ್ಲಾ ಜೀವಿಗಳ ಜೀವಾಳ"[3]ವೆಂದು ಖ್ಯಾತ ಮಾನವಶಾಸ್ತ್ರಜ್ಞ ಡಾರ್ವಿನ್‌ರ ವಾದವಾಗಿದೆ. ಅಂದರೆ ಸರಳತೆಯಿಂದ ಸಂಕೀರ್ಣತೆಗೆ ಬೆಳವಣಿಗೆ ಹೊಂದಿದೆ ಎಂದು ವಾದ ಮಂಡಿಸಿದನು. ಇದನ್ನೆ ಆಧಾರ ವಾಗಿಟ್ಟುಕೊಂಡು "ಮಾನವ ಸಮಾಜವು ಕೆಳಸ್ತರಗಳಿಂದ ಉನ್ನತಸ್ತರಗಳಿಗೆ ವಿಕಾಸಗೊಂಡಿವೆ" ಎಂಬ ಮಾರ್ಗನ್‌ರವರ ಅಭಿಮತವಾಗಿದೆ. All men evolved in one evolutionry part through three absolitly indentical stage of savagery, barbarism and citization ಅಂದರೆ savage ಸ್ಥಿತಿಯಿಂದ Barbarism ಸ್ಥಿತಿಗೆ ನಂತರ ನಾಗರಿಕ ಹಂತಕ್ಕೆ ತಲುಪ್ಪಿದ್ದಾನೆ. ಕುಟುಂಬ ಉಗಮದ ಮೂರು ಹಂತಗಳಲ್ಲಿ ಕಂಡುಬರುವುದುಂಟು. ೧. ಆದಿಮಕಾಲ ೨. ಮಧ್ಯಮಕಾಲ ೩. ನಾಗರಿಕ ಕಾಲ.

೧. ಆದಿಮಕಾಲ

ಲೈಂಗಿಕ ಸ್ವೇಚ್ಛಾಚಾರ ಪದ್ಧತಿ : ಅಲೆಮಾರಿಯಾಗಿದ್ದ ಅಂದಿನ ಮಾನವರು ಆಹಾರಕ್ಕಾಗಿ ಸಾಂಘುಟಿಕವಾಗಿ ಅಲೆದಾಡುತ್ತ ತಮಗೆ ಸಿಗುವ ಗಡ್ಡೆ-ಗೆಣಸು, ಹಣ್ಣು-ಹಂಪಲುಗಳು ಇತ್ಯಾದಿಗಳನ್ನು ತಿಂದು ಬದುಕುತ್ತಾ, ತಮಗೆ ಇಷ್ಟಬಂದ ಕಡೆಗೆ ತಂಗುತ್ತಿದ್ದರು ಮತ್ತು ಪ್ರಕೃತಿ ದತ್ತವಾಗಿ ಬಂದ ತನ್ನ ಕಾಮವನ್ನು ಉಪಯೋಗಿಸಿಕೊಳ್ಳುತ್ತಿದ್ದರು. "ಇಂದು ಒಂದು ಕಡೆ ಇದ್ದರೆ ನಾಳೆ ಮತ್ತೊಂದು ಕಡೆ ತಮ್ಮ ಬಯಕೆಗಳನ್ನು ಪಡೆದುಕೊಳ್ಳುತ್ತಿದ್ದರು. ಇಲ್ಲಿ ಯಾವುದೆ ರೀತಿಯ ಭಾವನಾತ್ಮಕ ಸಂಬಂಧ

ಗಳಿರಲಿಲ್ಲ. ಪ್ರಾಣಿಗಳಂತೆ ಸ್ವೇಚಾಚಾರದ ಬದುಕನ್ನು ಬದುಕುತ್ತಾ ಎಂದಿನಂತೆ ತನ್ನ ಅಲೆದಾಟದಲ್ಲಿ ತೊಡಗುತ್ತಿದ್ದರು."[9] ಈ ಹಂತದಲ್ಲಿ ಸ್ತ್ರೀಪುರುಷರ ಮೇಲೆ ಯಾವುದೆ ರೀತಿಯ ಲೈಂಗಿಕ ನಿರ್ಬಂಧವಿರಲಿಲ್ಲ. ಯಾರು ಯಾರ ಜೊತೆಯಾದರು ಲೈಂಗಿಕ ಕ್ರಿಯೆಯಲ್ಲಿ ಸಂಬಂಧಗಳನ್ನು ಹೊಂದಬಹುದಾಗಿತ್ತು.

ರಕ್ತಸಂಬಂಧ ಕುಟುಂಬ : ಮಾನವರು ಕಾಡು ಸ್ಥಿತಿಯಲ್ಲಿದ್ದರೂ "ಉಷ್ಣವಲಯದಲ್ಲಿ ವಾಸಿಸುತ್ತಾ, ಕ್ರೂರ ಮೃಗಗಳಿಂದ ರಕ್ಷಣೆಪಡೆಯಲು ಮರದ ಮೇಲೆ ವಾಸಮಾಡುತ್ತಿದ್ದರು."[10] ಹಸಿವು ಬಂದಾಗ ಮರದ ಮೇಲಿಂದ ಕೆಳಗಿಳಿದು ಗಡ್ಡೆ-ಗೆಣಸು, ಹಣ್ಣುಗಳನ್ನು ಹುಡುಕಿಕೊಂಡು ತಿನ್ನುತ್ತಾ ಕಾಲಕಳೆಯುತ್ತಿದ್ದರು. ಇಲ್ಲಿ ಕುಟುಂಬ ವಿಕಾಸದ ಮೊದಲ ಹೆಜ್ಜೆ ಎಂದು ಗುರುತಿಸಬಹುದು. ಈ ಹಂತದಲ್ಲಿ ಸ್ವಲ್ಪ ಸುಧಾರಣೆ ಕಂಡುಕೊಂಡನು. ಏಕೆಂದರೆ ಅಲ್ಲಿನ ಸ್ವೇಚ್ಛಾಚಾರದ ಲೈಂಗಿಕ ಸಂಪರ್ಕ ವ್ಯವಸ್ಥೆಯಲ್ಲಿ ತಂದೆ-ತಾಯಿ, ಮಕ್ಕಳು ಯಾರು ಯಾರ ಜೊತೆಗಾದರು ಲೈಂಗಿಕ ಸಂಬಂಧ ಹೊಂದಬಹುದಿತ್ತು. ಆದರೆ ಈ ಅವಧಿಯಲ್ಲಿ ತಂದೆ-ತಾಯಿ ಮತ್ತು ಮಕ್ಕಳ ನಡುವೆ ಲೈಂಗಿಕ ಸಂಪರ್ಕಕ್ಕೆ ಕಡಿವಾಣ ಹಾಕಲಾಯಿತು. ಆದರೆ ಸಹೋದರ ಸಹೋದರಿಯರ ನಡುವೆ ಲೈಂಗಿಕ ಸಂಬಂಧ ಮುಂದುವರಿಯಿತು. ಇದನ್ನು ಒಂದೆ ರಕ್ತಸಂಬಂಧ ಹೊಂದಿರುವ ಕುಟುಂಬವೆಂದು ಕರೆಯಲಾಯಿತು. ಇಲ್ಲಿ ಭಾವನಾತ್ಮಕ ಸಂಬಂಧಗಳೂ ಗರಿಬಿಚ್ಚಿ ತೊಡಗಿದವು. ಇದು ಆದಿಮಕಾಲದ ಕೌಟುಂಬಿಕ ಮೊದಲ ಪಾದವಾಗಿತ್ತು.

ಎರಡನೆಯ ಪಾದದಲ್ಲಿ ಗಡ್ಡೆ-ಗೆಣಸುಗಳು, ಹಣ್ಣು-ಹಂಪಲುಗಳ ಜೊತೆಗೆ ಮೀನು ಮತ್ತು ಇತರೆ ಜಲಚರ ಪ್ರಾಣಿಗಳನ್ನು ಆಹಾರವನ್ನಾಗಿ ಸ್ವೀಕರಿಸುವುದನ್ನು ಕಲಿತರು. ಇಲ್ಲಿ "ಬೆಂಕಿಯ ಬಳಕೆಯು ಇದ್ದುದರ ಫಲವಾಗಿ ಜಲಚರ ಪ್ರಾಣಿಗಳನ್ನು ಸುಟ್ಟುತಿನ್ನಲು ಮುಂದಾದ"[11]. ಎಲ್ಲಾ ಕಾಲಗಳಲ್ಲಿ ಕಾಡಿನ ಜನ್ಯಗಳು ಸಿಗುವುದು ತೊಂದರೆಯಾಗುತ್ತಿದ್ದರಿಂದ ಇಂತಹ ಮಾರ್ಗವನ್ನು ಹುಡುಕಿಕೊಳ್ಳಲಾಯಿತು. ಹೀಗೆ ಜಲಚರ ಭಕ್ಷಿಸುತ್ತಾ, ಮಾನವ ಈ ವಸ್ತುಗಳು ದೊರೆಯುವ ಪ್ರದೇಶಗಳನ್ನು ಹುಡುಕಲು ಅಲೆದಾಟವನ್ನು ಮಾಡುವಂತಾಯಿತು. ಹಾಗೂ ಬಿಡಾರಗಳನ್ನು ಹೂಡಲು ಮುಂದಾದ ನದಿ ತೀರದ ಪ್ರದೇಶದಲ್ಲಿ ವಾಸವನ್ನು ಮಾಡುತ್ತಾ, ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡಲು, ಕಲ್ಲಿನ ಆಯುಧಗಳನ್ನು ಉಪಯೋಗಿಸಲು ಮುಂದಾದ ರಕ್ತಸಂಬಂಧದಲ್ಲಿಯೆ ಲೈಂಗಿಕ ಸಂಬಂಧ ನೆಲೆಯೂರಿತ್ತು.

ಮೂರನೆ ಪಾದದಲ್ಲಿ "ಬಿಲ್ಲು ಬಾಣಗಳನ್ನು ಶೋಧಿಸಿಕೊಂಡ ನಂತರ ಬೇಟೆಯು ಒಂದು ವೃತ್ತಿಯಾಯಿತು"[12]. ಈ ಬೇಟೆಯಲ್ಲಿ ನಿರತರಾಗಿರುತ್ತಿದ್ದರು. ಸ್ತ್ರೀಯರು ಬೇಟೆಯಿಂದ ಬಂದ ಮಾಂಸವನ್ನು ಸುಡುವುದು, ತುಂಡು ಮಾಡುವುದು, ಹಣ್ಣುಗಳು, ಗಡ್ಡೆ-ಗೆಣಸುಗಳನ್ನು ಹುಡುಕುವ ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಮರದ ತೊಗಟೆಯಿಂದ ಉಡುಪುಗಳನ್ನು ಧರಿಸುವುದನ್ನು ಅಭ್ಯಸಿಸಿಕೊಂಡರು. ಮರದ ಪಾತ್ರೆಯ ಉಪಯೋಗವನ್ನು ಕಂಡುಹಿಡಿದು ದೊಡ್ಡ ದೊಡ್ಡ ದಿಮ್ಮಿಗಳನ್ನು ಕಲೆಹಾಕಿ ಒಂದು ಸೂರನ್ನು ಮಾಡಿಕೊಂಡರು, ಶಿಲೆಯ, ಆಯುಧಗಳಿಂದ ಉಪಯೋಗವನ್ನು ಕಂಡುಕೊಂಡ. ಇಂತಹ ಶಿಲೆಯ ಆಯುಧಗಳು ಅಲೆಮಾರಿ ಬದುಕನ್ನು ಸ್ವಲ್ಪ ಸುಧಾರಿಸಲು ಸಹಾಯವಾಯಿತು. ಶಿಲೆಗಳಿಂದ ಹರಿತ ಮತ್ತು ಚೂಪಾದ ಆಯುಧ ಮಾಡಿಕೊಂಡು, ತಮ್ಮ ಮೇಲೆ ಎರಗುವ ಕ್ರೂರ ಪ್ರಾಣಿಗಳ ಅಪಾಯದಿಂದ ರಕ್ಷಣೆ ಪಡೆಯಲು ಬಳಸುತ್ತಿದ್ದನು.

೨. ಮಧ್ಯಮಕಾಲ

ಈ ಅವಧಿಯಲ್ಲಿ ಮಾನವನ ಜೀವನವು ಸ್ವಲ್ಪ ಬದಲಾವಣೆಯಾಗಿದೆ ಎಂದು ಹೇಳಬಹುದು. ಕಾರಣ ಹಿಂದಿದ್ದ ಒಂದೆ ರಕ್ತಸಂಬಂಧಗಳ ಕುಟುಂಬವು ಇಲ್ಲವಾಗಿವೆ. ಆ ಸ್ಥಳದಲ್ಲಿ ಬೇರೆ ತರಹದ ಸಂಬಂಧಗಳು ಕುಟುಂಬ ಸಂಬಂಧಗಳು ಜಾರಿಗೆ ಬಂದಿದ್ದವು. ಇಲ್ಲಿ ಲೈಂಗಿಕ ಚಟುವಟಿಕೆಯ ಮೇಲೆ ಕೆಲವೊಂದು ನಿರ್ಬಂಧಗಳನ್ನು ಹೇರಲಾಯಿತು. ಒಂದೆ ರಕ್ತಸಂಬಂಧ ಕುಟುಂಬವನ್ನು ತ್ಯಜಿಸಲು ಕೆಳಗಿನಂತೆ ಹಲವಾರು ಕಾರಣಗಳು ಇರಬೇಕು.

೧. ಒಂದೆ ರಕ್ತಸಂಬಂಧದಲ್ಲಿ ಹುಟ್ಟಿದ ಮಕ್ಕಳು ಅಂಗವಿಕಲರಾಗಿ ಜನಿಸಿರಬಹುದು

೨. ಆರೋಗ್ಯದ ಮೇಲೆ ಕೆಟ್ಟ ಪರಿಣಾಮಬೀರಿರಬಹುದು

೩. ಹೊಸದನ್ನು ಪಡೆಯುವ ಕುತೂಹಲ

೪. ಭಿನ್ನವಾದ ಪರಿಸರದಲ್ಲಿ ಅಲೆದಾಡುವುದರಿಂದ ಬೇರೆಯವರ ಒಡನಾಟ ಆಕರ್ಷಕವಾಗಿ ಕಂಡಿರಬಹುದು.

ಹೀಗೆ ಹಲವಾರು ಕಾರಣಗಳಿಂದ ಮೊದಲಿದ್ದ ರಕ್ತಸಂಬಂಧಗಳು ಅಥವಾ ಸಹೋದರ, ಸಹೋದರಿಯರ ಕುಟುಂಬವು ರೂಪಾಂತರಗೊಂಡು ಬೇರೊಂದು ಗುಂಪಿನ ಸಹೋದರರು ಮತ್ತೊಂದು ಗುಂಪಿನ ಸಹೋದರಿಯರು ಕೂಡಿಕೊಂಡು ಲೈಂಗಿಕ ಸಂಪರ್ಕ ವ್ಯವಸ್ಥೆ ಏರ್ಪಡಿಸಿಕೊಂಡರು. ಹಾಗೂ ಇವರೀರ್ವರಿಗೂ ವಿವಾಹವನ್ನು ಜರುಗಿಸಲಾಯಿತು. ಈ ಹಂತದಲ್ಲಿ ಲೈಂಗಿಕ ಸಂಪರ್ಕವು ಹೊಸ ವ್ಯಾಖ್ಯಾನ ಪಡೆದು ವಿವಾಹ ಎಂಬ ಸಂಸ್ಥೆ ಜನ್ಮತಾಳಿತು. ಅದರಲ್ಲೂ ವಿಶೇಷವಾಗಿ ಗೋತ್ರಗಳ ಮೂಲಕವಾಗಿ ವಿವಾಹ ಪದ್ಧತಿ ಜಾರಿಗೆಬಂದಿತು.

ಮದ್ಯಮಕಾಲದ ಮೊದಲ ಪಾದದಲ್ಲಿ "ಕುಂಬಾರ ಕಲೆಯು ಜಾರಿಗೆ ಬಂದಿತು. ಮೊದಲು ಬುಟ್ಟಿ, ಪಾತ್ರೆ ಇತ್ಯಾದಿಗಳನ್ನು, ಬೆಂಕಿಯಿಂದ ರಕ್ಷಿಸಲು ಪಾತ್ರೆಗಳ ಸುತ್ತಲೂ ಕೆಸರನ್ನು ಮೆತ್ತಿ ಉಪಯೋಗಿಸುತ್ತಿದ್ದರು"[13]. ನಂತರ ಇದು ಒಂದು ಹೊಸ ವಸ್ತುವೆಂದು ಭಾವಿಸಿಕೊಂಡರು. ಇದನ್ನು ಮುಂದೆ ಕೆಸರಿನ ಮಡಕೆಗಳು ವೈವಿಧ್ಯಮಯ ವಸ್ತುಗಳಾಗಿ ತಯಾರಿಸಿದರು. ಪ್ರಾಣಿಯ ಉಪಯೋಗ ಪಡೆಯಲಾಯಿತು. ಮತ್ತು ಇದರಿಂದ ಉತ್ಪತ್ತಿಯಾದ ಹಾಲು, ತುಪ್ಪ, ಬೆಣ್ಣೆ, ಮಾಂಸ ಇತ್ಯಾದಿಗಳನ್ನು ಆಹಾರಕ್ಕಾಗಿ ಬಳಸಿಕೊಳ್ಳಲಾಯಿತು. ವ್ಯವಸಾಯಕ್ಕೆ ಪ್ರಾಣಿ ಬಳಸಿಕೊಳ್ಳುವುದರಿಂದ ಕೃಷಿಯನ್ನು ಪುರುಷರು ಸ್ತ್ರೀಯರಿಂದ ಹಸ್ತಾಂತರಿಸಿಕೊಂಡರು. ಈ ಹಿಂದಿದ್ದ ವಾಸದ ಕಲ್ಪನೆಯು ಸುಧಾರಿಸಿ ಇದ್ದುದರಲ್ಲಿಯೆ ವಾಸಕ್ಕೆ ವಸತಿಗಳನ್ನು ನಿರ್ಮಿಸಿಕೊಂಡರು.

ಎರಡನೆ ಪಾದದಲ್ಲಿ ಪ್ರಾಣಿಗಳ ಪೋಷಣೆಯಿಂದ ಹೇರಳವಾದ ಉಪಯೋಗ ಮತ್ತು ಲಾಭವಿದೆ ಎಂದು ಮನವರಿಕೆ ಮಾಡಿಕೊಂಡು, ಖಾಸಗಿ ಆಸ್ತಿ ಕಲ್ಪನೆ ತಳವೂರಿತು. ಪರಿಣಾಮ ವಿಶಾಲವಾದ ಫಲವತ್ತಾದ ಬಯಲು ಭೂಮಿಯಲ್ಲಿ ನೀರನ್ನು ಬಳಸಿ, ಆಹಾರದ ಬೆಳೆಯನ್ನು ಬೆಳೆಯಲು ಮುಂದಾದ.

ಬಿಸಿಲಿನಲ್ಲಿ ಒಣಗಿದ ಇಟ್ಟಿಗೆಗಳಿಂದ ಮತ್ತು ಕಲ್ಲುಗಳಿಂದ ಕೋಟೆಯಂತಹ ಮನೆಗಳನ್ನು ನಿರ್ಮಿಸಿಕೊಳ್ಳುವುದರ ಜೊತೆಗೆ, ಲೋಹದ ಉಪಯೋಗ ಇತ್ಯಾದರು ಕಬ್ಬಿಣದ ಉಪಯೋಗವಿರಲಿಲ್ಲ. ಹೆಚ್ಚಾಗಿ ಹುಲ್ಲುಗಾವಲು ಇರುವ ಪ್ರದೇಶದಲ್ಲಿ ಪಶುಗಳೊಂದಿಗೆ ಬೀಡುಬಿಡುತ್ತಿದ್ದರು. ಆಹಾರಕ್ಕಾಗಿ ಮನುಷ್ಯರನ್ನೆ ಭಕ್ಷಿಸುತ್ತಿದ್ದ ನರ ಮನುಷ್ಯನು ಕಾಲಾಂತರದಲ್ಲಿ ಬದಲಾಯಿಸಿಕೊಳ್ಳುತ್ತಾ, ಧಾರ್ಮಿಕ ಲೇಪನ ಕೊಟ್ಟು ನಿಷೇಧಿಸಲಾಯಿತು. ಅಷ್ಟೋತ್ತಿಗೆ ಆಹಾರದ ಬೆಳೆಗಳು ಹೇರಳವಾಗಿ ಬೆಳೆಯುವುದನ್ನು ಹಾಗೂ ಪಶುಗಳಿಂದ ಹಾಲು ಮೊಸರು ಮಾಂಸ ದೊರೆಯುತ್ತಿದ್ದರಿಂದ ನರಭಕ್ಷಣೆ ನಿಂತಿತು.

ಮೂರನೆಯ ಪಾದದಲ್ಲಿ ಕಬ್ಬಿಣದ ಅದಿರು ಕರಗಿಸುವುದರೊಂದಿಗೆ ವೈವಿಧ್ಯಮಯ ಆಯುಧಗಳನ್ನು ಕಂಡುಹಿಡಿಯಲಾಯಿತು. ಇವುಗಳು ಸಂದರ್ಭಕ್ಕೆ ತಕ್ಕಂತೆ ಉತ್ಪತ್ತಿಯಾದವು. ಇಲ್ಲಿ ಬಹುಮುಖ್ಯ ಬದಲಾದ ಬೆಳವಣಿಗೆ ಎಂದರೆ ಸಂಕೇತ. "ಅಕ್ಷರಗಳ ಮೂಲಕ ಬರವಣಿಗೆಯನ್ನು ರೂಢಿಸಿಕೊಂಡನು. ಕಬ್ಬಿಣದ ನೇಗಿಲನ್ನು ಮೊದಲಬಾರಿಗೆ ಉಳುವ ಮೂಲಕ ವಿಶಾಲವಾದ ಪ್ರದೇಶವನ್ನು ವ್ಯವಸಾಯಕ್ಕೆ ವಿಸ್ತರಿಸಿಕೊಂಡನು."[14] ಇದರ ಜೊತೆಯಲ್ಲಿ ಫಲವತ್ತಾದ ಭೂಮಿ ಮತ್ತು ನೀರು ದೊರೆಯುವ ನದಿ ತೀರಗಳಲ್ಲಿ ಜನರು ಹೆಚ್ಚು ಬೀಡು ಬೀಡುತ್ತಿದ್ದರು. ನಂತರ ಖಾಯಂ ವಾಸಕ್ಕೆ ಮನೆಮಾಡಿಕೊಳ್ಳುವಂತರಾಗಿ ಮುಂದೆ ಗ್ರಾಮವಾಗಿ, ಪಟ್ಟಣವಾಗಿ, ನಗರಗಳ ಉಗಮಕ್ಕೆ ನಾಂದಿಯಾಯಿತು. ಈ ಹಂತದ ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ ದ್ರಾಕ್ಷರಸ, ಎಣ್ಣೆ ತಯಾರಿಕೆ, ಬಟ್ಟೆಯ ವೈವಿಧ್ಯತೆ ಬೆಳಕಿಗೆ ಬಂದವು.

೩. ನಾಗರಿಕ ಕಾಲ

ಸಹೋದರ ಸಹೋದರಿಯರ ವಿವಾಹದಲ್ಲಿ ಸಾಕಷ್ಟು ಸುಧಾರಣೆಗಳೊಂದಿಗೆ ಒಂದೆ ವರ್ಗದವರ ಜೊತೆ ವಿವಾಹ ಇಲ್ಲದೆ ಗೋತ್ರ, ಕುಲ ಅಥವಾ ಬಳಿಗಳ ಮೂಲಕ ವಿವಾಹಗಳು ಮುಂದುವರಿದವು. ಬಹುಪತ್ನಿತ್ವ ಮತ್ತು ಏಕಪತ್ನಿತ್ವ ಕುಟುಂಬ ಪದ್ಧತಿ ಜಾರಿಗೆ ಬಂದಿತು. ಆದರೂ ಸಂತಾನಗಳು ಹುಟ್ಟದ ಸಂದರ್ಭದಲ್ಲಿ ರೋಗಗ್ರಸ್ತರಾಗಿದ್ದಲ್ಲಿ ಪ್ರತಿಷ್ಠೆಗಾಗಿ ಮತ್ತು ಅತಿಕಾಮುಕವಾಗಿರುತ್ತಿದ್ದರಿಂದ ಬಹುಪತ್ನಿತ್ವ ನಡೆಯುತ್ತಿತ್ತು. ಕೆಲವೊಂದು ಸಮುದಾಯಗಳಲ್ಲಿ ಆಸ್ತಿಯು ಹಂಚಿಹೋಗಬಾರದೆಂಬ ಕಾರಣಕ್ಕೂ ವಿವಾಹವಾಗುತ್ತಿದ್ದರು. ಈ ಅವಧಿಯಲ್ಲಿ ನೈಸರ್ಗಿಕ ಸಂಪತ್ತುಗಳು ಮತ್ತಷ್ಟು ಪರಿಷ್ಕರಣೆಗೊಳಿಸುವ ಮೂಲಕ ಹೇರಳವಾದ ಲಾಭವನ್ನು ಪಡೆಯಲು ಮುಂದಾದರು. ಕೈಗಾರಿಕೆ ಕಲೆಯು ನವೀನ ಮಾದರಿಗಳೊಂದಿಗೆ ಚಾಲ್ತಿಗೆ ಬಂದಿತು. ಕಲೆಯ ವೈವಿಧ್ಯ, ಜ್ಞಾನ, ಯಂತ್ರಗಳ ಬಳಕೆ, ವಿದೇಶಿ ವ್ಯಾಪಾರ, ಬಂಗಾರ ಇತ್ಯಾದಿಗಳು ವಿವಿಧ ರೀತಿಯಲ್ಲಿ ಕಂಡುಬಂದಿತು. ಜೀವನವು ಆರಂಭವಾಯಿತು. ಹೀಗೆ ಕುಟುಂಬವು ಸಾಂಘಿಕ ಜೀವನ ಪದ್ಧತಿಯಿಂದ ಏಕಸಂಗಾತಿ ಕುಟುಂಬಕ್ಕೆ ಮಾರ್ಪಟ್ಟಿತು.

ಮಾರ್ಗನ್‌ರ ವಾದ ಮಾರ್ಗನ್‌ರವರು ಕುಟುಂಬದ ಬೆಳವಣಿಗೆಯನ್ನು ಸಮಾಜಶಾಸ್ತ್ರಜ್ಞರು ವಿರೋಧಿಸಿದರು. ಈತನ ವಾದವೆಂದರೆ ತಮ್ಮ ಕೃತಿಯಾದ (೧೮೭೭) "ಏನ್ಸಿಯಂಟ್ ಸೊಸೈಟಿ"ಯಲ್ಲಿ ಮಾನವಶಾಸ್ತ್ರದ ಬೆಳವಣಿಗೆಯಲ್ಲಿ ಮಾತ್ರ ಪ್ರಧಾನ ಪದ್ಧತಿಯ ಕುಟುಂಬವು ಜಾರಿಯಲ್ಲಿದೆ ಎಂದು ಹೇಳಿದನು. ಅದಕ್ಕೆ ಕೊಡುವ ಕಾರಣ "ಆದಿವಾಸಿಗಳಿಗೆ ಪಿತೃತ್ವದ ಬಗ್ಗೆ ಅಜ್ಞಾನವಿತ್ತು. ಲೈಂಗಿಕ

ಆಸಕ್ತಿಯಿದ್ದುದರ ಫಲವಾಗಿ ಅದನ್ನು ಪೂರೈಸಿಕೊಳ್ಳಲು ಮಾತ್ರ ವಿವಾಹವಾಗುತ್ತಿದ್ದರು"[15]. ಮತ್ತು ಯಾವಾಗಲೂ ಬೇಟೆಯಲ್ಲಿ ನಿರತರಾಗಿರುತ್ತಿದ್ದರಿಂದ ಪುರುಷರ ಸುಮಾರು ದಿವಸಗಳ ತನಕ ಬರುತ್ತಿರಲಿಲ್ಲ ಮತ್ತು ಬರಬೇಕು ಎಂಬ ಭಾವನೆಯ ಇರಲಿಲ್ಲ. ಒಮ್ಮೊಮ್ಮೆ ಬೇಟೆಗೆ ಹೋದಾಗ ಅವಸಾನ ಹೊಂದುತ್ತಿದ್ದಾರೆಂದು ತಿಳಿದಾಗ ಪರಿಣಾಮ ತಾಯಿಗೆ ತಾಯ್ತನದ ಅಂತರಕರಣೆ ಇರುವುದರಿಂದ ಮಕ್ಕಳ ಲಾಲನೆ-ಪಾಲನೆ ತಾಯಿಗೆ ಅನಿವಾರ್ಯವಾಗಿತು. ಇಂತಹ ಸಂದರ್ಭದಲ್ಲಿ ಮಕ್ಕಳಾಗುವುದಕ್ಕೆ ಪುರುಷ ಕಾರಣನಲ್ಲ, ದೇವರ ದಯೆ ಇದೆ ಎಂದು ನಂಬಿದ್ದರು. ಯಾವಾಗ ಪುರುಷನು ಪಿತೃತ್ವಕ್ಕೆ ಕಾರಣನೆಂದು ಗೊತ್ತಾಯಿತೊ ಅಂದಿನಿಂದ ಪುರುಷ ಸ್ತ್ರೀಯನ್ನು ಅಧೀನಳನ್ನಾಗಿ ಮಾಡಿಕೊಂಡನು. ಈ ರೀತಿಯಲ್ಲಿ ಮಾರ್ಗನ್ ಅಭಿಪ್ರಾಯ. ಜೊತೆಯಲ್ಲಿ ಸ್ಪೆನ್ಸರ್, ಟೇಲರ್, ಬ್ರಿಪಾಲ್ಸ್ ಕೂಡ ಮಾತೃ ಪ್ರಧಾನ ವ್ಯವಸ್ಥೆಯೆ ಮೊದಲ ಕುಟುಂಬ ವ್ಯವಸ್ಥೆ ಎಂದು ಹೇಳುತ್ತಾರೆ. ವೆಸ್ಟರ್ ಮಾರ್ಕ್ ಎಂಬುವರು ಕುಟುಂಬವು ಹೊಂದುವಿಕೆ ಮತ್ತು ಅಸೂಯೆಯಿಂದ ರೂಪಗೊಂಡಿದೆ ಎಂದು, ಪ್ರಬಲವಾದ ಗಂಡಸು ತನ್ನ ಸಂಗಾತಿಯನ್ನು ಪ್ರತ್ಯೇಕವಾಗಿ ಹೊಂದಿ, ಅವಳ ಮೇಲೆ ತನ್ನ ಅಧಿಪತ್ಯ ಸ್ಥಾಪಿಸಿದನು. ಇದು ಮುಂದೆ ಪುರುಷರನ್ನು ಕೇಂದ್ರಬಿಂದುವಾಗಿ ಏಕಸಂಗಾತಿ ಕುಟುಂಬವಾಯಿತೆಂದು ಹೇಳುತ್ತಾನೆ. ಗಂಡಿಗೆ ಬಲ, ಛಲ, ಸಾಹಸ, ಒಡೆತನದ ಮನೋಭಾವ ಇರುವುದರಿಂದ ಸ್ತ್ರೀಯು ಪುರುಷನೊಂದಿಗೆ ಜೀವನ ಮಾಡಿದಳೆಂದು ಇದನ್ನು ಪುರಾತನ ಸಮಾಜ ಪುಷ್ಕರಿಸುತ್ತ ಹೀಗೆ ಕುಟುಂಬವು ಹಂತ ಹಂತವಾಗಿ ಬೆಳವಣಿಗೆಯಾಯಿತೆಂದು ಹೇಳಬಹುದೆ ವಿನಹ ಹೀಗೆಯೆ ಇತ್ತು ಎಂದು ನಿಖರವಾಗಿ ಹೇಳಲು ಸಾಧ್ಯವಾಗಿಲ್ಲ. ಆದರೆ ಕುಟುಂಬವು ಇರುವುದು ಸತ್ಯ ವ್ಯವಸ್ಥಿತ ಬದುಕಿಗೆ ಬುನಾದಿ ಹಾಕಿರುವುದು ಸತ್ಯ.

'ಕುಟುಂಬ' ಎಂದರೆ Family ಎಂಬ ಇಂಗ್ಲಿಷ್ ಪದದ ಅರ್ಥವಾಗಿದೆ. Family ಶಬ್ದವು ಲ್ಯಾಟೀನ್ ಭಾಷೆಯ 'ಪ್ಯಾಮುಲಸ್' ಎಂಬ ಪದದಿಂದ ಬಂದಿದೆ. ಇದರ ಅರ್ಥ ಸೇವಕ, ಆಳು ಎಂದರ್ಥ. "ಪ್ರಾಚೀನ ಕಾಲದಲ್ಲಿ ಸೆರೆಸಿಕ್ಕವರನ್ನು ತಮ್ಮ ಆಳುಗಳನ್ನಾಗಿಟ್ಟುಕೊಂಡು ಸೇವೆಸಲ್ಲಿಸಿ ಕೊಳ್ಳುತ್ತಿದ್ದರು. ಮುಂದೆ ಅದು ನಿಧಾನಗತಿಯಲ್ಲಿ ಆಳುಗಳು ಕುಟುಂಬದ ಸದಸ್ಯರಾಗಿ ಬಿಂಬಿತರಾದರು"[16]. ಇಂತಹ ಆಳುಗಳಿಗೆ ರಕ್ಷಣೆ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಆ ಕುಟುಂಬ ನಿರ್ವಹಿಸುತಿತ್ತು. ಕುಟುಂಬದ ಪ್ರಗತಿಗೆ ಸೇವಕರು ಶ್ರಮಿಸುತಿದ್ದರು. ಕುಟುಂಬ ಎಂದರೆ ಗಂಡ-ಹೆಂಡತಿ ಮತ್ತು ಮಕ್ಕಳು ಕೂಡಿಕೊಂಡು ಒಂದೆ ಮನೆಯಲ್ಲಿ ವಾಸಿಸುವ ಸಮೂಹವನ್ನೆ ಕುಟುಂಬವೆಂದು ಕರೆಯಬಹುದು.

"ಕುಟುಂಬವು ಲೈಂಗಿಕ ಸಂಬಂಧದಿಂದ ಸ್ಪಷ್ಟಪಡಿಸಲ್ಪಟ್ಟು ಸಾಕಷ್ಟು ಖಚಿತವಾದ, ಮಕ್ಕಳನ್ನು ಪಡೆಯಲು ಮತ್ತು ಪೋಷಿಸಲು ಅವಕಾಶ ಮಾಡಿಕೊಡುವಂತಹ ಒಂದು ಸಾಮಾಜಿಕ ವ್ಯವಸ್ಥೆ"[17]. ಎಂದು ಮೆಕೈವರ್ ಮತ್ತು ಪೇಜ್‌ರವರ ಅಭಿಮತವಾಗಿದೆ.

"ಸಂತತಿ ಸಹಿತವಾಗಿ ಇಲ್ಲವೆ ಸಂತತಿ ರಹಿತವಾಗಿ ಗಂಡ-ಹೆಂಡತಿಯರು ಕೂಡಿಕೊಂಡು ಇಲ್ಲವೆ ಹೆಂಡತಿಯೊಬ್ಬಳೆ ಆಗಲಿ ಮಕ್ಕಳೊಂದಿಗೆ ಸಾಮಾನ್ಯವಾಗಿ ಚಿರಕಾಲ ಬಾಳುವೆ ನಡೆಸುವ ಕ್ರಮವೆ ಕುಟುಂಬ"[18]ವೆಂದು ಆರ್ಗ್‌ಬರ್ನ್ ಮತ್ತು ನಿಮ್ಕಾಪ್‌ರವರ ವಾಖ್ಯಾನವಾಗಿದೆ.

ಮಾನವನ ಜೀವನ ಮತ್ತು ಕುಟುಂಬದ ಬೆಳವಣಿಗೆಯ ಹಂತಗಳು

ಯುಗ	ವರ್ಷ	ಸ್ಥಿತಿ	ಜೀವನಪದ್ಧತಿ	ಕುಟುಂಬ ವ್ಯವಸ್ಥೆ
೧	೨	೩	೪	೫
ಹಳೆಯ ಶಿಲಾಯುಗ	ಕ್ರಿ.ಪೂ. ೮೦.೦೦೦ ದಿಂದ ೧೦.೦೦೦ ವರೆಗೆ	[illegible]	ಒಂಟಿ ಜೀವನ, ಗಡ್ಡೆಗೆಣಸು ತಿನ್ನುವಿಕೆ, ಬಯಲಿನಲ್ಲಿ ವಾಸ ಸ್ವೇಚ್ಛಾ ಲೈಂಗಿಕ ವ್ಯವಸ್ಥೆ.	ಲೈಂಗಿಕ ಸ್ವೇಚ್ಛಾಚಾರ
ಆದಿ ಹಳೆಯ ಶಿಲಾಯುಗ			ಸರಳತೆಯಿಂದ ಸಂಕೀರ್ಣತೆಗೆ, ಕೊಡಲಿ ಮತ್ತು ಕೆದರುನ ಗುದ್ದಲಿ ಉಪಯೋಗ. ಅಲೆದಾಟ ಸೀಮಿತ ಪ್ರದೇಶಕ್ಕೆ, ಬೇಟೆ ಆಹಾರವಾಯಿತು. ಗುಹೆಯಲ್ಲಿ ವಾಸ, ಬೆಂಕಿ ಉಪಯೋಗ, ಸಾಂಘಿಕ ಕ್ರಿಯೆ ಮತ್ತು ಜಿವನ.	ಒಂದೆ ರಕ್ತಸಂಬಂಧ ಕುಟುಂಬಗಳು
ಕೆಳಗಿನ ಹಳೆಯ ಶಿಲಾಯುಗ			ಗವಿಯಲ್ಲಿ ವಾಸ, ಬೆಂಕಿಯಿಂದ ವಿವಿಧ ಉಪಯೋಗಗಳನ್ನು ಕಲಿತ, ಶವ ಹೂಳುವ ಕ್ರಮ, ಕೊಡಲಿ ಗುದ್ದಲಿಗೆ ಕಾವುಗಳ ವ್ಯವಸ್ಥೆ, ಕಲೆ ಮತ್ತು ಮಾಟ ಮಂತ್ರಗಳ ಉದಯ.	ಒಂದೆ ರಕ್ತಸಂಬಂಧ ಕುಟುಂಬಗಳು
ಮಧ್ಯ ಹಳೆಯ ಶಿಲಾಯುಗ			ವಸ್ತುಗಳ ಆಕರಗಳಲ್ಲಿ ಮಾರ್ಪಾಡು, ಪಿಕಾಶಿ ಗುದ್ದಲಿನ ಉಪಯೋಗ ಪ್ರಾಣಿಗಳ ಎಲುಬುಗಳಿಂದ ಸ್ತ್ರೀಯರ ಆಭರಣ, ಮಾಟ ಮಂತ್ರಗಳು ಮತ್ತು ಬೆಂಕಿಯ ನಿಚ್ಚಳ ಉಪಯೋಗ, ಗವಿಯಲ್ಲಿ ವಾಸ, ಸಾಂಘಿಕ ಜೀವನ ಪದ್ಧತಿ.	ಒಂದೆ ರಕ್ತಸಂಬಂಧ ಕುಟುಂಬಗಳು

೧	೨	೩	೪	೫
ಮದ್ಯಶಿಲಾಯುಗ	ಕ್ರಿ.ಪೂ.೮೦.೦೦ ಹೊಲೆಸಿಯನ್ ಕಾಲ ದಿಂದ ಆರಂಭ	ಅನಾಗರಿಕ ಸ್ಥಿತಿ	ಗುಹೆಯಿಂದ ಗುಡಿಸಲು, ಗುಡಿಸಲಿನಿಂದ ಒಂಬಾದ ಮನೆ, ಸಂಸ್ಕೃತಿಯುಗ ವೆಂದು ಆಹಾರದ ಉತ್ಪಾದನೆ, ನಾಯಿಯಿಂದ ಬೇಟೆ, ಮೀನು ಮತ್ತು ಪಶುಸಂಗೋಪಾನೆ ಹೊಸ ಹೆಜ್ಜೆಗಳು, ಬರವಣಿಗೆಯ ಉದಯ, ಒಟ್ಟಿನಲ್ಲಿ ಹೊಸ ಕ್ರಾಂತಿ.	ಪುನಲ್ಯೂಯನ್ ಕುಟುಂಬಗಳು
ನವಶಿಲಾಯುಗ	ಕ್ರಿ.ಪೂ ೩೦೦೦ ದಿಂದ ಆರಂಭ	ನಾಗರಿಕ ಸ್ಥಿತಿ	ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ನೆಲೆನಿಂತ ಪೂರ್ಣವಿಕಾಸ, ವ್ಯವಸಾಯದಲ್ಲಿ ಪ್ರಗತಿ ಹೆಜ್ಜೆ, ಪ್ರಾಣಿಗಳ ಹೇರಳ ಸಾಕಣಿಕೆ, ಉತ್ಪಾದನೆಯಲ್ಲಿ ಯಂತ್ರಗಳ ಶಕ್ತಿಯ ಉಪಯೋಗ ನಾರಿನಿಂದ ಬಟ್ಟೆ ತಯಾರಿಕೆ, ವೈವಿಧ್ಯಮಯ ಮನೆ ನಿರ್ಮಾಣಗಳು, ಬೃಹತ್ ಶಿಲಾಕಟ್ಟಡ, ಮಡಕೆ ತಯಾರಿಕೆ, ಹತ್ತಿ ಉಣ್ಣೆಗಳ ಬಳಕೆ, ಬೃಹತ್ ಕೈಗಾರಿಕೆ ದೇಶ ವಿದೇಶ ಗಳಿಂದ ವ್ಯಾಪಾರ ವಾಹಿವಾಟು ಇತ್ಯಾದಿ.	ಏಕಸಂಗಾತಿಯ ಕುಟುಂಬಗಳು
ತಾಮ್ರಯುಗ	೪೦೦೦-೩೦೦೦			
ಕಂಚು ಯುಗ	೩೦೦೦-೨೦೦೦			
ಕಬ್ಬಿಣ ಯುಗ	೨೦೦೦ ದಿಂದ			

ಕೃಪೆ : ಮಾನವಶಾಸ್ತ್ರ ಪ್ರೊ. ಡಿ.ಕೆ. ಶಿವಣ್ಣ., ಡಾ. ಜೋಗನ್ ಶಂಕರ ಗ್ರಂಥಗಳ ಆಧಾರಿತ, ಗ್ರಾಮ ಸಮಾಜ.

ಸರಳತೆಯಿಂದ ಸಂಕೀರ್ಣತೆಗೆ ವಿಕಾಸಗೊಂಡು ಏಕಸಂಗಾತಿ ಕುಟುಂಬಕ್ಕೆ ಬಂದು ನಿಂತ ಕುಟುಂಬ ವ್ಯವಸ್ಥೆಯು ಎಲ್ಲಾ ಸಮುದಾಯಗಳಲ್ಲಿ ಕಾಣಬಹುದಾಗಿದೆ. ಪ್ರತ್ಯೇಕ ಜೀವನ ಕ್ರಮದಿಂದ ಹಿಡಿದು ತಮ್ಮ ಅಂತ್ಯ ಸಂಸ್ಕಾರದವರೆಗೂ ಪ್ರತ್ಯೇಕತೆಯನ್ನು ಕಾಯ್ದುಕೊಂಡಿರುವ ಅಲೆಮಾರಿಗಳ ಕುಟುಂಬ ವ್ಯವಸ್ಥೆಯು ತಮಗೆ ನಿಯೋಜಿತವಾದ ಕೆಲಸಕಾರ್ಯಗಳನ್ನು ಮಾಡುತ್ತಿದೆ. ಕುಟುಂಬದ ಉಗಮದಿಂದ ಬೆಳವಣಿಗೆಯವರೆಗೆ ವೈಜ್ಞಾನಿಕವಾಗಿ ನೋಡಲಾಗಿದೆ. ಆದರೆ ಮಾನವನ ಗುಣಗಳು ಹೇಗೆ ಇದ್ದವು? ಅವರ ಕೆಲಸ ಕಾರ್ಯಗಳು ಯಾವ ರೀತಿಯಾಗಿದ್ದವು? ಎಂಬುದನ್ನು ನೋಡಲಾಗಿದೆ. ಏಕಸಂಗಾತಿಗೆ ಬಂದುನಿಂತ ಕುಟುಂಬವು ನೆಲೆನಿಂತ ಕುಟುಂಬವಾಯಿತು. ಜೀವಿಸಲಿಕ್ಕೆ ಏನೇನು ಮೂಲಭೂತ ಅವಶ್ಯಕತೆ ಗಳಿರಬೇಕೊ ಅವೆಲ್ಲವನ್ನು ಪಡೆದುಕೊಂಡು ಬದುಕಲು ಮುಂದಾಯಿತು. ಆದರೆ ನೆಲೆನಿಲ್ಲದ ಅಲೆಮಾರಿ ಕುಟುಂಬಗಳು ಇನ್ನೂ ನೆಲೆಯನ್ನು ಕಾಣದೆ ಪ್ರಾಥಮಿಕ ಸಮಸ್ಯೆಯಲ್ಲಿಯೆ ಬಂಧಿತವಾಗಿವೆ. ಪರಿಸ್ಥಿತಿಗನು ಗುಣವಾಗಿ ನೆಲೆನಿಂತ ಕುಟುಂಬಗಳ ಲಕ್ಷಣಗಳು ಬೇರೆ ಬೇರೆ ರೀತಿಯಲ್ಲಿ ಕಂಡುಬರುತ್ತವೆ. ಅದರಂತೆ ಅಲೆಮಾರಿ ಕುಟುಂಬದ ಲಕ್ಷಣಗಳೆ ಬೇರೆ, ಕಾರ್ಯರೂಪಗಳು ಬೇರೆ. ಅಂತಹ ಲಕ್ಷಣಗಳಾವುವು? ಕಾರ್ಯಕಲಾಪಗಳಾವುವು? ಎಂಬುದನ್ನು ಅಲೆಮಾರಿಗಳ ಸಮುದಾಯದ ಅಧ್ಯಯನದಿಂದ ತಿಳಿಯಲಾಗಿದೆ. ನೆಲೆನಿಂತ ಕುಟುಂಬವ್ಯವಸ್ಥೆಗಿಂತ ಅಲೆಮಾರಿ ಕುಟುಂಬವ್ಯವಸ್ಥೆಯು ಭಿನ್ನ ಎಂಬುದನ್ನು ಈ ಕೆಳಗಿನ ಲಕ್ಷಣ ಮತ್ತು ಕಾರ್ಯಗಳಿಂದ ತಿಳಿಯಬಹುದಾಗಿದೆ.

೧. ವೈವಿಧ್ಯಮಯವಾದ ವಿವಾಹಗಳು

ವಿವಾಹದಲ್ಲಿ ಕುಟುಂಬ ಭದ್ರವಾದ ಬುನಾದಿಯನ್ನು ಹಾಕುತ್ತದೆ. ವಿವಾಹವಿರದಿದ್ದರೆ ಕುಟುಂಬ ವಿರುವುದಿಲ್ಲ. ಆದುದರಿಂದ ವಿವಾಹ ಮತ್ತು ಕುಟುಂಬವನ್ನು ಒಂದೆ ನಾಣ್ಯದ ಎರಡು ಮುಖಗಳಾಗಿವೆ. ವಿವಾಹವೆಂದರೆ ಗಂಡು-ಹೆಣ್ಣು ಇಬ್ಬರಿಗೂ ವಿಧಿವತ್ತಾಗಿ ಲೈಂಗಿಕ ಸಂಯೋಗದಲ್ಲಿ ಕಾಲಿಡುವುದು. ವಿವಾಹ ಸ್ತ್ರೀ-ಪುರುಷರಿಬ್ಬರಿಗೂ ಜವಬ್ದಾರಿಯನ್ನು ಕೊಡುವುದರ ಜೊತೆಗೆ ತಾವು ಏನು ಮಾಡಬೇಕು? ಎಂಬುದನ್ನು ತಿಳಿಸುತ್ತದೆ. ಉದಾ: ಆತನ ಸಾಮಾಜಿಕ ಜೀವನವನ್ನು ನೈತಿಕತೆಗೆ ನಡೆಯುವಂತೆ ಪ್ರೇರೆಪಿ ಸುತ್ತದೆ. ಸಾಂಸ್ಕೃತಿಕ ಮೌಲ್ಯಗಳನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತದೆ. ಹಿಂದಿನಿಂದಲೂ ತಮ್ಮ ಪೂರ್ವಜರು ಆಚರಿಸಿಕೊಂಡಿರುವ ವಿಧಿನಿಮಯಗಳ ಪಾಲನೆ ಜೊತೆಗೆ ಸಂತಾನ ವನ್ನು ಪಡೆದು ಕುಟುಂಬಕ್ಕೆ ಆಧಾರಸ್ತಂಭವಾಗಿ ನಿಲ್ಲುತ್ತದೆ. ಇದು ಬಹಿರಂಗವಾಗಿ ಘೋಷಿತವಾದ, ಕ್ರಮಬದ್ಧವಾದ ನ್ಯಾಯ ಸಮ್ಮತವಾದ ಮತ್ತು ಸುವ್ಯವಸ್ಥಿತವಾದ ಗಂಡು-ಹೆಣ್ಣಿನ ಸಮ್ಮಿಲನವಾಗಿದೆ.

"ವಿವಾಹವು ಸ್ತ್ರೀಪುರುಷರ ನಡುವೆ ಲೈಂಗಿಕ ಹಾಗೂ ಮಾನಸಿಕ ಸಂಬಂಧವನ್ನು ದೃಢಿಕರಿಸುವ ಮತ್ತು ಸಂತಾನಭಿವೃದ್ಧಿಗಾಗಿ ಉದ್ದೇಶಪೂರ್ವಕವಾಗಿ ಮಾಡಿಕೊಂಡ ಒಪ್ಪಂದ"[19] ಎಂಬುದು ಮೌಲಿನೋವಸ್ಕಿಯವರ ಅಭಿಪ್ರಾಯವಾಗಿದೆ. "ಸಮಾಜದಿಂದ ಅಂಗೀಕರಿಸಲ್ಪಟ್ಟ ವಿಭಿನ್ನ ಲಿಂಗಭೇದವುಳ್ಳ ವ್ಯಕ್ತಿಗಳ ಸಹಜೀವನವೆ ವಿವಾಹ"[20]ವೆಂದು ರಾಲ್ಫ್ ಲಿಂಟನ್‌ರವರ ವಾಖ್ಯಾವಾಗಿದೆ. ಹೀಗೆ ವಿವಾಹ ತನ್ನದೆ ಅರ್ಥಪಡೆದುಕೊಂಡಿದೆ. ಅಲೆಮಾರಿ ಸಮುದಾಯಗಳಲ್ಲಿ ಸಂದರ್ಭಕ್ಕೆ ತಕ್ಕಹಾಗೆ, ಹಲವಾರು ಬಗೆಯ ವಿವಾಹಗಳು ಚಾಲ್ತಿಯಲ್ಲಿ ಬಂದಿರುತ್ತವೆ.

೨. ಮೈದುನ ವಿವಾಹ

ಮೈದುನ ವಿವಾಹದಲ್ಲಿ ಅಲೆಮಾರಿಗಳು ಕೊಟ್ಟಿರುವ ಸ್ಥಾನ ಅವಿಸ್ಮರಣೀಯವಾಗಿದೆ. ಕುಟುಂಬದ ಸದಸ್ಯತ್ವ ಪಡೆದುಕೊಂಡಿರುವ ಸದಸ್ಯಗೆ ಹೊಸಬಾಳು ಕೊಡುವುದು ಇದರ ಉದ್ದೇಶವಾಗಿದೆ. ಅಂದರೆ ವಿಧವೆಯಾದ ಅಣ್ಣನ ಹೆಂಡತಿಯನ್ನು ತಮ್ಮ ವಿವಾಹವಾಗುತ್ತಾನೆ. ಪೋಷಣೆಯ ಜೊತೆಗೆ ಆಕೆಯ ಮಕ್ಕಳನ್ನು ಕೂಡ ಪೋಷಿಸಬೇಕಾಗುತ್ತದೆ. ಮಹಿಳೆ ಆ ಕುಟುಂಬವನ್ನು ನಂಬಿ ಬಂದಿರುವುದರಿಂದ ಆಕೆಯ ಸಂಬಂಧ ಕೇವಲ ಅಣ್ಣನಿಗೆ ಮಾತ್ರ ಸೀಮಿತವಾಗಿರದೆ, ಇಡಿ ಕುಟುಂಬದಲ್ಲಿ ಸಂಬಂಧಿಸಿರುತ್ತದೆ. ತಮ್ಮ ಕುಟುಂಬಕ್ಕಾಗಿ ದುಡಿದವರಿಗೆ ನೊಂದು ಬಾಳಬಾರದೆಂದು ಈ ವ್ಯವಸ್ಥೆ ರೂಪಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಸತಿಸಹಗಮನ ಪದ್ಧತಿ ದೇಶಿನೆಲೆಯಲ್ಲಿ ಒಳಗೊಂಡಿತು. ಯಾವುದೆ ಪುರುಷ ಮರಣ ಹೊಂದಿದರೆ ಆಕೆಯು ಆತನ ಜೊತೆಯೊಂದಿಗೆ ಅಗ್ನಿಗೆ ಆಹುತಿಯಾಗುವ ಪದ್ಧತಿ ಇತ್ತು. ಆದರೆ ಅದನ್ನು ನಿರಾಕರಿಸಿದರೆ ಬಲವಂತವಾಗಿಯಾದರೂ ಅವಳನ್ನು ಬೆಂಕಿಯಲ್ಲಿ ನೂಕುವ ಸ್ಥಿತಿ ಇತ್ತು. ಇಂತಹ ವ್ಯವಸ್ಥೆಗೆ ಕೆಲವು ಮಹಿಳೆಯರ ಕುಮ್ಮಕ್ಕೂ ಇರಬಹುದು. ಅಲೆಮಾರಿಗಳು ಮಾತ್ರ ಇತಂಹ ವ್ಯವಸ್ಥೆಯನ್ನು ವಿರೋಧಿಸುತ್ತಲೆ ಬಂದಿದ್ದಾರೆ. ಇದರ ಬದಲಾಗಿ ಮರುವಿವಾಹಕ್ಕೆ ಒತ್ತು ನೀಡಲಾಯಿತು. ವಿವಾಹವಾಗುವುದಕ್ಕೆ ಸಂಪ್ರದಾಯ, ಹಣ ಬೇಕಿಲ್ಲ ಆ ಸ್ತ್ರೀಯು ಒಪ್ಪಿದರೆ ಮುಗಿಯಿತು. ಕುಟುಂಬದ ಹಿರಿಯರೆಲ್ಲರು ಸಮ್ಮತಿ ಪಡೆದುಕೊಂಡು ನವ ದಾಂಪತ್ಯಕ್ಕೆ ವ್ಯವಸ್ಥೆ ಮಾಡುತ್ತಾರೆ.

೩. ಕೊಂಡ ವಿವಾಹ (ವಧು ಶುಲ್ಕ ವಿವಾಹ)

ವರನ ಕಡೆಯವರು ವಧುವಿನ ತಂದೆ-ತಾಯಿಗಳಿಗೆ ವಸ್ತುಗಳನ್ನು ಇಲ್ಲವೆ ಹಣದ ರೂಪದಲ್ಲಿ ಕನ್ಯಾಶುಲ್ಕ ಕೊಟ್ಟು ಸಂಪ್ರದಾಯದ ಪ್ರಕಾರ ವಿವಾಹವಾಗುವುದಕ್ಕೆ 'ಕೊಂಡವಿವಾಹ' ಎನ್ನಲಾಗುವುದು. ಕನ್ಯಾಶುಲ್ಕವು ಅಲೆಮಾರಿಗಳಲ್ಲಿ ಕಡ್ಡಾಯವಾಗಿದೆ. ಕನ್ಯೆಯ ತಂದೆ-ತಾಯಿಗಳು ವಿವಾಹ ಮಾಡಿಕೊಟ್ಟ ನಂತರ ಅವರಿಗಾದ ನಷ್ಟವನ್ನು ತುಂಬಲು ಇಂತಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ವಧುವಿನ ತಂದೆಗೆ ವಿವಾಹವೆಂದರೆ ಒಂದು ರೀತಿಯ ಹಬ್ಬವಾಗಿರುತ್ತದೆ. ಆದರೆ ವರನ ತಂದೆಗೆ ಖರ್ಚಿನ ಬಾಬ್ತಾಗಿರುತ್ತದೆ.

೪. ಸೇವಾ ವಿವಾಹ

ವಿವಾಹ ಬಯಸುವ ಹುಡುಗನು ಕನ್ಯೆಯ ಮನೆಯಲ್ಲಿ ಭಾವಿ ಅತ್ತೆ-ಮಾವಂದಿರಿಗೆ ವಿಧೆಯರಾಗಿ ತಮ್ಮ ಅಲೆದಾಟದಲ್ಲಿ ತೊಡಗಿಸಿಕೊಂಡು, ಅವರ ಕುಟುಂಬದಲ್ಲಿ ಸೇವೆಸಲ್ಲಿಸುತ್ತಾನೆ. ಈ ಸೇವೆಯು ಅತ್ತೆ-ಮಾವ ತೃಪ್ತಿಯಾಗುವ ತನಕ ಮತ್ತು ಕನ್ಯೆಯು ವರನನ್ನು ಒಪ್ಪುವ ತನಕ ಹುಡುಗ-ಹುಡುಗಿ ಒಡನಾಡಿಗಳಾಗುವುದರಿಂದ ಒಬ್ಬರಿಗೊಬ್ಬರು ಆಕರ್ಷಿತರಾಗಿ ಪ್ರೀತಿಯಲ್ಲಿ ಬಂಧಿಯಾಗುವುದರಿಂದ ಬೇರೆ ಮಾಡುವುದು ತಪ್ಪೆಂದು ಭಾವಿಸಿ, ಮಾವನು ವರನಿಗೆ ಕನ್ಯೆಕೊಡಲು ಒಪ್ಪಿದ್ದೇನೆಂದು ತಿಳಿಸುತ್ತಾನೆ. ಆಗ ವರನ ತಂದೆತಾಯಿಗಳಿಗೆ ಸಂಪ್ರದಾಯದ ಪ್ರಕಾರ ವಿವಾಹ ನೆರವೇರಿಸುತ್ತಾರೆ. ಮಾವನಿಗೆ ಅಳಿಯನು

ದುಡಿದಿದ್ದರಿಂದ ವರನ ಕುಟುಂಬದಲ್ಲಿ ಸಹಾಯರ್ಥವಾಗಿ ಮದುವೆಯ ಖರ್ಚಿಗೆ ಹಣ ಕೊಡುವುದುಂಟು. ಒಮ್ಮೊಮ್ಮೆ ಸೇವಾ ಮಾಡುತ್ತಿರುವ ಅಳಿಯನ ಮೇಲೆ ನಂಬಿಕೆಬಾರದಿದ್ದರೆ ಹುಡುಗಿಯನ್ನು ಕೊಡುವುದಿಲ್ಲ. ಮತ್ತು ವಿವಾಹದ ನಂತರ ಅಳಿಯನು ಅತ್ತೆ-ಮಾವರನ್ನು ಪ್ರೀತಿಯಿಂದ ಕುಡಿಸುವುದು, ತಿನ್ನಿಸುವುದು ಮಾಡದಿದ್ದರೆ ಮಗಳಿಗೆ ಚಾಡಿಹೇಳಿಸಿ ಅಳಿಯನಿಂದ ಮಗಳನ್ನು ದೂರ ಮಾಡಿ ಜೊತೆಯಲ್ಲಿ ಮಗಳನ್ನು ಕರೆದುಕೊಂಡು ಹೋಗುತ್ತಾರೆ. ಒಂದೊಂದು ಬಾರಿ ವಿಚ್ಛೇಧನ ನಡೆಯುತ್ತದೆ. ಹೆಂಡತಿ ಬೇಕಾದವನು ಅತ್ತೆ-ಮಾವರ ಮನವನ್ನು ಒಲೈಸಿ ಕುಡಿಸಿ, ತಿನ್ನಿಸಿ, ಸ್ವಲ್ಪ ದುಡ್ಡುಕೊಟ್ಟು ಹೆಂಡತಿಯನ್ನು ಕರೆದುಕೊಂಡು ಬರಬೇಕಾಗುತ್ತದೆ.

೫. ಭಿಕ್ಷಾ ವಿವಾಹ

ನೆಲೆನಿಂತ ಸಮುದಾಯಗಳಲ್ಲಿ ಕನ್ಯೆಯನ್ನು ಕೊಡುವ ಮೊದಲು ವರನು ಯೋಗ್ಯವೆಂದು ವಿಚಾರಿಸಿ, ವರನಿಗೆ ಪರೀಕ್ಷೆ ಇರುವುದುಂಟು. ವರನು ಏನು ನೌಕರಿ ಮಾಡುತ್ತಾನೆ? ಮನೆಯ ಕಡೆ ಹೇಗಿದ್ದಾರೆ? ಸಂಪಾದನೆ ಎಷ್ಟಿದೆ? ಎಂಬಿತ್ಯಾದಿಗಳನ್ನು ತಿಳಿದುಕೊಂಡು ವಿವಾಹಕ್ಕೆ ನಿರ್ಧರಿಸುತ್ತಾರೆ. ಸಿಂಧೋಳ್ಳ ಸಮುದಾಯದಲ್ಲಿ ಪೋತರಾಜ ಮದುವೆಯಾಗಲು ಇಷ್ಟಪಟ್ಟರೆ ಅವನು ವಿವಾಹ ಪರೀಕ್ಷೆಯಲ್ಲಿ ಭಾಗವಹಿಸಬೇಕಾಗುತ್ತದೆ. ಅವನು ಭಿಕ್ಷೆ ಹೋಗುವ ಸಂದರ್ಭದಲ್ಲಿ ಎಷ್ಟು ಬಾರಿ ಕುಣಿಯುವನು, ತನ್ನ ಮೈಮಗೆ ಚಾಟಿಯಿಂದ ಎಷ್ಟು ಬಾರಿ ಹೊಡೆದುಕೊಳ್ಳುವನು. ಅವನ ಕೈಯಲ್ಲಿ ರಕ್ತ ಎಷ್ಟು ಬಾರಿ ಚಿಮ್ಮಿಸುತ್ತಾನೆ? ಹಾಗೂ ದಿನದಲ್ಲಿ ಎಷ್ಟು ಮನೆಗಳಿಗೆ ಭಿಕ್ಷೆ ಬೇಡುತ್ತಾನೆ ಎಂಬಿತ್ಯಾದಿ ಪ್ರಶ್ನೆಗಳನ್ನು ಕುಲದ ಮುಖ್ಯಸ್ಥರು ಕೇಳುವರು. ಅಲೆಮಾರಿಗಳು ಮನೆ, ಹೊಲ ಮತ್ತು ಹುಡುಗನ ಸ್ಥಿತಿ ನೋಡದೆ, ಮದುವೆ ಆಗುವ ಹುಡುಗ ದಿನದಲ್ಲಿ ಎಷ್ಟು ಮನೆಗೆ ಹೋಗಿ ಭಿಕ್ಷೆ ಮಾಡುತ್ತಾನೆ? ಅದರಿಂದ ಎಷ್ಟು ಹಣ, ದವಸಗಳನ್ನು ಬೇಡಿ ತರುತ್ತಾನೆಂದು ತಿಳಿದು ವಿವಾಹ ನಿರ್ಧರಿಸುತ್ತಾರೆ. ಹೆಚ್ಚು ಭಿಕ್ಷೆಯನ್ನು ತರುವ ವರನಿಗೆ ತಮ್ಮ ಮಗಳನ್ನು ಕೊಡುತ್ತಾರೆ. ಆಕಸ್ಮಿಕವಾಗಿ ಅವನು ಸೋಮಾರಿಯಾದರೆ ಕನ್ಯೆ ಕೊಡುವುದಿಲ್ಲ.

೬. ಬಾಲ್ಯ ವಿವಾಹಗಳು

ಅಲೆಮಾರಿ ಸಮುದಾಯಗಳಲ್ಲಿ ಬಾಲ್ಯವಿವಾಹಗಳು ಸಾಮಾನ್ಯವಾಗಿವೆ. ಮಗು ಜನಿಸಿದ ಕೂಡಲೆ ತಮ್ಮ ನೆಂಟರು ನಮ್ಮ ಮಗಳು ನಿಮ್ಮ ಮಗನಿಗೆ ಎಂದು ಗುರುತುಮಾಡುವುದು. ಒಬ್ಬರಿಗೊಬ್ಬರು ಚಿಕ್ಕಂದಿನಿಂದಲೂ ಒಡನಾಡಿಯಾಗಿರುವುದರಿಂದ ಆಕರ್ಷಿತರಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದರಿಂದ, ಮುಂದೆ ಬೇರೆ ರೀತಿಯ ಅನಾಹುತಗಳು ಸಂಭಾವಿಸಬಾರದೆಂಬ ಕಾರಣದಿಂದ ಹಾಗೂ ಅಕ್ಕನ ಮದುವೆಯ ಜೊತೆಗೆ ತಂಗಿಯ ಮದುವೆಯನ್ನು ಮಾಡಿದರೆ ಖರ್ಚು ಉಳಿತಾಯವಾಗುವುದು. ಬೇಗ ಮದುವೆ ಮಾಡುವುದರಿಂದ ನಮಗೆ ಅಳಿಯನು ದುಡಿದು ಹಾಕುತ್ತಾನೆ ಎಂಬ ಮನೋಭಾವನೆ ಹೊಂದಿದ್ದರಿಂದ ಹಾಗೂ ಇತ್ಯಾದಿ ಕಾರಣಗಳಿಂದ ಬಾಲ್ಯವಿವಾಹವು ಜರುಗುವುದು. ಅತ್ತೆ-ಮಾವನವರ ಪ್ರೀತಿಗೆ ಪಾತ್ರರಾಗಿರ ಬಹುದು. ಹಿರಿಯರು ಅವಸಾನದ ಅಂಚಿನಲ್ಲಿರಬಹುದು. ಇತ್ಯಾದಿ ಕಾರಣಗಳಿಂದ ಮದುವೆಯನ್ನು ನೋಡಿ ಸಾಯಬೇಕೆನ್ನುವುದು ವೃದ್ಧರ ಆಕಾಂಕ್ಷೆಯಾಗಿರಬಹುದು.

೭. ಒಳಬಾಂದವ್ಯ ವಿವಾಹ

ತಮ್ಮದೆ ಜಾತಿ ಮತ್ತು ವರ್ಗಗಳಲ್ಲಿ ಹೆಣ್ಣು-ಗಂಡುಗಳನ್ನು ಕೊಡುವ ಮತ್ತು ತರುವಾ ವೈವಾಹಿಕ ಪದ್ಧತಿಗೆ 'ಒಳಬಾಂದವ್ಯ ವಿವಾಹ' ಎನ್ನಬಹುದು. ಪುರಾತನ ಕಾಲದಿಂದಲೂ ಈ ವೈವಾಹಿಕ ಪದ್ಧತಿಯು ಅಲೆಮಾರಿಗಳಲ್ಲಿ ಜೀವಂತವಾಗಿದೆ. ಕಾರಣ ಒಂದೆ ಸಮುದಾಯವಾಗಿರುವುದರಿಂದ ಅವರ ಆಚಾರ-ವಿಚಾರ, ನಡೆ-ನುಡಿ, ದುಡಿಮೆಗಳು ಇತ್ಯಾದಿಗಳೆಲ್ಲವೂ ಪರಿಚಿತವೆವಾಗಿವೆ. ಹುಡುಗ ಹುಡುಗಿಯರು ಒಡನಾಡಿಗಳಾಗಿರುವುದರಿಂದ, ದೂರದ ಊರುಗಳಿಗೆ ಕೊಟ್ಟರೆ ಮತ್ತೆ ಅಲ್ಲಿಗೆ ಹೋಗವುದು ಕಷ್ಟವೆಂದು ನಮ್ಮ ಮಕ್ಕಳು ನಮ್ಮ ಎದುರಿನಲ್ಲಿ ಇರಬೇಕೆಂಬ ಆಸೆಯಿಂದ ತಮ್ಮ ಸಮುದಾಯದ ಕೌಶಲ್ಯ ಬೇರೆ ಕಡೆ ಹೋಗಬಾರದೆಂದು ರಕ್ತಪರಿಶುದ್ಧತೆಗಾಗಿಯೂ, ಭಾವನಾತ್ಮಕ ಸಂಬಂಧಗಳಿಗಾಗಿಯೂ ತಮ್ಮ ಸಮುದಾಯಗಳಲ್ಲಿ ವಿವಾಹ ಮಾಡುವುದುಂಟು.

೮. ವಿಧವಾ ವಿವಾಹ

ಗಂಡನು ತೀರಿದ ನಂತರ ವಿಧವೆಯು ಮತ್ತೆ ವೈವಾಹಿಕ ಜೀವನದಲ್ಲಿ ಕಾಲಿಡುವ ಅವಕಾಶವನ್ನು ಅಲೆಮಾರಿ ಸಮುದಾಯಗಳ ಕಲ್ಪಿಸಿದ್ದಾರೆ. ವಿಧವೆ ಒಂಟಿಯಾಗಿರಲು ಸಾಧ್ಯವಿಲ್ಲವೆಂದಾಗ ಅದೆ ಕುಟುಂಬದ ಮೈದುನ (ಗಂಡನ ತಮ್ಮ) ಇಲ್ಲವೆ ಆ ಸಮುದಾಯದ ಬೇರೆ ಪುರುಷರನೊಂದಿಗೆ ಪರಸ್ಪರರು ಇಷ್ಟ ಪಟ್ಟರೆ ಕುಲದ ಮುಖಂಡರು ಮದುವೆ ಮಾಡಿಸುವುದುಂಟು. ಮದುವೆಯಲ್ಲಿ ವಿಧೆವೆಗೆ ಹೊಸ ಸೀರೆ, ಕುಂಕುಮ, ಬಳೆಗಳು, ಹುಡುಗನಿಗೆ ಹೊಸ ಬಟ್ಟೆ ಕೊಟ್ಟು ರಾತ್ರಿ ಸಮಯದಲ್ಲಿ ಅಷ್ಟೊಂದು ಶಾಸ್ತ್ರಬದ್ಧ ವಿಲ್ಲದೆ ವಿವಾಹ ಜರುಗಿಸಲಾಗುವುದು.

೯. ಒಂದೆ ಸಮುದಾಯದಲ್ಲಿ ಸೇರಿದ ಸದಸ್ಯರು ಒಂದೆ ಕಡೆ ನೆಲೆಸುವುದು

ನಾವೆಲ್ಲರೂ ಒಂದೆ ಸಮೂಹದಲ್ಲಿ ಸೇರಿದವರೆಂಬ ಕಲ್ಪನೆಯು ಕುಟುಂಬದ ಮೂಲಕವಾಗಿ ಬಂದಿರುತ್ತದೆ. ಇಂತಹ ಸಮುದಾಯಗಳಲ್ಲಿ ತಮ್ಮ ವರ್ಗದ ಸದಸ್ಯರನ್ನು ಬಿಟ್ಟು ಬೇರೊಂದು ವರ್ಗದ ಅಥವಾ ಜಾತಿಯ ಅನ್ಯರನ್ನು ಪ್ರವೇಶ ಮಾಡಿಕೊಳ್ಳುವುದಿಲ್ಲ. ಬೇರೆ ಸಮುದಾಯದವರು ಅಲೆಮಾರಿಗಳ ಬಳಿ ಸಂಬಂಧ ಬೆಳೆಸಲು ಮುಂದೆ ಬಂದರೆ, ಅನುಮಾನದ ದೃಷ್ಟಿಯಿಂದ ನೋಡುತ್ತಾರೆ. ಹತ್ತಿರ ಬಂದವರಿಂದ ನಮಗೆ ತೊಂದರೆಯಾಗುತ್ತದೆಂದು ಗೊತ್ತಾದ ಕೂಡಲೆ ಅಲ್ಲಿಂದ ಜಾಗ ಖಾಲಿಮಾಡುತ್ತಾರೆ. ಸಂಬಂಧ ಬೆಳೆಸಲು ಇಷ್ಟಪಡುವುದಿಲ್ಲ.

೧೦. ಅಳಿಯನನ್ನು ಒಳಗೊಂಡ ಕೌಟುಂಬಿಕ ಪದ್ಧತಿ

ಕುಟಂಬದಲ್ಲಿ ಸಾಮಾನ್ಯವಾಗಿ ತಂದೆ-ತಾಯಿ-ಮಕ್ಕಳು ಮತ್ತು ಮೊಮ್ಮಕ್ಕಳೂ, ಚಿಕ್ಕಪ್ಪ-ಚಿಕ್ಕಮ್ಮ, ದೊಡ್ಡಪ್ಪ-ದೊಡ್ಡಮ್ಮ ಇರುವುದು ಸಾಮಾನ್ಯವಾಗಿದೆ. ಆದರೆ ಈ ಸಮುದಾಯಗಳಲ್ಲಿ ಎಲ್ಲ ಸದಸ್ಯರ ಜೊತೆಯಲ್ಲಿ ಅಳಿಯನು ಕೂಡ ಅದೆ ಕುಟುಂಬದಲ್ಲಿ ಒಬ್ಬ ಸದಸ್ಯನಾಗಿರುತ್ತಾನೆ. ಎಲ್ಲರಂತೆ ಅವನಿಗೂ ಗೌರವ ಉಂಟು. ಊಟ ಮತ್ತು ವಸತಿ ವ್ಯವಸ್ಥೆಯಿರುತ್ತದೆ. ಇದರಿಂದ ಸಂಪತ್ತಿನಲ್ಲಿ ಈತನಿಗೆ

ಅಧಿಕಾರವಿಲ್ಲ. ಕಾರಣ ಈತನ ಉದ್ದೇಶ ವಿವಾಹವಾಗಲು ಕನ್ಯೆಯ ತಂದೆ-ತಾಯಿಯನ್ನು ಮನಮೆಚ್ಚಿಸುವ ಕ್ರಿಯೆಯಾಗಿದೆ. ವಿವಾಹದ ನಂತರ ಎಂದಿನಂತೆಯೆ ತಮ್ಮ ಕುಟುಂಬದಲ್ಲಿ ಮರಳುತ್ತಾನೆ.

೧೧. ಸರಳ ವಿವಾಹ ವಿಚ್ಛೇದನ

ಕುಟುಂಬ ಆರೋಗ್ಯಕರವಾಗಿರುಬೇಕೆಂದರೆ ಪತಿ-ಪತ್ನಿಯರಿಬ್ಬರು ಅನೂನ್ಯದಿಂದ ಕೂಡಿರ ಬೇಕಾಗುವುದು. ಇವರಿಬ್ಬರಲ್ಲಿಯೂ ಸಹಕಾರ ಬೇಕು. ಕ್ಷುಲ್ಲಕ ಕಾರಣಗಳಿಂದ ಇಬ್ಬರಲ್ಲಿ ಯಾರಾದರೊ ಬ್ಬರಿಗೆ ಅಸೂಯೆ, ಅನುಮಾನ, ಬೇಸರ ಉಂಟಾದರೆ ಭಗ್ನ ಕುಟುಂಬವಾಗುತ್ತದೆ. ಪರಿಣಾಮ ಕೌಟುಂಬಿಕ ಜೀವನದಿಂದ ಗಂಡಹೆಂಡತಿ ದೂರವಿರಲು ಮುಂದಾಗುತ್ತಾರೆ. ಇದರಿಂದ ಮಕ್ಕಳ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುವುದುಂಟು. ಕುಟುಂಬ ರೋಗಗ್ರಸ್ಥರಾಗಿ ಬಿಡುತ್ತದೆ. ಇಂತಹ ಸಮಸ್ಯೆಗಳು ಬಂದಾಗ ಅನಿವಾರ್ಯವಿದ್ದಲ್ಲಿ ವಿಚ್ಛೇದನ ಪಡೆಯುತ್ತಾರೆ. ಹೀಗೆ ವಿಚ್ಛೇದನ ಪಡೆಯಬೇಕಾದರೆ ವಿಪರೀತ ಹಣಖರ್ಚು ಬೇಕಾಗಿರುವುದಿಲ್ಲ. ಕಾನೂನು, ಪೋಲಿಸ್, ಕೋರ್ಟು ಕಛೇರಿಗಳಿಗೆ ಅಲೆಯುವ ಅವಶ್ಯಕತೆ ಯಿರುವುದಿಲ್ಲ. ಕುಲದ ಮುಖಂಡರಿಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರೆ ವಾದ-ವಿವಾದವನ್ನು ಆಲಿಸಿದ ಮುಖಂಡರು ಮತ್ತೆ ಒಂದು ಗೂಡುವಂತೆ ಪ್ರಯತ್ನಿಸುತ್ತಾರೆ. ಇಲ್ಲವಾದರೆ ವಿಚ್ಛೇದನ ಆಗಲಿ ಎಂದು ಹೇಳುತ್ತಾರೆ. ಇಬ್ಬರ ಸಮ್ಮುಖದಲ್ಲಿ ಸರಳ ವಿಧಾನವಾದ 'ಕಡ್ಡಿ ಮುರಿಯುವ' ಮೂಲಕ ಇಲ್ಲವೆ 'ಅರಿವೆ ಸುಡುವ' ಮೂಲಕ ದಾಂಪತ್ಯ ಜೀವನವನ್ನು ಕೊನೆಗಾಣಿಸುತ್ತಾರೆ. ಹಾಗೂ ಮದುವೆಯಲ್ಲಿ ಕಟ್ಟಿದ ಕನ್ಯಾಶುಲ್ಕ, ತಾಳಿಯನ್ನು ಹಿಂತಿರುಗಿಸುತ್ತಾರೆ. ಇಬ್ಬರು ಬೇರೊಬ್ಬರನ್ನು ಪುನಃ ವಿವಾಹ ವಾಗಬಹುದು.

೧೨. ನೆಲ ಮತ್ತು ನೆಲೆಯಿಲ್ಲದ ವಾಸ

ಒಂದು ಕುಟುಂಬದಲ್ಲಿ ತನ್ನದೆ ಆದ ಒಂದು ನೆಲ ಬೇಕಾಗುತ್ತದೆ. ಆ ನೆಲದಲ್ಲಿಯೆ ತನ್ನ ನೆಲೆ ಯನ್ನು ಕಂಡುಕೊಂಡು, ಬದುಕನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈ ನೆಲ ಮತ್ತು ನೆಲೆ ಎರಡು ಇರದಿದ್ದರೆ ಬದುಕನ್ನು ಕಟ್ಟಿಕೊಳ್ಳುವುದು ತುಂಬಾ ಪ್ರಯಾಸವಾಗುತ್ತದೆ. ಇದನ್ನು ಮನಗಂಡು ಸಮಾಜಶಾಸ್ತ್ರಜ್ಞರು ಕುಟುಂಬಕ್ಕೆ ತನ್ನದೆ ಆದ ನಿರ್ದಿಷ್ಟವಾದ ಪ್ರದೇಶವಿರುತ್ತದೆ. ಇರದಿದ್ದರೆ ಅದು ಕುಟುಂಬ ಅಲ್ಲ ಎಂದೆ ಹೇಳುತ್ತಾರೆ. ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ತಂದೆ-ತಾಯಿ, ಮಕ್ಕಳು ಒಂದೆ ಕಡೆ ಒಂದೆ ಸೂರಿನಡಿಯಲ್ಲಿ ಕೂಡಿಕೊಂಡು ಬಾಳುವುದು ಸಾಮಾನ್ಯವಾಗಿದೆ. ಈ ಮೂಲಕ ತನ್ನ ಮೂಲಭೂತ ಬೇಡಿಕೆ ಈಡೇರಿಸಿಕೊಳ್ಳುತ್ತಾರೆ. ಆದರೆ ಅಲೆಮಾರಿಗಳು ಇಂತಹ ನಿಲುವುಗಳಿಗೆ ವಿರೋಧದ ನೆಲೆಯಲ್ಲಿ ನಿಂತಿದ್ದಾರೆ. ಯಾರದೊ ನೆಲ? ಯಾವುದೊ ವಾಸ, ದೇವರ ಗುಡಿ-ಗುಂಡಾರಗಳು, ಯಾರದೊ ಕಟ್ಟಡ ಗಳಲ್ಲಿ? ಅಲ್ಪ ದಿವಸಗಳ ತನಕ ಇರುತ್ತಾರೆ. ಗಾಳಿ, ಬೆಳಕುಗಳಿಲ್ಲದೆ ನರಕಯಾತನೆ, ಅನುಭವಿಸಿ ಜೀವಿಸುತ್ತಾರೆ. ನೆಲದ ಮಾಲಿಕ ಬಂದು ಹೆದರಿಸಿದಾಗ ಅಲ್ಲಿಂದ ಜಾಗ ಖಾಲಿಮಾಡಬೇಕಾಗುತ್ತದೆ. ಈ ರೀತಿಯ ವಾಸದ ರಚನೆಯಿಂದ ತಮ್ಮ ಬದುಕುಗಳಲ್ಲಿ ನೆಮ್ಮದಿ ಎಲ್ಲಿ? ಮಕ್ಕಳ ಭವಿಷ್ಯ ರೂಪಿಸುವುದು ಹೇಗೆ? ಆದಾಯ ಪಡೆಯುವುದಾದರೂ ಹೇಗೆ? ಎಂಬಿತ್ಯಾದಿ ಪ್ರಶ್ನೆಗಳು ಮುಂದೆ ಬರುತ್ತವೆ. ಆದುದರಿಂದ "ಇಂದು ಈ ಊರು ನಾಳೆ ಬೇರೆ ಯಾವುದೊ ಊರು" ಎಂಬಂತೆ ಅಲೆದಾಡುತ್ತಿದ್ದಾರೆ.

೧೩. ವೃತ್ತಿ ತರಬೇತಿ ಕೇಂದ್ರವಾಗಿರುವ ಕುಟುಂಬ

ಕುಟುಂಬಕ್ಕೆ ಜೀವನ ನಡೆಸಲು ಒಂದು ವೃತ್ತಿ ಅನಿವಾರ್ಯವಾಗಿದೆ. ಇಲ್ಲದಿದ್ದರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಂದು ಕುಟುಂಬವೂ ಒಂದಿಲ್ಲೊಂದು ವೃತ್ತಿಯಲ್ಲಿ ತೊಡಗಿರುತ್ತದೆ. ಇದರಿಂದ ಅಲೆಮಾರಿಗಳು ತಮ್ಮ ಪಾರಾಂಪರಿಕ ವೃತ್ತಿಯನ್ನು ಮೈಗೂಡಿಸಿಕೊಂಡಿವೆ. ಅದೇ ವೃತ್ತಿಯನ್ನು ತಮ್ಮ ಮಕ್ಕಳಿಗೂ ಕಲಿಸುತ್ತಾರೆ. ಏಕೆಂದರೆ ತಂದೆ-ತಾಯಿಗಳು ಮಾಡುವ ವೃತ್ತಿಯಲ್ಲಿ ಮಕ್ಕಳು ನೇರವಾಗಿ ಭಾಗಿಯಾಗುವುದುಂಟು. ಉದಾ: ಹೆಳವರು ಮನೆಗಳಿಗೆ ಹೋಗಿ ಅವರ ತಲೆಮಾರುಗಳ ಹಿಂದಿನ ವಂಶವೃಕ್ಷವನ್ನು ಹೇಳಲು ಹೊರಡುವಾಗ ಮಕ್ಕಳು ಹಿಂದೆ ಹೋಗುತ್ತಾರೆ. ಇದರಿಂದ ಅವರ ಅಕ್ಷರ ಮತ್ತು ಭಾಷೆಯನ್ನು ವೀಕ್ಷಿಸುತ್ತಾರೆ ಹಾಗೂ ಕೆಲವೊಂದು ದಾಟಿಗಳನ್ನು ಮನೆಯಲ್ಲಿ ಕಲಿಸುತ್ತಾರೆ. ಇದರಂತೆ ವೇಷಗಾರರು, ಡೊಂಬರು, ಕವಲೆತ್ತಿನವರು, ಹಾವಾಡಿಗರು ಹೀಗೆ ಅನೇಕ ಅಲೆಮಾರಿ ಸಮುದಾಯಗಳು ತಮ್ಮ ಮಕ್ಕಳಿಗೆ ವೃತ್ತಿಯನ್ನು ಕಲಿಸುವ ಮತ್ತು ಕಲೆಯನ್ನು ಪ್ರೋತ್ಸಾಹಿಸಿಕೊಂಡು ಬರುವಂತೆ ಪ್ರೇರೆಪಿಸುವುದು. ಹೆಣ್ಣುಮಕ್ಕಳನ್ನು ಕೌದಿ ಹೊಲೆಯುವ, ಹಚ್ಚೆಹಾಕುವ ಮತ್ತು ಇತರೆ ಕರಕುಶಲ ತರಬೇತಿಗಳಿಗೆ ಅಣಿಗೊಳಿಸುತ್ತಾರೆ. ಈ ವೃತ್ತಿಯಿಂದ ಹೊಟ್ಟೆಗೆ ಅಲ್ಪ ಹಿಟ್ಟಾದರು ದೊರೆಯುತ್ತದೆ. ಸಮುದಾಯಗಳು ವೃತ್ತಿಗಳನ್ನು ಬಿಟ್ಟರೆ, ಬೇರೆ ಕೆಲಸಗಳನ್ನು ಕಲಿಯಲು ಹಣದ ತೊಂದರೆಯಿರುವುದರಿಂದ ಮೂಲ ವೃತ್ತಿಗೆ ಅಂಟಿಕೊಳ್ಳುವುದು ಅನಿವಾರ್ಯ. ಆದರೂ ಇತ್ತೀಚಿಗೆ ಸ್ವಲ್ಪ ಬದಲಾವಣೆ ಹೊಂದಿಕೊಂಡಿದೆ. ಬೇರೆ ತರಹದ ವೃತ್ತಿಗಳಲ್ಲಿ ಭಾಗಿಯಾಗುತ್ತಿರುವುದು ನೋಡಬಹುದಾಗಿದೆ.

೧೪. ಕುಟುಂಬದ ದಿಕ್ಸೂಚಿಯಾಗಿ ಮೌಲ್ಯ ಮತ್ತು ಆದರ್ಶಗಳು

ಸಮುದಾಯ ಸಂಪೂರ್ಣ ಆರೋಗ್ಯಕರವಾಗಿರಬೇಕೆಂದರೆ ಮೌಲ್ಯಗಳು ಅನಿವಾರ್ಯವಾಗಿರುತ್ತದೆ. ಸ್ವಾಭಾವಿಕವಾಗಿ ಅಡಿಪಾಯವಾಗಿರುವ ಮೌಲ್ಯಗಳು ಮುಂದಿನ ಭವಿಷ್ಯದಲ್ಲಿ ಪರಿಣಾಮಕಾರಿ ಕೆಲಸಮಾಡುವುದರ ಜೊತೆಯಲ್ಲಿ ಸಮುದಾಯಗಳನ್ನು ಒಂದುಗೂಡಿಸುವ ತಂತುವಾಗಿದೆ. ಮೌಲ್ಯಗಳನ್ನು ಸಮುದಾಯದವರು ಅತ್ಯಂತ ಗೌರವಗಳಿಂದ ಕಾಣುತ್ತಾರೆ. ಸಮುದಾಯದಿಂದ ಸಮುದಾಯಕ್ಕೆ ಮೌಲ್ಯಗಳು ಭಿನ್ನವಾಗಿರುತ್ತವೆ. ಈ ದೃಷ್ಠಿಯಿಂದ ಅಲೆಮಾರಿ ಸಮುದಾಯಗಳ ಮೌಲ್ಯಗಳು, ಗುಣಗಳು ಭಿನ್ನವಾಗಿವೆ. ಅವರು ದೈವೀಶಕ್ತಿಯಲ್ಲಿ ನಂಬಿಕೆಯಿಟ್ಟು ರೂಪಿಸಿಕೊಂಡಿರುವುದುಂಟು. ಒಂದು ಸಮುದಾಯ ನಿರ್ಮಿಸಿದ ಅಥವಾ ನಿರ್ದೇಶಿಸಿದ ಮೌಲ್ಯಗಳು ಇತರೆ ಸಮುದಾಯದವರಿಗೆ ಅನೈತಿಕವಾಗಿರಬಹುದು. ಇದರಿಂದ ಪ್ರತಿಭಟನೆಗಳ ಬಗ್ಗೆ ಯೋಚಿಸದೆ, ತನ್ನ ದೈನಂದಿನ ಜೀವನದಲ್ಲಿ ಚಾಚುತಪ್ಪದೆ ಜಾರಿಗೆ ತರುತ್ತಾರೆ. ಕಾಲಾಂತರದಲ್ಲಿ ಬದಲಾಗಬಹುದು. ಹಾಗೂ ಹೊಸ ಮೌಲ್ಯಗಳು ಜಾರಿಗೆ ಬರಬಹುದು.

'ಮೌಲ್ಯ' ಎಂದರೆ ಸಮಾಜ ಅಥವಾ ವ್ಯಕ್ತಿ ಉಪಯುಕ್ತವಾಗುವ ಪ್ರಶಂಸ ಅರ್ಹವಾಗುವ ಸಾಮಾಜಿಕ ಅವಶ್ಯಕತೆ ಜನರ ಮೆಚ್ಚುಗೆ ಪಡೆಯುವ, ತೃಪ್ತಿ ನೀಡುವ, ಸಮಾಜ ಬಾಹಿರ ಕೃತ್ಯಗಳು ನಿಯಂತ್ರಿಸುವ ವಿಶಿಷ್ಟ ಸಂಗತಿಗಳನ್ನು ಮೌಲ್ಯವೆಂದು ಕರೆಯಲಾಗಿದೆ.

೧. ಸಂಪತ್ತಿಗಿಂತ ಸಂಬಂದ, ಸಹಕಾರ, ಸಮಾನತೆ, ಸಹಬಾಳ್ವೆ, ಒಲವು ತೋರಿಸುವುದರ ಮೂಲಕ ಅವರನ್ನು ಬೆಳೆಸುವುದು.

೨. ಸಮುದಾಯದಲ್ಲಿ ಬೇಟೆಯಾಡಿದ ಪ್ರಾಣಿಗಳನ್ನು ವೈಯಕ್ತಿಕವಾಗಿ ಉಪಯೋಗಿಸದೆ, ಪ್ರತಿಯೊಬ್ಬರು ಹಂಚಿಕೊಂಡು ತಿನ್ನುತ್ತಾರೆ.

೩. ಪವಿತ್ರಸ್ಥಳ ಮತ್ತು ಸೂತಕಗಳು ಕಳೆಯುವ ತನಕ ಲೈಂಗಿಕ ಸಂಪರ್ಕದಲ್ಲಿ ವಿರಾಮವನ್ನು ನೀಡುವುದುಂಟು.

೪. ರಕ್ತಸಂಬಂಧಿಕರಲ್ಲಿ ಲೈಂಗಿಕ ಸಂಪರ್ಕ ನಿಷೇಧವಾಗಿರುತ್ತದೆ.

೫. ಸಮಾಜದಲ್ಲಿ ಗುರು-ಹಿರಿಯರು, ಜನರ ಉದ್ಧಾರಕ್ಕಾಗಿ ದೇವರಲ್ಲಿ ಪ್ರಾರ್ಥಿಸುವುದು.

೬. ಸಾಮಾಜಿಕ ಜೀವನದಲ್ಲಿ ಮಹಿಳೆ ಪುರುಷರಿಗೆ ಸ್ವಾತಂತ್ರ್ಯ ನೀಡುವುದರ ಜೊತೆಯಲ್ಲಿ ಪ್ರೋತ್ಸಾಹ ನೀಡುವುದು.

೭. ಕುಟುಂಬದಲ್ಲಿ ವ್ಯಕ್ತಿ ಮರಣ ಹೊಂದಿದಾಗ ಅಲ್ಲಿ ಸದಸ್ಯರು ಭಾಗಿಯಾಗುವುದು, ಅವರ ಕಷ್ಟ-ದುಃಖಗಳಲ್ಲಿ ಸಹಾಯ ಮಾಡುವುದು.

ಹೀಗೆ ಅಲೆಮಾರಿಗಳು ತಮ್ಮ ಜೀವನದಲ್ಲಿ ವಿಶಿಷ್ಟವಾದ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ನೆಲೆನಿಂತವರಿಗಿಂತಲೂ ಮೇಲ್ಮಟ್ಟದಲ್ಲಿದ್ದಾರೆ.

೧೫. ಕೌಟುಂಬಿಕ ಸಮಾನ ಭಾವನೆ

ಕುಟುಂಬಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಪ್ರೀತಿ, ವಿಶ್ವಾಸ, ಸಹಕಾರದಿಂದ ಇರುತ್ತಾರೆ. ಇಲ್ಲಿ ಪತಿ-ಪತ್ನಿಯರ ನಡುವೆ ವಿರಸ ನಡೆಯುವುದಿಲ್ಲ. ಹಾಗೂ ಸ್ತ್ರೀಯರಿಗೆ ಕುಟುಂಬದ ಜವಬ್ದಾರಿಯು ಇರುವುದರೊಂದಿಗೆ, ಅವಳು ಪುರುಷನಂತೆ ಹೊರಗಡೆ ದುಡಿಯುತ್ತಾಳೆ. ಉದಾ: ಅಲಂಕಾರಿಕ ವಸ್ತುಗಳ ಮಾರಾಟ, ಕಸಬರಿಗೆ, ಬುಟ್ಟಿ, ಪ್ಲಾಸ್ಟಿಕ್‌ವಸ್ತುಗಳು, ಪಾತ್ರೆಗಳು ಸಣ್ಣಪ್ರಮಾಣದ ಗೃಹೋಪಯೋಗಿ ವಸ್ತುಗಳುನ್ನು ಮಾರಟ ಮಾಡುತ್ತಾರೆ. ಕುಟುಂಬ ನಿರ್ವಹಣೆಯಲ್ಲಿ ಅವರ ಶ್ರಮ ಅಧಿಕವಾಗಿದೆ. ಮನೆಯಲ್ಲಿ ಮಕ್ಕಳ - ಪೋಷಣೆ ಜೊತೆಯಲ್ಲಿ ಭಿಕ್ಷಾಟನೆ ಪಾತ್ರದಲ್ಲಿ ಉರುಗೋಲಾಗಿದ್ದು, ಶ್ರಮಿಸುತ್ತಾರೆ.

೧೬. ಕುಟುಂಬದ ತೊಂದರೆಗಳಿಗೆ ದೇವತೆಗಳ ಆರಾಧನೆ

ಕುಟುಂಬ ವ್ಯವಸ್ಥೆಯು ಬಿಗಿಯಾಗಿರಲೆಂದು ಮಾತೃಗುಣಗಳಾದ ಕರುಣೆ, ಸಹಕಾರ, ಪ್ರೀತಿ ಅನುಕಂಪ ಎಂಬಿತ್ಯಾದಿಗಳನ್ನು ರೂಢಿಸಿಕೊಂಡಿದ್ದಾರೆ. ಆದ್ದರಿಂದ ಪುರುಷ ಪ್ರಧಾನ ದೇವರುಗಳಿಗೆ ಅಷ್ಟೇನು ಮಹತ್ವ ನೀಡದೆ, ಸ್ತ್ರೀಶಕ್ತಿ ದೇವತೆಗಳಾದ ದುರುಗಮ್ಮ, ಮಾರಮ್ಮ, ಮರುಗಮ್ಮ, ಕಾಳಿ, ದುರ್ಗ, ದಡಾರಮ್ಮ, ಎಲ್ಲಮ್ಮ ಎಂಬ ಇತರೆ ದೇವತೆಗಳನ್ನು ಆರಾಧಿಸುವುದುಂಟು. ಅರಬೆತ್ತಲೆ, ಬೇವಿನ ಉಡುಗೆ, ಬಲಿ ಆಚರಣೆಗಳನ್ನು ಮಾಡುವುದರ ಮೂಲಕ ದೇವತೆಗಳು ಪ್ರಸನ್ನರಾಗಿ ವರಗಳನ್ನು ದಯಪಾಲಿಸುತ್ತಾಳಂತೆ. ಹಾಗೆಯೆ ನಮ್ಮ ಕಷ್ಟಗಳನ್ನು ಪರಿಹರಿಸುತ್ತಾಳೆ, ಇಲ್ಲವಾದರೆ ಕೋಪಗೊಂಡು

ರೋಗಗ್ರಸ್ಥರನ್ನಾಗಿ, ಹಸಿವಿನಿಂದ ಒಳಗಾಗುವಂತೆ ಮಾಡುತ್ತಾಳಂತೆ. ಈ ಕಾರಣಕ್ಕಾಗಿ ದೇವತೆಗಳನ್ನು ಪೂಜಿಸುತ್ತಾರೆ.

೧೭. ಕುಟುಂಬದ ಅಮೂಲ್ಯ ಆಸ್ತಿಯಾಗಿ ಸಂಪ್ರದಾಯ ಜ್ಞಾನ

ಪ್ರಾಚೀನ ಕಾಲದಿಂದಲೂ ಇಂದಿನ ಆಧುನಿಕ ಕಾಲದವರೆಗೂ ಕಾಡಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಅಲೆಮಾರಿಗಳು ಸೂಕ್ತರೀತಿಯಲ್ಲಿ ಬಳಸಿಕೊಂಡಿದ್ದಾರೆ. ವಿವಿಧ ಸಾಮಾಜಿಕ ಬಹುಪಯೋಗಿ ವಸ್ತುಗಳನ್ನು ತಯಾರಿಸುವುದುಂಟು. ಮನೆಗಳ ಹತ್ತಿರ ಹೋಗಿ ನೇರವಾಗಿ ಮಾರಾಟ ಮಾಡುತ್ತಾರೆ. ಇವರು ಬಹಳ ನಿಪುಣರಾಗಿರುವರು. ತಯಾರಿಸುವ ಕರುಕುಶಲತೆಗಳನ್ನು ನೋಡಿದಾಗ ತಿಳಿಯುತ್ತದೆ. ಕಲಾತ್ಮಕವಾದ ಬುಟ್ಟಿ, ಪೊರಕೆ, ಬೆತ್ತದ ಕುರ್ಚಿಗಳು, ಬಾಗಿಲು ತೋರಣ, ಮಣ್ಣಿನ ಮಡಕೆಗಳು, ಮೈಮೇಲೆ ಹಾಕುವ ಹಚ್ಚೆಗಳು, ಹತ್ತಿಯಿಂದ ಉಣ್ಣೆಬಟ್ಟೆಗಳು ಇತ್ಯಾದಿಗಳು. ದೇಸಿಯ ಸಂಪ್ರದಾಯ ಕೌಶಲ್ಯಗಳನ್ನು ಅಥವಾ ತಂತ್ರಗಳನ್ನು ಉಪಯೋಗಿಸಿ, ವಿಶಿಷ್ಟ ರೀತಿಯ ವಸ್ತುಗಳನ್ನು ತಯಾರಿಸುತ್ತಿರುವುದುಂಟು. ಇಂತಹ ಜ್ಞಾನಗಳು ಅಥವಾ ತಂತ್ರಗಳು ಕುಟುಂಬದ ಅಮೂಲ್ಯ ಆಸ್ತಿಯಾಗಿರುವುದು. ಯಾವುದೆ ತರಹದ ಆದಾಯ ಮೂಲಗಳು ಇವರ ಹತ್ತಿರ ಇಲ್ಲ. ನಿಸರ್ಗದಲ್ಲಿ ಸಿಗುವ ಕಚ್ಚಾ ವಸ್ತುಗಳೆ ಇವರ ಪಾರಂಪಾರಿಕ ಆಸ್ತಿಯಾಗಿದೆ.

೧೮. ಗಟ್ಟಿಯಾದ ರಕ್ತಸಂಬಂಧಗಳು

ಅಲೆಮಾರಿಗಳ ಕುಟುಂಬದಲ್ಲಿ ರಕ್ತಸಂಬಂಧ ಮಹತ್ವದಾಗಿದೆ. ಯಾರ ಹತ್ತಿರ ಹೇಗೆ ಸಂಭೋದಿಸಬೇಕು? ಸಂಭೋದಿಸ ಬಾರದು? ಯಾರೊಂದಿಗೆ, ಯಾವ ವರ್ತನೆ ಸೂಕ್ತವೆನ್ನುವುದು, ಆಂತರಿಕವಾಗಿ ಬಂದಿದೆ? ತಮ್ಮ ಕುಟುಂಬದ ರಕ್ತ ಹಂಚಿಕೊಂಡು ಬಂದವರಿಗೆ ಯಾವುದೆ ರೀತಿಯ ಅನಾಹುತಗಳು ಸಂಭವಿಸಿದಾಗ ನೆರವಿಗೆ ಸಿದ್ಧರಾಗುವರು. 'ನಾನು' 'ನನ್ನವರು' 'ನನ್ನದು' ಎಂಬ ಕಲ್ಪನೆ ಕುಟುಂಬದ ಪ್ರತಿ ಸದಸ್ಯರಲ್ಲಿ ಮೇಳೈಸಿಕೊಂಡಿದೆ.

೧೯. ಕುಟುಂಬದಲ್ಲಿ ಸ್ವಯಂ ವೈದ್ಯ

ಕಾಡಲ್ಲಿ ಏನೆಲ್ಲಾ ಇದೆ ಎಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟವರು ಅಲೆಮಾರಿಗಳು. ಕಾಡಲ್ಲಿ ದೊರೆಯಬಹುದಾದ ಅನೇಕ ವಿಶೇಷ ಗಿಡಮೂಲಿಕೆಗಳನ್ನು ಪರಿಚಯಿಸಿದವರು. ಎಲೆ, ಬೇರು, ಕಾಂಡ, ಬಳ್ಳಿ, ಪಶು-ಪಕ್ಷಿಗಳ ಚರ್ಮ, ಎಲುಬುಗಳು ಇತರೆ ಕಾಡಿನ ಉತ್ಪನ್ನಗಳನ್ನು ತಂದು, ಮನುಷ್ಯರ ಆರೋಗ್ಯದಲ್ಲಿ ಹೊಂದಿಕೆಯಾಗುವಂತೆ, ಯಾವ ಯಾವ ವಿಧಾನಗಳ ಮೂಲಕ ಹೇಗೆ ಔಷಧಿಗಳನ್ನು ತಯಾರಿಸಿ ಕೊಡಬೇಕೆಂದು ಕಂಡುಕೊಂಡವರು. ಕುಟುಂಬದಲ್ಲಿ ಯಾವ ಸದಸ್ಯನಿಗಾದರು ಕಾಯಿಲೆಗಳು ಬಂದಾಗ ತಮ್ಮ ಬಳಿ ಇರುವ ಗಿಡಮೂಲಿಕೆ ಉಪಯೋಗಿಸಿ ಔಷಧಿಗಳನ್ನು ಸಿದ್ಧಪಡಿಸಿ ರೋಗಗಳನ್ನು ಗುಣಪಡಿಸುವರು. ಇಂಗ್ಲಿಷ್ ಔಷಧಿಗಳಿಗೆ ಮಾರು ಹೋಗದೆ, ಪಾರಂಪಾರಿಕ ವೈದ್ಯ ಪದ್ಧತಿಯಿಂದ ಕಾಯಿಲೆ ಬಗೆಹರಿಸಿಕೊಳ್ಳುವರು. ಇದರಿಂದ ಕುಟುಂಬದ ಆದಾಯವು ಬೇರೆ ವೈದ್ಯರಿಗೆ

ಹೋಗುವುದನ್ನು ತಪ್ಪಿಸಬಹುದು. ಇಂಗ್ಲಿಷ್ ಔಷಧಿಗಳಿಗೆ ಹಾಗೂ ಡಾಕ್ಟರ್‌ಗಳಲ್ಲಿ ಹೋಗಲು ಹಣದ ಮುಗ್ಗಟ್ಟಿರುವುದರಿಂದ ಇಂತಹ ಗಿಡಮೂಲಿಕೆ ಔಷಧಿಗಳು ಅನಿವಾರ್ಯವಾಗಿದೆ.

೨೦. ಕೌಟುಂಬಿಕ ಗೌಪ್ಯಭಾಷೆ

ಭಾಷೆಯು ಅಂತರ ಸಂಬಂಧಗಳನ್ನು ಒಂದುಗೂಡಿಸುವ ಮಾಧ್ಯಮವಾಗಿದೆ. ಪ್ರತಿಯೊಂದು ಸಮುದಾಯದಲ್ಲಿ ಭಾಷೆ ಇರುವಂತೆ ಅಲೆಮಾರಿ ಸಮುದಾಯದಲ್ಲಿ ಭಾಷೆಯಿದೆ. ಭಾಷೆಯು ಕೌಟುಂಬಿಕ ಸದಸ್ಯರಿಗೆ ಮಾತ್ರ ಸೀಮಿತವಾಗಿದೆ. ಅದು ಜಾತಿಯ ಸಮುದಾಯಕ್ಕೆ ಮಾತ್ರ ಗೊತ್ತಿರುತ್ತದೆ. ಇಂತಹ ಭಾಷೆಯು ಕುಟುಂಬದ ಚೌಕಟ್ಟಿನಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿರುತ್ತದೆ. ಹಕ್ಕಿಪಿಕ್ಕಿಯರ - ವಾಘ್ರಿ ಭಾಷೆ, ರಾಜಗೊಂಡರ - ಗೊಂಡಿಭಾಷೆ ಇತ್ಯಾದಿಗಳು. ಅಲೆಮಾರಿಗಳು ಹೊರಗಡೆ ಹೋದಾಗ ಸಾಮಾನ್ಯವಾಗಿ ಇತಂಹ ಪ್ರದೇಶದಲ್ಲಿ ನಮ್ಮ ಜಾತಿಯವರು ಬೀಡುಬಿಡುತ್ತಾರೆಂದು ತಿಳಿಯುತ್ತದೆ. ಸಮುದಾಯದವರನ್ನು ನೋಡಿದ ಕೂಡಲೆ ಇವರು ನಮ್ಮ ಜಾತಿಯರೆಂದು ಗೊತ್ತಾಗುವುದರಿಂದ ಸಮುದಾಯದ ಭಾಷೆಯನ್ನು ಮಾತಾಡಿದರ ಪ್ರಯುಕ್ತ ಜಾತಿಯನ್ನು ಗುರುತಿಸಿಕೊಳ್ಳುತ್ತಾರೆ. ಕೌಟುಂಬಿಕ ಚೌಕಟ್ಟಿನಲ್ಲಿ ತಮ್ಮ ಸಮುದಾಯದ ಭಾಷೆಯನ್ನು ಕಡ್ಡಾಯವಾಗಿ ಮಾತಾಡುತ್ತಿದ್ದರೂ ಹೊರಗಡೆ ಅಲೆಯುವಾಗ ಸ್ಥಳೀಯವಾಗಿ ಚಾಲ್ತಿಯಲ್ಲಿರುವ ಭಾಷೆಯನ್ನು ಮಾತನಾಡುವುದುಂಟು. ಸದಾ ಸಂಚಾರಿಗಳಾಗಿರುವ ಪರಿಣಾಮ ಕನಿಷ್ಠ ವೆಂದರು ೩ ರಿಂದ ೪ ಭಾಷೆಗಳನ್ನು ಕಲಿಯುವರಾಗಿರುತ್ತಾರೆ. ಆದರೂ ಅದು ಬರವಣಿಗೆಯ ರೂಪಕ್ಕೆ ತರಲಾರರು ಕಾರಣ ಅನಕ್ಷರಸ್ಥರು.

೨೧. ಕುಲಪಂಚಾಯಿತಿಗಳ ಮೂಲಕ ಕುಟುಂಬದ ವ್ಯಾಜ್ಯ ತೀರ್ಮಾನ

ಅಲೆಮಾರಿ ಸಮುದಾಯಗಳ ಕುಟುಂಬದಲ್ಲಿ ಏನಾದರೂ ಸಮಸ್ಯೆಗಳು ಉದ್ಭವಿಸಿದಲ್ಲಿ ಆ ಸಮಸ್ಯೆಗಳ ಪರಿಹಾರಗಳಿಗೆ ಅದೆ ಸಮುದಾಯದವರು ಕುಲಪಂಚಾಯಿತಿಯ ಸದಸ್ಯರು ಸಹಾಯಕ್ಕೆ ಬರುತ್ತಿದ್ದರು. ಇಂತಹ ವ್ಯವಸ್ಥೆಯು ಈಗಲೂ ಅನೇಕ ಸಮುದಾಯಗಳ ಚಾಲ್ತಿಯಲ್ಲಿದೆ. ಆಧುನಿಕ ವ್ಯವಸ್ಥೆಗಳಾದ ಕಾನೂನು ನಿಬಂಧನೆಗಳಿಗೆ ಒಳಗಾಗದೆ, ತಮ್ಮ ಸಮುದಾಯದ ನಿಯಮಗಳಿಗೆ ಬದ್ಧರಾಗಿರು ತ್ತಾಗೆ. ನ್ಯಾಯಗಳನ್ನು ಪರಿಹರಿಸುತ್ತಾರೆ. ಕುಲಪಂಚಾಯಿತಿಯ ಹಿರಿಯರು, ಯಜಮಾನರು ೫ ರಿಂದ ೭ ಸದಸ್ಯರನ್ನೊಳಗೊಂಡಿರುತ್ತದೆ. ಪೀಠದಲ್ಲಿ ಪಿರ್ಯಾದಿಗಾರರು ಅಹವಾಲನ್ನು ಸಲ್ಲಿಸುತ್ತಾರೆ. ಆ ಅಹವಾಲನ್ನು ಗಮನಿಸಿದ ಪೀಠವು ಇಬ್ಬರನ್ನು ಕರೆಯಿಸಿಕೊಂಡು ವಾದ-ವಿವಾದಗಳು ಪರಿಗಣಿಸುತ್ತಾರೆ. ಕೆಲವು ಬಾರಿ ತೀರ್ಮಾನಕೊಡುವುದು ಕಷ್ಟವಾಗುವುದರಿಂದ ವಿವಿಧ ತಂತ್ರಗಳನ್ನು ಪ್ರಯೋಗಿಸಿ ಸರಿ-ತಪ್ಪುಗಳನ್ನು ಕಂಡುಹಿಡಿಯುತ್ತಾರೆ. ಅವರವರ ತಪ್ಪುಗಳಿಗನುಗುಣವಾಗಿ ಶಿಕ್ಷೆ ದಂಡಗಳನ್ನು ಕೊಡಲಾಗುವುದು. ಕೊನೆಯಲ್ಲಿ ನ್ಯಾಯ ದೊರೆತ ವ್ಯಕ್ತಿಯು ಖುಷಿಯಿಂದ ಸಮುದಾಯದವರೆಲ್ಲರಿಗೂ ಚಹಾ, ತಿಂಡಿ, ಮಧ್ಯಪಾನ ಮಾಡಿಸಬೇಕಾಗಿ ಹಾಗೂ ಪಂಚಾಯಿತಿಯ ಹಿರಿಯ ವ್ಯಕ್ತಿಗಳಿಗೆ ಮಧ್ಯಪಾನ ಮಾಡಿಸಬೇಕಾಗಿರುವುದು ಅನಿವಾರ್ಯವಾಗಿದೆ. ನ್ಯಾಯ ಪಂಚಾಯಿತಿಯು ನೀಡುವ ಸ್ಥಳವೆಂದರೆ ಸಮುದಾಯದ ಕಟ್ಟೆಮನೆಗಳು, ಬಯಲು ಅಂಗಳ, ಸ್ಮಶಾನಗಳು, ದೇವರ ಗುಡಿ, ನೀರು ಹರಿಯುವಸ್ಥಳ,

ಜಗಲಿಕಟ್ಟೆ ಇತ್ಯಾದಿಗಳಲ್ಲಿ ನಡೆಯುವುದು. ವಿಶೇಷ ಹಬ್ಬಗಳಲ್ಲಿ ಉದಾ: ಕುದುರೆಮೋತಿಯಲ್ಲಿ ಹಗಲುವೇಷಗಾರರ ಸಂಗಮದಲ್ಲಿ ವ್ಯಾಜ್ಯ ತೀರ್ಮಾನ ಆಯ್ಕೆ ಮಾಡಿಕೊಂಡು ತಮ್ಮ ಸಮುದಾಯದ ನಿಯಮಗಳು ಬೇರೆಯವರಿಗೆ ಗೊತ್ತಾಗಬಾರದೆಂಬ, ಕಾರಣಕ್ಕಾಗಿಯೆ ಮತ್ತು ಕುಟುಂಬದ ಗೌಪ್ಯವು ಬಹಿರಂಗವಾಗಿ ಬಿತ್ತರಿಸಬಾರದೆಂಬ ಕಾರಣಕ್ಕಾಗಿ ಇಂತಹ ಸ್ಥಳಗಳ ಆಯ್ಕೆ ನಡೆಯುತ್ತದೆ. ಜೊತೆಗೆ ಇಂತಹ ಸ್ಥಳಗಳನ್ನು ಸಮುದಾಯವು ಪವಿತ್ರವೆಂದು ಭಾವಿಸಿ ಸರಿತಪ್ಪುಗಳು ಒಪ್ಪುವರು. ಯಾವುದೆ ಕಾರಣತ್ಕೂ ಪಂಚಾಯ್ತಿ ತೀರ್ಮಾನ ಉಲ್ಲಂಘಿಸುವುದಿಲ್ಲ ಎಂತಹ ಶಿಕ್ಷೆಗಾದರೂ ಬದ್ಧರಾಗಿರುತ್ತಾರೆ. ಈ ಸಂದರ್ಭಗಳಲ್ಲಿ ಪೋಲಿಸ್‌ಠಾಣೆ, ಕೋರ್ಟುಕಛೇರಿಗಳಿಗೆ ಹೋಗದೆ ಕುಟುಂಬದ ಗೌಪ್ಯತೆಗೆ ಬದ್ಧರಾಗಿರುವರು ಇದರಿಂದ ಹಣ, ಸಮಯವೂ ಉಳಿತಾಯವು. ಹಾಗೂ ವಿಶ್ವಾಸಗಳು ಮುಂದುವರಿಯಲು ಸಹಾಯಕವಾಗಿವೆ.

೨೨. ಕುಟುಂಬದ ಸದಸ್ಯರಾಗಿ ಪ್ರಾಣಿ-ಪಕ್ಷಿಗಳು

ಅಲೆಮಾರಿ ಸಮುದಾಯಗಳ ಕುಟುಂಬವ್ಯವಸ್ಥೆಯಲ್ಲಿ ಪ್ರಾಣಿ-ಪಕ್ಷಿಗಳು ಸದಸ್ಯರಂತೆ ಸದಸ್ಯತ್ವ ಪಡೆದುಕೊಂಡಿರುವುದುಂಟು. ಕುಟುಂಬದಲ್ಲಿ ಸದಸ್ಯರ ಜೊತೆಗೂಡಿ ದುಡಿದು ಕುಟುಂಬಕ್ಕೆ ನೆರವಾಗುತ್ತವೆ. ಅಲೆಮಾರಿಗಳಿಗೆ ಹಸಿವನ್ನು ಹಿಂಗಿಸಿಕೊಳ್ಳಲು ಮಾಂಸಬೇಕಾಗುತ್ತದೆ. ಇಂತಹ ಮಾಂಸವು ದೊರೆಯ ಬೇಕಾದರೆ ಬೇಟೆಗೆ ಹೋಗಬೇಕಾಗುವುದು ಅನಿವಾರ್ಯ. ಬೇಟೆ ಕೈಗೊಳ್ಳಲು ನಾಯಿಗಳನ್ನು ಬಳಸುವು ದುಂಟು. ನಾಯಿಯು ಇಲಿ, ಮೊಲ, ಬೆಕ್ಕು, ಗೀಜಗ, ಚಿಗರೆ, ಪುರುಲಿ, ಕೌಜುಗ, ಹಕ್ಕಿ, ಗಿಳಿ ಮುಂತಾದ ಪ್ರಾಣಿ ಪಕ್ಷಿಗಳ ಬೇಟೆಯಾಡಿ ಕುಟುಂಬದ ಒಡೆಯನಿಗೆ ಕೊಡುತ್ತದೆ. ಹಾಗೂ ರಾತ್ರಿಯಲ್ಲಿ ಬಯಲಿನಲ್ಲಿ ವಾಸಿಸುವ ಕುಟುಂಬದವರು ಮಲಗಿರುವ ಸಮಯದಲ್ಲಿ ಕಾವಲುಕಾಯುತ್ತದೆ, ರಾತ್ರಿಯಲ್ಲಿ ನಡೆಯುವ ಕಳ್ಳತನ, ಅನ್ಯಜನರ ಆಕ್ರಮಣಗಳನ್ನು ತಡೆಯುವಲ್ಲಿ ನಾಯಿಯು ಅತ್ಯಂತ ಸಹಕಾರಿಯಾಗಿದೆ. ಹಸುಗಳನ್ನು ಸಾಕುವುದರಿಂದ ಕುಟುಂಬದಲ್ಲಿ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ ಬರುವುದುಂಟು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಯುವಾಗ ಗಂಟುಮೂಟೆಗಳನ್ನು ಸಾಗಿಸುವ ಸಾಧನವಾಗಿರುತ್ತದೆ. ಕೋಳಿಯು ಮೊಟ್ಟೆಗಳನ್ನು ಹಾಗೂ ಮಾಂಸ ಕೊಡುವುದು. ಮೇಕೆ, ಕುರಿಗಳು ಕುಟುಂಬದಲ್ಲಿ ಪ್ರಮುಖ ಪಾತ್ರವಹಿಸುವಲ್ಲಿ ತನ್ನದೆ ಸ್ಥಾನಗಳನ್ನುಳಿಸಿಕೊಂಡಿದೆ. ಒಟ್ಟಾರೆ ಪ್ರಾಣಿ ಪಕ್ಷಿಗಳು ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ನೆರವಾಗುತ್ತಾ ರಂಜನೆ ಕೊಡುತ್ತವೆ. ಆದುದರಿಂದ ಅಲೆಮಾರಿಗಳಿಗೆ ಪ್ರಾಣಿ-ಪಕ್ಷಿಗಳೆಂದರೆ ಅಪಾರವಾದ ಪ್ರೀತಿ, ಕುಟುಂಬದ ಸದಸ್ಯನಿಗೆ ಯಾವ ಸ್ಥಾನಮಾನಗಳು ಇರುತ್ತವೆಯೋ ಅದೆ ತರಹದ ಸ್ಥಾನಮಾನಗಳು ಇವುಗಳಿಗೆ ಇರುತ್ತವೆ. ಸದಸ್ಯರು ಕುಟುಂಬದಿಂದ ದೈವದೀನರಾದಗ ಸೂತಕ ಆವರಿಸುತ್ತದೆಯೊ ಅದೆ ರೀತಿ ಪ್ರಾಣಿ ಮತ್ತು ಪಕ್ಷಿಗಳು ಸತ್ತಾಗಲೂ ಕುಟುಂಬದಲ್ಲಿ ಸೂತಕದ ಛಾಯೆ ಆವರಿಸುತ್ತದೆ.

೨೩. ದೈವ ಮುನಿಸಿನಿಂದ ಖಾಯಿಲೆಗಳು ಬರುತ್ತವೆ ಎಂಬ ನಂಬಿಕೆ

ಕುಟುಂಬದ ಸದಸ್ಯರಿಗೆ ಅನಾರೋಗ್ಯ ಕಂಡುಬಂದರೆ ದೇವತೆ-ದೇವರ ಕಾಟದಿಂದ ಬಂದಿದೆ. ಎಂದು ನಂಬಿಕೊಳ್ಳುತ್ತಾರೆ. ಅದರಿಂದ ಪಾರಾಗಲು ಮಾಟ-ಮಂತ್ರ, ಹರಕೆ, ಬಲಿ, ಬೆತ್ತಲೆ ಸೇವೆಯನ್ನು

ಕೈಗೊಳ್ಳುವರು. ರಾತ್ರಿ ಕನವರಿಸಿದರೆ, ದೆವ್ವಗಳು ಕಾಣಿಸಿಕೊಂಡರೆ, ಮಾಟಗಾರರ ಹತ್ತಿರ ದೆವ್ವ ಬಿಡಿಸುವುದುಂಟು. ಅವರು ಕೊಡುವ ಪತ್ರಿ, ವಿಭೂತಿ, ಭಸ್ಮ, ತಾಯಿತ ದಾರಗಳನ್ನು ಕೈಗೆ, ಕೊರಳಿಗೆ ಅಥವಾ ಸೊಂಟದಲ್ಲಿ ಕಟ್ಟಿಕೊಳ್ಳುತ್ತಾರೆ. ಹಣೆಯಲ್ಲಿ ವಿಭೂತಿ, ಭಸ್ಮ ಲೇಪಿಸಿಕೊಳ್ಳುತ್ತಾರೆ. ನಿಂಬೆಹಣ್ಣು ಕೊಯ್ದು ರಸ್ತೆ ಮಧ್ಯಭಾಗದಲ್ಲಿ ಹಾಕುವುದು, ಮನೆಗಳ ಮುಂದೆ ರಂಗೋಲಿ ಹಾಕುವುದನ್ನು ಮಾಡುತ್ತಾರೆ. ಮಗುವಿಗೆ ಬಂದಿರುವ ಜ್ವರ ವಾಂತಿ-ಭೇದಿಗಳು ಗುಣವಾದರೆ ಮನೆದೇವರಿಗೆ ಹರಕೆಯನ್ನು ಕಟ್ಟಿಕೊಂಡು, ಅರಬೆತ್ತಲೆ ಸೇವೆ ಸಲಿಸುವ, ಕುರಿ, ಕೋಳಿಗಳನ್ನು ಬಲಿಕೊಡುವದಾಗಿ ಬೇಡಿಕೆಗಳನ್ನು ದೇವರ ಮುಂದೆ ಹೇಳುವುದುಂಟು. ರೋಗಗಳು ಉಲ್ಬಣಗೊಂಡರು ವೈದ್ಯರ ಬಳಿ ಹೋಗದೆ, ದೈವವನ್ನೆ ನಂಬಿಕೊಂಡಿದ್ದಾರೆ. ಗಿಡಮೂಲಿಕೆಯ ಔಷಧ ನೀಡುತ್ತಾರೆ. ಒಂದು ವೇಳೆ ರೋಗಪೀಡಿತನಾದ ವ್ಯಕ್ತಿಯು ಮರಣ ಹೊಂದಿದರೆ ಅವನ ಅಯುಷ್ಯವು ಮುಗಿಯಿತು. ಅದ್ದರಿಂದ ದೇವರು ತನ್ನ ಹತ್ತಿರ ಕರೆದುಕೊಂಡು ಹೋದನು ಎಂದು ನಂಬುತ್ತಾರೆ. ಅಲೆಮಾರಿಗಳ ದೃಷ್ಟಿಕೋನ ಕುಟುಂಬದ ಯಾವುದೆ ಕಷ್ಟ ನೋವು ನಲಿವುಗಳೆಲ್ಲವು ದೈವ ಮುನಿಸಿನಿಂದ ನಡೆಯುತ್ತದೆ ಎಂಬ ಅಚಲವಾದ ನಂಬಿಕೆಯಾಗಿದೆ.

೨೪. ಸರಳ ಕೌಟುಂಬಿಕ ಬಯಕೆಗಳು

ನೆಲೆ ನಿಂತವರು ಶ್ರೀಮಂತರಾಗಬೇಕು, ವೈಭವಯುತ ಜೀವನ ಮಾಡಬೇಕು, ದೊಡ್ಡ ದೊಡ್ಡ ಮನೆಗಳು, ಬಣ್ಣ-ಬಣ್ಣದ ಬಟ್ಟೆಗಳು, ಒಡವೆಗಳು ಧರಿಸಬೇಕು ಎಲ್ಲರು ಕಣ್ಣುಗಳು ನಮ್ಮ ಗಮನ ನೀಡಬೇಕು ಇತ್ಯಾದಿಗಳು. ಸಾಮಾನ್ಯ ಮತ್ತೆ ಕೆಲವರು ಈ ಮೇಲಿನ ಆಸೆಗಾಗಿ ಕೊಲೆ, ಸುಲಿಗೆ, ಭಯೋತ್ಪಾದನೆ, ಮೋಸ, ಕಳ್ಳತನಕ್ಕೆ ಇಳಿಯುತ್ತಾರೆ. ತಮ್ಮ ಆಸೆಗಳನ್ನು ಈಡೇರದಿದ್ದಾಗ ಕೊಲೆ-ಸುಲಿಗೆಗಳು ನಡೆಯುತ್ತವೆ. ಶಾಂತವಾಗಿದ್ದ ವಾತವರಣವನ್ನು ಅಶಾಂತವಾಗಿಸುತ್ತಾರೆ. ಆದರೆ ಅಲೆಮಾರಿಗಳು ತಮ್ಮ ಕುಟುಂಬದ ನೈತಿಕ ಬದುಕಿಗಾಗಿ ತಮ್ಮ ಕುಟುಂಬದ ಸದಸ್ಯರು ಹಿಂದಿನಿಂದ ಇಂದಿನವರೆಗೂ ತಮ್ಮ ವೃತ್ತಿಯಲ್ಲಿ ಮುಂದುವರಿಯುತ್ತಾರೆ. ಬೇರೆಯವರ ಸಂಪತ್ತಿಗೆ ಆಸೆ ಪಡದೆ, ಇರುವ ಬದುಕಿನಲ್ಲಿ ಸಂತೋಷಪಡುವುದುಂಟು. ಇವರ ಬಯಕೆಗಳು ಊಟ ಮತ್ತು ಬಟ್ಟೆ, ತಂಗುವ ಊರುಗಳಲ್ಲಿ ಭಿಕ್ಷೆ ಸಿಗಬೇಕು, ಹಳೆಯ ಬಟ್ಟೆ ಕೊಟ್ಟರೆ ಸಾಕು ಎನ್ನುತ್ತಾರೆ. ನಾವು ಪ್ರದರ್ಶಿಸುವ ಆಟ, ಹಾಡಗಳ ಪ್ರದರ್ಶನದಲ್ಲಿ ಒಳ್ಳೆಯ ಆದಾಯ ಬರಬೇಕೆಂಬುದು ಹೆಬ್ಬಯಕೆ ಆಗಿದೆ. ಯಾರು ಯಾರ ಮೇಲೆಯೂ ಕೋಪಿಸಿಕೊಳ್ಳದೆ, ತಮ್ಮ ಕುಟುಂಬದಲ್ಲಿ ಎಷ್ಟು ಬರುತ್ತದೆ ಅಷ್ಟರಲ್ಲಿ ತೃಪ್ತಿ ಕಾಣುವಂತರಾಗಿದ್ದಾರೆ.

೨೫. ಪುರೋಹಿತ ರಹಿತ ಸಂಸ್ಕಾರಗಳು

ಭಾರತಿಯ ಕುಟುಂಬಗಳ ಸಂಬಂಧದಲ್ಲಿ ಸಂಸ್ಕಾರಗಳು ತುಂಬಾ ಮಹತ್ವವನ್ನು ಪಡೆದುಕೊಂಡಿವೆ. ಹುಟ್ಟಿನಿಂದ ಸಾಯುವತನಕ ವ್ಯಕ್ತಿಯು ಒಂದಲ್ಲ ಒಂದು ವಿವಿಧ ಸಂಸ್ಕಾರಗಳನ್ನು ದಾಟಿ ಅವಸಾನ ಕಾಣುತ್ತಾರೆ. ನೆಲೆನಿಂತವರು ಹುಟ್ಟಿನಿಂದ ಸಾಯುವತನಕ ಸಂಸ್ಕಾರಗಳನ್ನು ಪೂರೈಸಲು ಪುರೋಹಿತರು ಅಥವಾ ಪೂಜಾರಿಗಳು ಬೇಕಾಗಿದೆ. ಅವರಿಲ್ಲದಿದ್ದರೆ ಸಂಸ್ಕಾರಗಳು ನಡೆಯುವುದಿಲ್ಲ. ಅವರನ್ನು ಬಿಟ್ಟು ಮಾಡಿದರೆ, ಒಂದು ರೀತಿಯ ಅಪಮಾನವು ಹೌದು. ಇಂತಹ ಪುರೋಹಿತರಿಗೆ ಸಲ್ಲಿಸುವ ಕಾರ್ಯಗಳಿಗೆ

ಇಂತಿಷ್ಟು ಸಂಭಾವನೆ, ದವಸಧಾನ್ಯ, ಬಟ್ಟೆ, ಹಾಗೂ ಗೌರವ ಮನ್ನಣೆಗಳು ದೊರೆಯುತ್ತವೆ. ಅಲೆಮಾರಿಗಳ ಕುಟುಂಬದಲ್ಲಿ ಸಂಸ್ಕಾರಗಳು ನಡೆದರೆ ಪುರೋಹಿತರು ಮತ್ತು ಪೂಜಾರಿಗೆ ಪ್ರವೇಶವಿಲ್ಲ. ತಮ್ಮ ಕುಟುಂಬದ ಗುಟ್ಟು ತಮ್ಮೊಂದಿಗೆಯೆ ಇರಬೇಕೆಂಬ ಮನೋಭಾವದ ಪ್ರಯುಕ್ತ ತಮ್ಮ ಜಾತಿಯ ಮುಖ್ಯಸ್ಥರು, ಸೋದರಮಾವ, ಸೋದರ ಅತ್ತೆಯಿಂದ ಈ ಕೆಳಗಿನ ಕಾರ್ಯಗಳನ್ನು ಪೂರೈಸುವರು.

೧. ಜವಳ(ಕೂದಲು) ತೆಗೆಯುವ ಸಂಸ್ಕಾರದಲ್ಲಿ ಸೋದರಮಾವ ಪ್ರಮುಖ ಪಾತ್ರನಿರ್ವಹಿಸುತ್ತಾನೆ.

೨. ವಿವಾಹದ ಸಂದರ್ಭದಲ್ಲಿ ಕುಲದ ಮುಖಂಡ ವೈವಾಹಿಕ ಕಾರ್ಯದಲ್ಲಿ ಚಾಲನೆ ನೀಡುವನು.

೩. ಮರಣ ಸಂಭವಿಸಿದಾಗ ಕುಲದ ಮುಖಂಡರು ವಿಧಿ-ವಿಧಾನಗಳನ್ನು ನಿರ್ವಹಿಸುತ್ತಾರೆ.

೪. ಕುಲದ ಮುಖಂಡರು ಕೂಡಿಕೆ ಕಾರ್ಯಕ್ರಮದಲ್ಲಿ ಮುಖ್ಯ ಪಾತ್ರ ನಿರ್ವಹಿಸುತ್ತಾರೆ.

೫. ಋತುಮತಿಯಾದಾಗ ಸೋದರ ಅತ್ತೆಯಿಂದ ನೀರೆರೆಸಿಕೊಂಡರೆ, ಸೊದರಮಾವನಿಂದ ಪ್ರತ್ಯೇಕ ಬಿಡಾರ ಕಟ್ಟಿಸಿಕೊಳ್ಳುತ್ತಾರೆ.

೬. ಮದುವೆಯಲ್ಲಿ ಸೋದರ ಮಾವನು ಅಳಿಯನನ್ನು ಅಥವಾ ಸೊಸೆಯನ್ನು ಹೆಗಲಮೇಲೆ ಹೊತ್ತು ಮದುವೆ ಮಂಟಪದಲ್ಲಿ ಕರೆತರುವುದಾಗಿದೆ.

ಹೀಗೆ ಅಲೆಮಾರಿಗಳು ಪ್ರತಿ ಕಾರ್ಯದಲ್ಲಿ ಅದೆ ಜಾತಿಯವರಿಂದ ಕಾರ್ಯಗಳನ್ನು ನಡೆಸುತ್ತಾರೆ. ಇದರಿಂದ ಸಮಯ, ಹಣ, ಉಳಿತಾಯ, ಸಂಬಂಧಗಳು ವಿಸ್ತಾರವಾಗುತ್ತವೆ. ಇದು ಪ್ರತಿ ಅಲೆಮಾರಿ ಕುಟುಂಬದ ಜೊತೆ ಜೊತೆಗೆ ಬೆರೆತುಕೊಂಡು ಸಾಗುತ್ತಿದೆ.

೨೬. ಆದಾಯದ ಭಾಗವಾಗಿ ಪ್ರಕೃತಿ

ಅಲೆಮಾರಿಗಳು ಪ್ರಕೃತಿ ರಕ್ಷಣೆ ಮಾಡುತ್ತಾರೆ. ಕಾಡಿನಲ್ಲಿ ಒಣಗಿರುವ ಕಟ್ಟಿಗೆಗಳನ್ನು ಕಿತ್ತು ಕಾಡ್ಗಿಚ್ಚು ಬೀಳದಂತೆ ಎಚ್ಚರವಹಿಸುತ್ತಾರೆ. ಅಲ್ಲಿನ ಗಿಡಮೂಲಿಕೆ ತೆಗೆದುಕೊಂಡು ಔಷಧಿಗಳಲ್ಲಿ ಬಳಸಿ, ಪ್ರಾಣಪಾಯದಲ್ಲಿರುವ ವ್ಯಕ್ತಿಗಳನ್ನು ರಕ್ಷಿಸಲು ಉಪಯೋಗಿಸುತ್ತಾರೆ. ಉಳಿದ ನಿಸರ್ಗದಲ್ಲಿ ಯಾವುದೆ ಪೂರ್ಣಹಾನಿಯಲ್ಲದ ಕೊನೆಕಾಣುವ ಸಂಪತ್ತುಗಳನ್ನು ಮಾತ್ರ ಇವರು ತಮ್ಮ ಉಪಜೀವನದಲ್ಲಿ ಬಳಸಿಕೊಳ್ಳುತ್ತಾರೆ. ಇವರು ಒಂದ್ಹೊತ್ತಿನ ಊಟವನ್ನು ಸಂಪಾದಿಸಲು ಮಾತ್ರ ಉಪಯೋಗಿಸುತ್ತಾರೆ. ಅಲ್ಲಿ ಸಿಗುವ ಕಚ್ಚಾವಸ್ತುಗಳಿಂದ ತಮ್ಮದೆ ಕರಕುಶಲ ಕಲೆಯಿಂದ ವಸ್ತುಗಳನ್ನು ತಯಾರಿಸಿ, ಮಾರಾಟವನ್ನು ಮಾಡುವ ಮುಖಾಂತರ ಜೀವನವನ್ನು ಸಾಗಿಸುತ್ತಾರೆ. ಕುಟುಂಬಗಳ ದೈವ ದತ್ತವಾದ ನಿಸರ್ಗದ ಕೊಡುಗೆಯಾಗಿದೆ. ಅವರ ಬದುಕು ಸಾಗಿಸುವ ಕಲ್ಪವೃಕ್ಷ ಎಂಬುದಾಗಿ ಆರಾಧಿಸುತ್ತ, ಪೂಜಿಸುತಿದ್ದಾರೆ. ವಿನಮ್ರತೆಯಿಂದ ಕುಟುಂಬದ ಆಸ್ತಿ ಎಂಬಂತೆ ಜೀವನ ಸಾಗಿಸುವ ಇವರುಗಳಿಗೆ ಸರ್ಕಾರ ಅಡ್ಡಗೋಡೆ ಯಾಗಿ ನಿಂತಿದೆ. ಇದರಿಂದ ಇವರ ಒಂದೊತ್ತಿನ ಊಟಕ್ಕೂ ತೊಂದರೆಯಾಗುತ್ತದೆ.

೨೭. ಪ್ರಾದೇಶಿಕ ಹೊಂದಾಣಿಕೆ

ಒಂದೊತ್ತಿನ ಊಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುವ ಈ ಸಮುದಾಯವು ಸ್ಥಳಿಯ ಪರಿಸರ ಹಾಗೂ ಸಾಂದರ್ಭಿಕ ಪರಿಸ್ಥಿತಿ ಮತ್ತು ಪರಿಸರದಲ್ಲಿ

ಹೊಂದಿಕೊಂಡಿದ್ದಾರೆ. ಅವರು ಅಲ್ಲಿಯ ಭಾಷೆಯನ್ನು ಮೈಗೂಡಿಸಿಕೊಂಡು ಆಹಾರಗಳಿಗೆ ಹೊಂದಾಣಿಕೆ ಮಾಡಿಕೊಂಡು, ಅಲ್ಲಿನ ಜನರೊಂದಿಗೆ ಸಹಕಾರದಿಂದ ಗುರುತಿಸಿಕೊಳ್ಳುವರು. ಇರುವ ಸಮಯದಲ್ಲಿ ವಾಸಿಸುತ್ತಾ, ವಸ್ತುಗಳು ಬೇಡಿಕೊಂಡು, ಮತ್ತೆ ಮುಂದಿನ ಊರಿಗೆ ತೆರಳುತ್ತಾರೆ. ಕುಟುಂಬದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಬಿಟ್ಟುಕೊಡದೆ, ಕೌಟುಂಬಿಕ ಚೌಕಟ್ಟಿನಲ್ಲಿ ನೀತಿನಿಯಮಗಳನ್ನು ಅಳವಡಿಸಿ ಕಾಯ್ದುಕೊಳ್ಳುತ್ತಾರೆ.

೨೮. ರಕ್ಷಣೆಗಾಗಿ ಸಾಹಸಗಳು

ಅಲೆಮಾರಿಗಳು ತಮ್ಮ ಕೌಟುಂಬಿಕ ರಕ್ಷಣೆಯ ಹೊಣೆಹೊತ್ತಿದ್ದರಿಂದ ಹಲವಾರು ಸಾಹಸಗಳನ್ನು ಮೈಗೂಡಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಏಕೆಂದರೆ ಯಾವಾಗಲೂ ಅಲೆಯುವುದರಿಂದ ಎಲ್ಲಾ ಪ್ರದೇಶಗಳಲ್ಲಿ ಒಂದೆ ತರಹದ ವಾತವರಣ ಮತ್ತು ಒಂದೆ ತರದ ಜನರು ಇರುತ್ತಾರೆಂದು ಹೇಳಲು ಬರುವುದಿಲ್ಲ. ಸಮಾಜ ಎಂದ ಮೇಲೆ ಒಳ್ಳೆಯವರು ಕೆಟ್ಟವರು ಇಬ್ಬರು ಇರುತ್ತಾರೆ. ಕೆಟ್ಟವರಿಂದ ಪಾರಾಗಲು ಕೆಲವೊಂದು ಸಾಹಸಗಳು ಮಾಡಬೇಕಾಗುತ್ತದೆ. ಅಂತಹ ಸಾಹಸಗಳಿಂದ ಕುಟುಂಬದಲ್ಲಿ ಬೇಕಾದ ಆಹಾರವನ್ನು ಪಡೆಯುವುದುಂಟು. ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವಾಗ, ಕಾಡಿನಲ್ಲಿ ವಿಷಜಂತುಗಳು ಎದುರಿಗೆ ಬಂದಾಗ ಅವುಗಳನ್ನು ಹೇಗೆ ಪಳಗಿಸಬೇಕು. ಯಾವ ತಂತ್ರಗಳನ್ನು ಬಳಸಬೇಕು ಯಾವ ಹಂತದಿಂದ ಯಾವ ಕಡೆಯಿಂದ ಹೋಗಿ ಪಳಗಿಸುವ, ತರಬೇತಿಗಳು ನೀಡಬೇಕು ಎಂದು ಕುಟುಂಬದಲ್ಲಿ ಸಾಮಾನ್ಯ ರಕ್ತಗತವಾಗಿರುತ್ತದೆ. ಇದು ಹೊಟ್ಟೆಪಾಡಿನ ಸಾಹಸಗಳಾದರೆ, ತಾವು ವಾಸಿಸುವ ಬಿಡಾರಗಳಿಗೆ ಬೀದಿ ಕಾಮಣ್ಣರ ಕಾಟಗಳಿಂದ, ಕಳ್ಳರಿಂದ ಇತ್ಯಾದಿ ತೊಂದರೆಗಳನ್ನು ಎದುರಿಸಲು ಕುಟುಂಬ ರಕ್ಷಣೆಯ ಸಾಹಸಗಳು ಮಾಡಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ಕುಟುಂಬವು ಸಾಹಸಗಳನ್ನು ಯಾವುದೆ ಮೋಜಿಗೆ ಕಲಿತು ಕೊಳ್ಳದೆಯೆ, ತಮ್ಮ ಆತ್ಮರಕ್ಷಣೆಗಾಗಿ ಮೈಗೂಡಿಸಿ ಕೊಂಡಿದ್ದಾರೆ.

೨೯. ಕೌಟುಂಬಿಕ ಜಂಜಾಟದಲ್ಲಿ ಶೂನ್ಯಗೊಂಡ ಸ್ವಚ್ಛತೆ

ಕುಟುಂಬದ ಸದಸ್ಯರಿಗೆ ಅನ್ನ ನೀರು ಉಡುಪು ದೊರಕಿಸುವುದು ಒಂದು ಸಾಹಸವಾಗಿದೆ. ಅಲೆಮಾರಿಗಳು ನೊಂದು-ಬೆಂದು ಊರೂರು ಅಲೆದು ದಿನಪೂರ್ತಿ ಅದರಲ್ಲಿಯೆ ಕಾಲಕಳೆಯುವುದರಿಂದ ಸ್ವಚ್ಛತೆಯ ವಿಷಯವೆ ಇವರ ಬಳಿ ಬಾರದು.

ಒಂದೆಡೆ ನೆಲೆ ನಿಂತವರಿಗೆ ಮೂಲಭೂತ ಸೌಲಭ್ಯಗಳೂ ದೊರೆಯುತ್ತವೆ. ನಗರಿಕರಣದ ಪ್ರಭಾವದಲ್ಲಿ ಸ್ವಚ್ಛತಾ ಮನೋಭಾವ ಮೂಡಬಹುದು. ಆದರೆ ಅಲೆಮಾರಿಗಳು ಊರೂರು ತಿರುಗಾಟದಿಂದ ಮೂಲಭೂತ ಸೌಲಭ್ಯಗಳಾದ ನೀರು, ಆಹಾರ, ಶುಭ್ರವಾದ ಬಟ್ಟೆ ಇಲ್ಲದಿರುವುದರಿಂದ ಸ್ವಚ್ಛತೆ ಎಲ್ಲಿಂದ ಬರಬೇಕು. ಯಾರದೊ ಮನೆಯ ಅನ್ನ, ಯಾರದೊ ಮನೆಯ ಬಟ್ಟೆಗಳು ಎಲ್ಲಿಯೊ ವಾಸ ಎಂಬಂತೆ ಊರಿಂದ ಊರಿಗೆ ಸಂಚಾರಿಯಾಗಿ ನೆಲೆನಿಲ್ಲದ ಇವರಿಗೆ ಸ್ವಚ್ಛತೆ ಎಂಬ ಮಾತು ದೂರವಾಗಿದೆ. ಕೆಲವೊಂದು ಊರುಗಳಲ್ಲಿ ದಲಿತರಿಗೆ ಕ್ಷೌರಮಾಡಲು ಹಿಂಜರಿಯುವುದರಿಂದ ಅಲೆಮಾರಿಗಳಿಗೆ

ಯಾರುತಾನೆ ಕ್ಷೌರಮಾಡಬೇಕು. ಬಟ್ಟೆ ಸೆಳೆಯಬೇಕು. ಒಂದು ವೇಳೆ ಬಟ್ಟೆಗಳನ್ನು ಸೆಳೆದರು ಇವರ ಬಳಿ ಹೆಚ್ಚು ಬಟ್ಟೆಯಿದ್ದರೆ ತಾನೆ, ಸೆಳೆಯಲು ಕೊಡುವುದು, ಕೊಟ್ಟರೆ ಅದಕ್ಕೆ ಪ್ರತಿಯಾಗಿ ಕೊಡಲು ಹಣವಾದರೂ ಎಲ್ಲಿಂದ ಬರುತ್ತದೆ. ಇವರೆ ಸ್ವತಃ ಮಾಡಿಕೊಳ್ಳಬೇಕಾದರೆ ಸಾಬೂನು, ಎಣ್ಣೆ, ಸೂಕ್ತಸ್ಥಳ, ಸಂದರ್ಭ ಎಲ್ಲಿಂದ ಬರಬೇಕು. ಆದ್ದಿರಿಂದ ಕೊಳಕಲ್ಲಿ ಹುಟ್ಟಿ ಕೊಳಕಲ್ಲಿ ರೋಗಗಳನ್ನು ಅಂಟಿಸಿಕೊಂಡು, ಕೊಳಕಲ್ಲಿ ಸಾವನ್ನಪ್ಪುವರು.

೩೦. ಅವಿಭಾಜ್ಯ ಅಂಗವಾದ ಧೂಮಪಾನ ಮತ್ತು ಮಧ್ಯಪಾನ

ಧೂಮಪಾನ ಮತ್ತು ಮಧ್ಯಪಾನಗಳು ಕೆಲವರು ಮೋಜಿಗಾಗಿ, ಮತ್ತೊಬ್ಬರು ಮಾನಸಿಕ ತೊಳಲಾಟ ಗಳನ್ನು ಮರೆಸುವ ಸಾಧನವಾಗಿದೆ. ಅಲೆಮಾರಿಗಳು ತಮ್ಮ ಕುಟುಂಬದಲ್ಲಿನ ಮನಸ್ತಾಪಗಳು ನೋವುಗಳು ಮರೆಯಲು ಅಥವಾ ದಿನ ಪೂರ್ತಿ ಅಲೆದು ಸುಸ್ತಾಗಿರುವ ಧಣಿವನ್ನು ತಣಿಸಿಕೊಳ್ಳಲು ಮಧ್ಯಪಾನ ಸೇವಿಸುವುದುಂಟು. ಜೊತೆಯಲ್ಲಿ ಕುಟುಂಬದ ಕಲಹಗಳಿಂದ ಮನಸ್ಸು ದುಃಖವಾದಗ ಕುಡಿದು ಮನಸ್ಸಿನ ಭಾರವೆಲ್ಲ ಇಳಿಸಲು ಇಲ್ಲವೆ ಮನಸ್ಸು ನೆಮ್ಮದಿ ತರಬಲ್ಲದೆಂದು. ಕಾರಣಕ್ಕಾಗಿ ಅಭ್ಯಾಸ ಮಾಡಿ ಕೊಂಡಿದ್ದಾರೆ. ಅಲೆಮಾರಿಗಳಲ್ಲಿ ಕುಡಿತ ಮತ್ತು ಬೀಡಿಸೇದುವುದು ಅವಿಭಾಜ್ಯ ಅಂಗದಂತೆ ಬೆಳೆದು ಬಂದಿದೆ. ಕುಡಿಯಲು ಹಲವಾರು ಕಾರಣಗಳು ಇವೆ. ಸರಿಯಾದ ಶಿಕ್ಷಣ ಸಿಗದಿರುವುದು, ಸಾಲಗಳ ಹೊರೆ, ಸಂಬಂಧಗಳು ಮುದುಡಿ ಕೊಂಡಿರುವುದು, ಸರಿಯಾದ ಮಾರ್ಗದರ್ಶನ ಇಲ್ಲದಿರುವುದು, ಹಬ್ಬ-ಹರಿದಿನಗಳು, ನೆಂಟರಿಗಾಗಿ, ವ್ಯಾಜಗಳ ತೀರ್ಮಾನಗಳು ಹೀಗೆ ಅನೇಕ ಕಷ್ಟ-ಸುಖಗಳಲ್ಲಿ ಕುಡಿತ ತಮ್ಮ ಜೊತೆಯಲ್ಲಿ ಬೆಳೆಸಿಕೊಂಡು ಬಂದವರಾಗಿದ್ದಾರೆ. ಎಷ್ಟೊ ಸಂಬಂಧಗಳು ಕುಡಿಸಲಿಲ್ಲ ತಿನ್ನಿಸಲಿಲ್ಲವೆಂಬ ಕಾರಣದಲ್ಲಿ ಮುರಿದುಕೊಂಡಿವೆ. ಅಲೆಮಾರಿಗಳಲ್ಲಿ ಸ್ತ್ರೀಯರು ತಂಬಾಕು, ನಷ್ಯೆ, ಕಡ್ಡಿಪುಡಿ ಸೇವನೆಗಳು ಕಾಣಬರುತ್ತವೆ. ಪುರುಷರು ಬೀಡಿ, ಸಿಗರೇಟ, ತಂಬಾಕು, ಗಾಂಜ, ಹೊಗೆಸೊಪ್ಪು, ಸರಾಯಿ, ಬ್ರಾಂದಿ, ವಿಸ್ಕಿ, ಹೆಂಡ, ಕಳ್ಳಭಟ್ಟಿಯಿಂದ ತಯಾರಿಸಿದ ಸರಾಯಿ ಮುಂತಾದ ಅಮಲು ನೀಡುವ ಪೇಯಗಳನ್ನು ಸೇವಿಸುತ್ತಾರೆ.

೩೧. ಸಂಪ್ರಾದಾಯಿಕ ಮನೋಭಾವ

ಅಲೆಮಾರಿಗಳು ಶತಶತಮಾನಗಳಿಂದಲೂ ಭಿಕ್ಷೆಬೇಡಿಕೊಂಡು ಬಂದಿದ್ದಾರೆ. "ಶಿವನಿಂದ ಸೃಷ್ಟಿಸಿದ ನಾವುಗಳು ಭಿಕ್ಷೆ ಬೇಡಿಕೊಂಡು ಬಾಳಿರೆಂದು ಶಿವನು ಆರ್ಶಿವಾದಿಸಿದ್ದಾನೆ. ಲೋಕಕಲ್ಯಾಣಕ್ಕಾಗಿ ಶಿವನನ್ನು ಪ್ರಾರ್ಥಿಸುತ್ತೇವೆ"[21] ಎನ್ನುತ್ತಾರೆ. ಅಲೆಮಾರಿಗಳ ಸ್ತ್ರೀಯರು ಅನ್ನವನ್ನು ಭಿಕ್ಷೆಯಿಂದ ತರುತ್ತಾರೆ. ಜೊತೆಯಲ್ಲಿ ಮಕ್ಕಳು ದಿನ ಪೂರ್ತಿ ಭಿಕ್ಷೆಬೇಡಿಕೊಂಡು ಸಂಪಾದಿಸುತ್ತಾರೆ. ಭಿಕ್ಷೆ ಬೇಡುವುದನ್ನು ಲಿಖಿತ ಅನುಮತಿಯೊಂದಿಗೆ ಊರಿನ ಪ್ರಮುಖ ಮುಖಂಡರಿಂದ ಹಾಗೂ ಮಹಾರಾಜರಿಂದ ಪಡೆದು ಕೊಂಡಿದ್ದೇವೆಂದು ಸಂತೋಷದಿಂದ, ಹೆಮ್ಮೆಯಿಂದ ಹೇಳುತ್ತಾರೆ. ತಾಳಿಗರಿ ಮತ್ತು ತಾಮ್ರದ ತಗಡಿನ ಮೇಲೆ ಅನುಮತಿಯನ್ನು ಕಾಣಬಹುದು. ದೇವರ ಬಗ್ಗೆ ಗುಣಗಾನ ಮಾಡಿ ಜಯವಾಗಲಿ ಎಂದು ಹಾರೈಸುವ ಒಂದು ಸಮುದಾಯವಾದರೆ ಸಿಂಧೋಳ್ಳರು ಕೈಯಲ್ಲಿ ರಕ್ತಸುರಿಸಿ, ಚಾಟಿಯಿಂದ ಮೈ

ಧಣಿಸಿಕೊಂಡು ಭಿಕ್ಷೆ ಬೇಡುವ ಧಾರ್ಮಿಕ ಸಮುದಾಯವಾಗಿದೆ. ಹಾವು ಹಿಡಿದುಕೊಂಡು ಆಟವನ್ನು ಆಡಿಸಿ, ಬೇಡುವ ಹಾವಾಡಿಗರು. ಮಂಗನನ್ನು ಹಾಗೂ ಸ್ತ್ರೀಯರನ್ನು ಬಳಸಿಕೊಂಡು ಮೋಹಕ ನೃತ್ಯ ಸಾಹಸದಿಂದ ಅಭಿನಯಿಸುವ ಡೊಂಬರು, ಮನೆ ಮುಂದೆ ಭಿಕ್ಷೆನೀಡುವವರೆಗೂ ಹೋಗದೆ ಭಿಕ್ಷೆಬೇಡುವ ಮೊಂಡರು, ವಿವಿಧ ರೀತಿಯ ಮೋಡಿ ಆಟಗಳನ್ನು ಪ್ರದರ್ಶಿಸಿ, ಬೇಡುವ ಮೋಡಿಕಾರರು, ದೊಡ್ಡಾಟ ಸಣ್ಣಾಟ ಹಾಸ್ಯ ಮನರಂಜನೆ ನೀಡುವ ಹಗಲುವೇಷದವರು ಹೀಗೆ ಅವರ ಸಮುದಾಯದ ವೃತ್ತಿಯನ್ನು ಕಲೆಯನ್ನಾಗಿ ಪ್ರದರ್ಶಿಸಿ ಭಿಕ್ಷೆ ಬೇಡುತ್ತಾರೆ. ಹೀಗೆ ಭಿಕ್ಷೆ ಬೇಡುವುದು ಕೀಳಲ್ಲವಂತೆ ಅದು ನಮ್ಮ ಕಾಯಕವೆಂದು ಹೇಳಿಕೊಳ್ಳುತ್ತಾರೆ. ಕುಟುಂಬದ ಕುಲಕಸುಬು ಇದನ್ನು ಯಾವುದೆ ಕಾರಣಕ್ಕೂ ನಿಲ್ಲಿಸ ಲಾಗದು ಎನ್ನುತ್ತಾರೆ.

೩.೨. ಸೀಮಿತ ಗಾತ್ರ

ಕುಟುಂಬದ ಸದಸ್ಯರಿಂದ ಕೂಡಿದ ತಮ್ಮದೆ ಸೀಮಿತ ಗಾತ್ರದೊಂದಿಗೆ ರಚನೆಯಾಗಿರುತ್ತದೆ. ಸೀಮಿತ ಗಾತ್ರವೆಂದರೆ ಒಂದು ಕುಟುಂಬದಲ್ಲಿ ಮೂರು ಮಕ್ಕಳು ಜೊತೆಯಲ್ಲಿ ತಂದೆತಾಯಿ ಮಾತ್ರ ಇರಬೇಕಾಗಿದೆ. ಹೆಚ್ಚಾದರೆ ಏಕೆ? ಎಂದು ಪ್ರಶ್ನಿಸುವುದು ತಪ್ಪಾಗುತ್ತದೆ. ದಿನಕಳೆದಂತೆ ಸದಸ್ಯರು ಹೆಚ್ಚಾಗಬಹುದು. ಹೆಚ್ಚಾದ ಸದಸ್ಯರು ಕಾಲ ಉರುಳಿದಂತೆ, ವಯೋಮಾನದಲ್ಲಿ ವಿವಾಹವಾಗಿ ಬೇರೆಯಾಗ ಬಹುದು. ಸಾಮಾನ್ಯವಾಗಿ ತಂದೆ-ತಾಯಿ ಜೊತೆಯಲ್ಲಿ ಗಂಡ-ಹೆಂಡತಿ ಇರುವುದುಂಟು. ಹೆಣ್ಣು ಮಕ್ಕಳು ವಯೋಮಾನದಲ್ಲಿ ಬಂದಿದ್ದರೆ. ವಿವಾಹ ಅಪೇಕ್ಷಿತ ಅಳಿಯನನ್ನು ಕುಟುಂಬದ ಸದಸ್ಯರಾಗಿ ನೋಡಬಹು ದಾಗಿದೆ. ಒಂದು ಕುಟುಂಬದಲ್ಲಿ ಹಿರಿಯನಿಗೆ ಇಬ್ಬರ ಹೆಂಡತಿಯರು ಇರಬಹುದು. ಇಬ್ಬರು ಹೆಂಡತಿ ಯರಿಗೆ ಜಗಳವಾಗಬಹುದೆಂದು ಇಬ್ಬರಿಗೂ ಬೇರೆ ಬೇರೆ ಬಿಡಾರಗಳನ್ನು ಹಾಕಲಾಗುವುದು. ಸಂಪಾದನೆ ಯಲ್ಲಿ ಇಬ್ಬರಿಗೂ ಸಮಪ್ರಮಾಣದಲ್ಲಿ ಹಂಚಲಾಗುವುದು.

೩.೩. ಹೊಣೆಗಾರಿಕೆ

ಹೊಣೆಗಾರಿಕೆ ಎಂದರೆ ಜವಬ್ದಾರಿ. ಕುಟುಂಬದ ಪ್ರತಿಸದಸ್ಯನಿಗೂ ಶ್ರಮವಿಭಜನೆಯ ಆಧಾರದ ಮೇಲೆ ವಿವಿಧ ರೀತಿಯ ಹೊಣೆಗಾರಿಕೆಯಿರುತ್ತದೆ. ಆ ಹೊಣೆಗಾರಿಕೆಯನ್ನು ತಪ್ಪದೆ ಕುಟುಂಬದ ಪ್ರತಿ ಸದಸ್ಯರು ಪೂರೈಸುವರು. ಕುಟುಂಬದ ಹಿರಿಯನ ಹೊಣೆಗಾರಿಕೆ ಒಂದು ರೀತಿಯಾದರೆ, ಸದಸ್ಯರ ಹೊಣೆಗಾರಿಕೆ ಬೇರೆಯಾಗಿರುತ್ತದೆ. ಸ್ತ್ರೀ-ಪುರುಷ ಮತ್ತು ಮಕ್ಕಳಿಗೆ ಹೊಣೆಗಾರಿಕೆ ಇರುತ್ತದೆ. ಕುಟುಂಬದ ಹಿರಿಯನು ಯಾವ ಸಂದರ್ಭದಲ್ಲಿ ಎಂತಹ ಸಮಯದಲ್ಲಿ ಹೇಗೆ? ಯಾವ? ಹೊಣೆಗಾರಿಕೆಯನ್ನು ನಿಭಾಯಿಸಬೇಕೆಂದು ಮಾರ್ಗದರ್ಶನ ಮಾಡುತ್ತಿರುತ್ತಾನೆ. ಆ ಮಾರ್ಗದರ್ಶನದಂತೆ ಕುಟುಂಬದ ಸದಸ್ಯರು ಪೂರೈಸಬೇಕಾಗಿದೆ ಹಾಗೂ ಪೂರೈಸುತ್ತಾರೆ.

೩.೪. ವಿನೋದ ಸಂಬಂಧಗಳು

ಅಲೆಮಾರಿಗಳ ಕುಟುಂಬ ವ್ಯವಸ್ಥೆಯಲ್ಲಿ ವಿನೋದ ಸಂಬಂಧಗಳು ವಿಶೇಷವಾಗಿ ಕಂಡುಬರುತ್ತವೆ. ದಿನಪೂರ್ತಿ ಅಲೆದು ದಣಿದುಬಂದ ಗಂಡ-ಹೆಂಡತಿಯರು ಮಕ್ಕಳೊಂದಿಗೆ ಅಳಿಯ, ಸೊಸೆ ತಮಾಷೆ

ಮಾಡುವುದರೊಂದಿಗೆ ಧಣಿದ ಮನಸ್ಸಿಗೆ ವಿನೋದವನ್ನು ಪಡೆಯುವರು. ಹಬ್ಬಹರಿದಿನಗಳಲ್ಲಿ ಮದುವೆ, ಋತುಮತಿ ಕಾರ್ಯಕ್ರಮಗಳಲ್ಲಿ ಎಲ್ಲಾ ಕುಟುಂಬಗಳು ಸೇರುವುದರೊಂದಿಗೆ ತಂದೆಯ ಸಹೋದರಿಯರ ಜೊತೆ, ತಾಯಿಯ ಅಣ್ಣನ ಜೊತೆ ಸಲುಗೆಯಿಂದ ವರ್ತಿಸುವುದುಂಟು. ಅಲ್ಲಿ ಹಾಸ್ಯಚಟಾಕೆ ಹಾರಿಸುತ್ತಾರೆ. ಊಟಮಾಡಿದ ನಂತರ ಕಥೆಗಳು, ಹಾಸ್ಯ ಪ್ರಸಂಗಗಳು ವೃತ್ತಿಯಲ್ಲಾದ ಅನುಭವಗಳು, ಅಶ್ಲೀಲ ಗಾದೆ ಗಳಿಂದ ಮನೋರಂಜನೆ ಪಡೆದುಕೊಳ್ಳುವರು.

೩.೫. ಶ್ರಮವಿಭಜನೆ

ಕುಟುಂಬದ ಪಾತ್ರಗಳಿಗೆ ತಕ್ಕಂತೆ ನಡೆದುಕೊಳ್ಳುವರು. ಮಹಿಳೆಯರಲ್ಲಿ ತಾಯಿ, ಅತ್ತೆ, ಸೊಸೆ, ನಾದಿನಿ, ಮಗಳು ಇತ್ಯಾದಿ ಸಂಬಂಧಗಳಲ್ಲಿ ಅವರವರ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರಮ ವಿಭಜನೆಯ ಜೊತೆಯಲ್ಲಿ ಕೆಲವೊಂದು ಜವಬ್ದಾರಿಗಳನ್ನು ಅಳವಡಿಸಿಕೊಂಡು, ಕುಟುಂಬಗಳು ಏರುಪೇರಾಗ ದಂತೆ ನೋಡಿಕೊಳ್ಳುತ್ತಾರೆ. ಇದರಂತೆ ಪುರುಷರು ಕೂಡ ತಂದೆ, ತಮ್ಮ, ಮಕ್ಕಳು, ಮೊಮ್ಮಕ್ಕಳು, ಅಳಿಯ ಇತ್ಯಾದಿ ಸಂಬಂಧಗಳಲ್ಲಿ ತಮಗೆ ನಿಯೋಜಿತವಾದ ಜವಬ್ದಾರಿಗಳನ್ನು ನಿರ್ವಹಿಸುತ್ತಾರೆ. ಇವರು ತಮ್ಮ ಕುಟುಂಬದ ಒಳಿತಿಗಾಗಿ ಶ್ರಮವಿಭಜನೆಯ ಮೂಲಕ ಶ್ರಮಿಸುತ್ತಾರೆ.

೩.೨.೨. ಅಲೆಮಾರಿಗಳ ಕುಟುಂಬದ ವೈಶಿಷ್ಟ್ಯ

ವಿವಿಧ ಹಂತಗಳ ಮೂಲಕ ವಿಕಾಸಗೊಂಡ, ಕುಟುಂಬ ಪದ್ಧತಿಯು ಕೊನೆಗೂ ಏಕ ಸಂಗಾತಿ ಕುಟುಂಬ ವ್ಯವಸ್ಥೆಯಾಗಿ ರೂಪಗೊಂಡಿತು. ಹೀಗೆ ರೂಪಗೊಂಡ ಏಕಸಂಗಾತಿ ಕುಟುಂಬವು ಸ್ತ್ರೀ-ಪುರುಷರಿಗೆ ಭಿನ್ನವಾದ ಸ್ಥಾನಮಾನಗಳನ್ನು ಕೊಡಮಾಡಿದೆ. ಏಕಪತ್ನಿತ್ವ ಮತ್ತು ಏಕಸಂಗಾತಿ ಕುಟುಂಬದ ಉದ್ದೇಶವೆಂದರೆ ಸಂಪತ್ತು ಸ್ತ್ರೀಯಿಂದ ಪುರುಷನ ಕೈಗೆ ಕೇಂದ್ರಿಕೃತವಾಯಿತು. ಇದರಿಂದ ಸ್ತ್ರೀಯು ಪುರುಷನ ಅಧೀನದಲ್ಲಿ ಬಂಧಿತಳಾದಳು. ತಂದೆಯ ತರುವಾಯ ಆತನ ಸಮಸ್ತ ಸಂಪತ್ತಿಗೂ ಗಂಡು ಮಕ್ಕಳು ವಾರಸುದಾರರು. ಸ್ತ್ರೀಯರಿಗೆ ಕೇವಲ ವಿವಾಹ ಸಂದರ್ಭದಲ್ಲಿ ಮಾತ್ರ ಖರ್ಚು ಮಾಡಲಾಗುತ್ತದೆ.

ಪ್ರಮುಖ ಅಂಶವೆಂದರೆ ಪುರುಷರಿಗೆ ಒಬ್ಬ ವ್ಯಕ್ತಿ ಒಬ್ಬ ಸ್ತ್ರೀ ಮೀಸಲಾದಳು. ಆ ಮೂಲಕ ಹಲವಾರು ನಿಯಮಗಳನ್ನು ತಂದು, ಗೃಹಬಂಧನದಲ್ಲಿ ಬಂಧಿಸಲಾಯಿತು ಹಾಗೂ ಆಕೆಯ ಅನೇಕ ಸುಪ್ತ ವಿಚಾರಗಳಿಗೆ ಅಡ್ಡಗೋಡೆಯನ್ನು ಕಟ್ಟಲಾಯಿತು. ಕೇವಲ ಮೇಲ್ನೋಟದಲ್ಲಿ ಸ್ತ್ರೀಯನ್ನು ದೇವತೆಯಂತೆ ಪೂಜಿಸಲಾಯಿತು. ಗಂಡಸರಿಗೆ ಎಲ್ಲಾ ರೀತಿಯ ಅಧಿಕಾರಗಳನ್ನು ನೀಡಲಾಯಿತು. ಹೊರಗಡೆ ಬಹಿರಂಗವಾಗಿ ಒಬ್ಬ ಗಂಡಸು ಎಷ್ಟು ಬೇಕಾದರಷ್ಟು ಸ್ತ್ರೀಯನ್ನು ವರಿಸುವ ಅಧಿಕಾರವನ್ನು ಪಡೆದುಕೊಂಡನು. ಯಾರ ಭಯ ಅಂಜಿಕೆ ಇಲ್ಲದೆ ಜೀವಿಸಿದನು. ಸ್ತ್ರೀಯು ಭಯ, ನಾಚಿಕೆ, ಹೆದರಿಕೆ ಯಿಂದ ಮನದಲ್ಲಿ ನೋವನ್ನುಂಡು ಜೀವಿಸಬೇಕಾಯಿತು. ಇದನ್ನು ನೆಲೆನಿಂತ ಕುಟುಂಬಗಳಲ್ಲಿ ಕಡ್ಡಾಯವಾಗಿ ಪಾಲಿಸುತ್ತಾರೆ.

ಅಲೆಮಾರಿ ಸಮುದಾಯಗಳಲ್ಲಿ ಮಹಿಳೆಯರಿಗೆ ಸ್ವತಂತ್ರ, ಸಮಾನತೆ, ಹೊಸಬಾಳು ಕೊಡುವುದರ ಮೂಲಕ ಅಪಾರವಾದ ಗೌರವನ್ನು ನೀಡಿರುವುದುಂಟು. ಸಂಪತ್ತಿನಲ್ಲಿ ಆಕೆಯದು ಸಮಾನ ಪ್ರಮಾಣ

ಅಧಿಕಾರವಿರುತ್ತದೆ. ಹಿಂದೆ ಯಾವತರಹ ಸ್ವತಂತ್ರವಾಗಿ ಅಲೆಯುತ್ತಿದ್ದರೊ ಈಗಲೂ ಸ್ವತಂತ್ರವಾಗಿಯೆ ಅಲೆಯುತಿದ್ದಾರೆ. ನೆಲೆನಿಂತ ಮತ್ತು ಅಲೆಮಾರಿ ಕುಟುಂಬಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಕಂಡುಬರುವುದನ್ನು ಪ್ರಶ್ನಿಸಿದಾಗ ನೆಲೆನಿಂತ ಸಮುದಾಯವು ನೀಡುವ ಸಂಸ್ಕಾರಗಳು ಅಲೆಮಾರಿಗಳು ಕುಟುಂಬದಲ್ಲಿ ಕೊಡುವ ಸಂಸ್ಕಾರಗಳಲ್ಲಿ ವ್ಯತ್ಯಾಸವಿದೆ. ಸಾಮಾಜಿಕ ರಚನೆ, ಮೌಲ್ಯ, ವಿಧಿವಿಧಾನಗಳು, ಆರ್ಥಿಕ ರಚನೆ, ಲಿಂಗಸಂಬಂಧಗಳು, ಜಾತಿವ್ಯವಸ್ಥೆಗಳು ಇತರೆ ಎಲ್ಲಾ ವಿಷಯಗಳಲ್ಲೂ ನೆಲೆನಿಂತ ಸಮುದಾಯದ ವ್ಯವಸ್ಥೆಗಿಂತ ಭಿನ್ನವಾದ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂದಿದ್ದಾರೆ. ಕೇವಲ ಪಾಲಿಸುವುದಷ್ಟೆ ಅಲ್ಲದೆ, ಅಂತಹ ವ್ಯವಸ್ಥೆಯನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸುತ್ತಾ ಇದೆ. ಇದನ್ನು ತಪ್ಪಿದಲ್ಲಿ ಜಾತಿಪಂಚಾಯಿತಿಯು ನಿಯಂತ್ರಿಸುತ್ತದೆ.

ಪ್ರತಿ ಕುಟುಂಬ ಸ್ವತಂತ್ರವಾಗಿದ್ದರು, ಜಾತಿ ಪಂಚಾಯಿತಿಯ ನಿಯಮಗಳಲ್ಲಿ ಬದ್ಧರಾಗಿರುತ್ತಾರೆ. ಹಾಗೂ ಕುಟುಂಬದ ನಿಯಮದಲ್ಲಿ ಬದ್ಧರಾಗಿರುತ್ತಾರೆ. ನೆಲೆನಿಂತವರು ಕುಟುಂಬದ ಹಿರಿಯರನ್ನು ಕಡೆಗಾಣಿಸುತ್ತಾರೆ. ಜಾತಿ ಪಂಚಾಯಿತಿಗೆ ಹೋಗದೆ ಕೋರ್ಟು ಕಛೇರಿಗಳಿಗೆ ಹೋಗುವುದರಿಂದ ಸಂಬಂಧಗಳೂ ಕೂಡಿಕೊಳ್ಳುವ ಬದಲು ವಿರೋಧಾತ್ಮಕ ಸಂಬಂಧವಾಗಿ ರೂಪಗೊಳ್ಳುತ್ತವೆ. ಒಟ್ಟಾರೆ ಅಲೆಮಾರಿಗಳ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ವತಂತ್ರ ಸಮಾನತೆ, ಸಹಬಾಳ್ವೆ ಮುಕ್ತತೆಯಿದೆ.

೩.೩. ಅಲೆಮಾರಿಗಳ ಜಾತಿ-ಉಪಜಾತಿಗಳ ರಚನೆ

ಭಾರತಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಪದ್ಧತಿಯು ತನ್ನದೆ ಪ್ರಭಾವದಿಂದ ಕೂಡಿದೆ. ಸಮಾಜದಲ್ಲಿ ಜಾತಿ ಸುಸಂಘಟಿತವಾದ ಮತ್ತು ಶಕ್ತಿಯುತವಾದ ವ್ಯವಸ್ಥೆಯನ್ನು ಹೊಂದಿದೆ. ಸಮಾನತೆಯಿಂದ ಕೂಡಿದ ಯಾವುದೆ ಸಮಾಜವಿಲ್ಲ. ಎಲ್ಲಾ ಸಂಘಟಿತ ಸಮಾಜಗಳು ಸ್ತರವಿನ್ಯಾಸ ವ್ಯವಸ್ಥೆಗೆ ಒಳಪಟ್ಟಿದೆ ಎಂಬುದನ್ನು ಬಹುಹಿಂದೆ ಪಿ.ಎ. ಸಾರೋಕಿನ್ ಎಂಬ ಸಮಾಜಶಾಸ್ತ್ರಜ್ಞರು ತಿಳಿಸಿದ್ದಾರೆ.

ಸಾಮಾಜಿಕ ಸ್ತರವಿನ್ಯಾಸ ಜಾತಿ ವ್ಯವಸ್ಥೆಯ ಒಂದು ರೂಪಕವಾಗಿದೆ. ಜಾತಿಯು ಅವಿಭಕ್ತ ಕುಟುಂಬ ಮತ್ತು ಗ್ರಾಮೀಣ ಸಮುದಾಯದ ಬದುಕನ್ನು ನಿರ್ಧರಿಸುವಂತ ಆಧಾರಸ್ತಂಭಗಳಾಗಿದ್ದವು. ಅಷ್ಟೆ ಅಲ್ಲದೆ, ಪ್ರತಿ ಸಮುದಾಯಗಳ ಬದುಕನ್ನು ಕಟ್ಟಿ ಕಾರ್ಯನಿರ್ವಹಿಸುತ್ತಿದ್ದವು. ಅಲೆಮಾರಿ ಸಮುದಾಯಗಳ ಬದುಕಿನಲ್ಲಿ ನಿರ್ಣಾಯಕವಾದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಅಂದಿನ ಸಂದರ್ಭ ಮತ್ತು ವ್ಯವಸ್ಥೆಯಿಂದ ರೂಪಗೊಂಡ ಅಲೆಮಾರಿಗಳ ಬದುಕು ಇಂದಿನವರೆಗೂ ಜಾತಿ ವ್ಯವಸ್ಥೆಯ ಚೌಕಟ್ಟಿನಲ್ಲಿಯೆ ಮುಂದುವರಿದುಕೊಂಡು ಬಂದಿರುವುದು. ಈ ದೇಶದ ದುರಂತವೊ ಅಥವಾ ಅಲೆಮಾರಿ ಸಮುದಾಯಗಳ ದುರಂತವೊ ಎಂಬುದನ್ನು ನಿರ್ಧರಿಸುವುದು ಕಷ್ಟಕರ. ಜಾತಿಯು ಪ್ರತ್ಯೇಕವಾದ ಸೃಜನಾ ಆವರಣವನ್ನು ಕಲ್ಪಿಸಲು ಸಾಧ್ಯವಿರುವಂತೆಯೆ ಅಖಂಡತ್ವವನ್ನು ನೀಡಬಲ್ಲದು. ಒಂದು ಸಮುದಾಯದಲ್ಲಿ ಕಹಿಯಾದರೆ ಮತ್ತೊಂದು ಸಮುದಾಯದಲ್ಲಿ ಅಮೃತವಾಗಿರುವುದನ್ನು ಹಿಂದಿನಿಂದಲೂ ನೋಡಿದ್ದಾಗಿದೆ. ಜಾತಿಯ ಪ್ರಭಾವದಿಂದ ಕೆಲವು ಸಮುದಾಯಗಳು ಲಾಭವನ್ನು ಗಿಟ್ಟಿಸಿಕೊಂಡಿವೆ. ಕೆಲವು ಸಮುದಾಯಗಳು ಉಸಿರು ಕಟ್ಟಿದ ವಾತವರಣದಲ್ಲಿ ಬದುಕನ್ನೆ ಕಳೆದುಕೊಂಡಿವೆ.

ಪ್ರತಿಯೊಂದು ಸಮುದಾಯದಲ್ಲಿಯೂ ಜಾತಿಪದ್ಧತಿ ಹಾಸುಹೊಕ್ಕಾಗಿದೆ. ಪರಿಣಾಮ ವಿವಾಹ, ಕುಟುಂಬ, ನೈತಿಕತೆ, ಆಚಾರ-ವಿಚಾರ, ಉಡುಗೆ-ತೊಡುಗೆ, ಉಟೋಪಚಾರ, ಸಾವು-ನೋವು ಇತ್ಯಾದಿಗಳೆಲ್ಲವೂ ಜಾತಿ ವ್ಯವಸ್ಥೆಯಲ್ಲಿರುವ ನಿಯಮಗಳಿಗನುಗುಣವಾಗಿ ನಿರ್ಧರಿಸಲ್ಪಡುತ್ತವೆ. ಆದ್ದರಿಂದ ಪ್ರತಿ ಅಲೆಮಾರಿ ಸಮುದಾಯದಲ್ಲಿ ಜಾತಿ-ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಅಂದರೆ ವ್ಯಕ್ತಿಯು ಅನುಸರಿಸಬೇಕಾದ ವೃತ್ತಿ ವ್ಯವಸ್ಥೆಯಿಂದ ಹಿಡಿದು ಸಂಗಾತಿ ಆಯ್ಕೆಯವರೆಗೆ ಇತರ ಎಲ್ಲಾ ತರಹದ ಕೆಲಸ ಕಾರ್ಯಗಳು ಜಾತಿ ವ್ಯವಸ್ಥೆಯ ಪರಧಿಯೊಳಗೆ ಬರುತ್ತವೆ.

೩.೩.೧. ಜಾತಿವ್ಯವಸ್ಥೆಯ ಸ್ವರೂಪ

ಶ್ರಮವಿಭಜನೆಯ ಆಧಾರದಲ್ಲಿ ರೂಪಗೊಂಡ ಒಂದು ಉತ್ಪಾದನಾ ಘಟಕವಾಗಿದೆ. ಪ್ರತಿಯೊಂದು ಜಾತಿ ಒಂದು ಸ್ವಯಂ ಪರಿಪೂರ್ಣ ಉತ್ಪಾದನಾ ಘಟಕವಾಗಿ ತನ್ನ ಅಸ್ಥಿತವನ್ನು ಸದಾ ಕಾಯ್ದುಕೊಳ್ಳುತ್ತಾ, ಬಂದಿದೆ. ತಾನು ಅನುಸರಿಸಿದ ವೃತ್ತಿಯಿಂದಾಗಿ ಒಂದು ಸಮಾಜದ ಗುಂಪು ಸ್ವಯಂ ಪೂರ್ಣವಾಗಿ ಇನ್ನೊಂದು ಜಾತಿ ಸಮುದಾಯದಿಂದ ಅನೇಕ ಬಗೆಗಳಲ್ಲಿ ಭಿನ್ನವಾಗಿ ನಿಲ್ಲಲು ಪ್ರಯತ್ನಿಸುತ್ತದೆ. ಹಾಗೂ ವ್ಯವಸ್ಥೆಯ ಅಡಿಯಲ್ಲಿರುವಂತೆ ನೋಡಿಕೊಳ್ಳಲು ಮತ್ತೊಂದು ವ್ಯವಸ್ಥೆಯಿರುತ್ತದೆ. ಪರಿಣಾಮ ಯಾರು, ಯಾವ ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಯಾರು ಯಾವುದನ್ನು ಮಾಡಬಾರದು ಎಂಬ ನಿಯಮಗಳು ಶ್ರೇಣೀಕರಣವನ್ನು ಜಾರಿಗೆ ತಂದವು. ಯಾವ ಗುಂಪಿನ ಜನ ಯಾವ ಬಗೆಯ ಉತ್ಪಾನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ನಿರ್ಧಾರವಾದದ್ದು. ಆಯಾ ಸಾಮಾಜಿಕ ಗುಂಪುಗಳೆ. ಅಂದಿನ ಚಾರಿತ್ರಿಕ ಘಟ್ಟದಲ್ಲಿ ಸ್ಥಾಪಿಸಿದ ನಿರ್ಣಾಯಕವಾದ ನಿಲುವು ಪಾಲಿಸಲಾಯ್ತು. ಕೆಲವು ಸಮುದಾಯಗಳು ಸೋಲುಗಳನ್ನು ಒಪ್ಪಬೇಕಾಯಿತು. ಸೋತ ಸಮುದಾಯಗಳು ತಮಗೆ ದೊರೆತ ಅಥವಾ ಹೇರಲ್ಪಟ್ಟ ಕಲಸಗಳನ್ನು ಅನಿವಾರ್ಯವಾಗಿ ನಿರ್ವಹಿಸ ಬೇಕಾಯಿತು.

ಇಂದಿಗೂ ಸಂಪ್ರದಾಯಿಕ ಉತ್ಪಾದನಾ ವಿಧಾನವನ್ನು ಸಮರ್ಥಿಸುತ್ತಾ ಸಾಧಿಸಿಕೊಂಡು ಬರಲಾಗಿದೆ. ಹೇಗೆ ಈ ಹಿಂದೆ ಸಮುದಾಯ ತನ್ನ ವೃತ್ತಿಯನ್ನು ಕೈಗೊಂಡಿತ್ತೊ ಅದೆ ವೃತ್ತಿಯನ್ನು ಕೈಗೊಳ್ಳುತ್ತವೆ. ಇದೆ. ಜಾಗತಿಕ ಉತ್ಪಾದನಾ ಮಟ್ಟದಲ್ಲಿ, ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಯಾದರೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಲೆಮಾರಿ ಸಮುದಾಯಗಳು ಪಾರಂಪಾರಿಕ ಉತ್ಪಾದನೆ ಮತ್ತು ಮಾರಾಟದಲ್ಲಿ ತೊಡಗಿಕೊಂಡಿಕಿರುವುದನ್ನು ಕಾಣಬಹುದಾಗಿದೆ. ಕೆಲವರು ಹೇಳುವುದೇನೆಂದರೆ ಇಂದು ವೃತ್ತಿಯಿಂದ ಜಾತಿ ಇಲ್ಲ. ಯಾವುದೆ ಜಾತಿಗೆ ಸೇರಿದವರು ತಮಗೆ ಇಷ್ಟವಾದ ಯಾವುದೆ ವೃತ್ತಿಯನ್ನು ಅವಲಂಬಿಸಿ ಜೀವನ ಮಾಡಬಹುದಾಗಿದೆ ಎನ್ನುತ್ತಾರೆ. ಈ ತೆರನಾದ ನಿಲುವುಗಳು ಹೇಳುವುದುಕ್ಕೆ, ಕೇಳುವುದಕ್ಕೆ ರಮ್ಯವಾಗಿದೆ. ಆದರೆ ವೈಜ್ಞಾನಿಕ, ಪ್ರಾಯೋಗಿಕವಾಗಿ ಸೂಕ್ಷ್ಮವಾಗಿ ಅಧ್ಯಯನಿಸಿದಾಗ ಮೇಲಿನವರ ಲೆಕ್ಕಚಾರವು ಬುಡಮೇಲಾಗುತ್ತದೆ. ಏಕೆಂದರೆ ಭಾರತವೆ ಅಂತದ್ದು, ಜಾತಿನಿಷ್ಠ ದೇಶ. ಪ್ರತಿ ಜಾತಿಯು ತಮಗೆ ನಿಯೋಜಿತವಾದ ಹಾಗೂ ಇಷ್ಟಪಟ್ಟ ಅಥವಾ ಹೇರಲ್ಪಟ್ಟ ಈಗಾಗಲೆ ಆ ಕಸಬುಗಳು ಚಾಲ್ತಿಯಲಿವೆ. ಇಂತಹ ಚಾಲ್ತಿ ಕಸುಬುಗಳನ್ನು ಸ್ವಲ್ಪ ಬದಲಾದ ಸಂದರ್ಭದಲ್ಲಿ

ಬಿಟ್ಟಿರಬಹುದು. ಆದರೆ ಸಂಪೂರ್ಣವಾಗಿ ಬಿಟ್ಟಿದ್ದಾರೆ ಎಂಬುದು ಸತ್ಯಕ್ಕೆ ಬಹುದೂರವಾದುದಾಗಿದೆ. ಕಸರತ್ತು ರೂಢಿಸಿಕೊಂಡು ಜನರೆದುರು ಪ್ರದರ್ಶಿಸಿ ಅದರಿಂದ ಬಂದ ಆದಾಯದಿಂದ ಬದುಕುವ ಡೊಂಬರಾಟ ಸಮುದಾಯದ ವೃತ್ತಿಗೆ ಅತ್ಯಾಧುನಿಕ ಮಾಧ್ಯಮ ಪೂರೈಸಲಾಗದೆ, ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ಬಿಟ್ಟರೆ ಬೇರೆ ಉದ್ಯೋಗ ಗೊತ್ತಿಲ್ಲ, ಗೊತ್ತಿದ್ದರು ಅದಕ್ಕೆ ಬೇಕಾದ ಅವಕಾಶಗಳಿಲ್ಲ, ಕೆಲವೊಬ್ಬರು ಅದು ತನಗೆ ಅನ್ನ ಕೊಡಲಾರದು ಎಂಬ ಕಾರಣದಿಂದ ತನ್ನ ಕೈಗಟುಕಬಹುದಾದ ಕೃಷಿಕೂಲಿ, ಕಟ್ಟಡ ಕೆಲಸ, ಗಣಿಗಾರಿಕೆಗಳಲ್ಲಿ, ಚಿಂದಿಹಾಯುವಲ್ಲಿ, ಪ್ಲಾಸ್ಟಿಕ್ ರಿಪೇರಿ, ಅಲಂಕಾರಿಕ ಸಾಮಾನುಗಳನ್ನು ಮಾರುವುದು. ಇಷ್ಟು ಬಿಟ್ಟರೆ ಆ ಸಮುದಾಯವು ವೃತ್ತಿಗಳು ಮಾಡುವುದು ಸಾಧ್ಯವಾಗಿಲ್ಲ.

ಬದಲಾದ ಸಂದರ್ಭದಲ್ಲಿ ಯಾವ ಜಾತಿಯ ಜನರು ಯಾವ ವೃತ್ತಿಯನ್ನಾದರೂ ಮಾಡಬಹುದು ಆಯ್ಕೆ ಅವರಿಗೆ ಬಿಟ್ಟದ್ದು. ಆದರೆ ಆದಾಯ ತರುವ ಮತ್ತು ಸಮಾಜದಲ್ಲಿ ಗೌರವ ಕೊಡುವ ದೇವಸ್ಥಾನದ ಅರ್ಚಕರನ್ನಾಗಿ ಕೆಲಸ ಮಾಡಲು ಇಂತಹ ಸಮುದಾಯಗಳನ್ನು ನೇಮಕ ಮಾಡಿಕೊಂಡಿದೆಯೆ, ಅಥವಾ ಉಪನ್ಯಾಸ ಭೋದನೆ ಮಾಡಲು ವಾತವರಣ ಸೃಷ್ಟಿ ಮಾಡಲಾಗಿದೆಯೆ, ಫಲವತ್ತಾದ ಭೂಮಿ ನೀರಾವರಿ ವ್ಯವಸ್ಥೆ ನೀಡಲಾಗಿದೆಯೆ, ಇತರರ ಮನೆಗಳ ಮಾದರಿಯಂತೆ ಇವರಿಗೆ ಮನೆಗಳ ವ್ಯವಸ್ಥೆ ಮಾಡಿದೆಯೆ, ಉನ್ನತಮಟ್ಟದ ಶಿಕ್ಷಣವಾದರು ಒಂದುಕಡೆ ಇರಲಿ ಕನಿಷ್ಠ ಮಟ್ಟದ ಶಿಕ್ಷಣ ಕೊಡಲಾಗಿದೆಯೆ, ಉನ್ನತ ಹುದ್ದೆಗಳನ್ನು ನೀಡಲಾಗಿದೆ? ಉದ್ದಿಮೆಗಳ ಮಾಲಿಕತ್ವದ ಹೊಣೆಗಾರಿಕೆಯನ್ನು, ವ್ಯಾಪಾರ ವಹಿವಾಟುಗಳ ಜವಬ್ದಾರಿ ಕೊಡಲಾಗಿದೆಯೆ, ಗುತಿಗೆದಾರರನ್ನಾಗಿ ಮಾಡಲಾಗಿದೆಯೆ, ಆಡಳಿತದ ಚುಕ್ಕಾಣಿ ಇವರ ಕೈಲಿದೆಯೆ, ಇತ್ಯಾದಿ ಪ್ರಶ್ನೆಗಳು ಬೆಳೆಯುತ್ತಾ ಹೋಗುತ್ತವೆ. ಉತ್ತರ ಮಾತ್ರ ಎಲ್ಲಿರಬೇಕೊ ಅಲ್ಲಿಯೆ ಇದೆ. ಕೇವಲ ಓಟಗಾಗಿ ಬಿದ್ದು ಹೋಗುವ ಆಶ್ರಯಮನೆಗಳು ಅವೈಜ್ಞಾನಿಕ ಮೂಲಭೂತ ಸೌಕರ್ಯಗಳು, ಭೂಮಿ ಇತ್ಯಾದಿಗಳು ನೀಡಿದರೆ. ಆ ಭೂಮಿಯು ಫಲವತ್ತತೆ ನಾಶಹೊಂದಿದ್ದವು ಅದಕ್ಕೆ ನೀರಿನ ವ್ಯವಸ್ಥೆ ಇರುವುದಿಲ್ಲ. ಸಾಲಕೊಟ್ಟರೆ ನಷ್ಟಭರಿಸುವ ಸೌಲಭ್ಯವಿಲ್ಲ. ಇವರು ನೆಲೆಸಿರುವ ಪ್ರದೇಶದಿಂದ ನಗರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲಾಗಿಲ್ಲ. ಎಲ್ಲಿಯೊ ಮನೆ, ಎಲ್ಲಿಯೊ ಒಂದು ಸಣ್ಣ ಭೂಮಿ ಅದು ಕೆಲವರಿಗೆ ಮಾತ್ರ. ಕೆಲವೆ ಜನರಿಗೆ ಕನ್ನಡ ಶಿಕ್ಷಣ. ಆದಾಯ ತರುವ ಎಲ್ಲಾ ಸಂಪತ್ತುಗಳು ಕೇವಲ ಕೆಲವು ಸಮುದಾಯಗಳ ಕೈಯಲ್ಲಿ ಕೈವಶವಾಗಿವೆ. ಅಲೆಮಾರಿಗಳ ಹಿಂದಿನ ವೃತ್ತಿ, ಬದುಕು, ಬವಣೆಗಳೂ ಈಗಲೂ ಜೀವಂತವಾಗಿವೆ. ಎಂತಹ ಸ್ಥಿತಿಬಂದರು ಬದಲಾಗಿಲ್ಲ. ಶೇ. ೭೦ರಷ್ಟು ಅಲೆಮಾರಿಗಳು ತಮ್ಮ ಪಾರಂಪರಿಕ ವೃತ್ತಿಯಿಂದ ಆಹಾರವನ್ನು ದೊರಕಿಸಿಕೊಳ್ಳಬೇಕಿದೆ. ಕೆಲವು ಸಮುದಾಯಗಳು ಮಾತ್ರ ಮೀಸಲಾತಿ ಸೌಲಭ್ಯಪಡೆದುಕೊಂಡಿದ್ದಾರೆ. ಶಿಕ್ಷಣ, ಉದ್ಯೋಗ, ವಸತಿ, ಭೂಮಿ ಇತ್ಯಾದಿಗಳು. ಇವುಗಳಿಗೆಲ್ಲ ಕಾರಣ ಜಾತಿ. ಜಾತಿಯೂ ಇನ್ನೂ ಕೂಡ ಪ್ರಬಲವಾಗಿ ಗುಪ್ತಗಾಮಿನಿಯಂತೆ ಕೆಲಸಮಾಡುತ್ತಿದೆ. ತನ್ನ ಸ್ಥಾನವನ್ನು ಇನ್ನೊಬ್ಬರಿಗೆ ಬಿಟ್ಟುಕೊಟ್ಟಿಲ್ಲ. ಆಕಸ್ಮಿಕವಾಗಿ ಬಿಟ್ಟುಕೊಟ್ಟರೆ ಅಪ್ಪೋತ್ತಿಗಾಗಲೆ ಆ ಸ್ಥಾನಕ್ಕೆ ಜೀವವಿರುವುದಿಲ್ಲ.

ಪ್ರತಿ ವ್ಯಕ್ತಿಗಳು ಕೈಗೊಳ್ಳುವ ಕೆಲಸ ಕಾರ್ಯಗಳೆಲ್ಲವೂ ಜಾತಿ ಹೆಸರಿನ ಮೂಲಕವೆ ಇರುವುದನ್ನು ನೋಡಬಹುದು. ಅದೆ ಹೆಸರಿನ ಮಠಗಳು, ಸಂಘಗಳು, ಶಿಕ್ಷಣ ಸಂಸ್ಥೆಗಳು ಬೆಳಕಿಗೆ ಬಂದಿವೆ. ಬರುತ್ತಲೆ ಇವೆ. ಬದಲಾದ ಸ್ಥಿತಿಯಲ್ಲಿ ಬದುಕನ್ನು ಬದಲಾಯಿಸಿಕೊಂಡ ಒಬ್ಬ ಅಲೆಮಾರಿಯನ್ನು ನೀವು ಎಷ್ಟು ವರ್ಷದಿಂದ ಈ ವ್ಯಾಪಾರ ಕೈಗೊಂಡಿದ್ದಿಯಾ ಎಂದು ಕೇಳಿದರೆ ಸುಮಾರು ಎರಡು. ಮೂರು ವರ್ಷಗಳಿಂದ ಎನ್ನುತ್ತಾನೆ. ನೀನು ಯಾವ ಜಾತಿಯವನ್ನು ಎಂದರೆ ಸುಸಂಸ್ಕೃತ ಜಾತಿಯವನೆಂದು ಹೇಳಿಕೊಳ್ಳದೆ ನಾನು ಡೊಂಬರವನು ಎನ್ನುತ್ತಾನೆ. ಆ ವೃತ್ತಿಯನ್ನೇಕೆ ಬಿಟ್ಟೆ ಎಂದರೆ ಅದಕ್ಕೆ ಜನರು ಸರಿಯಾಗಿ ಸ್ಪಂದಿಸುತ್ತಿಲ್ಲ, ಉನ್ನತಮಟ್ಟದ ಸರ್ಕಸ್‌ಗಳು, ಚಲನಚಿತ್ರಗಳೂ ಬಂದಿರುವುದರಿಂದ ಜನರೂ ನಮ್ಮ ಕಲೆಯನ್ನು ನೋಡಲು ಬರುತ್ತಿಲ್ಲ ಹೀಗಾಗಿ ಹೊಟ್ಟೆಪಾಡಿಗೆ ಅದನ್ನು ಬಿಟ್ಟು ವ್ಯಾಪಾರದಲ್ಲಿ ನಿಂತಿದ್ದೇವೆ ಎನ್ನುತ್ತಾನೆ. ಡೊಂಬರಟಾದ ಪಾರಂಪಾರಿಕ ಕೌಶಲ್ಯವನ್ನು ಬೇರೆಯವರು ಕಲಿತು ಆಧುನಿಕತೆಯ ಹೊಸ ರೂಪಕೊಟ್ಟು ಝುಗಝುಗಿಸುವ ಬೆಳಕು, ಹೊಸವಿನ್ಯಾಸದ ವಸ್ತ್ರಗಳು, ಧ್ವನಿಪೆಟ್ಟಿಗೆಗಳು, ಅಲಂಕಾರಿಕ ವೇದಿಕೆಯು ನೋಡುವ ಜನರನ್ನು ಆಕರ್ಷಿಸುವಂತೆ ಮಾಡಿ ಹಣಗಳಿಸುವವರು. ಆದರೆ ಆಧುನಿಕ ಪ್ರದರ್ಶನಕ್ಕೆ ನೀಡುವ ಹಾಗೂ ಸಂಪ್ರಾದಾಯಿಕ ಡೊಂಬರಾಟಕ್ಕೆ ನೀಡುವ ಜನರ ಪ್ರತಿಕ್ರಿಯೆ ಬೇರೆ ಮತ್ತು ಸಂಭಾವನೆ, ಗೌರವಗಳಲ್ಲಿ ವ್ಯತ್ಯಾಸವಿದೆ.

ಇದು ಹೊಟ್ಟೆಪಾಡಿನ ಜಾತಿ ವ್ಯವಸ್ಥೆಯಾದರೆ ಸಮಾಜದ ಸಾಮಾಜಿಕ ಸ್ಥಾನಮಾನದ ವ್ಯವಸ್ಥೆ ಮತ್ತೊಂದು ತರದ್ದು. ಜಾತಿವ್ಯವಸ್ಥೆಗೂ - ಅಸ್ಪೃಶ್ಯತೆಗೂ ಮತ್ತು ಅಲೆಮಾರಿಗಳಿಗೂ ಬಿಡಲಾರದ ನಂಟಿದೆ. ಈ ರೀತಿಯ ವ್ಯವಸ್ಥೆಯನ್ನು ಮನಗಂಡು ಸಮುದಾಯಗಳು ಇದರಿಂದ ದೂರವಿರಲು ಸಮಾಜದಿಂದ ಅಂದರೆ ಮಾನಸಿಕವಾಗಿ ಆಘಾತಕ್ಕಿಡಾಗಿ ಎಷ್ಟು ಸಾಧ್ಯವೊ ಅಷ್ಟು ಅಂತರದಿಂದ ತಮ್ಮದೆ ವ್ಯವಸ್ಥೆಯಲ್ಲಿ ಸಮುದಾಯಗಳು ತಮ್ಮ ನೀತಿ ನಿಯಮದಂತೆ ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಿಕೊಳ್ಳುತ್ತಾರೆ. ಈ ಹಿಂದೆ ವೃತ್ತಿಗಳಿಗನುಗುಣವಾಗಿ ಸಾಮಾಜಿಕ ಸ್ಥಾನಗಳನ್ನು ವರ್ಗಿಕರಿಸಿದ್ದನ್ನು ಕಾಣುತ್ತೇವೆ. ಯಾವ ಸಮುದಾಯ ಮಾಂಸ, ಮದ್ಯ, ವೇಷಾವಾಟಿಕೆ, ಗೌರವಗಳಿಲ್ಲದ ವೃತ್ತಿಗಳಲ್ಲಿ ತೊಡಗಿಸಿಕೊಳ್ಳುತ್ತದೆಯೊ ಅಂತಹ ಸಮುದಾಯವು ಸಮಾಜದಲ್ಲಿ ಅಸ್ಪೃಶ್ಯರು ಎಂದು ಪರಿಗಣಿಸಲಾಯಿತು. ಬಹುತೇಕ ಅಲೆಮಾರಿ ಸಮುದಾಯಗಳು ಸಮಾಜದ ಕೆಳವರ್ಗದಲ್ಲಿ ಸೇರಲ್ಪಟ್ಟವು. ಮುಂದೆ ಅದೆ ಸ್ಥಾನಮಾನ ಪಡೆದು ಜೀವಂತವಾಗಿ ನರಕಯಾತನೆ ಅನುಭವಿಸುತ್ತಲೆ ಇವೆ.

ಜಾತಿ ವ್ಯವಸ್ಥೆಯ ಮತ್ತೊಂದು ಸ್ವರೂಪವೆಂದರೆ ತನ್ನ ಮನೋಧರ್ಮದಲ್ಲಿ ಪ್ರತ್ಯೇಕತೆಯನ್ನು ಬಯಸುವುದರೊಂದಿಗೆ ಒಂದು ಜಾತಿ ಮತ್ತೊಂದು ಜಾತಿಯ ಮೇಲೆ ಪ್ರಭುತ್ವ ಸಾಧಿಸಲು ಹೋಗುತ್ತಾ ಇದೆ. ಆದರೆ ಇದು ಆಯಾ ಜಾತಿಯ ಸ್ಥಾನಮಾನಗಳು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಇತ್ಯಾದಿ ಅಂಶಗಳ ಮೇಲೆ ನಿಂತಿರುತ್ತದೆ. ನನ್ನ ಜಾತಿಗಿಂತಲೂ ಕೆಳಸ್ಥರದಲ್ಲಿ ನನಗೆ ಅಧೀನವಾದ ಮತ್ತು ತಾನು ಕೀಳೆಂದು ಕರೆಯಿಸಿಕೊಳ್ಳಬಹುದಾದ ಮತ್ತೊಂದು ಜಾತಿ ಇರಬೇಕೆಂದು ಪ್ರತಿ ಜಾತಿ ಸಮುದಾಯಗಳು ಬಯಸುತ್ತವೆ. ಇದು ಅಲೆಮಾರಿಗಳಿಗೂ ಬಿಟ್ಟಿರುವುದಿಲ್ಲ. ಪ್ರತಿ ಅಲೆಮಾರಿ

ಸಮುದಾಯವು ತನ್ನ ಪ್ರತ್ಯೇಕತೆ ಕಾಯ್ದುಕೊಳ್ಳುವುದರೊಂದಿಗೆ ತಾವು ದಿಕ್ಕಿಲ್ಲದ ಅಲೆಮಾರಿ ಸಮುದಾಯವೆಂದು ಗೊತ್ತಿದ್ದರೂ ಸಹ, ತಾವು ಸಮಾಜದ ಕೆಳಸ್ತರದಲ್ಲಿದ್ದೇವೆಂದು ತಿಳಿದರೂ ಸಹ, ತಮಗಿಂತಲೂ ಕೀಳು ಜಾತಿಯ ಸಮುದಾಯಗಳಿವೆ. ಅವರಿಗಿಂತ ಶ್ರೇಷ್ಠ ಎಂಬ ಮನೋಭಾವವಿದೆ. ಹೀಗೆ ಜಾತಿ ವ್ಯವಸ್ಥೆಯ ಸುತ್ತಮುತ್ತಲೂ ಅನೇಕ ದಾರಿಗಳಿವೆ. ಕೆಲವು ದಾರಿಗಳು ಒಳ್ಳೆಯದಾಗಿದ್ದು, ಕೆಲವು ದಾರಿಗಳು ದುರ್ಗಮವಾಗಿದೆ. ಯಾವುದು ಒಳ್ಳೆಯದು ಯಾವುದು ಬದುಕನ್ನು ರೂಪಿಸುತ್ತದೆ ಎಂಬುದನ್ನು ತಿಳಿಯಬೇಕಿದೆ. ಕೆಲವು ಜಾತಿಯ ಸಮುದಾಯಗಳು ಮೊದಲಿನ ಸ್ಥಿತಿಯಲ್ಲಿ ಮುಂದುವರಿದು ಕೊಂಡು ಹೋಗಬೇಕಾಗುತ್ತದೆ ಎಂದು ಆಲೋಚಿಸುವ ಮನೋಭಾವದ ಕೊರತೆ ಅನೇಕ ಜಾತಿ ಸಮುದಾಯಗಳಿಗಿದೆ.

೩.೩.೨. ಜಾತಿ ಪದದ ಅರ್ಥ ಮತ್ತು ವ್ಯಾಖ್ಯಾನಗಳು

'ಜಾತಿ'ಗೆ ಇಂಗ್ಲಿಷ್ ಭಾಷೆಯಲ್ಲಿ 'ಕ್ಯಾಸ್ಟ್'(Caste) ಎಂದು ಕರೆಯಲಾಗಿದೆ. 'ಕ್ಯಾಸ್ಟ್' ಎಂಬುದು ಸ್ಪಾನಿಷ್ ಭಾಷೆಯ 'ಕಾಸ್ಟಾ' ಎಂಬ ಪದದಿಂದ ಉತ್ಪತ್ತಿಯಾಗಿದೆ. 'ಕಾಸ್ಟಾ' ಎಂಬುದುಕ್ಕೆ ತಳಿ, ಅನುವಂಶೀಯತೆ, ಜನಾಂಗ ಎಂಬ ಅರ್ಥಗಳಿವೆ. ಅಂದರೆ ಅನುವಂಶೀಯ ಗುಣಗಳನ್ನು ಹೊಂದಿರುವ ಸಮೂಹಕ್ಕೆ ಕಾಸ್ಟಾ ಎಂದು ಕರೆಯಲಾಯಿತು. 'ಕಾಸ್ಟಾ' ಎಂಬ ಪದವನ್ನು ಮೊದಲು ಬಳಸಿದವರೆಂದರೆ ಪೋರ್ಚುಗೀಸರು. ೧೫೬೭ರಲ್ಲಿ ಗಾರ್ಸಿಯಾ ಓರ್ಟಾ ಎಂಬುವವರು. ಭಾರತಿಯ ಜಾತಿಪದ್ಧತಿಗೆ 'ಕ್ಯಾಸ್ಟ್'(Caste) ಎಂಬ ಶಬ್ದ ಬಳಸಿದನು. ವೈಜ್ಞಾನಿಕವಾಗಿ 'ಜಾತಿ' ಎಂದರೇನು? ಎಂಬುದಕ್ಕೆ ಯಾರು ಕೂಡ ಸರಿಯಾದ ವ್ಯಾಖ್ಯಾನ ನೀಡಿಲ್ಲ. ಒಂದು ವ್ಯಾಖ್ಯಾನ ನೀಡಿದವರನ್ನು ಇನ್ನೊಬ್ಬ ವಿದ್ವಾಂಸರು ಸರಿ ಎಂದು ಒಪ್ಪಿಕೊಳ್ಳದೆ ತನ್ನದೆ ಆದ ಮತ್ತೊಂದು ವ್ಯಾಖ್ಯಾನ ಕೊಡುತ್ತಾ ಸಾಗಿದ್ದಾರೆ. "ಜಾತಿಯು ಒಂದು ನಿರ್ಬಂಧಿತ ಅಥವಾ ಮುಚ್ಚಿದ ಸಮುದಾಯವಾಗಿದೆ"[22] ಎಂದು *-ಡಿ.ಎನ್. ಮುಜುಂದಾರ ಮತ್ತು ಟಿ.ಎನ್. ಮದನ್‌*ರವರ ಅಭಿಪ್ರಾಯವಾಗಿದೆ. "ಜನರ ಸ್ಥಾನಮಾನವು ಸಂಪೂರ್ಣವಾಗಿ ಮೊದಲೆ ನಿರ್ಣಯವಾಗಿದ್ದು. ಅವರು ಹುಟ್ಟುವಾಗಲೆ ಅವರ ಜೀವನದ ಸ್ಥಿತಿಗಳು ಇಂತಹದು ಎಂದು ತಿರ್ಮಾನವಾಗಿ ಅದನ್ನು ಬದಲಾಯಿಸಲು ಯಾವ ವಿಧವಾದ ಭರವಸೆಯೂ ಇಲ್ಲದಿದ್ದರೆ ವರ್ಗವು ರೂಪವನ್ನು ತಾಳುತ್ತದೆ ಆದುವೆ ಜಾತಿ"[23] ಎಂದು *-ಮೆಕೈವರ್ ಮತ್ತು ಪೇಜ್* ರವರ ಅಭಿಮತವಾಗಿದೆ. ಹೀಗೆ ಜಾತಿ ತಮ್ಮ ತಮ್ಮ ದೃಷ್ಟಿಕೋನದಿಂದ ಅಧ್ಯಯನದಲ್ಲಿ ಒಂದಕ್ಕಿಂತ ಒಂದು ಭಿನ್ನವಾದ ವ್ಯಾಖ್ಯಾನವನ್ನು ನೀಡಿದ್ದಾರೆ.

ಜಾತಿಯ ಉಗಮ

ಜಾತಿಯು ಯಾವಾಗ ಉಗಮವಾಯಿತೆಂದೂ ಇಲ್ಲಿಯ ತನಕವೂ ಸ್ಪಷ್ಟವಾದ ನಿಖರ ಮಾಹಿತಿ ಇಲ್ಲ. ಆದರೆ ಜಾತಿಯು ಹೇಗೆ ಉಗಮವಾಯಿತೆಂಬುದರ ಬಗ್ಗೆ ವಿವಿಧ ತತ್ವಜ್ಞಾನಿಗಳು ತಮ್ಮದೆ ಸಿದ್ಧಾಂತಗಳನ್ನು ಮಂಡಿಸಿ, ಜಾತಿ ಉಗಮಕ್ಕೆ ಹತ್ತಿರ ಹೋಗಲು ಪ್ರಯತ್ನಿಸಿರುವುದು ಅಭಿನಾಂದನಾರ್ಹ. ವೃತ್ತಿ ಸಿದ್ಧಾಂತದ ಪ್ರತಿಪಾದಕರಾದ ಜಾನ್ ಸಿ. ನೇಸ್‌ಫೀಲ್ಡ್‌ರವರು ನಿರ್ದಿಷ್ಟ ವೃತ್ತಿಯನ್ನು

ಕೈಗೊಂಡಿದ್ದರಿಂದ ಜಾತಿ ಉಗಮವಾಯಿತೆನ್ನುತ್ತಾರೆ. ಆದರೆ ಸಿ.ಎಚ್. ಹಟ್ಟನ್ ಎಂಬ ತತ್ವಜ್ಞಾನಿ ವಿವಿಧ ರೀತಿಯ ಸಮುದಾಯಗಳು ವಿವಿಧ ಕಸಬುಗಳನ್ನು ಪೂರೈಸುತ್ತಾರೆ. ಒಂದು ವೇಳೆ ಒಕ್ಕಲುತನವನ್ನು ಮಾಡುವ ಒಕ್ಕಲಿಗಳೆಂದರೆ ಎಲ್ಲಾ ಸಮುದಾಯಗಳು ಒಕ್ಕಲುತನ ಮಾಡುವುದರಿಂದ ಎಲ್ಲರೂ ಒಕ್ಕಲಿಗರಾಗಲು ಸಾಧ್ಯವಿಲ್ಲ. ಮತ್ತೊಬ್ಬ ತತ್ವಜ್ಞಾನಿಯು ಜನಾಂಗಿಯ ಸಿದ್ಧಾಂತ ಮಂಡಿಸುತ್ತಾರೆ. ಇವರ ವಾದವೆಂದರೆ ಜನಾಂಗಿಯ ಭೇದಗಳಿಂದ ಬೇರೆ ಬೇರೆ ಜಾತಿಗಳು ಹುಟ್ಟಿಕೊಂಡಿವೆ ಎನ್ನುತ್ತಾರೆ. ಆರ್ಯದ್ರಾವಿಡರ ರಕ್ತ ಪರಿಶುದ್ಧತೆ ಮತ್ತು ಸಾಮಾಜಿಕ ಅಂತರವೆ ಜಾತಿಗೆ ಮುಖ್ಯವೆಂಬುದು ಡಾ. ಎನ್. ಮುಜುಮಂದಾರ್ ಮತ್ತು ಡಾ. ಜಿ.ಎಸ್. ಘುರ್ಯೆ ಹೇಳಿದರೆ. ಸಿ.ಎಚ್.ಹಟ್ಟನ್ ಮುಂತಾದವರು ಈ ವಾದವನ್ನು ತಿರಸ್ಕರಿಸುತ್ತಾರೆ. ಶರತ್ ಚಂದ್ರರಾಯರು ಸಾಂಸ್ಕೃತಿಕ ಸಮ್ಮತಾ ಸಿದ್ಧಾಂತದ ಮೂಲಕ ವಿಭಿನ್ನ ಸಂಸ್ಕೃತಿಗಳ ಸ್ವಾಂಗೀಕರಣ ಮತ್ತು ಸಮರಸತೆಯಿಂದಾಗಿ ಜಾತಿ ಉಗಮವಾಯಿತು ಎನ್ನುತ್ತಾರೆ.

ಸಂಪ್ರಾದಾಯಿಕ ಸಿದ್ಧಾಂತವು ಕೂಡ ತನ್ನದೆ ಆದ ವಾದ ಮಂಡಿಸುತ್ತದೆ. ಅದೆ ಪ್ರಕಾರ ರಾಜಕೀಯ ಸಿದ್ಧಾಂತವು ಬ್ರಾಹ್ಮಣರು ತಮ್ಮ ಶ್ರೇಷ್ಠತೆ ಉಳಿಸಿಕೊಳ್ಳಲು ಜಾತಿ ಎಂಬ ರಾಜಕೀಯ ತಂತ್ರ ಹುಟ್ಟುಹಾಕಿ ಜಾತಿ ಉಗಮವಾಯಿತೆಂದರೆ ವಿಕಾಸಾತ್ಮಕ ಸಿದ್ಧಾಂತದ ಪ್ರತಿಪಾದಕ ಡೆನ್‌ಝಿಲ್ ಇಬ್ಬೆಟ್ ಸನ್‌ರವರು ಬುಡಕಟ್ಟುಗಳು, ವೃತ್ತಿಗಳು, ಧರ್ಮಗಳ ಅಂತರಕ್ರಿಯೆಯಿಂದಾಗಿ ಜಾತಿ ಜನ್ಮತಾಳಿತು ಎನ್ನುತ್ತಾರೆ. ಜೆ.ಎಚ್.ಹಟ್ಟನ್‌ರವರು ಒಂದು ನಿಗೂಢಶಕ್ತಿ ಅಥವಾ ಕುಲದೈವ ಪ್ರೇರಣೆಯಿಂದ ಜಾತಿ ಉದಯ ವಾಯಿತೆಂದು, ಹಾಗೆಯೆ ಮಾನವಸಿದ್ಧಾಂತದ ಮೂಲಕ ಹೇಳುವರು. ಒಂದೆ ವೃತ್ತಿ ಕೈಗೊಳ್ಳುವರ ಮಧ್ಯೆ ಕೊಡುಕೊಳ್ಳುವಿಕೆ ನಡೆಯುತ್ತಿದ್ದರು ಇದರಿಂದ ಜಾತಿವ್ಯವಸ್ಥೆ ಬಂದಿತು ಎನ್ನುತ್ತಾರೆ. ಆರ್ಯರು ಬರುವುದಕ್ಕಿಂತ ಮೊದಲು ಜಾತಿವ್ಯವಸ್ಥೆ ಭಾರತದಲ್ಲಿತ್ತೆಂದು ಹೇಳುತ್ತಾರೆ. ಹೀಗೆ ಹಲವಾರು ಸಮಾಜ ಮತ್ತು ಮಾನವಶಾಸ್ತ್ರಜ್ಞರು ಜಾತಿ ಉಗಮದ ಬಗೆಗೆ ತಮ್ಮದೆ ಆದ ಸಿದ್ಧಾಂತದ ಮೂಲಕ ಮಂಡನೆ ಮಾಡಿದ್ದಾರೆ. ಇದರಿಂದ ತಿಳಿಯುವುದೆಂದರೆ ಸ್ಪಷ್ಟವಾಗಿ ಎಂದು? ಯಾವಾಗ? ಎಲ್ಲಿ? ಜಾತಿ ವ್ಯವಸ್ಥೆ ಜನ್ಮತಾಳಿತ್ತೆಂದು ನಿಖರವಾಗಿ ಹೇಳಲು ಸಾಧ್ಯವಾಗಿಲ್ಲ.

ಜಾತಿವ್ಯವಸ್ಥೆಯ ಕದಂಬಬಾಹು ಮತ್ತು ಅಲೆಮಾರಿಗಳು

ಭಾರತಿಯ ಸಮಾಜದ ಸಾಮಾಜಿಕ ರಚನೆಯನ್ನು ಜಾತಿಯಿಂದ ಗುರುತಿಸಲಾಗುತ್ತದೆ. ಇಂತಹ ಜಾತಿಯು ಪ್ರಾಚೀನಕಾಲದ ಇತಿಹಾಸವನ್ನು ಪಡೆದುಕೊಂಡು ಒಂದು ಪ್ರಮುಖ ಸಾಮಾಜಿಕ ಪ್ರಮುಖ ಅಂಗವಾಗಿ ತುಂಬಾ ಆಳವಾಗಿ ಬೇರೂರಿದೆ. ಇದರ ಕಾರ್ಯವ್ಯಾಪ್ತಿ ಎಲ್ಲಾ ಕಾಲಗಳಲ್ಲಿ ಮತ್ತು ಎಲ್ಲಾ ಸಮುದಾಯಗಳಲ್ಲಿ ಒಂದಲ್ಲ ಒಂದು ರೀತಿಯಾಗಿ ತುಂಬಾ ವಿಶಾಲವಾದ ಕಾರ್ಯವ್ಯಾಪ್ತಿಯನ್ನು ಒಳಗೊಂಡಿದೆ.

ಸಾಮಾಜಿಕ ಜೀವನದಲ್ಲಿ ಕೌಟುಂಬಿಕ ಸಂಬಂಧ ಮತ್ತು ವೈವಾಹಿಕ ಸಂಬಂಧಗಳು ವ್ಯತ್ಯಾಸಗಳ ಮೂಲಕ ಕಂಡುಬರುವುದುಂಟು. ಅವರು ಆಹಾರ, ವಿವಾಹ, ಉಡುಗೆ-ತೊಡುಗೆ, ಆಭರಣ-ಅಲಂಕಾರ, ವಾಸದ ನೆಲೆ, ಶಿಕ್ಷಣ, ಬದುಕು, ವಸತಿ-ವಿನ್ಯಾಸ ಹಾಗೂ ಸಾಂಸ್ಕೃತಿಕ ಮಾದರಿಗಳು ವೃತ್ತಿಗಳ ಪ್ರಭೇದತೆ,

ಮೌಲ್ಯಗಳು ಮತ್ತು ಆದರ್ಶಗಳ ಪ್ರತ್ಯೇಕತೆ ಅಂತಸ್ತು ಅಂತರಕ್ರಿಯ ವಹಿಸುವ ಪಾತ್ರಗಳೂ ಹುಟ್ಟು, ಸಾವು, ನಿಯಂತ್ರಣ, ಮೇಲ್ವಿಚಾರಣೆ ಇತ್ಯಾದಿ ಎಲ್ಲಾ ಹಂತದಿಂದಲೂ ಎಲ್ಲಾ ಕಾಲಗಳಲ್ಲಿ ವಿಶಿಷ್ಟವಾದ ಕಾರ್ಯವೈಖರಿಯನ್ನು ಮೈಗೂಡಿಸಿಕೊಂಡ ವಿಶಾಲವಾಗಿ ಬೆಳೆದುನಿಂತಿದೆ. ಮೇಲ್ನೋಟದಲ್ಲಿ ಅಷ್ಟೇನು ಜಾತಿಯಿಂದ ಸಮಸ್ಯೆಗಳು ಇಲ್ಲ ಎಂಬುದನ್ನು ಕಾಣಬಹುದಾದರೂ, ಇಂದಿಗೂ ಪ್ರತಿಯೊಂದು ಸಮುದಾಯವು ಅವರವರ ಜಾತಿಯ ಶೈಲಿಯಲ್ಲಿ ಜೀವನ ಸಾಗಿಸುತ್ತಿದ್ದನ್ನು ನೋಡಬಹುದಾಗಿದೆ. ಕೆಲವು ಸಮುದಾಯಗಳೂ ಮಾತ್ರ ಬದಲಾವಣೆಯಾಗಿರಬಹುದು. ಆದರೆ ಅಲೆಮಾರಿ ಸಮುದಾಯಗಳಲ್ಲಿ ಜಾತಿಯಿಂದ ಹೊರಬರಲು ಆಗುತ್ತಿಲ್ಲ. ಜಾತಿಯು ಸಮುದಾಯದಲ್ಲಿ ರಕ್ಷಾ ಕವಚವೂ ಮತ್ತು ಶಾಪವಾಗಿದೆ. ಏಕೆಂದರೆ ಸಾಮಾಜಿಕ ದೃಷ್ಟಿಯಲ್ಲಿ ಜಾತಿಯಿಂದ ಪ್ರತ್ಯೇಕತೆ ಮತ್ತು ಅಸಮಾನತೆ ಸಂಕುಚಿತ ಪ್ರಜ್ಞೆಯಿದ್ದರೂ ಅವರದ್ದೆ ಆದ ಅಭಿಪ್ರಾಯದಲ್ಲಿ ಜಾತಿವ್ಯವಸ್ಥೆಯು ಮೂಲ ಸಂಸ್ಕೃತಿ ಉಳಿಸಿಕೊಳ್ಳಲು ಸಾಧ್ಯವಾಗುವ ವ್ಯವಸ್ಥೆಯಾಗಿದೆ. ಸಮುದಾಯದ ಕೌಶಲ್ಯ, ತಂತ್ರಜ್ಞಾನ, ಪ್ರತಿಭೆ ಮೌಲ್ಯ ಇತ್ಯಾದಿ ಗಳೆಲ್ಲವೂ ಜಾತಿಯಿಂದ ಉಳಿದುಬಂದಿದೆ. ಜಾತಿ ಆಯುಧವನ್ನಾಗಿ ಮಾಡಿಕೊಳ್ಳುವುದು ಸುಲಭದ ಮಾತಾಲ್ಲ. ಒಂದೊಂದು ಸಮುದಾಯದಲ್ಲಿ ಅವರವರ ಅಭಿಪ್ರಾಯದ ತಕ್ಕಂತೆ ಜಾತಿಯನ್ನು ವೈಜ್ಞಾನಿಕ ವಾಗಿ ನೋಡಲಾಗಿದೆ. ಪ್ರಸ್ತುತ ಜಾತಿಯ ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶ ಮಾಡಿ ತನ್ನದೆ ಆದ ಛಾಪನ್ನು ಮೂಡಿಸಿದೆ. ಆ ಛಾಪೆ ಹೀಗೆ ಕಾರ್ಯನಿರ್ವಹಿಸುತ್ತದೆ. ಜಾತಿಯು ತನ್ನ ಕಾರ್ಯವ್ಯಾಪ್ತಿಯನ್ನು ವಿಶಾಲವಾಗಿ ಹರಡಿದಂತೆಯೆ? ಸಮುದಾಯ ಎಂತಹ ಅವಗಡಗಳಿಗೆ ಸಿಲುಕಿಸಿಕೊಂಡಿದೆ. ಜಾತಿಯ ಬಾಹುಬಂಧನದಲ್ಲಿ ಮುಗ್ಧ ಸಮುದಾಯಗಳು ಬೇಯುವಂತೆ ಮಾಡಿವೆ.

ಕಸುಬು ಮತ್ತು ಜಾತಿ

ಮಾನವ ಅನೇಕ ಬೇಡಿಕೆಗಳನ್ನು ಪೂರೈಸಿಕೊಳ್ಳತ್ತಾನೆ. ಮೂಲಭೂತ ಅವಶ್ಯಕತೆಗಳ ಪೂರೈಕೆಗಾಗಿ ವ್ಯಾಪಕವಾದ ಹಾಗೂ ಉತ್ತಮವಾದ ಕಸುಬು ಮಾಡಿಕೊಳ್ಳುವುದು. ಸಮುದಾಯದಲ್ಲಿ ಪ್ರತಿಯೊಂದು ಕಸುಬುಗಳು ಭಿನ್ನ ಮತ್ತು ವಿಭಿನ್ನ ರೀತಿಯಲ್ಲಿ ಕಂಡುಬರುವುದುಂಟು. ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಅಂತಸ್ತನ್ನು ಪಡೆದುಕೊಂಡಿವೆ. ಕಸುಬುಗಳು ಸಮುದಾಯದ ಆರ್ಥಿಕಸ್ಥಿತಿಗತಿ ವರ್ಗೀಕರಣವು ಮಾಡುತ್ತವೆ. ಕೆಲವು ಸಮುದಾಯಗಳೂ ಮಾನಸಿಕ ಶ್ರಮಕೊಟ್ಟು ಕಸುಬು ಕೈಗೊಂಡಿದೆ. ಮತ್ತೆ ಕೆಲವು ಸಮುದಾಯಗಳು ದೈಹಿಕಶ್ರಮವನ್ನು ವಿನಿಯೋಗಿಸಿ ಕಸುಬುಗಳನ್ನು ಮಾಡುತ್ತವೆ. ಮತ್ತೆ ಕೆಲವು ಸಮುದಾಯಗಳು ದೈಹಿಕ ಮತ್ತು ಮಾನಸಿಕ. ಎರಡು ತರಹದ ಶಕ್ತಿಗಳಾದ ಶ್ರಮ-ಶಕ್ತಿಯನ್ನು ವಿನಿಯೋಗಿಸಿ ಕಸುಬುಗಳನ್ನು ಕೈಗೊಳ್ಳುವರು. ಕಸುಬನ್ನು ಪೂರೈಸುವವರಿಗೆ ಆ ಕಸುಬಿನ ಆಧಾರದ ಮೇಲೆ ಬೆಲೆ, ಗೌರವವನ್ನು ನಿರ್ಧರಿಸಲಾಗುತ್ತದೆ. ಅದನ್ನು ವೇದ ಉಪನಿಷತ್ತುಗಳ ಕಾಲದಿಂದಲೂ ನೋಡಬಹುದಾಗಿದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ವರ್ಗದವರ ಕಸುಬುಗಳೆ ಬೇರೆ, ಕೆಳವರ್ಗದ ಕಸುಬುಗಳೆ ಬೇರೆ ಬುಡಕಟ್ಟು ಕಸುಬುಗಳೆ ಬೇರೆ. ಹೀಗೆ ಸಮುದಾಯಗಳಲ್ಲಿ ವೈವಿಧ್ಯ ಕಸುಬುಗಳಾಗಿ ಕಂಡು ಬರುವುದುಂಟು. ಮಧ್ಯಮ ವರ್ಗದವರ ಕಸುಬುಗಳು ಮತ್ತು ಮೇಲ್ವರ್ಗದ ಕಸುಬುಗಳು ಸಾಮಾನ್ಯವಾಗಿ ಅಧಿಕ

ಆದಾಯ ಗೌರವಗಳನ್ನು ಕೊಡುವಂಥದ್ದಾದರೆ ಮಧ್ಯಮ ವರ್ಗದ ಕಸುಬುಗಳು ಅದಕ್ಕಿಂತ ಸ್ವಲ್ಪ ಭಿನ್ನವಾದ ಕಸುಬು ಮತ್ತು ಗೌರವ ಹೊಂದಿದೆ. ಕೆಳವರ್ಗದ ಕಸುಬುಗಳಲ್ಲಿ ಅಧಿಕ ಶ್ರಮ ಮತ್ತು ಅಷ್ಟೇನೂ ಗೌರವ ಕೊಡದಂತಹ ಕಸುಬುಗಳಾಗಿವೆ. ಇಂತಹ ಕಸುಬುಗಳನ್ನು ಪೂರೈಸುವ ಸಮುದಾಯ ಗಳನ್ನು ಸ್ಪರ್ಶಿಸಲಿಕ್ಕೂ ಅಸಹ್ಯವ್ಯಕ್ತಪಡಿಸುತ್ತಾರೆ. ಬುಡಕಟ್ಟು ಸಮುದಾಯಗಳು ಸಂಚಾರಿ ವ್ಯಾಪಾರ, ಸಂಪ್ರಾದಾಯಿಕ ಕೃಷಿ ಗಿಡಮೂಲಿಕೆ ಇತ್ಯಾದಿಗಳನ್ನು ನಂಬಿಕೊಂಡಿದ್ದಾರೆ. ಆಹಾರ ಸಂಗ್ರಹಣದಲ್ಲಿ ಕಾಡನ್ನೆ ಅವಲಂಬಿಸಿರುವುದು ಅನಿವಾರ್ಯವು ಕೂಡ, ಹಾಗೂ ಬದುಕುವ ಪರಿಸ್ಥಿತಿಯಾಗಿದೆ. ಅಲೆಮಾರಿಗಳು ಕಾಡಿನ ಉತ್ಪನ್ನ ಜನ್ಯ ನಾಡಿಗೆ ತಂದರೆ ಮತ್ತೆ ಕೆಲವು ಅಲೆಮಾರಿಗಳು ತಮ್ಮ ಸಂಪ್ರದಾಯ ಕೌಶಲ್ಯಗಳಿಂದ ವಿವಿಧ ರೀತಿಯ ಸಾಹಸ ಅಭಿನಯ ಕಸುಬುಗಳಲ್ಲಿ ತೊಡಗಿಸಿಕೊಂಡು ಅಲೆಯುತ್ತಲಿವೆ. ಇಂತಹ ಕಸುಬುಗಳು ಕೊಡುವ ಸಂಭಾವನೆ ಮತ್ತು ಗೌರವಗಳೆ ಬೇರೆ. ಈ ರೀತಿಯ ಏಣಿ-ಶ್ರೇಣಿ ವ್ಯವಸ್ಥೆಯ ಕಸುಬುಗಳಿಗೆ ಬಹುಮುಖ್ಯ ಕಾರಣವೆಂದರೆ ಜಾತಿ ವ್ಯವಸ್ಥೆ. ಜಾತಿಯು ಮೊದಲು ವರ್ಗಗಳ ಮೂಲಕ ಕುಸುಬುಗಳನ್ನು ಸೂಚಿಸಿದರು ದಿನಕಳೆದಂತೆ ಕಸುಬಿನ ಆಧಾರದ ಮೇಲೆ ಜಾತಿಗಳನ್ನು ಗುರುತಿಸಲಾಯಿತು. ಒಂದೆ ವೃತ್ತಿಯನ್ನು ಅನುಸರಿಸುತ್ತಿರುವ ಸಮುದಾಯ ಅದೆ ವೃತ್ತಿಯಲ್ಲಿ ಮುಂದುವರಿಯಲು ಮಾನಸಿಕ ಮತ್ತು ದೈಹಿಕ ಅಣಿಮಾಡಲಾಯಿತು. ಆದ್ದರಿಂದ ಅಲೆಮಾರಿಗಳು ಇನ್ನೂ ಸಂಪ್ರಾದಾಯಿಕ ಕುಲ ಕಸುಬುಗಳನ್ನೆ ನೆಚ್ಚಿಕೊಂಡಿದ್ದಾರೆ.

ಜಾತಿ ವ್ಯವಸ್ಥೆಯು ಬೇಕಾದ ಕಡೆಯಲ್ಲಿ ಉದ್ಯೋಗದಲ್ಲಿ ಸೇರಿಕೊಳ್ಳಲು ಅವಕಾಶ ಕೊಡುವುದಿಲ್ಲ. ಅಲ್ಲಿ ಉದ್ಯೋಗಗಳನ್ನು ಅನುವಂಶಿಕವಾಗಿ ಹಂಚಲಾಗುತ್ತದೆ. ತನ್ನ ಜಾತಿಯ ಕಸುಬನ್ನು ಬಿಟ್ಟು ಬೇರೆ ಉದ್ಯೋಗವನ್ನು ಹಿಡಿಯುವುದಿಲ್ಲ. ಒಂದು ಸಮುದಾಯ ಅವಸಾನವಾದರು, ಅದನ್ನು ಜಾತಿವ್ಯವಸ್ಥೆಯಲ್ಲಿ ಶೋಧಿಸಬೇಕು. ಉದ್ಯೋಗಗಳಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಅನುಮತಿ ಕೊಡದಿರುವುದರಿಂದ ಹೆಚ್ಚಿನ ನಿರುದ್ಯೋಗವನ್ನು ಕಾಣಬಹುದಾಗಿದೆ.

ಕೆಲಸಗಳ ವಿಂಗಡಣೆ ಒಂದು ಮಾದರಿಯಾದರೆ, ಜಾತಿ ವ್ಯವಸ್ಥೆಯು ಮತ್ತೊಂದು ಕಡೆ ಗಂಭೀರ ದೋಷದಿಂದ ನರಳುತ್ತಿದೆ. ಜಾತಿವ್ಯವಸ್ಥೆಯಿಂದಾಗಿ ಕೆಲಸಗಳ ವಿಂಗಡಣೆಯು, ಆಯ್ಕೆ ಆಧಾರದ ಮೇಲೆ ರೂಪ ಹೊಂದಿಲ್ಲ. ವ್ಯಕ್ತಿಯ ಭಾವನೆಗಳಿಗಾಗಲಿ, ಅಭಿಲಾಷೆಗಳಿಗಾಗಲಿ ಅಲ್ಲಿ ಅವಕಾಶಗಳು ಇರುವುದಿಲ್ಲ. ಪೂರ್ವ ನಿರ್ಧಾರಿತ ಗುರಿಯ ತತ್ವವನ್ನು ಅದು ಅವಲಂಬಿಸಿದೆ. ಬಡತನ, ವಸತಿ ಸಮಸ್ಯೆ, ಆರೋಗ್ಯ ಸಮಸ್ಯೆ, ವೇತನ ಸರಿಯಾದ ಸಮಯದಲ್ಲಿ ಸಿಗದೆ ಇರುವುದು. ಇತ್ಯಾದಿಗಳು ಕಂಡುಬಂದರು ಇದಕ್ಕೆ ಅನ್ವಯಿಸುವುದಿಲ್ಲ. ಅನೇಕ ಜನಗಳ ಅಂತರ ಕರುಣೆಯ ಬೇಡಿಕೆಗಳು ಅಲ್ಲಿ ಕೆಲಸ ಮಾಡುತ್ತಿರುವವರನ್ನು ತಟ್ಟುವುದೆ ಇಲ್ಲ, ಎಂಬುದು ಅಲ್ಲಿನ ದೊಡ್ಡ ದೋಷವೆಂಬುದನ್ನು ನೋಡಬಹುದಾಗಿದೆ.

ಕಸುಬುಗಳನ್ನು ಯಾವ ಮಟ್ಟಿಗೆ ನಿರ್ಬಂಧಿಸಲಾಗಿತ್ತೆಂದರೆ ಒಂದು ಸಮುದಾಯ ಅಥವಾ ಜಾತಿಯ ಕಸುಬುಗಳನ್ನು ಮತ್ತೊಂದು ಜಾತಿಯವರು ಅನುಸರಿಸ ಕೂಡದು ಒಂದು ವೇಳೆ ಅನುಸರಿಸಿದರೆ ಅದಕ್ಕೆ

ಉಗ್ರಶಿಕ್ಷೆಗೆ ಒಳಗಾಗಬೇಕಿತ್ತು. ಇನ್ನೊಂದು ಅಂಶವೆಂದರೆ ಆ ಜಾತಿಯವರಿಗೆ ತಮ್ಮ ಜಾತಿಯ ಕಸುಬು ಬಿಟ್ಟು ಬೇರೆ ಜಾತಿಯ ಕಸುಬುಗಳನ್ನು ಅನುಸರಿಸಿದರೆ, ಅಪರಾಧಿಯ ಸ್ಥಾನದಲ್ಲಿ ಹಾಗೂ ದೇವರು ನೀಡಿದ ಪುಣ್ಯಕೆಲಸವು ನಿರಾಕರಿಸುವುದರಿಂದ ಪಾಪಲೋಕದ ನರಕಯಾತನೆ ಅನುಭವಿಸ ಬೇಕಾಗುತ್ತದೆಂಬ ದೈವಿಕಾಂಶಗಳಿಂದ ಬೆರೆಸಿ ಬೆದರಿಸಿ, ಸಮುದಾಯದ ಜನರು ಬೇರೆ ಜಾತಿಯ ವೃತ್ತಿಗಳನ್ನು ಕೈಗೊಳ್ಳದಂತೆ ಮಾಡಿ ತಮಗೆ ಈಗಾಗಲೆ ನಿಯೋಜಿತವಾಗಿರುವ ವೃತ್ತಿಯನ್ನೆ ಅನುಸರಿಸಿಕೊಂಡು ಬರುವಂತೆ ಮಾಡಿದೆ.

ಅಲೆಮಾರಿ ಸಮುದಾಯಗಳಂತೂ ಬೇರೆಯವರ ವೃತ್ತಿಯ ಹತ್ತಿರ ಸುಳಿದಾಡುವಂತಿರಲಿಲ್ಲ. ತಮ್ಮ ಜಾತಿಗೆ ಅಂಟಿಸಿದ ವೃತ್ತಿಯನ್ನು ಪ್ರಮಾಣಿಕತನದಿಂದ ಇಲ್ಲಿಯ ತನಕ ಕಾಪಾಡಿಕೊಂಡು ಬಂದಿದ್ದಾರೆ. ಹೀಗೆ ವೃತ್ತಿ ಆಧಾರದ ಮೇಲೆ ಜಾತಿಗಳನ್ನು ಗುರುತಿಸಲಾಯಿತು. ಅದು ಕೇವಲ ಎರಡು-ಮೂರು ಸಮುದಾಯಗಳು ಅನುಸರಿಸುವ ಕಸುಬಿನ ಆಧಾರದ ಮೇಲೆ ಜಾತಿ ಹೆಸರನ್ನು ಕರೆಯಲಾಯಿತು. ಅದರಿಂದ ಅಲೆಮಾರಿಗಳನ್ನು ಗುರುತಿಸಲಾಗುತ್ತಿದೆ. ಹೊಟ್ಟೆಪಾಡಿಗಾಗಿ ವಿವಿಧ ರೀತಿಯ ವೃತ್ತಿಗಳನ್ನು ಮಾಡುವುದರಿಂದ ಜಾತಿಯನ್ನು ಗುರುತಿಸಲಾಯಿತು.

೧. ಹಗಲು ಹೊತ್ತಿನಲ್ಲಿ ವಿವಿಧ ವೇಷಗಳನ್ನು ಹಾಕಿಕೊಂಡು ಅಭಿನಯಿಸಿದ್ದರಿಂದ ಹಗಲುವೇಷಗಾರರು ಎಂದು ಕರೆದರು.

೨. ಹಗಲುವೇಷ ಪ್ರದರ್ಶಿಸುವ ಸಮುದಾಯವೆ ಇನ್ನೊಂದು ವೃತ್ತಿಯಾದ ಬುಡ್ಗ ಹಿಡಿದು ಹಾಡುವುದರಿಂದ ಬುಡ್ಗಜಂಗಮ್ ಎಂದು ಕರೆಯಲಾಯಿತು.

೩. ಗುಮಟೆ ಹಿಡಿದು ಹಾಡಿದ್ದರಿಂದ ಬುರ್ರಕಥೆಯವರೆಂದು.

೪. ಬೊಂಬನ್ನು ಉಪಯೋಗಿಸಿ ಕಸರತ್ತುಗಳ ಹಾಗೂ ಪ್ರದರ್ಶನ ಮಾಡಿದ್ದಕ್ಕೆ ಡೊಂಬರೆಂದು ಕರೆದರು.

೫. ತೊಗಲುಗೊಂಬೆಗಳನ್ನು ಆಟವಾಡಿಸುವ ಸಮುದಾಯವನ್ನು ತೊಗಲುಗೊಂಬೆಯವರೆಂದು ಮತ್ತು ಗೊಂಬೆ ರಾಮರೆಂದರು.

೬. ಎತ್ತುಗಳನ್ನು ಹಿಡಿದುಕೊಂಡು ಆಟವಾಡಿಸುತ್ತಿದ್ದವರಿಗೆ ಕವಲೆತ್ತಿನವರೆಂದು ಕರೆದರು.

೭. ಹಾವುಗಳನ್ನು ಆಡಿಸುವವರನ್ನು ಹಾವಾಡಿಗರೆಂದು

೮. ವಂಶಾವಳಿ ಅಥವಾ ಮನುಷ್ಯನ ಮನೆತನವನ್ನು ಹೇಳುವವರನ್ನು ಹೆಳವರೆಂದು

೯. ದುರುಗಮ್ಮ ಹಾಗೂ ಮಾರಮ್ಮದೇವಿಯನ್ನು ಬುಟ್ಟಿಯಲ್ಲಿ ಹಾಗೂ ಪೆಟ್ಟಿಗೆಯಲ್ಲಿ ಹೊತ್ತಕೊಂಡು ಬುರ್ರಬುರ್ರ ವಾದ್ಯದೊಂದಿಗೆ ವೇಷಹಾಕಿ ಭಿಕ್ಷೆಬೇಡುತ್ತಿದ್ದವರನ್ನು ಸಿಂಧೋಳ್ಳರೆಂದು ಕರೆಯಲಾಯಿತು.

೧೦. ಕಬ್ಬಿಣದ ಆಯುಧಗಳನ್ನು ಹೊಳಪು ಬರುವಂತೆ ಮಾಡುತ್ತಿದವರನ್ನು ಸಿಕ್ಕಾಲಿಗರೆಂದು ಕರೆದರು.

೧೧. ಹಂದಿಗಳನ್ನು ಸಾಕುವವರನ್ನು ಹಂದಿಜೋಗಿಗಳೆಂದು ಕರೆದರು.

೧೨. ಮೋಡಿ ಆಟವನ್ನು ಮಾಡುವವರನ್ನು ಮೋಡಿಕಾರರೆಂದು ಪರಿಗಣಿಸಿದರು.

೧೩. ಹಕ್ಕಿಗಳನ್ನು ಹಿಡಿದು ಮಾರಾಟಮಾಡುವವರನ್ನು ಹಕ್ಕಿಪಿಕ್ಕಿಗಳೆಂದು ಕರೆಯಲಾಯಿತು.

೧೪. ಸುಡುಗಾಡಿನಲ್ಲಿ ವಾಸವಿದ್ದು ಕಾವಲು ಕಾಯುತ್ತಿದ್ದವರನ್ನು ಸುಡುಗಾಡುಸಿದ್ಧರೆಂದು ಕರೆದರು.

೧೫. ಬೈಲಿನಲ್ಲಿ ಪತ್ತಾರಿಕೆ ಕೆಲಸ ಮಾಡುವವರನ್ನು ಬೈಲುಪತ್ತಾರರೆಂದು ಕರೆಯಲಾಯಿತು.

೧೬. ಬಯಲಿನಲ್ಲಿ ಪಾತ್ರೆಗಳಿಗೆ ಕಲಾಯಿ ಮಾಡುವವರನ್ನು ಕಲಾಯಿವಾಲಗಳೆಂದು ಗುರುತಿಸಲಾಯಿತು.

೧೭. ದುಂಬಿಯಂತೆ ಹಾಡುವವರನ್ನು ದೊಂಬಿದಾಸರೆಂದು ಕರೆದರು.

೧೮. ಗೊಂದಳಿ ನುಡಿಸುವವರನ್ನು ಗೊಂದಲಿಗರೆಂದು ಕರೆದರು.

೧೯. ಭವಿಷ್ಯ ಅಥವಾ ಹೇಳುವವರನ್ನು ಕಣಿಹೇಳುವವರು ಇಲ್ಲವೆ ಕೊರವಂಜಿಯೆಂದು ಕರೆಯಲಾಯಿತು.

೨೦. ಶಿಳ್ಳೆಮೀನು ಹಿಡಿಯುತ್ತಿದ್ದವರಿಗೆ ಶಿಳ್ಳೆಕ್ಯಾತರೆಂದು ಕರೆಯಲಾಯಿತು.

೨೧. ಕೀಟಲೆಯನ್ನು ಮಾಡುತ್ತಿದವರಿಗೆ ಕಿಳ್ಳೆಕ್ಯಾತರೆಂದು ಕರೆದರು.

ಹೀಗೆ ಹಲವಾರು ಸಮುದಾಯಗಳನ್ನು ಅವರ ದೈನಂದಿನ ಕಸುಬುಗಳಿಂದ ಗುರುತಿಸುವಂತಾಗಿದೆ. ಇದರಿಂದ "ಕಸುಬು ಬಿಟ್ಟು ಜಾತಿಯಿಲ್ಲ; ಜಾತಿ ಬಿಟ್ಟು ಕಸುಬುಗಳು ಇಲ್ಲ" ಎಂಬಂತೆ ಎರಡು ಜೀವನದಲ್ಲಿ ಅವಶ್ಯಕವಾಗಿಬೇಕೆಂದು ಸಂಧಾನಗೊಂಡಿವೆ. ಆಧುನಿಕದ ಮುಖ್ಯವಾಹಿನಿಯತ್ತ ನಡೆಯಲು ಈ ಸಮುದಾಯಗಳು ಇಂದಿಗೂ ಆಗುತ್ತಿಲ್ಲ.

ಆಹಾರ ಮತ್ತು ಜಾತಿ

ಮಾನವ ಮತ್ತು ಆಹಾರಕ್ಕೂ ನಿಕಟವಾದ ಸಂಬಂಧವಿದೆ. ಒಂದು ಜೀವಿ ಬದುಕಬೇಕೆಂದರೆ ಆಹಾರ, ಗಾಳಿ, ನೀರು, ವಸತಿ ಅತಿ ಅವಶ್ಯಕವಾಗಿದೆ. ಇದರಲ್ಲಿ ಒಂದಿಲ್ಲದಿದ್ದರು ಬದುಕುವುದು ಸಾಧ್ಯವಿಲ್ಲ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲದೆ, ಪ್ರಕೃತಿಯಲ್ಲಿ ಹುಟ್ಟಿರುವ ಪ್ರತಿಯೊಂದು ಜೀವಿಗೂ ಅತ್ಯವಶ್ಯಕವಾಗಿ ಬೇಕಾಗಿದೆ. ಆದರೆ ಪಡೆಯುವ ವಿಧಾನ, ಮಾರ್ಗಗಳು ಬೇರೆ. ಆದರೂ ಆಹಾರ ದೊರಕಿಸಕೊಳ್ಳಬೇಕಾಗಿದೆ. ಆಹಾರ ಪಡೆಯುವ ಕ್ರಮದಲ್ಲಿ ಮಾನವನು ಉಳಿದೆಲ್ಲಾ ಜೀವಿಗಳಿಗಿಂತ ಭಿನ್ನವಾಗಿದ್ದಾನೆ.

ಆಹಾರವು ಸಾಮಾಜಿಕ ಜೀವನದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ? ಹಾಗೂ ಬದುಕನ್ನು ಸಮೃದ್ಧಿಗೊಳಿಸಿದೆ? ಎಂಬುದನ್ನು ತಿಳಿಯುವುದಾಗಿದೆ. ಮಾನವ ವಿಕಾಸಗೊಂಡಂತೆ ಆಹಾರದ ಸ್ಪರ್ಧೆ-ಘರ್ಷಣೆಗಳಿಗೆ ಇಳಿದದ್ದು, ಆಹಾರಕ್ಕಾಗಿ ಪರದಾಟವನ್ನು ಇಂದಿನ ದಿನಗಳಲ್ಲಿ ನಡೆಸುತ್ತಿದ್ದಾನೆ. ಈ ಹಿಂದೆ ಆಹಾರದ ಕ್ರಮದ ಮೇಲೆ ನಿರ್ಬಂಧಗಳು ಇದ್ದವು ಅಂದರೆ ಆಹಾರ ಪಡೆಯುವ ಬಗೆ, ಆಹಾರದ ಪ್ರಕಾರ, ಆಹಾರ ಸಂಗ್ರಹಣೆ ಇತ್ಯಾದಿಗಳೆಲ್ಲವು ಜಾತಿ ಹೆಸರಿನಲ್ಲಿ ವರ್ಗೀಕರಿಸಲಾಗಿದೆ. ಈ ಹಿಂದೆ ಯಾವ ಜಾತಿಯ ಜನರು ಯಾವ ರೀತಿಯ ಆಹಾರ ಸೇವಿಸಬೇಕು ಮತ್ತು ಯಾವ ರೀತಿಯ ಆಹಾರವನ್ನು ಸೇವಿಸಬಾರದು ಎಂಬುದರ ಕುರಿತು ನಿರ್ದಿಷ್ಟ ನಿಯಮ-ವಂತನೆಗಳಿದ್ದವು. ಕೆಳಜಾತಿಯವರ

ಆಹಾರವನ್ನು ಮೇಲ್ಜಾತಿಯವರು ಉಪಯೋಗಿಸುಬಾರದು ಎಂಬ ಜಾತಿಯ ವಿಷ ಬೀಜಬಿತ್ತಿದ ಪರಿಣಾಮ ಆಹಾರದಿಂದ ಜಾತಿಯನ್ನು ವರ್ಗೀಕರಿಸಲಾಯಿತು.

ಅಂದಿನ ಸಂದರ್ಭದಲ್ಲಿ ಆಹಾರವನ್ನು ಎರಡು ರೀತಿಯಲ್ಲಿ ವಿಂಗಡಿಸಿದ್ದಾರೆ ಒಂದನೆಯದು ಪಕ್ಕಾ ಆಹಾರ ಎರಡನೆಯದು ಕಚ್ಚಾ ಆಹಾರ. ಮೇಲ್ಜಾತಿಯವರು ಪಕ್ಕಾ ಆಹಾರವನ್ನು ಸೇವಿಸಿದರೆ, ಕೆಳ ಜಾತಿಯವರು ಕಚ್ಚಾ ಆಹಾರವನ್ನು ಸೇವಿಸುವರಾಗಿದ್ದರು. ಯಾವುದೆ ಕಾರಣಕ್ಕೂ ಕೆಳ ಜಾತಿಯವರು ಪಕ್ಕಾ ಆಹಾರವು ಸೇವಿಸಕೂಡದು ಒಂದು ವೇಳೆ ಸೇವಿಸಿದರೆ ಉಗ್ರಶಿಕ್ಷೆಗೆ ಗುರಿಯಾಗುತ್ತಿದ್ದರು. ಸೇವೆಗೆ ಪ್ರತಿಯಾಗಿ ನೀರಿನಿಂದ ತಯಾರಿಸಿದ ಕಚ್ಚಾ ಆಹಾರವನ್ನು ಭಿಕ್ಷೆಯ ಮೂಲಕ ಅಥವಾ ದಯಾನಿಯ ಸ್ಥಿತಿಯಲ್ಲಿ ಬೇಡಿಕೊಂಡು, ಸ್ವೀಕರಿಸುತ್ತಿದ್ದರು. ಕೆಳಜಾತಿಯವರು ಪಕ್ಕಾ ಆಹಾರವನ್ನು ಸೇವನೆ ಮಾಡಬಹುದೆಂಬ ಕಾರಣಕ್ಕಾಗಿ ಆ ಸಮುದಾಯದವರಲ್ಲಿ ತುಪ್ಪ, ಹಾಲು ಕೊಡುವ ಹಸುಗಳನ್ನು ಕೆಲವರಿಗೆ ಧಾನ ಮಾಡಬೇಕೆಂದು ನಿಯಮ ಇದ್ದಂತೆ. ಕೆಳ ಜಾತಿಯವರು ಹಸುವಿನ ಹಾಲು, ತುಪ್ಪ ಸೇವಿಸಿದರೆ ಶಾಪಕ್ಕೆ ಗುರಿಯಾಗುತ್ತಾರೆ ಎಂಬ ಮನೋಭಾವನೆಗಳನ್ನು ಬೆಳೆಸಿದ್ದರಿಂದ, ಆಸ್ತಿಪಾಸ್ತಿಯನ್ನು ದಾನಮಾಡಿ ಅವರ ಸೇವೆಯಲ್ಲಿ ಮುಂದುವರಿದು ಮುಕ್ತಿ ಕಾಣಬೇಕೆಂದು ಜಾರಿಗೆ ತಂದರು. ಕೆಲವೊಂದು ಕಡ್ಡಾಯ ನಿಯಮಗಳ ನಿಷೇಧಗಳನ್ನು ಮಾಡಿದ್ದರು. ಈ ರೀತಿಯ ನಿಯಮಗಳಿಗೆ ಬದ್ಧರಾದ ಕೆಳ ಜಾತಿ ಸಮುದಾಯಗಳು ಪಕ್ಕಾ ಆಹಾರ ಮತ್ತು ಆಸ್ತಿಗಳನ್ನು ದಾನಮಾಡಿರುವುದುಂಟು. ಆಹಾರಕ್ಕಾಗಿ ಜೀತದಾಳುಗಳಾಗಿ ದುಡಿಯಲು ಅರ್ಪಿಸಿಕೊಂಡರು. ಅಲೆಮಾರಿ ಸಮುದಾಯಗಳಂತೂ ಜಾತಿಯ ಆರ್ಭಟದಲ್ಲಿ ಬಲಿಯಾಯಿತು. ನೆಲೆಯಿಲ್ಲದೆ ಪಾರಂಪಾರಿಕ ವೃತ್ತಿಯನ್ನು ನೆಚ್ಚಿಕೊಂಡು ಬೇರೆಯವರ ಸುಖಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆದರು. ಆಹಾರಕ್ಕಾಗಿ ಪರದಾಡಿದರು. ಭಿಕ್ಷಾಟನೆ ವೃತ್ತಿಗಳಿಗಾಗಿ ತಮ್ಮ ಜೀವನವನ್ನೆ ಮುಡುಪಾಗಿಟ್ಟುಕೊಂಡರು. ಹೀಗೆ ಅನೇಕ ಘೋರ ಸಮಸ್ಯೆಗಳಿಂದ ಅಂದಿನ ಸ್ಥಿತಿಯಿಂದ ಇಂದಿನವರೆಗೂ ಅಲೆಮಾರಿಗಳಾಗಿ ಅಲೆದಾಡುತ್ತಲಿದ್ದಾರೆ.

ಕೆಳ ಜಾತಿ ಸಮುದಾಯಗಳು ಉಳ್ಳವರ ದನಗಳ ಮಾಂಸಕ್ಕಾಗಿ, ಹಳಸಿದ ಅನ್ನಕ್ಕಾಗಿ ಕಾಯ್ದು ಕುಳಿತಿರಬೇಕು. ಆದರೆ ಅಲೆಮಾರಿಗಳು ತಮಗೆ ಎಲ್ಲಿ ಆಹಾರ ದೊರೆಯುತ್ತದೆಂದು ತಿಳಿದುಕೊಂಡು ಅಂತಹ ಸ್ಥಳಗಳಲ್ಲಿ ಕುಟುಂಬಗಳನ್ನು ಕರೆದುಕೊಂಡು ಬೀಡಾರಗಳನ್ನು ಹೂಡಿ ಬೇಟೆಯಾಡಿದ ಆಹಾರ ವನ್ನು ಪಡೆಯುತ್ತಿದ್ದಾರೆ. ಇಂದಿನ ಆಧುನಿಕತೆಯಲ್ಲಿಯೂ ಇವರಿಗೆ ಪಕ್ಕಾ ಆಹಾರ ದಕ್ಕದ ಸ್ಥಿತಿಯೂ ಇವರಾದಾಗಿದೆ. ಒಂದೊತ್ತಿನ ಊಟಕ್ಕಾಗಿ ಅಲೆದಾಡುವ ಇವರಿಗೆ ಪಕ್ಕಾ ಆಹಾರವಾದರು ಎಲ್ಲಿಂದ ಬರಬೇಕು?

ಆಹಾರದ ವರ್ಗೀಕರಣದ ಪ್ರಯುಕ್ತ ಜಾತಿಗಳು ಗುರುತಿಸಲ್ಪಟ್ಟಿರಬೇಕು. ಮೇಲು ಜಾತಿಯ ಸಮುದಾಯ ತಿನ್ನುವ ಆಹಾರವನ್ನು ಕೆಳ ಜಾತಿ ಸಮುದಾಯ ತಿನ್ನುವಂತೆ ಇರಲಿಲ್ಲ. ಪರಿಣಾಮ ಹೊಟ್ಟೆಗೆ ಹಿಟ್ಟನ್ನು ಕಾಣದೆ, ಪ್ರಾಣಿಗಳ ಮಾಂಸವನ್ನೆ ಸ್ವೀಕರಿಸುವ ದುಸ್ಥಿತಿಯು ಸೃಷ್ಟಿಯಾಗಿರಬೇಕು. ಇಂತಹ ವಾತವರಣದಲ್ಲಿ ಕೆಳ ಜಾತಿ ಸಮುದಾಯದವರನ್ನು ಅವರ ಆಹಾರ ಕ್ರಮದಿಂದಾಗಿ ಅಸ್ಪೃಶ್ಯರು,


ಕೆಳವರ್ಗದವರು, ಶೋಷಿತರು ಇತ್ಯಾದಿಗಳಂತೆ ಸೃಷ್ಟಿಸಲಾಯಿತು ಹಾಗೂ ದೂರೀಕರಿಸಲಾಯಿತು. ಈ ರೀತಿಯ ಆಹಾರವನ್ನು ಸೇವಿಸುವ ಸಮುದಾಯಗಳನ್ನು ಹೊರವಲಯಗಳಲ್ಲಿ ವಾಸಿಸುವ ವ್ಯವಸ್ಥೆಗಳನ್ನು ನಿರ್ಮಾಣ ಮಾಡಲಾಯಿತು. ಇದರಿಂದ ದಲಿತರು ಮತ್ತು ಅಲೆಮಾರಿಗಳು ಹೊರವಲಯದಲ್ಲಿ ಬೀಡುಬಿಟ್ಟಿರುವುದು ಇಂದಿಗೂ ಕಾಣಬಹುದಾಗಿದೆ. ಆಹಾರದ ವರ್ಗೀಕರಣದಿಂದ ಭಿನ್ನ ಸಮುದಾಯಗಳೂ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಾರೆ. ಊರಿನ ಪ್ರಮುಖ ಬೀದಿಯಲ್ಲಿ ಮೇಲ್ವರ್ಗ ಅದರ ಹಿಂದೆ ಮಧ್ಯಮ ವರ್ಗ ಕೊನೆಯಲ್ಲಿ ಕೆಳವರ್ಗ ಇವರ ಹಿಂದೆ ಅಲೆಮಾರಿಗಳು ವಾಸಿಸುವುದನ್ನು ನೋಡಬಹುದು. ಒಂದು ಗ್ರಾಮದಲ್ಲಿ ಪ್ರವೇಶ ಮಾಡಿದಾಗ ಅಲ್ಲಿಯ ವಾತವರಣವೆ ನಮ್ಮನ್ನು ಜಾತಿ ವರ್ಗಗಳನ್ನು ಪರಿಚಯಿಸುತ್ತದೆ. ದುರ್ವಾಸನೆ, ಗುಡಿಸಲುಗಳು, ಗಲಾಟೆ, ಬೆಳಕು ರಹಿತವಾತವರಣ ಕಂಡುಬಂದರೆ ಅಲ್ಲಿ ಕೆಳ ಜಾತಿ ಸಮುದಾಯಗಳು ಅಥವಾ ಅಲೆಮಾರಿಗಳು ವಾಸಿಸುವ ಪ್ರದೇಶ ಎಂದು ತಿಳಿದುಬರುವುದು. ಕೆಳವರ್ಗ ಇಲ್ಲವೆ ಅಲೆಮಾರಿಗಳು ದನದ ಮಾಂಸವನ್ನು ಕತ್ತರಿಸುತ್ತಿರುವುದು, ದನದಮೂಳೆಗಳ ರಾಶಿ ಯನ್ನು ಸಂಗ್ರಹಿಸುವುದು. ಹಾಗೂ ಅವರ ವಾಸಿಸುವ ದುರ್ನಾತದಿಂದ ಕೂಡಿರುವ ಕೊಳಚೆಪ್ರದೇಶ ವಾಗಿರುತ್ತದೆ. ಮಾಂಸವನ್ನು ಒಣಗಿಸಿಕೊಂಡು ಸಂದರ್ಭಬಂದಾಗ ಅಥವಾ ಆಹಾರ ದೊರೆಯದಿದ್ದಾಗ ಉಪಯೋಗಿಸುವ ಉದ್ದೇಶದಿಂದ ಮಾಂಸವನ್ನು ಬೇಯಿಸಿಕೊಂಡು ತಿನ್ನುವರು. ಅಲೆಮಾರಿಗಳು ಮೀನುಗಳನ್ನು ಹೆಚ್ಚು ಸೇವಿಸುವ ಸಮುದಾಯವಾಗಿದ್ದು. ವಾಸದ ಪ್ರದೇಶ ದುರ್ವಾಸನೆಯಿಂದ ಕೂಡಿರುತ್ತದೆ. ಅಲೆಮಾರಿಗಳು ಮತ್ತು ಕೆಳ ಜಾತಿ ಸಮುದಾಯದವರು ಒಳ್ಳೆಯ ಆಹಾರಸೇವಿಸಲು ಹಾತೋರೆಯುತ್ತಿದ್ದರು. ಪರಿಸರದ ವಾತವರಣ ಅವರನ್ನು ಬೇಡಿಕೊಂಡೆ ಬೇರೆಯವರ ಆಹಾರಕ್ಕಾಗಿ ಕಾಯ್ದು ಕುಳಿತುಕೊಳ್ಳುವ ಸ್ಥಿತಿ ಇವರದಾಗಿದೆ.

ಅಲೆಮಾರಿ ಸಮುದಾಯಗಳು ಬೇಟೆ ಆಹಾರವನ್ನು ನಿರಂತರವಾಗಿ ಸ್ವೀಕರಿಸಿಕೊಳ್ಳುವುದರಿಂದ ಬೇಟೆಯಲ್ಲಿ ತೊಡಗುವರು. ಬೇಟೆಯ ಸಂದರ್ಭದಲ್ಲಿ ಇವರನ್ನು ಅಲೆಮಾರಿ ಸಮುದಾಯವೆಂದು ಗುರುತಿಸಬಹುದು. ಕಾರಣ ಕೆಳ ಜಾತಿ ಸಮುದಾಯವು ದಿನಾಲು ಪರಿಚಿತವಿರುವುದರಿಂದ ಹೊಸದಾಗಿ ಬೇಟೆಯಾಡುತ್ತಿದ್ದಾರೆಂದು ಗೊತ್ತಾದ ತಕ್ಷಣ ಅವರು ಅಲೆಮಾರಿಗಳಾಗಿರುತ್ತಾರೆ. ಹೀಗೆ ಆಹಾರವು ಒಂದು ಜಾತಿಯೊಳಗೆ ಜೀವಂತವಾಗಿದ್ದುಕೊಂಡು, ಆರ್ಥಿಕ ಸ್ಥಿತಿಗತಿಯನ್ನು ಪರಿಚಯಿಸುವ ಪ್ರಮುಖ ಭೂಮಿಕೆಯಾಗಿದೆ. ಆಹಾರದಿಂದಲೆ ವರ್ಗೀಕರಣ ಸೃಷ್ಟಿಸಿದ್ದರಿಂದ ಉಳ್ಳವರು ಉಪಯೋಗಿಸುವ ಆಹಾರವನ್ನು ಇಂದಿಗೂ ಕೆಲವು ಸಮುದಾಯಗಳಿಗೆ ಪಡೆಯಲಾಗುತ್ತಿಲ್ಲ.

ಅಲೆಮಾರಿಗಳು ಸ್ವೀಕರಿಸುವ ಆಹಾರ ಕ್ರಮದಲ್ಲಿ ಅವರ ಉಪಯೋಗಿಸುವ ಪರಿಕರಗಳು ಸ್ಥಿತಿಯನ್ನು ಬಿಂಬಿಸುತ್ತವೆ. ಮುಂಜಾನೆ ಹೋಟೆಲ್‌ನಲ್ಲಿ ತಿಂಡಿ ಹಾಗೂ ಚಹಾ ಸೇವನೆ. ಸಾಯಂಕಾಲ ಚಾಹ ತಿಂಡಿ ಸ್ವೀಕರಿಸುವರು. ಇದು ಅವರಲ್ಲಿ ಹಣವಿದ್ದಾಗ ಮಾತ್ರ ಹೋಟೆಲ್‌ನಲ್ಲಿ ಹೋಗುವುದು, ಇಲ್ಲದಿದ್ದರೆ ತಮ್ಮ ಗುಡಾರಗಳಲ್ಲಿ ಇರುವುದುಂಟು. ಊಟಕ್ಕಾಗಿ ಭಿಕ್ಷೆಗೆ ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಅವರು "ಅಮ್ಮವರೆ ನಾವು ಕೂಗಮ್ಮನ ಆಡಿಸುವರು ಬಂದಿದ್ದೇನೆ ಏನಾದರೂ ಊಟ ಇದ್ದರೆ ನೀಡಿರಿ"

ಎಂದು ಊಟಕ್ಕಾಗಿ ಅಂಗಲಾಚುಸುತ್ತಾರೆ. ಆ ಸಮಯದಲ್ಲಿ ತಾಯಿ ರಾತ್ರಿಯಲ್ಲಿ ಏನಾದರೂ ಉಳಿದ ತಂಗಳನ್ನ, ಸಾರು, ಮುದ್ದೆ, ರೊಟ್ಟಿ ಇತ್ಯಾದಿಗಳನ್ನು ಭಿಕ್ಷಾಟನೆಯಲ್ಲಿ ಬೇಡುವರು. ಹಿಟ್ಟಿನ ಗಿರಣಿಗಳಲ್ಲಿ ಕೆಳಗೆ ಬಿದ್ದಿರುವ ಹಿಟ್ಟನ್ನು ಬೇಡಿ ಸೇವಿಸುವರು. ವಾರದ ಸಂತೆಗಳಲ್ಲಿ ಕೊನೆಯಲ್ಲಿ ಉಳಿದ ತರಕಾರಿಗಳನ್ನು ಬೇಡುವರು ಅಥವಾ ಕೆಳಗೆಬಿದ್ದ ತರಕಾರಿಗಳನ್ನು ಸಂಗ್ರಹಿಸಿ, ಕೊಳೆತ ಸೊಪ್ಪುಗಳನ್ನು ಪಡೆಯುವರು. ಭಿಕ್ಷೆಯಲ್ಲಿ ಬಂದ ಕಾಳುಗಳನ್ನು ಗಿರಣಿಗೆ ಹಾಕಿಸಿ, ರೊಟ್ಟಿ ಅಥವಾ ಮುದ್ದೆಯನ್ನು ಮಾಡುವುದುಂಟು.

ಅಲೆಮಾರಿಗಳ ಆಹಾರ



ಆಹಾರವನ್ನು ತಯಾರು ಮಾಡಿಕೊಂಡು ಏಕೆ ತಿನ್ನುವುದಿಲ್ಲ? ಎಂದು ಪ್ರಶ್ನೆಗಳನ್ನು ಅಲೆಮಾರಿಗಳಲ್ಲಿ ಕೇಳಿದರೆ ಕೊಡುವ ಉತ್ತರವೆಂದರೆ ಆಹಾರ ತಯಾರಿಸಲು ನಮ್ಮ ಬಳಿ ಆಹಾರದ ತಿನಿಸುಗಳೂ ಇಲ್ಲದಿರುವುದು. ಅದನ್ನು ಅಂಗಡಿಯಿಂದ ತಂದು ಮಾಡಲು ಆರ್ಥಿಕ ಶಕ್ತಿ ಇಲ್ಲದಿರುವುದು. ಅಲ್ಪ-ಸ್ವಲ್ಪ ಹಣಕೊಟ್ಟು, ಹೋಟೆಲ್‌ಗಳಲ್ಲಿ ತಿನ್ನುತ್ತೇವೆ. ಕಾಡುಗಳಲ್ಲಿ ಇರಬಹುದಾದ ಜೇನು, ಹಣ್ಣು, ಕಾಯಿ, ಗಡ್ಡೆಗಳು, ಸೊಪ್ಪು ಇತ್ಯಾದಿಗಳನ್ನು ಬೇಯಿಸಿಕೊಂಡು ಸೇವಿಸುತ್ತೇವೆ. ವಾರದ ಸಂತೆಗಳಲ್ಲಿ ಕೆಟ್ಟುಹೊದ ತರಕಾರಿಗಳನ್ನು ಸಂಗ್ರಹಿಸುತ್ತೇವೆ. ದೊಡ್ಡ ನಗರಗಳಲ್ಲಿ ಮಕ್ಕಳನ್ನು ಭಿಕ್ಷೆಗಾಗಿ ಕಳುಹಿಸಿ ಆಹಾರವನ್ನು ಬೇಡಿ ತಿನ್ನತ್ತೇವೆ. ಮದುವೆ ಮನೆ, ಮಂಟಪಗಳಲ್ಲಿ ಹೊರ ಹಾಕುವ ಊಟದ ಎಲೆಗಳ ಆಹಾರವನ್ನು ಆಯ್ದುಕೊಂಡು ತಿನ್ನುತ್ತೇವೆ.



ಉಡುಪು ಮತ್ತು ಜಾತಿ

ಸಮಯ ಸಮಯಕ್ಕೆ ಸರಿಯಾಗಿ ಹೇಗೆ ಆಹಾರ ಬೇಕೊ ಹಾಗೆಯೆ, ಶರೀರ ಮುಚ್ಚಿಕೊಳ್ಳಲು ಉಡುಪು ಕಡ್ಡಾಯವಾಗಿಬೇಕಾಗಿದೆ. ಉಡುಪುಗಳು ದೇಹಕ್ಕೆ ರಕ್ಷಣೆ ಕೊಡುವುದರ ಜೊತೆಗೆ ಮಾನ ಮುಚ್ಚಲು ಅತ್ಯಂತ ಅವಶ್ಯಕ. ಉಡುಪುಗಳ್ನು ಸಮಾಜದ ಎಲ್ಲಾ ಸಮುದಾಯಗಳು ಒಂದಲ್ಲ ಒಂದು ರೀತಿಯಯಾಗಿ ಧರಿಸಿಕೊಳ್ಳುವರು. ಒಬ್ಬರು ದೇಹಪೂರ್ಣ ಧರಿಸಿದರೆ, ಮತ್ತೊಬ್ಬರು ಅರೆಬೆತ್ತಲೆಯ ವಸ್ತ್ರಗಳನ್ನು ಧರಿಸುವರು. ಭೌಗೋಳಿಕ ಪರಿಸರದ ತಕ್ಕಂತೆ, ಜನ ಉಡುಪುಗಳನ್ನು ಧರಿಸುತ್ತಾ ಬಂದಿದ್ದಾರೆ. ಅವುಗಳ ತಯಾರಿಕೆಯಲ್ಲಿ ಭೌಗೋಳಿಕ ಪರಿಸರ ಕೇಂದ್ರಬಿಂದುವಾಗಿದೆ. ಶೀತವಲಯ, ಉಷ್ಣವಲಯದ ಹವಾಗುಣದ ತಕ್ಕಂತೆ ಉಡುಗೆಗಳನ್ನು ತಯಾರಿಸಿಕೊಳ್ಳುವರು. ಚಳಿಯಲ್ಲಿ ಒಂದು ರೀತಿಯ ಉಡುಗೆ ಬೇಸಿಗೆಯಲ್ಲಿ ಒಂದು ರೀತಿಯ ಉಡುಗೆಯಾದರೆ, ಮಳೆಗಾಲದಲ್ಲಿ ಬೇರೆ ಉಡುಗೆ ಕಂಡುಬರುವುದುಂಟು. ಹಬ್ಬಗಳಲ್ಲಿ, ಮದುವೆಗಳಲ್ಲಿ, ಸಭೆ-ಸಮಾರಂಭಗಳಲ್ಲಿ, ವೃತ್ತಿಗಳಿಗೆ ಹೋಗುವ ಸಂದರ್ಭದಲ್ಲಿ ಧರಿಸುವ ಉಡುಗೆಗಳು ಬೇರೆ ರೀತಿಯಲ್ಲಿ ಬೇರೆ ಇರುತ್ತವೆ.

ಉಡುಗೆಗಳು ಸಮಯ ಸಂದರ್ಭಕ್ಕೆ ತಕ್ಕಂತೆ ವಾತವರಣಗಳಿಗೆ ಹೊಂದಿಕೊಂಡಂತೆ ಹಾಗೂ ಘನತೆ, ಗೌರವ, ಪದವಿಗಳನ್ನು ಸೂಚಿಸುವ ನಿದರ್ಶನವಾಗಿರುತ್ತದೆ. ಪೂಜಾರಿ, ಪೋಲಿಸ್, ಕಂಡಕ್ಟರ್, ಡ್ರೈವರ್, ಸೈನಿಕ, ನೌಕಪಡೆ, ಶಾಲಾ-ಕಾಲೇಜು, ಸಾಧುಸಂತರು ಧರಿಸುವ ಉಡುಗೆಗಳನ್ನು ಅವರ ಪ್ರತಿಬಿಂಬವನ್ನು ಗುರುತಿಸುವೆ. ಇದು ಪದವಿ ಅಥವಾ ಜನಸಮುದಾಯಗಳನ್ನಷ್ಟೆ ಸೂಚಿಸುವುದಲ್ಲದೆ, ಆ ಉಡುಗೆಯು ಸಮುದಾಯದ ಘನತೆ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬದುಕುಗಳನ್ನು ಪ್ರತಿಬಿಂಬಿಸುತ್ತದೆ.


ಉಡುಗೆಗಳು ಶ್ರೀಮಂತ ಮತ್ತು ಬಡವರನ್ನು ವರ್ಗೀಕರಿಸುವ ಮಾನದಂಡವೂ ಹೌದು. ಶುಭ್ರವಾದ, ಬೆಲೆಬಾಳುವ ಉಡುಗೆಗಳು ಶ್ರೀಮಂತರು ಅಥವಾ ಉಳ್ಳವರು ಧರಿಸಿದರೆ, ಸಮಾಜದಲ್ಲಿ ಕೆಳಹಂತದಲ್ಲಿರುವ ದಲಿತರ, ತಳಸಮುದಾಯಗಳಲ್ಲಿ ವಾಸಿಸುವವರು. ಕನಿಷ್ಠ ಉಡುಪುಗಳಾದ ಹರಿದ ಅಂಗಿ, ಲುಂಗಿ, ಸೀರೆ, ಕುಪ್ಪಸ ಇತ್ಯಾದಿ ಬಣ್ಣ-ಬಣ್ಣದ ತೇಪ್ಪೆಗಳು ಹಾಕಿದ ಉಡುಪು ಧರಿಸಿಕೊಳ್ಳುತ್ತಾರೆ. ನೋಡಿದ ಮರುಕ್ಷಣವೆ ಉಡುಪುಗಳಿಂದ ಸಮುದಾಯದ ಸ್ಥಿತಿ-ಗತಿ ತಿಳಿಯಬಹುದಾಗಿದೆ. ಈ ರೀತಿಯ ವರ್ಗೀಕರಣವು ವೈಯಕ್ತಿಕವಾಗಿ ಆ ಸಮುದಾಯಗಳು ಆಯ್ಕೆ ಮಾಡಿಕೊಂಡಿರಲಾರದು, ಡಾ. ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಬರಹಗಳಲ್ಲಿ ತಿಳಿಸಿರುವಂತೆ ಅಂದಿನ ಸಂದರ್ಭದ ಉಡುಪಿನ ಸ್ಥಿತಿ ಎಂತಹದಿತ್ತು ಎಂಬುದನ್ನು ನೋಡಬಹುದಾಗಿದೆ. "ತಳಸಮುದಾಯದವರು ಚಿನ್ನದ ಜಡಿಯಂಚಿನ ಪಗಡಿಗಳನ್ನು ಧರಿಸಕೂಡದು ಬಣ್ಣದ ಅಥವಾ ಮನಸೂರೆ ಮಾಡುವ ಇನ್ನಾವುದೆ ಅಂಚಿನ ಧೋತಿಗಳನ್ನು ಧರಿಸುವಂತಿಲ್ಲ, ಕುಪ್ಪಸವಾಗಿ ಬಣ್ಣ ಬಣ್ಣದ ಗೌನುಗಳನ್ನು ತೊಡಬಾರದು. ಶುದ್ಧವಾದ ವಸ್ತ್ರಗಳನ್ನು ಧರಿಸುವಂತಿಲ್ಲ. ಒಂದು ವೇಳೆ ಶುಭ್ರವಾದ ಬಟ್ಟೆಯನ್ನು ಧರಿಸಿದರೆ ಆ ಸಮುದಾಯವು ಭಯುಂಕರವಾದ ಶಿಕ್ಷೆಗೆ ಗುರಿಯಾಗಬೇಕಿತ್ತು".

ತಳಸಮುದಾಯಗಳು ಉಳ್ಳವರು ಉಟ್ಟು ಬಿಟ್ಟ ಬಟ್ಟೆಯನ್ನು ಮಾತ್ರ ಸೇವೆಯ ಪ್ರತಿಯಾಗಿ

ಭಿಕ್ಷಾರೂಪದಲ್ಲಿ ಪಡೆದು ಧರಿಸುವಂತಾಗಿತ್ತು. ಇಂತಹ ವ್ಯವಸ್ಥೆಯನ್ನು ಈಗಲೂ ಕೆಲವು ಗ್ರಾಮಗಳಲ್ಲಿ ಕಾಣಬಹುದಾಗಿದೆ. ಗ್ರಾಮದಲ್ಲಿ ಅವರು ಧರಿಸುವ ಬಟ್ಟೆಗಳಿಂದ ಅವರ ಜಾತಿಗಳನ್ನು ಗುರುತಿಸುವ ಪರಿಪಾಠವಿದೆ. ಅಥವಾ ಅವರ ಅರ್ಥಿಕ ಶೋಚನೀಯ ಸ್ಥಿತಿಯಲ್ಲಿರುವುದೆಂದು ಮನಗಾಣಬಹುದಾಗಿದೆ. ಅಂದಿನ ದಿನಗಳಲ್ಲಿ ಅವರಿಗೆ ಹೊಸ ಬಟ್ಟೆಗಳನ್ನು ಧರಿಸದಂತೆ ನಿಷೇಧವನ್ನು ಹೇರಲಾಗಿತ್ತು. ಅಂದಿನ ಸ್ಥಿತಿಗೆ ಬದ್ಧರಾದ ಅಲೆಮಾರಿಗಳು, ಉಡುಪಿನ ವ್ಯಾಮೋಹ ಕಳೆದುಕೊಂಡಂತಿದೆ.

ಉಡುಪುಗಳು ಅಂದಿನ ಸ್ಥಿತಿಯಲ್ಲಿ ಆಯಾ ಸಮುದಾಯಗಳನ್ನು ವರ್ಗೀಕರಿಸುವ ಸಾಧನವಾಗಿತ್ತು. ವೃತ್ತಿಗಳನ್ನು ಸೂಚಿಸುವ ಸಂಕೇತವಾಗಿದ್ದವು. ಉಡುಗೆಗಳು ಸಮುದಾಯಗಳ ಅಂತಸ್ತನ್ನು ಗುರುತಿಸುವ ಮಾನದಂಡಗಳಾಗಿವೆ. ಬದಲಾದ ಸ್ಥಿತಿಯಲ್ಲಿಯು ಸಮುದಾಯಗಳು, ಅಲೆಮಾರಿಗಳು ಹಾಗೂ ಬುಡುಕಟ್ಟುಗಳು ಜಾತಿ ವ್ಯವಸ್ಥೆಯ ಸಂಕರದಿಂದ ಉಡುಗೆಗಳನ್ನು ಧರಿಸುತ್ತಿದ್ದಾರೆ. ವೃತ್ತಿಗಳನ್ನಾಧರಿಸಿ ಉಡುಪನ್ನು ನೋಡಬಹುದಾಗಿದೆ. ಇಂದಿಗೂ ನಾವು ಹಗಲುವೇಷಗಾರರು ಧರಿಸುವ ಉಡುಪುಗಳು, ಡೊಂಬರಾಟ ಪ್ರದರ್ಶಿಸಲು ಧರಿಸುವ ಉಡುಪುಗಳು ಹಾಗೆಯೆ ಬುಡ್ಗಜಂಗಮ್, ಸಿಂಧೋಳ್ಳು, ಗೊಂದಲಿಗರು, ಚೆನ್ನದಾಸರು, ಕೊರವಂಜಿಯವರು, ಸುಡುಗಾಡುಸಿದ್ಧರು ಗೋಸಂಗಿಗಳು, ಕಲಾಯಿಗಳು, ಅಡವಿಚೆಂಚರು, ಹಕ್ಕಿಪಿಕ್ಕಿಯವರು ಹೀಗೆ ವಿವಿಧ ಅಲೆಮಾರಿಗಳು ತಮ್ಮ ವೃತ್ತಿಗನುಗುಣವಾಗಿ ಧರಿಸುವ ಉಡುಗೆಗಳಿಂದ ಗುರುತಿಸಬಹುದಾಗಿದೆ.

ಉಡುಗೆಗಳು



ಇತ್ತೀಚಿನ ದಿನಗಳಲ್ಲಿ ಯಾವುದೆ ಸಮುದಾಯವು ನಿರ್ಬಂಧವಿಲ್ಲದೆ, ಯಾವುದೆ ತರಹದ ಉಡುಗೆಗಳನ್ನು ಧರಿಸಬಹುದು. ಆದರೆ ಅಲೆಮಾರಿಗಳಿಗೆ, ಒಂದ್ಹೊತ್ತಿನ ಊಟಕ್ಕೆ ಬವಣೆ ಪಡುತ್ತಿರ ಬೇಕಾದರೆ ಹೊಸ ಉಡುಗೆಗಳು ಅಂದಚಂದದ ಉಡುಪುಗಳನ್ನು ಧರಿಸುವುದು ಕನಸಿನ ಮಾತಾಗಿದೆ. ಜಾತಿ ಬಿಂಬಿಸುವ ಉಡುಗೆಗಳನ್ನು ಇಂದಿಗೂ ಅಲೆಮಾರಿಗಳು ಧರಿಸುವರು.

ಸಮುದಾಯ	ವೃತ್ತಿಗನುಗುಣವಾಗಿ ಧರಿಸುವ ಉಡುಗೆಗಳು
೧. ಸುಡುಗಾಡುಸಿದ್ಧರು	ಕಾವಿಯ ಉದ್ದನೆಯ ನಿಲುವಂಗಿ, ಕೊರಳಿಗೆ ರುದ್ರಾಕ್ಷಿ, ತಲೆಗೆ ರುಮಾಲು, ಹಣೆಗೆ ವಿಭೂತಿ, ಕಚ್ಚೆಪಂಚೆ, ಸರಗಳು ಶಂಖ ಇತ್ಯಾದಿ.
೨. ಗೊಂದಲಿಗರು	ತಲೆಗೆ ರುಮಾಲು, ಕಚ್ಚೆಪಂಚೆ, ಅಂಗಿಯ ಮೇಲೆ ಕಪ್ಪುಕೋಟು, ರುದ್ರಾಕ್ಷಿಸರ, ಸಂಬಾಳ, ಚೌಟಿಕೆ, ಗೆಜ್ಜೆ, ಭಂಡಾರ ಇತ್ಯಾದಿ.
೩. ಕೊರವರು	ಕೈಯಲ್ಲಿ ಕಣಿ, ಸಣ್ಣದಾದ ಬುಟ್ಟಿ, ಮಡಿಸೀರೆ, ಕುಪ್ಪಸ, ಹಣೆಗೆ ವಿಭೂತಿ ಅಗಲವಾದ ಕುಂಕುಮದ ಬೊಟ್ಟು, ದೊಡ್ಡದಾದ ಮೂಗುತಿ ಇತ್ಯಾದಿ.
೪. ಚಿಂದೋಳ್ಳು, ಸಿಂಧೋಳ್ಳು	ಬಣ್ಣ-ಬಣ್ಣದ ಕಚ್ಚೆ, ಬರಿ ಮೈ, ಚಾಟಿಯಿಂದ ಹೊಡೆದು ಕೊಳ್ಳುವಿಕೆ, ಪೋತರಾಜನ ವೇಷ, ಹಣೆಯ ತುಂಬ ಕುಂಕುಮ ಭಂಡಾರ, ಚಾಕುವಿನಿಂದ ಮೈಮೇಲೆ ಗಾಯಮಾಡಿಕೊಳ್ಳುವುದು.
೫. ಬುಡ್ಗಜಂಗಮ್	ಹಗಲಿನಲ್ಲಿ ವೇಷತೊಟ್ಟು ಸಂದರ್ಭದಲ್ಲಿ ತಕ್ಕಂತೆ ಪಾತ್ರದ ಅನುಗುಣವಾಗಿ ಉಡುಗೆ ಧರಿಸುವುದುಂಟು. ಉದ್ದವಾದ ಕೂದಲು, ಮುಖದಲ್ಲಿ ಬಣ್ಣ, ಕೊರಳಲ್ಲಿ ಸರ, ಮಾಲೆಗಳು ಇತ್ಯಾದಿ.
೬. ಬುಡುಬುಡಕಿಯವರು	ಕಚ್ಚೆಪಂಚೆ, ತಲೆಗೆ ರುಮಾಲು, ಕೋಟು, ಕೈಯಲ್ಲಿ ಬುಡಬುಡಿಕೆ ವಾದ್ಯ.
೭. ಕವಲೆತ್ತಿನವರು	ಕಚ್ಚೆಪಂಚೆ, ಕೋಟು, ತಲೆಗೆ ರುಮಾಲು, ಸನಾಯಿವಾದ್ಯ, ಡೋಲು ಇತ್ಯಾದಿಗಳು.
೮. ಕುರುಕುರು ಮಾಮ	ತಲೆಗೆ ಟವಲುಸುತ್ತಿ ನವಿಲುಗರಿಯನ್ನು ಇರಿಸಿಕೊಂಡಿರವರು, ಅಂಗಿ, ಲುಂಗಿಯನ್ನು ಭಿನ್ನವಾದ ವಿನ್ಯಾಸದಲ್ಲಿ ತೊಟ್ಟು ಕೊಂಡಿರುತ್ತಾರೆ. ಗಿಳಿ, ತಾಳೆಗೆರೆ ಮತ್ತು ಉದ್ದನೆಯ ಕೂದಲು ಬಿಟ್ಟಿರುವವರು
೯. ಜೋಗಿ	ಕಿವಿಯಲ್ಲಿ ರಿಂಗ್ ತಲೆಗೆ ಪೇಟಾ, ಅಂಗಿಯ ಮೇಲೆ ಕೋಟು, ಪಂಚೆ, ಕೈಯಲ್ಲಿ ತಂಬೂರಿವಾದ್ಯ ಇರುವುದುಂಟು.
೧೦. ಸಿಕ್ಕಲಗಾರ	ತಲೆಗೆ ತುರುಬುಕಟ್ಟಿಕೊಂಡು, ಗಡ್ಡಬಿಟ್ಟು, ಪ್ಯಾಂಟು, ಅಂಗಿ,

		ಕೈಯಲ್ಲಿ ಬಳೆ, ಸ್ತ್ರೀಯರು ಚೂಡಿದರ, ನತ್ತು, ಒಲೆಗಳನ್ನು ಧರಿಸುವರು.
೧೧.	ಡೊಂಬರು	ಹುಡುಗಿಯರು ಕೇಶರಾಶಿ ಕತ್ತರಿಸಿಕೊಂಡು, ವಿಭಿನ್ನ ವಸ್ತ್ರಗಳ ಧರಿಸಿಕೊಳ್ಳುತ್ತಾರೆ. ಅಲಂಕಾರವಾದ ಲಂಗ ಧಾವಣಿ, ಚೂಡಿ, ಹಾಕಿಕೊಳ್ಳುವರು, ಪುರುಷರು ಬಣ್ಣ ಬಣ್ಣದ ಉಡುಪುಗಳಾದ ಪ್ಯಾಂಟ್-ಅಂಗಿ ಧರಿಸುವರು.


ಆಭರಣಗಳು ಮತ್ತು ಜಾತಿ

ಮಾನವ ವಿಕಾಸಗೊಂಡಂತೆ ಪ್ರಾಥಮಿಕ ಸಮಸ್ಯೆಗಳನ್ನು ಪೂರೈಸಿಕೊಳ್ಳುವ ಜೊತೆ ಜೊತೆಯಲ್ಲಿ ಆಸಕ್ತಿ ಅಭಿರುಚಿಗೆ ತಕ್ಕಂತೆ ತನಗೆ ಇಷ್ಟಬಂದ ಕಾಡಿನ ಉತ್ಪನ್ನ ಮತ್ತು ಎಲುಬು ತಲೆಬುರುಡೆಗಳಿಂದ ತನಗೆ ತೋಚುವ ರೀತಿಯಲ್ಲಿ ತಾನೆ ತಯಾರಿಸಿಕೊಂಡು, ಧರಿಸಿಕೊಂಡು ಸಂತೋಷಪಡುತ್ತಿದ್ದರು. ತದ ನಂತರದ ಕಾಲದಲ್ಲಿ ಆಭರಣಗಳು ಒಂದು ಸಾಮಾಜಿಕ ಪ್ರತಿಷ್ಠೆಗಾಗಿ ಹೊರಹೊಮ್ಮುತ್ತ ಬಂದವು. ಲೋಹಗಳ ಉಪಯೋಗ ಕಂಡುಕೊಂಡ ನಂತರ ಬೆಳ್ಳಿ, ಬಂಗಾರದ ಆಭರಣಗಳು ಬಂದವು. ಅಭರಣ ಗಳು ಶ್ರೀಮಂತಿಕೆ ಮತ್ತು ಬಡತನದ ಸ್ಪಷ್ಟವಾದ ಮುಖವಾಡಗಳನ್ನು ಹೇಳುವಂತದಾಗಿದೆ. ಶ್ರೀಮಂತರು, ಮಧ್ಯಮ ವರ್ಗದವರು, ದಲಿತರು, ಅಲೆಮಾರಿಗಳು, ಬುಡಕಟ್ಟು ಸಮುದಾಯಗಳು ಧರಿಸುವ ಆಭರಣ ಗಳಲ್ಲಿ ಕಾಣಬಹುದಾಗಿದೆ.

ಮೇಲವರು, ಮಧ್ಯಮದವರು, ಕೆಳಗಿನವರು ಧರಿಸುವ ಆಭರಣಗಳಿಂದ ಜಾತಿ ತೋರಿಸುವ ಸಂಕೇತವಾಗಿವೆ. ಮೇಲ್ವರ್ಗದವರು ಬಂಗಾರ, ಬೆಳ್ಳಿ, ವಜ್ರಗಳನ್ನು ಧರಿಸಿದರೆ, ಕೆಳವರ್ಗದವರು ಕಬ್ಬಿಣ, ಅಲ್ಯುಮಿನಿಯಂ, ಕಟ್ಟಿಗೆ, ಕಂಚು ಇತ್ಯಾದಿಗಳಿಂದ ತಯಾರಿಸಿದ ಆಭರಣ ಧರಿಸುವರು. ಈ ಹಿಂದೆ ಬಂಗಾರ, ಬೆಳ್ಳಿಯನ್ನು ಧರಿಸುವಂತಿರಲಿಲ್ಲ. ಆಕಸ್ಮಿಕ ಅಂತಹ ಆಭರಣಗಳಿದ್ದರೆ ಮೇಲಿನವರಿಗೆ ದಾನ ಮಾಡಬೇಕೆಂಬ ನಿಯಮವಿತ್ತೆಂದು ಇತಿಹಾಸದ ಪುಟದಲ್ಲಿ ನೋಡಬಹುದಾಗಿದೆ.

ಆಭರಣಗಳು ವೃತ್ತಿ ಮತ್ತು ಜಾತಿಯನ್ನು ಸೂಚಿಸುವ ಸಂಕೇತಗಳಾಗಿಯೂ ಕಾರ್ಯನಿರ್ವಹಿಸುತ್ತಿದೆ. ಸುಡುಗಾಡುಸಿದ್ಧರು ಕೊರಳಲ್ಲಿ ರುದ್ರಾಕ್ಷಿಸರ, ಕಿವಿಯಲ್ಲಿ ಕುಂಡಲಗಳು, ಹಕ್ಕಿಪಿಕ್ಕಿಯವರು ವಿವಿಧ ಮಣಿಗಳ ಸರವನ್ನು, ರಾಮಕೊಂಡಿಗಳು ಉಣ್ಣೆ ಲೇಪಿಸಿದ ಉಣ್ಣೆಯ ಟೊಪ್ಪಿಗೆಯ ಮೇಲೆ ಕವಡೆಗಳು, ನವಿಲುಗರಿಗಳು, ಕೊರವಂಜಿ ಸಮುದಾಯ ಕೊರಳಿಗೆ ಮಣಿಸರ, ಮೂಗಿಗೆ ನತ್ತು ಕಿವಿಗೆ ಬುಗುಡಿ, ಬೆಂಡೋಲೆ, ಕೈಯಲ್ಲಿ ಹಿತ್ತಾಳೆ ಬಳೆಗಳು, ಗೊಂದಲಿಗರು ಕೊರಳಿಗೆ ದೇವಿ ಸರ, ಮೋಡಿಕಾರರು ಕಾಲಲ್ಲಿ ಗಗ್ರಿ, ಸಿಂಧೋಳ್ಳರು ಕಾಲಿನಲ್ಲಿ ಗೆಜ್ಜೆ ಹೀಗೆ ಅಲೆಮಾರಿಗಳು ವಿವಿಧ ರೀತಿಯ ಆಭರಣ ಧರಿಸುವುದರ ಮೂಲಕ ವೃತ್ತಿ ಹಾಗೂ ಜಾತಿಯ ಜೊತೆಯಲ್ಲಿ ಆರ್ಥಿಕತೆಯನ್ನು ಸಾರುವುದಾಗಿದೆ. ಅಭರಣಗಳನ್ನು ಅಲೆಮಾರಿಗಳು ಕಡಿಮೆ ಬೆಲೆಯಲ್ಲಿ ಕೊಂಡುಕೊಳ್ಳುವರು ಹಾಗೂ ಸ್ವತಃ ಅವರೆ ಆಭರಣಗಳನ್ನು ತಯಾರಿಸಿ ಧರಿಸುವ ವಾಡಿಕೆ ಇದೆ.

ಅಲೆಮಾರಿಗಳ ಆಭರಣಗಳು



ಕೊಡುಕೊಳ್ಳುವಿಕೆಯಲ್ಲಿನ ಸಂಬಂಧಗಳು ಮತ್ತು ಜಾತಿ

ಸಮುದಾಯದ ಸದಸ್ಯರು ವಿವಾಹವಾಗಲು ಮತ್ತೊಂದು ಸಮುದಾಯದ ಸಂಬಂಧವನ್ನು ವರಿಸಬೇಕಾಗುವುದು. ಅಥವಾ ಬೆಳಸಿಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ. ಇದರಿಂದ ಎರಡು ಸಮುದಾಯಗಳು ತಮ್ಮ ತಮ್ಮ ಕುಟುಂಬಗಳ ನಡುವೆ ಸಂಬಂಧಗಳು ಕೂಡಿದಂತಾಗುತ್ತದೆ. ಇಂತಹ ವೈವಾಹಿಕ ಸಂಬಂಧಗಳು ಸಮುದಾಯವನ್ನು ಹೆಚ್ಚುಸುವಲ್ಲಿ ಸಹಕಾರವಾಗಿದೆ. ವಿವಾಹಗಳು ನಡೆಯಬೇಕಾದರೆ ವಧು-ವರರನ್ನು ಗುರುತಿಸಬೇಕಾಗಿದೆ, ಬೆಡಗುಗಳ ಮೂಲಕ ಸಂಬಂಧ ಬೆಸೆಯುವುದು.

ಜಾತಿಯೊಂದಿಗೆ ಸಂಬಂಧಗಳನ್ನು ಗುರುತಿಸಿಕೊಂಡಿರುವುದರಿಂದ ಪ್ರತಿ ಸಮುದಾಯವು ತಮ್ಮದೆ ಜಾತಿಯ ಬೇರೆ ಕುಟುಂಬದೊಂದಿಗೆ ವಿವಾಹವಾಗಲು ಇಷ್ಟಪಡುತ್ತಾರೆ. ಬೆರಳೆಣಿಕೆಯಲ್ಲಿ ಮಾತ್ರ ಅಂತರಜಾತಿ ವಿವಾಹಗಳು ನಡೆಯುತ್ತವೆ. ಅಲೆಮಾರಿ ಸಮುದಾಯಗಳು ತಮ್ಮದೆ ಜಾತಿಯ ಬೇರೊಂದು ಕುಟುಂಬದೊಂದಿಗೆ ಮಾತ್ರ ವಿವಾಹವಾಗುತ್ತಾರೆ. ಸಮಾಜಶಾಸ್ತ್ರಜ್ಞರಾದ ವೆಸ್ಟರ್ ಮಾರ್ಕ್ ಹೀಗೆ ಹೇಳುತ್ತಾರೆ- "ಒಳ ಬಾಂದವ್ಯ ವಿವಾಹವೆ ಜಾತಿಯ ತಿರುಳಾಗಿದೆ" ಪ್ರತಿಯೊಂದು ಸಮುದಾಯವು ತಮ್ಮ ಜಾತಿಯ ಒಳಗಡೆ ಸಂಗಾತಿಯನ್ನು ಆಯ್ಕೆ ಮಾಡುತ್ತದೆ. ಅಂತರಜಾತಿಯ ವಿವಾಹದಲ್ಲಿ ಅಲೆಮಾರಿಗಳು ಒಪ್ಪಿಕೊಳ್ಳುವುದಿಲ್ಲ.

ಜಾತಿನಿಷ್ಠವಾದ ವ್ಯವಸ್ಥೆಯಿರುವುದರಿಂದ ಅಂತರಜಾತಿಯ ವಿವಾಹಕ್ಕೆ ಮಾನ್ಯತೆ ಕೊಡುವುದಿಲ್ಲ. ಕಾರಣ ಪ್ರತಿಯೊಂದು ಜಾತಿಯು ತಮ್ಮದೆ 'ಜಾತಿ' ಶ್ರೇಷ್ಠ ಎನ್ನುವ ಕಲ್ಪನೆಯಿರುವುದರಿಂದ ಸ್ವಜಾತಿ ವಿವಾಹದಲ್ಲಿ ಮಾನ್ಯತೆಯಿದೆ. ಸ್ವಜಾತಿಯವರೊಂದಿಗೆ ಸಂಬಂಧ ಬೆಳೆಸುವುದರಿಂದ ತೊಂದರೆ ಇರಲಾರದು. ಬೇರೆಯವರ ಜೊತೆ ಸಂಬಂಧಗಳನ್ನು ನಿರ್ಮಿಸಿದರೆ ಅವರ ಸಂಸ್ಕೃತಿ ಆಚಾರಗಳು ಪದ್ಧತಿಗಳು ಹಾಗೂ ವರದಕ್ಷಿಣೆ ಇತ್ಯಾದಿಗಳಲ್ಲಿ ಸಮಸ್ಯೆ ಬರುವುದು. ಹೀಗಾಗಿ ಬೇರೆ ಜಾತಿಯವರೊಂದಿಗೆ ಸಂಬಂಧ ಬೆಳೆಸಲು ಇಷ್ಟಪಡುವುದಿಲ್ಲ. ಪ್ರತಿ ಅಲೆಮಾರಿ ಸಮುದಾಯವು ಸಮಬೆಡಗಿನಲ್ಲಿ ಸಹೋದರ ಸಂಬಂಧ ವಿಟ್ಟುಕೊಂಡರೆ ಬೆಸ ಬೆಡಗುಗಳಲ್ಲಿ ವೈವಾಹಿಕ ಸಂಬಂಧ ಬೆಳೆಸಬಹುದಾಗಿದೆ.

ನಾಮ ಮತ್ತು ಜಾತಿ

ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳನ್ನು ಗುರುತಿಸಲು ನಾಮದ ವ್ಯವಸ್ಥೆ ರಚನೆಯಾಗಿರುವುದು. ಬಹುಹಿಂದಿನಿಂದಲೂ ನೋಡಬಹುದಾಗಿದೆ. ಪ್ರಾಚೀನ ಕಾಲದಲ್ಲಿ ಬೆಟ್ಟ, ಗುಡ್ಡ, ಮರ, ಹಾವು, ಚೇಳು, ಕಾಡು ಉತ್ಪನ್ನ, ಪ್ರಾಣಿ ಪಕ್ಷಿಗಳ ಹೆಸರಗಳನ್ನು ವ್ಯಕ್ತಿಗಳ ನಾಮದಲ್ಲಿ ಬೆರೆತು ಹೋಗಿತ್ತು. ಮಾನವನು ನಾಗರಿಕತೆ ಮೈಗೂಡಿಸಿಕೊಂಡಂತೆ ನಾಮದ ವ್ಯವಸ್ಥೆಯಲ್ಲಿ ಅಪಾರ ಬದಲಾವಣೆಯಾಗಿರುವುದು ಸಹಜ. ಭಾರತಿಯ ಜಾತಿವ್ಯವಸ್ಥೆಯಲ್ಲಿ ನಾಮದ ಮೂಲಕ ಜಾತಿ ಗುರುತಿಸಬಹುದಾಗಿದೆ. ಅಂದರೆ ಒಂದು ಜಾತಿಯಲ್ಲಿ ಹುಟ್ಟಿದ ವ್ಯಕ್ತಿಯು ತನ್ನ ಉಪನಾಮದ ಒಂದು ಭಾಗವಾಗಿ ಜಾತಿಯ ಹೆಸರನ್ನು ಇಟ್ಟುಕೊಂಡಿರುತ್ತಾರೆ.

ನಾಮದಿಂದ ಸಮುದಾಯ ಮತ್ತು ಜಾತಿಯ ಹೆಸರನ್ನು ಗುರುತಿಸಬಹುದು. ವಿವಿಧ ಜಾತಿಯ ಜನರು ತಮ್ಮ ಜಾತಿಗೆ ಯುಕ್ತವಾದ ನಾಮವನ್ನೆ ಇಟ್ಟುಕೊಂಡಿರುತ್ತಾರೆ. ಉದಾಹರಣೆ ಮುಸ್ಲಿಮರು ಅಬ್ದುಲ್ ಸಾಹೇಬ್, ಮುಬಾರಕ್ ಸಾಹೇಬ್, ಇಸ್ಲಾಂಭಾಷ್, ರಜಿಯಾಬೇಗಂ, ಯಾಸ್ಮಿನ್ ಎಂದು. ಕ್ರೈಸ್ತರು ರಾಬರ್ಟ್, ಜಾನಿ, ಮೇರಿ, ಅಂತೋನಿ ಎಂದು. ಸಿಖ್ಖರು ಭಗತ್‌ಸಿಂಗ್, ರಾಣಪ್ರತಾಪಸಿಂಗ್ ಎಂದು. ಲಿಂಗಾಯಿತರು ಬಸವೇಶ್ವರ, ವೀರೇಶ, ಬಸವ ಎಂದು. ವೀರಶೈವರು ಶರಣಬಸವಯ್ಯ, ವೀರಯ್ಯ, ಸಿದ್ಧಲಿಂಗಯ್ಯವೆಂದು. ಬ್ರಾಹ್ಮಣರು ಗುಂಡುರಾವ್, ರಾಘವೇಂದ್ರರಾವ್, ದಿವಕಾರ ದೇಸಾಯಿ ಎಂದು. ದಲಿತರು ಕರಿಯ, ದುರ್ಗಪ್ಪ, ಕಾಳ, ಕೆಂಚ, ಮುನಿಯ ಎಂದು. ಹೀಗೆ ಆಯಾ ಸಮುದಾಯಗಳು ತಮ್ಮ ಸಮುದಾಯ ಸೂಚಿಸುವಂತ ನಾಮವನ್ನು ಕಾಣಬಹುದು.

ಸ್ಮೃತಿಕಾರ ಮನು ಪ್ರಸ್ತಾಪಿಸುವದೆನೆಂದರೆ: "ಬ್ರಾಹ್ಮಣ - ಮಂಗಲ ಸೂಚಕವಾದವನು: ಕ್ಷತ್ರಿಯ- ಬಲಸೂಚಕವಾದ; ವೈಶ್ಯನು - ಧನಸೂಚಕವಾದ ಹಾಗೂ ಶೂದ್ರನು - ಜಿಗುಪ್ಸಾ ಸೂಚಕನಾದ್ದರಿಂದ ಆಯಾ ಜಾತಿಗೆ ತಕ್ಕಂತೆ ನಾಮಕರಣ ಮಾಡಬೇಕೆಂದು ತಿಳಿಸುತ್ತಾರೆ. ಅದನ್ನು ಈಗಲು ನೋಡಬಹುದು. ಉದಾ: ಬ್ರಾಹ್ಮಣನಿಗೆ ಶರ್ಮ, ಸಂತೋಷ ಸೂಚಕನಾದದು. ಕ್ಷತ್ರಿಯರಿಗೆ ರಕ್ಷಣಾಸೂಚಕವಾದ ವರ್ಮ, ವೈಶ್ಯರಿಗೆ ಐಶ್ವರ್ಯ ಸೂಚಕವಾದ ಗುಪ್ತ, ಶೂದ್ರರಿಗೆ ಸೇವಾ ಸೂಚಕವಾದ ದಾಸ ವೃತ್ತಿಯಿಂದ ನಾಮದ ವ್ಯವಸ್ಥೆಯು ಜಾತಿಯೊಂದಿಗೆ ನಾಮ ಬೆಸೆದುಕೊಂಡುಬಿಟ್ಟಿದೆ. ಪರಿಣಾಮ ಪ್ರತಿ ಜಾತಿಗಳು,

ನಾಮಗಳ ಬಗ್ಗೆ ಸೂಕ್ಷ್ಮವಾಗಿ ಶೋಧಿಸಿದಾಗ ಜಾತಿ ಮತ್ತು ನಾಮದ ಪರಿಕಲ್ಪನೆ ತಿಳಿಯುತ್ತದೆ. ಅಲೆಮಾರಿಗಳ ಕುಟುಂಬದ ಸದಸ್ಯರಿಗೆ ವೃತ್ತಿ ಸೂಚಿಸುವ ನಾಮವು ಜಾತಿಯನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ.

ಅಲೆಮಾರಿ ಸಮುದಾಯಗಳು ತಮ್ಮದೆ ಜಾತಿಯ ನಾಮಗಳನ್ನು ನಾಮಕರಣ ಮಾಡುವುದುಂಟು. ಎಂತಹ ಸಂದರ್ಭಗಳು ಬಂದರು, ಮೇಲ್ವರ್ಗದ ನಾಮಗಳನ್ನು ಹೆಸರಿಸಲಾರರು. ಬದಲಾದ ಆಧುನಿಕತೆಯ ದಿವಸಗಳಲ್ಲಿ ವೃತ್ತಿಗಳನ್ನು ಸೂಚಿಸುವ ನಾಮಗಳಿರುವುದನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಚಲನಚಿತ್ರದ ಪ್ರಭಾವಕ್ಕೊಳಗಾಗಿ ನಾಯಕ, ನಾಯಕಿರ ಹೆಸರುಗಳನ್ನು ನಾಮಕರಣ ಮಾಡುವರು. ವಿಶೇಷವಾಗಿ ಹಕ್ಕಿಪಿಕ್ಕಿ ಸಮುದಾಯವು ಎಲ್ಲಿ ಮಕ್ಕಳಿಗೆ ಜನ್ಮವನ್ನು ನೀಡುತ್ತಾರೆಯೊ. ಆ ಪ್ರದೇಶದ ವಾತವರಣದಲ್ಲಿ ತಕ್ಷಣ ಕಂಡುಬರುವ ವಸ್ತು, ವಿಷಯ, ಸಂಕೇತಗಳನ್ನು ನಾಮಕರಣದ ರೂಪವಾಗಿ ಕರೆಯುತ್ತಾರೆ. ಉದಾಹರಣೆ: ಹೈಕೋರ್ಟ್ ಹತ್ತಿರ ಜನಿಸದ ಮಗು 'ಹೈಕೋರ್ಟ್' ಎಂಬ ನಾಮದಿಂದ ಬೆಳೆಯುತ್ತದೆ. ಬಸ್ಸು, ರೈಲು, ಲಾರಿ, ಮೊಟರುಗಳಲ್ಲಿ ಜನಿಸಿದ ಮಕ್ಕಳು ಬಸ್ಸು, ರೈಲು, ಲಾರಿ, ಮೊಟರು ಎಂಬ ನಾಮದಿಂದ ಬೆಳೆಯುತ್ತಾರೆ. ಚಲನಚಿತ್ರ ನಾಯಕರಾದ ರಾಜಕುಮಾರ್, ವಿಷ್ಣುವರ್ಧನ, ಅಂಬಿರಿಷ್, ಸುದೀಪ್, ಶಿವರಾಜಕುಮಾರ, ಚಿರಂಜೀವಿ, ಬಾಲಕೃಷ್ಣ, ಮಹೇಶಬಾಬು ಹಾಗೂ ನಾಯಕಿರಾದ ರಾಧ, ಭಾರತಿ, ಲಕ್ಷ್ಮಿ, ರಮ್ಯ, ರಕ್ಷಿತಾ, ತ್ರಿಶಾ, ರಾಧಿಕಾ, ಇಲಿಕಾ, ಸುಹಾಸಿನಿ ಇತ್ಯಾದಿಗಳು. ರಾಜಕೀಯ ವ್ಯಕ್ತಿಗಳ ಹೆಸರುಗಳು, ಅಂಗಡಿ ನಂಬರ್‌ಗಳು, ಬಸ್ಸಿನ ನಂಬರ್, ಲಾರಿ ಸಂಖ್ಯೆಗಳಾದ '೩೩೦', '೪೨೦', '೬೬', '೧೦೦' ಇತ್ಯಾದಿಗಳು ಸಹ ನಾಮಕರಣದ ರೂಪದಲ್ಲಿ ಇಡುತ್ತಾರೆ.

ಜಾತಿಯ ಅಥವಾ ಸಮುದಾಯ ಸೂಚಿಸುವ ನಾಮಗಳು

೧. ಮಸಣಪ್ಪ	೧೧. ಶಿಕಾರಿ ರಾಮು
೨ ರೇವಣಸಿದ್ಧ	೧೨. ರಾಮುಡು
೩. ಶ್ರೀಶೈಲ	೧೩. ಅಂಭಭವಾನಿ
೪. ಸುಡುಗಾಡಪ್ಪ	೧೪. ಜೋಗೆರ ಸಿದ್ದಪ್ಪ
೫. ಸಿಂಗಾರೆಪ್ಪ	೧೫. ಹೆಳವಣ್ಣ
೬. ಪೋತುರಾಜ	೧೬. ಡೊಂಬ್ರ ಭರಮಪ್ಪ
೭. ಈರನಾಗಮ್ಮ	೧೭. ಗೊಂದಲೇರ ಲಕ್ಷ್ಮಣ
೮. ದುರುಗಮ್ಮ	೧೮. ವೇಷಗಾರ ರಾಮಣ್ಣ
೯. ಮರುಗಮ್ಮ	೧೯. ಸಿಳ್ಳೇಕ್ಯಾತ ಭರಮಣ್ಣ
೧೦. ಬಹುರೂಪಿ ಪ್ರತಾಪ	೨೦. ಕೊರವರ ಅಪ್ಪಣ್ಣ

ಧರ್ಮ ಮತ್ತು ಜಾತಿ

'ಧರ್ಮ' ಎಂದರೇನು ಎನ್ನುವ ಪ್ರಶ್ನೆಗೆ ಎಲ್ಲಾ ಸಮುದಾಯಗಳು ಕೊಡುವ ಉತ್ತರ ಒಂದೆ ರೀತಿಯಾಗಿಲ್ಲ. ಸಮರ್ಪಕವಾಗಿರುವುದಿಲ್ಲ. ಒಂದಕ್ಕಿಂತ ಒಂದು ಭಿನ್ನವಾದ ಉತ್ತರ ನೀಡುವುದುಂಟು. ಒಂದು ಸಮುದಾಯದ ಧರ್ಮವು ಸರ್ವರು ಸಮಾನರು, ಸರ್ವರು ಸಹೋದರರು ಎಂದು ಸಾರಿದರೆ, ಮತ್ತೊಂದು ಸಮುದಾಯವು ಅಸ್ಪೃಶ್ಯತೆಯನ್ನು ಎತ್ತಿಹಿಡಿಯುತ್ತದೆ. ಎಲ್ಲಾ ಸಮುದಾಯಗಳಲ್ಲಿ ಧರ್ಮವು ಒಂದೆ ಸ್ವರೂಪವಾಗಿಲ್ಲ. "ಧರ್ಮ ಮಾನವ ಪ್ರಪಂಚದ ಒಂದು ಪ್ರಚಂಡ ಶಕ್ತಿ" ಎಂದು ಪ್ರೊ. ಟೀಲೆ ಯವರು ವ್ಯಕ್ತಪಡಿಸಿರುವುದುಂಟು.

ಧರ್ಮ ಅನೇಕ ಪ್ರೇರಕ ಶಕ್ತಿಗಳಿಂದ ಕೆಲಸ ಮಾಡುವುದುಂಟು. ಸೂಕ್ಷ್ಮವಾಗಿ ಗಮನಿಸಿದಾಗ ಅವು ಮಹಾ ಶೌರ್ಯ, ಸಾಹಸ, ಪರಿತ್ಯಾಗ, ಭಕ್ತಿ, ಭೀಕರವಾದ ಯುದ್ಧಗಳು, ರಕ್ತಪಾತ, ಬಂಡಾಯ ಮತ್ತು ಶಿಕ್ಷೆಗಳ ಜೊತೆಗೆ ರಾಷ್ಟ್ರಗಳ ಸ್ವತಂತ್ರ್ಯ ಸಮೃದ್ಧಿ, ಶಾಂತಿ ನಿರ್ಮಿಸುವುದು ಇತ್ಯಾದಿಗಳು. ಒಮ್ಮೊಮ್ಮೆ ದೌರ್ಜನ್ಯ, ಜಾತಿನಿಂದನೆ, ಹಿಂಸೆ ಕಂಡುಬಂದರೆ, ಪಕ್ಷಪಾತ, ಪ್ರಸ್ತುತ ಜೀವನ ಹಿತಕ್ಕಾಗಿ ಸರ್ವಶ್ರೇಷ್ಠ ನಾಗರಿಕತೆಯ ಬೆಳವಣಿಗೆಗಾಗಿ ಕರೆ ಕೊಡುವುದು.

ಧರ್ಮದ ಕಾರ್ಯ ಮತ್ತು ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ಧರ್ಮವನ್ನು ನೀತಿಶಾಸ್ತ್ರದಿಂದ ಬೇರ್ಪಡಿಸುವುದು ಅಗತ್ಯವಾಗಿದೆ. ಪ್ರಯೋಜಕತೆ, ಅನುಸರಣೆ, ಅನುಷ್ಠಾನ ಸಂಸ್ಕಾರಗಳು ಅಲೆಮಾರಿ ಸಮುದಾಯಗಳಲ್ಲಿರುವ ಧರ್ಮದ ಕೆಲಸ ಕಾರ್ಯಗಳಾಗಿವೆ. ಇತರೆ ಧರ್ಮದ ಕೆಲಸಕಾರ್ಯ ಉದ್ದೇಶ ಕ್ಕಿಂತ ಭಿನ್ನವಾಗಿದೆ. ಆ ಸಮುದಾಯಗಳ ವ್ಯಕ್ತಿಯ ವ್ಯಕ್ತಿತ್ವ ಮತ್ತು ಮಾನವ ಸಮಾಜದಲ್ಲಿ ಬೇಕಾಗುವ ಸಾರಭೂತ ಮೌಲ್ಯಗಳನ್ನು ಸಮಾಜದ ಒಟ್ಟಾರೆ ಅಖಂಡತೆಯ ದೃಷ್ಟಿಯಿಂದ ಪ್ರತಿಪಾದಿಸುತ್ತದೆ.

ಸಮುದಾಯದ ದುಃಖಿತರಿಗೆ ಸಾಂತ್ವಾನ, ದುರ್ಬಲರಿಗೆ ಕ್ಷಮೆ, ಆ ಸಮುದಾಯ ವೃದ್ಧರರ ಬಗ್ಗೆ ಮಾನವಿಯ ಧೋರಣೆ ಹಾಗೂ ಇಚ್ಛಾಶಕ್ತಿ ಮತ್ತು ಭಾವನೆಗಳನ್ನು ಸಾರ್ವತ್ರಿಕಗೊಳಿಸುವ ಮೌಲ್ಯಮಾಪಕ ಧೋರಣೆ ಹೊಂದಿದೆ. ಹೀಗಾಗಿ ಅಲೆಮಾರಿಗಳ ಧರ್ವವು ಸಮುದಾಯದ ಸದಸ್ಯನನ್ನು ಅದರ ಇಚ್ಛಾಶಕ್ತಿ ಮತ್ತು ಭಾವನೆಗಳ ಒಳನೋಟದಲ್ಲಿ ಸಮರಸಗೊಳಿಸುತ್ತದೆ. ಜೀವನದ ಹೋರಾಟದಲ್ಲಿ ವಿಶ್ವಾಸ ತುಂಬುತ್ತದೆ, ಆಸೆಗಳನ್ನು ನೀಡುತ್ತದೆ. ಕೆಲವು ಸಣ್ಣಪುಟ್ಟ ದೋಷಗಳಿವೆಯಾದರು ಆಂತರ್ಯದಲ್ಲಿ ಅಡಗಿರುವ ಧಾರ್ಮಿಕ ಮೌಲ್ಯಗಳು ಸಮುದಾಯದ ದಿಕ್ಸೂಚಿಯಾಗಿವೆ. ಹೀಗಾಗಿಯೆ ಅಲೆಮಾರಿಗಳು ಧರ್ಮದೊಂದಿಗೆ ಬೆರೆತುಕೊಂಡಿದ್ದಾರೆ.

ಆಯಾಗಾರಿಕೆ, ಸ್ಪರ್ಶಿಸುವಿಕೆ ಮತ್ತು ಜಾತಿ

ಕೆಲವು ಗ್ರಾಮೀಣ ಭಾಗಗಳಲ್ಲಿ ಆಯಾಗಾರಿಕೆ ಜೀವಂತವಿದೆ. ಹೈದ್ರಾಬಾದ್ ಕರ್ನಾಟಕದಂತ ಹಿಂದುಳಿದ ಪ್ರದೇಶದಲ್ಲಿ ಇನ್ನು ಜೀವಂತವಾಗಿದೆ. ಆಯಾಗಾರಿಕೆ ಎಂದರೆ ಒಂದು ಸಮುದಾಯದ ಸದಸ್ಯನು ಮತ್ತೊಂದು ಸಮುದಾಯದಲ್ಲಿ ಸೇವೆಸಲ್ಲಿಸುವುದು. ಉದಾಹರಣೆ, ಬಡಗಿಯು-ಬಡಗಿತನ,

ಅಗಸ-ಬಟ್ಟೆ ತೊಳೆಯುವುದು, ಕಮ್ಮಾರ- ಕಮ್ಮಾರಿಕೆ ಹೀಗೆ ಹಲವಾರು ಕರಕುಶಲ ಸೇವೆಗಳು, ಕೃಷಿಯ ಅವಲಂಬಿಸಿದ ಜನರು ವಿಶೇಷವಾಗಿ ಮೇಲ್ಜಾತಿಯವರಿಗೆ ಸೇವೆಸಲ್ಲಿಸುತ್ತ ಬಂದಿದ್ದಾರೆ. ಗ್ರಾಮೀಣ ಪ್ರದೇಶದ ಗ್ರಾಮದಲ್ಲಿ ಉಳ್ಳವರು ಸದೃಢರಾಗಿರುವ ಕಾರಣದಿಂದ ಕಡ್ಡಾಯವಾಗಿ ಕೆಲವು ನಿರ್ಧಿಷ್ಟ ಜಾತಿಯ ಜನರು ಸೇವೆಸಲ್ಲಿಸಬೇಕು. ಇದಕ್ಕೆ ಪ್ರತಿಯಾಗಿ ಸುಗ್ಗಿಯ ಕಾಲದಲ್ಲಿ ಕಾಳುಕಡಿ ಇಂತಿಷ್ಟು ಹಣ, ಬಟ್ಟೆ ಇತ್ಯಾದಿಗಳನ್ನು ಕೊಡುವುದುಂಟು. ಗ್ರಾಮೀಣ ಪ್ರದೇಶದಲ್ಲಿ ಹಬ್ಬ, ಜಾತ್ರೆಗಳಲ್ಲಿ ಆಯಾಗಾರಿಕೆ ಕಡ್ಡಾಯವಾಗಿ ಮಾಡಬೇಕಾಗಿದೆ.

೧. ಪಲ್ಲಕ್ಕಿಯ ಮೇಲೆ ದೇವರನ್ನು ಹೊತ್ತುಕೊಂಡು ಮೇಲವರು ನಡೆಯುತ್ತಿದ್ದರೆ. ಆ ಗ್ರಾಮದ ಹರಿಜನರು ಕಸಗೂಡಿಸಿ ನೀರುಣಿಸಬೇಕು.

೨. ಚಲವಾದಿಗಳು ವಾದ್ಯ ಬಾರಿಸಬೇಕು.

೩. ಅಗಸರು ನಡೆದಾಡುವ ದಾರಿಗೆ ಉದ್ದವಾಗಿ ಮಡಿ ಹಾಸಬೇಕು.

೪. ಗ್ರಾಮದೇವತೆಯ ಹಬ್ಬದಲ್ಲಿ ಕುಂಬಾರರು ಕುಡಿಕೆ ಮಡಕೆ ಮಾಡಿಕೊಡಬೇಕು ಇತ್ಯಾದಿ ಕಸುಬುಗಳಿಗೆ ಇಂತಿಷ್ಟು ದವಸ, ಹಣ, ಬಟ್ಟೆ ಕೊಡಲಾಗುವುದು.

ಆಯಾ ಪ್ರದೇಶದ ಜನರ ವಿರೋಧವಿರುವುದರಿಂದ ಅಲೆಮಾರಿಗಳಿಗೆ ದಲಿತರಿಗೆ ಸೇವೆಸಲ್ಲಿಸಲು ಸಾಧ್ಯವಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಜಾತೀಯತೆಯ ಪ್ರಭಾವ ಜೀವಂತವಾಗಿರುವುದರಿಂದ ಅಲೆಮಾರಿಗಳನ್ನು ಸ್ಪರ್ಶಿಸಲು ಮೀನಾಮೇಷ ಎಣಿಸುತ್ತಾರೆ. ಮುಖ್ಯವಾದ ಸ್ಥಳಗಳಲ್ಲಿ ಪ್ರವೇಶ ನಿರಾಕರಿಸಲಾಗಿದೆ. ಆದುದರಿಂದಲೆ ಅಲೆಮಾರಿಗಳೂ ಸ್ವ-ಘೋಷಿತ ಅಸ್ಪೃಶ್ಯರಾಗಿ ಹೊರವಲಯಗಲ್ಲಿ ಬಿಡಾರ ಹೂಡುತ್ತಾರೆ.

ಜಾತಿ	ಸೇವೆಯ ಸ್ವರೂಪ	ಪ್ರತಿಫಲ
ಹೆಳವರು	ವರ್ಷದಲ್ಲಿ ಒಂದು ಬಾರಿ ವಂಶದ ವಂಶಾವಳಿ ಹೇಳುವುದು	ಒಂದು ವರ್ಷದಲ್ಲಿ ಒಂದು ಮೊರ ದವಸ ಇಲ್ಲವೆ ಜೊತೆಗೆ ಹಳೆಬಟ್ಟೆ, ಹಸು, ಕೋಳಿ ಇತ್ಯಾದಿಗಳು.
ದಕ್ಕಲಿಗರು	ಮಾದಿಗರ ಪೂರ್ವಇತಿಹಾಸವನ್ನು ಹೇಳುವರು. ಆರುಧಂತಿ ಕಲ್ಯಾಣದ ಪ್ರಸಂಗದಲ್ಲಿ ಆಗುಹೋಗುಗಳ ಬಗೆಗೆ ಕಥೆ, ಹಾಡು, ನೃತ್ಯಗಳನ್ನು ಮಾಡುವುದು.	ಒಂದು ವರ್ಷದಲ್ಲಿ ಅನ್ನ-ನೀರು, ಬಟ್ಟೆ, ದವಸ, ಹಣ ಇತ್ಯಾದಿ.
ಹಂದಿಜೋಗಿ	ಮನೆಗಳಲ್ಲಿರುವ ಬೀಗ ರಿಪೇರಿ, ಜರಡಿ ರಿಪೇರಿ ಇತ್ಯಾದಿ.	ಸಂದರ್ಭಕ್ಕೆ ತಕ್ಕಂತೆ ೫ ರಿಂದ ೧೦ ರೂ. ತನಕ ಹಣ, ಆಹಾರಪಡೆಯುತ್ತಾರೆ.
ಗೊಂದಲಿಗರು	ಬರಗಾಲ ಅಥವಾ ತಿಥಿ-ಹಬ್ಬಗಳಲ್ಲಿ ದೇವಿಯ ಕಥೆ ಹಾಡುವುದು.	ದವಸ, ಹಣ ಪಡೆಯುವುದು.

ಹೀಗೆ ಅಲೆಮಾರಿಗಳು ಅಲೆದಾಟದಲ್ಲಿ ನಿರತವಾಗಿದ್ದರೂ, ಅವರು ಆಯಾ ಪ್ರದೇಶಗಳಿಗೆ ಭೇಟಿ ಕೊಡುವುದುಂಟು. ಹಿಂದಿನಿಂದಲೂ ಕೆಲವು ಜಾತಿಯ ಸಮುದಾಯಗಳಿಗೆ ಸೇವೆಸಲ್ಲಿಸ ಬೇಕಾಗಿರುವುದರಿಂದ ವರ್ಷಕ್ಕೆ ಒಮ್ಮೆಯಾದರೂ ಅಥವಾ ಸಮಯ ದೊರೆತಾಗ ಹೋಗಬೇಕಾಗಿದೆ. ಅಲ್ಲಿನ ಸಮುದಾಯಗಳು ಸೇವಾಕಾರ್ಯ ಮಾಡುವುದರಿಂದ ಅವರಿಂದ ದೊರೆತ ಹಣ, ಬಟ್ಟೆ, ದವಸಗಳನ್ನು ಪ್ರತಿಫಲವಾಗಿ ಪಡೆದುಕೊಂಡು ಮುಂದಿನ ಪ್ರದೇಶದಲ್ಲಿ ಹೊರಡುವರು.

ಶಿಕ್ಷಣ ಮತ್ತು ಜಾತಿ

ಮಾನವನಿಗೆ ಬೇಕಾದುದು ಕೇವಲ ಆಹಾರವಲ್ಲ. ಏಕೆಂದರೆ ಮನುಷ್ಯ ಬರಿ ದೇಹವನ್ನಷ್ಟೆ ಪಡೆದಿಲ್ಲ. ಅವನಿಗೆ ಆತ್ಮ ಇದೆ, ದೇಹಕ್ಕೆ ಹಸಿವು ಎಷ್ಟು ಮುಖ್ಯವೋ, ಅಷ್ಟೆ ಆತ್ಮದ ಹಸಿವಿಗೆ ಶಾಂತಿ ಪ್ರೀತಿ, ಸಹಾನುಭೂತಿ ಬೇಕಾಗಿರುವುದು ಅನಿವಾರ್ಯವಾಗಿದೆ. ಹಾಗೆಯೆ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಗೂ ಬೇಕಾಗಿದೆ. ಶಿಕ್ಷಣ ಮಾನವ ಮಾತ್ರ ಪಡೆಯಲು ಸಾಧ್ಯ. ಏಕೆಂದರೆ ಆತನಲ್ಲಿರುವ ಬುದ್ಧಿಶಕ್ತಿ ಸುಪ್ತವಾಗಿರುವ ಅಂತರ್ ಶಕ್ತಿಗಳನ್ನು ಆತನ ವಿಶಿಷ್ಟತೆಗೆ ಮೂಲ ಕಾರಣವಾಗಿದೆ. ಬುದ್ಧಿಶಕ್ತಿ ಅಥವಾ ವಿಚಾರಶಕ್ತಿಯ ಜೊತೆಗೆ ಮನುಷ್ಯ ಇನ್ನೂ ಎರಡು ವಿಶೇಷ ಕಾರ್ಯಗಳನ್ನು ಪಡೆದಿದ್ದಾನೆ. ಒಂದು ಆತನ ಸುದೀರ್ಘ ಬಾಲ್ಯ ಮತ್ತೊಂದು ಆತನ ಮಾತನಾಡುವ ಕಲೆ ಈ ಮೂರರಿಂದ ಮನುಷ್ಯ ಶಿಕ್ಷಣ ಪಡೆಯಬಲ್ಲ ಮತ್ತು ಏಕಮೇವ ಪ್ರಾಣಿಯಾಗಿದ್ದಾನೆ. ಹೀಗಾಗಿ ಶಿಕ್ಷಣ ಅನಿವಾರ್ಯವಾಗಿದೆ. ವಿಚಾರಶಕ್ತಿ, ಕಲ್ಪನಾಶಕ್ತಿ, ನಿರ್ಣಯಶಕ್ತಿ, ನಿರ್ಮಾಣಶಕ್ತಿ, ಸ್ಮರಣಶಕ್ತಿ ಮುಂತಾದ ಶಕ್ತಿಗಳು ಮಾನವನಲ್ಲಿ ಸುಪ್ತವಾಗಿರುತ್ತವೆ. ಅವುಗಳನ್ನು ಜಾಗೃತಗೊಳಿಸಿ ವಿಕಾಸಗೊಳಿಸುವುದೆ ಶಿಕ್ಷಣವಾಗಿದೆ. ಇಂತಹ ಶಿಕ್ಷಣದ ಗುರಿ ಎಂದರೆ ಆರೋಗ್ಯ, ಶೀಲಸಂವರ್ಧನೆ, ಜ್ಞಾನಶಾಖೆ, ಸಾಂಸ್ಕೃತಿಕ, ಹೊಂದಾಣಿಕೆ ಪೂರ್ವಜೀವನ, ಆಧುನಿಕತೆಯ ಜೀವನೋಪಾಯ ಇತ್ಯಾದಿಗಳನ್ನೊಳಗೊಂಡಿದೆ. ಶಿಕ್ಷಣವನ್ನು ಸಂಸ್ಕಾರವೆಂದು ಗೌರವಿಸಲಾಗುತ್ತದೆ.

ಶಿಕ್ಷಣವನ್ನು ಸಮಾಜದ ಎಲ್ಲ ಸದಸ್ಯರು ಪಡೆಯಲಾಗಿಲ್ಲ. ಕೇವಲ ಕೆಲವೆ ಸಮುದಾಯಗಳಲ್ಲಿ ಕೇಂದ್ರಿಕೃತವಾಗಿದ್ದನ್ನು ಬಹುಹಿಂದಿನಿಂದಲೂ ನೋಡುತ್ತೆವೆ. ಅದು ಹಂತಹಂತವಾಗಿ ಕೆಲವೆ ಜನರು ಸೀಮಿತ ಪ್ರದೇಶದಲ್ಲಿ ನಡೆದಿದ್ದನ್ನು ನೋಡುತ್ತೇವೆ. ವೇದಗಳ ಕಾಲದಲ್ಲಿ ಗುರುಕುಲಗಳಲ್ಲಿ, ಬುದ್ಧನ ಕಾಲದಲ್ಲಿ ವಿಹಾರಗಳಲ್ಲಿ, ಮಹ್ಮದಿಯರ ಕಾಲದಲ್ಲಿ ಮಕ್ತಾಬ-ಮದರಾಸುಗಳಲ್ಲಿ, ಮಸೀದಿ-ಮಂದಿರ ಗಳಲ್ಲಿತ್ತ. ಧಾರ್ಮಿಕ ಪರಿಸರದಲ್ಲಿ ಮಕ್ಕಳಿಗೆ ಶಿಕ್ಷಣ ನೀಡಲಾಗುತಿತ್ತು. ಧರ್ಮ, ಆಧ್ಯಾತ್ಮ, ನೀತಿಬೋಧನೆ ಅಲ್ಲದೆ ದೈಹಿಕ ಆರೋಗ್ಯವರ್ಧನೆಯ ಯೋಗಾಸಾನ, ಪ್ರಾಣಾಯಮಗಳಲ್ಲಿಯೂ ತರಬೇತಿ ಕೊಡಲಾಗುತ್ತಿತ್ತು. ಶಿಕ್ಷಣ ಕೇವಲ ಮೇಲ್ವರ್ಗದಲ್ಲಿ ಸೀಮಿತವಾಗಿದ್ದಿದ್ದು ದುರಂತ. ಅಂದಿನ ದಿನಗಳಲ್ಲಿ ಎಂತಹ ಶಿಕ್ಷಣವಿತ್ತೆಂಬುದನ್ನು ಡಾ. ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಬರಹ ಭಾಷಣಗಳಲ್ಲಿ ಕಾಣಸಿಗುತ್ತದೆ. ಅವರ ಪ್ರಕಾರ "ಶಿಕ್ಷಣವು ಮೇಲ್ವರ್ಗಕ್ಕೆ ಸೀಮಿತವಾಗಿತ್ತು. ತಳಸಮುದಾಯಗಳು ಶಿಕ್ಷಣ ಕಲಿಯುವುದು ಅಪರಾಧ, ಅಂತಸ್ಥಳವನ್ನು ಕೂಡ ಸ್ಪರ್ಶಿಸುವುದು ಮಹಾಪಾಪ, ಶಿಕ್ಷಣ

ಕಲಿಯಲು ಕೆಳವರ್ಗಗಳು ಮುಂದಾದರೆ ಕೈಯನ್ನು ಕತ್ತರಿಸುವ, ನಾಲಿಗೆಯನ್ನು ಸುಡುವ, ಸೀಸವನ್ನು ಕಾಯಿಸಿ ಕಿವಿಯಲ್ಲಿ ಹಾಕುವ ಹೀಗೆ ಇನ್ನೂ ಹಲವು ದಂಡನೆಗಳಿದ್ದವು". ಈ ನಿಯಮದಿಂದ ತಳಸಮುದಾಯಗಳು ಶಿಕ್ಷಣವನ್ನು ನಾವು ಕಲಿಯಬಾರದು. ನಮ್ಮಂತಹ ಕೆಳ ಸಮುದಾಯ ಸರಸ್ವತಿಯನ್ನು ಸ್ಪರ್ಶಿಸಿದರೆ ಮೈಲಿಗೆಯಾಗುತ್ತಾಳೆ. ನಮಗೆ ಪಾಪ ಬರುತ್ತದೆ. ನರಕಕ್ಕೆ ಹೋಗಬೇಕಾಗುತ್ತದೆ ಎಂದು, ಆ ಶಕ್ತಿಯಿಂದ ಬಹುದೂರವಿದ್ದರು. ನೆಲೆನಿಂತ ತಳಸಮುದಾಯದ ಸ್ಥಿತಿಯೆ ಹೀಗಾದರೆ ಅಲೆಮಾರಿಗಳ ಪಾಡೇನು? ಗಂಜಿಗಾಗಿ ದಿನಪೂರ್ತಿ ಅಲೆಯಬೇಕಾಗಿದೆ. ಶಿಕ್ಷಣದ ಬಗ್ಗೆ ಆಸಕ್ತಿಯಾದರು ಹೇಗೆ ಬಂದಿತು. ಮನುಷ್ಯನಿಗೆ ಮೊದಲು ಅನ್ನಬೇಕು ನಂತರ ಉಳಿದೆಲ್ಲವು. ಬದುಕಿಗಾಗಿ ಪರದಾಡುತ್ತಿರುವ ಅಲೆಮಾರಿಗಳಿಗೆ ಶಿಕ್ಷಣ ಮರೀಚಿಕೆಯಾಗಿದೆ. ಒಂದು ವೇಳೆ ಕಲಿಯುವ ಆಸಕ್ತಿಯಿದ್ದರೂ ಅವಕಾಶಗಳು ಎಲ್ಲಿಂದ ಬರಬೇಕು. ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸರ್ಕಾರವು ಜಾರಿಗೊಳಿಸಿದರೂ ಇದರ ಬಗ್ಗೆ ಅಲೆಮಾರಿಗಳಿಗೆ ಪರಿವೆ ಇಲ್ಲದ್ದಂತಾಗಿದೆ. ನಾವುಗಳು ಅಲೆಮಾರಿಗಳು ನಮ್ಮಂತವರಿಗೆ ಈ ಓದು ಬರಹ ಏತಕ್ಕೆ? ಎಂಬ ನಿರುತ್ಸಾದಾಯಕವಾದ ಉತ್ತರವನ್ನು ನೀಡುತ್ತಾರೆ. ಜೊತೆಗೆ ಒಂದೊತ್ತಿನ ಊಟವನ್ನು ಹೊಂದಿಸಲು ಪರದಾಡುತ್ತಿರಬೇಕಾದರೆ ಶಾಲೆಗೆ ಹೋಗಿ ಕಲಿಯುವುದು ಅಸಾಧ್ಯವಾದುದು.

ಯಾವುದೆ ಒಬ್ಬ ವ್ಯಕ್ತಿಯು ಶಿಕ್ಷಣರಂಗದಲ್ಲಿ ಪ್ರವೇಶ ಮಾಡಬೇಕಾದರೆ, ಅದರ ಹಿಂದೆ ಆ ಕುಟುಂಬದ ಪಾಲುದಾರಿಕೆ ಬಹುಮುಖ್ಯವಾಗಿರುತ್ತದೆ. ಪ್ರಾಥಮಿಕ ಶಿಕ್ಷಣ ಪ್ರಸಾರಕ್ಕೆ ಜಾತಿವ್ಯವಸ್ಥೆ ಸಿದ್ಧಸಾಧನವಾಗಿದೆ. ಪ್ರತಿಯೊಂದು ಜಾತಿಯು ತಮ್ಮ ಮಕ್ಕಳ ಶಿಕ್ಷಣದ ಜವಬ್ದಾರಿ ಹೋರಬಲ್ಲದು. ಇದರಿಂದ ಜಾತಿಗೆ ರಾಜಕಿಯ ಆಧಾರವಿರುತ್ತದೆ. ಯಾವುದೆ ಪ್ರತಿನಿಧಿ ಸಂಸ್ಥೆಗೆ ಮತದಾರನ ಪಾತ್ರವಹಿಸ ಬಲ್ಲದು. ಅದು ನ್ಯಾಯಾಂಗದ ಕೆಲಸಮಾಡಬಲ್ಲದು. ಇಂತಹ ಒಂದು ಅವಕಾಶ ಅಲೆಮಾರಿಗಳಿಗಿಲ್ಲ. ಎಲ್ಲವೂ ಶಿಕ್ಷಣದಿಂದ ಸಿಗುವುದಾದರೂ ಅದರಿಂದ ದೂರವಿದ್ದು ಕತ್ತಲೆಯಲ್ಲಿಯೆ ಇದ್ದಾರೆ.

ಮನೆಯಲ್ಲಿ ಒಬ್ಬ ವಿದ್ಯಾವಂತನಾದರೆ ಉಳಿದೆಲ್ಲ ಸದಸ್ಯರಿಗೆ ಅವನು ಪ್ರಭಾವ ಬೀರುವಂತವನಾಗಿ ಶಿಕ್ಷಣ ಕಲಿಯಲು ಆಸಕ್ತಿ ಬರುತ್ತದೆ. ಮತ್ತು ಕಲಿಸಲು ಅವನಿಗೂ ಆಸಕ್ತಿ ಇರುತ್ತದೆ. ಆದರೆ ಅಲೆಮಾರಿಗಳ ಜಾತಿ ವ್ಯವಸ್ಥೆಯ ಕುಟುಂಬದಲ್ಲಿ ಅನಕ್ಷರಸ್ಥರಾಗಿರುವುದರಿಂದ ಅವರಿಗೆ ಶಿಕ್ಷಣದ ಒಲವುಗಳ ಬಗೆಗೆ ಅರಿವು ಇಲ್ಲದಿರುವುದು ಕಾರಣವಾಗಿದೆ.

"ಮನೆಯೆ ಮೊದಲ ಪಾಠಶಾಲೆ ತಾಯಿಯೆ ಮೊದಲ ಗುರು" ಎಂಬಂತಹ ಅಕ್ಷರ ನೀತಿಯ ಮಾತಾಗಿದೆ. ಮನೆಯಲ್ಲಿಯೆ ಬೆಳೆಯುವುದರಿಂದ ಅದರ ಪ್ರಭಾವ ಮಕ್ಕಳ ಮೇಲೆ ಉಂಟಾಗುತ್ತದೆ. ಸಮುದಾಯದ ನೀತಿನಿಯಮ, ಭಾಷೆ, ಸಂಕೇತಗಳೆಲ್ಲವನ್ನು ತಾಯಿ ಕಲಿಸುತ್ತಾಳೆ ಜೊತೆಗೆ ತಂದೆ, ಅಜ್ಜ-ಅಜ್ಜಿ, ಅಣ್ಣ-ತಮ್ಮ, ಅಕ್ಕ-ತಂಗಿ ಹಾಗೂ ಕುಟುಂಬದ ಇತರೆ ಸದಸ್ಯರುಗಳ ಮೇಲಿನ ಪ್ರಭಾವದಿಂದ ಅನೇಕ ಅನುಕರಣೆಗಳು ಮಕ್ಕಳ ಮೇಲೆ ಮಾತುಗಾರಿಕೆ ವರ್ತನೆ, ಶಿಸ್ತುಗಳು ಪರಿಣಾಮ ಬೀರುವುದುಂಟು.

ಶಿಕ್ಷಣ ಮತ್ತು ವ್ಯಕ್ತಿತ್ವ ರೂಪಿಸುವ ಮೂರು ಪ್ರಭಾವಗಳೆಂದರೆ ೧. ಮನೆ ೨. ತಂದೆ-ತಾಯಿ ಮತ್ತು ಸದಸ್ಯರು ೩. ಶಿಕ್ಷಕರು ಮತ್ತು ಸ್ಥಳಿಯ ಸಮಾಜ. ಈ ಮೂರು ಅಂಶಗಳು ಅಲೆಮಾರಿಗಳ

ಸಮುದಾಯಗಳ ಮೇಲೆ ಪ್ರಭಾವ ಬೀರಲಾರವು. ಕಾರಣ ಮೊದಲನೆಯದು ಮನೆಯಲ್ಲಿ ಕಲಿತವರಾರು ಇರುವುದಿಲ್ಲ. ಎರಡನೆಯದು ತಂದೆ-ತಾಯಿ ಇತರೆ ಸದಸ್ಯರು ಅಕ್ಷರ ವಂಚಿತರು, ಸ್ಥಳಿಯ ಸಮಾಜ ಮುಟ್ಟಿಸಿ ಕೊಳ್ಳುವುದಿಲ್ಲ. ಅಸಹ್ಯ ಪಡುವುದರಿಂದ ಶಿಕ್ಷಣದ ಮೂಲಕ ಪ್ರಭಾವಬೀರಲಾರರು. ಶಾಲೆಗೆ ಹೋಗದೆ, ಇರುವುದರಿಂದ ಶಿಕ್ಷಕರು ಹೇಗೆ ಪ್ರಭಾವಬೀರಲು ಸಾಧ್ಯ? ಆದುದರಿಂದ ಶಿಕ್ಷಣವು ಜಾತಿ ಪರಿಧಿಯೊಳಗೆ ಸಿಲುಕಿಕೊಂಡು ಅಲೆಮಾರಿಗಳಿಗೆ ಕಬ್ಬಿಣದ ಕಡಲೆಯಾಗಿದೆ. ಒಂದು ದೇಶದ ನಿಜವಾದ ಸಂಪತ್ತು ಮಾನವ. ಅವರು ಸುಶಿಕ್ಷಿತರಾಗಿ, ಸ್ವಾವಲಂಬಿಗಳಾಗಿ, ಪ್ರಭಾವಿತರಾದರೆ ಅದು ಆಸ್ತಿ ಎನಿಸುತ್ತದೆ. ಇಲ್ಲವಾದರೆ ದೇಶಕ್ಕೆ ಹೊರೆಯಾಗಬಲ್ಲದು. ಆದುದರಿಂದ ಅವರಿಗೆ ಗುಣಮಟ್ಟದ ಶಿಕ್ಷಣ ಅವಶ್ಯಕತೆ ಯಿದೆ. ಎಲ್ಲ ಕ್ಷೇತ್ರಗಳಲ್ಲಿ ಜಾಗತೀಕರಣ ಹಾಗೂ ಉದಾರೀಕರಣದ ದಿನಗಳಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಮಹತ್ವವಿದೆ.

ಮೊಟ್ಟಮೊದಲನೆಯದಾಗಿ ಈ ಸಮುದಾಯಗಳಿಗೆ ಶಿಕ್ಷಣ ನೀಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕ ಶಿಕ್ಷಣ ಕಡ್ಡಾಯ ಹಾಗೂ ಉಚಿತವಾಗಿ ದೊರೆಯುವಂತಾಗಬೇಕು. ಈಗಾಗಲೆ ಕೇಂದ್ರಸರ್ಕಾರ ೬ ರಿಂದ ೧೪ ವರ್ಷದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಪಡೆಯುವ ಹಕ್ಕನ್ನು ಕಾನೂನಿನ ಮೂಲಕ ನೀಡಿರುವುದು ಸ್ವಾಗತಾರ್ಹ. ಕಾನೂನು ಮಾಡಿ ಕೈತೊಳೆದುಕೊಂಡು ಬಿಟ್ಟರೆ ಕೆಲಸವಾಯಿತೆಂದಲ್ಲ. ಅದನ್ನು ಅನುಷ್ಠಾನದಲ್ಲಿ ತರಲು ಸರ್ಕಾರದ ಅಧಿಕಾರಿಗಳು ಸಮುದಾಯದ ವಿದ್ಯಾವಂತರ ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗಿದೆ.

೩.೩.೨. ಜಾತಿಯಲ್ಲಿ ಉಪಜಾತಿಯ ಕಲ್ಪನೆ

ಪ್ರತಿಯೊಂದು ಜಾತಿಯಲ್ಲಿ ಸೂಕ್ಷ್ಮವಾದ ವ್ಯತ್ಯಾಸ ಮತ್ತು ವಿನ್ಯಾಸಗಳಿವೆ. ಭಿನ್ನ-ವಿಭಿನ್ನ ಪರಿಸರ ಪ್ರದೇಶದಲ್ಲಿ ನೆಲೆಯೂರಿದ ಒಂದೆ ಜಾತಿಯ ಜನರು ಆಯಾ ಪ್ರದೇಶದಲ್ಲಿ ಸಾಂದರ್ಭಿಕವಾಗಿ ಮಾಡಿ ಕೊಂಡು, ಬಂದಿರುವ ವೃತ್ತಿಗಳು ಆಯಾ ಪ್ರದೇಶದ ವೈಶಿಷ್ಟ್ಯದಿಂದಾಗಿಯೆ ಜಾತಿಗಳು- ಉಪಜಾತಿಗಳಂತೆ ಕಾಣುತ್ತವೆ. ಆ ಜಾತಿಗಳು ಪ್ರತ್ಯೇಕ ಜಾತಿಗಳಾಗಿ ಇಬ್ಭಾಗವಾಗಿವೆ.

ಸಮುದಾಯಗಳು ತಮ್ಮದೆ ಆದ ರೀತಿಯಲ್ಲಿ ಕೊಡುಕೊಳ್ಳುವಿಕೆಗಳನ್ನು ನಡೆಸುತ್ತಾ ಬಂದಿದ್ದಾರೆ. ಆಯಾ ಸಮುದಾಯವು ಅಲ್ಲಿನ ಪರಿಸರದ ಪ್ರಭಾವದಲ್ಲಿ ಒಳಗಾಗಿ ಲೋಕರೂಢಿಗಳು, ನೈತಿಕ ನಿಯಮ ಗಳು, ಸಂಪ್ರದಾಯ ಹಾಗೂ ಸಂಸ್ಕೃತಿ ಬದಲಾಯಿಸಿಕೊಂಡಿರಬಹುದು. ಇದು ಹೆಚ್ಚಾಗಿ ನೆಲೆನಿಂತಾಗ ಪರಿಣಾಮ ಬೀರುತ್ತದೆ. ಅಲೆಮಾರಿಗಳೂ ಅಲೆಯುತ್ತಿರುವಾಗ ಅಲ್ಲಿನ ಪರಿಸರದಲ್ಲಿ ಒಳಗಾಗುತ್ತದೆ. ಉದಾ: ಹೈದ್ರಬಾದ್ ಕರ್ನಾಟಕ ಪ್ರದೇಶದಲ್ಲಿ ಅಲೆಮಾರಿಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಲೆಮಾರಿಗಳ ಜೊತೆಯಲ್ಲಿಯೆ ಸಂಬಂಧ ಬೆಳೆಸಲು ಇಷ್ಟಪಡುತ್ತಾರೆ. ಈ ಪ್ರದೇಶದ ಅನುಗುಣವಾಗಿ ಇಲ್ಲಿನ ಆಹಾರ ಕ್ರಮಗಳಲ್ಲಿ ಒಳಗಾಗುತ್ತಾರೆ. ಅಲೆಮಾರಿ ಗುಣಲಕ್ಷಣ, ವೃತ್ತಿಗಳ ವ್ಯತ್ಯಾಸ ಕಂಡು ಬರುವುದುಂಟು.

ಜಾತಿ ಮತ್ತು ಉಪಜಾತಿಗಳ ನಡುವಣ ಸಂಬಂಧ ವಿದ್ವಾಂಸರಿಗಷ್ಟೆ ಅಲ್ಲದೆ, ಸಮಾಜಶಾಸ್ತ್ರಜ್ಞರಿಗೂ

ಸಮಸ್ಯೆಯಾಗಿದೆ. ಜಾತಿ ಮತ್ತು ಉಪಜಾತಿಯನ್ನು ವಿಶ್ಲೇಷಿಸುವಾಗ ಯಾವುದನ್ನು ಕೇಂದ್ರಬಿಂದುವಾಗಿ ತೆಗೆದುಕೊಳ್ಳಬೇಕು ಹಾಗೂ ಉಪಜಾತಿಗಳೂ ಹೇಗೆ ರೂಪಗೊಳ್ಳುತ್ತವೆ? ಅವುಗಳ ನಡುವಣ ವ್ಯತ್ಯಾಸಗಳನ್ನು ಜನರು ಆಚರಣೆಯಲ್ಲಿ ಹೇಗೆ ಗುರುತಿಸುತ್ತಾರೆ? ಇತ್ಯಾದಿ ದ್ವಂದ್ವಗಳಿವೆ. "ಯಾವುದೆ ಒಂದು ಉಪಜಾತಿ ಜಾತಿ, ಜಾತಿಸಮುಚ್ಚಯ ಮತ್ತು ವರ್ಣವೆಂಬ ಮೂರು ಲಕ್ಷಣಗಳು ಹೊಂದಿವೆ. ಯಾವುದೆ ಉಪಜಾತಿಯನ್ನು ಜಾತಿ ಎಂದು ಕರೆಯಬಹುದು. ಏಕೆಂದರೆ ಇವುಗಳಲ್ಲಿ ಒಳಬಾಂದವ್ಯದ ವಿವಾಹ ಸಂಬಂಧಗಳ ಸಮೂಹಗಳಾಗಿದ್ದು ಹವ್ಯಾಸ, ಸಾಂಸ್ಕೃತಿಕ ಲಕ್ಷಣಗಳಲ್ಲಿ ವ್ಯತ್ಯಾಸ ಇರುವುದನ್ನು ಜನಾಂಗದ ಮೂಲವನ್ನು ಹೊಂದಿದೆ" ಎಂದು ಐರಾವತಿ ಕರ್ವೆಯವರ ಅಭಿಮತವಾಗಿದೆ.

"ಉಪಜಾತಿಗಳೂ ಜಾತಿಯ ಅನೇಕ ಲಕ್ಷಣಗಳನ್ನು ಹೊಂದಿವೆಯೆಂಬುದನ್ನು ಒಪ್ಪುತ್ತರಾದರು ಜಾತಿಯೊಂದಿಗೆ ಗುರುತಿಸಲಾಗದು" ಎಂದು ಜಿ.ಎಸ್. ಘುರ್ಯೆರವರ ಅಭಿಪ್ರಾಯವಾಗಿದೆ. ಒಂದು ಉಪಜಾತಿ ಒಂದು ಸಮೂಹವಾಗಿ ಜಾತಿಯ ನಿಯಮಗಳೂ ಹೊಣೆಗಾರಿಕೆ ಇತ್ಯಾದಿಗಳಿಂದ ಸಂಪೂರ್ಣವಾಗಿ ಸ್ವತಂತ್ರ ಅಸ್ಥಿತ್ವವನ್ನೆಲ್ಲ ಹೊಂದಿಲ್ಲ. ಇವುಗಳ ಶ್ರೇಣಿಕರಣ ಜಾತಿಗೆ ಹೊಂದಿಕೊಂಡಂತೆಯೆ ಇದೆ. ಉಪಜಾತಿಗಳೂ ಆ ಸಮುದಾಯಗಳಿಗೆ ತಿಳಿಯುತ್ತವೆಯಾದರೂ ಸಮಾಜಕ್ಕೆ ತಿಳಿದಿರಿವುದಿಲ್ಲ, ತಿಳಿದಿರುವುದು ಜಾತಿ ಮಾತ್ರ. "ಮೂಲ ಘಟಕ ವಿಭಾಗಿಕರಣದಿಂದ ಉಪಜಾತಿಗಳು ಹುಟ್ಟಿವೆ"ಯೆಂದು ಘುರ್ಯೆಯವರ ಮತ್ತೊಂದು ಅಭಿಪ್ರಾಯವಾಗಿದೆ.

ವೃತ್ತಿ-ಪ್ರಭೇದ, ವಲಸೆ, ಹೊಸ ಪಂಥದ ಹುಟ್ಟು, ಕೆಲವೊಂದು ವಿಶಿಷ್ಟತೆ ಅಥವಾ ಅಡ್ಡ ಹೆಸರು ಇತ್ಯಾದಿಗಳಿಂದ ಪ್ರಭೇದಿಕರಣ ತಾವು ಮೂಲ ಘಟಕದಿಂದ ಬಂದವರಾಗಿರುತ್ತಾರೆ. ಬ್ರಿಟಿಷ್ ಕಾಲದ ನಂತರ ಕೆಲವೊಂದು ವರ್ಗಗಳಿಗೆ ಸೌಲಭ್ಯಕೊಡುವ ಸಂಬಂಧ ಜನಸಂಖ್ಯೆಯನ್ನು ಜಾತಿಗಳಾಗಿ ಜಾತಿಗಳನ್ನು ಉಪಜಾತಿಗಳಾಗಿ ವಿಭಾಗಿಸುವ ಕಾರ್ಯವು ತೆರೆಮರೆಯಲ್ಲಿಯೆ ನಡೆಯಿತು. ಮತ್ತಷ್ಟು ಜಾತಿ ಉಪಜಾತಿಗಳೆಂಬ ಕಲ್ಪನೆ ಬಿಗಿಯಾಗುತ್ತ ಹೋಯಿತು. ಸಿಂಧೋಳ್ಳರು ನಾಡಿನಲ್ಲಿ ದುರುಗಮುರುಗಿ ಊರಮ್ಮ ಆಡಿಸುವ, ಕೂಗಮ್ಮ ಆಡಿಸುವ ಇತ್ಯಾದಿಗಳು ಕರೆಯುವುದುಂಟು. ಪೋತರಾಜನು ದುರಗಮ್ಮ, ಮರಗಮ್ಮನ ದೇವಿ ಬುಟ್ಟಿ ಹೊತ್ತುಕೊಂಡು ದೇವಿ ಆರಾಧಾನೆ ಮಾಡಿ ಬದುಕುವ ಸಮುದಾಯವಾಗಿದೆ. ಪ್ರಾದೇಶಿಕವಾಗಿ ಮತ್ತು ಅಲ್ಲಿನ ವೃತ್ತಿಯನುಸಾರವಾಗಿ ಬೇರೆ ಬೇರೆ ಹೆಸರಿನಿಂದ ಜಾತಿಯಲ್ಲಿ 'ಉಪಜಾತಿ' ಎಂಬಂತೆ ಕರೆಯಲಾಗುತ್ತಿದೆ.

'ದುರುಗ-ಮುರುಗಿ' ಎಂಬುದನ್ನು ಸರ್ಕಾರವು ಹಿಂದುಳಿದ ವರ್ಗದಲ್ಲಿ ಸೇರಿಸಲಾಗಿದ್ದು, ಇದೆ ವೃತ್ತಿಯನ್ನು ಕೈಗೊಳ್ಳುವ ಅದೆ ಸಮುದಾಯದ 'ಸಿಂಧೋಳ್ಳು' ಎಂದು ಕರೆಯಲಾಗಿದ್ದು, ಅವರನ್ನು ಪರಿಶಿಷ್ಟ ಜಾತಿಯಲ್ಲಿ ಸೇರಿಸಲಾಗಿದೆ. ಹೀಗೆ ಹಲವಾರು ಅಲೆಮಾರಿಗಳು ಮೂಲದಲ್ಲಿ ಒಂದೆ ಲಕ್ಷಣ, ಬೆಡಗುಗಳು, ಆಚಾರ-ವಿಚಾರ, ವಿಧಾನದಲ್ಲಿ ಅಲ್ಪಸ್ವಲ್ಪ ಭಿನ್ನತೆಯಿರಬಹುದು. ಆಹಾರ, ವೇಷ-ಭೂಷಣಗಳಲ್ಲಿ ಮತ್ತು ಪರಿಸರ, ಆರ್ಥಿಕ ಪಲ್ಲಟಗಳು ಒಂದು ಸಮುದಾಯವನ್ನು ಮೇಲ್ಮಟ್ಟಕ್ಕೆ ಇನ್ನೊಂದು ಸಮುದಾಯ ಕೆಳಮಟ್ಟದಲ್ಲಿರಬಹುದು. ಆದರೆ ಮುಂದುವರಿದ ಸಮುದಾಯ ತಮ್ಮ

ಅಂತಸ್ತು ಹೆಚ್ಚಿಸಿಕೊಳ್ಳಲು ತನ್ನದೆ ಜಾತಿಯ ಅಂತಸ್ತಿನಲ್ಲಿರುವ ಸಮುದಾಯದೊಂದಿಗೆ ಕೊಡುಕೊಳ್ಳುವಿಕೆ ಮಾಡುತ್ತದೆ. ಅದೆ ಜಾತಿಯ ಅಲೆಮಾರಿಗಳ ಜೊತೆ ಕೊಡುಕೊಳ್ಳುವಿಕೆಗಳನ್ನು ಪೂರೈಸಲು ಮುಂದೆ ಬರುವುದಿಲ್ಲ. ಆದ್ದರಿಂದ ಪ್ರತ್ಯೇಕ ಉಪಜಾತಿಗಳಂತೆ ಕಾಣುತ್ತವೆ.

ಅಲೆಮಾರಿ ಸಮುದಾಯಗಳಲ್ಲಿ ಜಾತಿ ಪಂಚಾಯಿತಿ ಬಹಳಷ್ಟು ಬಿಗಿಯಾಗಿದ್ದರಿಂದ ಯಾವುದೆ ತಪ್ಪನ್ನು ಮಾಡಿದರು ತಪ್ಪಿತಸ್ಥರನ್ನು ಕಠಿಣವಾದ ಶಿಕ್ಷೆ ಹಾಗೂ ದಂಡನೆಗಳನ್ನು ನೀಡುವಲ್ಲಿ ಮತ್ತು ಆರೋಪಕ್ಕೆ ಗುರಿಯಾದವರನ್ನು ಜಾತಿಯಿಂದ ಬಹಿಷ್ಕಾರಿಸುವುದರೊಂದಿಗೆ ನ್ಯಾಯ ತೀರ್ಮಾನಗಳಾಗುತ್ತವೆ. ಇಂತಹ ಬಹಿಷ್ಕಾರದಲ್ಲಿ ಒಳಗಾದವರನ್ನು ಸಮುದಾಯದ ಯಾವುದೆ ವ್ಯಕ್ತಿ ಇವರಿಗೆ ಸಹಕಾರ ಅಥವಾ ಸೌಲಭ್ಯಗಳನ್ನು ಕೊಡಲಾರರು ಮತ್ತು ಕೊಡುಕೊಳ್ಳುವಿಕೆಯ ಮಾತು ಬಲು ದೂರ. ಬಹಿಷ್ಕೃತರಾದ ವ್ಯಕ್ತಿಗಳು ಸಮುದಾಯದಿಂದ ತಿರಸ್ಕೃತರಾಗಿ ಹೊರಬಂದು ನೆಲೆಸುವ ಒಂದು ಸಮೂಹವಾಗಿದೆ. ಸಮುದಾಯದಿಂದ ಬಂದ ಜಾತಿ, ವರ್ಗ, ಉಪಜಾತಿಯಂತೆ ಕಾಣಬಹುದು.

ಪ್ರಾದೇಶಿಕ ಭಿನ್ನತೆಯ ಉದ್ದೇಶದಿಂದ ಅಲ್ಲಿನ ಪರಿಸರ ಹೊಂದಿಕೆಯಾದಂತೆ ಜಾತಿಯು ಉಪಜಾತಿ ಎಂಬ ಕಲ್ಪನೆ ಬರಲು ಸಾಧ್ಯವಿದೆ. ಉದಾಹರಣೆ ಬುಡ್ಗಜಂಗಮ್ ಎನ್ನುವ ಮೂಲ ಜಾತಿಯವರು ಈ ಮೇಲಿನ ಕಾರಣದಿಂದಾಗಿ ಸಮುದಾಯದಿಂದ ತಿರಸ್ಕೃತರಾದರೆ ಇಂದು ಬೇರೆ ಬೇರೆ ಹೆಸರಿನಿಂದ ಗುರುತಿಸಿಕೊಂಡು ಅದೆ ಹೆಸರಿನಿಂದ ಅವರದೆ ಸಮುದಾಯದೊಂದಿಗೆ ಸಂಬಂಧ ಬೆಳೆಸಲು ಮುಂದೆ ಬರುತ್ತದೆ. ಉದಾ: ಬುಡ್ಗಜಂಗಮ್, ಬೈರಾಗಿ, ಬಹುರೂಪಿ, ಜಗ್ಗಾಲಿ, ಕುರುಕುರು ಮಾಮ ಇತ್ಯಾದಿಗಳು ಹೆಸರುಗಳಿಂದ ಕರೆಯಿಸಿಕೊಂಡಿದೆ. ಸ್ವಲ್ಪ ಮಟ್ಟದ ಅಂತಸ್ತನ್ನು ಗಿಟ್ಟಿಸಿಕೊಂಡನಂತರ ಜಗ್ಗಾಲಿ, ಜಗ್ಗಲಿಯ ಬೆಸ ಬೆಡಗಿನೊಂದಿಗೆ ಸಂಬಂಧ ಬೆಳೆಸುತ್ತಾರೆ. ಹಾಗೆಯೆ ಕುರುಕುರು ಮಾಮ ಬೇರೊಂದು ಪ್ರದೇಶದ ಕುರುಕುರು ಮಾಮರ ಜೊತೆ ಸಂಬಂಧ ಬೆಳೆಸುತ್ತಾರೆ. ಆದರೆ ಹಗಲುವೇಷ ಮಾಡುವ ಅದೆ ಜಾತಿ ಯವರೊಂದಿಗೆ ಸಂಬಂಧ ಬೆಳೆಸಲು ಮುಂದೆ ಬರುವುದಿಲ್ಲ. ಹೀಗೆ ಅನೇಕ ಅಲೆಮಾರಿ ಜಾತಿಗಳು ತಮಲ್ಲಿರುವ ಲಕ್ಷ್ಮಣ ರೇಖೆಯನ್ನು ದಾಟದೆ, ಅದರಿಂದ ಆಚೆ ಬರದೆ ತಮ್ಮ ಬವಣೆಗಳನ್ನು ತಾವೆ ಸೃಷ್ಟಿಸುತ್ತ ಮುಂದುವರಿಸಿಕೊಂಡು ಬಂದಿದ್ದಾರೆ.

ಮೂಲ ಜಾತಿ	ಉಪಜಾತಿಯಂತೆ ಕಾಣಸುವ ಜಾತಿನಾಮಗಳು
೧. ಹೆಳವ	ಎತ್ತಿನ ಹೆಳವ, ಗಂಟೆ ಹೆಳವ, ಚಾಪೆ ಹೆಳವ, ಮಂದಲ ಹೆಳವ, ಕಂಬಿ ಹೆಳವ, ದೂದಿ ಹೆಳವ, ತಿತ್ತಿ ಹೆಳವ, ಕೂಕಣೆ ಹೆಳವ, ಅಡವಿ ಹೆಳವ, ಮಾರ ಹೆಳವ, ಸಾಧು ಹೆಳವ, ತಂಬೂರಿ ಹೆಳವ, ಮದ್ದಿನ ಹೆಳವ ಇತ್ಯಾದಿ.
೨. ಹಕ್ಕಿ-ಪಿಕ್ಕಿ	ಶಿಕಾರಿ, ಪಾರ್ಧಿಗಳು, ಪಾನ್ಸೆಪಾರ್ಧಿಗಳು, ಅಡವಿಚೆಂಚರು, ಮೇಲು ಶಿಕಾರಿಗಳು ಅರಣ್ ಶಿಕಾರಿಗಳು ಇತ್ಯಾದಿಗಳು
೩. ಚನ್ನದಾಸರು	ಶಂಖದಾಸರು, ದೊಂಬಿದಾಸ, ಹಾಡುವ ದಾಸ, ಕಾಶಿದಾಸರು, ಬೇಡುವ ದಾಸರು, ಗೊಲ್ಲದಾಸರು, ಹೆಣ್ಣುದಾಸರು, ದಾಸರು, ತಿರುಮಲೆ ದಾಸರು ಇತ್ಯಾದಿ.

೪. ಬುಡ್ಗಜಂಗಮ್ ಹಗಲುವೇಷಗಾರರು, ಬುರ್ರಕಥೆಯವರು, ಬಹುರೂಪಿಗಳು, ಬಾಳಸಂತೋಷಿ, ಬೈರಾಗಿ, ಸನ್ಯಾಸಿ, ಜಗ್ಗಾಲಿ, ಜಂಗಾಲರು, ಕುರುಕುರುಮಾಮ ಇತ್ಯಾದಿ.

೫. ಸಿಂಧೋಳ್ಳು ದುರುಗ-ಮುರುಗಿ, ಜಿರ್‌ಬುರ‍್ರು, ಚಿಂದೋಳ್ಳರು, ಪೋತರಾಜರು, ಸುಂಕಲಮ್ಮನೋರು, ಉರಿಮಾರಿಯಾರ್, ಕೂಗಮ್ಮನ ಆಡಿಸುವವರು ಬೆಂಕಿಮಾರಿಯರ್, ದುರುಗಮ್ಮ ಆಡಿಸುವರು, ಮರಗಮ್ಮ ಆಡಿಸುವರು.

೬. ಗೊಂಧಳಿ ಗೊಂದಲಿಗರು, ಗೊಂದಳಿಗರು, ಗೊಂದಲದವರು, ಬುಡುಬುಡುಕಿಯವರು, ಜೋತಿಷಿಗಳು, ಕವಲೆತ್ತಿನವರು, ಬಾವರು, ಸಿಂಗದವರು, ವಾಸುದೇವರು, ಚಿತ್ರಪಟದವರು, ಗಿಳಿಶಾಸ್ತ್ರದವರು, ಭೂತೆರಕತಿ ಇತ್ಯಾದಿ.

೭. ಬೈಲುಪತ್ತಾರ ಬೈಲುಕಂಬಾರ, ಬೈಲು ಅಕ್ಕಸಾಲಿಗ, ಪತ್ತಾರ, ಬೈಲುಪತ್ತಾರ್ ಇತ್ಯಾದಿ.

೮. ಸಿಕ್ಕಲಿಗರು ಶಿಕ್ಕಾಲಿಗಳು, ಸಿಕ್ಕಲರು, ಚಿಕ್ಕಲಿಗಾರರು, ಸಿಕ್ಲಿಗಾರರು ಇತ್ಯಾದಿ.

೯. ದೊಂಬರು ಡೊಂಬರು, ಡೊಂಬರಾಟರು, ಡೊಮ್ಮನಾಡಿಸುವರು, ಡೊಮ್ಮಾರು, ದೊಂಬಾರಿ, ಕಸರತ್ತಿನವರು, ಸರ್ಕಸ್‌ಮಾಡುವವರು, ಬಾಜಿಗಾರರು ಇತ್ಯಾದಿ

೧೦. ಕೊರವ ಕೊರಚ, ಕೊರವ, ಕೊರಮ, ಕುಂಚಿಕೊರವ, ಕೊರವಂಜಿಯರು, ಭಜಂತ್ರಿ, ಕುಕ್ಕೆ ಕೊರವ, ವಾಲಗದ ಕೊರಮ, ಹಗ್ಗದ ಕೊರವ, ಎತ್ತಿನ ಕೊರವ, ಉಪ್ಪು ಕೊರವರು, ಬಾರಿಗಾಯಿ ಕೊರವರು, ಗರಡಿ ಕೊರವರು, ಕೋಲೆ ಕೊರವರು, ಹಾವಿನ ಕೊರವರು ಇತ್ಯಾದಿ.

೧೧. ಹಂದಿಜೋಗಿ ಕಿನ್ನರಿಜೋಗಿ, ಡಬ್ಬಜೋಗಿ, ಎಣ್ಣೆಜೋಗಿ, ಬಳಗಾರಜೋಗಿ, ಕುಣಬಿಜೋಗಿ, ಹಿಂದೂಜೋಗಿ, ಹಂದಿಚಿಕ್ಕ, ಹಂದಿಗೊಲ್ಲ ಇತ್ಯಾದಿ.

೧೨. ಕಿಳ್ಳೇಕ್ಯಾತ ಶಿಳ್ಳೇಕ್ಯಾತ, ಬುಂಡೆಬೆಸ್ತ, ಗೊಂಬೆರಾಮರು, ತೊಗಲುಗೊಂಬೆಯವರು, ಕಟುಬ, ಚಾಲಗಾರ ಇತ್ಯಾದಿ.

೧೩. ದಕ್ಕಲಿಗರು ಡೊಕ್ಕಲೋರು, ದೊಕ್ಕಲು ಮಕ್ಕಳು, ದೊಕ್ಕಲಾರು, ಡಕ್ಕಲಿಗ ಇತ್ಯಾದಿ.

೧೪. ಗೋಸಂಗಿ ಗೋಸಾಯಿ, ಗೋಸಾವಿ, ದಾವುರಿಗೆ ಗೋಸಾಯಿ, ಗಂಧಣ್ಣೆಯವರು, ಭವಾಜಿಗಳು, ಭೈರಾಗಿಗಳು ಇತ್ಯಾದಿ.

೧೫. ಅಡವಿಚೆಂಚರು ತೆಲಗುಚೆಂಚರು, ಕೃಷ್ಣಾಚೆಂಚ, ಬೊಂಬಾಚೆಂಚ, ಶಿಕಾರಿಚೆಂಚ, ಚೆಂಚುಕುಲರಿ, ಚೆಂಚುವಾಡ, ಬೆಕ್ಕುಚೆಂಚು, ಯನಾದಿಗಳು ಇತ್ಯಾದಿ.

೧೬. ಸುಡುಗಾಡುಸಿದ್ಧ ಕಾಡುಪಾಪಯ್ಯಗಳು, ತೆಲುಗು ಜಂಗಮ್, ಗೊಂಬೆಯಾಟದವರು, ಪಾಕನಕಟ್ಟಿಕೊಲ್ಲ, ಸಿದ್ಧರು, ಕಾಡುಸಿದ್ಧರು, ಮಸಣಸಿದ್ದ, ಕಾಟಿಪಾಪ, ಸ್ಮಶಾನಜೋಗಿ, ಬೈರಾಗಿ, ರಾಮಕೊಂಡಿಗಳು ಇತ್ಯಾದಿ.

ಹೀಗೆ ಒಂದೆ ಜಾತಿಯ ಸಮುದಾಯಗಳಲ್ಲಿ ಯಾವುದೊ ಕಾರಣಕ್ಕಾಗಿ ಅಯಾ ಪ್ರದೇಶದ ಪ್ರಭಾವದಲ್ಲಿ ಒಳಗಾಗಿ ಅಲ್ಲಿನ ಆಹಾರ, ಆಚಾರ, ವಿಚಾರ, ಸಂಪ್ರದಾಯ, ರೂಢಿ, ಸಂಬಂಧಗಳನ್ನು ಪ್ರತ್ಯೇಕವೆಂಬಂತೆ ಮಾಡಿಕೊಂಡಿವೆ.

ಕೆಲವು ಪ್ರದೇಶಗಳಲ್ಲಿ ಉತ್ಪಾದನೆ, ಉತ್ಪಾದನಾ ಸಂಬಂದಗಳು ಪ್ರಾದೇಶಿಕವಾಗಿ ಬದಲಾಗುವುದರಿಂದ ಒಂದು ಪ್ರದೇಶದ ಉತ್ಪಾದನಾ ಸಂಬಂಧಕ್ಕೂ ಮತ್ತೊಂದು ಪ್ರದೇಶದ ಉತ್ಪಾದನಾ ಸಂಬಂಧಕ್ಕೂ ವ್ಯತ್ಯಾಸ ಉಂಟಾದಾಗ ಅದೆ ಜಾತಿಯು ಬೇರೆ ಜಾತಿ ಎಂಬ ಕಲ್ಪನೆ ಬರುವುದು ಸಹಜ. ಆದ್ದರಿಂದ ಅಧ್ಯಯನಕಾರರು ಒಂದು ಜಾತಿಯಲ್ಲಿ ಅನೇಕ ಉಪಜಾತಿಗಳಾಗಿವೆ ಎನ್ನುತ್ತಾರೆ. ಇದು ಮೇಲ್ನೋಟದಲ್ಲಿ ಕಂಡುಬಂದರು ಸೂಕ್ಷ್ಮವಾಗಿ ಗಮನಿಸಿದಾಗ ಬೆಡಗು, ದೇವರು ಹಾಗೂ ಮೂಲ ಇತ್ಯಾದಿಗಳಲ್ಲಿ ಸಾಮೀಪ್ಯವಿರುತ್ತದೆ.

ಜಾತಿಯು ಒಂದು ಪ್ರದೇಶದ ಪರಿಸರ ಮತ್ತು ಆಹಾರಕ್ಕೆ ಹೊಂದಿಕೊಂಡು ಅದನ್ನು ಮುಂದು ವರಿಸಿದರೆ ಮತ್ತೊಂದು ಭಾಗದಲ್ಲಿ ಬೇರೆದೆ ರೀತಿಯ ಆಹಾರ ಮತ್ತು ಪರಿಸರಕ್ಕೆ ಹೊಂದಾಣಿಕೆ ಮಾಡಿ ಕೊಂಡಿರುತ್ತಾರೆ. ಉದಾಹರಣೆ ಶಿಳ್ಳೆಕ್ಯಾತನೆಂಬ ಅಲೆಮಾರಿ ಸಮುದಾಯವು ತೊಗಲು ಗೊಂಬೆಗಳನ್ನು ಆಡಿಸುತ್ತಾ ಆಟದ ಮದ್ಯದಲ್ಲಿ ಕಿಳ್ಳೇ ಚೇಷ್ಟೆ ಮಾಡುತ್ತಿದ್ದರಿಂದ ಈ ಹೆಸರು ಬಂದಿದೆ. ಅದು ಯಾವ ಪ್ರದೇಶದಲ್ಲಿ ಮಾನ್ಯತೆ ಇರುವುದೊ ಅದೆ ಪ್ರದೇಶದಲ್ಲಿ ಅಲೆಯುತ್ತಿರುತ್ತಾರೆ. ಉದಾಹರಣೆ ಬಳ್ಳಾರಿಯಲ್ಲಿ ಹೆಚ್ಚಾಗಿ ಕಂಡುಬಂದರೆ, ಅದು ಬಳ್ಳಾರಿಯಲ್ಲಿ ನಿರಂತರ ಇರುತ್ತದೆ. ಇದೆ ಜಾತಿಯವರು ಮಲೆನಾಡು ಪ್ರದೇಶದ ಭಾಗದಲ್ಲಿ ಶಿಳ್ಳೆಕ್ಯಾತರೆಂದು ಗುರುತಿಸಿಕೊಳ್ಳುತ್ತಾರೆ. ಶಿಳ್ಳೇ ಎಂದರೆ ಮೀನುಗಳ ಒಂದು ಜಾತಿ ಎಂದು ಕರೆಯುತ್ತಾರೆ. ನಿರಂತರ ಮೀನಿನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಹಾಗೂ ಶಿಳ್ಳೆಕ್ಯಾತ ಮೀನನ್ನೆ ಹೆಚ್ಚು ಹಿಡಿದು ಮಾರಾಟಮಾಡುತ್ತಿರುವುದರಿಂದ ಶಿಳ್ಳೆಕ್ಯಾತರೆಂದು ಹೆಸರಾಯಿತು. ಕಿಳ್ಳೆಕ್ಯಾತರು ಮೀಸಲಾತಿಯ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದರೆ, ಶಿಳ್ಳೆಕ್ಯಾತರು ಓಬಿಸಿ ಪಟ್ಟಿಯಲ್ಲಿದ್ದಾರೆ. ಈ ಇಬ್ಬರಿಗೂ ಕೊಡುಕೊಳ್ಳುವಿಕೆಗಳು ಮತ್ತು ಬೆಡಗುಗಳು ಸಾಮೀಪ್ಯವಾಗಿದ್ದು, ಒಂದೆ ಜಾತಿಯಾಗಿ ಕಂಡುಬರುತ್ತದೆ. ಆಯಾ ಪರಿಸರ ಮತ್ತು ವೃತ್ತಿಗಳಿಂದ ಒಂದೆ ಜಾತಿಯು ಉಪಜಾತಿಯಾಗಿ ಕವಲೊಡೆದಿವೆ.

೩.೩.೩. ಉಪಜಾತಿ ಮತ್ತು ಅಭಿವೃದ್ಧಿಯ ತೊಡಕು

ತಳಪಾಯದಲ್ಲಿರುವ ಅಲೆಮಾರಿ ಸಮುದಾಯಗಳಿಗೆ ಸರ್ಕಾರವು ಜಾರಿಗೆ ಮಾಡುವ ಯೋಜನೆಗಳು ಇತ್ತೀಚೆಗೆ ಬೆಳಕಿಗೆ ಬರುತ್ತಿವೆ. ಒಂದು ಜಾತಿಗೆ ಬೇಕಾದ ಅಭಿವೃದ್ಧಿಗಳೂ ಯಾವ ತೆರನಾಗಿರಬೇಕು? ಎಂತಹ ಯೋಜನೆಗಳು ಬೇಕು? ಈ ಯೋಜನೆಗಳು ಅಲೆಮಾರಿ ಸಮುದಾಯಗಳಿಗೆ ಹೇಗೆ ಸ್ಪಂದಿಸುತ್ತವೆ? ಎಂದು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಮತ್ತು ಯೋಜನೆಗಳನ್ನು ಕಾರ್ಯರೂಪದಲ್ಲಿ ತರಬಹುದು. ಆದರೆ ಸಮಸ್ಯೆ ಬರುವುದೆ ಇದರಿಂದ. ಕಾರಣ ಒಂದೆ ಜಾತಿಯು ಯಾವುದೆ ಕಾರಣದಿಂದಾದರೂ ಹಲವಾರು ಉಪಜಾತಿಗಳಾಗಿ ಹಂಚಿಕೆಯಾದರೆ, ಯಾವ ತೆರನಾದ ಅಭಿವೃದ್ಧಿ ಯೋಜನೆಗಳು ರೂಪಿಸಲು

ಸಾಧ್ಯ? ಒಂದು ತೆರನಾದ ಯೋಜನೆಗಳನ್ನು ಒಂದು ಜಾತಿಗೆ ತಂದರೆ ಹಲವಾರು ಕೌಶಲ್ಯ ರೂಢಿಸಿ ಕೊಂಡಿರುವ ಸಮುದಾಯಗಳನ್ನು ಕಡೆಗಾಣಿಸಿದಂತಾಗುತ್ತದೆ.

ಮಂಡಲ ಆಯೋಗವು ಭಾರತದಲ್ಲಿ ಸುಮಾರು ಮೂರುವರೆ ಸಾವಿರಕ್ಕಿಂತ ಜಾತಿ ಉಪಜಾತಿಗಳಿವೆ ಎಂದು ವರದಿ ಸಲ್ಲಿಸಿದೆ. ಈ ಮೂರುವರೆ ಸಾವಿರಕ್ಕೂ ಅಧಿಕ ಜಾತಿ ಉಪಜಾತಿಗಳಿಗೆ ಯಾವ ತೆರನಾದ ಅಭಿವೃದ್ಧಿ ಯೋಜನೆ ರೂಪಿಸಲು ಸಾಧ್ಯ. ಇದು ಯೋಜನಕಾರರಿಗೆ ಸರ್ಕಾರಂದ ಜನಪ್ರತಿನಿಧಿಗಳಿಗೆ ತುಂಬಾ ಸಮಸ್ಯೆ ಹಾಗೂ ತೊಂದರೆಯಾಗುವುದು. ಒಂದು ಜಾತಿಯು ಮೇಲು ಮತ್ತೊಂದು ಕೀಳು ಜಾತಿ ಎಂಬ ದೃಷ್ಟಿಯಲ್ಲಿ ತಲೆದೋರಿದಾಗ ಮುಷ್ಕರಗಳು ಕೂಡಲೆ ಚುರುಕುಗೊಳ್ಳುತ್ತವೆ. ಇದನ್ನು ಅಂದಿನ ಮಂಡಲ ವರದಿ ಅನುಷ್ಠಾನ ತರಬೇಕೆಂದಾಗ ದೇಶಾದ್ಯಾಂತ ಮುಷ್ಕಾರ ನಡೆದಿದ್ದನ್ನು ಕಣ್ಣ ಮುಂದೆಯೆ ಇದೆ.

ಯಾವುದೆ ಯೋಜನೆಯನ್ನು ಕಾರ್ಯರೂಪದಲ್ಲಿ ತಂದರೆ ಅದೆ ಜಾತಿಯ ಮೇಲ್ವರ್ಗದವರು ಉಪಯೋಗಿಸಿ ಕೂಳ್ಳುತ್ತಾರೆ. ಉದಾಹರಣೆಗೆ ಪರಿಶಿಷ್ಟ ಜಾತಿಯಲ್ಲಿ ೧೦೧ ಜಾತಿ ಉಪಜಾತಿಗಳನ್ನು ಸೇರಿಸಿದ್ದರಿಂದ ಪರಿಶಿಷ್ಠ ಜಾತಿಯ ಮೀಸಲಾತಿ ಉಪಯೋಗವನ್ನು ಅದೆ ಜಾತಿಯ ಕೆಲವರು ಮಾತ್ರ ಪಡೆಯುತ್ತಿರುವುದು ಜೀವಂತವಾಗಿದೆ. ಇನ್ನೂ ಎಷ್ಟೊ ಜಾತಿಗಳಿಗೆ ನಾವು ಪರಿಶಿಷ್ಟ ಪಟ್ಟಿಯಲ್ಲಿದ್ದೇನೆಂಬ ಅರಿವೆ ಇಲ್ಲ. ಇದಕ್ಕೆ ಅಲೆಮಾರಿಗಳು ಹೊರತಾಗಿಲ್ಲ. ಬುಡ್ಗಜಂಗಮ್ ಎಂಬ ಅಲೆಮಾರಿಯು ಪರಿಶಿಷ್ಟಜಾತಿಯಲ್ಲಿದ್ದು. ಅದೆ ಹೆಸರನಿಂದ ಮೇಲ್ವರ್ಗವು ಬೇಡ-ಜಂಗಮವೆಂಬ ಹೆಸರಿನಿಂದ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಪಡೆದುಕೊಂಡಿದೆ. ಆದ್ದರಿಂದ ಒಂದೆ ಜಾತಿಯ ಸಮುದಾಯಗಳು ಹಲವಾರು ಉಪಜಾತಿಗಳನ್ನು ಸೇರಿಕೊಂಡಿವೆ. ಹೀಗಾಗಿ ಅವುಗಳು ಒಂದೆಕಡೆ ಬರಬೇಕಾಗಿದೆ. ಇದು ಅಲೆಮಾರಿಗಳ ಕಾಳಜಿಪರವಾಗಿದೆ. ಇಲ್ಲಿನ ಅಧ್ಯಯನಕಾರರು ಸೂಕ್ಷ್ಮವಾಗಿ ಕುಲ ಅಧಯಯನ ಮಾಡುತ್ತಾ ಒಂದೆ ಜಾತಿಯು ಹೇಗೆ ಉಪಜಾತಿಯಾಯಿತು ಎಂಬುದನ್ನು ಮನವರಿಕೆ ಮಾಡಿಕೊಂಡು, ಇದರ ಭಿನ್ನತೆಗಳನ್ನು ದೂರಮಾಡಿಕೊಂಡು ಒಂದು ಜಾತಿಯಲ್ಲಿ ಸೇರ್ಪಡೆಯಾಗಬೇಕಿದೆ. ಆ ಮೂಲಕ ಸರ್ಕಾರದ ಮೇಲೆ ಪ್ರಭಾವ ಬೀರಿ ಯಾವ ಸೌಲಭ್ಯಗಳು ಬೇಕೊ ಅವುಗಳನ್ನು ಪಡೆದುಕೊಳ್ಳಲು ಸಾಧ್ಯ. ಇಲ್ಲವೆಂದರೆ ಜಾತಿ ಉಪಜಾತಿಗಳಲ್ಲಿಯೆ ಸಮಸ್ಯೆಗಳು ಇದ್ದರೆ, ನೆಪಮಾತ್ರದಲ್ಲಿ ಒಂದಿಷ್ಟು ಯೋಜನೆ ರೂಪಿಸಿ ಸೌಲಭ್ಯ ನೀಡಿ ಕೈತೊಳೆದು ಕೊಳ್ಳುತ್ತದೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಲೆಮಾರಿ ಜಾತಿಗಳು ತಮ್ಮ ಭಿನ್ನತೆಯನ್ನು ಕಾಣುತ್ತಾ ಬಂದಿದ್ದಾರೆ. ಎಲ್ಲ ಉಪಜಾತಿಗಳು ಮೂಲ ಜಾತಿಯಲ್ಲಿ ಒಂದಾಗುವ ಲಕ್ಷಣಗಳು ಅಲೆಮಾರಿಗಳಲ್ಲಿ ಕಂಡುಬರುತ್ತಿದೆ. ಉದಾಹರಣೆ ಬುಡ್ಗಜಂಗಮ್‌ರು ಇಲ್ಲಿಯ ತನಕವೂ ಬೇರೆ ಬೇರೆ ಹೆಸರಿನಿಂದ ಉಪ ಜಾತಿಗಳಾಗಿ ಅಲ್ಲಲ್ಲಿ ಹಂಚಿಹೋಗಿದ್ದರೆ ಇವರಲ್ಲಿನ ವಿದ್ಯಾವಂತರು ಸಮಾಜಸೇವಕರ ಪ್ರಯತ್ನದಿಂದ ಎಲ್ಲಾ ಉಪಜಾತಿಗಳ ಮೂಲದಲ್ಲಿ ಒಂದೆ ತರದ ಸಂಬಂಧಗಳಿರುವುದು ದೃಢಪಟ್ಟಿದ್ದರಿಂದ ಅಲ್ಲಿನ ಉಪಜಾತಿಯೆಂಬ ಕಲ್ಪನೆ ದೂರವಿದ್ದು. ನಾವು ಬುಡ್ಗಜಂಗಮ್‌ರೆಂದು ಹೇಳಿಕೊಳ್ಳುತ್ತಾರೆ. ಅಷ್ಟೆ ಏಕೆ

ಸುಡುಗಾಡುಸಿದ್ಧರೂ ಕೂಡ ಬುಡ್ಗಜಂಗಮರ ಒಂದು ಉಪಜಾತಿ. ಜಾತಿಯಂತೆ ಕಂಡುಬಂದರು ಕೆಲವು ಕಡೆ ಸುಡುಗಾಡುಸಿದ್ಧರನ್ನು ಬುಡ್ಗಜಂಗಮ್ ಜಾತಿಯಲ್ಲಿ ಸೇರಿಸಿಕೊಂಡು ಒಗ್ಗಟ್ಟಿನಿಂದ ತಮ್ಮ ಸಮಸ್ಯೆಗಳ ವಿರುದ್ಧ ಹೋರಾಡುತ್ತಿರುವುದು ಕಂಡುಬಂದಿದೆ. ಹಕ್ಕಿಪಿಕ್ಕಿ ಸಮುದಾಯದ ಹಲವಾರು ಉಪಜಾತಿಗಳು ಒಂದು ಕಡೆ ಬರಲು ಪ್ರಯತ್ನಿಸುತ್ತಿದ್ದಾರೆ. ಪ್ರತಿ ಅಲೆಮಾರಿಗಳೂ ಮೂಲ ಜಾತಿಯಲ್ಲಿ ವಿಲೀನಗೊಂಡು ತಮ್ಮ ಶಕ್ತಿಯನ್ನು ಪ್ರದರ್ಶಿಸಿ ಮುಂದೆ ಬರಬೇಕಾಗಿದೆ. ಸರ್ಕಾರದ ಮೇಲೆ ಒತ್ತಡ ತರಬೇಕಾಗಿದೆ. ತಮ್ಮ ಸಮುದಾಯಗಳ ಅಭಿವೃದ್ಧಿಗೆ ಮೂಲಸೌಲಭ್ಯಗಳನ್ನು ಪಡೆದುಕೊಳ್ಳಲು ಮುಖ್ಯ ಪ್ರವಾಹಕ್ಕೆ ಬರಬೇಕಾಗಿದೆ. ಇಲ್ಲನಾದರೆ ಜಾತಿ-ಉಪಜಾತಿ ಎಂಬ ಸಮಸ್ಯೆಯಲ್ಲಿ ಬಿದ್ದು ಹೆಣಗಬೇಕಾಗುತ್ತದೆ. ಅದ್ದರಿಂದ ಈ ಕೆಲಸಗಳನ್ನು ಉಪನ್ಯಾಸಗಳಿಂದ, ಗೋಷ್ಠಿಗಳು ಹಾಗೂ ಸಭೆ ಸಮಾರಂಭಗಳ ಮೂಲಕ ವೇದಿಕೆಯಲ್ಲಿ ಒಗ್ಗೂಡಿಸಿ ಮುನ್ನಡೆಯಬೇಕಿದೆ.

೩.೩.೪. ಅಲೆಮಾರಿಗಳ ಜಾತಿವ್ಯವಸ್ಥೆ ಮತ್ತು ಅನುಕೂಲಗಳು

ಜಾತಿವ್ಯವಸ್ಥೆಯು ರಾಷ್ಟ್ರೀಯ ಐಕ್ಯತೆ ದೃಷ್ಟಿಯಿಂದ ಸಂಕುಚಿತವಾದರೂ ಸಮುದಾಯದ ಐಕ್ಯತೆಗೆ ಬೇಕಾಗಿದೆ. ಪ್ರತಿ ಸದಸ್ಯರು ತಮ್ಮ ಬವಣೆಗಳು ಕೆಲಸಕಾರ್ಯಗಳನ್ನು ತಿಳಿಸುವ ಜೊತೆಗೆ ಹಾದಿತಪ್ಪಿದ್ದಾಗ ನಿಯಂತ್ರಿಸಿ, ಎಂದಿನಂತೆಯೆ ನೈತಿಕವಾದ ಬದುಕನ್ನು ಕಟ್ಟಿಕೊಡುತ್ತದೆ. ಈ ದೃಷ್ಟಿಯಲ್ಲಿ ಯಾವುದೆ ಸಮುದಾಯವು ಜಾತಿಯ ವ್ಯವಸ್ಥೆಯು ಹೇಗೆ ಮಾಡುತ್ತದೆ ಗೊತ್ತಿಲ್ಲ. ಆದರೆ ಅಲೆಮಾರಿಗಳ ಜಾತಿ ವ್ಯವಸ್ಥೆಯಲ್ಲಿ ಆ ಸಮುದಾಯದ ಐಕ್ಯತೆ, ಕಾರ್ಯ ಪ್ರವೃತ್ತಿ, ನಿಯಂತ್ರಣ ವ್ಯವಸ್ಥೆ ಮುಂತಾದ ಪರಿಧಿಯೊಳಗೆ ಬಂಧಿಸುತ್ತದೆ. ಈ ನಿಟ್ಟಿನಲ್ಲಿ ಜಾತಿವ್ಯವಸ್ಥೆಯಿಂದಾಗುವ ಅನುಕೂಲಗಳು ಹೀಗಿವೆ.

ಸಮಾನ ಸಾಮಾಜಿಕ ಪರಿಸರದಿಂದ ಹೊಂದಾಣಿಕೆ

ಒಂದೆ ಜಾತಿಯಲ್ಲಿ ಸೇರಿದ ಅಲೆಮಾರಿಗಳೆಲ್ಲರು ನಗರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕಾಡಿನಲ್ಲಿಯೆ ಇರಲಿ ಅವರೆಲ್ಲರು ನಮ್ಮ ಜಾತಿಯವರೆಂದು ತಿಳಿದಕೊಂಡು ತಮ್ಮ ಸಾಮಾಜಿಕ ಪರಿಸರದೊಂದಿಗೆ ನೆಲೆಸುವರು. ಅಲೆಮಾರಿ ಸಮುದಾಯವು ಮೇಲ್ವರ್ಗದ ಜಾತಿಯವರೊಂದಿಗೆ ಇರಲು ಇಷ್ಟಪಡುವುದಿಲ್ಲ. ಇಷ್ಟಪಟ್ಟರು, ಆ ವರ್ಗ ಇವರನ್ನು ಹತ್ತಿರ ಸೇರಿಸಿಕೊಳ್ಳಲಾರರು. ಇದನ್ನರಿತೆ ತಮ್ಮದೆ ಜಾತಿಯವರು ಎಲ್ಲಿರುತ್ತಾರೂ ಅಂತಹ ಕಡೆ ಬಿಡಾರ ಹೂಡುತ್ತಾರೆ. ಅಷ್ಟೆ ಏಕೆ ತಮ್ಮ ಸಂಪ್ರದಾಯ ವೃತ್ತಿಯನ್ನು ನೆಚ್ಚಿಕೊಂಡು ಬೇರೆ ರಾಜ್ಯ, ದೇಶಗಳಿಗೆ ಹೋಗುವಾಗ ಇಡಿ ಅಲೆಮಾರಿ ತಂಡಗಳು ಜೊತೆಯಲ್ಲಿಯೆ ವಲಸೆ ಹೋಗುತ್ತವೆ. ಇದು ಅನಿವಾರ್ಯವಾಗಿದೆ. ಸಮುದಾಯದ ಸ್ಥಿತಿ, ರೀತಿ-ನೀತಿ, ನೋವು-ನಲಿವುಗಳು ವಾದ-ವಿವಾದವು ಎಲ್ಲವೂ ಒಂದೆ ಆಗಿರುವುದರಿಂದ ಒಂದೆ ಹತ್ತಿರ ಅಥವಾ ಒಂದೆ ಪರಿಸರದಲ್ಲಿ ವಾಸಿಸಲು ಮುಂದಾಗುತ್ತಾರೆ. "ಜಾತಿಪದ್ಧತಿಯಲ್ಲಿ ಎಲ್ಲ ಸದಸ್ಯರು ಎಲ್ಲ ವರ್ತನೆಗಳನ್ನು ಸಂಪರ್ಕವನ್ನು ಶಾಶ್ವತವಾಗಿ ಸಂಘ ಸಂಸ್ಥೆಗಳನ್ನು ನಿರ್ದೇಶಿಸಿ ನಿಯಂತ್ರಿಸಿ ಮುನ್ನಡೆಸುತ್ತದೆ" ಎಂದು ಜೆ.ಎಚ್. ಹಟ್ಟರ್‌ರವರ ಅಭಿಪ್ರಾಯವಾಗಿದೆ. ಅಲೆಮಾರಿಯ ಕಷ್ಟದಲ್ಲಿ ಅಲೆಮಾರಿಗಳು ಭಾಗಿಯಾಗುತ್ತಾರೆ. ನೋಡಲು ಜಾತಿಯ ಸಂಕುಚಿತ ಭಾವನೆ ಎಂದೆನಿಸಿದರೂ ಅಲೆಮಾರಿಗಳಿಗೆ ಅನಿವಾರ್ಯವಾಗುವಂತಹ

ಸಮಸ್ಯೆಗಳಿಗೆ ಭಾಗಿ ಮತ್ತು ಸ್ಪಂದಿಸುವಿಕೆ ಕಾಬಹುದು. ಅವರ ಸಹಾಯ ಅವರಿಂದ ಸಾಧ್ಯವೆ ಹೊರತು, ಮತ್ತೊಂದು ಸಮುದಾಯದಿಂದ ಸಾಧ್ಯವಿಲ್ಲ. ಆದ್ದರಿಂದ ಸಮಾನ ಸಾಮಾಜಿಕ ಪರಿಸರದೊಂದಿಗಿರಲು ಇಷ್ಟಪಡುತ್ತಾರೆ.

ಪರಸ್ಪರ ಸಹಕಾರ ಮತ್ತು ಸಮಾನ ಸಹಬಾಳ್ವೆ

ಅಲೆಮಾರಿ ಸಮುದಾಯವು ಮತ್ತೊಂದು ಅಲೆಮಾರಿ ಸಮುದಾಯದ ಹತ್ತಿರವೆ ನೆಲೆಸಿರುವುದರಿಂದ ಮತ್ತು ಅವರೆಲ್ಲಾ ಏಕರೀತಿ ಇರುವುದರಿಂದ ಅವರ ಕಷ್ಟ ಸುಖಗಳಲ್ಲಿ ಪರಸ್ಪರರು ಸಹಕರಿಸಿ ಸಮಸ್ಯೆಯನ್ನು ನಿಯಂತ್ರಿಸುವಲ್ಲಿ ಮುಖ್ಯಪಾತ್ರವಹಿಸುತ್ತಾರೆ. ಒಬ್ಬರಿಗೊಬ್ಬರು ಒಂದು ಕೆಲಸಕ್ಕೆ ಬೇಕಾಗುವುದರಿಂದ ಎರಡು ಕುಟುಂಬಗಳ ನಡುವೆ ಸಹಬಾಳ್ವೆ ಏರ್ಪಡುತ್ತದೆ. ಈ ರೀತಿ ಸಹಕಾರ, ಸಹಬಾಳ್ವೆಯನ್ನು ಬೇರೊಂದು ಜಾತಿಯವರಿಂದ ಪಡೆಯಲು ಅಸಾಧ್ಯ. ಜಾತಿ ಎಂಬುದೆ ಅಂತದ್ದು ಎಷ್ಟೇ ಹೊಡೆದಾಟ-ಬಡಿದಾಟವನ್ನು ಮಾಡಿದರು, ಜಾತಿಯ ವಿಷಯಕ್ಕೆ ಬಂದಾಗ ಬೇರೊಂದು ಜಾತಿಯವರು ಇವರ ಜಾತಿಗೆ ತೊಡಕನ್ನುಂಟುಮಾಡಲು ಬಂದಾಗ ಕೂಡಲೆ ಆ ನೋವುಗಳಿಗೆ ಧಾವಿಸಿ ಎಲ್ಲರು ಮುಂದೆ ಬರುತ್ತಾರೆ. ಈ ಉನ್ನತ ಮಟ್ಟದ ಮೌಲ್ಯಗಳನ್ನು ತಲತಲಾಂತರದಿಂದ ರೂಢಿಸಿಕೊಂಡು ಬಂದಿರುತ್ತಾರೆ. ಅಲೆಮಾರಿಗಳು ತಮ್ಮ ಸುಖ-ದುಃಖಗಳನ್ನು ತಮ್ಮ ತಮ್ಮ ಜಾತಿಯ ಅಲೆಮಾರಿಗಳ ಹತ್ತಿರ ಹಂಚಿ ಕೊಳ್ಳುತ್ತಾರೆ. ಆದರೆ ಬೇರೊಂದು ಜಾತಿಯ ಜೊತೆ ಹಂಚಿಕೊಳ್ಳುವುದಿಲ್ಲ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದ ಅಲೆಯುತ್ತಿರುವುದರಿಂದ ಇವರು ಆಪ್ತರಾಗಿ ಸೃಜನಶೀಲರಾಗಿ, ಸಹೋದರತೆ ಇತ್ಯಾದಿ ಜೊತೆಗೂಡಿರುವುದರಿಂದ ತಮ್ಮ ನೋವುಗಳನ್ನು ಇವರು ಹಂಚಿಕೊಳ್ಳಬಲ್ಲರು ಎಂಬ ಮನೋಭಾವನೆಯಿದೆ.

ಉದ್ಯೋಗದ ಭದ್ರತೆ ಮತ್ತು ಆರ್ಥಿಕ ಅವಕಾಶ

ಅಲೆಮಾರಿ ಸಮುದಾಯಗಳಲ್ಲಿ ಹಿರಿಯರು ಮಾಡಿಕೊಂಡಿರುವ ವೃತ್ತಿಯನ್ನು ಕಿರಿಯ ಸದಸ್ಯನು ಚಿಕ್ಕವನಿರುವಾಗಲೆ ಗಮನಿಸುತ್ತಾ ಮೈಗೂಡಿಸಿಕೊಂಡು ಬರುತ್ತಿರುತ್ತಾನೆ. ಕಿರಿಯ ಸದಸ್ಯನು ಕೂಡ ವೃತ್ತಿಗಳಲ್ಲಿ ಭಾಗಿಯಾಗುವುದರೊಂದಿಗೆ, ಸಂಸಾರದ ವೆಚ್ಚಕ್ಕೆ ಶ್ರಮವಹಿಸುತ್ತಾನೆ. ಇವರಿಗೆ ಚಿಕ್ಕ ವಯಸ್ಸಿನಲ್ಲಿ ಜವಬ್ದಾರಿ ನೀಡಿವುದುರ ಜೊತೆಗೆ ಬದುಕನ್ನು ಕಲಿಸಿಕೊಡುತ್ತದೆ. ಕಷ್ಟ-ಸುಖ ಎಂಬಂತೆ ಜವಬ್ದಾರಿಯನ್ನು ಹೊತ್ತುಕೊಂಡು ಸಾಗಿಸುತ್ತಿದ್ದಾರೆ. ನಮ್ಮಗಳ ವೃತ್ತಿಗೆ ಒಳ್ಳೆಯ ಸಂಭಾವನೆ ಮತ್ತು ಗೌರವಗಳು ಸಿಗದಿದ್ದರು ಆತ್ಮತೃಪ್ತಿಯು ಸಿಗುತ್ತದೆ ಎಂಬಾ ಆಶಾಭಾವನೆ ಇವರಲ್ಲಿದೆ. ಈ ವೃತ್ತಿಗಳನ್ನು ನಾವು ತಲೆತಲಾಂತರದಿಂದಲೆ ಅನುಸರಿಸಿಕೊಂಡು ಬಂದಿರುವುದರಿಂದ ನಿರುದ್ಯೋಗಕ್ಕೆ ಆಸ್ಪದವಿಲ್ಲ ವಾಗುತ್ತದೆ. ಪ್ರತಿ ಸದಸ್ಯನು ಒಂದಲ್ಲ ಒಂದು ಸಮುದಾಯದಿಂದ ಕಲಿತು ವೃತ್ತಿಯಲ್ಲಿ ತೊಡಗಿಸಿ ಕೊಂಡಿರುತ್ತಾನೆ.

ಆರ್ಥಿಕ ಸ್ಥಿತಿ-ಗತಿಗಳು ಕಳಪೆ ಮಟ್ಟದ್ದು, ವೃತ್ತಿಯು ಹೀನವಾದದ್ದು ಎಂದು ಯಾವ ಸದಸ್ಯರು ಅಂದುಕೊಳ್ಳುವುದಿಲ್ಲ. ತುಂಬಾ ಶ್ರದ್ಧಾಭಕ್ತಿಯಿಂದ, ಪ್ರೀತಿಯಿಂದ ನಿರ್ವಹಿಸಿಕೊಂಡು ಹೋಗುತ್ತಾರೆ.

ಒಂದು ವೇಳೆ ಬೇರೆ ಉದ್ಯೋಗ ಮಾಡಬೇಕೆಂಬ ಮನಸ್ಸಿದ್ದರೂ ಅದರ ಬಗ್ಗೆ ತಿಳುವಳಿಕೆ, ಅವಕಾಶ, ಸಂದರ್ಭಗಳು ಸಿಗದೆ ಕುಲದ ವೃತ್ತಿಯಲ್ಲಿ ತೃಪ್ತಿಯಾಗಿ ಆತ್ಮವಿಶ್ವಾಸದಿಂದ ಕಾಲಕಳೆಯುತ್ತಾರೆ. ಬದಲಾದ ಸ್ಥಿತಿಯಲ್ಲಿ ಸಂಪ್ರದಾಯದ ವೃತ್ತಿಗೆ ಬೇಡಿಕೆ ಇಲ್ಲವಾದರೂ ಅನಿವಾರ್ಯವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಈ ಸ್ವಯಂ ವೃತ್ತಿಯಿಂದ ಉದ್ಯೋಗದ ಅಭದ್ರತೆಯನ್ನು ಕಾಣಲಾಗುವುದಿಲ್ಲ.

ಸಮುದಾಯದ ಶುದ್ಧತೆ

ಒಳಬಾಂಧವ್ಯಗಳು, ವಿವಾಹಗಳ ಮೂಲಕ ಜಾತಿಯ ವಿಶಿಷ್ಟತೆಯನ್ನು ಎತ್ತಿಹಿಡಿಯುತ್ತಿವೆ. ಅಂತರಜಾತಿಯ ವಿವಾಹಗಳಿಗೆ ಸಮುದಾಯವು ನಿರಾಕರಿಸುತ್ತದೆ. ಸಮುದಾಯವು ಅನುವಂಶಿಯವಾಗಿ ಬಂದಿರುವುದರಿಂದ ಶುದ್ಧತೆ ಮೂಲಕ ಬಂದಿರುತ್ತದೆ. ಬೇರೆಯವರಿಂದ ಸಂಬಂಧ ಬೆಳೆಸಿದರೆ ಆಚಾರ-ವಿಚಾರ, ಸಂಸ್ಕೃತಿ ಎಲ್ಲಾ ಕಾರಣಗಳಿಂದ ವ್ಯತ್ಯಾಸವಾಗುತ್ತೆ. ಇದರಿಂದ ಅವರ ಅಂತಸ್ತು ತಮ್ಮ ಅಂತಸ್ತಿನಲ್ಲಿ ವ್ಯತ್ಯಾಸವಿರುವುದರಿಂದ ನೆಮ್ಮದಿ ಜೀವನ ಅಸಾಧ್ಯವೆಂದು ತಿಳಿದುಕೊಳ್ಳುವುದುಂಟು. ಆದ್ದರಿಂದ ತಮ್ಮದೆ ಜಾತಿಯಲ್ಲಿ ವೈವಾಹಿಕ ಕಾರ್ಯಗಳನ್ನು ಮಾಡಿಕೊಳ್ಳುತ್ತಾರೆ. ಇದರಿಂದ ಜಾತಿವ್ಯವಸ್ಥೆ ಮತ್ತಷ್ಟು ಬಿಗಿಯಾಗಬಹುದು.

ಕೌಶಲ್ಯದ ಮೇಲೆ ಪ್ರಭಾವ

ಅಲೆಮಾರಿಗಳು ತಾವು ಕೈಗೊಳ್ಳುವ ಕಸುಬುಗಳಲ್ಲಿನ ಕೌಶಲ್ಯತೆಯನ್ನು ಬೇರೆಯ ಜಾತಿಯವರಿಗೆ ಯಾವುದೆ ಕಾರಣಕ್ಕೂ ಬಿಟ್ಟು ಕೊಡಲಾರರು. ಅದೆ ಜಾತಿಯ ಅದೆ ಕುಟುಂಬದ ಸದಸ್ಯರಿಗೆ ಮಾತ್ರ ಹೇಳಿ ಕೊಡುವುದರಿಂದ ಪೀಳಿಗೆಯಿಂದ ಪೀಳಿಗೆಗೆ ಕೌಶಲ್ಯವು ವರ್ಗವಣೆಯಾಗುತ್ತಾ, ಅವರಲ್ಲಿಯೆ ಸಂಪೂರ್ಣವಾಗಿ ತೊಡಗಿಸಿಕೊಂಡಿದೆ.

ಐಕ್ಯತೆ

ಅಲೆಮಾರಿ ಸಮುದಾಯಗಳು ಒಂದೆ ಪರಿಸರದಲ್ಲಿ ವಾಸಿಸುವುದರಿಂದ ಬೇರೆ ಜಾತಿಯವರು ಈ ಸಮುದಾಯಗಳಿಗೆ ತೊಂದರೆ ಕೊಟ್ಟರೆ, ಕೂಡಲೆ ಒಟ್ಟಾಗಿ ಸಮಸ್ಯೆ ಪರಿಹರಿಸಲು ಬರುವರು. ಯಾವುದೆ ತರಹದ ಸಮಸ್ಯೆಗಳಿದ್ದರು ತಮ್ಮ ಜಾತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಬೇರೆ ಮಾರ್ಗ ಹಿಡಿಯದೆ ಬೇರೆ ಜಾತಿಗೆ ದೂರು ಕೊಡದ, ಆಹ್ವಾನಿಸದೆ ತಮ್ಮದೆ ಜಾತಿಯ ನೀತಿ-ನಿಯಮ ಪಂಚಾಯಿತಿಗೆ ಅನುಗುಣವಾಗಿ ನಡೆಯುವರು. ವಾಸವಾದ ಪ್ರದೇಶದಲ್ಲಿ ತೀರಾ ತೊಂದರೆಗಳುಂಟಾದರೆ ಅದರಿಂದ ದೂರವಿರಲು ಅಲೆಮಾರಿಗಳು ಸ್ಥಳ ಬದಲಾವಣೆ ಮಾಡುತ್ತಾರೆ.

ಸಂಸ್ಕೃತಿಗೆಬೇಕಾದ ಸೌಕರ್ಯಗಳನ್ನು ಕಲ್ಪಿಸುವುದು

ಜಾತಿ ನಿಷ್ಠೆಯನ್ನು ಬಿಗಿಹಿಡಿತದಲ್ಲಿಟ್ಟುಕೊಂಡು ಅಲೆಮಾರಿಗಳೂ ತಮ್ಮ ಸಂಸ್ಕೃತಿಯ ಇತಿಮಿತಿಗಳೇನು? ಎಂಬುದನ್ನು ಆ ಕುಟುಂಬದ ಸದಸ್ಯರ ಮೇಲೆ ಪ್ರಭಾವ ಬೀರುತ್ತಾರೆ. ಅದರಂತೆ ನಡೆಯಲು ಅಣಿಯಾಗುತ್ತಾರೆ. ಯಾವ ಸಂದರ್ಭದಲ್ಲಿ ಯಾವ ತರಹದ ಕ್ರಿಯೆಗಳಾಗಬೇಕು? ಯಾವುದನ್ನು

ಮಾಡಬೇಕು? ಎಂದು ಕಲಿಸುತ್ತದೆ. ಬೇರೆ ಜಾತಿಯವರು ಸಂಸ್ಕೃತಿಯ ಪರಿಚಯವಿದ್ದರು ಅದನ್ನು ಬದಲಾಯಿಸದೆ ಆ ಸಂದರ್ಭದಲ್ಲಿ ಹೊಂದಿಕೆಯಾಗಿ ಮತ್ತೆ ತಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಮೌಲ್ಯಗಳನ್ನು ಮುಂದಿನ ತಲೆಮಾರುಗಳಿಗೆ ವರ್ಗಾಯಿಸುತ್ತಾರೆ.

ಸಂಪ್ರಾದಾಯದ ಆಚರಣೆ ಮತ್ತು ಜಾತಿ

ಒಂದು ಜಾತಿಯು ಬಹಳದಿನಗಳ ಕಾಲ ಚಾಲ್ತಿಯಲ್ಲಿರಬೇಕಾದರೆ ಅಥವಾ ಆ ಜಾತಿಯ ಸದಸ್ಯರ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ತಮ್ಮದೆ ಆದರ್ಶ ಮತ್ತು ಗುರಿ ಉದ್ದೇಶಗಳನ್ನಿಟ್ಟುಕೊಂಡು ಅನೇಕ ಅನುಭವ ಮತ್ತು ಸಂದರ್ಭದ ಅನುಸಾರವಾಗಿ ಸಂಪ್ರದಾಯ ಮತ್ತು ಆಚರಣೆಗಳನ್ನು ರಚಿಸಿ ಕೊಂಡಿರುತ್ತವೆ. ಹಾಗೂ ಸಂಪ್ರದಾಯ ಹಾಗೂ ಆಚರಣೆಗಳ ಬದ್ಧವಾಗಿರುತ್ತದೆ. ಜಾತಿಯು ಪ್ರಮಾಣಿಕ ನಿಷ್ಠೆಯಾಗಿ ಕೆಲಸಮಾಡುತ್ತದೆ. ಹುಟ್ಟಿನಿಂದ ಹಿಡಿದು ಅಂತ್ಯದವರೆಗೂ ಸಂಪ್ರಾದಾಯ ಮತ್ತು ಆಚರಣೆಗಳು ಒಂದಲ್ಲ ಒಂದು ಬಗೆಯಲ್ಲಿ ಕೆಲಸಮಾಡುತ್ತದೆ. ಇಂತಹ ಸಂಪ್ರದಾಯಗಳು ಮತ್ತು ಆಚರಣೆಗಳು ಎಲ್ಲಾ ಜಾತಿಯಲ್ಲಿ ಒಂದೆ ತೆರನಾಗಿಲ್ಲ. ಅದು ಜಾತಿಯಿಂದ ಜಾತಿಗೆ ಭಿನ್ನ ವಿಭಿನ್ನವಾಗಿದೆ.

ಅಲೆಮಾರಿಗಳ ಜಾತಿವ್ಯವಸ್ಥೆಯಲ್ಲಿ ಸಂಪ್ರದಾಯ ಮತ್ತು ಆಚರಣೆಯು ಆ ಸಮುದಾಯದ ಬಹುಮುಖ್ಯವಾದ ಭಾಗವಾಗಿದೆ. ಅವುಗಳಿಗೆ ಧಕ್ಕೆ ಬಾರದಂತೆ ಕಾಯ್ದುಕೊಂಡು ಬರುತ್ತಾರೆ. "ಜಾತಿಯು ಏಕಕಾಲಕ್ಕೆ ಒಂದು ವ್ಯವಸ್ಥೆ ಮತ್ತು ಚಿಂತನೆ ಇದು ಸಾಮಾಜಿಕ ಸಂಬಂಧಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸುತ್ತದೆ. ಅಲ್ಲದೆ ಒಂದು ವ್ಯವಸ್ಥೆಯಾಗಿ ಸಮಾಜದಲ್ಲಿ ಉಚ್ಚ ನೀಚನೆಂಬ ಚಿಂತನಾ ಕ್ರಮವನ್ನು ಪ್ರತಿಪಾದಿಸುತ್ತದೆ" ಎಂದು ಪೆರಿಯರ್‌ಯವರ ಅಭಿಪ್ರಾಯವಾಗಿದೆ.

ಹೀಗೆ ಜಾತಿಯು ತನ್ನ ಸಮುದಾಯದ ಸದಸ್ಯರು ಹೇಗಿರಬೇಕೆಂದು ಆದರ್ಶವಿಟ್ಟುಕೊಂಡು ಅದರ ಗುರಿ ಮುಟ್ಟಲು ಶ್ರಮಿಸುತ್ತದೆ. ಅಲೆಮಾರಿಗಳು ನೋಡುವುದಕ್ಕೆ ಚದುರಿದ ಸಮುದಾಯಗಳೆಂದು ಕಂಡುಬಂದರೂ, ಜಾತಿವ್ಯವಸ್ಥೆಯಾಗಿದೆ. ಕೆಲವು ಸಂಪ್ರಾದಾಯ ಮತ್ತು ಆಚರಣೆಗಳಲ್ಲಿ ಕೆಲವು ತಪ್ಪುಗಳಿರಬಹುದು. ಅಂದಿನ ಸಂದರ್ಭಕ್ಕೆ ತಕ್ಕಂತೆ ಅನಿವಾರ್ಯವಾಗಿರಬಹುದು. ಅವು ತಪ್ಪುಎಂದು ಆ ಸಮುದಾಯಕ್ಕೆ ತಿಳಿದ ಮೇಲೆ ಅದರಿಂದ ದೂರವಿರಲು ಸಾಧ್ಯವಾಗಬಹುದು. ಬದಲಾದ ಸ್ಥಿತಿಯಲ್ಲಿ ಸಂಪ್ರಾದಾಯ ಮತ್ತು ಆಚರಣೆಗಳಲ್ಲಿ ಸುಧಾರಣೆ ಕಂಡುಬರುವುದುಂಟು.

೩.೩.೫. ಪ್ರಬಲ ಜಾತಿಯ ಕಲ್ಪನೆ ಮತ್ತು ಅಲೆಮಾರಿಗಳ ಜಾತಿ ವ್ಯವಸ್ಥೆ

ಸಾಮಾನ್ಯವಾಗಿ ಪ್ರತಿ ಗ್ರಾಮೀಣ ಭಾಗದಲ್ಲಿ ಮತ್ತು ನಗರ ಪ್ರದೇಶದಲ್ಲಿ ಎಲ್ಲಾ ಜಾತಿಯ ಜನರು ವಾಸ ಮಾಡುವುದು ಸತ್ಯ. ಒಂದೆ ಜಾತಿಯ ಜನಸಂಖ್ಯೆ ಹೆಚ್ಚಾದರೆ ಆ ಪ್ರದೇಶದಲ್ಲಿ ಅವರದೆ ಆದ ವಿಶೇಷ ಪ್ರಭಾವವಿರುತ್ತದೆ. "ಪ್ರಬಲವಾದ ಜಾತಿ ಎಂದರೆ ಸಾಕಷ್ಟು ಭೂಹಿಡುವಳಿಗಳನ್ನು ಹೊಂದಿದ್ದು, ಆರ್ಥಿಕ ಶಕ್ತಿ ಹಾಗೂ ರಾಜಕೀಯ ಸಾಮರ್ಥ್ಯವುಳ್ಳ ಮತ್ತು ಸಾಮಾಜಿಕ ಏಣಿ-ಶ್ರೇಣಿಗಳಲ್ಲಿ ಉಚ್ಚಸ್ಥಾನವನ್ನು ಹೊಂದಿರುವ ಜಾತಿಯೆ ಪ್ರಬಲ ಜಾತಿ ಎಂದೆನಿಸಿದೆ". ಅಂತಹ ಪ್ರಬಲ ಜಾತಿಯು

ರಾಜಕೀಯ ಹಾಗೂ ಆರ್ಥಿಕ ಸಾಮರ್ಥ್ಯ ಗಣನೀಯ ಸದಸ್ಯರ ಸಂಖ್ಯೆ ಪ್ರಾದೇಶಿಕ ಏಣಿ-ಶ್ರೇಣಿಯಲ್ಲಿ ಮೇಲಸ್ತರದ ಸ್ಥಾನದಲ್ಲಿರುತ್ತದೆ"[24] ಎಂದು ಪ್ರೊ. ಎನ್. ಶ್ರೀನಿವಾಸರವರ ಅಭಿಪ್ರಾಯವಾಗಿದೆ.

ಪ್ರಬಲ ಜಾತಿಯ ಸಮುದಾಯಗಳನ್ನು ಉದಾಹರಣೆಯಿಂದ ನೋಡುವುದಾದರೆ ಕರ್ನಾಟಕದಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು, ಆಂಧ್ರದಲ್ಲಿ ರೆಡ್ಡಿ ಮತ್ತು ಕಮ್ಮರ, ಕೇರಳದಲ್ಲಿ ನಾಯಕ್ ಮತ್ತು ಇರುಳರು, ಮಹಾರಾಷ್ಟ್ರದಲ್ಲಿ ಮಹಾರ್ ಮತ್ತು ಮರಾಠ ಇದು ರಾಜ್ಯಮಟ್ಟದ ಪ್ರಬಲ ಜಾತಿಗಳಾಗಿವೆ. ಆದರೆ ಇದು ಎಲ್ಲ ಸ್ಥಳಗಳಲ್ಲಿ ಕೆಲವು ಜಾತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಆ ಪ್ರದೇಶದಲ್ಲಿ ಎಲ್ಲಾ ವ್ಯವಸ್ಥೆಗಳ ಮೇಲೆ ಪ್ರಭಾವ ಬೀರುವುದುಂಟು.

ಪ್ರಬಲವಾದ ಜಾತಿ ಸದಸ್ಯರು ತಮ್ಮದೆ ಜಾತಿಯ ಜನರ ಕ್ಷೇಮಾಭಿವೃದ್ಧಿಗಾಗಿ ಸಂಘಟನೆ ಮಾಡಿಕೊಂಡು ಶ್ರಮಿಸುತ್ತಿರುತ್ತಾರೆ. ಸರ್ಕಾರದ ಯೋಜನೆಗಳನ್ನು ತಮ್ಮ ಜಾತಿಗೆ ಸಮರ್ಥವಾಗಿ ಬಳಕೆಯಾಗುವಂತೆ ಮಾಡಿ, ರಾಜಕೀಯವಾಗಿ ಪ್ರಭಾವ ಬೀರುತ್ತಾರೆ. ಪರಿಣಾಮ ಅಧಿಕ ಸಂಖ್ಯೆ ಇರುವುದರಿಂದ ಮತಗಳೂ ಒಗ್ಗೂಡುವುದರಿಂದ ಅದೆ ಜಾತಿಯ ಜನರು ಜಯ ಸಾಧಿಸುವ ಸಾಧ್ಯತೆಗಳು ಹೆಚ್ಚು. ಇಂತಹ ಪ್ರಬಲ ಜಾತಿಗಳು ಎಲ್ಲಾ ಜಾತಿಯ ಜನರು ನಮ್ಮ ಜಾತಿಯಂತೆ ಇರಬೇಕು ಎಂದು ಬಯಸುವುದು ತೀರಾ ಅಪರೂಪ. ಉಳಿದವರೆಲ್ಲರೂ ನಮ್ಮ ಮರ್ಜಿಯಲ್ಲಿಯೆ ಇರಬೇಕೆಂದು ಬಯಸುತ್ತಾರೆ. ಭಾವನೆಗಳೂ ನೆಲೆನಿಂತ ಪ್ರಬಲ ಜಾತಿಯ ಸಮುದಾಯಗಳಲ್ಲಿ ಬರುವುದು. ಆದರೆ ನೆಲೆರಹಿತ ಅಲೆಮಾರಿ ಸಮುದಾಯಗಳಿಗೆ ಈ ತರಹದ ಕಲ್ಪನೆ ಮೂಡಲಾರದು. ವರ್ಷ ಪೂರ್ತಿ ಜೀವಿಸಿದ್ದರು ಅಲೆದಾಟದಿಂದ ಬಳಲುತ್ತಿರುವರಾದ್ದರಿಂದ ನೆಲೆನಿಲ್ಲುವುದು ಅಸಾಧ್ಯ. ಒಂದುವೇಳೆ ನೆಲೆನಿಲ್ಲಲು ಪ್ರಯತ್ನಿಸಿದರು ಆಯಾ ಪ್ರದೇಶದಲ್ಲಿ ತೀರಾ ಅಲ್ಪಸಂಖ್ಯಾತರಾಗಿದ್ದು ಬದುಕುವರಾಗಿದ್ದಾರೆ. ಅದ್ದರಿಂದ ಚಿಕ್ಕ ಚಿಕ್ಕ ಗುಂಪುಗಳಾಗಿ ವಾಸಿಸುವ ಸಮುದಾಯಗಳು ನಿಧಾನವಾದರು ಒಂದೆ ಕಡೆ ಒಂದೂಗೂಡಿ ನೆಲೆಯೊಂದಿಗೆ ಜಾತಿಯನ್ನು ಬಲಪಡಿಸಿಕೊಳ್ಳಲು ಸಾಧ್ಯ. ಸಮುದಾಯವು ಒಂದು ಗೂಡಿದಾಗ ಅವರ ಹಕ್ಕು ಮತ್ತು ಕರ್ತವ್ಯಗಳು ತಿಳಿಯುತ್ತದೆ.

ಅಲೆಮಾರಿ ಸಮುದಾಯಗಳು ಹಲವಾರು ಜಾತಿಗಳಿಂದ ಕೂಡಿವೆ. ಆ ಜಾತಿಯೊಳಗೆ ಉಪಜಾತಿ ಗಳೆಂಬಂತೆ, ಪಂಗಡಗಳಾಗಿ ಬೆಳೆದು ಬಂದಿವೆ. ಇದರಿಂದ ಎಲ್ಲಿಯೂ ಅಲೆಮಾರಿಗಳು ನೆಲೆನಿಲ್ಲಲು ಸಾಧ್ಯವಾಗಿಲ್ಲ. ತಮ್ಮ ಜಾತಿ ಶ್ರೇಷ್ಠ ಇತರ ಜಾತಿ ಕನಿಷ್ಠವೆಂಬ ಪ್ರಜ್ಞೆ ಅಲೆಮಾರಿಗಳ ಮನಸ್ಸಿನಲ್ಲಿ ರುವುದರಿಂದ ಒಂದಾಗಿಲ್ಲ. ಇದು ಹೀಗೆ ಬೆಳೆಯುತ್ತಾ ಹೋದರೆ, ಅಲೆಮಾರಿಗಳು ಮತ್ತಷ್ಟು ಅಲೆಮಾರಿ ಯಾಗಿ ಇರಬೇಕಾಗುತ್ತದೆ. ಆದ್ದರಿಂದ ಎಲ್ಲ ಅಲೆಮಾರಿಗಳು ನೆಲೆನಿಂತು ತಮ್ಮ ಸಂಘಟನೆ ಮೂಲಕ ಸಮುದಾಯದಲ್ಲಿ ಏನು ಮೂಲಭೂತ ಅವಶ್ಯಕತೆಗಳು ಬೇಕೊ ಅವುಗಳನ್ನು ಪಡೆದುಕೊಳ್ಳುವಂತಾಗ ಬೇಕಾಗಿದೆ.

ರಾಜ್ಯದಲ್ಲಿ ಹೆಳವ ಸಮುದಾಯ ಒಂದುಗೂಡಿ ಸರ್ಕಾರದ ಮೇಲೆ ಪ್ರಭಾವ ಬೀರಬಹುದಾಗಿದೆ. ಆದರೆ ತಮ್ಮ ವೈಯಕ್ತಿಕ ವೃತ್ತಿಯ ಪ್ರಾದೇಶಿಕ ಭಿನ್ನತೆಗೆ ತಕ್ಕಂತೆ ಉಪಜಾತಿಗಳಿಂದ ಹಂಚಿಹೋಗಿವೆ.

ಅವೆಲ್ಲವು ಒಂದಾಗಬೇಕಾಗಿದೆ. ಅಲೆಮಾರಿತನಕ್ಕೆ ಕಾರಣಗಳೇನು? ಎಂಬುದನ್ನು ಅವರದೆ ದೃಷ್ಟಿಯಲ್ಲಿ ಯೋಚಿಸಿ ಅದನ್ನು ಹೇಗೆ ನಿವಾರಿಸಬಹುದು? ಅದರಿಂದ ದೂರವಿರಲೂ ಏನು ಮಾಡಬೇಕು? ಅವುಗಳನ್ನು ಪಡೆಯಲು ಮುಂದಾಗಬೇಕಾಗಿದೆ.

ಪ್ರಬಲ ಜಾತಿ ಎಂದತಕ್ಷಣ ಮೇಲ್ವರ್ಗವೆಂದು ಭಾವಿಸಬಾರದು. ಅದು ಸ್ಥಳಿಯ ಮಟ್ಟದಲ್ಲಿ ಅಧಿಕ ಜನಸಂಖ್ಯೆಯಿಂದ ಕೂಡಿದ ಸಮುದಾಯಗಳು ಇದರಲ್ಲಿ ಬರುವುದರಿಂದ ಸ್ಥಳಿಯ ಮಟ್ಟದ ಅಧಿಕಾರವನ್ನು ಹಿಡಿಯುವಲ್ಲಿ ಸಫಲರಾಗುವರು. ಆ ಭಾಗದಲ್ಲಿ ಆರ್ಥಿಕವಾಗಿ ಮುಂದುವರಿದವು ಗಳಾಗಿರುವುದರಿಂದ ಆರ್ಥಿಕ ಹಿನ್ನೆಲೆ ಇರುವುದರಿಂದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವಬಿರಬಹುದು. ಜಾತಿ ವಿಷಯದಲ್ಲಿ ಬಂದಾಗ ಮೊದಲ ಜಾತಿಗೆ ಆದ್ಯತೆ ಕೊಡಲಾಗುವುದು.

೩.೪ ಅಲೆಮಾರಿಗಳ ಲಿಂಗ ಸಂಬಂಧ

ಸಾಮಾಜಿಕ ಸಂಬಂಧಗಳಲ್ಲಿ ಬಂಧಿಯಾಗಿರುವ ಮಾನವರು ತಮ್ಮ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಒಂದು ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ. ಹಾಗಾದರೆ ಅಂತಹ ವ್ಯವಸ್ಥೆಯಾವುದು ಅದರ ಅವಶ್ಯಕತೆ ಎಷ್ಟಿದೆ? ಆ ವ್ಯವಸ್ಥೆಯಿಂದ ಅವರ ಬಯಕೆಗಳು ಈಡೇರಿವೆಯೆ? ಅಂತಹ ವ್ಯವಸ್ಥೆಯು ಎಲ್ಲಾ ಜನ ಸಮುದಾಯಗಳಲ್ಲಿ ಒಂದೆ ತೆರನಾಗಿವೆಯೆ? ಅಥವಾ ಭಿನ್ನವಾಗಿವೆಯೆ? ಯಾವಾಗಿನಿಂದ ಆ ವ್ಯವಸ್ಥೆಗಳು ರೂಪಗೊಂಡು ಕಾರ್ಯರೂಪದಲ್ಲಿ ಬಂದವು ಇಂತಹ ವ್ಯವಸ್ಥೆಗಳು ಸ್ಥಿರವಾಗಿವೆಯೆ? ಅಥವಾ ಬದಲಾದ ಕಾಲದಲ್ಲಿ ಬದಲಾವಣೆಗೊಂಡಿವೆ ಎಂಬಿತ್ಯಾದಿ ಹಲವಾರು ಪ್ರಶ್ನೆಗಳು ಮೇಲಿಂದ ಮೇಲೆ ಬರುವುದು ಸಹಜ.

ಯಾವುದೆ ಒಂದು ವಸ್ತುವನ್ನು ಪಡೆಯಬೇಕಾದರೆ ಅದರ ಶ್ರಮ, ಕೌಶಲ್ಯ ಭಾಗವಹಿಸುವಿಕೆ ಮತ್ತು ಅದನ್ನು ಪಡೆಯುವಾಗ ತೋರಿಸುವ ಜಾಣ್ಮೆ ಇತ್ಯಾದಿಗಳೆಲ್ಲವೂ ಬಹುಮುಖ್ಯವೆನಿಸುತ್ತವೆ. ಅಂತಹ ಜಾಣ್ಮೆಯು ಏಕವ್ಯಕ್ತಿಯಿಂದ ಬರಲಾರದು. ಒಮ್ಮಿಂದೊಮ್ಮೆಲೆ ಬರುವುದಿಲ್ಲ. ಅದಕ್ಕಾಗಿ ಸಂಬಂಧಗಳು ಸಹಕಾರದೊಂದಿಗೆ ಬೆಸೆಯಬೇಕು, ಎರಡು ಜೀವಿಗಳ ಸಹಕಾರ ಬೇಕು. ಸಂಬಂಧಗಳು ಬೇಕು. ಇಂತಹ ಸಂಬಂಧಗಳು ಇನ್ನೊಂದು ಸಂಬಂಧಗಳೊಂದಿಗೆ ಅನುಸಂಧಾನಗೊಳ್ಳಬೇಕು. ಪ್ರೇರಣೆ ಯಾಗಬೇಕು. ಮಾದರಿಯಾಗಬೇಕು ಅಂತಹ ಸಂಬಂಧವೆ ಲಿಂಗ ಸಂಬಂಧ.

ಲಿಂಗಸಂಬಂಧಗಳು ಒಂದೊಂದು ಸಮುದಾಯದಲ್ಲಿ ಒಂದೊಂದು ರೀತಿಯಾಗಿರುವುದನ್ನು ಕಾಣುತ್ತೇವೆ. ಮೇಲ್ವರ್ಗದ ಲಿಂಗಸಂಬಂಧಗಳು, ಕೆಳವರ್ಗಗಳ ಲಿಂಗಸಂಬಂಧಗಳು ಮಧ್ಯಮ ವರ್ಗದ ಲಿಂಗಸಂಬಂಧಗಳು ಬೇರೆ ಬೇರೆಯಾಗಿವೆ. ಇಂತಹ ಲಿಂಗ ಸಂಬಂಧಗಳೆ ಒಂದು ಸಮುದಾಯದ ಆರ್ಥಿಕ, ಸಾಮಾಜಿಕ ರಚನೆಗೆ ಅಡಿಗಲ್ಲಾಗಬಲ್ಲದು. ಅಲೆಮಾರಿಗಳ ಲಿಂಗಸಂಬಂಧಗಳು ಉಳಿದೆಲ್ಲಾ ಸಮುದಾಯಗಳ ಲಿಂಗ ಸಂಬಂಧಕ್ಕಿಂತ ಭಿನ್ನವಾಗಿವೆ.

ಅಲೆಮಾರಿ ಸಮುದಾಯಗಳಲ್ಲಿ ಲಿಂಗಸಂಬಂಧಗಳು ಸ್ತ್ರೀಪುರುಷರಿಬ್ಬರು ಹುಟ್ಟಿನಿಂದ ಸಾಯುವವರೆಗೆ

ವಿವಿಧ ಕ್ಷೇತ್ರಗಳಲ್ಲಿ ಹೇಗೆ ನೇಯ್ಗೆಯಾಗಿ ಹೆಣೆದುಕೊಂಡು ಹಾಗೂ ಉಳಿದೆಲ್ಲಾ ಸಮುದಾಯಗಳ ಲಿಂಗಸಂಬಂಧಕ್ಕಿಂತ ಅಲೆಮಾರಿಗಳ ಲಿಂಗಸಂಬಂಧ ಹೇಗೆ ಭಿನ್ನವಾಗಿವೆ ಎಂಬುದನ್ನು ನೋಡಬಹುದು. 'ಲಿಂಗಸಂಬಂಧ' ಎಂದರೇನು? ಎಂಬುದನ್ನು ತಿಳಿಯುವುದು ಅವಶ್ಯಕವಾಗಿದೆ. ಲಿಂಗಸಂಬಂಧವೆಂದರೆ, ಯಾವ ರೀತಿಯ ಸಂಬಂಧ, ದೈಹಿಕ ಸಂಬಂಧವೊ, ಮಾನಸಿಕ ಸಂಬಂಧವೊ, ಶ್ರಮವಿಭಜನೆಯ ಸಂಬಂಧವೊ, ಜೈವಿಕ ಸಂಬಂಧವೊ, ಸಾಮಾಜಿಕ ಸಂಬಂಧವೊ, ಆರ್ಥಿಕ ಸಂಬಂಧವೊ ಎಂಬ ಪ್ರಶ್ನೆಗಳು ಬರುವುದು ಸಹಜ.

"ಲಿಂಗ ಇದೊಂದು ಬಹುಶೃತ ಶಬ್ದ"[25]. ಈ ಪದವನ್ನು ಚಿಹ್ನೆ ಎಂಬ ಅರ್ಥದಲ್ಲಿಯು ನೋಡಬಹುದು. ನಮ್ಮ ದೈನಂದಿನ ಮಾನವ ಸಮಾಜದಲ್ಲಿರುವ ಲಿಂಗಗಳನ್ನು ಜೀವಶಾಸ್ತ್ರದ ಆಧಾರದ ಮೇಲೆ ಮೂರು ರೀತಿಯಾಗಿ ಗುರುತಿಸಲಾಗಿದೆ. ೧. ಪುಲ್ಲಿಂಗ ೨. ಸ್ತ್ರೀಲಿಂಗ ೩. ನಪುಂಸಕ ಲಿಂಗ ಈ ರೀತಿಯ ಮೂರು ಲಿಂಗಗಳಲ್ಲಿ ಪುಲ್ಲಿಂಗ- ಪುರುಷ ಸೂಚಕವಾದರೆ, ಸ್ತ್ರೀಲಿಂಗ- ಸ್ತ್ರಿ ಸೂಚಕವಾಗಿದೆ. ನಪುಂಸಂಕ ಲಿಂಗ- ಸ್ತ್ರೀ ಮತ್ತು ಪುರುಷರ ಲಿಂಗಗಳ ಮಿಶ್ರಿತ ರೂಪದಲ್ಲಿರುವ ಸೂಚಕ ಅಥವಾ ಪ್ರಕೃತಿಯನ್ನು ಸೂಚಿಸುತ್ತದೆ. ಇಂತಹ ಅರ್ಥಗಳನ್ನು ನೀಡುವ ಲಿಂಗಗಳು ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಒಂದು ಲಿಂಗಕ್ಕೆ ಇನ್ನೊಂದು ಲಿಂಗದ ಅವಶ್ಯಕತೆಯಿದೆ. ಆದ್ದರಿಂದ ಎರಡು ಲಿಂಗಗಳ ನಡುವೆ ಸಂಬಂಧಗಳು ಬೆಸೆಯುತ್ತವೆ. ಹೀಗಾದಾಗ ಮಾತ್ರ ಮಾನವ ಸಮಾಜವು ಮುಂದುವರಿಯಲು ಸಾಧ್ಯ. ಒಂದು ಲಿಂಗ ಮತ್ತೊಂದು ಲಿಂಗದ ಜೊತೆ ಅನುಸಂಧಾನಗೊಂಡಾಗ ಲಿಂಗಸಂಬಂಧವು ಗಟ್ಟಿಯಾಗಿರುತ್ತದೆ. ಗಟ್ಟಿಯಾಗುವ ಮೂಲಕ ಮತ್ತೊಂದು ಸಂಬಂಧಕ್ಕೆ ನಾಂದಿ ಹಾಡುತ್ತದೆ. ಇವು ಮಾನವನ ಅನುಭವದ ಮತ್ತು ಜೀವಶಾಸ್ತ್ರದ ಅವಿಭಾಜ್ಯ ಅಂಗವಾಗಿ ಒಂದಕ್ಕೊಂದು ಸಂಬಂಧಗಳು ಬೆರೆತುಕೊಂಡಿವೆ. ಲಿಂಗ ಸಂಬಂಧಗಳು ವ್ಯಕ್ತಿಗಳ ಅನುಭವದ ನೆಲೆಯಲ್ಲಿ ಒಂದು ಸಾಮಾಜಿಕ ಸ್ಥಿತಿಯಾಗಿ ರೂಪಗೊಂಡು ಪರಸ್ಪರ ಕ್ರಿಯೆಗಳ ರೂಪತಾಳುತ್ತವೆ.

ಮಾನವರೊಂದಿಗೆ ಅಂಟಿಕೊಂಡು ಬಂದಿರುವ ಕಾಮವು ಸಹಜಕ್ರಿಯೆಯಾಗಿದ್ದು ತಣಿಸಿಕೊಳ್ಳಲು ಒಂದು ಲಿಂಗಕ್ಕೆ ಇನ್ನೊಂದು ಲಿಂಗಗಳ ಅವಶ್ಯಕತೆಯಿದೆ. ಕ್ರಿಯೆಗಳನ್ನು ಒಂದೇ ತರಹದ ಎರಡು ಲಿಂಗಗಳು ಪೂರೈಸಲಾರವು. ಒಂದು ವೇಳೆ ಸಾಧ್ಯವಾದರೂ ಸಂತತಿಯ ಉತ್ಪಾದನೆ ಅಸಾಧ್ಯ. ಎರಡು ಬೇರೆ ಬೇರೆ ಲಿಂಗಗಳು ಮಿಲನ ಹೊಂದಲೆಬೇಕಾಗುವುದು. ಜೀವಶಾಸ್ತ್ರದ ಆಧಾರದಮೇಲೆ ಹೇಳಬೇಕೆಂದರೆ ಲಿಂಗಗಳ ನಡುವೆ ಜೈವಿಕ ವ್ಯತ್ಯಾಸವೂ ಸಹಜವಾಗಿದೆ. ಪುರುಷನಿಗೆ ಒಂದು ರೀತಿಯ ಜೈವಿಕ ರಚನೆಯಿದ್ದರೆ, ಸ್ತ್ರೀಗೆ ಮತ್ತೊಂದು ರೀತಿಯ ಜೈವಿಕರಚನೆಯಿದೆ. ಭಿನ್ನ ಜೈವಿಕ ಆಕಾರವನ್ನು ಹೊಂದಿದ ಲಿಂಗಗಳು ಒಂದಕ್ಕೊಂದು ಹೊಂದಿಕೊಂಡು ಯಾವ ಲಿಂಗವು ಯಾವ ಸಾಮರ್ಥ್ಯ ಹೊಂದಬೇಕು ಯಾವ ತರಹದ ಕೆಲಸ ಕಾರ್ಯಗಳಲ್ಲಿ, ಯಾವ ಸಂದರ್ಭದಲ್ಲಿ ತೊಡಗಿಸಿಕೊಳ್ಳಬಹುದೆಂಬುದನ್ನು ನೋಡಬಹುದು. ದೈಹಿಕವಾಗಿ ಪುರುಷ ಪ್ರಬಲನೆ ಸ್ತ್ರೀ ಪ್ರಬಲಳೆ ಎಂಬ ಪ್ರಶ್ನೆ ಬರುವುದು. ಸಹಜವಾಗಿಯೆ ಪುರುಷನು ಸ್ತ್ರೀಗಿಂತ ಸ್ವಲ್ಪಮಟ್ಟಿಗಿನ ಪ್ರಬಲವೆಂದು ಹೇಳಬಹುದು. ಆದರೂ ಕೆಲವು ಕಡೆ ಕೆಲವು ಸಂದರ್ಭಗಳಲ್ಲಿ

ಪುರುಷನನ್ನು ಮೀರಿಸುವಷ್ಟು ಕೆಲಸಕಾರ್ಯಗಳನ್ನು ಸ್ತ್ರೀಯು ಮಾಡಿತೋರಿಸುವುದರಿಂದ ನಿರ್ಧರಿಸುವುದು ಕಷ್ಟವಾಗುತ್ತದೆ. ಆದರೂ ದೈಹಿಕವಾಗಿ ಪುರುಷ ಪ್ರಬಲ ಸ್ತ್ರೀಯು ಸ್ವಲ್ಪಮಟ್ಟಿಗಿನ ದುರ್ಬಲಳು ಎಂದು ಹೇಳಬಹುದು. ಕಾರಣ ತಿಂಗಳ ಋತುಸ್ರಾವದಿಂದ ಆಕೆಯ ಶಕ್ತಿ ಸಾಮರ್ಥ್ಯಗಳು ಕುಂದಬಹುದು. ಹೆರಿಗೆಯಂತ ಸಂದರ್ಭದಲ್ಲಂತೂ ಪೂರ್ತಿಯಾಗಿ ಅವಳ ಶಕ್ತಿ ಸಾಮರ್ಥ್ಯಗಳು ಸೋಲುತ್ತವೆ. ಆದರೆ ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ ಅವಳು ಎಲ್ಲ ರೀತಿಯಲ್ಲಿ ಪುರುಷರಷ್ಟೆ ಶಕ್ತಿವಂತಳು ಎಂದು ಹೇಳಿದರೆ ತಪ್ಪಾಗಲಾರದು.

ಸ್ತ್ರೀ ಹಾಗೂ ಪುರುಷ ಇದು ಮಾನವರ ಎರಡು ರೂಪಗಳು. "ಅವುಗಳು ಇಂದು ಯಾವ ರೀತಿಯಲ್ಲಿ ಅಭಿವ್ಯಕ್ತವಾಗುತ್ತವೆಯೆ ಅದುವೆ ಸಾಂಸ್ಕೃತಿಕ ಸಂದರ್ಭದಲ್ಲೂ ವ್ಯಕ್ತವಾಗುತ್ತವೆ."[26] ಪ್ರಜೋತ್ಪಾದನೆಯ ಉದ್ದೇಶದಿಂದ ಸ್ತ್ರೀ ಹಾಗೂ ಪುರುಷ ಈ ಬಗೆಯ ಲಿಂಗ ರೂಪಗಳನ್ನು ನಿಸರ್ಗವು ನಿರ್ಮಿಸಿದ್ದರೂ ಸ್ತ್ರೀ ಎಂದರೆ ಕನಿಷ್ಟಳು, ಪುರುಷ ಎಂದರೆ ಶ್ರೇಷ್ಠನು. ಎಂಬುದು ಮಾತ್ರ ಮಾನವರ ಕುಹಕ. ಲಿಂಗ ಸಾಪೇಕ್ಷ ಸ್ವಭಾವಗಳ ವೈಶಿಷ್ಟ್ಯಗಳೂ ಜೀವಶಾಸ್ತ್ರದ ದೃಷ್ಟಿಯಿಂದ ಕಾಲಾನುಕ್ರಮದಲ್ಲಿ ಸಮಾಜದಲ್ಲಿ ಹೊಂದಿಕೊಂಡು ತನ್ನ ರಚನಾ ವ್ಯವಸ್ಥೆಯನ್ನು ಹುಸಿಗೊಳಿಸುವಷ್ಟು ವಿಸ್ತಾರವಾಗಿ ಬೆಳೆದಿದೆ.

ಪ್ರತಿಯೊಂದು ಪ್ರಾಣಿ ವರ್ಗವು ಒಂದೊಂದು ವೈಶಿಷ್ಟ್ಯ ಪೂರ್ಣ ಭೌತಿಕ ಪರಿಸ್ಥಿತಿಗೆ ಅನುಗುಣವಾಗಿ ನಿರ್ಮಿತವಾಗಿರುತ್ತದೆ. ಅಲ್ಲದೆ ಬಾಹ್ಯ ಪರಿಸರದ ಪರಿಣಾಮವು ಆಯಾ ಅಂಶಗಳ ನಡತೆಯ ಮೇಲೆ ಸಾಕಷ್ಟು ಪ್ರಭಾವ ಬೀರಿರುತ್ತವೆ. ಇನ್ನೊಂದು ಸಂಗತಿ ಎಂದರೆ ಮಾನವನ ಶರೀರ ರಚನೆಯ ಭಾಗವಾದ ಮಾನವನ ಮೆದುಳು ಎಲ್ಲಾ ಪ್ರಾಣಿಗಳಿಗಿಂತ ಹೆಚ್ಚು ಪ್ರಗತಿದಾಯಕವಾಗಿದೆ. ಎಲ್ಲ ಪ್ರಕಾರದ "ಸಸ್ತನಿ ಪ್ರಾಣಿಗಳಲ್ಲಿ ನಿಯಮಿತ ಹಾಗೂ ನಿರ್ದಿಷ್ಟ ಅವಧಿಯ ಕಾಲದಲ್ಲಿ ಲೈಂಗಿಕ ಭಾವನೆಯು ಜಾಗೃತಗೊಳ್ಳುತ್ತವೆ."[27] ಇಂತಹ ಸಮಯದಲ್ಲಿ ಶರೀರದಲ್ಲಿ ವ್ಯತ್ಯಾಸಗಳನ್ನು ಕಾಣುತ್ತೇವೆ. ಆಗ ಒಮ್ಮಿಂದೊಮ್ಮೆಲೆ ಲೈಂಗಿಕ ಸಂಬಂಧದ ಆಸಕ್ತಿ ಹೆಚ್ಚಾಗುತ್ತದೆ. ಶಾರೀರಿಕವಾಗಿ ಈ ಸಂಬಂಧಗಳೂ ನಡೆಯುತ್ತವೆ.

ಎಸ್ಟ್ರಾಸ್ ಕಾಲದಲ್ಲಿ "ಸ್ತ್ರೀಯ ವಿಶಿಷ್ಟ ಹಾರ್ಮೋನುಗಳು ಬಹು ಪ್ರಮಾಣದಲ್ಲಿ ಉತ್ಪತ್ತಿಯಾಗುವುದರಿಂದ ಅದನ್ನು ಅನ್ವಯಗೊಂಡಂತೆ ಎಸ್ಟ್ರಾಸ್‌ದ ತೀವ್ರತೆ ಹಾಗೂ ಅವಧಿಯಿರುತ್ತದೆ. ಹೀಗಿರುವುದರಿಂದ ಮನುಷ್ಯ ಪ್ರಾಣಿ ಒಂದನ್ನು ಬಿಟ್ಟು, ಮಿಕ್ಕೆಲ್ಲಾ ಪ್ರಾಣಿಗಳು ಅದರ ಜೀವಾವಧಿಯ ಶೇ. ೩-೫ ರಷ್ಟು ಕಾಲ ಮಾತ್ರ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತವೆ."[28]

"ಮಾಸಿಕ ಮುಟ್ಟಿನ ನಂತರದ ೧೪ನೆಯ ದಿನವು ಗರ್ಭಧಾರಣೆಯ ಕಾಲವಿರುತ್ತದೆ"[29]. ಆಗ ಒಂದು ಪ್ರಕಾರದ ಉತ್ತೇಜನ ಭಾವನೆಯು ಸ್ತ್ರೀಗೆ ಉಂಟಾಗುತ್ತದೆ. ಇತರ ಪ್ರಾಣಿಗಳಿಗಿಂತ ಬೇರೆಯಾದ ಜೀವಶಾಸ್ತ್ರದ ವ್ಯತ್ಯಾಸವು ಮನುಷ್ಯ ಪ್ರಾಣಿಯಲ್ಲಿ ಕಂಡುಬರುತ್ತದೆ. ಮಾನವರ ಲೈಂಗಿಕ ಕ್ರಿಯೆಗಳಿಗೆ ನಿರ್ದಿಷ್ಟ ನಿಮಯ ಮತ್ತು ಅವಧಿಯು ಇಲ್ಲವಾಗಿದೆ. ಹಾಗೂ ನಿಯಂತ್ರಣವೂ ಇರುವುದಿಲ್ಲ. ಹೇಗೆ ಹಸಿವು ಮಾನವನಿಗೆ ಪ್ರೇರಕವಾಗಿದೆಯೊ ಅದೆ ರೀತಿಯಲ್ಲಿ ಕಾಮ ಪ್ರೇರಕವಾಗಿದೆ. ಪರಿಣಾಮ ಮಾನವರ

ಮೆದುಳು ಹಸಿವು ಮತ್ತು ಕಾಮಕ್ಕೆ ಸ್ಪಂದಿಸುತ್ತಿರುತ್ತದೆ. ಆದರೆ ಪ್ರಕೃತಿ ಸಹಜವಾದ ಕಾಮದಲ್ಲಿ ಸ್ತ್ರೀ-ಪುರುಷರು ಜೊತೆಯಾಗುತ್ತಾರೆ. ಮಕ್ಕಳನ್ನು ಹೇರುವುದಕ್ಕಾಗಿಯೆ ಲೈಂಗಿಕ ಕ್ರಿಯೆಯಲ್ಲಿ ತೊಡಗಬೇಕೆಂದು ಹೇಳುವುದು ತಪ್ಪಾಗುತ್ತದೆ. ಲೈಂಗಿಕ ಕ್ರಿಯೆಯು ಪುರುಷನಿಗಷ್ಟೆ ಇರದೆ ಸ್ತ್ರೀಯರಿಗೂ ಇರುವುದುಂಟು. ಆದರೆ ಅದಕ್ಕೆ ಸಮಾಜದ ನಿಯಮ ಲೇಪಿಸುವುದರಿಂದ ನಿಷ್ಕ್ರೀಯಗೊಳ್ಳಬಹುದು. ಪುರುಷನಿಗೆ ಎಸ್ಟ್ರಾಸ್‌ದ ಬೆಂಬಲದ ಜೊತೆಗೆ ಸಮಾಜದ ಲೇಪನವು ಬೆಂಬಲವಾಗಿ ನೀಡುವುದರಿಂದ ಆತನೆ ಮೊದಲಿಗನಾಗುತ್ತಾನೆ. ಆದ್ದರಿಂದ ಲೈಂಗಿಕ ಕ್ರಿಯೆಯಲ್ಲಿ ಕೇವಲ ಪುರುಷನದಷ್ಟೇ ಪಾಲಿರದೇ ಸ್ತ್ರೀಯರದ್ದು ಪಾಲಿದೆ. ಇಲ್ಲಿ ಸಂಬಂಧಗಳು ಸಹಜ ಮತ್ತು ಸಮಾನತೆಯ ರೂಪವಾಗಿ ಕಾಣುತ್ತವೆ. ಇಂತಹ ಸಂಬಂಧಗಳಲ್ಲಿ ರಕ್ಷಣೆ ಅಗತ್ಯಗಳು ಮುಖ್ಯವಾಗಿರುತ್ತವೆ. ಅವು ಆಯಾಯ ಸಮಯ ಸಂದರ್ಭಕ್ಕನುಗುಣವಾಗಿ ಚಾಲ್ತಿಯಲ್ಲಿರುತ್ತದೆ.

ಅಂದರೆ ಸ್ವ-ಸಂರಕ್ಷಣೆಯ ಅಗತ್ಯ ಪ್ರೇರಣೆ ಹಾಗೂ ಎಲ್ಲಾ ಪ್ರಾಣಿಗಳಲ್ಲಿರುವಂತೆ ಮಾನವನಲ್ಲಿಯೂ ಇರುತ್ತದೆ. ಏಕೆಂದರೆ ಜೀವನ ಅವಶ್ಯಕ ಸಾಧನ ಸಾಮಾಗ್ರಿಗಳನ್ನು ಪಡೆಯುವಲ್ಲಿ ಸ್ಪರ್ಧೆಗಳು ಇಬ್ಬರ ಮದ್ಯದಲ್ಲಿ ಮೂಡಬಹುದು. ಜೊತೆಗೆ ಸಹಕಾರ ಸಹಾಯ ಪ್ರವೃತ್ತಿಯೂ ವ್ಯಕ್ತವಾಗಬಹುದು.

ಮನುಷ್ಯ ಸ್ವಭಾವದ ಅನುವಂಶಿಕವಾಗಿರುವ ಅಂಶ ಆಕ್ರಮಣದ ಪ್ರಮಾಣವು ಯಾವ ಲಿಂಗಗಳಲ್ಲಿ ಹೆಚ್ಚಿದೆ. ಸಮಾಜಶಾಸ್ತ್ರಜ್ಞರ ಪ್ರಕಾರ ಶಾರೀರಿಕ ಆಕ್ರಮಣವು ಪುರುಷರಲ್ಲಿ ಹೆಚ್ಚಿದ್ದರೆ. ಸ್ತ್ರೀಯರಲ್ಲಿ ಮಾನಸಿಕ ಆಕ್ರಮಣ ಹೆಚ್ಚಿದೆ ಎನ್ನುತ್ತಾರೆ. ಆದರೆ ಈ ರೀತಿಯ ನಿರ್ಧಾರವನ್ನು ಹೇಳಲು ಅಸಾಧ್ಯವಾಗಿದೆ. ಎಷ್ಟೆ ಪ್ರಬಲ ಸ್ತ್ರೀ ಆದರೂ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಟ್ಟಳೆಗಳು ಆಕೆಯ ಶಕ್ತಿಯನ್ನು ಕುಂದಿಸಬಲ್ಲವು. ಪುರುಷಗೆ ಅವಕಾಶದ ಜೊತೆಗೆ ಸಹಕಾರವು ನೀಡುವುದರಿಂದ ಮುಂಚೂಣಿಗೆ ಬಂದಿರಬಹುದು.

ವೈಜ್ಞಾನಿಕವಾಗಿ ಹೇಳುವುದಾದರೆ ಸಮಯ ಸಂದರ್ಭ ನೋಡಿಕೊಂಡು ಸಾಮಾಜಿಕ ಸಂಸ್ಕಾರ ಹಾಗೂ ಹಾರ್ಮೋನ್ಸ್‌ಗಳು ಪರಸ್ಪರ ಪ್ರಭಾವ ಬೀರುವುದರೊಂದಿಗೆ ಪರಿಸ್ಥಿತಿಯಲ್ಲಿ ಮೊದಲಿಗನಾಗಬಹುದು. ಆದರೆ ಈ ಸಂದರ್ಭವು ಸ್ತ್ರೀಯರಿಗೆ ಬರುವುದೆ ಇಲ್ಲ.

ಸಸ್ತನಿ ಪ್ರಾಣಿಗಳಲ್ಲಿ ಗಂಡು ಮಗುವಾಗಲಿ ಹೆಣ್ಣುಮಗುವಾಗಲಿ ಎಲ್ಲ ಸ್ವಾಭಾವಗಳು ಸಮವಾಗಿಯೆ ಇರುತ್ತವೆ. "ಬುದ್ಧಿವಂತಿಕೆಯೂ ಅನುವಂಶಿಕವಾದರೂ ಪರಿಸರದ ಪ್ರಭಾವ ಪರಿಣಾಮಕಾರಿಯದ್ದು"[30] ಎಂದು ಮಂಡಲ್‌ರವರ ಅಭಿಮತವಾಗಿದೆ. "ಲಿಂಗಸಂಬಂಧದ ಹಾರ್ಮೋನ್ಸ್‌ಗಳ ನಿಯಂತ್ರಣವು ಹಾಯ್ ಪಾಥಲಿ ಮಸ್ ಗ್ರಂಥಿಯಿಂದ ಉಂಟಾಗುತ್ತದೆ. ಈ ಗ್ರಂಥಿಯು ಮೆದುಳಿನಲ್ಲಿರುತ್ತದೆ. ಇದನ್ನು ಹಾರ್ಮೋನ್ಸ್ ಇಂಜಕ್ಷನ್ ಸಹಾಯದಿಂದ ಗ್ರಂಥಿಗಳನ್ನು ಉತ್ತೇಜಿಸಬಹುದು"[31]. ಆದುದರಿಂದ ಮೆದುಳಿನ ವಿಕಾಸದ ಮಹತ್ವದ ಕಾಲವೆಂದರೆ ಬಾಲ್ಯ. ಈ ಬಾಲ್ಯದಲ್ಲಿ ಯಾವ ತೆರನಾದ ಸಂಸ್ಕಾರ ಕೊಡುತ್ತೇವೆಯೊ ಅದೆ ತೆರನಾಗಿ ಬೌದ್ಧಿಕ ಮಟ್ಟ ಎತ್ತರಿಸಿಕೊಳ್ಳಬಹುದಾಗಿದೆ. ಈ ವಿಷಯದಲ್ಲಿ ಪುರುಷರಿಗಿಂತ ಸ್ತ್ರೀಯರೇನೂ ಕಡಿಮೆ ಇಲ್ಲ. ಅವಕಾಶ ಸಿಕ್ಕರೆ ಅವರಷ್ಟೆ ಇವರು ಸಮನಾಗಿರಬಲ್ಲರು.

ಅವಲಂಬನೆಯು ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಕೊಡುಗೆಯಾಗಿದೆ. ಯಾರ ಸಹಾಯವು ಇಲ್ಲದೆ ಸ್ತ್ರೀ-ಪುರುಷರಿಬ್ಬರು ಬೆಳೆಯಬಲ್ಲರು. ಮೇಲ್ವರ್ಗಗಳ ಸಮುದಾಯಗಳಲ್ಲಿ ಆರ್ಥಿಕವಲಯದ ಹಿಡಿತ ಪುರುಷರ ಕೈಯಲ್ಲಿರುವುದರಿಂದ ಹೆಚ್ಚಾಗಿ ಸ್ತ್ರೀಯರು ಪುರುಷರನ್ನು ಅವಲಂಬಿಸುತ್ತಾರೆ. ಆದರೆ ಅಲೆಮಾರಿಗಳೂ ಈ ವಿಷಯದಲ್ಲಿ ತುಂಬಾ ಮುಂದಿದ್ದಾರೆ. ಕೇವಲ ಸಂಬಂಧಕ್ಕಾಗಿ, ಸಂತತಿಗಾಗಿ ಮಾತ್ರ ಅವಲಂಬಿಸಿದ್ದಾರೆಯೆ ಹೊರತು ಪೂರ್ಣಪ್ರಮಾಣದ ಅವಲಂಬನೆ ಅಲೆಮಾರಿಗಳಲ್ಲಿ ಇಲ್ಲ. ಪುರುಷರಂತೆ ಸ್ತ್ರೀಯೂ ಸ್ವಾತಂತ್ರವಾಗಿಯೆ ದುಡಿಯಬಲ್ಲಳು ಹೆಚ್ಚಾಗಿ ಪುರುಷರನ್ನೆ ಅವಲಂಬಿಸುವುದಿಲ್ಲ. ಲಿಂಗಸಂಬಂಧದ ಬಹುಮುಖ್ಯ ಭಾಗವೆಂದರೆ ವಾತ್ಸಲ್ಯ. ವಾತ್ಸಲ್ಯವೆಂಬುದು ಹೆಣ್ಣಿಗಷ್ಟೆ ಸೀಮಿತ ಎಂಬುದಕ್ಕೆ ಬಲವಾದ ಸಾಕ್ಷಿಗಳಿಲ್ಲ. ಅವು ಇಬ್ಬರ ಸ್ವತ್ತಾಗಿರುವ ಸಾಧ್ಯತೆಗಳಿವೆ.

"ಸಮಾಜದಲ್ಲಿರುವ ಉಭಯ ಲಿಂಗದ ವ್ಯಕ್ತಿಗಳು ಎಂದರೆ ಸ್ತ್ರಿ-ಪುರುಷರಿಬ್ಬರೂ ಮಕ್ಕಳ ಸಂಗೋಪನೆಯನ್ನು ಮಾಡುವ ಕ್ರಮವಿದೆ. ಅವರಿಬ್ಬರ ವ್ಯಕ್ತಿತ್ವ ಸಹಕಾರ ಪೂರ್ಣವಾಗಿರಬೇಕಷ್ಟೆ."[32] ಎಂದು ಮಾರ್ಗರೇಟ್ ಮಿಂಡ್ ಅಭಿಪ್ರಾಯವಾಗಿದೆ. ಇದನ್ನು ಗಮನಿಸಿದರೆ ವಾತ್ಸಲ್ಯವೂ ಸ್ತ್ರೀ ಅಥವಾ ಪುರುಷ ಯಾರೊಬ್ಬರ ಸ್ವತ್ತಲ್ಲ. ಹಾಗೆಯೆ ಲಿಂಗಸಂಬಂಧಿಯಾಗಿ ಕಂಡುಬಂದಿರುವ ಶ್ರಮವಿಭಜನೆಯು ಜೀವಶಾಸ್ತ್ರದ ವೈಶಿಷ್ಟ್ಯವಲ್ಲ. ಹಾರ್ಮೋನ್ಸ್‌ಗಳನ್ನು ಅವು ಆಧರಿಸಿಲ್ಲ. ಸಾಮಾಜಿಕ ಮತ್ತು ಸಾಂಸ್ಕೃತಿಕ ನೀತಿಗಳ ಕಾರಣದಿಂದ ಬೇರೆ ಬೇರೆಯಾಗಿದೆ. ಹಸಿವನ್ನು ನಿವಾರಿಸಿಕೊಳ್ಳಲು ಬದುಕಲು ಮನುಷ್ಯ ಉತ್ಪಾದನೆಯಲ್ಲಿ ತೊಡಗುತ್ತಾನೆ. ಇಂತಹ ಉತ್ಪಾದನೆಯ ವ್ಯವಹಾರದಲ್ಲಿ ಲಿಂಗ ಸಾಪೇಕ್ಷವಾದ ಶ್ರಮ ವಿಭಜನೆಗು ಮೊದಲೆ ಹುಟ್ಟಿತ್ತು.

ಅನಂತರ ಸಾಮಾಜಿಕ ಶ್ರಮವಿಭಜನೆಯನ್ನು ಮುಂದೆತರಲಾಯಿತು. ಅದರ ಮನ್ನಣೆಯನ್ನು ನೀಡಲಾಯಿತು. ಸ್ತ್ರೀಯ ಜನನ ಕ್ಷಮತೆಯನ್ನು ದೊಡ್ಡ ವಿಷಯವನ್ನಾಗಿ ಮಾಡಿ ಲಿಂಗಸಾಪೇಕ್ಷ ವಿಭಜನಗೆ ಕಹಳೆ ಊದಿದರು. ಶ್ರಮ ವಿಭಜನೆಗೆ ಅತಿಯಾದ ಸ್ನಾಯುಬಲ ಬೇಕಿಲ್ಲ ನೈಸರ್ಗಿಕ ಕ್ಷಮತೆಯ ಆಧಾರವಿಲ್ಲ. ಅದು ಮುಂದೆ ಬೇರೆಬೇರೆ ಅರ್ಥಗಳನ್ನು ಕಲ್ಪಿಸಲಾಯಿತು. ಹೇಗೆ ಮನುಷ್ಯರಿಗೆ ಹಸಿವು ಲೈಂಗಿಕ ಆಸಕ್ತಿಗಳು ಜೀವಶಾಸ್ತ್ರದ ಪ್ರೇರಣೆಗಳಾಗಿವೆಯೊ ಹಾಗೆಯೇ ಬದುಕಿರುವ ಅಸ್ಥಿತ್ವವನ್ನು ಸ್ಥಿರಗೊಳಿಸುವ ಪರಿಸರದ ಜ್ಞಾನವನ್ನು, ಗಳಿಸಿಕೊಂಡು ಜೀವನವನ್ನು ಸಮೃದ್ಧಗೊಳಿಸುವ ಪ್ರೇರಣೆಯೂ ಮಾನವನಲ್ಲಿ ಸಹಜವಾಗಿ ಇರುತ್ತದೆ. ಆನಂತರದ ಬೆಳವಣಿಗೆಯ ಬೆಳೆಸುವ ಕ್ರಮಗಳು ವಿಚಿತ್ರವಾಗಿವೆ.

ಲಿಂಗಸಂಬಂಧಗಳಲ್ಲಿ ಶ್ರಮವಿಭಜನೆ ಎಂದು ಹುಟ್ಟಿಕೊಂಡಿತೊ ಆಸ್ತಿಯ ಪರಿಕಲ್ಪನೆಯು ಹುಟ್ಟಿಕೊಂಡು ಕುಟುಂಬವ್ಯವಸ್ಥೆ ಬಲಗೊಂಡಿತು. ಲಿಂಗಸಂಬಂಧಗಳಲ್ಲಿ ತಾರತಮ್ಯತೆ ಬೆಳವಣಿಗೆ ಯಾಗುತ್ತಾ, ಹೋಯಿತು. ಕುಟುಂಬವ್ಯವಸ್ಥೆ ಬರುವುದಕ್ಕೂ ಮೊದಲು ಆದಿಮಕಾಲದ ಲಿಂಗಸಂಬಂಧಗಳು ಸಮಾನತೆಯಿಂದ ಕೂಡಿದ್ದವು. ಅಲ್ಲಿ ನಿಸರ್ಗ ನಿಮಿತ್ತವಾಗಿ ಬಂದ ಎರಡೂ ರೂಪಗಳಾಗಿ ಅಭಿವ್ಯಕ್ತ ವಾಗುತ್ತಿದ್ದವೆ ಹೊರತು ತಾರತಮ್ಯಕ್ಕೆ ಅವಕಾಶವಿರಲಿಲ್ಲ.

ಅಂದಿನ ಸಾಂಘಿಕ ಜೀವನ ಪದ್ಧತಿಯಲ್ಲಿ ಸ್ತ್ರೀಯು ಪುರುಷರಂತೆ ಕಾಡುಮೇಡುಗಳಲ್ಲಿ ಆಹಾರದ

ಅನ್ವೇಷಣೆಯಲ್ಲಿ ತೊಡಗಿಸಿಕೊಂಡಿದ್ದನ್ನು ಕಾಣುತ್ತೇವೆ. ಹೊರಗೆ ಹೋಗಿ ಇಬ್ಬರೂ ಒಂದಲ್ಲ ಒಂದು ಕಾಯಕದಲ್ಲಿ ಭಾಗಿಯಾಗುತ್ತಿದ್ದರು. ಕಲ್ಲುಗಳಿಂದ ಭೂಮಿ ಅಗೆದುಸಾಗುವಳಿ ಮಾಡುತ್ತಿದ್ದರು. ಕೃಷಿಗೆ ಬೇಕಾದ ಉಪಕರಣಗಳನ್ನು ಇಬ್ಬರೂ ಉತ್ಪಾದಿಸುತ್ತಿದ್ದರು. ಯಾವಾಗ ಸಂತಾನಕ್ಕೆ ಪುರುಷನು ಮುಖ್ಯನೆಂದು ತಿಳಿಯಲಾಯಿತೊ ಯಾವಾಗ ಕೃಷಿಯು ಸ್ತ್ರೀಯಿಂದ ಪುರುಷನ ಕೈಗೆ ಸೇರಿತೊ ಅಂದಿನಿಂದ ಸ್ತ್ರೀಯನ್ನು ಸಂಪೂರ್ಣವಾಗಿ ಕುಟುಂಬ ಸಂಸ್ಥೆಯಲ್ಲಿ ಬಂಧಿಸಲಾಯಿತು. ಇಲ್ಲಿಂದ ಸ್ತ್ರೀಯು ತನ್ನ ಸ್ಥಾನ ಮಾನವನ್ನು ಒಂದೊಂದಾಗಿ ಕಳೆದುಕೊಳ್ಳುತ್ತಾ, ಪುರುಷನ ಅಧೀನದಲ್ಲಿರುವ ವಾತವರಣ ನಿರ್ಮಾಣ ವಾಯಿತು. ಇಂತಹ ವಾತವರಣ ರಚನೆಗೆ ಒತ್ತು ಕೊಡಲಾಗಿ ಶಾಶ್ವತವಾಗಿ ಪುರುಷನ ಸುಭದ್ರವಾದ ಸಾಮ್ರಾಜ್ಯದ ಸ್ಥಾಪನೆಗೆ ನಾಂದಿಯಾಯಿತು.

ಈ ರೀತಿಯ ಸಾಮ್ರಾಜ್ಯದ ಹಿಂದಿರುವ ಹುನ್ನಾರಗಳು ಬಯಲಿಗೆ ಬಾರದಂತೆ ನೋಡಿಕೊಳ್ಳಲು ಎಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆಯೊ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂದು ಹಾಡಿ ಹೊಗಳಿದ್ದಾಯಿತು. ಇಷ್ಟಕ್ಕೆ ಸುಮ್ಮನಿರದೆ ಶಕ್ತಿಯ ಸಂಕೇತವೆಂದು ಬಿಂಬಿಸಲಾಗಿ ದುರ್ಗೆ, ಕಾಳಿ, ಚಂಡಿ ಎಂಬಿತ್ಯಾದಿ ನಾಮಗಳಿಂದ ಕರೆಯುತ್ತಾ ಅವಳೆಂದರೆ ಭಯ-ಭಕ್ತಿ, ರಕ್ಷಕಿ, ಸಂಕಷ್ಟಗಳು ಎದುರಾದರೆ ಸಂಹಾರಿಣಿ ಹಾಗೂ ಸಂತುಷ್ಟಳಾದಾಗ ಬಯಕೆ ಈಡೇರಿಸುವಳೆಂದು. ಮತ್ತೊಂದೆಡೆ ಅವಳನ್ನು ಚಂಡಾಲಿ, ಅಬಲೆ, ಸುಳ್ಳು, ಮೋಸ, ವಂಚನೆ, ಮೋಹ, ಅಶುದ್ಧ ಇತ್ಯಾದಿ ಎಲ್ಲಾ ಕೆಡಕುಗಳಿಗೆ ಮೂಲವೆಂದು, ದುರ್ಬಲಳೆಂಬ ವಿವಿಧ ಆಯಾಮಗಳಲ್ಲಿ ಆಕಡೆ ಈಕಡೆ ಚಲಿಸದಂತೆ ಬಂಧಿಸಲಾಯಿತು.

ಲೈಂಗಿಕ ಮತ್ತು ವಿವಾಹದಲ್ಲಿ ಸ್ವತಂತ್ರಗಳನ್ನು ನೀಡದೆ, ಬಹಳಷ್ಟು ಕಾಲ ಮನೆಯಲ್ಲಿರ ಕೂಡದು ಚಲನವಲನಗಳ ಮೇಲೆ ಹಿಡಿತ, ಸಂಪತ್ತಿನಿಂದ ದೂರ ಹಾಗೂ ಶಿಕ್ಷಣದಿಂದ ಬಹುದೂರ ಇರಿಸಲಾಯಿತು. ಶೀಲವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ವಿವಾಹದ ನಂತರ ತನ್ನ ಪತಿಯ ವಿನಹ ಅನ್ಯ ಪುರುಷರನ್ನು ಬಯಸುವುದು ಪಾಪ, ಪತಿಯು ತೀರಿದಾಗಲು ಮತ್ತೊಬ್ಬ ಪುರುಷನ್ನು ಕಣ್ಣೆತ್ತಿಯೂ ಸಹ ನೋಡಬಾರದು. ಕನಸಿನಲ್ಲಿಯೂ ಪರ ಪುರುಷರ ಆಲೋಚನೆಯನ್ನು ಕಾಣಬಾರದು. ಗಂಡನೆ ಸರ್ವಸ್ವವೆಂದು ಪೂಜೆಗಯ್ಯಬೇಕು ಗಂಡನಿಗೆ ದಾಸಿಯಂತೆ ಸೇವೆ ಮಾಡಬೇಕು. ಮುಂದಿನ ಜನ್ಮಗಳಲ್ಲಿಯೂ ಅವನೆ ಗಂಡನಾಗಿ ಬರಲು ವ್ರತಗಳನ್ನು ಆಚರಿಸಬೇಕು. ಗಂಡತೀರಿದ ನಂತರ ಹೆಣ್ಣಿನ ಬಾಳು ನಶ್ವರ ಆದ್ದರಿಂದ ಅವನ ಗಂಡನ ಚಿತೆಯಲ್ಲಿ ಆಹುತಿಯಾಗಬೇಕು ಎಂಬಿತ್ಯಾದಿ ನಿಯಮಗಳನ್ನು ಗುಪ್ತವಾಗಿಯೆ ಬೆಳೆಸಿಕೊಂಡು ಬರಲಾಯಿತು. ಇದಕ್ಕೆ ಪುಷ್ಠಿ ನೀಡಲು ಪವಿತ್ರತೆಯ ಲೇಪನ ಮಾಡಲಾಯಿತು.

ಹೀಗೆ ಲಿಂಗಸಂಬಂಧದ ಬಗ್ಗೆ ಸುಳ್ಳುಗಳನ್ನೆ ಸತ್ಯವನ್ನಾಗಿ ಮಾಡಲಾಗಿದೆ. ಲಿಂಗಸಂಬಂಧಗಳಲ್ಲಿ ಇಂತಹ ನಿರ್ಬಂಧಗಳು ನೆಲೆನಿಂತವರಲ್ಲಿ ಸಾಮಾನ್ಯವಾಗಿವೆ. ಆದರೆ ಅಲೆಮಾರಿ ಸಮುದಾಯಗಳಲ್ಲಿ ಇದಕ್ಕೆ ಭಿನ್ನವಾಗಿವೆ. ಇವರದೆ ಆದ ನಿಯಮಗಳು, ಧರ್ಮಪೂಜೆಗಳು, ಆಚರಣೆ, ಸಂಪ್ರದಾಯಗಳಲ್ಲಿ ಬೆಳೆದು ಬಂದವರಾಗಿದರಿಂದ ಅಂದಿನ ಸಂದರ್ಭದ ಪ್ರಕೃತಿ ಸಾಂಘಿಕ ಬದುಕನ್ನು ಕಲಿತುಕೊಂಡವರಾದ ಪರಿಣಾಮ ಲಿಂಗ ಸಂಬಂಧಗಳ ಬಗೆಗೆ ಈ ಸಮುದಾಯಗಳು ಕೊಡುವ ಸಾಮಾಜಿಕ ಸಂಸ್ಕಾರವೆ ಬೇರೆಯಾಗಿದೆ.

ಬಾಲ್ಯದಲ್ಲಿ ಲಿಂಗ ಸಂಬಂಧಗಳ ಬಗ್ಗೆ ತಿಳಿಸಲಾಗುತ್ತದೆ. ಬಾಲ್ಯದಲ್ಲಿ ನೀಡಿದ ಸಂಸ್ಕಾರವು ಕೊನೆಯ ತನಕ ಮಾಸದೆ ಹಾಗೆಯೆ ಉಳಿಯುವ ಸಾಧ್ಯತೆಗಳೆ ಹೆಚ್ಚು. ವೈದ್ಯರೇ ಹೇಳುವ ಪ್ರಕಾರ ಲಿಂಗಸಂಬಂಧಗಳು ಹಾರ್ಮೋನ್ಸ್‌ಗಳ ನಿಯಂತ್ರಣವಾಗಿದೆ. ಇದು ಹಾಯ್ ಪಾಥಾಲಿಮಸ್ ಗ್ರಂಥಿಯಿಂದ ಉಂಟಾಗುತ್ತದೆ. ಮೆದುಳಿನ ವಿಕಾಸದ ಮಹತ್ವವೆ ಇದಕ್ಕೆ ಮುಖ್ಯಕಾರಣ. ಇಂದು ನೆಲೆನಿಂತವರು ಪುರುಷನು ಪ್ರಬಲತೆಯನ್ನು ಸ್ಥಾಪಿಸಿರುವುದಕ್ಕೆ, ಅಲೆಮಾರಿಗಳು ಸಮಾನತೆ ಕೊಟ್ಟಿರುವುದಕ್ಕೆ ಬಾಲ್ಯದಲ್ಲಿ ಆಯಾ ಸಮುದಾಯಗಳು ನೀಡಿದ ಸಂಸ್ಕಾರದಿಂದಾಗಿದೆ.

ಅಲೆಮಾರಿಗಳಲ್ಲಿ ಲೈಂಗಿಕ ಭಾವನೆಯು ಪ್ರೇಮವನ್ನಾಧರಿಸಿದೆ. ಇದಕ್ಕೆ ಪರಸ್ಪರರ ಗಂಡು-ಹೆಣ್ಣುಗಳು ಸಮ್ಮತಿ ಇದೆ. ಈ ಸಂಬಂಧದಿಂದ ಇಬ್ಬರ ಉತ್ಸಾಹ ಕಂಡುಕೊಂಡಿರಬಹುದು. ಒಟ್ಟಾರೆಯಾಗಿ ಹೇಳುವುದಾದರೆ ಅಲೆಮಾರಿಗಳ ಲಿಂಗ ಸಂಬಂಧಗಳಲ್ಲಿ ಸಮಾನತೆಯನ್ನು ಆಧರಿಸಿದೆ. ಇಂತಹ ಲೈಂಗಿಕ ಸಂಬಂಧದಲ್ಲಿ ಶಾರೀರಿಕ ಕಾಮೇಚ್ಛೆಯ ಪೂರ್ವತೆಗಾಗಿ ಬಳಸದೆ ಭೌತಿಕ ಸುಖದಾಚೆಯ ಆನಂದವನ್ನು ಪರಸ್ಪರ ಏಕಾತ್ಮತೆಯ ಆನಂದವನ್ನು ಪಡೆಯುತ್ತಿದ್ದಾರೆ. ಈ ಬಗೆಯ ಅಂಶಗಳನ್ನು ಇಟ್ಟುಕೊಂಡು ಬಾಲ್ಯದಲ್ಲಿಯೆ ಸಂಸ್ಕಾರಗಳನ್ನು ಮೂಡಿಸುವದರಿಂದ ಲೈಂಗಿಕ ಸಂಪ್ರದಾಯಗಳು ಆಟಿಕೆಯ ಸಾಮಾನು ಗಳಂತೆ ಉಪಯೋಗವಾಗಲಾರದು. ಪ್ರೇಮಭಾವವನ್ನು ವಿಕಾಸತಗೊಳಿಸಲು ಪರಸ್ಪರರನ್ನು ಅರಿತುಕೊಳ್ಳಲು ನಿಕಟ ಸಂಬಂಧ ಬೆಳೆಸುವರು. ವಿವಾಹವಾಗದಿದ್ದರೂ ಯಾರಿಗೂ ಭ್ರಷ್ಟತೆಯ ಕಳಂಕಿತನ ಬರಲಾರದು. ವಿವಾಹ, ಮಕ್ಕಳ ಹೊಣೆ ಇವೆಲ್ಲವು ವ್ಯವಹಾರಿಕ ವಿಚಾರಗಳು. ಇಲ್ಲಿ ವೈವಾಹಿಕ ಸಂಬಂಧಗಳನ್ನು ಆಯ್ದುಕೊಳ್ಳುವ ಸ್ವತಂತ್ರವಿದೆ. ವಿವಾಹವಿಚ್ಛೇದನ, ವೈದವ್ಯದ ಕಾರಣಗಳಿಂದ ಆಯುಷ್ಯದ ಜೊತೆಗಾರನು ಇಲ್ಲವಾದರೆ ಇನ್ನೊಬ್ಬನ್ನು ಆರಿಸಿಕೊಳ್ಳುವುದು ಸಹಜವಾದದ್ದಾಗಿದೆ. ದೈಹಿಕ ಶುಚಿತ್ವ ಶೀಲಭ್ರಷ್ಟತೆಯ ಸಮರ್ಪಣ ಎಂಬ ಸಂಕುಚಿತ ಕಲ್ಪನೆಗಳಿಗೆ ಅವಕಾಶಗಳು ಬಹಳ ಕಡಿಮೆ.

ಪರಸ್ಪರಲ್ಲಿ ನಂಬಿಕೆಗಳಿವೆ. ತಿದ್ದಿಕೊಳ್ಳುವುದಕ್ಕೆ ಆಸ್ಪದವಿದೆ. ನಿಯಂತ್ರಿಸಲು ಪಂಚಾಯಿತಿ ಇದೆ. ಸ್ತ್ರೀ ಮತ್ತು ಪುರುಷರ ಜನನ ಕ್ಷಮತೆಯಿಂದ ಸಂತಾನ ಉಂಟಾಗುತ್ತದೆ. ಅದೆ ರೀತಿಯಾಗಿ ಅವರುಗಳಲ್ಲಿ ಸಮ ಒಡೆತನವೂ ಇದೆ. ಪಾಲನೆ-ಪೋಷಣೆಯು ಇಬ್ಬರಿಗೂ ಸೇರಿದೆ. ಇಂತಹ ಜವಬ್ದಾರಿಯನ್ನು ಇಬ್ಬರು ಪೂರೈಸುವರು. ಪತಿ-ಪತ್ನಿಯರಲ್ಲಿ ವಿರಸಗಳು ಉಂಟಾದರೂ ತಮ್ಮ ಸ್ವಭಾವಗಳನ್ನು ಹತೋಟಿಗೆ ತಂದು ಮತ್ತೆ ಹೊಂದಾಣಿಕೆ ಮಾಡಿಕೊಂಡು ಮಕ್ಕಳಿಗೆ ನೋವು ಆಗದಂತೆ ನೋಡಿಕೊಳ್ಳುವರು.

ವ್ಯಕ್ತಿಯ ವಿಕಾಸಕ್ಕೆ ವ್ಯಕ್ತಿ ಸ್ವಾತಂತ್ರ್ಯ ಬೇಕು. ಅದನ್ನು ಅಲೆಮಾರಿಗಳ ಲಿಂಗಸಂಬಧಗಳಲ್ಲಿ ಕೊಟ್ಟಿದ್ದಾರೆ. ಇಲ್ಲಿ ಬಂಧನಗಳಿಲ್ಲ, ನಿಂಧಿಸುವ ಸಂಕೇತಗಳಿಲ್ಲ, ಆರ್ಥಿಕ ಮತ್ತು ಸಾಮಾಜಿಕ ವಿಷಮತೆ ಗಳಿಲ್ಲ, ಉತ್ಪಾದನೆ ಹಾಗೂ ಸಾಧನೆಗೆ ಅವಕಾಶವಿದೆ. ವೈಯಕ್ತಿಕ ಸಂಪತ್ತಿನ ಒಡೆತನವಿಲ್ಲ ಬದಲಾಗಿ ಸಾಮೂಹಿಕ ಒಡೆತನವಿದೆ. ಮಗು ಜನಿಸಿದಾಗ ಯಾವುದೆ ರೀತಿಯ ವ್ಯತ್ಯಾಸವಿರುವುದಿಲ್ಲ. ಎಲ್ಲಾ ಜೀವಿಗಳಿಗೂ ಇರುವಂತೆ ಹಸಿವು, ನಿದ್ರೆ, ಬಾಯರಿಕೆಗಳು ಇರುತ್ತದೆಂಬ ಸಾಮಾನ್ಯ ತಿಳುವಳಿಕೆ ಇವರದಾಗಿದೆ. ಬೆಳವಣಿಗೆಯ ಹಂತದಲ್ಲಿ ವಿಭಿನ್ನವಾಗಿ ಬೆಳೆಯುತಿದ್ದರು, ಬೇರೆ ತರಹದ ಪ್ರಭಾವ

ಬೀರುವುದಿಲ್ಲ. 'ತಾಯಿಯೆ ಮೊದಲು ಮಗುವಿನ ಜೀವ'ವಾಗಿರುವುದರಿಂದ ಯಾರ ಜೊತೆ ಹೇಗಿರಬೇಕು? ಯಾರನ್ನು ಹೇಗೆ ಸಂಬೋಧಿಸಬೇಕು? ಎಂಬಿತ್ಯಾದಿ ಗುಣಗಳನ್ನೆಲ್ಲ ತಾಯಿಯು ಮಗುವಿಗೆ ನೀಡುತ್ತಾಳೆ. ಮಗು ಕೂಡ ಬೆಳೆಯುತ್ತಲೆ ತನ್ನ ಸುತ್ತಮುತ್ತಲಿನ ಪರಿಸರವನ್ನು ಗಮನಿಸುತ್ತಾ ಅದನ್ನೆ ರೂಢಿಸಿಕೊಂಡು ಬೆಳೆಯುತ್ತದೆ. ಮನೆಯ ಸದಸ್ಯರು ಇಂತಹ ಕಲಿಸುವಲ್ಲಿ ಮುಖ್ಯಪಾತ್ರವಹಿತ್ತಾರೆ. ಇವೆಲ್ಲವುಗಳನ್ನು 'ಕುಟುಂಬ'ವೆಂಬ ಸಂಸ್ಥೆಯ ಮೂಲಕ ನಡೆಯುತ್ತಿರುತ್ತವೆ.

ಜೈವಿಕ ಜೀವಿಯಾಗಿದ್ದ ಮಾನವ ಬೆಳೆಯುತ್ತಾ ಹೋದಂತೆಲ್ಲಾ ಸಾಮಾಜಿಕ ಜೀವಿಯಾಗಿ ಪರಿವರ್ತಿತನಾಗುತ್ತಾನೆ. ಈ ಪ್ರಕ್ರಿಯೆಯನ್ನು ಸಮಾಜಶಾಸ್ತ್ರಜ್ಞರು 'ಸಾಮಾಜೀಕರಣ' ಎಂದು ಗುರುತಿಸುತ್ತಾರೆ. ಈ ಹಂತದಿಂದ ಹುಡುಗ-ಹುಡುಗಿಯರ ಜವಬ್ದಾರಿಗಳೇನು? ನಿರ್ವಹಿಸುವ ಪಾತ್ರ ಯಾವುದು? ಎಂಬುದು ಹಂಚಿಕೆಯಾಗುತ್ತದೆ. ಗೃಹಕೃತ್ಯ, ಅಡಿಗೆ, ಲಾಲನೆ-ಪಾಲನೆ, ಶುಚಿತ್ವವನ್ನು ಹೆಣ್ಣು ಮಗುವಿಗೆ ನೀಡುವುದರ ಜೊತೆಗೆ ಮನೆಯಲ್ಲಿ ಕಿರಿಯರನ್ನು ಆಟವಾಡಿಸಲು ಹೇಳಲಾಗುವುದು. ಹುಡುಗ-ಹುಡುಗಿ ಇಬ್ಬರು ಕುಳಿತು ಓದುವಾಗ ಹುಡುಗನನ್ನು ಓದಲು ಹೇಳಿ ಹುಡುಗಿಯನ್ನು ಮನೆಕೆಲಸಕ್ಕೆ ಉಪಯೋಗಿಸಿಕೊಳ್ಳಲಾಗುವುದು. ಹುಡುಗ ಓದವೂದಷ್ಟೆ ಅಲ್ಲದೆ ಮತ್ತು ಸ್ನೇಹಿತರ ಜೊತೆ ಆಟವಾಡಲು ಪ್ರೇರೇಪಿಸುವುದು. ಈ ರೀತಿಯಾಗಿ ಗಂಡುಮಗುವಿಗೆ ಸ್ವಾತಂತ್ರ್ಯ ಕೊಡುವುದು ಹೆಣ್ಣು ಮಗುವಿಗೆ ಗೃಹಬಂಧನಲ್ಲಿಡುವುದು ಮುಂದೆ ಇದೆ ಪರಿಪಾಠವಾಗಿ ತಮಗೆ ನಿಯೋಜಿಸಿದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಂತಹ ವ್ಯವಸ್ಥೆ ನೆಲೆನಿಂತ ಸಮುದಾಯಗಳಲ್ಲಿ ಸಾಮಾನ್ಯವಾಗಿದೆ. ಆದರೆ ಅಲೆಮಾರಿ ಸಮುದಾಯಗಳಲ್ಲಿ ಈ ರೀತಿಯ ವ್ಯವಸ್ಥೆಯು ತುಂಬಾ ವಿರಳ. ಮೊದಲೆ ಹೇಳಿದಹಾಗೆ ಹುಟ್ಟಿನಲ್ಲಿ ಜೈವಿಕ ನಿಯಮವಿದೆಯೆ ಹೊರತು ತಾವು ಮಾಡುವ ಕೆಲಸ ಕಾರ್ಯಗಳಲ್ಲಿ ಇಲ್ಲ. ಎರಡೂ ಲಿಂಗಗಳಿಗೆ ಸಮಾನ ಸಂಸ್ಕಾರವನ್ನು ನೀಡುತ್ತಾರೆ.

೩.೪.೧. ಅಲೆಮಾರಿಗಳ ಲಿಂಗಸಂಬಂಧ ಮತ್ತು ಬಾಲ್ಯ ಸಂಸ್ಕಾರ

ಜನನದಿಂದ ಮಗುವಿಗೆ ಸಮುದಾಯದ ಸಂಸ್ಕಾರಗಳನ್ನು ಬಿತ್ತಲಾಗುವುದು. ಹುಡುಗ ಜನಿಸಿದರೆ ಹಿಗ್ಗದೆ ಹುಡುಗಿ ಜನಿಸಿದರೆ ಕುಗ್ಗದೆ ಎರಡನ್ನು ಸಮಾಂತರವಾಗಿ ಸಹಜತೆಯಿಂದ ನೋಡುತ್ತಾರೆ. ಹುಡುಗ ಹುಡುಗಿ ಇಬ್ಬರು ಮಕ್ಕಳೆ ಇವರಲ್ಲಿ ಯಾರು ಶ್ರೇಷ್ಠರಲ್ಲ, ಯಾರು ಕನಿಷ್ಠರಲ್ಲ. ಗಂಡು ಮಗು ಜನಿಸಿದಾಗ ಸಂತೋಷ ಪಡುತ್ತಾರೆ. ಹೆಣ್ಣು ಮಗು ಜನಿಸಿದಾಗಲೂ ಸಂತೋಷ ಪಡುತ್ತಾರೆ. ಹುಡುಗರಂತೆಯೆ ಹುಡುಗಿಯರಿಗೂ ಸ್ವಾತಂತ್ರವಾಗಿಯೆ ಹೊರಗಡೆ ಆಟವಾಡಲು, ದುಡಿಯಲು ಯಾವುದೆ ಕಟ್ಟುಪಾಡುಗಳಿಲ್ಲದೆ ಮುಕ್ತವಾಗಿ ಬಿಡುತ್ತಾರೆ.

ಹುಡುಗ-ಹುಡುಗಿಯರು ಲಿಂಗ ತಾರತಮ್ಯವಿಲ್ಲದೆ ಸ್ನೇಹ ಸಂಬಂಧದಿಂದ ಕೆಲಸಮಾಡುವುದು. ಜೊತೆಯಾಗಿಯೆ ತಿರುಗಾಡುತ್ತಾರೆ. ಈ ತರಹದ ಸ್ವತಂತ್ರ ಜೀವನದಲ್ಲಿ ಸ್ನೇಹವು-ಪ್ರೀತಿಯಾಗಿ, ಪ್ರೀತಿಯು ಗರ್ಭದಾರಣೆ ತನಕ ಹೋದರು ಅದೊಂದು ದೊಡ್ಡ ಅಪರಾಧವೆಂದು ಭಾವಿಸದೆ ಪರಿಸ್ಥಿತಿ ಅರ್ಥಮಾಡಿ ಕೊಂಡು ತಂದೆ-ತಾಯಿಗಳು ಮಕ್ಕಳ ಹೊಸ ಜೀವನದಲ್ಲಿ ನೆರವಾಗುವರು. ಪ್ರತಿ ಹಂತದಲ್ಲಿಯೂ

ತಾರತಮ್ಯವಿಲ್ಲದೆ, ಸಮಾನತೆಯ ಸಂಬಂಧದಿಂದ ಸಂಸ್ಕಾರ ಕೊಡುತ್ತಾರೆ. ಆ ಸಂಸ್ಕಾರವೆ ಅಲೆಮಾರಿಗಳ ಅತ್ತ್ಯುನ್ನತ ಮೌಲ್ಯವಾಗಿದೆ.

೧. ಕುಟುಂಬದಲ್ಲಿ ಲಿಂಗ ಸಂಬಂಧ

ಮಾತೃತ್ವದ ಭಾವನೆಯು ಸ್ತ್ರೀಯರಿಗೆ ಅಂಟಿಕೊಂಡು ಬಂದಿರುವಂತದ್ದು. ಈ ಭಾವನೆಗೆ ಪುರುಷನ ಸಹಕಾರ ಇರುತ್ತದೆ. ಪುರುಷನು ಬದುಕಿನ ಹೊರೆಯನ್ನು ಅಥವಾ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ಸ್ತ್ರೀಯ ಸಹಾಯ, ಸಹಕಾರ ಬೇಕೆಬೇಕು. ಆದುದರಿಂದ ಸ್ತ್ರೀ-ಪುರುಷರಿಬ್ಬರೂ ತಮಗೆ ಅನುಕೂಲವಾದ ನಿಯೋಜಿತ ಕಾರ್ಯಗಳನ್ನು ಮಾಡುವ ಮೂಲಕ ಕುಟುಂಬವನ್ನು ಸಂರಕ್ಷಿಸಿಕೊಂಡು ಹೋಗುತ್ತಾರೆ. ಇಂತಹ ಕುಟುಂಬಕ್ಕೆ ಬುನಾದಿಯೆ ವಿವಾಹವಾಗಿದೆ. ಇದು ಕೇವಲ ಮಿಲನಕ್ಕಾಗಿ ಏರ್ಪಡದೆ ಸ್ವಚ್ಛಂದದ ಬದುಕಿಗಾಗಿ ಮತ್ತು ಸಮುದಾಯದ ಒಳಿತಿಗಾಗಿ, ವಂಶೋದ್ಧಾರಕ್ಕಾಗಿ, ಆರ್ಥಿಕ ಚಟುವಟಿಕೆಗಳಿಗಾಗಿ ಬಂಧಿಸಲ್ಪಟ್ಟಿರುತ್ತದೆ.

ಸ್ತ್ರೀ-ಪುರುಷರಿಬ್ಬರ ಸಂಬಂಧಗಳು ಕುಟುಂಬದಲ್ಲಿ ಮುಖ್ಯವಾಗಿರುತ್ತವೆ. ಈ ವ್ಯವಸ್ಥೆಯಲ್ಲಿ ಅಲೆಮಾರಿಗಳು ತಮ್ಮದೆ ಆದ ಪ್ರತ್ಯೇಕ ಆಂತರ್ಯ ವಿಧಾನವನ್ನು ಅಳವಡಿಸಿಕೊಂಡು ತಮ್ಮ ಉಪಜೀವನದ ಹಾದಿಯ ಒಂದಿಲ್ಲೊಂದು ಕಾರ್ಯಗಳಲ್ಲಿ ಗಂಡುಹೆಣ್ಣು ಎಂಬ ಭೇದವಿಲ್ಲದೆ, ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ನೆಲೆನಿಂತ ಸಮುದಾಯಗಳಲ್ಲಿ ಮನೆಯ ಒಳಗಿನ ಕೆಲಸಗಳೆಲ್ಲ ಸ್ತ್ರೀಯರದ್ದೆ ಆಗಿರುತ್ತದೆ. ಅದರಲ್ಲೂ ಶ್ರೀಮಂತ ಸ್ತ್ರೀಯರಂತೂ ಹೊರಗಡೆ ಬಂದು ದುಡಿಯುವುದು ಕೀಳೆಂದು ಭಾವಿಸುತ್ತಾರೆ. ಹಾಗಾಗಿ ಇವರ ಕಾರ್ಯಕ್ಷೇತ್ರ ಮನೆ ಮತ್ತು ಮಕ್ಕಳ ಲಾಲನೆ-ಪಾಲನೆ, ಅಡುಗೆ ತಯಾರಿಕೆ, ಪುರುಷರ ನಿರ್ದೇಶನದಂತೆ ನಡೆದುಕೊಳ್ಳುವುದು. ಪರಿಸ್ಥಿತಿ ವಿಕೋಪಕ್ಕೆ ತಿರುಗಿದಾಗ ಕುಟುಂಬದ ಕಾರ್ಯಕಲಾಪಗಳು ಸ್ಥಗಿತಗೊಂಡು ಕುಟುಂಬವು ವಿಘಟನೆ ಹಂತದಲ್ಲಿ ಬಂದು ನಿಲ್ಲುವುದು.

ಅಲೆಮಾರಿ ಸಮುದಾಯವು ಕೌಟುಂಬಿಕ ವ್ಯವಸ್ಥೆಯ ದುಡಿಮೆಯಲ್ಲಿ ಸಮಾನತೆ, ಸಮಾನ ಶ್ರಮವಹಿಸುವಿಕೆ, ಸಮಾನ ಅನುಭೋಗ ವ್ಯವಸ್ಥೆ ಇರುವುದರಿಂದ ಮೇಲಿನ ಸ್ಥಿತಿಬರಲಾರದು. ಇಂತಹ ವ್ಯವಸ್ಥೆ ಕಂಡಾಗ ಪ್ರಾಚೀನಕಾಲದ ಸಾಂಘಿಕ ಪದ್ಧತಿ ಮರುಕಳಿಸುತ್ತದೆ. ಅಂದಿನ ಜೀವನ ಪದ್ಧತಿಯು ಸಾಂಘಿಕವಾಗಿಯೆ ಇದ್ದು ಸಮಾನ ಶ್ರಮವಿಭಜನೆಯಿದ್ದು ಬದುಕು ಸಾಗಿಸಲಿಕ್ಕೆ ಎಷ್ಟು ಬೇಕೊ ಅಷ್ಟೆ ಸಂಪಾದನೆ ಮಾಡುತ್ತಿದ್ದರು. ಅಗತ್ಯಕ್ಕಿಂತ ಹೆಚ್ಚಿನದನ್ನು ಸಂಪಾದಿಸುತ್ತಿರಲಿಲ್ಲ. ಇಂತಲ್ಲಿ ಯಾವುದೆ ತರಹದ ಯಜಮಾನಿಕಯಿರುವುದಿಲ್ಲ. ಹೆಂಗಸರು ಗಂಡಸರು ಮಾಡುವ ಕೆಲಸಗಳಲ್ಲಿ ವ್ಯತ್ಯಾಸವಿತ್ತೇ ವಿನಹ ಅಧಿಕಾರರದ ದರ್ಪಗಳಿರಲಿಲ್ಲ. ಗಂಡಸರು ಬೇಟೆ ಮತ್ತು ಇತರೆ ಕಾರ್ಯದಲ್ಲಿ ನಿರತರಾದರೆ ಹೆಂಗಸರು ಅಡುಗೆ ಮತ್ತು ಪಶುಸಂಗೋಪನೆಯಲ್ಲಿ ತೊಡಗಿರುತ್ತಿದ್ದರು. ಇಲ್ಲಿ ಸ್ತ್ರೀ-ಪುರುಷರಿಬ್ಬರ ಶ್ರಮವೂ ಸಾಮೂಹಿಕವಾಗಿಯೆ ಜರುಗುತ್ತಿದ್ದವು. ಹೆಣ್ಣನ್ನು ಸಂತಾನೋತ್ಪತ್ತಿ ಮೂಲವೆಂದು ತಿಳಿದರೂ ಅದು ಆಕೆಯ ಜೈವಿಕ ಕ್ರಿಯೆಯೆಂದು ತಿಳಿದಿದ್ದರು. ಅಲ್ಲಿನ ಸಂಪತ್ತು ಸ್ತ್ರೀ-ಪುರುಷರಿಬ್ಬರಿಗೂ ಸೇರಿತ್ತು.

ಹೆಣ್ಣು ಕೇವಲ ಬೋಗದ ವಸ್ತುವಾಗಿರಲಿಲ್ಲ. ಸಾಮೂಹಿಕ ಶ್ರಮ, ಸಾಮೂಹಿಕ ಅನುಭೋಗ ಅಂದಿನ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿತ್ತು. ಇಂದಿಗೂ ಅಲೆಮಾರಿ ಸಮುದಾಯಗಳೂ ಸಮಾನತೆಯನ್ನು ಜೀವಂತವಾಗಿಟ್ಟುಕೊಂಡಿರುವುದನ್ನು ಕಾಣಬಹುದು. ಮೇಲ್ನೋಟಕ್ಕೆ ಕುಟುಂಬದಲ್ಲಿ ಪುರುಷನ ಯಜಮಾನಿಕೆ ಗುರುತಿಸಿದರೂ ಇದರ ಹಿಂದೆ ಹೆಂಡತಿಯ ಪ್ರಭಾವವನ್ನು ತಳ್ಳಿ ಹಾಕುವಂತಿಲ್ಲ. ಪ್ರತಿಯೊಂದು ಕೆಲಸ ಕಾರ್ಯಗಳನ್ನು ನಿರ್ವಹಿಸುವಾಗಲೂ ಪುರುಷರು ಸ್ತ್ರೀಯರ ಸಲಹೆ ಕೇಳುತ್ತಾರೆ. ಮಹಿಳಾ ವಾದಿಗಳ ಪ್ರಶ್ನೆ ಎಂದರೆ ಅಲೆಮಾರಿ ಕುಟುಂಬದಲ್ಲಿ ಸ್ತ್ರೀಯು ಗರ್ಭಿಣಿಯಾಗಿರುವಾಗ ಭಿಕ್ಷೆ ಬೇಡುತ್ತಾಳೆ, ಹೆರಿಗೆಯಾದ ಸ್ವಲ್ಪ ಸಮಯಗಳಲ್ಲಿ ಭಿಕ್ಷೆಗೆ ಹೋಗುತ್ತಾಳೆಂದು ಹಾಗೂ ಪಂಚಾಯಿತಿ, ನ್ಯಾಯ ಕಟ್ಟೆಯಲ್ಲಿ ಸ್ತ್ರೀಯರಿಗೆ ಆದ್ಯತೆ ಇಲ್ಲವೆಂದು. ಇಂತಹ ಪ್ರಶ್ನೆಗೆ ಅಲೆಮಾರಿ ಸ್ತ್ರೀಯರನ್ನು ಕೇಳಿದಾಗ ಹೇಳುವುದೇನೆಂದರೆ "ಹಿಂದಿನಿಂದಲೂ ರೂಢಿಗತವಾಗಿಬಂದ ಪದ್ಧತಿಯಾಗಿದ್ದು ಹೆರಿಗೆಯಾದ ಸ್ವಲ್ಪ ದಿನಗಳಲ್ಲಿ ನಾವೆ ಭಿಕ್ಷೆಬೇಡಲು ಹೋಗುತ್ತೇವೆ. ಪುರುಷರು ಒತ್ತಾಯ ಮಾಡುವುದಿಲ್ಲ. ಕೂಸಿನ ನೆಪದಿಂದ ಜಾಸ್ತಿ ಭಿಕ್ಷೆ ಸಿಗುತ್ತದೆ ಎಂಬ ಉದ್ದೇಶಕ್ಕಾಗಿ ನಾವೆ ಹೊರಡುತ್ತೇವೆ. ಗರ್ಭಿಣಿಯಿರುವಾಗ ನಾವು ಭಿಕ್ಷೆಗೆ ಹೋಗಲು ಕಾರಣ, ನಮ್ಮ ನರಗಳು ಸಡಿಲಗೊಂಡು ಹೆರಿಗೆಗೆ ಯಾವುದೆ ತೊಂದರೆಯಾಗುವುದಿಲ್ಲ. ಆದುದರಿಂದ ನಾವೇ ಬಿಡಾರದಿಂದ ಹೊರಗೆ ಬರುತ್ತೇವೆ" ಎಂದು ಹೇಳುತ್ತಾರೆ. "ನಮ್ಮಲ್ಲಿ ಮೇಲು-ಕೀಳೆಂಬ ಪ್ರಶ್ನೆ ಮೂಡುವುದಿಲ್ಲ ಕಾರಣ ನಾವು ಭಿಕ್ಷೆಗೆ ಹೋದರೆ ನಮ್ಮ ಪುರುಷರು ಬೇರೆ ವೃತ್ತಿಯಲ್ಲಿ ತೊಡಗಿರುತ್ತಾರೆ. ನಾವೊಂದು ವೃತ್ತಿ ಕೈಗೊಂಡರೆ, ಅವರೊಂದು ವೃತ್ತಿಯನ್ನು ಕೈಗೊಳ್ಳುತ್ತಾರೆ. ಇದರಲ್ಲಿ ತಾರತಮ್ಯ ಏಕೆ ತಾರತಮ್ಯತೆಯಿದೆ ಎಂದಾದರೆ ಅದು ನಿಮ್ಮ ಗ್ರಹಿಕೆ ಎನ್ನುತ್ತಾರೆ."[33] ಹೇಗೆ ಒಂದು ಎತ್ತಿನ ಬಂಡಿಗೆ ಎರಡು ಚಕ್ರಗಳ ಅವಶ್ಯಕತೆ ಮತ್ತು ಸಮಾನ ಸಹಕಾರವಿದೆಯೊ ಕುಟುಂಬದ ಪಾಲನೆಗೂ ಗಂಡ-ಹೆಂಡತಿ ಎಂಬ ಚಕ್ರಗಳು ಉರುಳುತ್ತವೆ. ಇಬ್ಬರ ನಡುವೆ ಪ್ರೀತಿ, ಸಹಬಾಳ್ವೆ, ಸಹಕಾರ, ದಯೆ ಹೊರತು ವೈಮನಸ್ಸು ತಾರತಮ್ಯತೆ ಇಲ್ಲ. ಒಂದು ಕೆಲಸದಲ್ಲಿ ಸ್ತ್ರೀಯರ ಪಾತ್ರ ಎಷ್ಟು ಮುಖ್ಯವೊ ಪುರುಷರ ಪಾತ್ರವು ಅಷ್ಟೆ ಮುಖ್ಯವಾಗಿದೆ.

ಮನೆಯ ಯಜಮಾನಿಕೆಯಲ್ಲಿ ಪುರುಷ ಹೇಳಿದಂತೆ ಎಲ್ಲರೂ ಕೇಳಬೇಕು, ನಾನು ಮಾಡಿದ್ದೆ ಕಾನೂನು, ಹೇಳಿದ್ದೆ ವೇದವಾಕ್ಯ ಎಂದು ಕುಟುಂಬದಲ್ಲಿ ಯಾವ ಸದಸ್ಯನು ಹೇಳಲಾರರು. ಶ್ರಮವಿಭಜನೆಗೆ ತಕ್ಕಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಉಳಿದಂತೆ ಸಂಬಂಧಗಳಲ್ಲಿ ಕುಡಿದು ಜಗಳ ಕಾಯುತ್ತಾರೆಂದು ಕಂಡುಬಂದರು, ಅದು ಕೇವಲ ೧೦-೧೫ ನಿಮಿಷಗಳಲ್ಲಿ ಹೊಂದಾಣಿಕೆಯಾಗುತ್ತಾರೆ. ತುಂಬಾ ಸೂಕ್ಷ್ಮವಾಗಿ ಗಮನಿಸಿದಾಗ ಕುಟುಂಬದ ಜವಬ್ದಾರಿಯು ಸ್ತ್ರೀಯ ಮೇಲೆಯೆ ನಿಂತಿರುವುದು ಕಂಡುಬರುತ್ತದೆ. ಇಲ್ಲಿ ಗಂಡಸರು ಕೇವಲ ನಾಮ ಮಾತ್ರ ಯಜಮಾನ. ಸ್ತ್ರೀಯರು ಯಾರು? ಯಾರಿಗೆ? ಹೇಗೆ ಗೌರವ ಕೊಡಬೇಕು? ಹೇಗೆ ನಡೆದುಕೊಳ್ಳಬೇಕು? ಯಾರ ಸಂಬಂಧಗಳು ಹೇಗಿರುತ್ತವೆ? ಎಂದು ತಿಳಿಸುತ್ತಾರೆ. ಇಬ್ಬರು ಸೇರಿ ಕಿರಿಯ ಸದಸ್ಯರ ಮೇಲೆ ಪ್ರಭಾವ ಬೀರುವರು ಒಟ್ಟಾರೆ ಅಲೆಮಾರಿಗಳ ಕುಟುಂಬದಲ್ಲಿ ಕಂಡುಬರುವ ಸಂಬಂಧಗಳ ದೃಷ್ಟಿಕೋನ ಎಂದರೆ ಸಮಾನತೆ ಮತ್ತು ಸ್ವತಂತ್ರವಾದುದಾಗಿದೆ.

ಕುಟುಂಬದಲ್ಲಿ ಲಿಂಗಸಂಬಂಧಗಳ ಸಹಕಾರ

ಸಮುದಾಯ	ಪುರುಷ	ಸ್ತ್ರೀ
ಅಧ್ಯನದಲ್ಲಿ ಬರುವ ಎಲ್ಲಾ	ಬಿಡಾರ ನಿರ್ಮಾಣ	ಬಿಡಾರ ನಿರ್ಮಾಣದ ಕಾರ್ಯದಲ್ಲಿ ಸಹಾಯಕರಾಗುವುದು.
ಅಲೆಮಾರಿಗಳು	ಬಿಡಾರ ಸಂರಕ್ಷಣೆ	ಬಿಡಾರ ಶುಚಿತ್ವ
	ಮಕ್ಕಳ ಚಲನವಲನಗಳಲ್ಲಿ ಭಾಗಿ ಮತ್ತು ಪೋಷಣೆ	ಸಂಪೂರ್ಣ ಮಕ್ಕಳ ಪೋಷಣೆ
	ವೃತ್ತಿಯಿಂದ ದಾನ್ಯಗಳ ಸಂಗ್ರಹಣೆ	ಸಂಗ್ರಹ ಮತ್ತು ದಾನ್ಯಗಳನ್ನು ಸ್ವಚ್ಛಮಾಡುವುದು.
	ಬೇಟೆಗಾರಿಕೆ ಮಾಡುವುದು ಮತ್ತು ಇದರ ಪರಿಕರ ಸಂಗ್ರಹ	ಬೇಟೆಯಿಂದ ತಂದ ಮಾಂಸವನ್ನು ಭಾಗ ಮಾಡಿ ಶುಚಿಗೊಳಿಸಿ ಬೇಯಿಸುವುದು.
	ಅಂಗವಿಕಲ ಮತ್ತು ವೃದ್ಧರಿಗೆ ಆಸರೆಯಾಗುವುದು (ಗಿಡಮೂಲಿಕೆ ಔಷಧಿಗಳನ್ನು ತಂದುಕೊಡುವುದು)	ಅಂಗವಿಕಲ ಹಾಗೂ ವೃದ್ಧರ ಸಂಪೂರ್ಣ ಪೋಷಣೆಯ ಜವಬ್ದಾರಿ.
	ಪರಸ್ಪರ ಸುಖ-ದುಃಖಗಳಲ್ಲಿ ಭಾಗಿ ನೆಂಟರ ಯೋಗಕ್ಷೇಮ ನೋಡುವುದು (ಕುಡಿಸುವುದು - ತಿನ್ನಿಸುವುದು)	ಪರಸ್ಪರ ಸುಖ-ದುಃಖಗಳಲ್ಲಿ ಭಾಗಿ ನೆಂಟರ ಯೋಗಕ್ಷೇಮದಲ್ಲಿ ತಲ್ಲೀನ ಊಟೋಪಚಾರವನ್ನು ಮಾಡುವುದು.
	ಭಿಕ್ಷೆ ಪರಿಕರ ಮತ್ತು ಕರಕುಶಲ ತಯಾರಿಕೆಯಲ್ಲಿ ತೊಡಗುವುದು	ಭಿಕ್ಷೆ ಪರಿಕರ ಮತ್ತು ಕರಕುಶಲತೆಯ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುವಿಕೆ
	ಮಕ್ಕಳಿಗೆ ವೃತ್ತಿ ತರಬೇತಿ ನೀಡುವುದು (ಹಾಡು, ನೃತ್ಯಾ, ಸಾಹಸ, ವಾದ್ಯಗಳು ನುಡಿಸುವಿಕೆ, ಸಂಭಾಷಣೆ ಇತರೆ)	ಪ್ರೋತ್ಸಾಹಿಸುವುದು, ತಪ್ಪನ್ನು ತಿದ್ದುವುದು
	ಸಂಸ್ಕಾರಗಳಲ್ಲಿ ಭಾಗಿಯಾಗುವುದು	ಸಂಸ್ಕಾರಗಳಲ್ಲಿ ಭಾಗಿಯಾಗುವುದು.

೨. ಧಾರ್ಮಿಕ ಭಿಕ್ಷಾವೃತ್ತಿ

ಅಲೆಮಾರಿ ಸಮುದಾಯಗಳ ಭಾವನೆಯಲ್ಲಿ ಸಮಸ್ತ ಚಟುವಟಿಕೆಗಳಿಗೆ ಅತಿಮುಖ್ಯ ಶಕ್ತಿ ಎಂದರೆ ದೈವಿಶಕ್ತಿ. ದೈವಿಶಕ್ತಿಯೊಂದಿಗೆ ತಮ್ಮ ಬದುಕನ್ನು ಬೆಸೆದುಕೊಂಡಿದ್ದಾರೆ. ದೈವಿಶಕ್ತಿಯು ಮಾನಸಿಕ ಸ್ವಾಸ್ಥ ಮತ್ತು ನೆಮ್ಮದಿಯನ್ನು ಕೊಡುವುದು. ದೈವಿಶಕ್ತಿ ಮಾನವಶಕ್ತಿಗಿಂತ ಅಗಾಧ ಶಕ್ತಿ ಎಂತಲೂ ಇದು ಕಣ್ಣಿಗೆ ಕಾಣದೆಯೆ ಕೆಲಸ ಮಾಡುತ್ತದೆಂದು ನಂಬಲಾಗಿದೆ. ಇದರ ಪ್ರಯೋಜನ ಪಡೆಯಲು ಮುಂದಾಗಿ ದೈವೀಶಕ್ತಿ ಸಂತೋಷಪಡಿಸಲು ಜಪ, ತಪ, ಹರಕೆ, ಬಲಿ, ಧಾನಗಳು ಇತ್ಯಾದಿಗಳನ್ನು

ಮಾಡಿಕೊಂಡು ಬರಲಾಗಿದೆ. ಬಹುನಿಷ್ಠೆಯಿಂದ ನಡೆದುಕೊಂಡು ಮತ್ತು ಅಪಮಾನವಾಗದಂತೆ ವ್ಯವಸ್ಥಿತ ವಾಗಿ ಆರಾಧನೆ ಮಾಡಿಕೊಂಡು ಬಂದಿದ್ದಾರೆ. ದೈವಿಶಕ್ತಿಯಿಂದ ಅನೇಕ ಸಮುದಾಯಗಳು ಬದುಕನ್ನು ಕಂಡುಕೊಳ್ಳುತ್ತಲಿವೆ. ಬದುಕು ಕಂಡುಕೊಂಡ ಸಮುದಾಯಗಳಲ್ಲಿ ಗೌರವ ಮತ್ತು ಅಂತಸ್ತುಗಳನ್ನು ಕೆಲವರು ಗುರುತಿಸಿಕೊಂಡರೆ ಇದೆ ವೃತ್ತಿಯನ್ನು ಅವಲಂಬಿಸಿದ ಕೆಲವು ಸಮುದಾಯಗಳು ಕಳಪೆಮಟ್ಟದ ಜೀವನಸಾಗಿಸಿ ನಿಕೃಷ್ಟವಾಗಿ ಬಾಳುತ್ತಿವೆ.

ಧಾರ್ಮಿಕ ವೃತ್ತಿಯು ಒಂದೊಂದು ಸಮುದಾಯಕ್ಕೆ ಅಂತಸ್ತನ್ನು ಹೆಚ್ಚಿಸಿಕೊಡುವ ಉದ್ಯೋಗವಾಗಿದೆ ಮತ್ತು ಅಂತವರನ್ನು ಬುದ್ಧಿಜೀವಿಗಳೆಂದು ದೇವರ ಸ್ವರೂಪಿ ಎಂದು, ಅವರು ಇತರರನ್ನು ಸ್ಪರ್ಷಿಸಿದರೆ ಜೀವನ ಪಾವನವಾಗುತ್ತದೆಂದು ನಂಬಲಾಗಿದೆ. ಇಂತಹ ಗೌರವದ ಅಂತಸ್ತಿನ ವೃತ್ತಿಗಳನ್ನು ಕೈಗೊಳ್ಳುವ ಸಮುದಾಯವು ಸಾಮಾನ್ಯವಾಗಿ ಜಾತಿಶ್ರೇಣೀಕರಣದ ಮೇಲ್ಪಂಕ್ತಿಯಲ್ಲಿವೆ. ಈ ಸಮುದಾಯಗಳು ಸಮ್ಮೇಳನ ಸಂಘಟನೆ, ಉಪನ್ಯಾಸ, ಅಭಿವೃದ್ಧಿ ಇತ್ಯಾದಿಯಾಗಿ ನಿರ್ವಹಿಸುತ್ತಾರೆ. ಇದರ ಪ್ರತಿಯಾಗಿ ಅಪಾರವಾದ ಹಣವನ್ನು ಕಾಣಿಕೆ ರೂಪದಲ್ಲಿ ಪಡೆಯುತ್ತಾರೆ. ಇಂತಹ ಧಾರ್ಮಿಕ ವೃತ್ತಿಯು ಇತ್ತೀಚೆಗಷ್ಟೆ ಕಾಣಬರುವುದಿಲ್ಲ. ಮಾನವನಷ್ಟೆ ಪುರಾತನ ಇತಿಹಾಸವಿದೆ. ಅಂದು ಧಾನ ಕೊಟ್ಟವರನ್ನು ಅತಿ ಗೌರವದಿಂದ ಕಾಣಲಾಗುತ್ತಿತ್ತು. ಅಂದಿನ ರಾಜಮಹಾರಾಜರೂ ದೇವಾಲಯಗಳಿಗೆ, ಮಠಗಳಿಗೆ ಹೇರಳವಾದ ಧಾನದತ್ತಿ ಗಳನ್ನು ಕೊಡುತ್ತಿದ್ದರು. ಅದರ ನೆನಪಿಗಾಗಿ ಶಾಸನವನ್ನು ಬರೆಸುತ್ತಿದ್ದರು. ರಾಜರುಗಳಿಗೆ ಬಿರುದುಗಳನ್ನು ಕೊಟ್ಟು ಸನ್ಮಾನಿಸುತ್ತಿದ್ದರು. ಉದಾ: ಕೆಲವೊಂದು ಉದಾರಿ ದೈವಭಕ್ತರು ಇಡಿಯ ಸರ್ವಸ್ವವನ್ನೆ ದಾನವಾಗಿ ಕೊಟ್ಟಿರುವುದನ್ನು ಚರಿತ್ರೆಯಲ್ಲಿ ತಿಳಿಯಬಹುದು. ಮಹಾಭಾರತದ ಪ್ರಸಂಗದಲ್ಲಿ ಕರ್ಣನು ಕೇಳಿದವರಿಗೆಲ್ಲ ದಾನಮಾಡಿ ದಾನಶೂರ ಕರ್ಣನೆಂಬ ಬಿರುದಿನೊಂದಿಗೆ ಖ್ಯಾತಿಯಾಗಿದ್ದಾನೆ. ಹೀಗೆ ಧಾರ್ಮಿಕ ವೃತ್ತಿ ಮತ್ತು ದಾನಪ್ರವೃತ್ತಿ ತನ್ನದೆ ಆದ ಶ್ರೇಷ್ಠ ಸ್ಥಾನಮಾನಗಳನ್ನು ಉಳಿಸಿಕೊಂಡಿದೆ. ಇದೆ ಧಾರ್ಮಿಕ ವೃತ್ತಿಯನ್ನು ಕೈಗೊಂಡು ಒಂದೊತ್ತಿನ ಊಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ದೇವರನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ದೈವಿ ಸ್ವರೂಪವನ್ನು ಬಿತ್ತರಿಸುವ ಸಮುದಾಗಳು ನಮ್ಮಲ್ಲಿವೆ. ಈ ಸಮುದಾಯಗಳೆ ಅಲೆಮಾರಿಗಳು.

ಹಿಂದೆ ರಾಜ ಮಹಾರಾಜರು ಕಟ್ಟಿಸಿದ ಕೋಟೆಗಳಿಗೆ ರಕ್ಷಣೆ ಒದಗಿಸಲು ದೇವತೆ ಬೇಕಾಯಿತು. ದೇವತೆಯ ಆರಾಧಾನೆ ಮಾಡಲು ಒಂದು ಸಮುದಾಯವನ್ನು ನೇಮಕ ಮಾಡಲಾಯಿತು. ಆ ಸಮುದಾಯ ದೇವಿಯ ಆರಾಧಾನೆ ಮಾಡುತ್ತಾ, ಗುಣಗಾನಮಾಡುತ್ತ ಇರುತ್ತಿದ್ದರು. ಇದರ ಪ್ರತಿಫಲವಾಗಿ ಜನರಿಂದ ದವಸದಾನ್ಯದ ರೂಪದಲ್ಲಿ ಆಹಾರ ದೊರೆಯುತ್ತಿತ್ತು. ಇದರಿಂದ ಆ ಸಮುದಾಯ ಬದುಕನ್ನು ನಡೆಸುತಿತ್ತು. ಕಾಲಗತಿ ಬದಲಾದಂತೆ ರಾಜರ ಆಡಳಿತ ಕೊನೆಗೊಂಡ ಮೇಲೆ ಬದುಕು ಅತಂತ್ರವಾಗಿ ನಂಬಿದ ದೇವರನ್ನೆ ನಂಬಿಕೊಂಡು ಬದುಕಿಗಾಗಿ ಪರಿತಪಿಸುತ್ತಾ, ಬೀದಿಯಲ್ಲಿ ದೇವರನ್ನು ಇರಿಸಿ ಗುಣಗಾನ ಮಾಡುತ್ತಾ, ವೇಷಗಳನ್ನು ಹಾಕಿ, ನರ್ತಗಳನ್ನು ಮಾಡುತ್ತಾ ಸಮಾಜದ ಜನಸ್ತೋಮಕ್ಕೆ ಯಾವುದೆ ರೀತಿಯ ಕ್ಷಾಮಗಳು, ಬರಗಾಲಗಳು ಕಷ್ಟಗಳನ್ನು ನೀಡದಂತೆ ರಕ್ಷಿಸು. ಎಲ್ಲಾರು

ಕ್ಷೇಮವಾಗಿರುವಂತೆ ಕಾಪಾಡು ಎನ್ನುತ್ತಾ ದೇವರನ್ನು ಹೊತ್ತು ಊರು ಕೇರಿಗಳನ್ನು ತಿರುಗಾಡಿ, ಊರಿನ ಕ್ಷೇಮವನ್ನು ಕಾಯುವಂತೆ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಭಕ್ತರು ನೀಡುವ ಭಿಕ್ಷೆಯನ್ನು ದಾನವಾಗಿ ಪಡೆಯುತ್ತಾ, ಕಾಯಕವನ್ನು ಮುಂದುವರಿಸಿದರು. ಅಲೆಮಾರಿಗಳು ಈ ಉದ್ಯೋಗವನ್ನು ಬಂಡವಾಳವಿಲ್ಲದೆ, ಮಾಡಬಹುದಾಗಿ ಮತ್ತು ಇದರಿಂದ ಕುಟುಂಬ ಜೀವನಸಾಗಿಸುವಂತರಾಗಿರುವುದರಿಂದ ಇದೇ ಕಾಯಕವನ್ನು ತಮ್ಮ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡು ಬದುಕು ಕಳೆಯಲಾರಂಭಿಸಿದರು.

ಜಾತಿಶ್ರೇಣಿಕರಣದ ತುದಿಯ ಸಮುದಾಯ ಕೈಗೊಳ್ಳುವ ಧಾರ್ಮಿಕ ವೃತ್ತಿಗೂ ಅಲೆಮಾರಿ ಸಮುದಾಯದ ಧಾರ್ಮಿಕ ವೃತ್ತಿಗೂ ತುಂಬಾ ವ್ಯತ್ಯಾಸವಿದೆ. ಉದ್ದೇಶ ಒಂದೆ ಆದರು ಕ್ರಿಯೆಗಳೂ ಮಾತ್ರ ಬೇರೆ ಬೇರೆಯಾಗಿದ್ದು ಸ್ಥಾನಮಾನಗಳು ಬೇರೆ ಬೇರೆಯಾಗಿವೆ. ಈ ಸಮುದಾಯದವರು ಸಿಂಧೋಳ್ಳು ಪೋತರಾಜನ ವೇಷಧರಿಸಿಕೊಂಡು ಚಾಟಿಯಿಂದ ಮೈಮೇಲೆ ರಕ್ತಬರುವಂತೆ ಹೊಡೆದುಕೊಂಡು ಭಿಕ್ಷೆ ಬೇಡುತ್ತಾರೆ. ಈ ಧಾರ್ಮಿಕ ಭಿಕ್ಷಾವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಅಲೆಮಾರಿ ಸಮುದಾಯಗಳು ಸ್ತ್ರೀಯರಿಗೆ ಮತ್ತು ಪುರುಷರಿಗೆ ಯಾವ ರೀತಿಯ ಸ್ಥಾನಮಾನಗಳಿವೆ, ಮತ್ತು ಸ್ತ್ರೀ-ಪುರುಷರ ಸಂಬಂಧ ಕಾಯಕದಲ್ಲಿ ಹೇಗಿದೆ? ಎಂಬುದನ್ನು ಕೆಳಗೆ ನೋಡಬಹುದು.

ಧಾರ್ಮಿಕ ಭಿಕ್ಷೆಯಲ್ಲಿ ಲಿಂಗಸಂಬಂಧ

ಸಮುದಾಯ	ಕಸುಬು	ಪುರುಷ	ಮಹಿಳೆ
ಸಿಂಧೋಳ್ಳು	ದೇವಿಗುಣಗಾನ	ಪೋತುರಾಜನ ವೇಷಧರಿಸಿ ಕೊಂಡು ಚಾಟಿಯಿಂದ ಮೈ ಮೇಲೆ ಹೊಡೆದುಕೊಳ್ಳುವನು ಹಾಗೂ ಕೂಗುತ್ತ ನರ್ತಿಸುವನು	ತಲೆಯ ಮೇಲೆ ದೇವರ ಬುಟ್ಟಿ ಹೊತ್ತುಕೊಂಡು ಹೆಗಲಿಗೆ ಹಾಕಿದ ಬುರಬುರ ವಾದ್ಯದಿಂದ ಬಾಲು ಬೇಲು..... ತಂದಾನೆ... ತಂದಾನೆ..... ಬಾಲು ಬೇಲು...... ಬಾರಿಸುವಳು.
		ವಾದ್ಯಕ್ಕೆ ತಕ್ಕಂತೆ ಕುಣಿಯುತ್ತಾನೆ.	ಬಾರಿಸುತ್ತಲೆ ದೇವಿ ಗುಣಗಾನ ಮಾಡುತ್ತಾಳೆ.
		ದೇವಿಯ ಆಭರಣಗಳ ಪರಿಚಯು ಮತ್ತು ಕೊಂಡಾಡುವಿಕೆ.	ಸಂಭಾಷಣೆಗೆ ತಕ್ಕ ಸಂಭಾಷಣೆ ಮತ್ತು ಬಾರಿಸುವಿಕೆ
		ಮೊರದಲ್ಲಿ ಭಿಕ್ಷೆ ಹಾಕುವಂತೆ ಒತ್ತಾಯಿಸುತ್ತಾನೆ.	ದೇವಿಯ ಬುಟ್ಟಿ ಇಲ್ಲವೆ ಜೋಳಿಗೆಯಲ್ಲಿ ದವಸ ಹಾಕಿಸಿಕೊಳ್ಳುತ್ತಾಳೆ.

ಹೀಗೆ ಈ ಸಮುದಾಯದ ಸ್ತ್ರೀ-ಪುರುಷರಿಬ್ಬರು ಕೂಡಿಕೊಂಡು ಭಿಕ್ಷಾವೃತ್ತಿಯನ್ನು ಮಾಡುತ್ತಾರೆ. ಅಂದಿನ ಅನ್ನವನ್ನು ಅಂದೆ ಸಂಪಾದಿಸುವರು. ಸಂಪಾದನೆಯಲ್ಲಿ ಇಬ್ಬರ ಪಾತ್ರವು ಅವಶ್ಯಕವಿದೆ. ವೃತ್ತಿಗೆ ಇಬ್ಬರ ಅನಿವಾರ್ಯತೆಯು ಇದೆ. ಒಮ್ಮೊಮ್ಮೆ ಬಿಡಾರದಲ್ಲಿ ಕ್ಷುಲಕ ಕಾರಣದಿಂದ ಜಗಳವಾಡಿ ಮಾತು ಬಿಟ್ಟಾಗ ಆ ಸಂದರ್ಭದಲ್ಲಿ ಮೌನ ಆವರಿಸಿದರು. ಪಾತ್ರ ನಿರ್ವಹಣೆ ಸಂದರ್ಭದಲ್ಲಿ ಒಂದಾಗುತ್ತಾರೆ. ಎಂದಿನಂತೆಯೆ ಸಂಬಂಧಗಳು ಮುಂದುವರಿಯುತ್ತವೆ. ಆ ಕ್ಷಣದಲ್ಲಿ ಬಾಹ್ಯವಾಗಿ ಅವರ ಹೊಂದಾಣಿಕೆಯನ್ನು ಕಾಣದಿದ್ದರೂ, ಅಂತರಂಗದಲ್ಲಿ ಒಂದಾಗಿರುತ್ತಾರೆ. ಇದನ್ನು ಆ ಸಮುದಾಯದ ಸದಸ್ಯರೆ ಹೇಳುತ್ತಾರೆ."[34]

೩. ಪ್ರದರ್ಶನ ಕಲೆಯಲ್ಲಿ ಲಿಂಗಸಂಬಂಧ

ನಿಯಮ ಕಟ್ಟಳೆಗಳಿಲ್ಲದೆ, ಜಾತಿಭೇದವಿಲ್ಲದೆ, ಬಡವಬಲ್ಲಿದವನೆಂಬ ಭೇದಭಾವವಿಲ್ಲದೆ, ತಮ್ಮ ಬದುಕಿನ ಒಂದು ಅಂಗವಾಗಿ ಬೆರೆತುಹೋಗಿರುವ ಪ್ರದರ್ಶನ ಕಲೆಗಳೂ ಅಲೆಮಾರಿ ಸಮುದಾಯದ ಆರ್ಥಿಕ ಸಾಮಾಜಿಕ ರಕ್ಷಕವಚವೂ ಆಗಿದೆ. ಇಂತಹ ಪ್ರದರ್ಶನಕಲೆಯಿಂದ ಆ ಸಮುದಾಯ ಹಿಟ್ಟನ್ನು ಕಾಣಬೇಕಿದೆ. ಪ್ರದರ್ಶನ ಕಲೆಂಗುಲ್ಲಿ ವೈವಿಧ್ಯತೆ ಕಾಣಬಹುದು. ಗೌರವ, ಹೇರಳವಾದ ಸಂಭಾವನೆ ಪಡೆದುಕೊಂಡು ವಿಶೇಷವಾದ ರಂಗಸಜ್ಜಿಕ್ಕೆ, ಕಲಾಪರಿಕರ, ತಂತ್ರಜ್ಞಾನ, ಉತ್ತಮ ನಿರ್ದೇಶನ, ವಿಶೇಷ ರೀತಿಯ ವೇಷ-ಭೂಷಣ, ಧ್ವನಿವರ್ಧಕ ಉಪಕರಣಗಳೂ ಒಳಗೊಂಡು ಸುಮಾರು ದಿವಸಗಳ ಕಾಲ ತರಬೇತಿ ಪಡೆದು ಇಂತಿಷ್ಟೆ ಎಂಬ ಸಮಯವನ್ನು ಹೊಂದಿ ಹೀಗೆಯೆ ಅಭಿನಯಿಸಬೇಕೆಂದು ಷರತ್ತುಗಳನ್ನು ಮೈಗೂಡಿಸಿಕೊಂಡು ಪ್ರದರ್ಶಿಸಬೇಕೆಂಬುದು ಕೆಲವರ ಪ್ರವೃತ್ತಿಯಾಗಿದೆ. ಇಂತಲ್ಲಿ ಮನೋರಂಜನೆಯೆ ಕೇಂದ್ರಬಿಂದುವಾಗಿದೆ. ಆದರೆ ಹೊಟ್ಟೆಪಾಡಿನ ಕೇಂದ್ರಬಿಂದವಾಗಿರುವ ಅಲೆಮಾರಿಗಳ ಕಲಾಪ್ರದರ್ಶನಗಳು ಯಾವುದೆ ರೀತಿಯ ರಂಗಸಜ್ಜಿಕೆ, ಸಮಯ, ತಂತ್ರಜ್ಞಾನ, ತರಬೇತಿ, ಹೇರಳವಾದ ಹಣ ಸಂಪಾದನೆ, ಗೌರವಗಳಿಲ್ಲದೆಯೆ ಗಂಜಿಗಾಗಿಯೆ ಬೀದಿಬೀದಿಗಳಲ್ಲಿ ಇಲ್ಲವೆ ಮನೆಗಳ ಮುಂದೆ ನಿಂತು ದೃಶ್ಯಕ್ಕೆ ತಕ್ಕ ಉಡುಪನ್ನು ಧರಿಸಿ ತಮ್ಮ ಕಲೆಯನ್ನು ಲೀಲಾಜಾಲವಾಗಿ ಪ್ರದರ್ಶನ ನೀಡುವ ಅಲೆಮಾರಿಗಳ ಕಲೆಯು ಅದ್ಭುತವೆ ಸರಿ. ಇವರಿಗೆ ಅಕ್ಷರ ಜ್ಞಾನವಿಲ್ಲದಿದ್ದರೂ ಸಂಭಾಷಣೆಯನ್ನು ಸರಿಯಾಗಿ ಹೇಳುವರು. ಪ್ರದರ್ಶನ ಕಲೆಯಲ್ಲಿ ಅಲೆಮಾರಿ ಸ್ತ್ರೀಪುರುಷರ ಸಂಬಂಧಗಳು ಸಹಜತೆಯಿಂದ ಕೂಡಿವೆ.

ಪ್ರದರ್ಶನ ಕಲೆಯಲ್ಲಿ ಲಿಂಗಸಂಬಂಧ

ಸಮುದಾಯ	ಕಸುಬು	ಪುರುಷ	ಮಹಿಳೆ
ಡೊಂಬರು	ಕಸರತ್ತು ಪ್ರದರ್ಶನ	ಊರ ಪ್ರಮುಖನ ಪರವಾನಗಿ ಪಡೆದು ಪ್ರದರ್ಶನವಿದೆ ಎಂದು ತಿಳಿಸಲು ಡಂಗುರ ಇಲ್ಲವೆ ಧ್ವನಿ ವರ್ಧಕ ರಹಿತ ಮೈಕ್ ಹಿಡಿದು ಕೊಂಡು ಊರೆಲ್ಲಾ ತಿರುಗುವನು.	ಪ್ರದರ್ಶನ ನೀಡುವ ಸಲುವಾಗಿ ಪರಿಕರಗಳ ತಯಾರಿಕೆಯಲ್ಲಿ ತೊಡಗುವಳು.

ಗ್ರಾಮ ಮತ್ತು ಇಲ್ಲವೆ ಸ್ಥಳಿಯರಿಗೆ ಸಮುದಾಯದ ಪರಿಚಯ ಮಾಡಿ ಕೊಡುವುದು.	ಮಕ್ಕಳನ್ನು ಆಟನೀಡಲು ತಯಾರಿಸುವುದು.
ಆಟ ಪ್ರಾರಂಭಿಸಿ ಹಿಂದೆ ಮತ್ತು ಮುಂದಕ್ಕೆ ಲಾಗ ಹೊಡೆಯುವವನು	ಲಾಗಕ್ಕೆ ತಕ್ಕಂತೆ ಡೋಲು ಬಾರಿಸುವಳು.
ಡೋಲು ಹೊಡೆಯುವವನು	ಕಬ್ಬಿಣದ ಸಣ್ಣ ಬಳೆಯಲ್ಲಿ ದೇಹ ತೂರಿಸುವಳು.
ಸೈಕಲ್ ತುಳಿಯುವಿಕೆ, ನೇಗಿಲನ್ನು ಹಲ್ಲಿನಿಂದ ಎತ್ತುವುದು. ಟೈರಿಗೆ ಬೆಂಕಿಹಚ್ಚಿ ಮಧ್ಯದಲ್ಲಿ ತೂರುವುದು	ಪ್ರೇಕ್ಷಕರಿಗೆ ಭಂಗಿಯ ಸಾರ ಹೇಳುತ್ತಾ ಡೋಲು ಬಡಿಯುತ್ತಲೆ ಹುರಿದುಂಬಿಸುತ್ತಾಳೆ.
ಹಾಸ್ಯಚಟಾಕಿ ಜೊತೆಗೆ ಚಿತ್ರಗೀತೆಗಳಿಗೆ ನೃತ್ಯ, ನಾನಾ ಶೈಲಿ ಮತ್ತು ಅನುಕರಣೆ ಮಾಡುವುದು.	ಹಾಸ್ಯಚಟಾಕಿಗೆ ಸಹನಟಿಯಾಗಿರುವುದು, ನೃತ್ಯಗಳಲ್ಲಿ ಭಾಗಿಯಾಗುತ್ತಾಳೆ, ನಾಯಕನ ಜೊತೆ ನಾಯಕಿಯ ಪಾತ್ರದಲ್ಲಿ ಬಿಂಬಿಸುತ್ತಾಳೆ.
ಬಂಡಿಗಾಲಿ ತೊಡಿಸುವುದು, ಕಣ್ಣಿನಿಂದ ಸೂಜಿಯನ್ನು ತೆಗೆಯುವುದು ಕಲ್ಲನ್ನು ಹೊಡೆಯುವುದು	ಡೋಲು ಬಾರಿಸುತ್ತಾ ಜನರನ್ನು ಆಟದ ಕಡೆಗೆ ಸೆಳೆಯುತ್ತಿರುತ್ತಾಳೆ.
ಡೋಲು ಬಡಿಯುವುದು ಪ್ರೇಕ್ಷಕರಿಗೆ ಚಪ್ಪಾಳೆ ಹೊಡೆಯುವಂತೆ ಹೇಳುವುದು.	ಹಗ್ಗ ಅಥವಾ ತಂತಿಯ ಮೇಲೆ ಬೊಂಬುವಿನ ಆಸರೆಯಿಂದ ನಯವಾಗಿ ನಡೆಯುವುದು.
ಆಟ ಮುಕ್ತಾಯ ಹಂತದಲ್ಲಿರುವಾಗ ಹೆಚ್ಚು ಸಹಾಯ ಮಾಡಿ ಎಂದು ಜನರಲ್ಲಿ ವಿನಮ್ರತೆಯ ಮನವಿಯ ಮೂಲಕ ಬೇಡುವುದು.	ತಟ್ಟೆ ಹಿಡಿದು ಜನರ ಬಳಿ ಬಂದು ಹಣ ಪಡೆಯುವುದು.
ಹೆಚ್ಚು ಹಣ ಕೊಟ್ಟವರನ್ನು ಕೊಂಡಾಡುವುದು.	ಹೆಚ್ಚು ಹಣ ಕೊಟ್ಟವರ ಹೆಸರನ್ನು ಕೂಗಿ ಹೇಳುವುದು.
ಧನ್ಯವಾದಗಳನ್ನು ಹೇಳಿ ಆಟವನ್ನು ಮುಗಿಸುತ್ತಾನೆ.	ಇಬ್ಬರು ಪ್ರೇಕ್ಷಕರತ್ತ ಕೈ ಮುಗಿಯುವುದು.

ಬುಡ್ಗಜಂಗಮ್	ಬುರ್ರಕಥ	ಅಲಂಕಾರಿಕವಾಗಿ ಬಟ್ಟೆ ಧರಿಸಿ ಕೊಂಡು ಮಧ್ಯದಲ್ಲಿ ನಿಂತು ತಂಬೂರಿ ಹಿಡಿದುಕೊಂಡಿರುತ್ತಾನೆ	ಇಬ್ಬರೂ ಸ್ತ್ರೀಯರು ಗುಮಟೆ ಹಾಕಿಕೊಂಡು ಅವನ ಅಕ್ಕಪಕ್ಕ ದಲ್ಲಿ ನಿಂತಿರುತ್ತಾರೆ.
		ಪ್ರಾರ್ಥನೆ ಹಾಡಿ, ಕಥೆ ಹೇಳುತ್ತಾ ಸಂಭಾಷಿಸುತ್ತಾ, ತಂಬೂರಿ ನುಡಿ ಸುತ್ತಾನೆ.	ತಂಬೂರಿ ಮತ್ತು ಸಂಭಾಷಣೆ ಹಾಡಿಗೆ ತಕ್ಕಂತೆ ಗುಮಟೆಯ ಬಾರಿಸುತ್ತ ಇಮ್ಮೇಳವಾಗಿ ಹಾಡುವರು.
		ಸಂದರ್ಭದ ತಕ್ಕಂತೆ ಹಾಡುತ್ತಾನೆ ಲಘು ನರ್ತನ ಮಾಡುತ್ತಾನೆ.	ಗುಮ್ಮಟೆ ನುಡಿಸುತ್ತಾ ಹಿಮ್ಮೇಳ ಮತ್ತು ಗತ್ತು ಮಾಡುವುದು.
ಶಿಳ್ಳೆಕ್ಯಾತರು ಕಿಳ್ಳೆಕ್ಯಾತರು	ತೊಗಲುಗೊಂಬೆ ಪ್ರದರ್ಶನ	ಸಮುದಾಯದ ಪರಿಚಯ	ಆಟದ ತಯಾರಿಯಲ್ಲಿರುವುದು
		ಪ್ರಾರ್ಥನೆ ಹಾಡುತ್ತ, ನಿಧಾನವಾಗಿ ಕಥೆ ಹೇಳುತ್ತಾ ಸಂಭಾಷಿಸುತ್ತಾ ಗೊಂಬೆಗಳನ್ನು ಕುಣಿಸುತ್ತಾನೆ (ಗೊಂಬೆ ನಟಿಸುವಂತೆ ಸೂತ್ರದಾರ ನಾಗಿ ಅತ್ತ-ಇತ್ತ ಎಳೆಯುವವನ್ನು)	ಹಾರ್ಮೋನೀಯಂ ಬಾರಿಸುತ್ತಲೆ ಹಿಮ್ಮೇಳವಾಗಿ ಹಾಡುತ್ತಾಳೆ.
		ಸಂಭಾಷಣೆ ಮತ್ತು ಕಥೆ ಸಾಗುತ್ತಲೆ ಇದ್ದು ಮುಕ್ತಾಯವಾಗುತ್ತದೆ.	ಸಂಭಾಷಣೆಗೆ ತಕ್ಕಂತೆ ಹಿನ್ನೆಲೆ ರಾಗ ಮತ್ತು ಹಾಡುಹೇಳುವರು ಮುಕ್ತಾಯ ಮಾಡುವರು.

ಈ ರೀತಿಯಾಗಿ ಪ್ರದರ್ಶನ ಕಲೆಗಳಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರು ಒಂದುಗೂಡಿ ಅವರವರ ಪಾತ್ರಗಳನ್ನು ನ್ಯಾಯಯುತವಾಗಿ ಪೂರೈಸುವರು. ಇಂತಲ್ಲಿ ಮೇಲು-ಕೀಳೆಂಬ ಅಹಂಕಾರವಿಲ್ಲದೆ ಅಚ್ಚುಕಟ್ಟಾಗಿ ಕೆಲಸ ಮಾಡುವುದೆ ಮುಖ್ಯವಾಗಿದೆ. ಸ್ತ್ರೀಯು ಪುರುಷರಗಿಂತ ಯಾವುದರಲ್ಲಿ ಕಡಿಮೆ ಇಲ್ಲ ಎಂಬುದನ್ನು ಇಂತಹ ಕಲೆಗಳನ್ನು ಗಮನಿಸಿದಾಗ ಕಂಡುಬರುತ್ತದೆ. ಪುರುಷನು ಅವಳಿಗೆ ಸಂಪೂರ್ಣ ಸಹಕಾರ ಮತ್ತು ಸ್ವಾತಂತ್ರವನ್ನು ನೀಡುತ್ತಾನೆ. ಕಲೆಯಲ್ಲಿ ಸಮಾನವಾದ ಪ್ರೋತ್ಸಾಹವನ್ನು ನೀಡುವವನಾಗಿದ್ದಾನೆ. ನಿಖರವಾಗಿ ಹೇಳಬೇಕಾದರೆ ಇಂತಹ ಕಲೆಗಳಲ್ಲಿ ಸ್ತ್ರೀಯರು ಕೇಂದ್ರಬಿಂದು ವಾಗಿರುತ್ತಾರೆ. ಇವರಿಲ್ಲದೆ ಆಟಗಳು ನಡೆಯುವುದಿಲ್ಲ. ಈ ಕಲೆಗಳಲ್ಲಿ ಶ್ರಮವಿಭಜನೆಯ ಜೊತೆಗೆ ಉತ್ತಮವಾದ ಸಂಬಂಧಗಳು ಸಹ ಇದೆ.

೪. ವ್ಯಾಪಾರದಲ್ಲಿ ಲಿಂಗಸಂಬಂಧ

ಆಹಾರ ಸಂಗ್ರಹಣೆಯೆ ಮುಖ್ಯ ಕೇಂದ್ರಬಿಂದುವಾಗಿದ್ದ ಕಾಲಘಟ್ಟವನ್ನು ಹಾದುಬಂದ ಮಾನವರು ಬೌದ್ಧಿಕ ಮಟ್ಟ ವಿಕಾಸವಾದಂತೆ ಬಯಕೆಗಳು ಕವಲೊಡೆಯ ತೊಡಗಿದವು. ಪರಿಣಾಮ ತಮ್ಮ ಬದುಕಿನ

ದಿಕ್ಕನ್ನು ಬದಲಾಯಿಸತೊಡಗಿದರು. ಆ ಮೂಲಕ ಒಂದು ನೆಲೆಯನ್ನು ಕಂಡುಕೊಂಡು ತಮ್ಮ ಬಯಕೆಗಳನ್ನು ತಾವಿರುವಲ್ಲಿಯೆ ತೃಪ್ತಿಪಡಿಸಿಕೊಳ್ಳಲು ಪ್ರಯತ್ನಿಸಿದರು. ಅಗತ್ಯವಾಗಿ ಬೇಕಾಗಿದ್ದ ಆಹಾರದ ಪದಾರ್ಥಗಳನ್ನು ಕೃಷಿ ಮತ್ತು ಪಶುಪಾಲನೆಯ ಮೂಲಕ ಪಡೆಯತೊಡಗಿದರು. ಕೂಡಿಡುವ ಮನೋಭಾವ ಅರಿವಿಲ್ಲದಂತೆಯೆ ಮನೆಮಾಡಿತು. ಸ್ವಂತ ಆಸ್ತಿಯ ಕಲ್ಪನೆ ಒಡಮೂಡಿ ನಾಳೆಗೆ ಸ್ವಲ್ಪವಾದರು ಉಳಿಸ ಬೇಕೆಂಬ ಆಸೆಯಾಯಿತು. ಬೇರೆ ವೃತ್ತಿಗಳನ್ನು ಮಾಡಲು ಅವಕಾಶವಾಯಿತು. ತನ್ನ ಹತ್ತಿರವಿರದ ವಸ್ತುಗಳನ್ನು ಪಡೆಯಬೇಕೆಂಬ ಮನೋಇಚ್ಛೆಯಿಂದ ತನ್ನಲ್ಲಿದ್ದ ವಸ್ತುಗಳನ್ನು ಕೊಡುತ್ತಾ ಬೇರೆಯವರ ಕಡೆ ಇದ್ದ ವಸ್ತುಗಳನ್ನು ಪಡೆದುಕೊಂಡರು, ವಸ್ತುಗಳ ವಿನಿಮಯ ಮಾಡುವುದರಿಂದ ಕೊಡುಕೊಳ್ಳುವಿಕೆಯ ಪದ್ಧತಿ ಮಾಡಿಕೊಂಡರು. ಆ ಪದ್ಧತಿ ಇಂದು ಹಣದ ರೂಪದಲ್ಲಿ ವ್ಯಾಪಾರವಹಿವಾಟಾಗಿ ಮಾರ್ಪಟ್ಟಿದೆ. ಇಂತಲ್ಲಿ ಸರಕುಗಳಿಗೆ ಸರಕು ವಿನಿಮಯವಿತ್ತೆ ವಿನಃ ಪ್ರಬಲವಾದ ಲಾಭದ ಮನೋಭಾವ ವಿರಲಿಲ್ಲ. ಹಾಗೂ ಹಂಚಿಕೊಂಡು ತಿನ್ನುವ ಮನೋಭಾವವಿತ್ತು. ವಿನಿಮಯ ಮಾಡಿಕೊಳ್ಳುವ ವಸ್ತುಗಳನ್ನು ಅಳತೆ ಮಾಡುವ ಮತ್ತು ಗುಣಮಟ್ಟದಿಂದ ಅಳೆಯುವ ಬೆಲೆ ನಿಖರ ಮಾಡುವಂತಹ ಪದ್ಧತಿ ಇರಲಿಲ್ಲ. ಒಂದು ವಸ್ತುವು ಇನ್ನೊಂದು ವಸ್ತುವಿನ ಮೌಲ್ಯದ ಮಾನದಂಡವಾಗಿತ್ತು. ಈ ರೀತಿಯ ವಿನಿಮಯ ಪದ್ಧತಿಯನ್ನು 'ಸಾಟಿ' ಪದ್ಧತಿ ಎಂದು ಕರೆಯಲಾಯಿತು. ಈ ಪದ್ಧತಿ ಹಿಂದೆ ಈಜಿಪ್ಟ್ ಮತ್ತು ಮೆಸಪಟೋಮಿಯ ಕಾಲದಲ್ಲಿತ್ತೆಂದು ಇತಿಹಾಸಕಾರರು ಗುರುತಿಸುತ್ತಾರೆ. ಕಾಲಗತಿ ಬದಲಾದಂತೆ ವಿನಿಮಯದ ವಸ್ತುಗಳು ಅಳತೆ ಮಾಡುವ ವಸ್ತುಗಳಾಗಿ ಮೌಲ್ಯಗಳನ್ನು ಗುರುತಿಸುವ ಪರಿಪಾಟ ಬೆಳೆದುಬಂದವು. 'ಹಣ' ಚಲಾವಣೆ ಯಾವಾಗ ಜಾರಿಗೆ ಬಂದಿತೊ ಅಂದಿನಿಂದ ಸ್ಪಷ್ಟವಾದ ರೂಪವನ್ನು ಪಡೆದು ಲಾಭವೆಂಬುದು ಉಳಿತಾಯದ ಜೊತೆ ಸೇರಿಕೊಂಡು ತನ್ನ ವ್ಯಾಪ್ತಿಯನ್ನು ವಿಶಾಲವಾಗಿ ಆವರಿಸಿಕೊಂಡಿತು. 'ವ್ಯಾಪಾರ' ಎಂಬ ಹಣೆಪಟ್ಟಿಯೊಂದಿಗೆ ಹೊರಹೊಮ್ಮಿತು. 'ವ್ಯಾಪಾರ' ಎಂದರೆ "ವಸ್ತುಗಳನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ವ್ಯವಹಾರಗಳನ್ನು 'ವ್ಯಾಪಾರ' ಎನ್ನುತ್ತೇವೆ". ಇದನ್ನು ಅರ್ಥಶಾಸ್ತ್ರದ ಭಾಷೆಯಲ್ಲಿ 'ವಾಣಿಜ್ಯ' ಎಂದು ಗುರುತಿಸುತ್ತಾರೆ. ಸಂಕುಚಿತ ಅರ್ಥದಲ್ಲಿ ಗುರುತಿಸಿಕೊಂಡರೆ ವಿಶಾಲಾರ್ಥದಲ್ಲಿ ಸರಕು ಮತ್ತು ಸೇವೆಗಳನ್ನು ವಿನಿಮಯದ ಜೊತೆಗೆ ವಸ್ತುವಿನ ತಯಾರಿಕೆ ಮತ್ತು ಉತ್ಪಾದಿಸಿದ ವಸ್ತುವನ್ನು ಆ ಸ್ಥಳದಿಂದ ಉಪಭೋಗಕರಿಗೆ ತಲುಪಿಸುವುದು. ಬರಬಹುದಾದ ಆತಂಕಗಳನ್ನು ನಿವಾರಿಸುವ ತಂತ್ರವೂ ಇದರಲ್ಲಿ ಸೇರಿದೆ. ಗ್ರಾಹಕರಿಗೆ ಉತ್ಪಾದಿಸಿದ ವಸ್ತುಗಳನ್ನು ವಿಕ್ರಯ ಮಾಡುವ ವ್ಯಾಪಾರದ ವಿಧಾನದಲ್ಲಿ ಅನೇಕ ಪದ್ಧತಿಗಳಿವೆ. ಅಲೆಮಾರಿಗಳು ಅಂತಹ ವಿಶೇಷ ಪದ್ಧತಿಯನ್ನು ಅಳಡಿಸಿಕೊಂಡಿಲ್ಲ. ಮತ್ತು ಅದು ಅವರಿಗೆ ಬೇಕಾಗಿರುವುದಿಲ್ಲ. ನೇರವಾದಂತಹ ಮಾರಾಟ ಕೈಗೊಳ್ಳುವರು.

ಅಲೆಮಾರಿ ಸಮುದಾಯಗಳು ಮಾಡುವ ವ್ಯಾಪಾರದಲ್ಲಿ ಈಗಲೂ ವಿನಿಮಯ ಪದ್ಧತಿಯನ್ನು ಗುರುತಿಸಬಹುದು. ಒಂದು ವಸ್ತುವನ್ನು ಮಾರಾಟ ಮಾಡಿದರೆ ಅದರ ಪ್ರತಿಫಲವಾಗಿ ಹಣವನ್ನೆ ಅಪೇಕ್ಷಿಸುವುದಿಲ್ಲ. ಅನ್ನ, ಬಟ್ಟೆ, ದವಸ ಮತ್ತು ಇತರೆ ಉಪಯೋಗಿ ವಸ್ತುಗಳನ್ನು ನಿರೀಕ್ಷಿಸುತ್ತಾರೆ. ಅಲ್ಪಸ್ವಲ್ಪ ಮಾತ್ರ ಹಣದಿಂದ ಪಡೆಯಬಹುದು.

ವ್ಯಾಪಾರದಲ್ಲಿ ಲಿಂಗಸಂಬಂಧ

ಸಮುದಾಯ	ವಸ್ತುಗಳು	ಪುರುಷ	ಮಹಿಳೆ
ರಾಜಗೊಂಡ	ವನಸ್ಪತಿ	ಬೀದಿ ಅಥವಾ ವಾರದ ಸಂತೆಯಲ್ಲಿ ಮೈಕ್ ಹಿಡಿದು ವನಸ್ಪತಿಯ ಗುಣಗಳನ್ನು ಹೇಳುತ್ತ ಪ್ರಯೋಗಗಳ ವಿಧಾನ ಹೇಳುವನು.	ವಿಧಾನಕ್ಕೆ ತಕ್ಕಂತೆ ವನಸ್ಪತಿಯನ್ನು ಲೋಟದಲ್ಲಿ ಮಿಶ್ರಣ ಮಾಡಿ ತೋರಿಸುವಳು.
		ಗಿರಾಕಿಗಳಿಗೆ ಆಕರ್ಷಣೆ ಜೊತೆಗೆ ಔಷಧಿ ತೆಗೆದುಕೊಳ್ಳಲು ಹೇಳುವನು	ಔಷಧಿ ಕೊಟ್ಟು ಹಣ ಪಡೆಯು-ವಳು.
ಮದ್ದಿನಹೆಳವ	ವನಸ್ಪತಿ	ಬೀದಿಯಲ್ಲಿ ಗಿಡಮೂಲಿಕೆಯಿಟ್ಟು ಜನರನ್ನು ಕೂಗಿ ಕರೆಯುತ್ತಾ ಔಷಧಿಯ ಹೆಸರು ಗುಣಗಳನ್ನು ಹೇಳುವನು.	ಸಹಾಯಕಳಾಗಿ ಇರುವಳು.
		ಗಿರಾಕಿಗಳಿಗೆ ಆಕರ್ಷಿಸುವ ಜೊತೆಗೆ ಗಿಡಮೂಲಿಕೆ ತೆಗೆದುಕೊಳ್ಳಲು ಹೇಳುವನು.	ಇದೆ ಕೆಲಸದಲ್ಲಿ ಮತ್ತೊಂದಡೆ ತೊಡಗಿರುವಳು.
ಹಕ್ಕಿ-ಪಿಕ್ಕಿ, ಸುಡುಗಾಡುಸಿದ್ಧರು ಜೋಗಿಗಳು,	ಪ್ಲಾಸ್ಟಿಕ್ ಸಾಮನು ಮತ್ತು	ವಸ್ತುಗಳ ಹೆಸರಿನಿಂದ ಕೂಗುತ್ತಾ ಆಕರ್ಷಿಸುವರು.	ಜೊತೆಯಲ್ಲಿ ಸಾಮಾನು ಹೊತ್ತುಕೊಂಡು ಕೂಗುತ್ತಾಳೆ.
ಕೊರವರು,	ಅಲಂಕಾರಿಕ	ಅನುಕೂಲವಾದ ಬೆಲೆಗೆ ಮಾರಾಟ	ಇದೆ ಕೆಲದಲ್ಲಿ ತೊಡಗಿರುವಳು
ಸಿಕ್ಕಲಿಗಾರರು	ವಸ್ತುಗಳು	ಮನಕೆರಳಿಸುವ ಮತ್ತು ಕೊಂಡುಕೊಳ್ಳುವಂತೆ ಒತ್ತಾಯಿಸುವುದು.	ಇದೆ ಕೆಲದಲ್ಲಿ ತೊಡಗಿರುವಳು
ಗೋಸಂಗಿಗಳು ಬೈಲುಪತ್ತಾರ ಹಕ್ಕಿ-ಪಿಕ್ಕಿ	ಅಲ್ಯೂಮಿನಿಯಂ ಚಾಪೆ, ಬುಟ್ಟಿ	ಮಾರಾಟದ ತಂತ್ರ ಉಪಯೋಗಿಸಿ ವಸ್ತುಗಳನ್ನು ಮಾರುತ್ತಾನೆ.	ಇದೆ ಕೆಲದಲ್ಲಿ ತೊಡಗಿರುವಳು
	ಸ್ಪಟಿಕದಹರಳು,	ಕೈಗಳಲ್ಲಿ ಹಿಡಿದುಕೊಂಡು ಮತ್ತು	ಇದೆ ಕೆಲದಲ್ಲಿ ತೊಡಗಿರುವಳು
	ಸರಗಳು, ಜೇನು	ತಲೆಗಳ ಮೇಲೆ ಹೊತ್ತು	ಇದೆ ಕೆಲದಲ್ಲಿ ತೊಡಗಿರುವಳು
	ಹಣ್ಣುಹಂಪಲು	ಮಾರುವರು	
	ಚಾಕು, ಚೈನು		
	ಬಟ್ಟೆ, ಮೀನು	ಮೀನು ಹಿಡಿದುತಂದು ಮಾರುವರು	ಮೀನಿನ ಮಾರಾಟದಲ್ಲಿ ತೊಡಗಿರುವಳು

ಹೀಗೆ ವ್ಯಾಪಾರದಲ್ಲಿ ಸಮಭಾಗಿತ್ವದಿಂದ ವಸ್ತುಗಳನ್ನು ಮಾರಾಟಮಾಡುವವರಾಗಿದ್ದು. ವ್ಯಾಪಾರವನ್ನು ಮುಗಿಸಿಕೊಂಡು ತಮ್ಮ ಬಿಡಾರಗಳಿಗೆ ಹಿಂತಿರುಗುತ್ತಾರೆ. ಮಾರಟದಿಂದ ಬಂದಿರುವ ಹಣವನ್ನು ಲೆಕ್ಕ ಮಾಡುತ್ತಾರೆ. ಬಂದಿರುವ ಲಾಭ ನಷ್ಟಗಳನ್ನು ನೋಡುತ್ತಾರೆ. ನಷ್ಟವಾಗಿದ್ದರೆ ಚರ್ಚಿಸುವರು. ನಾಳೆ ಯಾವಕಡೆ ವ್ಯಾಪಾರಕ್ಕೆ ಹೋಗಬೇಕು ಎಂಬುದನ್ನು ಚರ್ಚಿಸಿ ನಿರ್ಧರಿಸುತ್ತಾರೆ.

೫. ಕಾಡು ಉತ್ಪನ್ನ ಜನ್ಯ ಸಂಗ್ರಹದಲ್ಲಿ ಲಿಂಗಸಂಬಂಧ

ಮಾನವರ ಜೀವನ ಕಾಡಿನಿಂದ ಆರಂಭಗೊಂಡಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅನಾಗರಿಕ ವ್ಯವಸ್ಥೆಯಲ್ಲಿದ್ದ ಅಂದಿನ ಮಾನವರು ಆಹಾರ ಸಂಗ್ರಹಣೆ ಮಾಡುತ್ತ, ಕಾಡಲ್ಲಿ ದೊರೆಯಬಹುದಾದ ಗಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ಸಂಗ್ರಹಿಸುತ್ತಾ ತಿನ್ನುತ್ತಾ, ತನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದರು. ಇವುಗಳೂ ಎಲ್ಲಾ ಕಾಲದಲ್ಲಿಯೂ ದೊರೆಯದೆ ಇರುವುದರಿಂದ ಆಹಾರಕ್ಕಾಗಿ ಸಣ್ಣಪುಟ್ಟ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡಿ ಅದರ ಮಾಂಸವನ್ನು ತಿಂದು ಜೀವಿಸುತ್ತಿದ್ದರು. ತದನಂತರ ಅದರ ಚರ್ಮವನ್ನು ತಮ್ಮ ದೇಹ ರಕ್ಷಣೆಗೆ ಬಳಸಿಕೊಂಡರು. ಪಕ್ಷಿಗಳ ಪುಕ್ಕವನ್ನು ಅಲಂಕಾರಕ್ಕಾಗಿ ಉಪಯೋಗಿಸಿಕೊಂಡರು. ಕೆಲಸ ಕಾರ್ಯಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಸಾಮೂಹಿಕವಾಗಿ ಭಾಗಿಯಾಗುತ್ತಿದ್ದರು. ಸಾಮೂಹಿಕ ಶ್ರಮವಿನಿಯೋಗ ಮತ್ತು ಉತ್ಪಾದನೆ, ಸಮಾನ ಹಂಚಿಕೆ, ಸಮಾನ ಅನುಭೋಗವಿತ್ತು. ಕೃಷಿಯ ಶೋಧನೆಯ ತರುವಾಯ ಚಟುವಟಿಕೆಗಳಲ್ಲಿ ಕ್ರಾಂತಿಕಾರ ಬದಲಾವಣೆಗಳು ಬೆಳವಣಿಗೆಗಳಾದವು. ಅಲ್ಲಿಂದ ಸಂಗ್ರಹಿಸುವುದು ಖಾಸಗಿ ಆಸ್ತಿಯ ಕಲ್ಪನೆ. ಬೆಂಕಿಯ ಉಪಯೋಗ, ವಾಸದ ಕಲ್ಪನೆ ಇತ್ಯಾದಿ ಕಲ್ಪನೆಗಳು ಬಂದಾಗಲೂ ಸ್ತ್ರೀ-ಪುರುಷರ ಸಂಬಂಧಗಳು ತುಂಬ ಅನೂನ್ಯವಾಗಿದ್ದು ಕೆಲಸ ಕಾರ್ಯಗಳಲ್ಲಿ ಸಾಮೂಹಿಕವಾಗಿ ಭಾಗಿಯಾಗುತ್ತಿದ್ದರು. ಇಂತಹ ಸಾಮೂಹಿಕ ಕೆಲಸ ಕಾರ್ಯಗಳು ಈಗಲೂ ಕೆಲವೊಂದು ಸಮುದಾಯಗಳಲ್ಲಿ ಕಾಣಬಹುದು. ಎಷ್ಟೇ ಆಧುನಿಕ ಅಬ್ಬರದ ತಂತ್ರಜ್ಞಾನ ಬಂದೊದಗಿದರೂ ಇವರ ವ್ಯವಸ್ಥೆ ಸ್ಫೋಟಿಸುವಂತ ಮದ್ದುಗಳೂ ಇಲ್ಲವಾಗಿವೆ. ಅಷ್ಟೊಂದು ಗಟ್ಟಿಯಾಗಿ ವಜ್ರದಂತ ರಕ್ಷಕವಚದ ವ್ಯವಸ್ಥೆಯನ್ನು. ಅಲೆಮಾರಿಗಳು ಮೈಗೂಡಿಸಿಕೊಂಡಿದ್ದಾರೆ. ಕಾಡಿನಲ್ಲಿರುವ ಸಂಪತ್ತನ್ನು ಇಬ್ಬರು ಜೊತೆಗೂಡಿ ಕ್ರೋಢಿಕರಿಸಿ ಮಾರಾಟ ಮಾಡಿ ಬಂದ ಆದಾಯದಲ್ಲಿ ತಮ್ಮ ಹೊಟ್ಟೆ ಹೊರೆದು ಕೊಳ್ಳುವರು. ಕೆಲಸ ಕಾರ್ಯಗಳಲ್ಲಿ ಅಲೆಮಾರಿಗಳ ಸ್ತ್ರೀ-ಪುರುಷ ಸಂಬಂಧಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕಾಡುತ್ಪನ್ನ ಜನ್ಯ ಸಂಗ್ರಹದಲ್ಲಿ ಲಿಂಗಸಂಬಂಧ

ಸಮುದಾಯ	ಕಸುಬು	ಪುರುಷ	ಮಹಿಳೆ
ಹಕ್ಕಿಪಿಕ್ಕಿ	ಸಂಗ್ರಹಣೆ	ಜೇನು ಬಿಡಿಸುವುದು.	ಬಿಡಿಸಿದ ಜೇನನ್ನು ಬಾಟಲಿಗಳಲ್ಲಿ ತುಂಬಿಡುವುದು.
		ಉರುವಲು ಕಟ್ಟಿಗೆ ಕಡಿಯುವುದು.	ಕೂಡಿಡುವುದು ಅಥವಾ ಜೊಡಣೆ ಮಾಡುವುದು.

		ಗಿಡಮೂಲಿಕೆ ಶೋಧಿಸುವುದು.	ತಂದಿರುವ ಗಿಡಮೂಲಿಕೆಯನ್ನು ಬೇರ್ಪಡಿಸುವುದು ಒಣಗಿಸುವುದು.
		ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡಿ ತರುವುದು ಚರ್ಮ ಬಿಡಿಸುವುದು.	ಮಾಂಸವನ್ನು ತುಂಡು ತುಂಡಾಗಿ ಕತ್ತರಿಸಿ ಬೇಯಿಸುವುದು.
		ಗಡ್ಡೆ-ಗೆಣಸು ಹಣ್ಣುಗಳನ್ನು ಹುಡುಕುವುದು.	ಬೇರ್ಪಡಿಸಿ ಸಮ ಪ್ರಮಾಣದಲ್ಲಿ ಸದಸ್ಯರಿಗೆ ವಿತರಿಸುವುದು.
		ಕೋಡು,ಪುಕ್ಕ,ಗರಿ, ಇತ್ಯಾದಿ ಸಂಗ್ರಹ	ಇದೆ ಕೆಲಸದಲ್ಲಿ ನಿರತರಾಗಿರುವುದು
		ಶಂಖ, ಹರಳು ಇತ್ಯಾದಿ ಸಂಗ್ರಹ	ಇದೆ ಕೆಲಸದಲ್ಲಿ ನಿರತರಾಗಿರುವುದು
ಕೊರವರು	ಸಂಗ್ರಹಣೆ	ಈಚಲಗರಿಯನ್ನು ಕತ್ತರಿಸಿವುದು	ಗರಿ ಕೂಡಿಡುವಿಕೆ
		ಕತ್ತಾಳೆ (ರಗಸಬಟ್ಟೆ) ಗರಿ ಕತ್ತರಿವುದು	ಗರಿಯನ್ನು ಕೂಡಿಡುವಿಕೆ
		ಕತ್ತಾಳೆ (ರಗಸಬಟ್ಟೆ) ನೀರಿನಲ್ಲಿ ನೆನೆಸಿ ಹದ ಮಾಡುವುದು ಕಲ್ಲಿಗೆ ಬಡಿಯುವುದು	ಹದಗೊಳಿಸಿದ ನಾರನ್ನು ಒಣಗಿಸುವುದು.
		ಪೊರಕೆ ಕಟ್ಟಲು ಮತ್ತು ಸಿಂಬೆ ಮಾಡಲು ಬಳ್ಳಿಗಳನ್ನು ತರುವುದು	ಆಯ್ದ ಬಳ್ಳಿಯನ್ನು ಸಿಂಬೆ, ಪೊರಕೆ ಮಾಡುವುದು.
		ಹುಲ್ಲು ಕೊರೆಯುವಿಕೆ	ಕೂಡಿಡುವಿಕೆ
ಅಡವಿಚೆಂಚು	ಸಂಗ್ರಹಣೆ	ಉಡ ಮತ್ತು ಪ್ರಾಣಿಪಕ್ಷಿಗಳ ಅನ್ವೇಷಣೆ.	ಜೊತೆಯಲ್ಲಿ ಭಾಗಿತ್ವ.
		ಜೇನು ಬಿಡಿಸುವುದು.	ಉಟ್ಟಿನಿಂದ ಬೇರ್ಪಡಿಸಿ ಪಾತ್ರೆ ಇಲ್ಲವೆ ಬಾಟಲಿಗೆ ತುಂಬುವುದು
		ಕಟ್ಟಿಗೆ ಕಡೆಯುವುದು.	ತುಂಡು ಮಾಡಿದ ಕಟ್ಟಿಗೆ ಹೊರೆ ಕಟ್ಟುವುದು.
		ಹಣ್ಣು-ಗಡ್ಡೆ ಸಂಗ್ರಹ	ಸಹ ಕೆಲಸದಲ್ಲಿ ಭಾಗಿ ಜೊತೆಯಲ್ಲಿ ಸಂಗ್ರಹ.
ಸಿಂಧೋಳ್ಳು	ಸಂಗ್ರಹಣೆ	ಬೇವಿನ ಬೀಜ ಮತ್ತು ಹೊಂಗೆಯ ಬೀಜಗಳನ್ನು ಮರ ಏರಿ ಉದುರಿಸುವುದು	ಮರದಿಂದ ಬಿದ್ದ ಬೀಜಗಳನ್ನು ಆರಿಸುವುದು.

ಹೀಗೆ ಅಲೆಮಾರಿ ಸಮುದಾಯಗಳಲ್ಲಿ ಪುರುಷರು ಮತ್ತು ಸ್ತ್ರೀಯರು ಜೊತೆಜೊತೆಯಾಗಿಯೆ ನಿಭಾಯಿಸುವರು ಬಂದ ಆದಾಯವನ್ನು ತಮ್ಮ ಸಂಸಾರದಲ್ಲಿ ವಿನಿಯೋಗಿಸುವರು. ಪುರುಷ ಶ್ರೇಷ್ಠ ಸ್ತ್ರೀಯು ಕನಿಷ್ಠವೆಂಬ ಭಾವನೆ ಸುಳಿಯದು. ದುಡಿಮೆಯೊಂದೆ ಮುಖ್ಯ ಗುರಿಯಾಗಿದೆ.

೬. ಕರಕುಶಲ ಕಲೆಯಲ್ಲಿ ಲಿಂಗಸಂಬಂಧಗಳು

ಶ್ರೀಮಂತರ ಮನೆಯ ಗೋಡೆಗಳ ಮೇಲೆ ಮತ್ತು ದೊಡ್ಡ ದೊಡ್ಡ ಮಹಲುಗಳಲ್ಲಿ ರಾರಾಜಿಸುತ್ತಿರುವ ಚಿತ್ತಾರವು ನೊಂದು ಬೆಂದ ಸಮುದಾಯಗಳ ಸಮಷ್ಠಿ ರೂಪಕವಾಗಿದೆ. ಅಂದರೆ ಒಂದೊತ್ತಿನ ಅನ್ನಕ್ಕಾಗಿ ತನ್ನಲ್ಲಿ ಅವಿತುಕೊಂಡಿರುವ ಆಲೋಚನಾ ಲಹರಿಗಳನ್ನು ಗೋಡೆ ಅಥವಾ ಇತರೆ ವಸ್ತುಗಳ ಮೇಲೆ ಅಭಿವ್ಯಕ್ತಗೊಳಿಸಿರುವ ಚಿತ್ರಕಲೆ ಮತ್ತು ಇತರ ಕುಸುರಿಕಲೆಗಳು ಅಲೆಮಾರಿಗಳ ಶ್ರೀಮಂತ ಕೊಡುಗೆಗಳಾಗಿವೆ. ಒಂದು ಕಾಲದಲ್ಲಿ ಜೀವನದ ದಿಕ್ಸೂಚಿಯಾಗಿ ಕೆಲಸ ಮಾಡಿದ "ಚಿತ್ತಾರವು ಬೇಟೆಯ ತಂತ್ರವನ್ನು ತಿಳಿಸಿಕೊಡುತ್ತಿದ್ದವು. ಏಕೆಂದರೆ ಬೇಟೆ ಆಡುವುದು ಅಂದಿನ ಮಾನವರ ಸ್ವಾಭಾವಿಕವಾದ ಗುಣವಾಗಿದ್ದು ಅದು ಸುಲಭವಾಗಿರಲಿಲ್ಲ. ಅದಕ್ಕಾಗಿ ವಿಶೇಷ ತಂತ್ರಗಳನ್ನು ರೂಪಿಸ ಬೇಕಾಗುತ್ತಿತ್ತು. ಇಂತಹ ತಂತ್ರಗಳನ್ನು ಗೋಡೆಗಳ ಮೇಲೆ ತಮ್ಮಲ್ಲಿಯೆ ಸಿಗುತ್ತಿದ್ದ ಇದ್ದಿಲುಗಳನ್ನು ಬಳಸಿಕೊಂಡು ಅಥವಾ ಕಲ್ಲು, ಬಳ್ಳಿಯ ಹಾಲುಗಳನ್ನು ಬಳಸಿಕೊಂಡು ಪ್ರಾಣಿಪಕ್ಷಿಗಳನ್ನು ಬಿಡಿಸಿ, ಯಾವ ಭಾಗದಿಂದ ದಾಳಿಮಾಡಬೇಕು ಹೇಗೆ ಮಾಡಬೇಕು ಯಾವ ಆಯುಧವನ್ನು ಯಾವ ಪ್ರಾಣಿಗೆ ಬೇಟೆಯಲ್ಲಿ ಬಳಸಬೇಕು ಎಂಬುದನ್ನು ಕಲೆಯ ಮೂಲಕ ಕಂಡುಕೊಳ್ಳುತ್ತಿದ್ದರು"[35]. ಇಂತಹ ಪ್ರಾಣಿಗಳ ದಾಳಿಯನ್ನು ಮಾಡುವಾಗ ಸ್ತ್ರೀ-ಪುರುಷರಿಬ್ಬರು ಭಾಗಿಯಾಗುವುದು ಈ ಚಿತ್ರಗಳಲ್ಲಿ ಮತ್ತು ನಿಜ ಜೀವನದಲ್ಲಿ ನಡೆಯುತ್ತಿದ್ದ ಶ್ರಮವಿಭಜನೆಯ ಬದುಕನ್ನು ಬಿಂಬಿಸುವ ಚಿತ್ರಗಳ ಕಲೆಯಲ್ಲಿ ಕಾಣಬಹುದು.

ಕೊಂದ ಪ್ರಾಣಿಗಳ ಚರ್ಮವನ್ನು ವಿಧವಿಧವಾದ ಬಳಕೆಗೆ ಮಾಡಿಕೊಳ್ಳುವ ಮತ್ತು ಉಪಯೋಗಿ ಸುವುದರೊಂದಿಗೆ ಪಕ್ಷಿಗಳ ಪುಕ್ಕ-ಗರಿಗಳನ್ನು ಅಲಂಕಾರಿಕವಾಗಿ ಬಳಸಿಕೊಂಡರು. ಕಾಲ ಬದಲಾದಂತೆ ಕಬ್ಬಿಣದ ಆಯುಧಗಳು ಮತ್ತು ಬೆಂಕಿಯ ಉಪಯೋಗದಿಂದ ಹಲವಾರು ವೈವಿಧ್ಯಮಯ ಕೌಶಲ್ಯ ಕಲೆಗಳನ್ನು ಕಲಿತರು. ಸಾಧನ ಉಪಕರಣಗಳನ್ನು ಮಾಡಲು ಮುಂದಾದರು ಹಾಗೂ ಜೀವನ ಅವಶ್ಯಕ ವಸ್ತುಗಳ ಜೊತೆಗೆ ಕೆಲವೊಂದು ಅಲಂಕಾರಿಕ ವಸ್ತುಗಳನ್ನು ಮಾಡತೊಡಗಿದರು. ಈ ಕಾರ್ಯಗಳಲ್ಲಿ ಸ್ತ್ರೀ-ಪುರುಷರಿಬ್ಬರೂ ಒಟ್ಟಾಗಿಯೆ ಯಾವುದೆ ಲಿಂಗತಾರತ್ಯಮದಲ್ಲಿ ಒಳಗಾಗದೆ, ಇಬ್ಬರ ಕಲೆಯನ್ನು ಮಿಶ್ರಿತಗೊಳಿಸಿ ವಸ್ತುಗಳಿಗೆ ರೂಪವನ್ನು ಒದಗಿಸುವ ಅಂಶವನ್ನು ಮೈಗೂಡಿಸಿಕೊಂಡರು.

'ಕರಕುಶಲ ಕಲೆ' ಎಂದರೆ ಕರ ಎಂದರೆ 'ಕೈ ಮತ್ತು ಬೆರಳು'ಗಳು ಕೂಡಿರುವ ಹಸ್ತವಾಗಿರುತ್ತದೆ. ಹಸ್ತದಲ್ಲಿ ಅಡಗಿರುವ ಕಲೆಯ ಕುಶಲತೆಯನ್ನು ನಾವು ಕರಕುಶಲತೆ ಮತ್ತು ಇತರೆ ಅಂಗಾಂಗಳನ್ನು ಬಳಸಿಕೊಡು "ಸೂಕ್ತ ರೀತಿಯಲ್ಲಿ ಕಚ್ಚಾವಸ್ತುವನ್ನು ಉಪಯೋಗಿಸಿಕೊಂಡು ಆಕರ್ಷಕ ರೂಪವನ್ನು ನೀಡುವುದೆ ಕರಕುಶಲಕಲೆಯಾಗಿದೆ."[36] ಇಲ್ಲಿ ಭಾವನೆ ಬುದ್ಧಿವಂತಿಕೆ ದೇಹದ ಅಂಗಾಗಳ ಸಹ ಸ್ಪಂದನ ಕೂಡಿಕೊಂಡು ಇಂತಹ ಕುಶಲಕಲೆಗಳು ಹೊರಬೀಳುತ್ತವೆ. ಅಲೆಮಾರಿಗಳ ಕೌಶಲ್ಯವು ತುಂಬಾ ವಿಶಿಷ್ಟ

ವಾದುದಾಗಿದೆ. ಇದರಲ್ಲಿ ತೊಡಗಿಸಿಕೊಳ್ಳುವ ಸಮುದಾಯದ ಸ್ತ್ರೀ-ಪುರುಷರು ಕಲೆಯನ್ನು ಒಟ್ಟಾಗಿಸಿಕೊಂಡು ಕುಶಲತೆಗಳನ್ನು ಸೃಷ್ಟಿಸುವಲ್ಲಿ ಭಾಗವಹಿಸುವರು.

ಕರಕುಶಲ ಕಲೆಯಲ್ಲಿ ಲಿಂಗಸಂಬಂಧ

ಸಮುದಾಯ	ಕಲೆಗಳು	ಪುರುಷ	ಮಹಿಳೆ
ಸಿಕ್ಕಲಿಗರು	ವಿಗ್ರಹ, ಗೃಹೋಪಯೋಗಿ	ಕಚ್ಚಾ ಅಲ್ಯೂಮಿನಿಯಂ ಬಳಸಿಕೊಂಡು ಮುರಿದು ಸೇರಿಸುವಿಕೆ.	ಒಲೆ ತಯಾರಿಕೆ
	ವಸ್ತುಗಳ ತಯಾರಿಕೆ	ಚಿಕ್ಕದಾದ ಪಾತ್ರೆಯಲ್ಲಿ ಅಲ್ಯೂಮಿನಿಯಂ ಕರಗಲು ಹಾಕುತ್ತಾನೆ ಅಲ್ಯೂಮಿನಿಯಂ ನೀರಾಗುವಂತೆ ಕರಗಲು, ಇತರೆ ಬೇರೆ ಪದಾರ್ಥಗಳನ್ನು ಬೇರ್ಪಡಿಸುತ್ತಾನೆ.	ಅಲ್ಯೂಮಿನಿಯಂ ಕರಗಲು ರಾಟಿ ತಿರುಗಿಸುವಳು. ಮತ್ತೊಂದಕ್ಕೆ ಸಿದ್ಧ ಮಾಡುತ್ತಾಳೆ
		ಅಚ್ಚುಪಡಿಯನ್ನು ತೆಗೆದು ಸ್ವಚ್ಛ ಮಾಡುತ್ತಾನೆ.	ಗ್ರಾನೈಟ್ ಮಣ್ಣನ್ನೆ ನೀರು ಹಾಕಿ ಮಿಶ್ರಣಮಾಡಿ ಅಚ್ಚುಪಡಿಯಲ್ಲಿ ತುಂಬುತ್ತಾಳೆ.
		ವಿಗ್ರಹ ಇಲ್ಲವೆ ಉಪಕರಣವನ್ನು ಅಚ್ಚುಪಡಿಯಲ್ಲಿಟ್ಟು ಮಣ್ಣಿನಲ್ಲಿ ಪ್ರತಿರೂಪ ಮೂಡಿಸುತ್ತಾನೆ.	ಇದನ್ನು ನಿರ್ಮಿಸಲು ಸಹಕಾರಿಸುತ್ತಾಳೆ.
		ಅಚ್ಚುಪಡಿಯ ಪೆಟ್ಟಿಗೆ ಮೇಲೆ ರಂಧ್ರವನ್ನು ಮಾಡಿ ಕಾಯ್ದ ಅಲ್ಯೂಮಿನಿಯಂ ದ್ರಾವಣ ಹಾಕಿ ೫ ನಿಮಿಷ ಬಿಡುತ್ತಾನೆ.	೫ ನಿಮಿಷದ ನಂತರ ಆ ಪಟ್ಟಿ ತೆಗೆದು ಗ್ರಾನೈಟ್ ಮಣ್ಣನ್ನು ಕೆಳಗೆ ಹಾಕಿ ವಿಗ್ರಹವನ್ನು ತೆಗೆದು ಸೂತ್ತಲೂ ಇರಬಹುದಾದ ತುಂಡು ಮಣ್ಣಿನ ಕಣಗಳನ್ನು ಇಕ್ಕಳದಿಂದ ಸ್ವಚ್ಛಗೊಳಿಸುತ್ತಾಳೆ.
		ತೆಗೆದ ವಿಗ್ರಹವನ್ನು ಬಟ್ಟೆಯಿಂದ ಒರೆಸಿ ಸ್ವಚ್ಛಮಾಡಿ ಹೊಳಪು ಬರುವಂತೆ ಮಾಡುತ್ತಾನೆ.	ಮತ್ತೆ ಮುಂದಿನ ಉಪಕರಣ ತಯಾರಿಕೆಗಾಗಿ ಸಿದ್ಧತೆ.
ಬೈಲುಪತ್ತಾರ	ಅಲಂಕಾರಿಕ ವಸ್ತುಗಳು	ತಾಮ್ರದ ತಂತಿಯನ್ನು ತುಂಡು ತುಂಡಾಗಿ ಕತ್ತರಿಸುವಿಕೆ.	ಬಳೆಯಾಕಾರದಲ್ಲಿ ದುಂಡಗೆ ಮಾಡುವುದು.

		ನಡದ ಅಳತೆಯ ಅಲ್ಯೂಮಿನಿಯಂ ಮತ್ತು ಹಿತ್ತಾಳೆ ಕತ್ತರಿಸುವಿಕೆ	ಇವುಗಳಿಗೆ ಚಿತ್ತಾರ ಹಾಕಿ ಡಾಬನ್ನು ಮಾಡುವುದು.
		ಗಿಲಾಟೆ ಕಲ್ಲನ್ನು ಆಕಾರದ ತಕ್ಕಂತೆ ಕತ್ತರಿಸುವುದು.	ಮೊದಲೆ ಮಾಡಿಕೊಂಡ ಬರಿ ಉಂಗುರದ ಕಲ್ಲಿನ ಹರಳು ಅಂಟಿಸುವುದು, ಉಂಗುರ ತಯಾರಿಸುವುದು.
		ಚಿಮುಟಿಕೆ, ಹಲ್ಲುಕಡ್ಡಿ, ತಾಯತ ಕಿವಿ ಓಲೆಗಳ ತಯಾರಿಕೆ	ಮೇಸ್ತ್ರಿ, ನತ್ತು ಇತ್ಯಾದಿ ಅಲಂಕಾರಿ ವಸ್ತುಗಳ ತಯಾರಿಕೆ ಸಿದ್ದತೆ ಮಾಡುವರು.
ಹಕ್ಕಿ-ಪಿಕ್ಕಿ	ಅಲಂಕಾರಿಕ ವಸ್ತುಗಳು	ಅಂಗಡಿಯಿಂದ ಬೇಕಾದ ಸಾಮಾನು ತರುವುದು.	ತಂದ ಸಾಮಾನುಗಳನ್ನು ಅಳತೆಗೆ ಸರಿಯಾಗಿ ಕತ್ತರಿಸುವುದು.
		ಕತ್ತರಿಸಿದ ಹಾಳೆಯ ಒಳಗೆ ಹತ್ತಿಯನ್ನು ತುಂಬುವುದು.	ತುರುಕಿದ ಮೇಲೆ ಹೊಲಿಗೆಯನ್ನು ಹಾಕುವುದು.
		ಬೊಂಬೆಗೆ ಕಣ್ಣು, ಮೂಗು, ಬಾಯಿ ಇತ್ಯಾದಿ ಭಾಗಗಳನ್ನು ಗುರುತಿಸುವುದು.	ಗುರುತಿಸಿದ ಜಾಗಕ್ಕೆ ಹರಳುಗಳಿಂದ ಕಣ್ಣು, ಮೂಗನ್ನು ಮಾಡಿ ಹೊಲಿಗೆ ಹಾಕುವುದು ಇಲ್ಲವೆ ಅಂಟಿಸುವುದು.
		ಪ್ಲಾಸ್ಟಿಕ್ ಬಟ್ಟೆಯನ್ನು ಮಾವಿನ ಎಲೆಯ ರೀತಿ ಕತ್ತರಿಸುವುದು.	ಕತ್ತರಿಸಿದ ಎಲೆಯನ್ನು ದಾರದಲ್ಲಿ ಪೋಣಿಸಿ ತೋರಣ ತಯಾರಿಸುವುದು.
		ಒಣಗಿದ ಚರ್ಮದ ಮೇಲಿನ ಕೂದಲನ್ನು ತೆಗೆಯುವುದು.	ಕೂದಲು ತೆಗೆದ ಚರ್ಮಕ್ಕೆ ಬಣ್ಣಗಳನ್ನು ಮಿಶ್ರಣ ಮಾಡಿ ಹುಲಿ, ಸಿಂಹದ ಚರ್ಮದಂತೆ ಮಾಡುವುದು.

೭. ಪಶುಸಂಗೋಪಾನೆಯಲ್ಲಿ ಲಿಂಗಸಂಬಂಧಗಳು

ಮಾನವರ ಜೊತೆ ಸಂಗಾತಿಯಾಗಿ ನಂಟು ಬೆಳೆಸಿಕೊಂಡ ಜೀವಿಗಳೆಂದರೆ ಪಶು ಸಂಪತ್ತು. ಇವು ಆತನಿಗೆ ಆಹಾರ ಕೊಡುವುದರ ಜೊತೆಗೆ ಸಂಚಾರಿ ಸಾಧನಗಳಾಗಿಯೂ ಆಸರೆಯಾಗಿವೆ. ಈ ಸಂಪತ್ತುಗಳಿಗೆ ತುಂಬಾ ಪ್ರಾಚೀನವಾದ ಇತಿಹಾಸವಿದೆ. ಕಿ.ಪೂ. ೩೫೦೦ಕ್ಕೂ ಹಿಂದಿನ ಇತಿಹಾಸವಾದ ಈಜಿಪ್ಟ್, ಬೆಬಿಲೋನಿಯಾ, ಸ್ವೀಸ್ ದೇಶಗಳಲ್ಲಿ ಪಶುಗಳ ಉಪಯೋಗವಿತ್ತೆಂದು ಇತಿಹಾಸಕಾರರು ಅಭಿಪ್ರಾಯ

ಪಟ್ಟು ಕುರುಹಗಳನ್ನು ಕಂಡು ಹಿಡಿದಿದ್ದಾರೆ. ಭಾರತದಲ್ಲೂ ಆರ್ಯಗೆ ಪಶುಗಳೆ ಮುಖ್ಯ ಸಂಪತ್ತೆಂದು ತಿಳಿದು ಇವುಗಳ ಯೋಗಕ್ಷೇಮಕ್ಕಾಗಿಯೆ ಹುಲ್ಲುಗಾವಲು ಮತ್ತು ನೀರು ದೊರೆಯುವ ಪ್ರದೇಶಗಳಲ್ಲಿ ತಂಗುತ್ತಿದ್ದರು. ಮತ್ತು ಇದಕ್ಕಾಗಿಯೆ ಹೋರಾಟಗಳನ್ನು ಮಾಡುತ್ತಿದ್ದರು. ಹಾಗೂ ವೇದ ಉಪನಿಷತ್ತುಗಳು ಪಸುವಿಗೆ ತುಂಬಾ ಪೂಜ್ಯನೀಯ ಸ್ಥಾನ ನೀಡಿರುವುದನ್ನು ಸ್ಮರಿಸಬಹುದು. ರಾಮಾಯಣ, ಮಹಾಭಾರತ ಗಳಲ್ಲಿ ಇದರ ಪ್ರಸ್ತಾಪ ನೋಡಬಹುದು. ಶಂಬಾಜೋಷಿಯವರು ದನಕರುಗಳೆ ದಾನ, ದನಗಾರಿಕೆಯಿಂದ ಧನಗಾರರಾದರು ಎಂದು ಅಭಿಪ್ರಾಯಪಡುತ್ತಾರೆ. Capital ಇಂಗ್ಲೀಷ್‌ನ ಶಬ್ದವೂ ಸಹ ಆಸ್ತಿ, ಸಂಪತ್ತು ಎಂಬ ಅರ್ಥವನ್ನು ಕೊಡುತ್ತದೆ.

ವ್ಯವಸಾಯಕ್ಕಾಗಿ ಯಾವಾಗ ಪಶುಸಂಪತ್ತು ಬಳಕೆಯಾಯಿತೊ ಅಂದಿನಿಂದ ಕ್ರಾಂತಿಯಾಯಿತು. ಇದು ಒಂದು ಉದ್ಯಮವಾಗಿಯೂ ರೂಪಗೊಂಡಿತು. ಇದರಿಂದ ಹೆಚ್ಚಿನ ಲಾಭ ಪಡೆಯಲಾಯಿತು. ಇಂತಹ ಉಪಯೋಗವನ್ನು ಅಲೆಮಾರಿಗಳು ಕಂಡುಕೊಂಡಿದ್ದಾರೆ. ತಮ್ಮ ಒಡನಾಡಿಗಳಾಗಿ ನೋಡಿ ಕೊಂಡಿದ್ದಾರೆ. ಪಶುಸಂಪತ್ತಿನಿಂದ ಗಂಜಿಯನ್ನು ಕಂಡುಕೊಳ್ಳುತ್ತಿದ್ದಾರೆ. ಇವು ಒಂದು ಕಡೆ ತಮ್ಮ ವೃತ್ತಿಗಾಗಿ ಆಸರೆಯಾದರೆ, ಮತ್ತೊಂದು ಕಡೆ ಆಹಾರಗಳಾಗಿವೆ. ಅಲೆಮಾರಿಗಳ ಅಲೆದಾಟದ ಬದುಕಿನಲ್ಲಿ ಸಾಮಾನು ಸಾಗಿಸುವ ಕೆಲಸ ಮಾಡುತ್ತಿವೆ. ಪಶುಸಂಪತ್ತನ್ನು ಆಸಕ್ತಿಯಿಂದ ಬೆಳೆಸಿಕೊಂಡು ತಮ್ಮದೆ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅಲೆಮಾರಿ ಸ್ತ್ರೀಪುರುಷರು ಹೇಗೆ ತೊಡಗಿಸಿ ಕೊಂಡಿದ್ದಾರೆ ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

ಪಶುಸಂಗೋಪನೆಯಲ್ಲಿ ಲಿಂಗಸಂಬಂಧ

ಸಮುದಾಯ	ಕಸುಬು	ಪುರುಷ	ಮಹಿಳೆ
ಹೆಳವರು	ಪೋಷಣೆ	ವೃತ್ತಿಯಿಂದ ಬಂದಂತಹ ಪ್ರಾಣಿಗಳನ್ನು ಮೇಯಿಸುವುದು.	ಇದೆ ಕೆಲಸದಲ್ಲಿ ಭಾಗಿಯಾಗು-ವುದು
		ಉಣ್ಣೆ ಕತ್ತರಿಸುವಿಕೆ, ಹಾಲು ಕರೆಯುವಿಕೆ	ಕೂಡಿಡುವಿಕೆ
		ಮೇವು ಇದ್ದ ಜಾಗದಲ್ಲಿ ಬೀಡುಬಿಡುವುದು	ಮೇವನ್ನು ಕಾಯುವುದು
		ಕಣ ಮತ್ತು ಹೊಲಗದ್ದೆಗಳಿಂದ ಮೇವನ್ನು ಬೇಡಿ ತರುವುದು.	ತಂದ ಮೇವನ್ನು ತುಂಡಾಗಿ ಕತ್ತರಿಸಿ ಪಶುಗಳಿಗೆ ಹಾಕುವುದು.
		ಮರದ ಟೊಂಗೆ ತರುವುದು	ತಂದ ಟೊಂಗೆ ಕುರಿ, ಮೇಕೆ ಮರಿಗಳಿಗೆ ತಿನ್ನಿಸುವುದು, ಉಳಿದ ಟೊಂಗೆಯನ್ನು ಉರುವಲು ಮಾಡಲು ಒಣಗಿಸುವುದು.

ನೀರು ತರುವುದು.	ತಂದ ನೀರನ್ನು ಮೇಕೆ ಮತ್ತು ದನಗಳಿಗೆ ಕುಡಿಸುವುದು.
ಕಾಯಿಲೆ ಬಂದಾಗ ಔಷಧಿಗಳನ್ನು ತಯಾರಿಸಿಕೊಟ್ಟು ವಿಧಾನಗಳ ಮೂಲಕ ಹಾಕಲು ತಿಳಿಸುವುದು.	ವಿಧಾನಗಳಂತೆ ಔಷಧಿಯನ್ನು ಕುಡಿಸುವುದು ಮತ್ತು ಲೇಪಿಸುವುದು.
ಕಾಳಜಿವಹಿಸುವುದು.	ಕಾಳಜಿ ವಹಿಸುವುದು.

ಆ. ಕೂಲಿಯಲ್ಲಿ ಲಿಂಗಸಂಬಂಧ

ಮನುಷ್ಯನ ಎಲ್ಲಾ ಚಟುವಟಿಕೆಗಳಿಗೆ ಆಹಾರ ಬೇಕೆಬೇಕು. ಅದನ್ನು ಪಡೆಯಲು ಒಂದಿಲ್ಲೊಂದು ವೃತ್ತಿಯನ್ನು ಮಾಡಬೇಕಾಗಿದೆ. ಆಹಾರ ಪಡೆಯಲು "ದೈಹಿಕ ಮತ್ತು ಮಾನಸಿಕ ಶ್ರಮವನ್ನು ಯಾವುದೆ ಒಂದು ವೃತ್ತಿಯಲ್ಲಿ ವಿನಿಯೋಗಿಸಿ ಪ್ರತಿಫಲವಾಗಿ ಪಡೆಯುವ ಸಂಭಾವನೆ 'ಕೂಲಿ'ಯಾಗಿದೆ".

ಕೂಲಿಯಲ್ಲಿ ಎರಡು ರೀತಿಯಾಗಿ ನೋಡಬಹುದು. ಮೊದಲನೆಯದು ಕೃಷಿ ಕೂಲಿಯಾದರೆ ಎರಡನೆಯದು ಸಾಮಾನ್ಯ ಕೆಲಸವಾದ ಕಟ್ಟಡ, ಭೂಮಿ ಆಗೆಯುವ ಕೆಲಸವಾಗಿರುತ್ತದೆ. ಕೃಷಿಯಲ್ಲಿ ಊಳುವುದು, ಬಿತ್ತುವುದು, ನೀರುಹಾಯಿಸುವುದು, ಕಳೆಕಿಳುವುದು, ಬೆಳೆಬಂದ ಮೇಲೆ ಕೋಯಲು ಮಾಡುವುದು ಇತ್ಯಾದಿಯಾದರೆ. ಇತರೆ ಕೆಲಸವಾದ ಕಟ್ಟಡ ಕೆಲಸದಲ್ಲಿ ನೀರು ಸಂಗ್ರಹಿಸುವುದು, ಕಲ್ಲುಹೊತ್ತುವುದು, ಮಣ್ಣು ಕಲೆಸುವುದು, ಗಾರೆಯನ್ನು ನೀಡುವುದು, ಕಬ್ಬಿಣ ಬಾಗಿಸುವುದು ಹೀಗೆ ಇನ್ನೂ ಅನೇಕ ಕೆಲಸಗಳಿರುತ್ತವೆ. ಅಲೆಮಾರಿ ಸಮುದಾಯಗಳು ನಂಬಿಬಂದ ಕಸುಬುಗಳು ಅವರ ಭವಿಷ್ಯಕ್ಕೆ ಬಂಗಾರವಾಗುವುದಿರಲಿ ಗೌರವವನ್ನು ಕೊಟ್ಟಿಲ್ಲ. ಕುಲಕಸುಬುಗಳಿಂದ ಆಹಾರ ದೊರೆಯದಿದ್ದಾಗ ಅನಿವಾರ್ಯವಾಗಿ ಕೂಲಿಯಂತಹ ಕೆಲಸಗಳಿಗೆ ಮಾರುಹೋಗಬೇಕಾಗುತ್ತದೆ. ಅಲೆಮಾರಿ ಕೂಲಿ ಕೆಲಸದಲ್ಲಿ ಹೇಗೆ ಸಂಬಂಧಗಳನ್ನು ಸೃಜಿಸುತ್ತಾರೆಂಬುದನ್ನು ಈ ಕೆಳಗಿನಂತೆ ನೋಡಬಹುದು.

ಕೂಲಿ ಕೆಲಸಗಳಲ್ಲಿ ಲಿಂಗಸಂಬಂಧ

ಸಮುದಾಯ	ಕಸುಬು	ಪುರುಷ	ಮಹಿಳೆ
ಸಿಂಧೋಳ್ಳು	ಕೃಷಿಕೂಲಿ,	ಹೊಲ ಉಳುಮೆ	ಕಸ ಆರಿಸುವುದು ಬಿತ್ತುವುದು.
ಹಕ್ಕಿ-ಪಿಕ್ಕಿ	ಕಟ್ಟಡ,	ಎಡೆ ಹೊಡೆಯುವುದು	ಸಹಾಯಕರಾಗುವುದು.
ರಾಜಗೊಂಡರು	ಇತರೆ	ಗೊಬ್ಬರ ಮತ್ತು ಔಷಧಿ ಸಿಂಪಡಣೆ	ಜೊತೆಯಲ್ಲಿ ಭಾಗಿಯಾಗುವುದು
ಜೋಗಿಯರು	ಕೆಲಸಗಳು	ಗದ್ದೆ ತುಳಿಯುವುದು	ಕಣವಿ ಕಟ್ಟುವುದು.
ಸಿಕ್ಕಲಿಗಾರರು	ಮಾಡುವ-	ನೀರು ಹಾಯಿಸುವುದು	ಎಂಡೆ ಮುರಿಯುವುದು
ಹೆಳವರು	ವರಾಗಿದ್ದಾರೆ	ಭತ್ತದ ಸಸಿ ಕೊಡುವುದು	ನಾಟಿ ಮಾಡುವುದು
ದೊಂಬರು		ಕೋಯ್ಲು ಮಾಡುವುದು	ಕೋಯ್ಲು ಮಾಡುವುದು

ಶಿಳ್ಳೇಕ್ಯಾತರು	ಬಡಿಯುವುದು	ತೂರುವುದು, ರಾಶಿಮಾಡುವುದು
ಬುಡ್ಗಜಂಗಮ್	ಶೇಂಗಾಬಳ್ಳಿ ಮಂದೆ ಹಾಕುವುದು ಮತ್ತು ಕೂಡಿಡುವುದು.	ಶೇಂಗಾ ಕೀಳುವುದು ಇತ್ಯಾದಿ
ಅಡವಿಚೆಂಚು	ಎಂಡೆ ಕೊಡುವುದು	ಎಂಡೆ ಹೋರುವುದು
ಸುಡುಗಾಡು ಸಿದ್ಧರು	ನೀರು ಸಂಗ್ರಹಿಸುವುದು	ನೀರನ್ನು ಕಟ್ಟಡಗಳಿಗೆ ಸಿಂಪಡಿಸುವುದು, ಸುರಿಯುವುದು
ದಕ್ಕಲಿಗರು		
ಗೋಸಂಗಿ	ಸಿಮೆಂಟ್ ಕಲೆಸುವುದು	ಸಿಮೆಟ್ ಹೋರುವುದು
	ಮಣ್ಣುರಾಡಿ ಮಾಡುವುದು	ಕೆಸರು ಹೋರುವುದು
	ಕಲ್ಲು ಡ್ರೆಸ್ಸಿಂಗ್ ಮಾಡುವುದು	ಕಲ್ಲು ಹೋರುವುದು
	ಕಬ್ಬಿಣ ಬಗ್ಗಿಸಿ ಆಕಾರದಲ್ಲಿ ತರುವವಂತೆ ಕತ್ತರಿಸುವುದು.	ಕತ್ತರಿಸಿದ ಕಬ್ಬಿಣ ಹೊತ್ತುಯ್ದು ಕಟ್ಟಡ ಕೆಲಸಗಾರರಿಗೆ ತಲುಪಿಸುವುದು.

೩.೪.೨. ಲಿಂಗಸಂಬಂಧಗಳ ಸಾಮಾಜಿಕರಣದ ಪ್ರಭಾವ

ಮಗು ಜನಿಸಿದ ಕೂಡಲೆ ಮಾಂಸದ ಮುದ್ದೆಯಂತಿರುತ್ತಾನೆ. ಈ ಮುದ್ದೆಯನ್ನು ಬೆಳೆಸುವ ಕ್ರಮದಿಂದಾಗಿ ಮತ್ತು ಮಗುವಿನ ಕ್ರಿಯಾ ಚಟುವಟಿಕೆಗಳಿಗೆ ಸಮಾಜ ನೀಡುವ ದೀಕ್ಷೆಯಿಂದ ರೂಪಾಂತರ ಪಡೆದು ಜೈವಿಕತೆಯಿಂದ ಸಾಮಾಜಿಕ ಜೀವಿಯಾಗಿ ಹೊರಹೊಮ್ಮುತ್ತಾನೆ. ಹೀಗಾಗಿ ಮಾನವರ ನಡವಳಿಕೆಯನ್ನು ಗುರುತಿಸುವುದು ಸಮಾಜವೆ ಹೊರತು, ಜೈವಿಕತೆಯಲ್ಲ ಆ ಪರಿಣಾಮದಿಂದಾಗಿ ಬೆಳೆಸುವ ಕ್ರಮವೂ ಭಿನ್ನವಾಗಿರುವುದರಿಂದ ಮುಂದೆ ತಾರತಮ್ಯವೆಂಬ ಹಣೆಪಟ್ಟಿಕಟ್ಟಿಕೊಂಡು ಬೆಳೆಯುತ್ತದೆ. ಹಾಗಂತ ಮಗುವನ್ನು ಅದರ ಪಾಡಿಗೆ ಅದನ್ನು ಬಿಡುವುದು ತಪ್ಪಾಗುತ್ತದೆ. ಬೆಳಸಲೆ ಬೇಕಾಗುವುದು. ಈ ಕ್ರಿಯೆಯನ್ನು ಸಮಾಜಶಾಸ್ತ್ರದಲ್ಲಿ ಸಾಮಾಜೀಕರಣ ಎನ್ನುತ್ತಾರೆ.

ಇಲ್ಲಿ ವಿಕಾಸಕ್ಕೆ ಜೈವಿಕ ಅಂಶಗಳು ಎಷ್ಟು ಮಹತ್ವವೂ ಅಷ್ಟೆ ಮಹತ್ವದ ಪರಿಸರದ ಅಂಶಗಳಾಗಿವೆ. ಇಂತದರಿಂದ ಸ್ತ್ರೀ-ಪುರುಷರೆಂಬ ಕಲ್ಪನೆ ಬರುತ್ತದೆ. ಆದರೆ ಈ ಹಂತದಲ್ಲಿಬೆಳೆಸುವ ಕ್ರಮವೂ ಬೇರೊಂದು ರೀತಿಯಾಗಿ ಮಾರ್ಪಡಾಗುತ್ತದೆ. ಸ್ತ್ರೀಯರು ಹೀಗೆ ಇರಬೇಕು? ಪುರುಷರನು ಇದೆ ರೀತಿಯಲ್ಲಿರಬೇಕು? ಅವರದೆ ಕರ್ತವ್ಯಗಳನ್ನು ಅವರೆ ನಿರ್ವಹಿಸಬೇಕು? ಎಂಬುದು ಸ್ವಾರ್ಥಿಗಳ ದಾಹತೆಯ ನೀತಿಯೆ ಹೊರತು ಜೈವಿಕ ನೀತಿಯಲ್ಲ. ಹುಟ್ಟಿದ ಮಾನವರ್‍ಯಾರು ಮೇಲ್ಲಲ್ಲ ಮತ್ತು ಕೀಳಲ್ಲ ಸಮಾನರೆ ಆಗಿರುತ್ತಾರೆ. ಇದೊಂದು ಸಂಕೀರ್ಣ ಸಕ್ರಿಯೆಯಾಗಿದೆ. ಜೈವಿಕ ಜೀವಿಯಾಗಿದ್ದ ಮಾನವನು ಹಂತ ಹಂತವಾಗಿ ಸಾಮಾಜಿಕ ಜೀವಿಯಾಗಿ ಪ್ರಭಾವಬಿರುತ್ತಾನೆ. "ಸಮಾಜದ ಪ್ರತಿಯೊಬ್ಬ ವ್ಯಕ್ತಿಯು ಸಮಾಜದ ನಿಯಮಗಳನುಸಾರವಾಗಿ ತನ್ನ ನಡತೆಯನ್ನು ರೂಢಿಸಿಕೊಳ್ಳುವ ಪ್ರಕ್ರಿಯೆಯೆ ಸಾಮಾಜೀಕರಣ ವಾಗಿದೆ" ಎಂದು ಆರ್ಗ್ಬರ್ನ್ ಮತ್ತು ನಿಮ್‌ಕಾಫ್ ಅಭಿಪ್ರಾಯವಾಗಿದೆ. "ಸಾಮಜೀಕರಣವು ವ್ಯಕ್ತಿಗೆ ಸಾಮಾಜಿಕ

ಪಾತ್ರಗಳನ್ನು ನಿರ್ವಹಿಸಲು ನೀಡುವ ಶಿಕ್ಷಣದ ಪ್ರಕ್ರಿಯೇ ಆಗಿದೆ. ಈ ಪ್ರಕ್ರಿಯೆಯ ಮೂಲಕ ವ್ಯಕ್ತಿಗಳು ಆಗಲೆ ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳು ಹಾಗೂ ಸಂಸ್ಕೃತಿಯನ್ನು ಗ್ರಹಿಸುವರು ಮತ್ತು ಸಾಂಪದಿಸುವರು"[37] ಎಂದು ಹ್ಯಾರಿ ಎಂ. ಜಾನ್ಸನ್ ವಾಖ್ಯಾನಿಸುತ್ತಾರೆ.

೩.೪.೨.೧. ಜೈವಿಕತೆಯಿಂದ ಸಾಮಾಜಿಕತೆಗೆ ಹಸ್ತಾಂತರಾಗುವ ಅಂಶಗಳು

ಜೈವಿಕ ಕ್ರಿಯೆಯಿಂದ ಜನ್ಮತಾಳಿದ ಮಗುವಿಗೆ ಸಂಸ್ಕಾರದ ಲೇಪನ ಯಾವಾಗ ಕೊಡಲಾಗುತ್ತದೆಯೊ ಅಂದಿನಿಂದ ಜೈವಿಕ ಕ್ರಿಯೆಯು ರೂಪಾಂತರಗೊಳ್ಳುತ್ತದೆ. ಆ ಮಗುವಿನಲ್ಲಿ ಸಂಸ್ಕಾರದ ನೀತಿ-ನಿತಿಯಮಗಳನ್ನು ಹೇರಲಾಗುತ್ತದೆ. ಹೀಗೆ ಹೇರಿಸಿಕೊಂಡ ಮಗು ತನ್ನ ತಾಯಿಯ ಬಳಿಯಲ್ಲಿ ಬೆಳೆಯುತ್ತಾ ಅವರುಗಳ ಚಲನವಲನಗಳನ್ನು ವೀಕ್ಷಿಸುತ್ತದೆ. ಅದನ್ನೆ ಅನುಕರಿಸುತ್ತಾ ಬೇರೆಯವರೊಂದಿಗೆ ಬೇರೆಯುತ್ತಾ ಹಲವಾರು ಸಂದರ್ಭವನ್ನು ನೋಡುತ್ತದೆ. ತನ್ನ ಸಂಬಂಧಿಕರು ಆ ಮಗುವಿಗೆ ಕೆಲವೊಂದು ನಡತೆಗಳನ್ನು ತಿಳಿಸುತ್ತಾರೆ. ತಂದೆ-ತಾಯಿ ಮತ್ತು ಮನೆಯ ಇತರ ಸದಸ್ಯರಂತು ನೀನು ಹೀಗೆ ಇರು, ಇಂತವರ ಕೂಡ ಆಟವಾಡು, ಇಂತಹ ಉಡುಪನ್ನೆ ಧರಿಸು, ಹೀಗೆ ಅಲಂಕಾರ ಮಾಡಿಕೊ, ನೀನು ಹುಡುಗ ಹುಡುಗರ ಜೊತೆಯಲ್ಲಿ ಯಾವಾಗಲೂ ಆಟವಾಡು. ನೀನು ಹುಡುಗಿ ಹುಡುಗಿಯರ ಜೊತೆ ಇರಬೇಕು ಆಟವಾಡಬೇಕು. ಇಂತಹ ನೀತಿ-ನಿಯಮಗಳನ್ನು ಕೇಳಿಸಿಕೊಂಡ ಮಗುವು ಅದರಂತೆಯೆ ಬೆಳೆಯುತ್ತದೆ. ಹುಡುಗಿ ಋತುಮತಿಯಾದ ಮೇಲಂತೂ ಹೊರಗಡೆ ಬರುವುದೆ ಇಲ್ಲ. ಯಾವಾಗಲೂ ಅಮ್ಮನ ಮಡಿಲಲ್ಲಿಯೆ ಇರುತ್ತಾಳೆ. ಹೀಗೆ ಹುಡುಗ ಹುಡುಗಿಯರಿಬ್ಬರಿಗೂ ದೊಡ್ಡವರ ಆಶೆಯಂತೆ ಬೆಳೆದು ಮುಂದೆ ಸಾಮಾಜಿಕ ಜೀವಿಯಾಗಿ ಜೀವಿಸುತ್ತಾರೆ. ಆದರೆ ಅಲೆಮಾರಿಗಳು ಇದಕ್ಕೆ ಭಿನ್ನವಾದ ನೀಲುವುಗಳಿಂದ ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಸಮಾನತೆಯಿಂದಲೆ ಊಟ, ಬಟ್ಟೆ, ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸಮಾನ ದುಡಿಮೆ ಸಮಾನ ಅನುಸಂಧಾನದೊಂದಿಗೆ ಸಹಜತೆಯಿಂದ ಇರುವರು.

೩.೪.೩. ವ್ಯಕ್ತಿತ್ವ ವಿಕಾಸದಲ್ಲಿ ಸಮುದಾಯದ ಪ್ರೇರಣೆ

ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಜೈವಿಕ ಅಂಶಗಳು ಮುಖ್ಯವಾಗಿದ್ದರೂ ಅಷ್ಟೆ ಮುಖ್ಯವಾಗಿ ಪರಿಸರದ ಅಂಶಗಳೂ ಮಹತ್ವದ್ದಾಗಿವೆ. ಒಬ್ಬ ಸುಸಂಸ್ಕೃತ ಮನೆತನದ ಹುಡುಗನನ್ನು ಹೊತ್ತೊಯ್ದು ಕಟುಕನ ಮನೆಯಲ್ಲಿ ಬೆಳೆಸಿದರೆ ಆ ಮಗುವು ಸುಸಂಸ್ಕೃತ ಮನೆತನದ ನಿಯಮಗಳ ಬದಲು ಕಟುಕನ ಮನೆಯ ಮತ್ತು ಅವನದೆ ನಿಯಮಗಳನ್ನು ಕಲಿಯುತ್ತಾನೆ. ಕಾರಣ ಬೆಳೆಯುವ ಮಗುವಿಗೆ ಪರಿಸರದ ಅಂಶಗಳೂ ತುಂಬ ಪ್ರಭಾವಿಯಾಗಿದೆ. ಇಂತಹ ಪಾತ್ರಗಳನ್ನು ನೀಡುವುದು ಸಮುದಾಯ. ಪರಿಸರಕ್ಕೆ ಸಂಬಂಧಿಸಿದಂತೆ ತನ್ನ ನಡತೆಯನ್ನು ಬೆಳೆಸಿಕೊಳ್ಳುತ್ತದೆ. ಸಮುದಾಯವು ಜೀವನಕ್ರಮವನ್ನು ಕಲಿಸುವುದರ ಜೊತೆಗೆ ಅವರುಗಳ ಮುಂದುವರಿಕೆಗೆ ಅವಕಾಶ ಮಾಡಿಕೊಡುತ್ತದೆ. ಜೀವನವನ್ನು ಹೇಗೆ ಶಿಸ್ತಿನಿಂದ ಕಲಿಸಬೇಕೆಂಬುದನ್ನು ತಿಳಿಸುತ್ತದೆ. ಹೀಗೆ ತಿಳಿಸಿದ ಶಿಸ್ತೆ ಮುಂದೆ ಸ್ತ್ರೀಪುರುಷರೆಂಬ ಭಿನ್ನ ಗುಣಗಳನ್ನು ಅಳವಡಿಸಿಕೊಂಡು ಬರುತ್ತಾರೆ. ಆದುದರಿಂದ ಬೆಳೆಸುವ ಕ್ರಿಯೆಯು ಮುಖ್ಯವಾಗುತ್ತದೆ. ಅಲೆಮಾರಿಗಳು ತಮ್ಮ ಮಕ್ಕಳನ್ನು ಬೆಳೆಸುವ ಕ್ರಮಭಿನ್ನವಾಗಿದ್ದು ಲಿಂಗತಾರತಮ್ಯತೆ ಸುಳಿಯುವುದಿಲ್ಲ. ಸಮುದಾಯದ

ಪ್ರೇರಣೆಯು ಲಿಂಗಗಳ ಮೇಲೆ ಯಾವುದೇ ರೀತಿಯ ಪ್ರಭಾವ ಬೀರಬಲ್ಲವು ಎಂಬುದನ್ನು ಅಲೆಮಾರಿಗಳ ಮತ್ತು ಇತರೆ ಸಮುದಾಯಗಳ ಸಂಬಂಧಗಳನ್ನು ತೌಲನಿಕ ಮಾಡಿದಾಗ ತಿಳಿಯುತ್ತದೆ.

೩.೪.೩.೧. ಸಾಮಜೀಕರಣದ ಕೌಶಲ್ಯ ಮತ್ತು ಪಾತ್ರಗಳ ವರ್ಗ

ಪರಂಪರೆಯಿಂದ ಬಂದಿರುವ ಸಮುದಾಯಗಳು ಅವರದೆ ಆದ ಕೆಲವೊಂದು ಕೌಶಲ್ಯಗಳು ಅಂಟಿಕೊಂಡು ಬಂದಿರುತ್ತವೆ. ಕೌಶಲ್ಯಗಳಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಸ್ತ್ರೀಯರು ಅಳವಡಿಸಿಕೊಂಡು ಬಂದ ಕೌಶಲ್ಯಗಳೂ ಮತ್ತು ಪುರುಷರು ಅಳವಡಿಸಿಕೊಂಡು ಬಂದ ಕೌಶಲ್ಯಗಳೆಂದು. ಉದಾ: ವೈವಿಧ್ಯಮಯ ಉಪಕರಣದ ಕೌಶಲ್ಯದಲ್ಲಿ ನಿರತವಾಗಿ ಸಿಕ್ಕಲಿಗ ಸಮುದಾಯವು ಶ್ರಮವಿಭಜನೆ ಆಧಾರವಾಗಿ ಕಲೆಯನ್ನು ಕಲಿಸುತ್ತದೆ. ಬುಡ್ಗಜಂಗಮ್ ಸಮುದಾಯವು ಹಾಡುಗಾರಿಕೆ, ನಟನೆ, ಅಭಿನಯ, ವಾದ್ಯಗಳನ್ನು ನುಡಿಸುವಿಕೆ ಇತ್ಯಾದಿಗಳೆಲ್ಲವನ್ನು ಪುರುಷರಿಗೆ ಕಲಿಸಲಾಗುತ್ತದೆ. ಮಹಿಳೆಯರಿಗೆ ಕೌದಿ ಹೊಲೆಯುವುದು, ಹಚ್ಚೆ ಹಾಕುವುದು, ಕಣಿಹೇಳುವುದು, ತೋರಣಗಳನ್ನು ಇತರೆ ಕೌಶಲ್ಯಗಳನ್ನು ಪುರುಷರು ಹೇಳಿಕೊಡುತ್ತಾರೆ ಎನ್ನುವುದಕ್ಕಿಂತ ನೋಡಿಕಲಿಯುತ್ತಾರೆ ಎನ್ನುವುದೆ ಸೂಕ್ತವಾಗಿದೆ. ಇಲ್ಲಿ ಶ್ರಮವಿಭಜನೆಯೆ ಹೊರತು ಲಿಂಗತಾರತಮ್ಯವಿಲ್ಲ.

ಪಾತ್ರಗಳನ್ನು ಸಮುದಾಯದಲ್ಲಿ ಹುಟ್ಟಿದ ಮಗುವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆ ವರ್ಗಾವಣೆ ಮಾಡುತ್ತಲೆ ಇರುತ್ತದೆ. ತಪ್ಪಾಗಿ ಗ್ರಹಿಸಿ ತಾರತಮ್ಯ ಹುಟ್ಟಿ ಹಾಕದೆ ಸಮಾನತೆಯಿಂದ ಬೆಳೆಸಿದರೆ ಸಮಾಜದಲ್ಲಿ ಯಾವ ತರಹದ ಅಸಮಾನತೆಯು ಕಾಣಿಸದು. ಈ ವಿಷಯದಲ್ಲಿ ಅಲೆಮಾರಿಗಳು ಒಂದು ಹೆಜ್ಜೆ ಮುಂದಿದ್ದಾರೆ.

೩.೪.೩.೨. ಮೌಲ್ಯ, ಶಿಸ್ತು ಮತ್ತು ಆಕಾಂಕ್ಷೆಗೆ ಒಲವು

ಸಮುದಾಯವು ರೂಢಿಸಿಕೊಂಡು ಮುಂದುವರಿಸಿಕೊಂಡು ಬಂದ ಮೌಲ್ಯಗಳನ್ನು ಸಂರಕ್ಷಿಸುವ ಮತ್ತು ಕಾಲಬದಲಾದಂತೆ ರೂಪಾಂತರಿಸುವುದರ ಜೊತೆಗೆ ಸಮುದಾಯವು ಸದಸ್ಯರುಗಳಿಗೆ ಶಿಸ್ತನ್ನು ಕಲಿಸಿ ಕೊಡುತ್ತದೆ. ಹಾಗೂ ಅವರ ಆಸೆ-ಆಕಾಂಕ್ಷೆಗಳನ್ನು ತಿಳಿದುಕೊಂಡು ಅವರಿಗೆ ಸ್ಪಂದಿಸುತ್ತದೆ. ಸ್ತ್ರೀ-ಪುರುಷರಿಬ್ಬರಿಗೂ ಸಮಾನತೆ, ಸಹಕಾರ, ಸ್ವಾತಂತ್ರ ಎಂಬ ಮೌಲ್ಯಗಳನ್ನು ಸಮವಾಗಿಯೆ ಈ ಸಮುದಾಯದಲ್ಲಿ ಕಾಣಬಹುದಾಗಿದೆ. ಇಂತಹ ಮೌಲ್ಯಗಳಿಂದ ಸ್ತ್ರೀ-ಪುರುಷರಿಬ್ಬರೂ ತಮ್ಮ ಸಂಬಂಧಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವರು.

೩.೪.೩.೩. ಭವಿಷ್ಯ ರೂಪಿಸುವ ಸಂಸ್ಕೃತಿಯ ಚಲನೆ

ಸಮುದಾಯವು ತಮ್ಮ ಸದಸ್ಯರಿಗೆ ಜೀವನೋಪಾಯಕ್ಕಾಗಿ ತಲತಲಾಂತರದಿಂದಲೂ ಮಾಡಿಕೊಂಡು ಬಂದ ಕುಲಕಸಬನ್ನು ಕಲಿಸುತ್ತದೆ. ಸಂದರ್ಭ ಎದುರುದಾಗ ಆ ಕಸುಬುಗಳನ್ನು ಬಿಡಬೇಕೆ ಅಥವಾ ಮುಂದುವರಿಸಬೇಕೆಂಬುದನ್ನು ಎಚ್ಚರವಹಿಸಿ ಸೂಕ್ತವಾದ ರೂಪರೇಷಗಳನ್ನು ಕೊಟ್ಟು ನಿರ್ಧಾರ ಕೈಗೊಳ್ಳುತ್ತಾರೆ. ಆದಷ್ಟು ಅಲೆಮಾರಿಗಳು ತಮ್ಮ ಕಸುಬನ್ನೆ ಮುಂದುವರಿಸಲು ಇಷ್ಟ ಪಡುವರು ಒಬ್ಬಿಬ್ಬರು ಮಾತ್ರ ಬೇರೆ ವೃತ್ತಿಗಳನ್ನು ಇಷ್ಟ ಪಡುವರು.

ಸಮುದಾಯವು ರೂಢಿಸಿಕೊಂಡು ಬಂದಿರುವ ಸಂಸ್ಕೃತಿಯನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿಕೊಂಡು ಬರುತ್ತಿದೆ. ಆ ಮೂಲಕವಾಗಿ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹಸ್ತಾಂತರಿಸುತ್ತದೆ. ಹುಟ್ಟಿದ ಮಗುವು ಸಮಾಜವನ್ನು ಪ್ರವೇಶಿಸಿದ ಕೂಡಲೆ ಕ್ರಮ ಕ್ರಮವಾಗಿ ಬೆಳೆಯಲು ಅವಕಾಶ ಮಾಡಿಕೊಡುತ್ತದೆ. ಆದ್ದರಿಂದ ಸ್ತ್ರೀ-ಪುರುಷರಿಬ್ಬರನ್ನು ಬೆಳೆಸುವ ಕ್ರಮವು ಭಿನ್ನವಾದುದರಿಂದ ತಾರತಮ್ಯ ಮತ್ತು ಲಿಂಗಸಂಬಂಧದಲ್ಲಿ ವ್ಯತ್ಯಾಸ ಕಾಣುತ್ತೇವೆ. ಅಲೆಮಾರಿಗಳು ಬೆಳೆಸುವ ಕ್ರಮವು ಬೇರೆ. ಬೇರೆಯಾದರು ಸಂಬಂಧ ಬೆಸೆಯುವ ಕ್ರಮವು ಸಮಾನದೃಷ್ಟಿಯಾಗಿದ್ದು ನಾವೆಲ್ಲ ಒಂದೆ ಎಂಬ ಭಾವನೆ ಮೂಡುವಂತೆ ಬೆಳೆಸಲಾಗುತ್ತದೆ. ಹಾಗೂ ಕೆಲಸ ಕಾರ್ಯಗಳಲ್ಲಿ ಸಹಜವಾಗಿಯೆ ಇಬ್ಬರಿಗೂ ಅಂಟಿ ಕೊಂಡಿರುವುದರಿಂದ ಯಾವುದೆ ಕಾರಣಕ್ಕೂ ತಾರತಮ್ಯವೆಂದು ತಿಳಿಯಲಾರರು. ಇಷ್ಟಕ್ಕೂ ಇವರಿಬ್ಬರು ಮಾಡಿದರೆ ಕೆಲಸಕಾರ್ಯದಿಂದ ಹೊಟ್ಟೆತುಂಬುವುದು. ಆದುದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ತಾರತಮ್ಯತೆಯ ಬಗ್ಗೆ ಈ ಸಮುದಾಯವನ್ನು ಮಾತನಾಡಿಸಿದಾಗ "ಅಂತ ದೊಡ್ಡ ದೇನಲ್ಲ ಬಿಡಿ ನಮ್ಮ ಕೆಲಸ ನಾವು ಮಾಡುತ್ತೇವೆ ಇಬ್ಬರೂ ಒಂದಲ್ಲ ಒಂದು ಕೆಲಸದಲ್ಲಿ ತೊಡಗುತ್ತ ಸಮಾನತೆಯಿಂದ ಬಾಳುತ್ತಿದ್ದೇವೆ ಎಲ್ಲಾ ಕೆಲಸಗಳಲ್ಲಿ ಭಾಗಿತ್ವವನ್ನು ಸಮಾನತೆಯಿಂದ ಸ್ವೀಕರಿಸು ತ್ತಿದ್ದೇವೆಂದು"[38] ಹೇಳುತ್ತಾರೆ.

ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಮಕ್ಕಳನ್ನು ಸಾಮಾಜೀಕರಣಗೊಳಿಸುವಲ್ಲಿ ಕೊಡುವ ಮಾರ್ಗದರ್ಶನ, ಬೆಳೆಸುವ ಕ್ರಿಯೆಗಳು ಅತಿ ಮುಖ್ಯವಾಗಿರುತ್ತದೆ. ಅವು ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿ ಅದರಂತೆ ನಡೆಯಲು ಪ್ರೇರೇಪಿಸುತ್ತವೆ. ಪರಿಣಾಮ ಬೇರೆರೀತಿಯಾಗಿ ಸಮಾಜದಲ್ಲಿ ಹೊರೆಯಾಗುವುದು. ಆದ್ದರಿಂದ ಸಾಮಾಜೀಕರಣವು ಮಗುವಿನ ಮೇಲೆ ಪ್ರಭಾವ ಬೀರುವುದರಿಂದ ಅದನ್ನು ಅರ್ಥಮಾಡಿಕೊಂಡು ಬೆಳೆಸಬೇಕಾಗಿದೆ. ಅಲೆಮಾರಿಗಳಲ್ಲಿ ಸ್ತ್ರೀಪುರುಷರನ್ನು ಭೇದವಿಲ್ಲದೆ, ಎಲ್ಲಾ ವಿಷಯಗಳಲ್ಲಿ ಸಮಭಾಗಿತ್ವ ಹಾಗೂ ಸಹಜತೆಯ ಗುಣಗಳನ್ನು ಬೆಳೆಸುವುದರ ಜೊತೆಗೆ ತಮ್ಮ ಮುಂದಿನ ಪೀಳಿಗೆಗೂ ವರ್ಗಾಯಿಸಲಾಗುತ್ತದೆ. ಇದನ್ನು ಎಲ್ಲಾ ಸಮುದಾಯಗಳು ಅಳವಡಿಸಿಕೊಂಡರೆ ಸಮಾಜಕ್ಕೆ ಒಳಿತಾಗುವುದು.

೩.೫. ಅಲೆಮಾರಿಗಳ ವಾಸದ ನೆಲೆ ಮತ್ತು ಅಲೆದಾಟ

ವಾಸದ ನೆಲೆ ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲೊಂದು. ವಾಸದ ನೆಲೆಯು ಮಾನವನ ರಕ್ಷಣೆಯ ಮೊದಲ ಕೋಟೆ, ತನ್ನ ಮೂಲಭೂತ ಅವಶ್ಯಕತೆಯನ್ನು, ಕುಟುಂಬದ ವೈಯಕ್ತಿಕ ಕಾರ್ಯ ಗಳನ್ನು ಮನುಷ್ಯರು ಪೂರೈಸಿಕೊಳ್ಳುವ ತಾಣ, ವಾಸದ ನೆಲೆ ಅಥವಾ ಸೂರು ಆಗಿದೆ. ಅದು ಮಳೆ, "ಬಿಸಿಲು, ಚಳಿ, ಗಾಳಿ, ಪ್ರಾಣಿ-ಪಕ್ಷಿ, ಕೀಟಗಳಿಂದ ರಕ್ಷಿಸುವ ರಕ್ಷಿತ"[39] ಆಸರೆಯ ನೆಲೆಯಾಗಿದೆ. ಮಾನವರ ದೈಹಿಕ ಹಾಗೂ ಮಾನಸಿಕ ಆರೋಗ್ಯದಲ್ಲಿ ಕಾರ್ಯಕ್ಷಮತೆಗೆ ಸಾಮಾಜಿಕ ಪ್ರತಿಷ್ಠೆಗೆ ವಾಸದ ನೆಲೆಯೆ ಭೂಮಿಕೆಯಾಗಿದೆ.

ಅವರುಗಳ ಕ್ರಿಯಶೀಲತೆ ಸಂತೃಪ್ತಿಗಳಲ್ಲಿ ವಾಸದ ನೆಲೆಯ ಪಾಲು ಪ್ರಧಾನವಾದ್ದರಿಂದ ಅದು ಸುಖ-ದುಃಖಗಳ ಸಾಮಾಜಿಕ ಬಂಧನಗಳ ಸಾಮ್ರಾಜ್ಯವಾಗಿದೆ. ವಾಸದನೆಲೆಯು ಹಂಚಿನದಿರಲಿ,

ತಾರಸಿಯದಿರಲಿ, ಬಾಡಿಗೆಯದಿರಲಿ, ಗುಡಾರವಾಗಿರಲಿ, ಸ್ವಂತದಿರಲಿ, ಗುಡಿಸಲಾಗಿರಲಿ, ಮಾಳಿಗೆ ಮನೆಯಾಗಿರಲಿ ಇತರೆ ಯಾವುದೆ ವಿಧದ್ದಾಗಿರಲಿ ಅದು ನಮ್ಮ ತಲೆಕಾಯುವ ನೆಲೆಯಾಗಿದೆ. ನಮ್ಮಗಳ ಒಂದು ಅವಿಭಜ್ಯ ಅಂಗವಾಗಿರುತ್ತದೆ. ಬೆಳಗ್ಗೆಯಿಂದ ಹಿಡಿದು ಸಂಜೆಯವರೆಗೂ ದುಡಿಮೆಯಲ್ಲಿ ಹೊರಗಿರುವ ಮನುಷ್ಯ ಇರುಳಾಗುತ್ತಿದ್ದಂತೆ ನೆಲೆಯ ಕಡೆಗೆ ತನ್ನ ಕಾಲು ನಡೆದುಬರುತ್ತದೆ. ತನ್ನ ಪ್ರಯಾಣ ಸಂಚಗಿಸಿಯೂ ಅವನು ಕಡೆಗೆ ಮರುಳುವುದು ತನ್ನ ನೆಲೆಗೆ. ಇಂತಹ ನೆಲೆಯಲ್ಲಿ ಅವನ ಆಟ-ಪಾಠ, ಮನೋರಂಜನೆ, ನಲಿಯುವುದು, ಬಾಳಿನ ಸುಖ-ದುಃಖ ಎಲ್ಲವು ಬಿಚ್ಚಿಡುವ ಹಾಗೂ ಎಲ್ಲರನ್ನು ಒಟ್ಟಿಗೆ ಸೇರಿಸುವ ಕೇಂದ್ರಬಿಂದುವಾಗಿರುತ್ತದೆ. ಇಲ್ಲಿ ಸಂತೋಷ, ಸಮಾಧಾನ, ತೃಪ್ತಿಗಳಲ್ಲಿ ಬಂದಿಯಾಗಿ, ಹೊರಜಗತ್ತಿನಿಂದ ತಪ್ಪಿಸಿಕೊಂಡು, ಹೊರ ಜಗತ್ತಿನ ಬಾಹ್ಯ ಬದುಕಿನಿಂದ ವಿಮುಖನಾಗಿ, ಬಹಿರಂಗದ ಬಾಳಲ್ಲದ ಅಂತರಂಗದ ಭಾವನೆಗಳ ಬದುಕನ್ನು ನೀಡುವ ಈ ನೆಲೆ ಭೂಮಿಯ ಮೇಲಿನ ಸ್ವರ್ಗವಾಗಿದೆ. ವಾಸದ ನೆಲೆಯಲ್ಲಿ ರಕ್ತಸಂಬಂಧದ ಅನೇಕ ವ್ಯಕ್ತಿಗಳ ಕುಟುಂಬವಿರುತ್ತದೆ. ವಾಸದ ಮನೆಯಲ್ಲಿ ಗಂಡಸರು ಯಜಮಾನನಾಗಿ, ಗಂಡನಾಗಿ, ತಂದೆಯಾಗಿರುತ್ತಾನೆ. ಹೆಣ್ಣು ಯಜಮಾನಿಯಾಗಿ, ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ ಪಾತ್ರ ನಿರ್ವಹಿಸುವಂತೆ ಅಣಿ ಮಾಡಲಾಗುವುದು. ಇಂತಹ ನೆಲೆಯಲ್ಲಿ ಕೇವಲ ವ್ಯಕ್ತಿಗಳಿರುವುದಿಲ್ಲ. ತಲೆಮಾರಿಗಳಿರುತ್ತವೆ, ಮನುಷ್ಯನ ನಂಬಿಕೆ, ಆಚಾರ-ವಿಚಾರ, ಪರಂಪರೆ, ಪ್ರಗತಿಗಳು ಸಾಗಿ ಬಂದಿರುವುದರಿಂದ ತಲೆಮಾರುಗಳ ಮೂಲಕ ಸಂವಹನ ಸೃಷ್ಟಿಸುವ ಮಾನವನ ಸಂವಹನ ರಂಗವಾಗಿದೆ.

ಸಮಾಜದ ಒಡನಾಟವು ಆರಂಭವಾಗುವುದಾದರು ಇಲ್ಲಿಯೆ ಜೀವನದ ವಿವಿಧ ರಂಗಗಳ ಬಗ್ಗೆ ಮನುಷ್ಯನಿಗೆ ಹೇಳದೆ, ಕಲಿಸುವ ಗುರು. ಅದು ವ್ಯವಹಾರ, ವಿವೇಕವನ್ನು ರೂಪಿಸುವ ನಿತ್ಯಶಾಲೆ, ಪ್ರೀತಿ ವಿಶ್ವಾಸ ಕಷ್ಟಸುಖ, ಹಕ್ಕು ಹೊಣೆಗಳ ಮೊದಲ ಪರಿಚಯವಾಗುವುದು ಇಲ್ಲಿಯೆ. ಇಂತಹ ನೆಲೆಯಲ್ಲಿ ಶಿಸ್ತಿನ ಭೋದನೆ, ಚಾರಿತ್ರ್ಯದ ಕಲ್ಪನೆ, ಆದರ್ಶಗಳ ಅಂತಃಸ್ಮರಣೆ ತಾನಾಗಿ ಬರುತ್ತವೆ. ಇಲ್ಲಿ ಸಹನೆಯಿಂದ- ತಾಳ್ಮೆ, ಹಂಚಿಕೊಳ್ಳುವಿಕೆಯಿಂದ- ಔದಾರ್ಯ, ಗುರುತಿಸುವಿಕೆಯಿಂದ- ಗುರಿ, ಪ್ರಾಮಾಣಿಕದಿಂದ- ಸತ್ಯ, ಪ್ರೋತ್ಸಾಹದಿಂದ- ಆತ್ಮವಿಶ್ವಾಸ, ಹೊಗಳಿಕೆಯಿಂದ- ಮೆಚ್ಚುವಿಕೆ. ಭೇದ ಭಾವರಾಹಿತ್ಯದಿಂದ- ನ್ಯಾಯದ ಕಲ್ಪನೆ ಮೂಡಿಸುತ್ತದೆ. ನೆಲೆಯ ತಳಹದಿಯನ್ನು ಅನೋನ್ಯತೆ, ರಕ್ತಸಂಬಂಧಗಳ ಆಧಾರಗಳಿಂದ ಬೆಳಕನ್ನು ಕಂಡರೆ, ಅಂತಃಕರಣದ ಹಗ್ಗದಿಂದ ಪ್ರೀತಿ, ತೃಪ್ತಿ, ಮೌಲ್ಯಗಳನ್ನು ನಿರ್ಮಿಸಲಾಗುತ್ತದೆ. ಆದ್ದರಿಂದ ಅದು ಸುಲಭದಲ್ಲಿ ಒಡೆಯದು, ಮುರಿಯದು, ಕುಸಿಯದ ಜೀವನದಿಯಾಗಿದೆ.

ವಾಸ್ತವದ ಆತ್ಮೀಯವಾದ ವಾತವರಣ ಬೇರೆಡೆ ದೊರೆಯುವುದಿಲ್ಲ. ಅಲ್ಲಿ ಹೆಂಡತಿಯ ಆತ್ಮವಿಶ್ವಾಸಗಳ ಪ್ರೀತಿ, ಎಳೆಮಗುವಿನ ಅರ್ಥವಾಗದ ತೊದಲು ನುಡಿಗಳು, ರೋಚಕವೂ ಅದ್ಭುತವೂ ಆಗಿರುತ್ತವೆ. ಜೀವಿಗಳ ಜೀವ ಚಲನೆಯ ಸ್ಥಳವಾಗಿದ್ದ ನಿಮಿತ್ತ ಭೌತಿಕ ವಸ್ತುಗಳು ಒಂದಾಗಿದ್ದರು ಅದು ಜೀವಿಗಳಿಗೆ ಅತ್ಯಂತ ಅವಶ್ಯಕವಾದದ್ದು. ಈ ನೆಲೆಯಲ್ಲಿ ಮನಗಳೂ ಕೂಡಿರುವ ಬದುಕು ಸುಂದರ ಸರೋವರವಾಗುತ್ತದೆ. ಕೌಟುಂಬಿಕ ಹಂದರ ಚಿಗುರುಹೊಡೆಯುತ್ತವೆ. ಬದುಕು ರಕ್ತ

ಸಂಬಂಧದಿಂದ ಬೆಸೆದುಕೊಂಡಿದ್ದರು. ಒಳ್ಳೆಯ ಭಾವನೆಗಳಿದ್ದಲ್ಲಿ ಮಾತ್ರ ಅದು ಮನೆತನ ಎನಿಸಿಕೊಳ್ಳುತ್ತದೆ. ಮನಗಳೂ ಕೂಡಿದಾಗ ಅಂತಹ ನೆಲೆಯಲ್ಲಿ ಕುಟುಂಬದ ನೆಮ್ಮದಿ ಪ್ರೀತಿ, ಹಂಚಿಕೊಂಡು ತಿನ್ನುವ ಪದ್ಧತಿ ನೊಂದು ಬಂದವರಿಗೆ ಸ್ವಾಂತನ ನೀಡುವದರೊಂದಿಗೆ ಬೆರೆಯುವುದು, ಮೊದಲಾದವುಗಳು ಮನೆತನದಲ್ಲಿ ತನ್ನದೆ ಆದ ಇತಿಹಾಸ ರೂಪಗೊಳ್ಳುತ್ತದೆ.

ಈ ನೆಲೆಯು ಕೇವಲ ಮನುಷ್ಯನಿಗಷ್ಟೆ ಸೀಮಿತವಾಗಿಲ್ಲ. ಅದು ಜೀವಜಾಲದ ಎಲ್ಲಾ ಕೊಂಡಿಗಳಿಗೂ ಬೇಕು. ಹುಲಿ, ಸಿಂಹಗಳಿಗೆ - ಗುಹೆಯಾಗಿ, ಹಕ್ಕಿಗೆ - ಗೂಡಾಗಿ, ಮೊಸಳೆಗಳಿಗೆ- ಮೊಂಡು, ಕುದುರೆಗೆ-ಲಾಯ, ದನಗಳಿಗೆ - ಕೊಟ್ಟಿಗೆ, ಹಾವಿಗೆ - ಹುತ್ತ ಹೀಗೆ ಎಲ್ಲಾ ಜೀವಕ್ಕೂ ವೈವಿಧ್ಯಮಯ ವಾಸದ ನೆಲೆಗಳು ಬೇಕು. ಇದನ್ನರಿತ ಜಾನಪದ ವಿದ್ವಾಂಸರು "ಹೇಳಿಕೊಳ್ಳುವುದಕ್ಕೆ ಒಂದು ಊರು; ತಲೆ ಮೇಲೆ ಒಂದು ಸೂರು" ಎನ್ನುವುದು ಸೂಕ್ತ. ಮನುಷ್ಯ ಎಲ್ಲಿಯೆ ತಿರುಗಾಡಿಬಂದರು ತನ್ನದೆ ಒಂದು ಸೂರು ಬೇಕು. ವ್ಯಕ್ತಿ ಒಂಟಿಯಾಗಿ ಇರಲಾರ ಇದ್ದರು ತನ್ನದೆನ್ನುವ ಒಂದು ಮನೆಬೇಕು. ಸಂಸಾರಿಯಾದರೂ ಸರಿ ಸನ್ಯಾಸಿಯಾದರೂ ಸರಿ ಪ್ರಾಣಿ ಆದರೂ ಸರಿ ಪಕ್ಷಿಯಾದರು ಸರಿ ಇಂತಹ ಮಹತ್ವವನ್ನಾರಿತ ಜಾನಪದ ಗಾದೆ ಹೀಗೆನ್ನುತ್ತದೆ. "ಮನೆಯಿಲ್ಲದವನಿಗೆ ಮಾನವಿಲ್ಲ" ಎಂಬಂತೆ ನೆಲೆಯು ಅಲೆಮಾರಿ ಸಮುದಾಯಕ್ಕೆ ಇಲ್ಲವಾಗಿದೆ. "ಮನೆ ಕಟ್ಟಿದವರಿಗೆ ಒಂದು ಮನೆ; ಇಲ್ಲದಿರುವವರಿಗೆ ಊರೆ ಮನೆ" ಎಂಬಂತೆ ಅಲೆಮಾರಿಗಳು ಎಲ್ಲಿ ತಂಗುತ್ತಾರೆಯೆ ಅದೆ ಅವರ ಮನೆಯಾಗಿದೆ.

ಅಲೆಮಾರಿ ಸಮುದಾಯಗಳು ತಾತ್ಕಾಲಿಕವಾಗಿ ಮಾತ್ರ ಒಂದೆಡೆ ನೆಲೆಸುತ್ತಾರೆ. ಈ ನೆಲೆಯನ್ನು ವಲಸೆ, ಓಣಿ, ಪಾಳೆ, ವಠಾರ ಎನ್ನಲುಬಹುದು. ಕಾರಣ ಇಲ್ಲಿ ಒಂದೆ ಸಮುದಾಯ ಅಥವಾ ಒಂದೆ ಪಂಥದ ಜನರು ವಾಸಿಸುವುದರಿಂದ ಇದನ್ನು ಪಾಳೆಗಳು ಎನ್ನಲು ಅಡ್ಡಿಯಿಲ್ಲ ಆದರೆ ಪಾಳೆಗಳು ಸ್ವಂತದಿರುತ್ತವೆ. ಅಲೆಮಾರಿಗಳ ವಾಸದ ಪ್ರದೇಶಗಳೂ ಬೇರೆಯವರದಾಗಿರುತ್ತವೆ. ಅಂದು ಅಲೆಮಾರಿಗಳಿಗೆ ಒಂದು ನಿರ್ದಿಷ್ಟ ನೆಲೆಯ ಅವಶ್ಯಕತೆಯಿದ್ದಿಲ್ಲ. ಆದರೆ ಇಂದಿನ ಅಲೆಮಾರಿ ಮಾನವರಿಗೆ ಅವಶ್ಯಕತೆಯಿದೆ, ಅವಕಾಶಗಳಿಲ್ಲದಿರುವುದು ದುರಂತ.

ಅಲೆಮಾರಿ ಸಮುದಾಯಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ದಿನನಿತ್ಯದ ಸಂಚಲನೆಯ ಸ್ಥಿತಿ ಕಂಡುಕೊಂಡಿದ್ದರಿಂದ ಬದುಕು ಯಾಂತ್ರಿಕವಾಗಿದೆ. ಒಂದೆಡೆ ನೆಲೆನಿಲ್ಲದೆ ಸ್ಥಿರರಚನೆ ಕಾಪಾಡಿಕೊಳ್ಳದೆ ತಮ್ಮ ಸಂಪ್ರದಾಯಿಕ ವೃತ್ತಿಯಿಂದ ಸಾಂಸ್ಕೃತಿಕ ಸಾಂಕೇತಗಳನ್ನು ಪ್ರದರ್ಶಿಸುವ ಮೂಲಕ ಊರಿಂದ ಊರಿಗೆ ಅಲೆಯುವುದೆ, ಬದುಕಾಗಿದೆ. ಹಾಗಾಗಿ ಸಾಮಾಜಿಕ ಭದ್ರತೆ ಇಲ್ಲವಾಗಿದೆ. ದುಡಿಮೆಯು ಸೀಮಿತ ವ್ಯಾಪ್ತಿಯಲ್ಲಿ ಒಳಗೊಂಡಿದೆ. ಒಂದ್ಹೊತ್ತಿನ ಊಟ, ನೀರು, ಬಟ್ಟೆ, ವೈಯಕ್ತಿಕ ಹವ್ಯಾಸಗಳಿಗೆ ಮಾತ್ರ ಸೀಮಿತವಾಗಿದೆ.

ವೃತ್ತಿಯ ಮೂಲಕ ಸಂಚಲನೆಯನ್ನು ಕಂಡುಕೊಂಡಿದ್ದರಾದರು ವಾಸಸ್ಥಾನಗಳು ಎಂತವರಿಗೂ ಅಸಹ್ಯ ಎನಿಸುವಂತಹ ರೀತಿಯಲ್ಲಿವೆ. ಕಾರಣ ಸಾಂದರ್ಭಿಕ ಸನ್ನಿವೇಶಗಳಿಗೆ ಸಿಲುಕಿಕೊಂಡು ಬದುಕನ್ನು ನಡೆಸುವವರಾಗಿದ್ದಾರೆ. ಸಾಮಾಜಿಕ ಸ್ಥರ ವ್ಯವಸ್ಥೆಯಲ್ಲಿ ತೀರಾ ಕೆಳಮಟ್ಟದವರಾಗಿ ಮತ್ತು ಅಸ್ಪೃಶ್ಯತಾ

ಭಾವನೆ, ಇತರರಿಗೆ ಇವರ ಬಗ್ಗೆ ಇರುವುದನ್ನು ನೋಡಬಹುದಾಗಿದೆ. ಪರಿಣಾಮವಾಗಿ ಬದುಕು ಅತಂತ್ರ ಸ್ಥಿತಿಯ ರೂಪ ಪಡೆದುಕೊಂಡಿದ್ದು. ಸಮಾಜದ ಇತರೆ ಸಮುದಾಯಗಳಂತೆ ವ್ಯವಸ್ಥಿತವಾಗಿ ಬದುಕಲು ಸಾಧ್ಯವಾಗಿಲ್ಲ.

ಈ ಬದುಕಿಗೆ ಬಹುಮುಖ್ಯ ಕಾರಣ ಅಜ್ಞಾನ, ಮೂಢನಂಬಿಕೆ, ಅನಕ್ಷರತೆ, ಬಡತನ, ಆಸ್ತಿಯಲ್ಲಿ ಅಸಮಾನ ಹಂಚಿಕೆ ಕೀಳರಿಮೆಯ ನೋಟಗಳು ಇವೆಲ್ಲವುಗಳ ಪರಿಣಾಮವಾಗಿ ಸಮಾಜದಲ್ಲಿ ಪ್ರತ್ಯೇಕ ಬದುಕನ್ನು ಕಂಡುಕೊಳ್ಳುವುದರ ಮೂಲಕ, ವಿವಿಧ ಪ್ರದೇಶವಾರು ವ್ಯಾಪ್ತಿಯಲ್ಲಿ ಗುಡಾರ, ಗುಡಿಸಿ, ಡೇರಾ, ಗುಡಿಸಲುಗಳನ್ನು ನಿರ್ಮಾಣಮಾಡಿಕೊಂಡಿದ್ದಾರೆ. ಅದು ಬೇರೆಯಯವರ ಹಕ್ಕುಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ. ಉದಾ: ರೈಲ್ವೆನಿಲ್ದಾಣ, ಬಸ್‌ನಿಲ್ದಾಣ, ಕಾಡುಗಳ ಹೊರ ಮತ್ತು ಒಳ ಭಾಗಗಳಲ್ಲೂ, ಕೊಳಚೆ ಪ್ರದೇಶ, ಶಾಲಾಮೈದಾನ ಹೀಗೆ ಇನ್ನಿತರ ಸ್ಥಳಗಳಲ್ಲಿ ನೆಲೆಕಂಡುಕೊಂಡು ಆ ವಾಸದನೆಲೆಯಿಂದ ಆಹಾರ ಸಂಪಾದನೆಗಾಗಿ ವಿವಿಧ ಪ್ರದೇಶ ಮತ್ತು ವಿವಿಧ ಕಸುಬುಗಳಿಗೆ ಅಲೆದಾಡುತ್ತಿದ್ದಾರೆ. ಅಲೆಮಾರಿಗಳ ವಾಸದನೆಲೆಯ ಭೂಮಿಕೆಗೆ ಪ್ರವೇಶ ಮಾಡುವ ಮೊದಲು ವಾಸದ ಕಲ್ಪನೆಯ ಉಗಮವನ್ನು ನೋಡುವುದು ಒಳಿತು.

೩.೫.೧.೧. ಕಿರತಾವಸ್ಥೆಯ ಹಂತದಲ್ಲಿ ವಾಸದ ನೆಲೆ

ಬೃಹದಾಕರವಾಗಿ ಬೆಳೆದು ನಿಂತಿದ್ದ ಕಾಡುಗಳಲ್ಲಿ ಎಲ್ಲಿ ಬೇಕಾದರಲ್ಲಿ ಗಡ್ಡೆ-ಗೆಣಸುಗಳನ್ನು ಹುಡುಕುತ್ತಾ ಸಾಗಿಸಿದ ಸಂಚಾರಿ ಜೀವನವು ವಾಸದ ಮೊದಲ ಪಾದವಾದರೆ. ಬರಬರುತ್ತಾ ಶೀತ ಮತ್ತು ಬಿಸಿಲುಗಳಿಂದ ಮತ್ತು ಪ್ರಕೃತಿಯ ವಿಕೋಪಗಳಿಂದ ತತ್ತರಿಸಿ ಅನಾರೋಗ್ಯ ಪೀಡತನಾಗ ತೊಡಗಿದಾಗ ವಾತವರಣವು ಜೀವಿಸಲಿಕ್ಕೆ ಅಯೋಗ್ಯವೆನಿಸಿರಬೇಕು. ಆದುದರಿಂದ ತನ್ನ ಸಂಚಾರಿ ಜೀವನದಲ್ಲಿ ಸ್ವಲ್ಪ ಸುಧಾರಣೆ ಕಂಡುಕೊಳ್ಳಲು ಮೇಲಿನ ಸಮಸ್ಯೆಗಳಿಗೆ ಕೊಂಚವಾದರು ದೂರವಿರಲು “ಉಷ್ಣವಲಯ ಹಾಗೂ ಹತ್ತಿರದ ಕಾಡುಗಳಲ್ಲಿ ವಾಸಿಸಲು ಮುಂದಾಗಿದುದು”[40] ಎರಡನೆಯ ಪಾದವಾಗಿದೆ.

ಸೀಮಿತ ಸಂಚಾರ ಜೀವನದಲ್ಲಿ ತೊಡಗಿಸಿಕೊಂಡ ಮಾನವನು ಆಹಾರ ಸಂಗ್ರಹಣೆಗಾಗಿ ತಿರುಗು ತ್ತಿದ್ದರು. ಈ ತೆರನಾಗಿ ಸಂಚರಿಸುವ ಮಾರ್ಗದಲ್ಲಿ ಅಥವಾ ತನ್ನ ವಾಸಿಸುವಿಕೆಯ ಅಧೀನದಲ್ಲಿ ಕ್ರೂರ ಮೃಗಗಳಿಂದ ಹಿಂಸೆ, ಹಾಗೂ ಜೀವಕಳೆದುಕೊಳ್ಳುವ ಸ್ಥಿತಿ ಬಂದೊದಗಿದ್ದರಿಂದ ಎಚ್ಚರಗೊಂಡು ಇಂತಹ “ಪ್ರಾಣಿಗಳಿಂದ ರಕ್ಷಣೆ ಪಡೆಯಲು ಮರಗಳ ಮೇಲೆ ವಾಸಿಸಲು ಪ್ರಾರಂಭಿಸಿದ”[41] ಇದು ವಾಸದ ನೆಲೆಯ ಮೂರನೆಯ ಪಾದವಾಗಿದೆ. ಈ ರೀತಿಯ ವಾಸದ ನೆಲೆಯು ಕಿರತಾವಸ್ಥೆಯ ಮೊದಲ ಹಂತವಾಗಿದೆ.

ಬೆಂಕಿ ಮತ್ತು ಮೀನಿನ ಉಪಯೋಗ ಕಂಡುಕೊಂಡ ನಿಮಿತ್ತ ಹೊಸ ಆಹಾರದ ಶೋಧವಾಯಿತು. ಪರಿಣಾಮ ಭೂಮಿಯ ಮೇಲ್ಮೈ ಮೇಲೆ ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ತನ್ನ ವಾಸಿಸುವಿಕೆ ಸೀಮಿತ ಮಾಡಿಕೊಂಡು ಆ ಪ್ರದೇಶದಿಂದ ಹೆಚ್ಚಿನ ಭಾಗಗಳಿಗೆ ಹರಿಡಿಕೊಂಡು “ನದಿ ತೀರಗಳನ್ನೆ ತನ್ನ

ಆಹಾರದ ಮೂಲವಾಗಿ ಕಂಡುಕೊಳ್ಳುವುದರ ಮೂಲಕ ಒಂದು ಗೊತ್ತಾದ ಸ್ಥಳದಲ್ಲಿ ಅಂದರೆ ನದಿ ತೀರಗಳಲ್ಲಿ ಹೆಚ್ಚಾಗಿ ಬೀಡು ಬಿಡುತ್ತಿದ್ದ"[42]. ಸ್ವತಂತ್ರವಾಗಿ ತನಗೆ ಬೇಕಾದುದನ್ನು ಪಡೆಯಲು ಮುಂದಾದ.

ಇಂತಹ ಸ್ಥಿತಿಯಲ್ಲಿ ಯಾವ ಸ್ಥಳದಲ್ಲಿ ಆಹಾರ ದೊರೆಯುತ್ತದೆ, ಎಲ್ಲಿ ವಾಸಿಸಲು ಯೋಗ್ಯವಾಗಿದೆ, ಅಲ್ಲಿ ವಾಸಿಸಲು ಮುಂದಾಗಿ, ಮಳೆಬಂದಾಗ ತೋಪುಗಳ ಬಳಿ ಅದರ ಕೆಳಗೆ ಮಳೆ ಹೋಗುವ ತನಕ ರಕ್ಷಣೆ ಪಡೆಯುತ್ತಿದ್ದ. ನಂತರ "ಗುಡುಗು ಸಿಡಿಲು ಮಿಂಚುಗಳಿಂದ ವಿಪರೀತ ಬಿಸಿಲು ವನ್ಯ ಮೃಗಗಳಿಂದ ಪ್ರಾಣಭಯವಿದ್ದರಿಂದ ಮರದ ನೆರಳನ್ನು ಬಿಟ್ಟುಕೊಟ್ಟು ಹತ್ತಿರದಲ್ಲಿ ಇದ್ದ ಗುಹೆಗಳಲ್ಲಿ ವಾಸಿಲು ಮುಂದಾದ ಹೆಚ್ಚಾಗಿ ಚಳಿಯ ಕಾಲದಲ್ಲಿ ಗುಹೆಯೊಳಗೆ ಮಲಗುತ್ತಿದ್ದ. ಬೇಸಿಗೆ ಮತ್ತು ಹಗಲಿನಲ್ಲಿ ಗುಹೆಯ ಮುಂದೆ ವಾಸಿಸುತ್ತಿದ್ದ."[43] ಹೀಗೆ ತನ್ನ ಸಂಚಾರಿ ಜೀವನದಲ್ಲಿ ತೊಡಗಿಸಿಕೊಂಡ ಕಿರತಾವಸ್ಥೆಯ ಮಾನವ ತಾನು ಉಳಿದುಕೊಳ್ಳುವ ಸ್ಥಳದಲ್ಲಿ "ಗುಹೆ ಮತ್ತು ಮರದ ತೋಪುಗಳು ಕಾಣದೆ ಇದ್ದಾಗ, ಗುಹೆಯ ಮಾದರಿಯಲ್ಲಿ ಕಾಡಿನ ಪರಿಕರಗಳಾದ ಕಟ್ಟಿಗೆ, ಹುಲ್ಲುಗಳನ್ನು ಬಳಸಿಕೊಂಡು ಗುಡಿಸಲನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದನು."[44] ಇಂತಹ ಗುಡಿಸಲುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಿರಬೇಕು ಪರಿಣಾಮ ಗುಡಿಸಲ ಮುಂದೆ ಜಲಚರ ಜೀವರಾಶಿಗಳಿಂದ ಆಹಾರ ತಯಾರಿಸಿಕೊಂಡು ತಿಂದು ಮತ್ತೆ ವಾತವರಣ ಬದಲಾದಾಗ, ಗುಡಿಸಲಲ್ಲಿ ಹೋಗುವುದು ಇಲ್ಲವಾದರೆ, ಗುಡಿಸಲು ಮುಂದೆ ಬಯಲು ಜಾಗದಲ್ಲಿ ಮಲಗುತ್ತಿದ್ದರು.

ಇಂತಹ ಗುಡಿಸಲನ್ನು ಮುಂದೊಂದು ಸ್ಥಳದಲ್ಲಿ ತಂಗಲು ಅಥವಾ ವಾಸಿಸಲೂ ಅನುಕೂಲ ವಾಗಲೆಂದು ಅದರ ಪರಿಕರಗಳನ್ನು ಹಿಂದೆ ತೆಗೆದುಕೊಂಡು ಹೋಗಲು ಪ್ರಾಣಿಗಳನ್ನು ಬಳಸಿಕೊಂಡು ಹೊತ್ತೊಯ್ಯುತ್ತಿದ್ದರು. "ಕಿರಾತವಸ್ಥೆಯ ಕೊನೆಯ ಹಂತದಲ್ಲಿ ಸ್ವಲ್ಪ ಸುಧಾರಿತ ಜೀವನಕ್ರಮಗಳನ್ನು ಅನುಸರಿಸಿ ಕೊಂಡಿದ್ದರ ಪರಿಣಾಮ ಹುಲ್ಲು, ಗರಿ, ಕಟ್ಟಿಗೆಯ ಗುಡಿಸಲು ಸ್ಥಳದಲ್ಲಿ ಮರದ ದಿಮ್ಮಿಗಳನ್ನು ಬಳಸಿ ಕಟ್ಟಿಗೆಗಳಿಂದ ಗಟ್ಟಿಮುಟ್ಟಾದ ಮನೆಗಳನ್ನು ನಿರ್ಮಿಸಿದರು."[45] ಈ ರೀತಿಯ ಮನೆಯಲ್ಲಿ ಬರಿ ಕಟ್ಟಿಗೆಗಳೆ ಮುಖ್ಯ ಪ್ರಧಾನ ಪಾತ್ರವಹಿಸುತ್ತಿದ್ದವು.

೩.೫.೧.೨. ಅನಾಗರಿಕವಸ್ಥೆಯ ಹಂತದಲ್ಲಿ ವಾಸದ ನೆಲೆ


ಈ ಹಂತದಲ್ಲಿ ಸುಧಾರಿತ ಜೀವನಕ್ರಮದ ಪ್ರಯುಕ್ತ ಬೌದ್ಧಿಕ ಬೆಳವಣಿಗೆಯಾಗಿದ್ದರಿಂದ ಗರಿ ಮತ್ತು ಕಟ್ಟಿಗೆ ಹುಲ್ಲುಗಳ ಗುಡಿಸಲುಗಳು ಗೆದ್ದಿಲು ಹುಳುಗಳಿಂದ ಮತ್ತು ಮಳೆಯಿಂದ ಹಾಳಾಗುತ್ತಿದ್ದವು. ಆದುದರಿಂದ ಇಂತಹ ಗುಡಿಸಲುಗಳನ್ನು ಮರೆಮಾಚಿ "ಬಿಸಿಲಿನಲ್ಲಿ ಒಣಗಿದ ಇಟ್ಟಿಗೆಗಳು ಹಾಗೂ ಒರಟಾದ ಕಲ್ಲುಗಳಿಂದ ಸುಧಾರಿಸಿದ ಕೋಟೆಯಂತಹ ಮಾದರಿಯಲ್ಲಿ ಮನೆಗಳನ್ನು ಕಟ್ಟಿಕೊಂಡರು."[46] ಈ ಮನೆಗಳೂ ಒಂದರಪಕ್ಕದಲ್ಲಿ ಮತ್ತೊಂದು ಹಾಗೂ ಮುಖಾಮುಖಿ ಮನೆಗಳನ್ನು ಕಟ್ಟಿಕೊಂಡಹಳ್ಳಿಗಳು ಉದಯವಾದವು.

೩.೫.೧.೩. ನಾಗರಿಕವಸ್ಥೆ ಹಂತದಲ್ಲಿ ವಾಸದ ಸ್ಥಿತಿ

ಕಾಲವಸ್ಥೆಯಲ್ಲಿ ಹಂತಹಂತವಾಗಿ "ವೈವಿಧ್ಯಮಯವಾದ ಮನೆಗಳು ಹಳ್ಳಿಗಳು ಮತ್ತು ನಗರಗಳು

ಬೆಳಕಿಗೆ ಬಂದವು. ಇವು ಎತ್ತರದ ಪ್ರದೇಶ ವಿಶಾಲವಾದ ಬಯಲು ಜಾಗ ನದಿ ತೀರಿದ ಪ್ರದೇಶಗಳಲ್ಲಿ ಸ್ಥಾಪಿತವಾದವು"[47] ಕಾರಣ ವ್ಯಾಪಾರವಹಿವಾಟಿಗಾಗಿ ಅನುಕೂಲ ಮತ್ತು ವೈವಿಧ್ಯಮಯ ಕೆಲಸಗಳು, ಸಾರಿಗೆ ವ್ಯವಸ್ಥೆ ಬೆಳಕಿಗೆ ಬಂದವು. ಹೀಗೆ ಹಂತಹಂತವಾಗಿ ವಾಸದ ನೆಲೆಯು ನೆಲೆಗೊಂಡವು. ಇಂತಹ ನೆಲೆಯಿಂದ ದೂರ ಉಳಿದ ಅಲೆಮಾರಿಗಳು ವಾಸದ ನೆಲೆಯ ಬಗ್ಗೆ ಹೆಚ್ಚಿನ ಗಮನ ನೀಡದಾದರು. ಕಾರಣ ಮೇಲ್ವರ್ಗವು ಹೇರಿದ ನಿಯಮಗಳಿರಬಹುದು, ಭೂಮಿ ತಮ್ಮಿಂದ ದೂರವಿರಬಹುದು. ಸಂಪತ್ತು ದೂರವಿರಬಹುದು, ಇನ್ನೂ ಮುಂತಾದ ಕಾರಣಗಳಿಂದ ವಾಸಕ್ಕಾಗಿ ನೆಲೆಯನ್ನು ಕಂಡುಕೊಳ್ಳದೆ, ಮನೆಯನ್ನು ಕಟ್ಟಿಕೊಳ್ಳದೆ, ನೆಲೆನಿಲ್ಲದೆ ಆಹಾರಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ, ಬಿಡಾರ ಹಾಕಿಕೊಂಡು, ಆಹಾರ ದೊರೆಯುವ ತನಕ ಅಲ್ಲಿದ್ದು ನಂತರ ಮುಂದಿನ ಸ್ಥಳಕ್ಕೆ ಹೋಗುವರು. ಬಿಡಾರ ಹಾಕಿಕೊಳ್ಳಲು ಪ್ಲಾಸ್ಟಿಕ್‌ಚೀಲ ಇತ್ಯಾದಿಗಳನ್ನು ಪ್ರಾಣಿಗಳ ಮೇಲೆ ಹೊತ್ತೊಯ್ಯುವರು. ಅಂದು ವಾಸದ ನೆಲೆಯಿಂದ ಆಹಾರಕ್ಕಾಗಿ ಬೇರೊಂದು ಸ್ಥಳಕ್ಕೆ ಅಲೆಯುತ್ತಿದ್ದರು. ಇಂದು ವಾಸದನೆಲೆಯಿಂದ ಆಹಾರಕ್ಕಾಗಿ ಅಲೆಯುತ್ತಿದ್ದಾರೆ.

ಅಂದಿನ ಆದಿಮಾನವನ ಜೀವನ ಇಂದಿನ ಅಲೆಮಾರಿಯ ಜೀವನ ವ್ಯತ್ಯಾಸಗಳು ಕಡಿಮೆ ಎಂದು ಹೇಳಬಹುದು. ಏಕೆಂದರೆ ಅಂದು ನದಿತೀರ, ಕಾಡುಗಳು ಇವರ ಆಹಾರದ ಕೇಂದ್ರಬಿಂದುವಾಗಿದ್ದವು. ಇಂದು ಕೂಡ ಆಹಾರದ ಕೇಂದ್ರಬಿಂದುಗಳಾಗಿವೆ. ಸ್ವಲ್ಪ ಸುಧಾರಣೆಯೆಂದರೆ ನಗರಗಳಲ್ಲಿ ಗ್ರಾಮಗಳಲ್ಲಿ ಜನರನ್ನೆ ಆಶ್ರಯಿಸುವ ಮೂಲಕ ಸಮಾಜ ಆಹಾರದ ಕೇಂದ್ರವಾಗಿರುವುದು ವಿಶೇಷವಾಗಿದೆ. ನಾಡಿನಲ್ಲಿ ವಾಸವಿದ್ದರೂ ಕಾಡಿನ ಜೀವನ ಸಮುದಾಯಗಳಲ್ಲಿ ಜೀವಂತವಾಗಿದೆ. ಅಂದು ನೆಲೆನಿಂತು ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಪ್ರಬಲವಾಗಿಲ್ಲ ಇಂದಿಗೂ ಕೂಡ ನೆಲನೆಲೆ ಎರಡು ಇಲ್ಲದೆ ಬದುಕಿನ ಬವಣೆಗಾಗಿ ಪ್ರದೇಶದಿಂದ ಪ್ರದೇಶದಲ್ಲಿ ಅಲೆಯುತ್ತಾ, ಇದ್ದಾರೆ. ಅಂದು ಅಲೆದಾಟವಿತ್ತು ಇಂದೂ ಅಲೆದಾಟವಿದೆ.





ಅಲೆಮಾರಿಗಳ ವಾಸದ ನೆಲೆಗಳು

A- ಕೋಟೆ-ಕೊತ್ತಲಗಳಲ್ಲಿ
B- ಮಾದಿಗರ ಕೇರಿಯ ಸಮೀಪ
C- ರೈಲ್ವೆ ನಿಲ್ದಾಣದ ಸಮೀಪ
D- ಸಂತೆಗಳ ಸಮೀಪ
E- ಅರ್ಧದಲ್ಲಿ ನಿಂತಿರುವ ಸರ್ಕಾರಿ ಕಟ್ಟಡಗಳಲ್ಲಿ
F- ಗ್ರಾಮಗಳ ಹೊರವಲಯದಲ್ಲಿ
G- ಕೊಳಚೆ ಪ್ರದೇಶಗಳಲ್ಲಿ
H- ಶಾಲೆ ಮೈದಾನದಲ್ಲಿ
I- ನದಿ, ಕೆರೆ, ಹಳ್ಳಕೊಳ್ಳಗಳ ಸಮೀಪ
J- ಕಾಡಿನ ಹೊರ ಮತ್ತು ಒಳಭಾಗಗಳಲ್ಲಿ
K- ಸ್ಮಶಾನದಲ್ಲಿ
L- ಬಸ್ ನಿಲ್ದಾಣಗಳಲ್ಲಿ
M- ನಗರ ಪಾಲಿಕೆ ಮತ್ತು ತಾಲ್ಲೂಕು ಕಛೇರಿಗಳ ಮೈದಾನದಲ್ಲಿ
N- ಸ್ಥಗಿತಗೊಂಡ ವಾಹನಗಳ ಕೆಳಗೆ

ಕೋಟೆ-ಕೊತ್ತಲಗಳಲ್ಲಿ

ಜೀವನದುದ್ದಕ್ಕೂ ಜಂಜಾಟದ ಬದುಕಿನಲ್ಲಿ ಸೋತು ಸಣ್ಣಾಗಿರುವ ಅಲೆಮಾರಿಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಾ ಇರುತ್ತಾರೆ. ಹೀಗೆ ಅಲೆಯುತ್ತಾ ನಗರ ಅಥವಾ ಗ್ರಾಮಗಳ ಹೊರವಲಯದಲ್ಲಿ ಇಲ್ಲವೆ ಒಳಗಡೆ ಇರುವ, ರಾಜಮಹಾರಾಜರು ಆಳಿದ ಕೋಟೆ-ಕೊತ್ತಲಗಳಲ್ಲಿ, ತಮ್ಮ ನೆಚ್ಚಿನ ಪ್ರಾಣಿ ಪಕ್ಷಿಗಳೊಂದಿಗೆ, ಕುಟುಂಬ ಸಮೇತ ಇಂತಹ ಸ್ಥಳದಲ್ಲಿ ಬರುತ್ತಾರೆ. ಇದನ್ನೆ ಸ್ವಚ್ಛ ಮಾಡಿಕೊಂಡು ಕತ್ತಲು ತುಂಬಿದ ಕೋಟೆಯಲ್ಲಿ ದೀಪದ ಬುಡ್ಡಿಯಿಂದ ಉಪಯೋಗಿಸುವ ಇಲ್ಲವಾದರೆ, ಸೌದೆಯಿಂದ ಬೆಂಕಿ ಹಾಕಿಕೊಂಡು ಅಡುಗೆ ತಯಾರಿಸಿ ಊಟಮಾಡಿ ಮಲಗುತ್ತಾರೆ. ಹಾಳುಬಿದ್ದ ಇಂತಹ ಕೋಟೆ ಕೊತ್ತಲಗಳಲ್ಲಿ ವಿಷಜಂತುಗಳೆ ಅತಿಥಿಗಳಾಗಿರುತ್ತವೆ. ತಲೆಮೇಲೆ ಸೂರು ಬೇಕಾಗಿರುವುದರಿಂದ ಇಂತಲ್ಲಿ ವಾಸವಾಗಿ ಎಂದಿನಂತೆ ಬೆಳಿಗ್ಗೆ ತಮ್ಮ ವೃತ್ತಿಗಳಿಗೆ ತೆರಳಿ ಸಾಯಂಕಾಲದ ಸಮಯದಲ್ಲಿ ಮರಳುತ್ತಾರೆ.

ಮಾದಿಗರ ಕೇರಿಯ ಸಮೀಪ

ಗ್ರಾಮೀಣ ಪ್ರದೇಶಗಳಲ್ಲಿ ಮಾದಿಗರ ಕೇರಿಯು ಇರುವುದು ಸಹಜ. ಮಾದಿಗರ ಕೇರಿಯ ಸಮೀಪ ಆಕಸ್ಮಿಕ ಬಿಡಾರಗಳು ಇವೆ ಎಂದಾದರೆ ಅವರನ್ನು ಅಲೆಮಾರಿ ದಕ್ಕಲಿಗರೆಂದು ಗುರುತಿಸಬಹುದು. ತಮಗೆ ಖಾಯಂ ಆದ ಗ್ರಾಮಗಳಲ್ಲಿ ತಾತ್ಕಾಲಿಕ ಬಿಡಾರಗಳನ್ನು ನಿರ್ಮಿಸುತ್ತಾರೆ. ಹಿಂದೆ-ಮುಂದೆ ಕಟ್ಟಿಗೆ ನಿಲ್ಲಿಸಿ ಮಧ್ಯದಲ್ಲಿ ಉದ್ದನೆಯ ಕೋಲನಿಟ್ಟು ನಾಲ್ಕು ಮೂಲೆಗೊಂದರಂತೆ ಗಳ, ಹಗ್ಗದಿಂದ ಬಿಗಿದು, ಅದರ ಮೇಲೆ ಕಟ್ಟಿಗೆ ಇಟ್ಟು ಹರಿದ ಕೌದಿ ಇಲ್ಲವೆ, ಚಾಪೆ ಅಥವಾ ಚಾಲ್ತಿಗೆ ಬಂದ ಪ್ಲಾಸ್ಟಿಕ್ ಹಾಳೆ ಹೊದಿಕೆಯಾಗಿ ಹಾಕುತ್ತಾರೆ. ಇಂತಹ ಸ್ಥಳಗಳಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ತಮ್ಮ ಬೇಡಿಕೆಗಳಿಗೆಲ್ಲಾ ಮಾದಿಗರನ್ನೆ ಆಶ್ರಯಿಸುತ್ತಾರೆ. ತಮ್ಮ ಪೂರ್ವಜರಿಂದಲೂ ಮುಂದುವರಿಸಿ ಕೊಂಡು ಬಂದ ಕುಲವೃತ್ತಿಯನ್ನು ಪ್ರದರ್ಶಿಸಿ ಮುಂದಿನ ಪ್ರದೇಶಕ್ಕೆ ಪ್ರಯಾಣ ಬೆಳೆಸುವರು.

ರೈಲ್ವೆನಿಲ್ದಾಣದಲ್ಲಿ

ಅಲೆಮಾರಿಗಳ ವಲಸೆಯು ಅಥವಾ ನೆಲೆಯು ರೈಲ್ವೆ ರಹದಾರಿ ಇದ್ದಡೆ ಇರುತ್ತದೆ. ಕಾರಣ ಗುಡಾರವನ್ನು ರೈಲ್ವೆಗಳಲ್ಲಿ ಸಾಗಿಸಲು ಅನುಕೂಲವಾಗುತ್ತದೆ. ನಿಲ್ದಾಣದಲ್ಲಿರುವ ನೀರನ್ನು ಬಳಸಲು, ರೈಲ್ವೆಯಲ್ಲಿಯೆ ಸಣ್ಣ-ಪುಟ್ಟ ವ್ಯಾಪಾರವನ್ನು ಮಾಡುವುದು. ತಮ್ಮ ಕಲಾ ಪ್ರದರ್ಶನ ಬಿತ್ತರಿಸುವುದಕ್ಕಾಗಿ, ಹಾಗೂ ರೈಲ್ವೆಯ ಧರಗಳು ಬಸ್‌ಗಿಂತ ಕಡಿಮೆ ಇರುವುದರಿಂದ, ತಮ್ಮ ಬೇಡಿಕೆ ಮುಗಿದ ಮೇಲೆ ಕುಟುಂಬ ಸಮೇತ ಒಮ್ಮಲೆ ಪ್ರಯಾಣ ಬೆಳೆಸಲು ಅನುಕೂಲವಾಗುವುದರಿಂದ ಇಂತಹ ಸ್ಥಳಗಳಲ್ಲಿ ವಾಸಿಸುತ್ತಾರೆ.

ಸಂತೆಗಳ ಸಮೀಪ

ಉತ್ಪಾದಿಸಿದ ಮತ್ತು ಕೊಂಡುತಂದ ಅಲಂಕಾರಿಕ ವಸ್ತುಗಳು ಹಾಗೂ ವನಸ್ಪತಿಯಂತಹ ಗಿಡಮೂಲಿಕೆ, ಬಿದಿರು ಮತ್ತು ಈಚಲು ಕೊಂಬೆಯ ವಸ್ತುಗಳನ್ನು ಮಾರಾಟ ಮಾಡಲು ಅನುಕೂಲ ವಾಗಿರುತ್ತದೆ. ಸಂತೆಯಲ್ಲಿ ಜನಜಂಗುಳಿ ಇರುವುದರಿಂದ, ತಂದ ವಸ್ತುಗಳನ್ನೆಲ್ಲಾ ಮಾರಾಟ ಮಾಡುವ ಉದ್ದೇಶದಿಂದ ಸಂತೆಗಳ ಸಮೀಪದಲ್ಲಿ ಬಿಡಾರ ಮಾಡುತ್ತಾರೆ.

ಅರ್ಧದಲ್ಲಿ ನಿಂತಿರುವ ಸರ್ಕಾರಿ ಕಟ್ಟಡಗಳಲ್ಲಿ

ಅಲೆಮಾರಿಗಳಿಗೆ ಯಾರು ಮನೆ ಬಾಡಿಗೆ ಕೊಡುವುದಿಲ್ಲ. ಮನೆಯನ್ನು ಬಾಡಿಗೆ ಪಡೆಯುವ ಆರ್ಥಿಕ ಶಕ್ತಿ ಇಲ್ಲದಿರುವುದರಿಂದ ಇದ್ದಷ್ಟು ಕಾಲ ತಮ್ಮ ಕಸುಬುಗಳನ್ನು ಮುಗಿಸಿಕೊಂಡು ಹೋಗಲು ಒಂದು ತಾತ್ಕಾಲಿಕ ನೆಲೆ ಬೇಕಾಗುವುದರಿಂದ ಗ್ರಾಮದ ಅಥವಾ ನಗರಗಳಲ್ಲಿ ಅನಾನುಕೂಲಗಳಿಂದ, ಅರ್ಧದಲ್ಲಿ ನಿಂತಿರುವ ಕಟ್ಟಡಗಳಿರುತ್ತವೆ. ಇಂತಹ ಸ್ಥಳಗಳಲ್ಲಿ ಗೋಡೆಗಳು ಇರುತ್ತವೆ ವಿನಹ, ಬೆಳಕು ನೀರಿನ ವ್ಯವಸ್ಥೆಯಿರುವುದಿಲ್ಲ. ಆದರೂ ಉಳಿಯ ಬೇಕಾಗುವುದರಿಂದ ಇಂತಹ ಕಟ್ಟಡಗಳಲ್ಲಿ ವಾಸಿಸುತ್ತಾರೆ. ತಮ್ಮ ಕಾರ್ಯ ಚಟುವಟಿಕೆಗಳು ಮುಗಿದ ಮೇಲೆ ಮುಂದಿನ ಊರಿಗೆ ಪ್ರಯಾಣ ಬೆಳೆಸುವರು.

ಗ್ರಾಮಗಳ ಹೊರವಲಯದಲ್ಲಿ

ಗ್ರಾಮಗಳಲ್ಲಿ ಅಲೆಮಾರಿಗಳಿಗೆ ಯಾರು ಆಸರೆ ಆಗದಿರುವ ಕಾರಣದಿಂದ ಮತ್ತು ಮನೆ ಕೊಡದಿರುವುದರಿಂದ, ಮತ್ತು ತಮ್ಮ ಜೊತೆ ಇರುವ ಪ್ರಾಣಿ-ಪಕ್ಷಿಗಳನ್ನು ತಂಗಲು ಜಾಗ ಬೇಕಾಗುವು ದರಿಂದ, ಹೊರವಲಯದಲ್ಲಿ ತಾವುಗಳು ತಂದಿರುವ ಸರಂಜಾಮುಗಳನ್ನು ಇಳಿಸಿಕೊಂಡು, ಸ್ವಚ್ಛ ಮಾಡಿ ಕೊಂಡು ಬಿಡಾರ ಹಾಕಿಕೊಳ್ಳುತ್ತಾರೆ. ನೀರು ಮತ್ತು ಇತರೆ ಅಗತ್ಯ ವಸ್ತುಗಳು ಬೇಕಾದಲ್ಲಿ ಗ್ರಾಮದಲ್ಲಿ ಹೋಗಿ ಪಡೆಯುವರು ಕುಲಕಸುಬುಗಳನ್ನು ಆ ಗ್ರಾಮದಲ್ಲಿ ಪೂರೈಸಲು ಸುಲಭವಾಗುವುದರಿಂದ ಹೊರವಲಯದಲ್ಲಿ ವಾಸಿಸುತ್ತಾರೆ.

ಕೊಳಚೆ ಪ್ರದೇಶಗಳಲ್ಲಿ

ಪ್ರತಿಯೊಂದು ನಗರಗಳಲ್ಲಿ ಕೊಳಚೆ ಪ್ರದೇಶಗಳನ್ನು ಕಾಣುತ್ತೇವೆ. ಕೊಳಚೆ ಪ್ರದೇಶಗಳು ಸರ್ವ

ರೋಗಗಳ ಬ್ರಹ್ಮಾಂಡವಾಗಿವೆ. ಇಲ್ಲಿ ಸೊಳ್ಳೆಗಳು, ಸತ್ತ ನಾಯಿ, ಕತ್ತೆ, ಹಂದಿ, ದನಕರುಗಳು, ಹೆಣಗಳು, ನಗರದ ಚರಂಡಿಯ ಕುಲಷಿತ ನೀರು, ತ್ಯಾಜ್ಯವಸ್ತುಗಳೆಲ್ಲಾವು ಬಂದು ಶೇಖರಣೆಯಾಗುವ ಸ್ಥಳವಾಗಿರುತ್ತದೆ. ಯಾವುದೆ ರೀತಿಯ ಬೆಳಕಿನವ್ಯವಸ್ಥೆಯಿಲ್ಲದೆ, ಕತ್ತಲಿನಿಂದ ಆವರಿಸಿದ ದುರ್ನಾತವನ್ನು ಮೂಗಿಗೆ ಹೊಡೆಯುತ್ತಿರುವ ಇಂತಹ ಸ್ಥಳದಲ್ಲಿ ಪ್ರಾಣಿಗಳೂ ಸಹ ವಾಸಿಸುವುದಿಲ್ಲ. ಆದರೆ ಅಲೆಮಾರಿ ಗಳು ವಾಸಿಸುತ್ತಿದ್ದಾರೇದರೆ ಸ್ಥಿತಿ ಎಂತದ್ದಿರಬಹುದು. ಇಂತಹ ಸ್ಥಿತಿಗೆ ಕಾರಣಗಳು ಹಲವಾರು ಮುಂಗಡ ಹಣಕೊಟ್ಟು ಬಾಡಿಗೆಯ ಮನೆಯನ್ನು ಪಡೆಯುವಷ್ಟು ಶಕ್ತಿ ಇವರಲ್ಲಿಲ್ಲ. ಒಂದ್ಹೊತ್ತಿನ ಊಟಕ್ಕೆ ದಿನಪೂರ್ತಿ ಹೆಣಗಾಡುವುದರಿಂದ ವಾಸದ ಮನೆ ಮಾಡಿಕೊಳ್ಳುವುದು ಸುಲಭದ ಮಾತಲ್ಲ. ಆದ್ದರಿಂದ ನಗರ ಪ್ರದೇಶದಲ್ಲಿ ಜಾಗ ಬೇರೆಯವರ ಸ್ವತ್ತಾಗಿರುವುದರಿಂದ ಪುಕ್ಕಟೆಯಾಗಿ ವಾಸಿಸಲು ಯಾವ ಸ್ಥಳವು ದೊರೆಯಲಾರುದು.

ನಗರದಲ್ಲಿ ಅಲ್ಪ-ಸ್ವಲ್ಪ ಸರ್ಕಾರಿ ಜಾಗವೆಂದರೆ ಕೊಳಚೆ ಪ್ರದೇಶ. ಇಂತಹ ಪ್ರದೇಶವನ್ನು ಅಲೆಮಾರಿಗಳು ವಾಸಿಸಲು ಆಯ್ಕೆ ಮಾಡಿಕೊಳ್ಳುವರು. ಈ ಸ್ಥಳವು ಬಾಡಿಗೆಯಿಲ್ಲದ ಮುಕ್ತ ಸ್ಥಳವಾಗಿ ರುವುದು. ಆದರೆ ಸುತ್ತಮುತ್ತಲೂ ಮಲೀನಗೊಂಡ ವಾತಾವರಣವಿರುವುದರಿಂದ ತಮ್ಮ ಬಳಿ ಇರುವ ಸಲಕರಣೆಗಳಿಂದ ಸ್ವಚ್ಛಗೊಳಿಸಿಕೊಂಡು, ಕುಲುಷಿತ ನೀರು ಬಿಡಾರದೊಳಗೆ ಬಾರದಂತೆ ಮೋರಿಗಳನ್ನು ನಿರ್ಮಿಸುವರು. ಕಲ್ಲು-ಮಣ್ಣುಗಳಿಂದ ತಡೆ ಹಿಡಿಯಲಾಗುತ್ತದೆ. ಕಮಾನಿನ ಆಕಾರದಲ್ಲಿ ಪ್ಲಾಸ್ಟಿಕ್ ಚೀಲ, ಗೋಣಿಚೀಲ, ರಟ್ಟಿನಿಂದ, ಕಬ್ಬಿಣದ ಮೊಳೆ, ಹಗ್ಗ ಉಪಯೋಗಿಸಿಕೊಂಡು ಬಿಡಾರ ನಿರ್ಮಿಸುವರು. ಮಳೆನೀರು ಬಿಡಾರದೊಳಗೆ ಬಾರದಂತೆ ಹಾಗೂ ಬಿದ್ದ ನೀರು ಜಾರುವಂತೆ ಇಳಿಜಾರಾಗಿ ನಿರ್ಮಿಸುವರು. ಬಿಡಾರದ ಒಳಗೆ ಸಾಮಾನುಗಳನ್ನು ಇರಿಸಲು ಸ್ಥಳಮಾಡಿಕೊಳ್ಳುವರು. ಉಳಿದ ಕಡೆ ಮಕ್ಕಳು ಮತ್ತು ಮಹಿಳೆಯರು ಮಲಗಲು ಉಪಯೋಗಿಸಿಕೊಳ್ಳುವರು. ದಂಪತಿಗಳು ಪ್ರತ್ಯೇಕವಾಗಿ ಮಲಗಲು ಪ್ರತ್ಯೇಕ ಸ್ಥಳ ಇರುವುದಿಲ್ಲ. ಕಾರಣ ಸ್ವಲ್ಪ ಸ್ಥಳವಿರುವುದರಿಂದ ಸ್ತ್ರೀಯರು ಮತ್ತು ಪುರುಷರು ಹಾಗೂ ಮಕ್ಕಳು ಒಂದೆ ಹತ್ತಿರ ಮಲಗುವರು.

ಬೇಸಿಗೆಯಲ್ಲಿ ಹಾಗೂ ಗಾಳಿಯಿಲ್ಲದ ಸಮಯದಲ್ಲಿ ಕೆಲವು ಸದಸ್ಯರು ಗುಡಾರಗಳ ಮುಂದಿನ ಬಯಲಿನಲ್ಲಿ ಮಲುಗುತ್ತಾರೆ. ಚಳಿಗಾಲದಲ್ಲಿ ಮತ್ತು ಮಳೆಗಾಲದಲ್ಲಿ ಕೌದಿಯನ್ನು ಹಾಸಿಕೊಳ್ಳಲು ಮತ್ತು ಹೊದ್ದು ಕೊಳ್ಳಲು ಉಪಯೋಗಿಸುವರು. ಕೆಲವರು ಈಚಲ ಚಾಪೆ, ಪ್ಲಾಸ್ಟಿಕ್‌ಚೀಲ, ಗೋಣಿಚೀಲ ಗಳನ್ನು ಬಳಸುವರು. ಸ್ತ್ರೀಯರು ಹಳೆಯ ಸೀರೆಯನ್ನು ಉಪಯೋಗಿಸುವರು. ಬಹಳಷ್ಟು ಸದಸ್ಯರು ಇದ್ದಾಗ ಮಳೆಗಾಲದಲ್ಲಿ ಕೆಲವು ಸದಸ್ಯರು ನಿದ್ದೆ ಮಾಡಿದರೆ ಕೆಲವು ಸದಸ್ಯರು ಕುಳಿತುಕೊಳ್ಳುವರು. ಇಲ್ಲಿ ಶುದ್ಧವಾದ ಗಾಳಿ, ಬೆಳಕು, ಆಸ್ಪತ್ರೆ, ಶುದ್ಧವಾದ ನೀರು, ಕಿರಾಣಿ ಅಂಗಡಿಗಳು, ಮಾರುಕಟ್ಟೆ ಇತ್ಯಾದಿ ಯಾವುದೆ ತರದ ಸೌಲಭ್ಯ ಇರುವುದಿಲ್ಲ. ಇವರ ಸುತ್ತಲೂ ಇರುವುದೆಂದರೆ ಮಲಮೂತ್ರ, ಸತ್ತನಾಯಿಗಳ ವಾಸನೆ, ಹೊಲಸು ನಾರುವ ನೀರು. ಮತ್ತೊಂದು ವಿಶೇಷತೆ ಎಂದರೆ ಇವರ ಸುತ್ತಮುತ್ತಲೂ ಕೆಲವು ಸಮುದಾಯಗಳು ವಾಸವಿರುತ್ತವೆ. ಆ ಸಮುದಾಯಗಳತ್ತಾ ಇಂತಹ ಪರಿಸ್ಥಿತಿಯಲ್ಲಿ

ಇರುತ್ತದೆ. ಹೀಗಿರುವಾಗ ಆಕಸ್ಮಿಕವಾಗಿ ನಡೆಯಬಹುದಾದ ಜಗಳಗಳು, ನಡೆಯುತ್ತಾ ಇರುತ್ತವೆ. ಇಲ್ಲಿ ನಾಗರಿಕರೆನಿಸಿಕೊಂಡವರು ಜಗಳ ಇತ್ಯರ್ಥದಲ್ಲಿ ಮುಂದೆ ಬರುವುದಿಲ್ಲ. ಕುಡಿದು ಬಂದು ಜಗಳ ಮಾಡುತ್ತಾರೆಂದು ಸುಮ್ಮನಿರುತ್ತಾರೆ, ಕೊನೆಗೆ ಅವರೆ ಸುಮ್ಮನಾಗಬೇಕು. ಅಲೆಮಾರಿಗಳ ಸ್ತ್ರೀಯರನ್ನು ಕಾಡಿಸದಿರರು, ಸಹಿಸದೆ ಪ್ರತಿಭಟಿಸಿದರೆ ಕಳ್ಳತನ, ಅಪರಾಧವ ಹೊರಿಸಿ ಜೈಲಿಗೆ ಕಳಿಸುತ್ತಾರೆಂದು ಭಯದಿಂದ ಜರ್ಜರಿತರಾಗಿದ್ದು ಹೇಳಲೂ ಆಗದೆ ಬಿಡಲು ಆಗದೆ ಕೆಲವು ದಿವಸ ಅಲ್ಲಿದ್ದು ಬೇಗ ಕಾಲ್ಕಿಳುತ್ತಾರೆ.

ಮಾನವರು ಮಾನವರಿಗೆ ಕೊಡುವ ತೊಂದರೆಯಾದರೆ ಪ್ರಾಣಿಗಳೂ ಕೊಡುವ ತೊಂದರೆ ಇನ್ನೂ ಭಯಂಕರ. ಸತ್ತ ಪ್ರಾಣಿಗಳ ಮಾಂಸ ಸಿಗುತ್ತವೆಂಬ ಕಾರಣದಿಂದ ನಾಯಿಗಳು ಕಚ್ಚಾಡುತ್ತಲೆ ಇರುತ್ತವೆ. ಹಂದಿಗಳು ಮಲತಿನ್ನಲು ಬರುತ್ತಾ ಇರುತ್ತವೆ. ಒಮ್ಮೊಮ್ಮೆ ಅಹಾರಕ್ಕಾಗಿ ಬಿಡಾರದಲ್ಲಿ ನುಗ್ಗುತ್ತವೆ. ಮಕ್ಕಳು, ಮಹಿಳೆಯರಿಗೆ ತೊಂದರೆ ಮಾಡುವುದುಂಟು. ಇಂತಲ್ಲಿ ವಾಸಿಸುವರಿವರು ಹೆರಿಗೆ ಸೌಲಭ್ಯವಿಲ್ಲದೆ, ಸೊಳ್ಳೆಯಿಂದ ಕಾಯಿಲೆ ಬರಿಸಿಕೊಂಡು ಎಷ್ಟೋ ಜನ ಸಾವನ್ನಪ್ಪಿದ್ದಾರೆ. ಒಟ್ಟಾರೆಯಾಗಿ ಎಲ್ಲ ಹಂತದಲ್ಲಿ ಒಂದಲ್ಲ ಒಂದು ರೀತಿಯ ತೊಂದರೆಯಿದ್ದರೂ, ನೆಲೆಯಿಲ್ಲದೆ ಕೊಳಚೆ ಪ್ರದೇಶಗಳನ್ನು ವಾಸದ ನೆಲೆಯಾಗಿ ಪರಿವರ್ತಿಸಿ ಕೊಳ್ಳುತ್ತಾರೆ.

ಶಾಲಾ ಮೈದಾನದಲ್ಲಿ

ಪ್ರತಿ ನಗರ ಮತ್ತು ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳಿರುವುದು ಸರ್ವವಿಧಿತ. ಈ ಶಾಲೆಗಳೂ ತಮ್ಮದೆ ಆದ ೦ಂದು ವಿಶಾಲವಾದ ಮೈದಾನವನ್ನು ಒಳಗೊಂಡಿರುತ್ತವೆ. ಬೇರೆಯವರು ಬಾರದ ಹಾಗೆ ಕಾಂಪೌಂಡು ಅಥವಾ ಮುಳ್ಳಿನ ತಂತಿ, ಕಲ್ಲಿನ ಕಂಬಗಳಿಗೆ ಮುಳ್ಳಿನ ಬೇಲಿಯ ಮೂಲಕ ತನ್ನ ವ್ಯಾಪ್ತಿಯು ಎಲ್ಲಿಯವರೆಗೂ ವ್ಯಾಪಿಸಿದೆಯೊ, ಅಲ್ಲಿಯವರೆಗೂ ಗುರುತು ಮಾಡಿರುತ್ತಾರೆ. ಬಿಸಿಯೂಟ ಆರಂಭವಾದಗಿನಿಂದ ನೀರಿನ ವ್ಯವಸ್ಥೆ ಪ್ರತಿ ಶಾಲೆಯ ಆವರಣದಲ್ಲಿರುತ್ತದೆ. ಊಟ ಮಾಡುವ ಮಕ್ಕಳಿಗೆ ತೊಂದರೆಯಾಗಬಾರದೆಂಬ ಕಾರಣದಿಂದ ನಾಯಿ ಹಂದಿಗಳಿಂದ ಆವರಣವನ್ನು ಸ್ವಚ್ಛವಾಗಿಸುತ್ತಾರೆ. ಶಾಲೆಗಳು ದಿನಂಪ್ರತಿ ೯.೩೦ ರಿಂದ ಆರಂಭವಾಗಿ ಸಂಜೆ ೫ಕ್ಕೆ ಮುಕ್ತಾಯ. ಶನಿವಾರ ಮಧ್ಯಾಹ್ನ ರಜೆ ಭಾನುವಾರ ಮತ್ತು ಹಬ್ಬದಿನ, ಬೇಸಿಗೆಯಲ್ಲಿ ಶಾಲೆಗಳು ರಜಾ ಇರುತ್ತವೆ. ರಜಾದಿನಗಳಲ್ಲಿ ಅಲೆಮಾರಿಗಳು ಶಿಕ್ಷಕರ ಅನುಮತಿ ಪಡೆದು ಶಾಲೆಗಳಲ್ಲಿ ಬಿಡಾರ ಹೂಡುತ್ತಾರೆ. ಅಡಿಗೆ ತಯಾರಿಸಲು, ಮಲಗಲು, ಸಾಕುಪ್ರಾಣಿಗಳಿಗೆ ಸಾಕಷ್ಟು ಸ್ಥಳವಕಾಶವಿರುವುದರಿಂದ ತೊಂದರೆಯಾಗಲಾರುದು. ರಾತ್ರಿಯಲ್ಲಿ ಬೆಳಕಿನ ವ್ಯವಸ್ಥೆಇಲ್ಲವಾದ್ದರಿಂದ ಬೆಳಗಿನ ಅಡಿಗೆ ಜೊತೆಯಲ್ಲಿ ರಾತ್ರಿಯ ಅಡಿಗೆ ಮಾಡಿಕೊಳ್ಳುವರು. ಅಥವಾ ಮುಸ್ಸಂಜೆಯ ಸಮಯದಲ್ಲಿ ಅಡುಗೆ ತಯಾರಿಸಿ ಕೊಳ್ಳುತ್ತಾರೆ. ಶಾಲೆಯ ವೇಳೆಯಲ್ಲಿ ಶಾಲೆ ಆರಂಭವಾಗುವ ಮೊದಲು ಅಡಿಗೆ ತಯಾರಿಸಿಕೊಂಡು ಊಟಮಾಡಿ ತಮ್ಮ ವೃತ್ತಿಗಳಿಗೆ ತೆರಳುವರು. ಸಾಮಾನುಗಳನ್ನು ಕಾಯಲು ಮುದುಕ, ಮುದುಕಿಯರನ್ನು ಅಥವಾ ಮಕ್ಕಳನ್ನು ಇಲ್ಲವೆ, ಬಾಣಂತಿಯಿರುವ ವರನ್ನು ಬಿಟ್ಟು ಹೋಗುತ್ತಾರೆ. ಶಾಲೆ ಬಿಟ್ಟ ಮೇಲೆ ೬ ಗಂಟೆ ನಂತರ ಎಲ್ಲರೂ ಆವರಣದಲ್ಲಿ

ಬಂದು, ಗಡಿಬಿಡಿಯಿಂದ ಅಡುಗೆ ತಯಾರಿಸಿಕೊಂಡು ಊಟಮಾಡಿ ಮಲಗುವರು. ಇಲ್ಲಿ ಜನಗಳ, ಪ್ರಾಣಿಗಳಿಂದ ಭಯ, ಅಂತಕಗಳು ಇರುವುದಿಲ್ಲ. ಜೊತೆಗೆ ವಿಶಾಲವಾದ ಮೈದಾನ, ಬಾಡಿಗೆ ರಹಿತವಾದ ಸ್ಥಳ, ಕೊಳಚೆ ನಿರ್ಮೂಲನೆಯಿಂದ ಸ್ವಚ್ಛವಾಗಿರುವುದು, ಸದಾಕಾಲ ನೀರು ದೊರೆಯುವುದು, ಶಾಲಾ ಮಕ್ಕಳ ಬಿಸಿಯೂಟದ ವ್ಯವಸ್ಥೆಯಿಂದ ಉಳಿದ ಊಟವು ಸಿಗುವುದು, ಮಳೆ, ಗಾಳಿಯಿಂದ ಶಾಲೆಯ ಮುಂಭಾಗದಲ್ಲಿ ಆಸರೆಯಾಗಲು ಸ್ಥಳಗಳು ಇರುವುದರಿಂದ ಅಲೆಮಾರಿಗಳಿಗೆ ಶಾಲೆಯನ್ನು ಬಹಳಷ್ಟು ಇಷ್ಟಪಡುವರು.

ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಅಧಿಕ ಪ್ರಸಂಗಿಗಳು ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡು ಅಲೆಮಾರಿಗಳಿಗೆ ವಾಸಿಸಲು ಅವಕಾಶ ಕೊಡಬಾರದೆಂದು ಹೇಳುವರು ಇದ್ದಾರೆ. ಕಾರಣ ಅಲೆಮಾರಿಗಳು ಕಳ್ಳರು, ಮೋಸಗಾರರು, ಕುಡುಕರು, ಸುಳ್ಳುಗಾರರು, ಶಾಲೆ ಮಲೀನ ಮಾಡುತ್ತಾರೆಂದು. ನೀರಿನ ತೊಟ್ಟಿ ಕುಲಷಿತಗೊಳಿಸುವರು ಎಂಬಿತ್ಯಾದಿ ಕಾರಣಗಳಿಂದ ಅಲ್ಲಿಂದ ಕಾಲುಕೀಳುವಂತೆ ವಾತವರಣ ಸೃಷ್ಟಿಸುತ್ತಾರೆ. ಈ ತರದ ವಾಸದ ನೆಲೆಯಲ್ಲಿ ಮೂಲಭೂತ ಸೌಲಭ್ಯಗಳಿರಲಾರವು. ಆಕಸ್ಮಿಕವಾಗಿ ಇದ್ದರು, ಇವರಿಂದ ದೂರವಿರುವವು. ಕ್ಷೌರಿಕನಿಂದ ಹಿಡಿದು ಎಲ್ಲ ಹಂತದ ವರ್ಗಗಳು ಅಸ್ಪೃಶ್ಯ ಮತ್ತು ಅನುಮಾನದ ದೃಷ್ಟಿಯಿಂದ ನೋಡುವರು. ಆದರೂ ಎಲ್ಲರು ಅದೆ ಮನಸ್ಸಿನವರಿರಲಾರರು ಕೆಲವೊಬ್ಬ ಶಿಕ್ಷಕರು ಮತ್ತು ಊರಿನ ಜನರು ಒಳ್ಳೆಯವರಿದ್ದಾಗ ಊರಿನ ಜನರೆದುರು ಪ್ರದರ್ಶನ ಮಾಡಿ ಆಹಾರ, ದವಸದಾನ್ಯ, ಬಟ್ಟೆ, ಹಣ ಸಂಗ್ರಹಿಸುತ್ತಾರೆ. ಹಾಗೂ ಶಾಲೆಯಲ್ಲಿ ಮನೋರಂಜನೆ ಪ್ರದರ್ಶನ ನೀಡಿ ಶಿಕ್ಷಕರಿಂದ, ಮಕ್ಕಳಲ್ಲಿ ಇಂತಿಷ್ಟು ಎಂಬಂತೆ ಹಣವನ್ನು ಸಂಗ್ರಹಿಸಿ ಪಡೆಯುತ್ತಾರೆ. ಸಾಕುಪ್ರಾಣಿಗಳಿಂದ ಕೂಡಿರುವ ಸಮುದಾಯಗಳಿಗೆ ಪ್ರವೇಶ ನೀಡುವುದು ಕಷ್ಟವಾಗಿದೆ. ಅಲ್ಲಿನ ವಾತಾವರಣ ಅಥವಾ ಪರಿಸರ ಮಲಿನವಾಗುತ್ತದೆಂಬ ಕಾರಣದಿಂದ ಉಳಿಯಲು ಅವಕಾಶ ಕೊಡುವುದಿಲ್ಲ. ತೊಂದರೆಗಳೂ ಇಂತಹ ಸಾಮಾನ್ಯವಾಗಿ ಬಿಟ್ಟಿವೆ. ಆದರೂ ಅನಿವಾರ್ಯವಾಗಿ ಬದುಕಬೇಕಾಗಿರುವುದರಿಂದ ಇಂತವುಗಳನ್ನೆ ಆಶ್ರಯಿಸುತ್ತಾರೆ.

ನದಿ/ಕೆರೆ/ಹಳ್ಳ/ಕೊಳ್ಳಗಳ ಸಮೀಪ

ಅನ್ನ ನೀಡುವ ಮತ್ತು ನೆಚ್ಚಿನ ಜೀವಸಂಗಾತಿಗಳಾದ ಹಸು, ಮೇಕೆ, ಕುರಿ ಇತ್ಯಾದಿಳಿಗೆ ಮೇವು ನೀರು ಅನಿವಾರ್ಯ ಬೇಕಾಗಿದೆ. ಇವುಗಳು ತಂಗಲು ವಿಶಾಲವಾದ ಪ್ರದೇಶಬೇಕಾಗುತ್ತದೆ. ಆದುದರಿಂದ ಅಲೆಮಾರಿಗಳು ನೀರು ದೊರೆಯಬಹುದಾದ ನದಿ, ಕೆರೆ, ಹಳ್ಳ, ಕೊಳ್ಳಗಳ ಸಮೀಪ ಬಿಡಾರ ಹೂಡುವರು. ಇಂತಹ ಸ್ಥಳದಲ್ಲಿ ಮೇವು ಮತ್ತು ನೀರಿನ ಅನುಕೂಲವಿರುತ್ತದೆ. ಪ್ರಾಣಿಗಳಿಂದ ಹಾಲು, ಮೊಸರು, ಬೆಣ್ಣೆ ಮತ್ತು ಮಾಂಸವನ್ನು ಬಳಸಿಕೊಳ್ಳುತ್ತಾರೆ. ಹಣದ ಅಗತ್ಯತೆ ಬಂದಾಗ ಪ್ರಾಣಿಗಳ ಮಾರಾಟ ಮಾಡುತ್ತಾರೆ.

ನೀರಿನಲ್ಲಿ ದೊರೆಯಬಹುದಾದ ಮೀನು, ಏಡಿಗಳನ್ನು ಸಂಗ್ರಹಿಸಿ ಜೀವನ ಸಾಗಿಸಲು ಇಲ್ಲಿನ ವಾಸ ಅನುಕೂಲವಾಗುತ್ತದೆ. ಇತ್ತೀಚೆಗೆ ಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಹಿಡಿದು ಮಾರಾಟ ಮಾಡಿ ಆದಾಯ ಪಡೆಯುವುದುಂಟು.

ಕಾಡಿನ ಹೊರ ಮತ್ತು ಒಳಭಾಗಗಳಲ್ಲಿ

ಬಹುಪಾಲು ಅಲೆಮಾರಿಗಳು ಕಾಡಿನ ಹೊರ ಮತ್ತು ಒಳಭಾಗಗಳನ್ನೆ ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲಿನ ಗಿಡಗಂಟೆ, ಮುಳ್ಳುಕಲ್ಲು ಕಿತ್ತು ಹಾಕಿ ಆ ಸ್ಥಳದಲ್ಲಿ ಬಿಡಾರ ನಿರ್ಮಿಸಿ ಕೊಳ್ಳಲು ಎಷ್ಟು ಸ್ಥಳಬೇಕೊ, ಅಷ್ಟು ಸ್ಥಳ ಸ್ವಚ್ಛಪಡಿಸಿ ಕೊಳ್ಳುವರು. ಗರಿ, ಕೊಂಬೆ, ಕಲ್ಲುಗಳನ್ನು ಉಪಯೋಗಿಸಿಕೊಂಡು, ಬಿಡಾರ ನಿರ್ಮಿಸುವರು. ಇಲ್ಲಿ ಗಾಳಿಯ ತೊಂದರೆ ಇರಲಾರದು. ಆದರೆ ಬೆಳಕಿನ ಸಮಸ್ಯೆ ಇರುತ್ತದೆ. ಸುತ್ತಲೂ ದುರ್ಗಮಯ ಕಾಡಾಗಿರುವುದರಿಂದ ಬೆಳಕು ಅಷ್ಟಾಗಿ ಮೂಡಿ ಬರುವುದಿಲ್ಲ. ಅಲ್ಲಿನ ಗಿಡಕಂಟಿಗಳನ್ನು ಉರುವಲು ಮಾಡಿಕೊಂಡು ಬೆಳಕು ಮಾಡಿ ಅಡಿಗೆ ಮಾಡಿ ಕೊಳ್ಳುವರು.

ಇಂತಲ್ಲಿ ವಾಸಿಸುವುದರಿಂದ ಅನುಕೂಲವೆಂದರೆ ಮೊಲ, ಬೆಕ್ಕು, ಚಿಗರೆ, ನವಿಲು, ಇಲಿ, ಉಡ ಹೀಗೆ ಅನೇಕ ಬೇಟೆಯ ಪ್ರಾಣಿಗಳು ದೊರೆಯುತ್ತವೆ. ಇವುಗಳ ಬೇಟೆಯಾ ಆಹಾರವನ್ನಾಗಿ ಬಳಸುವರು. ಜೊತೆಗೆ ಚಿಗರೆ ಕೋಡು, ಹುಲಿ, ಚಿರತೆಗಳ ಚರ್ಮಗಳ ವ್ಯಾಪಾರ ಮಾಡಬಹುದಾಗಿದೆ. ಹಾವುಗಳು, ಮಂಗಗಳು, ಗಿಳಿಗಳು, ಕರಡಿಗಳನ್ನು ಹಿಡಿದು ಆಟವಾಡಿಸುವ ತರಬೇತಿಗೊಳಿಸುತ್ತಾರೆ. ಅನಾರೋಗ್ಯದಿಂದ ಮತ್ತು ರೋಗಪೀಡಿತರನ್ನು ಗುಣಪಡಿಸುವ ಅನೇಕ ಔಷಧಿಗಳು ಕಾಡಲ್ಲಿ ಗಿಡಮೂಲಿಕೆಯ ರೂಪದಲ್ಲಿ ದೊರೆಯುವುದರಿಂದ, ಜೊತೆಯಲ್ಲಿ ಪ್ರಕೃತಿ ನೀಡುವ ಹಣ್ಣು ಹಂಪಲಗಳು ಯಾವುದೆ ಬೆಲೆ ನೀಡದೆ ಸಿಗುವುದರಿಂದ, ಇಲ್ಲಿ ಕಳ್ಳರು, ಮೋಸಗಾರರು, ಸುಳ್ಳುಗಾರರು, ಕುಡುಕರು ಎಂಬ ಯಾವುದೆ ಜನರ ನಿಂದನೆಗಳು ಕೇಳಿ ಬರದಿರುವುದರಿಂದ ಕಾಡನ್ನೆ ತನ್ನ ವಾಸಸ್ಥಾನವನ್ನಾಗಿ ಮಾರ್ಪಡಿಸಿಕೊಳ್ಳುತ್ತಾರೆ.

ಈ ಸ್ಥಳಗಳಲ್ಲಿ ಸಂಪರ್ಕರಸ್ತೆ, ಸಾರಿಗೆ ವ್ಯವಸ್ಥೆ, ಶಾಲೆಗಳೂ, ಆಸ್ಪತ್ರೆ, ನ್ಯಾಯಬೆಲೆ ಅಂಗಡಿ, ನೀರು, ಬೆಳಕು ಇತ್ಯಾದಿ ಮೂಲಸೌಲಭ್ಯಗಳಾವುವು ಇಲ್ಲದೆಯೆ ಹೋರಾಟ ಮಾಡಿಕೊಂಡು ಬದುಕುತ್ತಿದ್ದಾರೆ. ಕೆಲವೊಂದು ಜಮೀನ್ದಾರರು ಇಂತಹ ಅಮಾಯಕರನ್ನು ತಮ್ಮ ಭೂಮಿಯಲ್ಲಿ ದುಡಿಸಿಕೊಳ್ಳುತ್ತಾ ಜೀತದಲ್ಲಿ ಉಪಯೋಗಿಸಿ ಕೊಳ್ಳುತಿದ್ದಾರೆ. ಅನಿವಾರ್ಯವಾಗಿ ಒಂದು ನೆಲೆ, ಬೇಕಾಗುವುದರಿಂದ ಇಂತಹ ಸ್ಥಳಗಳನ್ನು ವಾಸಕ್ಕಾಗಿ ನೆಲೆಯಾಗಿಸಿಕೊಳ್ಳುವರು.

ಸ್ಮಶಾನದಲ್ಲಿ

ವಿಶಿಷ್ಟ ಶಕ್ತಿಯನ್ನು ಪಡೆಯುವ ಉದ್ದೇಶದಿಂದ ಅಮವಾಸೆಯಂತಹ ವಿಶೇಷ ದಿನಗಳ ಮಧ್ಯರಾತ್ರಿಗಳಲ್ಲಿ ಪೂಜೆ ಪೂರೈಸಬೇಕಾಗಿರುವುದರಿಂದ, ಮತ್ತು ಸ್ಮಶಾನದಲ್ಲಿರುವ ಬಾಣಂತಿಯರ ಒಳಗಡೆಯಿರುವ ಕೂಸಿನ ಕೈ ಪಡೆಯುವುದರ ಸಲುವಾಗಿ ಸ್ಮಶಾನದಲ್ಲಿಯೆ ವಾಸವಿರುತ್ತಾರೆ. ಬೆಳಗಿನ ಜಾವದಲ್ಲಿ ಪೂಜೆ ಮಾಡಿಕೊಂಡು ಶಂಖ, ಜಾಗಟೆ ಬಾರಿಸುತ್ತ ದೇವರನ್ನು ಆರಾಧಿಸುತ್ತ, ಜಯವಾಗಲಿ ಜಯವಾಗಲಿ ರೇವಣ್ಣಸಿದ್ಧನೆಂದು ಊರೊಳಗೆ ಪ್ರವೇಶ ಮಾಡುತ್ತಾರೆ. ಸಿದ್ಧಿಸಿಕೊಂಡಿರುವ ಚಮತ್ಕಾರದ ಆಟ ತೋರಿಸುತ್ತ ಭಿಕ್ಷೆ ಪಡೆದುಕೊಂಡು ಮತ್ತೆ ತಮ್ಮ ವಾಸಸ್ಥಾನವಾದ ಸ್ಮಶಾನಕ್ಕೆ ಹೋಗುತ್ತಾರೆ. ಇಂತಲ್ಲಿ ವಾಸಿಸಲು

ಮತ್ತೊಂದು ಮುಖ್ಯ ಕಾರಣವೆಂದರೆ ತಾವು ಮಾಡುವ ಪೂಜೆ ಯಾರು ನೋಡಬಾರದೆಂಬ ಕಾರಣಕ್ಕಾಗಿ. ಬೀದಿಯಲ್ಲಿ "ಪ್ರತಿ ಮನೆಯ ಬಾಗಿಲಿಗೆ ಹೋಗಿ ಜಯವಾಗಲಿ ರೇವಣ್ಣಸಿದ್ದೇಶ್ವರ" ಎನ್ನುತ್ತಾ "ಕುಟುಂಬದ ಎಲ್ಲ ಸದಸ್ಯರನ್ನು ದೇವರೆ ನೀನು ಕಾಯಬೇಕು. ಸಕಲ ಸಮಾಜವನ್ನು ಚೆನ್ನಾಗಿಟ್ಟಿರು" ಎಂದು ಹಾರೈಸುವ ಸಮುದಾಯ 'ಸುಡುಗಾಡು ಸಿದ್ಧರು'.

ಸ್ಮಶಾನದಲ್ಲಿ ವಾಸಿಸುವವರಿಗೆ ಶಿಕ್ಷಣವು ಮಾಯಾಜಿಂಕೆಯಾಗಿದೆ. ಅತಿವೃಷ್ಟಿ-ಅನಾವೃಷ್ಟಿಯ ಅನಾಹುತಗಳು ಸಂಭವಿಸಿದಾಗ ಸ್ಮಶಾನದಲ್ಲಿರುವವರಿಗೆ ಯಾರೊಬ್ಬರು ಸಹಾಯದಲ್ಲಿ ಬರಲಾರರು. ಕಾರಣ ಮನುಷ್ಯರು ವಾಸಿಸುವ ಸ್ಥಳವಲ್ಲ ಅದು ಸತ್ತ ಹೆಣಗಳನ್ನು ಹೂಳುವ ಸ್ಥಳ. ಕುಟುಂಬದಲ್ಲಿ ಬೇಕಾದ ಆಹಾರವನ್ನು ಸ್ಮಶಾನದಲ್ಲಿಯೆ ಮೂರು ಕಲ್ಲುಗಳನ್ನು ಹೂಡಿ ಒಲೆ ಹೂಡಿಕೊಂಡು, ಶವಸಂಸ್ಕಾರಕ್ಕೆ ತಂದ ಕಟ್ಟಿಗೆಯನ್ನು ಉರುವಲಿಗಾಗಿ ಬಳಸಿಕೊಂಡು, ಕತ್ತಲಾಗುವ ಮುಂಚೆಯೆ ಆಹಾರವನ್ನು ಬೇಯಿಸುವರು. ರಾತ್ರಿ ಸಮಯದಲ್ಲಿ ಸ್ಮಶಾನಗಳಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದಿರುವುದರಿಂದ ಬೇಗ ಅಡಿಗೆ ತಯಾರಿಸಿ ಸಾಮೂಹಿಕವಾಗಿ ಬೆಳಕು ಕಂಡುಬಂದಾಗ ಆಹಾರ ಸ್ವೀಕರಿಸುವರು. ಮಲಗಲು ತಾವೇ ತಯಾರಿಸಿದ ಕೌದಿ ಉಪಯೋಗಿಸಿಕೊಳ್ಳುವರು. ಮಲಗಿದ ಸಮಯದಲ್ಲಿ ನಾಯಿ ತೋಳಗಳು ಹೆಣ ತಿನ್ನಲು ಆ ಸ್ಥಳದಲ್ಲಿ ಬರುವುದರಿಂದ ರಕ್ಷಣೆ ಪಡೆಯಲು ಸಾಕು ನಾಯಿ ಬಳಸುತ್ತಾರೆ. ಮಾನವರು ಜೀವಿಸಲಿಕ್ಕೆ ಯೋಗ್ಯವಲ್ಲದ ಮೂಲಭೂತ ಸೌಲಭ್ಯಗಳಿಂದ ವಂಚಿತರಾದರು ಇಂತಹ ಸ್ಮಶಾನದಲ್ಲಿ ವಾಸಿಸಲು ಮುಖ್ಯ ಕಾರಣ ಬಾಡಿಗೆ ಕೊಡದಿರುವುದು. ಬೇರೆಯವರು ತೊಂದರೆ ನೀಡದಿರುವುದು. ಕಷ್ಟವಾದರೂ ಅನಿವಾರ್ಯವಾಗಿ ವಾಸಿಸುವರು.

ಬಸ್‌ನಿಲ್ದಾಣಗಳಲ್ಲಿ

ಪ್ರತಿಯೊಂಗು ನಗರ ಮತ್ತು ಗ್ರಾಮಗಳಲ್ಲಿ ಬಸ್ ನಿಲ್ದಾಣ ಕಾಣುತ್ತೇವೆ. ತಾಲ್ಲೂಕು ಕೇಂದ್ರಗಳಲ್ಲಿ ಬಸ್‌ನಿಲ್ದಾಣ ತುಂಬಾ ವಿಶಾಲವಾದ ಜಾಗ ಆವರಿಸಿಕೊಂಡಿರುತ್ತದೆ. ಹಾಗೆಯೆ ಎಲ್ಲಿಯ ತನಕ ನಿಲ್ದಾಣದ ಜಾಗವಿರುವುದೊ ಅಲ್ಲಿಯವರೆಗೆ ಕಾಂಪೌಂಡು ಕಟ್ಟಿರುತ್ತಾರೆ. ಇಂತಹ ಕಾಂಪೌಂಡ್ ಗೋಡೆಗೆ ಆಸರೆಯಾಗಿ ಅಲೆಮಾರಿ ಕುಟುಂಬಗಳು ಕಮಾನಿನ ಆಕಾರದಲ್ಲಿ ಪ್ಲಾಸ್ಟಿಕ್ ಚೀಲ, ಗೋಣಿಚೀಲ, ರಟ್ಟಿನಿಂದ ಬಿಡಾರ ನಿರ್ಮಿಸಿ ಕೊಂಡಿರುವರು. ಅಲ್ಲಿನ ಸಿಬ್ಬಂದಿ ವರ್ಗದವರ ಅನುಮತಿಯು ಇರಬಹುದು. ಇದು ಒಂದು ಮಾದರಿ ವಾಸದ ವ್ಯವಸ್ಥೆಯಾದರೆ ಎರಡನೆಯದಾಗಿ ನಿಲ್ದಾಣದ ಕೊನೆಯ ಸ್ಥಳ ಸ್ವಚ್ಛಮಾಡಿಕೊಂಡು, ಅಲ್ಲಿನ ನೌಕರರ ಅನುಮತಿಯ ಮೇರೆಗೆ ತಮ್ಮ ಬಳಿಯಿದ್ದ ಪ್ಲಾಸ್ಟಿಕ್ ಚೀಲ, ಗೋಣಿಚೀಲ ರಟ್ಟಿನಿಂದ, ಬಿಡಾರ ತಯಾರಿಸಿ ವಾಸಿಸುತ್ತಾರೆ. ಇಂತಲ್ಲಿ ವಾಸಿಸುವುದರಿಂದ ಸಮುದಾಯಗಳಿಗೆ ಹಲವಾರು ಅನುಕೂಲತೆಗಳಿವೆ.

೧. ದಟ್ಟ ಜನಸಂದಣಿಯಾಗಿರುವ ಈ ಸ್ಥಳದಲ್ಲಿ ವ್ಯಾಪಾರ ಮಾಡಲು ಅನುಕೂಲ.

೨. ಸಣ್ಣಪುಟ್ಟ ತಿಂಡಿತಿನಿಸುಗಳನ್ನು ಪ್ರಯಾಣಿಕರಿಗೆ ಮಾರಾಟ ಮಾಡಬಹುದು.

೩. ತಮ್ಮ ಆಟಗಳನ್ನು ತೋರಿಸಬಹುದು.

೪. ಪ್ರಯಾಣಿಕರಿಂದ ಭಿಕ್ಷೆಯನ್ನು ಬೇಡಬಹುದಾಗಿದೆ.

೫. ರಾತ್ರಿವೇಳೆ ಮತ್ತು ಮಳೆಬಂದಾಗ ನಿಲ್ದಾಣದಲ್ಲಿ ಮಲಗಬಹುದು.

೬. ನಿಲ್ದಾಣದಲ್ಲಿ ನೀರು ಸದಾ ಇರುವುದರಿಂದ ನೀರು ಬಳಸಿಕೊಳ್ಳಬಹುದು.

೭. ಬಾಡಿಗೆ ಕಟ್ಟುವ ಅಗತ್ಯವಿಲ್ಲ.

೮. ಪ್ರಯಾಣಿಕರು ಬಿಸಾಡಿದ ಆಹಾರ ಪೊಟ್ಟಣದಲ್ಲಿರುವ ಚೂರುಪಾರು ತಿಂಡಿ ತಿನಿಸು ಸಿಗುತ್ತದೆ.

೯. ಅಡಿಗೆ ಮಾಡಲು ಉರುವಲುಗಾಗಿ ನಿಲ್ದಾಣದಲ್ಲಿ ಬಿದ್ದಿರುವ ಕಾಗದಗಳನ್ನು ಬಳಸಬಹುದು.

೧೦. ಪ್ರಯಾಣಿಕರು ನೀಡುವ ತಿಂಡಿ, ಹಣ್ಣು-ಹಂಪಲುಗಳು ಮಕ್ಕಳಿಗೆ ಸಿಗುತ್ತವೆ.

೧೧. ಭಿಕ್ಷೆಗೆ ಮುಖ್ಯ ಸ್ಥಳವಾಗಿದೆ.

ಹೀಗೆ ಈ ಸಮುದಾಯಗಳಿಗೆ ಎಷ್ಟು ಅನುಕೂಲಗಳಿವೆಯೊ ಅಷ್ಟೆ ಇಲ್ಲಿ ಅನಾನುಕೂಲತೆಗಳು ಇವೆ.

೧. ಊರಲ್ಲಿ ಕಳ್ಳತನಗಳು ನಡೆದರೆ ಈ ಸಮುದಾಯಗಳನ್ನು ನೇರವಾಗಿ ಆರೋಪಿಸುತ್ತಾರೆ.

೨. ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ಕಾಣುವುದು ಹಾಗೂ ಕಿರುಕುಳ ನೀಡುವುದಾಗಿದೆ.

೩. ಗಾಳಿಯಿಂದ ಬಿಡಾರದಲ್ಲಿ ಬೆಂಕಿ ಬಿದ್ದಾರೆ ನಷ್ಟಭರಿಸುವ ವ್ಯವಸ್ಥೆಗಳಿರುವುದಿಲ್ಲ.

೪. ನಿಲ್ದಾದಣದಲ್ಲಿ ನೀರು ಕೈಕೊಟ್ಟಾಗ ಕುಡಿಯಲು ನೀರು ದೊರೆಯಲಾರದು.

೫. ಸಾಕುಪ್ರಾಣಿಗಳು ವಾಹನಗಳ ಶಬ್ದದಿಂದ ಬೆದರು(ಹೆದರು)ತ್ತವೆ.

೬. ಚಿಕ್ಕಮಕ್ಕಳು ಅಪಘಾತದಲ್ಲಿ ಈಡಾಗುವ ಸಂಭವ ಹೆಚ್ಚಾಗಿರುತ್ತದೆ.

ಹೀಗೆ ನಗರ ಮತ್ತು ಗ್ರಾಮಗಳ ಸೌಲಭ್ಯಗಳು ವಂಚಿತವಾಗಿವೆ. ಜನರ ನಿಂದನೆಗಳು ಹೊಡೆತಗಳು ಸಾಮಾನ್ಯವಾಗಿದ್ದರೂ, ಬಸ್ ನಿಲ್ದಾಣವನ್ನೆ ತಮ್ಮ ವಾಸದ ನೆಲೆಯನ್ನಾಗಿ ರೂಪಿಸಿಕೊಂಡು ಬದುಕು ಸಾಗಿಸುತ್ತಿರುವ ಅಲೆಮಾರಿಗಳು ಅಲ್ಲಿನ ಕಷ್ಟಸುಖಗಳನ್ನು ಸಮ ಪ್ರಮಾಣದಲ್ಲಿ ಸ್ವೀಕರಿಸಿಕೊಂಡು ಇದ್ದಷ್ಟು ಕಾಲವಿದ್ದು, ಮುಂದಿನ ಪ್ರದೇಶದಲ್ಲಿ ಬದುಕು ಸಾಗಿಸುವರು.

ನಗರಪಾಲಿಕೆ ಮತ್ತು ತಾಲ್ಲೂಕು ಕಛೇರಿಗಳ ಮೈದಾನಗಳು

ತಾಲೂಕಿನ ಆಡಳಿತ ಕಛೇರಿ, ನಗರದ ನಗರಪಾಲಿಕೆ, ಪುರಸಭೆ, ಜಿಲ್ಲಾಪಂಚಾಯಿತಿ ಕಾರ್ಯಲಯ ಇತ್ಯಾದಿಗಳನ್ನು ಬೃಹತ್‌ನಗರ, ಮದ್ಯಮನಗರ, ಸಾಮಾನ್ಯನಗರ, ಗ್ರಾಮಗಳಲ್ಲಿ ಕಾಣುತ್ತೇವೆ. ಇಂತಹ ಸ್ಥಳಗಳು ವಿಶಾಲವಾದ ಜಾಗ ಆವರಿಸಿಕೊಂಡು ತಮ್ಮದೆ ಆದ ಸೀಮೆಯನ್ನು ಹಾಕಿಕೊಂಡಿರುತ್ತಾರೆ. ಈ ಸ್ಥಳಗಳಲ್ಲಿ ಸ್ಥಗಿತಗೊಂಡ ವಾಹನಗಳು, ಕಬ್ಬಿಣದ ಸಲಕರಣೆಗಳು, ಕಟ್ಟಿಗೆಯ ಉಪಕರಣಗಳು, ಡಾಂಬರು ಡಬ್ಬಿಗಳು, ಕೊಳವೆಗಳ ಸಾಮಾನುಗಳು, ತ್ಯಾಜ್ಯ ಟೈರುಗಳು, ಗಿಡಕಂಟಿಗಳು ಇರುವುದು ಸಾಮಾನ್ಯ.

ಸೊಳ್ಳೆಗಳು, ವಿಷಜಂತಗಳು, ಮರಗಳು ಹೇರಳವಾಗಿರುವದರಿಂದ ಮರಗಳ ಮೇಲೆ ಕೋತಿಗಳು, ಕಾಗೆಗಳು, ತಿಂದುಬಿಸಾಡಿದ ಕಸಗಳು, ಮಲಮೂತ್ರಗಳು ಸಾಮಾನ್ಯವಾಗಿದೆ. ಹಂದಿ, ನಾಯಿ, ಕತ್ತೆಗಳು ಅಲ್ಲಿಯೆ ತಂಗಿರುತ್ತವೆ. ಇಂತಹ ಸ್ಥಳ ಅಲೆಮಾರಿಗಳು ತಾತ್ಕಾಲಿಕವಾಗಿ ತಂಗಲು ಬಿಡಾರ ಹೂಡುತ್ತಾರೆ. ಸದಾ ತಮ್ಮ ಬಳಿಯಲ್ಲಿಯೆ ಇರುವ ಬಿಡಾರದ ಸಾಮಾನುಗಳನ್ನು ಉಪಯೋಗಿಸಿ ಬಿಡಾರ ಹಾಕುವರು. ಇಂತಹ ಸ್ಥಳಗಳಿಂದ ಅಲೆಮಾರಿಗಳಿಗೆ ಆ ಕಛೇರಿಯ ನೀರಿನ ಉಪಯೋಗ ದೊರೆಯುವುದು. ಅಲ್ಲಿನ ಕಟ್ಟಿಗೆ ತುಂಡುಗಳು ಕಾಗದ ಪ್ಲಾಸ್ಟಿಕ್ ಇತ್ಯಾದಿಗಳೂ ದೊರೆಯುವುದು. ಬಾಡಿಗೆ ಕಟ್ಟುವ ಅವಶ್ಯಕತೆಯಿಲ್ಲ. ಅಲ್ಲಿನ ಸಿಬ್ಬಂದಿಗಳ ಅನುಮತಿ ಪಡೆದು ತಮ್ಮ ಬಳಿಯಲ್ಲಿರುವ ಚಿಕ್ಕ-ಪುಟ್ಟ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡಲು, ಕಲೆ ಬಿತ್ತರಿಸಲು ಹಾಗೂ ಯಾವಾಗಲು ಆಫೀಸಿಗೆ ಹೋಗುವ ಬರುವ ಜನರಿರುವು ದರಿಂದ ಭಿಕ್ಷೆ ಬೇಡಲು ಅನುಕೂಲವಾಗುತ್ತದೆ. ಮಳೆಯಿಂದ ರಕ್ಷಣೆಪಡೆಯಲು ರಾತ್ರಿ ಕಛೇರಿಗಳ ಮುಂದೆ ತಂಗಲು ಅನುಕೂಲವಿರುವುದರಿಂದ ವಾಸಿಸಲು ಮುಂದಾಗುವರು. ಆದರೂ ಕೆಲವು ಸಂದರ್ಭ ಗಳಲ್ಲಿ ಅಲ್ಲಿನ ಸಾಮಾನುಗಳು ಕಳ್ಳತನವಾದರೆ, ಸ್ವಚ್ಛತೆಯು ಇಲ್ಲವೆಂದಾಗ ಅನಿವಾರ್ಯವಾಗಿ ಅಲ್ಲಿಂದ ಖಾಲಿ ಮಾಡಿಸುತ್ತಾರೆ. ಖಾಲಿಮಾಡ ಬೇಕಾಗುತ್ತದೆ ಕಾರಣ ಅವರುಗಳ ಅನುಮತಿಯಲ್ಲಿ ಬಿಡಾರಗಳನ್ನು ಹಾಕಿಕೊಂಡಿದ್ದು, ಅವರು ಖಾಲಿ ಮಾಡಿ ಎಂದ್ಹೇಳಿದಾಗ ಮುಂದಿನ ಸ್ಥಳದಲ್ಲಿ ಅಣಿಯಾಗ ಬೇಕಾಗುತ್ತದೆ. ಹೀಗೆ ಅಲೆಮಾರಿಗಳು ಅಧಿಕಾರಿಗಳಿಗೆ, ಸಾಮಾನ್ಯರಿಗೆ ಏನೆಲ್ಲಾ ಸೇವೆಸಲ್ಲಿಸಿದರು ವಾಸದ ಅಭದ್ರತೆ ಇರುವುದರಿಂದ ಮೂಲ ಸೌಲಭ್ಯಗಳಿಲ್ಲದೆ ವಾಸಿಸುವರು.

ಸ್ಥಗಿತಕೊಂಡ ವಾಹನದ ಕೆಳಗಡೆ

ಲಾರಿ, ಬಸ್ಸುಗಳೂ, ಟ್ರಾಕ್ಟರ್‌ಗಳಂತ ವಾಹನಗಳು ಅಪಘಾತಕ್ಕೀಡಾಗಿ ಅಥವಾ ಇನ್ನಾವುದೊ ಸಮಸ್ಯೆಯಿಂದ ಚಾಲನರಹಿತವಾಗಿ ನಿಂತಿರುವುದುಂಟು. ಹಾಗೂ ಸಂಬಂಧಿಸಿದ ಕಛೇರಿಗಳಲ್ಲಿ ನಿಲ್ಲಿಸಿರುವ ವಾನಗಳ ಕೆಳಗೆ ತಾತ್ಕಾಲಿಕವಾಗಿ, ವಾಸಕ್ಕಾಗಿ ಅಲೆಮಾರಿಗಳು ಅಂತವುಗಳನ್ನು ಬಳಸಿಕೊಳ್ಳುವರು. ಅಂದರೆ ತಮ್ಮ ಬಳಿ ಇರುವ ಪ್ಲಾಸ್ಟಿಕ್‌ನ್ನು ವಾಹನದ ಕೆಳಗಡೆ ಮತ್ತು ಸುತ್ತಲು ಗಾಳಿನುಸುಳದಂತೆ ಮತ್ತು ಜನರು ಕಾಣದಂತೆ ಸುತ್ತುವರಿದು ವಾಸಕ್ಕಾಗಿ ನಿರ್ಮಿಸುವರು.ಈ ರೀತಿ ಚಳಿ, ಗಾಳಿ, ಮಳೆ, ಬಿಸಿಲುಗಳಿಂದ ಕೂಡಿದ ಮಲೀನ ಪ್ರದೇಶವಾಗಿದೆ. ಆಹಾರವನ್ನು ವಾಹನಗಳ ಮುಂದೆ ತಯಾರಿಸಿಕೊಂಡು ಊಟಮಾಡಿ ಒಳಗಡೆ ಸಾಮಾನು ಇಟ್ಟುಕೊಂಡು, ಉಳಿದ ಜಾಗದಲ್ಲಿ ವಾಹನದ ಕೆಳಗಡೆ ಮಲಗುವರು. ಬೇಸಿಗೆಯಲ್ಲಿ ವಾಹನಗಳ ಮೇಲೆ ಮಲಗುವರು. ವೃತ್ತಿಗಾಗಿ ಹೊರಡುವಾಗ ವೃದ್ಧರಿಗೆ ಅಥವಾ ಮಕ್ಕಳನ್ನು ಸಾಮಾನು ಕಾಯಲು ಹೇಳಿಹೋಗುವರು. ಇಲ್ಲಿ ಗಾಳಿ ವ್ಯವಸ್ಥೆ ಬಿಟ್ಟರೆ ನೀರು, ಬೆಳಕು ಇತ್ಯಾದಿ ಮೂಲಭೂತ ಸೌಲಭ್ಯ ಇರುವುದಿಲ್ಲ. ಕಾಗದ ಚೂರುಗಳನ್ನು ಉರುವಿಗೆ ಉಪಯೋಗಿಸಿ ಕೊಳ್ಳುವರು. ಕೆಲವು ಸಾರಿ ವಾಹನದಲ್ಲಿರುವ ವಸ್ತುಗಳು ಹಾಳಾಗುವವು ಹಾಗೂ ಕಳ್ಳತನವಾಗುತ್ತವೆ ಎಂಬ ಕಾರಣಕ್ಕಾಗಿ ಅಲ್ಲಿಂದ ಜಾಗ ಖಾಲಿ ಮಾಡಲು ಸೂಚಿಸುತ್ತಾರೆ. ಅದಕ್ಕೂ ಮೊದಲು ವಾಹನಗಳಿಗೆ ರಿಪೇರಿ ಭಾಗ್ಯ ಬಂದಾಗ ಅನಿವಾರ್ಯವಾಗಿ ಸ್ಥಳಬದಲಾಯಿಸಲೇಬೇಕಾಗುತ್ತದೆ.


೩.೫.೨. ಅಲೆದಾಟ

ಹಸಿವು ಮಾನವರಿಗೆ ಸಹಜವಾದದ್ದು. ಹಸಿವನ್ನು ಹಿಂಗಿಸಿಕೊಳ್ಳಲು ಒಂದಲ್ಲ ಒಂದು ರೀತಿಯ ಕೆಲಸಗಳನ್ನು ಮಾಡಬೇಕಾಗಿದೆ. ಹಿಂದೆ "ಆದಿಮಾನವರು ಆಹಾರಕ್ಕಾಗಿ ಅಲೆದಾಡುತ್ತಾ ಪರಿಸರದಲ್ಲಿ ದೊರೆಯುತ್ತಿದ್ದ ಗಡ್ಡೆ-ಗೆಣಸು, ಹಣ್ಣು-ಹಂಪಲು, ಬೇರು, ಕಾಯಿ, ಎಲೆ ಸಂಗ್ರಹ ಮಾಡಿಕೊಂಡು ತಿನ್ನುತ್ತಿದ್ದರು."[48] ಇಂತಹ ಉತ್ಪನ್ನ ದೊರೆಯದಿದ್ದಾಗ ಅಥವಾ ದಿನಪೂರ್ತಿ ಇವುಗಳನ್ನು ತಿನ್ನುವುದು ಅಭಾವ ಎನಿಸಿದ ಪರಿಣಾಮ ಪ್ರಾಣಿ-ಪಕ್ಷಿಗಳ ಬೇಟೆಯನ್ನು ಆರಂಭಿಸಿದರು. ಬೇಟೆಗಾಗಿ ಕಲ್ಲಿನ ಆಯುಧಗಳನ್ನು ಉಪಯೋಗಿಸಿಕೊಂಡರು. ಪ್ರಾಣಿಗಳನ್ನು ಕೊಂದು ಅದರ ಮಾಂಸವನ್ನು ತಿನ್ನುತ್ತಾ ಹಸಿವು ಹಿಂಗಿಸಿಕೊಂಡರು. ತದನಂತರ "ಬೆಂಕಿಯನ್ನು ಕಂಡುಹಿಡಿದು ಬೆಂಕಿಯಲ್ಲಿ ಮಾಂಸ ಸುಡುವುದರೊಂದಿಗೆ ರುಚಿ ಕಂಡುಕೊಂಡರು ಇದರಿಂದ ಬೇಟೆಯು ಒಂದು ಪ್ರಮುಖ ವೃತ್ತಿಯಾಗಿ ಮಾಡಿಕೊಂಡರು."[49]

ಬೌದ್ಧಿಕ ವಿಕಾಸವಾದಂತೆ ಸುತ್ತಲು ಇರುವ ಪರಿಸರದಲ್ಲಿ ಕಲ್ಲುಗಳನ್ನು ಆಯುಧಗಳನ್ನಾಗಿ ಉಪಯೋಗಿಸಿಕೊಂಡರು. ಉಳುಮೆ ಮಾಡುತ್ತ ಆಹಾರದ ಬೆಳೆ ಬೆಳೆದುಕೊಂಡು ಸೇವಿಸಲಾರಂಭಿಸಿದರು. ಬೆಳೆಯಿಂದ ಬಂದ ಆಹಾರದ ಕಾಳು ಉಪಯೋಗಿಸಿ ಅದರ ಹುಲ್ಲು ಪಶುಗಳಿಗೆ ಮೇವುಗಳನ್ನಾಗಿ ಉಪಯೋಗಿಸಿಕೊಂಡರು.

ಹೀಗೆ ಸುಧಾರಿತ ಜೀವನ ಕ್ರಮದೊಂದಿಗೆ ಕುಟುಂಬ, ಮನೆ, ಆಸ್ತಿ, ಕೃಷಿ, ವ್ಯಾಪಾರ ರಂಗಗಳಿಗೆ ಬಂದು ನಿಂತರು. ಈ ಹಂತದಲ್ಲಿ ಭೂಮಿಯು ಆದಾಯ ತರುವ ಮೂಲವಾಗಿದ್ದರಿಂದ ಎಚ್ಚರಗೊಂಡ ಕೆಲವು ಸಮುದಾಯಗಳು ಭೂಮಿಯ ಮೇಲೆ ತಮ್ಮದೆ ಆಧಿಪತ್ಯ ಸ್ಥಾಪಿಸಿ ತನ್ನದಾಗಿಸಿಕೊಂಡರು. ಉಳಿಮೆಗಾಗಿ ಜೀತಮಾಡಲು ಕೆಲವೊಂದು ಸಮುದಾಯಗಳನ್ನು ಬಳಸಿಕೊಂಡು ಕನಿಷ್ಠ ಮಟ್ಟದ ಆಹಾರ ಕೊಡುವ ಮೂಲಕ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಮೇಲ್ವರ್ಗದವರು ಮಾತ್ರ ಶ್ರೇಷ್ಠ ಆಹಾರವನ್ನು ಸ್ವೀಕರಿಸಿದರು. ಇಂತಹ ಸಂದರ್ಭದಲ್ಲಿ ಕೆಲವು ಸಮುದಾಯಗಳು ಜೀತವನ್ನು ಮಾಡಲು ಮನಸ್ಸು ಮಾಡದೆ ಅಲೆಮಾರಿಗಳಾಗಿಯೆ ಮುಂದುವರಿದವು. ಇಂದಿಗೂ ತಮ್ಮ ಪ್ರಾಚೀನ ಕಸುಬುಗಳನ್ನು ನಂಬಿಕೊಂಡು ಆಹಾರಕ್ಕಾಗಿ ಹೇಗೆ ಅಂದಿನ ಮಾನವರು ತಮ್ಮ ವಾಸದ ನೆಲೆಯಿಂದ ದೂರದ ಸ್ಥಳಕ್ಕೆ ಹೋಗಿ ಆಹಾರ ಸಂಗ್ರಹಿಸಿಕೊಂಡು ಮತ್ತೆ ತಮ್ಮ ವಾಸದ ಪ್ರದೇಶಕ್ಕೆ ಮರಳುತ್ತಿದ್ದರೊ. ಅದೆ ತೆರನಾಗಿ ಅಲೆಮಾರಿಗಳು ತಮ್ಮ ಕುಲಕಸುಬನ್ನು ನೆಚ್ಚಿಕೊಂಡು ಆಹಾರ ಪಡೆಯಲು ವಾಸದ ನೆಲೆಯಿಂದ ಆಹಾರಕ್ಕಾಗಿ ವಿವಿಧ ವೃತ್ತಿಗಳೊಂದಿಗೆ ಅಲೆದಾಡುತಿದ್ದಾರೆ.

ಅಲೆದಾಡುವಿಕೆಯು ವೈವಿಧ್ಯಮಯವಾಗಿದ್ದರೂ ಉದ್ದೇಶ ಮಾತ್ರ ಹಸಿವನ್ನು ಹಿಂಗಿಸಿಕೊಳ್ಳುವುದೆ ಆಗಿದೆ. ವೈಭವ ಜೀವನಕ್ಕಾಗಿ ಅಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಯಿತು.



ಅಲೆಮಾರಿಗಳ ಅಲೆದಾಟ

A- ಕಥನಾ ವೃತ್ತಿಗಳಿಗಾಗಿ
B- ಬೇವಿನ ಮತ್ತು ಹೊಂಗೆಯ ಬೀಜ ಆಯುವಿಕೆಗಾಗಿ
C- ಕೂಲಿಗಾಗಿ
D- ವಂಶಾವಳಿ ಹೇಳಲು
E- ಧಾರ್ಮಿಕ ಭಿಕ್ಷಾಟನೆ ಬೇಡಲು
F- ಕಲಾತ್ಮಕ ವಸ್ತುಗಳ ಉತ್ಪಾದನೆಗಾಗಿ
G- ನಾಟಿ ಔಷಧಿ ಶೋಧನೆಗಾಗಿ
H- ಕಚ್ಚಾವಸ್ತುಗಳಿಗೆ
I- ಬೇಟೆ, ಪ್ರಾಣಿಪಕ್ಷಿಗಳ ಸೆರೆಗಾಗಿ
J- ರಿಪೇರಿಗಾಗಿ
K- ವ್ಯಾಪಾರ ಮಾಡಲು
L- ಪ್ರದರ್ಶನ ಮಾಡಲು
M- ಮನೆ ಮತ್ತು ಪಶುಗಳಿಗೆ ಹುಲ್ಲು ಆಯುವಿಕೆಗಾಗಿ
N- ಚಿಂದಿ ಆಯುವಿಕೆಗಾಗಿ
O- ಭವಿಷ್ಯ ಮತ್ತು ಶಕುನ ಹೇಳಲು

ಕಥನಾ ವೃತ್ತಿಗಾಗಿ

ಪೂರ್ವಜರಿಂದಲೂ ಸಮುದಾಯಕ್ಕೆ ಅಂಟಿಕೊಂಡು ಬಂದ ಮತ್ತು ಅದನ್ನೆ ನಂಬಿಕೊಂಡು ಬಂದ ವೃತ್ತಿಯಾದ ವಂಶದ, ಮೂಲಕಥೆ ಹೇಳುವ ಸಮುದಾಯವಾದ ಅಲೆಮಾರಿ 'ದಕ್ಕಲಿಗರು' ಒಂದು ವಿಶಿಷ್ಟ ಸಮುದಾಯವಾಗಿದೆ. ತಮ್ಮ ಹಕ್ಕಿನ ಮನೆಗಳಿಗೆ ವರ್ಷಕ್ಕೊಮ್ಮೆ ಮಾದಿಗರ ಹಟ್ಟಿಯ ಹೊರಗಡೆಯೆ ನಿಂತು ಮಾದಿಗರ ಮೂಲಕಥೆಹೇಳಿ ರಸವತ್ತಾಗಿ ಹಾಡಿ ಲಘು ನರ್ತನಗಳನ್ನು ಮಾಡಿ ಮಾದಿಗರನ್ನು ಮೆಚ್ಚಿಸುತ್ತಾರೆ. ಉಲ್ಲಾಸಗೊಂಡ ಮಾದಿಗರು ನಮ್ಮ ಮನೆಯ ಮಕ್ಕಳು ಬಂದಿದ್ದಾರೆಂದು ಉಳಿದುಕೊಳ್ಳಲು ವ್ಯವಸ್ಥೆ ಮಾಡಿ, ಅನ್ನ-ನೀರು ಬಟ್ಟೆ-ಹಣ ಇತ್ಯಾದಿ ವ್ಯವಸ್ಥೆ ಮಾಡುವರು. ಮಾದಿಗರು ದಕ್ಕಲಿಗರನ್ನು ಮನೆ ಒಳಗೆ ಮತ್ತು ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ದೂರವೆ ನಿಂತು ಕೊಡುವರು. ಅವರು ದೂರದಿಂದ ನಿಂತು ಪಡೆಯುವರು. ಆಕಸ್ಮಿಕವಾಗಿ ಯಾರಾದರೂ ಇವರಿಗೆ ದಾನ ಮಾಡದೆ

ಇದ್ದರೆ ಮನೆಯೊಳಗೆ ಬರುತ್ತವೆಂದು ಇಲ್ಲವೆ ಓಣಿಯೊಳಗೆ ಬರುತ್ತೇವೆಂದು ಹೆದರಿಸುತ್ತಾರೆ. ಕಾರಣ ಪ್ರವೇಶವನ್ನು ಕೇರಿಗಳು ನಿಷೇಧಿಸಿವೆ. ಒಂದುವೇಳೆ ಒಳಗೆ ಬಂದರೆ ಕೇರಿಗೆ ತೊಂದರೆ ಬರುವುದೆಂದು ನಂಬಿಕೆ. ಕೊಡದಿದ್ದವರ ವಿರುದ್ಧ ಪಂಚಾಯಿತಿ ಕರೆಸಿ ನ್ಯಾಯ ಪಡೆಯುತ್ತಾರೆ. ಆ ಮಟ್ಟದಲ್ಲಿ ಹೋಗಬಾರದೆಂಬ ಉದ್ದೇಶದಿಂದ ಏನಾದರೂ ಮಾಡಿ ದಕ್ಕಲಿಗರಿಗೆ ದಕ್ಕಬೇಕಾದ ವಸ್ತು ಕೊಟ್ಟು ಕಳಿಸಿಕೊಡುತ್ತಾರೆ. ಅಲ್ಪಸ್ವಲ್ಪ ದಾನ ನೀಡಿದರೆ, "ನಾವು ನಿಮ್ಮ ಮಗ ಇದ್ದಿನ್ರಿ ನಮಗೆ ಅರ್ಧ ಆಸ್ತಿಕೊಡಿ ಇಲ್ಲವಾದರೆ ನ್ಯಾಯ ಪಂಚಾಯಿತಿ ಮೊರೆ ಹೋಗ್ತಿನಿ"[50] ಎಂಬ ಬೆದರಿಕೆಯನ್ನು ನೀಡುತ್ತಾರೆ. ಮಾದಿಗರಿಗೆ ವಂಶದ ಕಥೆ ಹೇಳುವುದರಿಂದ ನಮಗೆ ಒಳ್ಳೆಯದಾಗುತ್ತದೆಂದು ನಂಬಿ ಏನೂ ಅಪೇಕ್ಷಿಸುತ್ತಾರೊ ಅದನ್ನು ಪೂರೈಸಲು ಮುಂದೆ ಬರುತ್ತಾರೆ. ಇವರು ಹೇಳುವ ಕಥೆಗಳೆಂದರೆ ಆರುಂಧತಿ ಕಲ್ಯಾಣದಲ್ಲಿ "ಮಾದಿಗರ ಹುಡುಗನು ಬ್ರಾಹ್ಮಣ ವಿದ್ಯೆಯನ್ನು ಕಲಿತು, ಬ್ರಾಹ್ಮಣರ ಆರುಂಧತಿಯನ್ನು ಮದುವೆಯಾದ ಕೊನೆಗೆ ಗೊತ್ತಾಗಿ ಆತನನ್ನು ಯಾವ ಉಪಾಯದಿಂದ ಸಂಹಾರ ಮಾಡಲಾಯಿತು ಎಂಬುದನ್ನು ಹೇಳುವರು."[51] ಕಥೆ ಹೇಳುವಾಗ ಬೇಜಾರು ಆಗಬಾರದೆಂದು ಮಧ್ಯ ಮಧ್ಯದಲ್ಲಿ ಹಾಸ್ಯ ಚಟಾಕಿಗಳನ್ನು ಹೇಳುತ್ತಾ ಕಥೆಯನ್ನು ಮುಂದುವರೆಸುವರು.

ಬೇವಿನ ಮತ್ತು ಹೊಂಗೆಯ ಬೀಜ ಆಯುವಿಕೆ

ಸಾಮಾನ್ಯವಾಗಿ ಬರಗಲಾದ ಸಮಯದಲ್ಲಿ ಮಳೆಬೆಳೆ ಇಲ್ಲದಿರುವುದರಿಂದ ಅಲೆಮಾರಿಗಳಿಗೆ ಭಿಕ್ಷೆ ದೊರೆಯುವುದು ಅಪರೂಪ. ಆಹಾರದ ತೊಂದರೆಯಾಗುವುದರಿಂದ ತಮ್ಮ ಬಿಡಾರದ ಸುತ್ತಮುತ್ತಲಿರುವ ಸ್ಥಳಗಳಲ್ಲಿ ಹಾಗೂ ರಸ್ತೆಯ ಅಕ್ಕಪಕ್ಕದಲ್ಲಿರುವ ಹೊಂಗೆಯ ಮರ ಬೇವಿನ ಮರಗಳನ್ನು ಪತ್ತೆ ಮಾಡಿ ಅದರಿಂದ ಕೆಳಗೆ ಬಿದ್ದಿರುವ ಬೀಜಗಳನ್ನು ಆಯುತ್ತಾರೆ.

೧. ಒಣಗಿದ ಬೀಜಗಳನ್ನು ಆಯುತ್ತಾರೆ. ಒಂದು ಕೆ.ಜಿ.ಗೆ ೨ ರಿಂದ ೪ ರೂಪಾಯಿಗೆ ದೊರೆಯುತ್ತದೆ.

೨. ಬೇವಿನ ಹಣ್ಣುಗಳನ್ನು ಆಯ್ದುಕೊಂಡು, ಅವುಗಳನ್ನು ಗುಂಡಿ, ಹಳ್ಳ, ಕೆರೆಗಳ ನೀರಿನಲ್ಲಿ ತೊಳೆದು ಬಿಸಿಲಿಗೆ ಒಣಗಿಸಿ ಬಿಡಾರದಲ್ಲಿ ತರುವರು.

೩. ಹೊಂಗೆಯ ಮರದ ಕಾಯಿ ಹರಿದು ಒಳಗಡೆಯಿರುವ ಪಪ್ಪುಗಳನ್ನು ತೆಗೆಯುವರು. ಹಸಿಪಪ್ಪನ್ನು ಒಣಗಿಸುವರು.

ಹೀಗೆ ಒಣಗಿಸಿದ ಬೀಜಗಳನ್ನು ಹತ್ತಿರದ ಗ್ರಾಮ ಇಲ್ಲವೆ ನಗರಗಳ ಅಂಗಡಿಗಳಿಗೆ ಮಾರಾಟ ಮಾಡುವರು. ಮಾರಾಟದಲ್ಲಿ ಹೋಗುವಾಗ ಬಸ್ಸಿಗೆಕಾಸು ಇಲ್ಲದಿರುವುದರಿಂದ ಸುಮಾರು ೩ ರಿಂದ ೫ ಕಿ.ಮೀ.ರವರೆಗೆ ತಲೆಮೇಲೆ ಹೊತ್ತುಕೊಂಡು ಹೋಗಿ ಮಾರಾಟ ಮಾಡುವರು.

ಕಾಲಲ್ಲಿ ಚಪ್ಪಲಿ ಇಲ್ಲದೆ ಮುಳ್ಳು ಕಲ್ಲುಗಳಿಂದ ನೋವು ಅನುಭವಿಸಿಯೂ ಸಹನೆಯಿಂದ ಬಿಸಿಲಿನ ತಾಪಕ್ಕೆ ಹೊಂದಿಕೊಂಡು ಮಗುವನ್ನು ಸೊಂಟದಲ್ಲಿ ಇರಿಸಿಕೊಂಡು ಅಥವಾ ಹೆಗಲಿನಲ್ಲಿಯೆ

ಹೊತ್ತುಕೊಂಡು ಬೀಜ ಆಯುತ್ತಾರೆ. ಚಿಕ್ಕವರು, ದೊಡ್ಡವರು, ಪುರುಷರು ಮರ ಏರಿ ಕಾಯಿ ಮತ್ತು ಬೀಜ ಬೀಳಿಸುತ್ತಾರೆ. ಕೆಳಗೆ ಸ್ತ್ರೀಯರು ಮತ್ತು ಮಕ್ಕಳು ಆಯುತ್ತಾರೆ. ಒಂದೊಂದೆ ಬೀಜ ಆಯುವುದರಿಂದ ಸಮಯ ತೆಗೆದುಕೊಳ್ಳುವುದರಿಂದ ಪೂರಕೆಯಿಂದ ಬೀಜವೆಲ್ಲ ಒಂದುಗೂಡಿಸಿ ಮೊರದಲ್ಲಿ ಹಾಕಿ, ಗಾಳಿಗೆ ತೂರುತ್ತಾರೆ. ಇಲ್ಲವೆ ಮೊರದಿಂದ ಹೆಕ್ಕುವರು. ಈ ಹಿಂದೆ ಒಣಗಿದ ಬೀಜವಷ್ಟೆ ತೆಗೆದು ಕೊಳ್ಳುತ್ತಿದ್ದರು. ಆದರೆ ಇತ್ತೀಚಿಗೆ ಹಸಿಬೀಜ ಮತ್ತು ಬೇವಿನ ಹಣ್ಣನ್ನು ಮಾರಾಟದಲ್ಲಿ ತೆಗೆದು ಕೊಳ್ಳುವುದರಿಂದ ಸ್ವಲ್ಪ ಅನುಕೂಲವೆ ಆಗಿದೆ. ಅರಣ್ಯ ಇಲಾಖೆಯವರು ಮರಗಳ ಮಾಲೀಕರು ಮರಗಳ ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ಪಡೆಯಲೆ ಬೇಕಾದರೆ ಮಾಲಿಕರ ಮನಸ್ಸು ಒಲಿಸಬೇಕು. ಇಲ್ಲವೆ ಯಾರು ಇಲ್ಲದ ಸಮಯದಲ್ಲಿ ಪಡೆಯಬೇಕು. ಇಂತಹ ಸಂದರ್ಭದಲ್ಲಿ ಸಿಕ್ಕು ಬಿದ್ದಾಗ ಬೈಗಳು, ಹೊಡೆತ ತಪ್ಪಿದ್ದಲ್ಲ.

ಬರಗಾಲದಲ್ಲಿ ನೆಲೆನಿಂತ ಕೆಳವರ್ಗದವರೂ ಧಣಿಗಳ ಮನವೊಲಿಸಿ ಬೀಜ ಆಯುವುದರಿಂದ ಅಲೆಮಾರಿಗಳಿಗೆ ಅವಕಾಶಗಳು ಕಡಿಮೆ. ಪರಿಣಾಮ ಹೊಟ್ಟೆಗೆ ಕಲ್ಲು ಬೀಳುವುದು. ಸರ್ಕಾರ ಬಡ ಜನರಿಗೆ ತಂದಿರುವ ಉದ್ಯೋಗ ಖಾತ್ರಿಯಂತಹ ಯೋಜನೆಗಳೂ ಇವರ ಬಳಿ ಬರುತ್ತಿಲ್ಲ. ಮಾಹಿತಿ ಇಲ್ಲದೆ ಪಡೆಯಲು ಆಗುತ್ತಿಲ್ಲ. ನೆಲೆನಿಂತ ಬಡ ಜನರಿಗೆ ಸಾಕಾಗಲಾರದಿದ್ದಾಗ ಇಂತಹ ಕೆಲಸಗಳು ಅಲೆಮಾರಿಗಳಿಗೆ ದಕ್ಕುವುದೆಂತು? ಒಂದು ವೇಳೆ ದಕ್ಕಿದರು ಅಲ್ಲಿನ ಕೆಲಸ ಪೂರೈಸಲು ಬೇಕಾದ ಉಪಕರಣಗಳ ಕೊರತೆ ಎದ್ದು ಕಾಣುತ್ತದೆ. ಅಷ್ಟಕ್ಕೂ ಒಂದೆಕಡೆ ನೆಲೆನಿಂತರೆ, ಯಾವತೆರನಾದ ಕೆಲಸಗಳಿವೆ ಎಂದು ತಿಳಿಯುತ್ತದೆ ಸದಾ ಸಂಚಾರಿಗಳಾಗಿರುವುದರಿಂದ ಕೆಲಸಗಳ ಮಾಹಿತಿ ದೊರೆಯಲಾರದು.

ಕೂಲಿಗಾಗಿ

ಇತ್ತೀಚಿನ ಆಧುನಿಕ ಮಾಧ್ಯಮಗಳು ನೀಡುವ ಮನರಂಜನೆಯಿಂದ ಪ್ರೇರಿತರಾದ ಜನರು ಅಲೆಮಾರಿಗಳ ಕಸುಬುಗಳಿಗೆ ಸ್ಪಂದಿಸುತ್ತಿಲ್ಲ. ಪರಿಣಾಮ ಜೀವನ ಸಾಗಿಸುವುದೆ ತುಂಬಾ ಕಷ್ಟವಾಗಿದೆ. ಏನಾದರೂ ಮಾಡಿ ಬದುಕುಬೇಕಾಗಿರುವುದರಿಂದ ಕೃಷಿಕೂಲಿ ಮತ್ತು ಕಟ್ಟಡ ಕೆಲಸಗಳ ಕೂಲಿಗೆ ಹೋಗುತ್ತಾರೆ. ಕೃಷಿಕರ ಹೊಲಗದ್ದೆಗಳಲ್ಲಿ ಜೀತ ಮಾಡುತ್ತಾರೆ. ಗುತ್ತಿಗೆದಾರರ ಅನುಮತಿಯ ಮೇರೆಗೆ ಕಟ್ಟಡ ಮತ್ತು ಇತರೆ ಕೆಲಸಗಳಲ್ಲಿ ತೊಡಗುತ್ತಾರೆ. ಇಲ್ಲಿಯೂ ಸ್ಪರ್ಧೆ ಇದೆ. ಕೆಲಸಕ್ಕೆ ಹೋಗಲು ಉಪಕರಣಗಳು ಇಲ್ಲದಿರುವುದು ಹಾಗೂ ಅಪಘಾತಗಳು ಸಂಭವಿಸಿದರೆ ಅದಕ್ಕೆ ಸರಿಯಾದ ಪರಿಹಾರ ಇರುವುದಿಲ್ಲ. ವಾರ ಮತ್ತು ತಿಂಗಳಗಟ್ಟಲೆ ಬಡವಾಡೆ(ಹಣ ಪಾವತಿ) ಆಗದಿರುವುದು ಇತ್ಯಾದಿ. ತೊಂದರೆಗಳಿಂದ ಅಂಗಡಿಗಳಲ್ಲಿ ಉದ್ರಿ ಕೊಡುವುದಿಲ್ಲ. ಉದ್ರಿ ಕೇಳಬೇಕೆಂದರೆ ಪರಿಚಯವಿಲ್ಲದಿರುವುದಾಗಿದೆ. ಕಾರಣ ಊರು ಬಿಟ್ಟು ಊರು ಅಲೆಯುವರೆಂದು, ಯಾವ ಕ್ಷಣ ಊರಿಂದ ಹೋಗುತ್ತಾರೆ ಎಂಬ ಭಯದಿಂದ ಯಾವುದೆ ವಸ್ತುಗಳನ್ನು ಉದ್ರಿಯಾಗಿ ಕೊಡುವುದಿಲ್ಲ. ಒಂದು ವೇಳೆ ಕೊಟ್ಟರು ಕೂಲಿಬರುವುದರೊಳಗಾಗಿ ಎರಡುಪಟ್ಟು ಉದ್ರಿಯಾಗಿರುತ್ತದೆ.

ವಂಶಾವಳಿ ಹೇಳಲು

ಜಾತಿ ಅಥವಾ ಕುಲ ಕೊಂಡಾಡುವುದನ್ನೆ ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು ಬಂದಿರುವ

ಹೇಳುವರು. ತಮ್ಮ ಪೂರ್ವಜರು ಸಂಗ್ರಹಿಸಿಟ್ಟಿರುವ ಮನೆತನಗಳ ವಂಶಾವಳಿ ಕಡತ ತೆಗೆದು ಅವರದೆ ಗತ್ತಿನಲ್ಲಿ ಹೇಳುತ್ತಾ ತಮಗೆ ಬೇಕಾದ ವಸ್ತುಗಳನ್ನು ಕಾಡಿಬೇಡಿ "ನಾನು ನಿಮ್ಮ ಮಗ ನನಗೂ ಪಾಲಿದೆ ಕೊಡಿಯಪ್ಪ"[52] ಎಂದು ಬೇಡಿ ಪಡೆಯುತ್ತಾನೆ. ಆ ಮನೆಯವರು ಕೊಡುವ ತನಕ ಮನೆಬಿಟ್ಟು ಕದಲುವುದಿಲ್ಲ. ತಮಗೆ ಮೀಸಲಾಗಿರುವ ಮನೆಗಳಲ್ಲಿ ಮಾತ್ರ ವಂಶಾವಳಿ ಹೇಳುತ್ತಾರೆ. ಆಕಳು, ಕರು, ಎಮ್ಮೆ, ಮೇಕೆ, ಕೋಳಿ, ಕುರಿ, ಬಟ್ಟೆ, ದವಸ ಇತ್ಯಾದಿ ಪಡೆಯುವರು. ಎತ್ತಿನ ಮೇಲೆ ಕುಳಿತುಕೊಂಡು ಗಂಟೆ ಬಾರಿಸುತ್ತಾ ವಂಶಾವೃಕ್ಷವನ್ನು ಕಂಡುಬಂದರೆ, ಬರಿಗಾಲಲ್ಲಿ ವಂಶವೃಕ್ಷ ಸಾರುವವರಾಗಿರುತ್ತಾರೆ. ಪುರುಷರೆ ಇಂತಹ ಕೆಲಸಗಳನ್ನು ಮಾಡುತ್ತಾರೆ. ಸ್ತ್ರೀಯರು ದಾನದರೂಪದಲ್ಲಿ ತಂದಿರುವ ಕುರಿ, ಮೇಕೆ, ಕೋಳಿ, ದನ, ಕರುಗಳ ಪಾಲನೆಯಲ್ಲಿರುತ್ತಾರೆ. ವಂಶಾವಳಿ ಹೇಳುವಾಗ ಕೆಲವು ವಿಚಿತ್ರ ಗಾದೆ, ಹಾಸ್ಯಾ ಚಟಾಕಿ ಬೆರೆಸುತ್ತಾ ವಂಶವೃಕ್ಷವನ್ನು ಸಾರಸಗಟಾಗಿ ಹೇಳುವರು. "ಇವರನ್ನು 'ನಡೆದಾಡುವ ಇತಿಹಾಸ' ಎನ್ನುವ ಅನ್ವರ್ಥನಾಮ"ದಿಂದ ಕರೆಯಲಾಗುವುದು.

ಧಾರ್ಮಿಕ ಭಿಕ್ಷಾಟನೆ ಮಾಡಲು

ಬಿಡಾರದಲ್ಲಿ ವೇಷಭೂಷಣ ಸಮೇತ ತಯಾರಾಗಿ ಕೈಯಲ್ಲಿ ಚಾಟಿ ಹಿಡಿದುಕೊಂಡು ನಗರ ಮತ್ತು ಗ್ರಾಮಗಳ ಬೀದಿಯಲ್ಲಿ, ಸಂತೆಯ ಪ್ರಮುಖ ಜನಸಂದಣಿಯ ಸ್ಥಳಗಳಲ್ಲಿ ನಿಂತು ಉರುಮೆಯ ನಾದಕ್ಕೆ ನರ್ತಿಸುತ್ತಾ, ಆರ್ಭಟಿಸುತ್ತಾ, ಚಾಟಿಯಿಂದ ಮೈಮೇಲೆ ಹೊಡೆದುಕೊಂಡು ಚಾಕುವಿನಿಂದ ರಕ್ತಬರುವಂತೆ ಕೊಯ್ದುಕೊಂಡು ಭಿಕ್ಷೆ ಬೇಡುತ್ತಾನೆ. ಹೆಂಡತಿಯು ದೇವತೆಯ ಗುಣಗಾನ ಮಾಡಿ ಕಾಣಿಕೆ ಕೊಟ್ಟವರಿಗೆ ಒಳ್ಳೆಯದಾಗಲಿ "ಬಾಲು ಬೇಲು.......

ಬಾಲು ಬೇಲು.......

ತಾನೇ ತಂದಾನೆ......

....

........................"

ಎಂದು ಹೇಳುತ್ತಾ ಹಾರೈಸುತ್ತಾಳೆ. ತಲತಲಾಂತರದಿಂದಲೂ ಆರಾಧಾನೆಯ ಮಾಡಿಕೊಂಡು ಆದಾಯದ ಮೂಲವನ್ನಾಗಿ ಮಾಡಿಕೊಂಡು ಬಂದಿರುತ್ತಾರೆ. ಹೆಚ್ಚಿನ ಕಾಣಿಕೆ ಪಡೆಯಲು ಯಾರು ಯಾವಾವ ವಸ್ತುವನ್ನು ದಾನವಾಗಿ ಕೊಟ್ಟಿದ್ದಾರೆಂದು ಹೇಳುವ ಮೂಲಕ ಭಿಕ್ಷೆಗೆ ಪ್ರೋತ್ಸಾಹಿಸುವರು ಉದಾ: "ನಾಗಪ್ಪ ಬೇಣ್ಣೆಹಳ್ಳಿ ಬೆಳಿ ಕುಡುಗೋಲು ಮಾಡಿಸಿ ಕೊಟ್ಟಾನ" ಎಂದು ಆ ಕಾಣಿಕೆಯನ್ನು ರಾಗದಿಂದ ಹೇಳುತ್ತಾನೆ. ಆ ರಾಗಕ್ಕೆ ಪ್ರತಿಯಾಗಿ ಉರುಮೆ ಬಾರಿಸುತ್ತಾ 'ತಾನ ತಂದನಾ' ಎನ್ನುವ ಪ್ರತಿರಾಗ ಹೇಳುವಳು. ಇದನ್ನು ಕೇಳಿದ ಜನರು ಒಡವೆಗಳನ್ನು ದೇವಿಗೆ ಅರ್ಪಿಸುವರು. ಅರ್ಪಿಸಿದರೆ ಬಂದಿರುವ ದೋಷಗಳು ದೂರವಾಗುತ್ತವೆಂದು, ಜನರು ಒಡವೆ ಮಾಡಿಸಿಕೊಡುತ್ತಾರೆ. ಇವು ಗ್ರಾಮ ಪ್ರದೇಶದಲ್ಲಿ ಮಾತ್ರ ಸಾಧ್ಯವೆ ಹೊರತು ನಗರಗಳಲ್ಲಿ ನಡೆಯುವುದಿಲ್ಲ. ಇತ್ತೀಚೆಗೆ ಗ್ರಾಮದಲ್ಲಿ ಕಡಿಮೆಯಾಗುತ್ತದೆ. ಕೇವಲ ಅಲ್ಪಸ್ವಲ್ಪ ದವಸದಾನ್ಯಗಳನ್ನು ಹಳೆಯ ಬಟ್ಟೆಗಳನ್ನು ಕೊಡುತ್ತಾರೆ. ಕೇವಲ ೨-೩ ರೂಪಾಯಿಗಳಿಗೆ ತಮ್ಮ ದೇಹದಲ್ಲಿರುವ ಅಮೂಲ್ಯವಾದ ರಕ್ತವನ್ನೆ ಸುರಿಸುತ್ತಾರೆ.

ಕಲಾತ್ಮಕ ವಸ್ತುಗಳ ಉತ್ಪಾದನೆಗಾಗಿ

ಒಂದು ಕಾಲದಲ್ಲಿ ಕಲಾತ್ಮಕ ವಸ್ತುವಿಗೆ ಅಪಾರ ಮನ್ನಣೆಯಿತ್ತು. ಪ್ಲಾಸ್ಟಿಕ್ ಉಪಯೋಗದಿಂದ ಲೆಕ್ಕಚಾರ ಏರುಪೇರಾಗಿದೆ. ಪರಿಣಾಮ ಅಲೆಮಾರಿ ಸಮುದಾಯಗಳು ನಿರುದ್ಯೋಗದಿಂದ ಜೀವನಕ್ಕೆ ಅನ್ನದ ಭದ್ರತೆಯಿಲ್ಲದೆ ಪರಿತಪಿಸುವಂತಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಮಧ್ಯದಲ್ಲಿ ಒಂದು ಕಟ್ಟೆಯನ್ನು ನೋಡಬಹುದು. ಆ ಕಟ್ಟೆಯಲ್ಲಿ ಊರಿನ ಜನರು ತಮ್ಮ ಬೇಸರ ಕಳೆಯಲು ಮತ್ತು ದಣಿವು ಹಾಗೂ ಇತರೆ ಕಾರಣಕ್ಕಾಗಿ ಸೇರುತ್ತಾರೆ. ಈ ಸ್ಥಳದಲ್ಲಿ ಜನಜಂಗುಳಿ ತುಂಬಿರುತ್ತದೆ. ಇಂತಹ ಸ್ಥಳಗಳನ್ನು ತಮ್ಮ ಕಸುಬಿಗೆ ಆಯ್ಕೆಮಾಡಿಕೊಂಡು ಓಲೆ ಹೂಡಿಕೊಂಡು ಊರಲ್ಲಿ ಒಂದು ಸುತ್ತು ತಿರುಗಾಡಿ ಹಳೆ "ಅಲ್ಯುಮಿನಿಯಂ ಪಾತ್ರೆಗಳಿಂದ ಹೊಸ ವಸ್ತುಗಳನ್ನಾಗಿ ಮಾಡಿಕೊಡುತ್ತೇವೆ" ಎಂದು ಕೂಗುತ್ತಾ ಓಣಿ ಓಣಿಗಳಲ್ಲಿ ಸುತ್ತಾಡುತ್ತಾರೆ. ಅಲ್ಯೂಮಿನಿಯಂ ತೆಗೆದುಕೊಂಡು ಆಸಕ್ತರು ಇವರ ಬಳಿ ಬರುವರು. ಕುಟುಂಬವು ಉತ್ಪಾದನೆಯಲ್ಲಿ ತೊಡಗುತ್ತದೆ. ಹೆಂಡತಿ ಒಲೆಯ ರಾಟಿ ತಿರುಗಿಸಿದರೆ, ಗಂಡನು ಅಲ್ಯೂಮಿನಿಯಂ ಕರಗಿಸಿ ಅಚ್ಚುಪಡಿಯಲ್ಲಿ ಹಾಕಿ, ತಮಗೆ ಬೇಕಾಗಿರುವ ಗೃಹಬಳಕೆ ವಸ್ತುಗಳಾದ ಸೌಟು, ಕೆರೆಬಿಲ್ಲೆ, ಚುಚ್ಚಗ, ಕೈಬಟ್ಟಲು, ಮೊಸಕಲ್ಲು ಅಲಂಕೃತ ವಸ್ತುವಾದ ದೇವರ ವಿಗ್ರಹ ಇತರೆ ವಸ್ತುಗಳನ್ನು ತಯಾರಿಸಿ ಕೊಡುವರು. ಎಲ್ಲಿಯವರೆಗೂ ಆ ಊರಿನಲ್ಲಿ ಕೆಲಸದ ಅವಕಾಶವಿರುತ್ತದೆ ಅಲ್ಲಿಯವರೆಗೆ ಉತ್ಪಾದನೆ ಮಾಡುತ್ತಾ ಜೀವಿಸುವರು. ಇತ್ತೀಚೆಗೆ ಆಧುನಿಕತೆಯ ನವೀನ ಉಪಕರಣಗಳಿಂದ ಇವರ ಕೆಲಸ ಮೂಲೆಗುಂಪಾಗುವ ಸಾಧ್ಯತೆಗಳು ಕಂಡುಬರುತ್ತಿವೆ. ಒಂದೂರಿನಲ್ಲಿ ಒಂದೆ ದಿನ ತಪ್ಪಿದರೆ ಎರಡು ದಿವಸಗಳು ಉತ್ಪಾದನೆ ಮಾಡಿ ಮುಂದಿನ ಊರಿಗೆ ಪ್ರಯಾಣ ಬೆಳಸುತ್ತಾರೆ.

ನಾಟಿ ಔಷಧಿ ಶೋಧನೆಗಾಗಿ

ಮನುಷ್ಯ ಮತ್ತು ಪ್ರಾಣಿಗಳ ರೋಗಗಳನ್ನು ಗುಣಪಡಿಸುವ ಔಷಧಿಗಳು ಅರಣ್ಯದಲ್ಲಿರುತ್ತದೆ. ಅವರು ಕಾಡೆಲ್ಲಾ ತಿರುಗಾಡಿ ಪತ್ತೆ ಮಾಡಿ ಗಡ್ಡೆ, ಚಕ್ಕೆ, ಕೊಂಬೆ, ರಂಬೆ, ಎಲೆ, ಬಳ್ಳಿಗಳು ಇತರೆ ಸಸ್ಯಗಳನ್ನು ಸಂಗ್ರಹಿಸಿ ಬಿಸಿಲಲ್ಲಿ ಒಣಗಿಸಿ ರೋಗದ ಲಕ್ಷಣದ ಅನುಗುಣವಾಗಿ ವಿಧಾನಗಳ ಮೂಲಕ ಕೊಡುವರು. ಇಂತಹ ಔಷಧಿಗಳಿಂದ ಯಾವುದೆ ಪರಿಣಾಮಗಳು ಬರುವುದಿಲ್ಲ. ಗುಣಮುಖರಾಗುವುದು ಗ್ಯಾರಂಟಿ ಎಂದು ಮಾತಿನ ಮೂಲಕ ಹೇಳುವರು. ಹೀಗೆ ಮಾರಾಟ ಮಾಡುವ ಅಲೆಮಾರಿಗಳು ನಾಟಿ ಔಷಧಿಯನ್ನು ಶೋಧಿಸಿ ಸಂಗ್ರಹ ಮಾಡಿಕೊಂಡು ತಮ್ಮ ವಾಸಸ್ಥಾನಕ್ಕೆ ಮರುಳುವರು. ಬದುಕಿಗಾಗಿ ಆದಾಯ ಪಡೆಯುವರು. ಇಂತಹ ಔಷಧಿ ಖರೀದಿಸುವ ಜನರು ಕಡಿಮೆಯಾಗಿ ಆದಾಯಕ್ಕೆ ಕೊಡಲಿ ಪೆಟ್ಟು ಬಿದ್ದಿದೆ. ಆಧುನಿಕ ಇಂಗ್ಲಿಷ್ ಮಾತ್ರೆಗಳು, ಔಷಧಿಗಳು ಬಂದಿರುವುದರಿಂದ ಗಿಡಮೂಲಿಕೆ ಕೊಳ್ಳಲು ಮುಂದೆ ಬರುವುದಿಲ್ಲ. ಒಂದುವೇಳೆ ಕೊಂಡರು ಅದಕ್ಕೆ ಸರಿಯಾದ ಬೆಲೆ ನೀಡುವುದಿಲ್ಲ. ಔಷಧಿಗಳನ್ನು ಕೊಳ್ಳುತ್ತಾರೆಂಬ ವಿಶ್ವಾಸದಿಂದ ವಿಪರೀತ ಕಷ್ಟ, ನೋವು ಅನುಭವಿಸಿ ವಿಷಜಂತುಗಳೊಂದಿಗೆ ಹೋರಾಟ ಮಾಡಿ ಗಿಡಮೂಲಿಕೆ ತರುವರು. ಗಿಡಮೂಲಿಕೆ ತರುತ್ತೇವೆಂದು ಕಾಡಿಗೆ ಹೋದವರು ಮತ್ತೆ

ವಾಪಸ್ಸು ಬಂದಿಲ್ಲವಂತೆ. ಹೊಟ್ಟೆತುಂಬಿಸಿಕೊಳ್ಳಲು ಸಾವನ್ನು ಬೆನ್ನಿಗೆ ಕಟ್ಟಿಕೊಂಡೆ ಅನ್ವೇಷಣೆಯಲ್ಲಿ ತೊಡಗುತ್ತಿದ್ದಾರೆ. ಇತ್ತೀಚಿನ ಜಾಗತೀಕರಣದಿಂದ ಕಾಡಲ್ಲಿರುವ ಔಷಧಿ ಸಸ್ಯಗಳೆಲ್ಲವೂ ವಿದೇಶಿಯರ ಸ್ವತ್ತಾಗುತ್ತಲಿವೆ. ಅರಣ್ಯ ಕಾಯ್ದೆ ಕಠಿಣವಾಗುತ್ತಿವೆ. ಗಿಡಮೂಲಿಕೆಗೆಂದು ಹೋದವರು ಶಿಕ್ಷೆಗೆ ಒಳಗಾಗುತ್ತಿದ್ದಾರೆ. ಅಲ್ಪಸ್ವಲ್ಪವಾದರು ಅನ್ನ ಕೊಡುವ ಗಿಡಮೂಲಿಕೆಗಳು ಅಲೆಮಾರಿಗಳಿಂದ ದೂರ ಸರಿಯುತ್ತಿವೆ.

ಕಚ್ಚಾವಸ್ತುಗಳಿಗಾಗಿ

ಅನ್ನ ನೀಡುವ ಬಹುಮುಖ್ಯ ಉದ್ಯಮವೆಂದರೆ ಕಾಡು. ಗೃಹೋಪಯೋಗಿ ವಸ್ತುಗಳು ಹಾಗೂ ಅಲಂಕೃತ ವಸ್ತುಗಳು ತುಂಬಾ ವಿಶಿಷ್ಟವಾಗಿ ಕಾಣಲು ಮತ್ತು ಬಾಳಿಕೆ ಬರಲು ಮುಖ್ಯಕಾರಣ ಕಾಡಿನ ಉತ್ಕೃಷ್ಟ ಕಚ್ಚಾವಸ್ತುಗಳಾಗಿವೆ. ಕಚ್ಚಾವಸ್ತು ಪಡೆಯಲು ಬಿಡಾರ ಬಿಟ್ಟು, ಕಾಡಿಗೆ ಬಂದು ಯಾವ ವಸ್ತು ತಯಾರಿಸಲು ಯಾವ ರೀತಿಯ ಕಚ್ಚಾವಸ್ತುಗಳು ಬೇಕೆಂದು ಮೊದಲು ಯೋಜನೆ ರೂಪಿಸಿಕೊಂಡು ಅನ್ವೇಷಣೆಯಲ್ಲಿ ತೊಡಗುವರು. ಸಿಂದಿಯ ಪೊರಕೆ, ಬಿದಿರು, ಬಳ್ಳಿ, ಮೆದುವಾದ ಮರ, ಅಂಟು ಇತ್ಯಾದಿಗಳನ್ನು ಕಾಡಲ್ಲಿ ಅಲೆದು, ಪತ್ತೆಮಾಡಿ ತಮ್ಮ ಉತ್ಪಾದನೆಗೆ ಯಾವ ರೀತಿಯಾಗಿ ಬೇಕಾಗುವುದೊ ಆ ರೀತಿಯಲ್ಲಿ ಅವುಗಳನ್ನು ಕತ್ತರಿಸಿಕೊಂಡು ತರುವರು. ಕುಟುಂಬದ ಗಂಜಿಯ ಉದ್ದೇಶಕ್ಕಾಗಿ ಯಾರು ಇಲ್ಲದ ಸಮಯ ನೋಡಿ ವಸ್ತುಗಳನ್ನು ಪತ್ತೆಮಾಡಿ ಸಾಗಾಣಿಕೆಯ ಸಾಧನಗಳಿಲ್ಲದೆ ತಲೆ ಮೇಲೆ ೫ ರಿಂದ ೧೦ ಕಿ.ಮೀ ಹೊತ್ತುತರುತ್ತಾರೆ. ಸಂಪರ್ಕ ರಸ್ತೆಗೆ ಬಂದು ಕತ್ತೆಗಳ ಮೂಲಕ ವಸ್ತುವನ್ನು ತಾವಿರುವಲ್ಲಿಗೆ ತಂದು ಯಾವ ವಸ್ತು ತಯಾರಿಸಲು, ಯಾವ ತೆರನಾದ, ಆಕಾರ ಬೇಕಾಗುವುದೊ ಆ ರೀತಿಯಲ್ಲಿ ತಯಾರಿಸಿಕೊಂಡು ಉತ್ಪಾದನೆಯಲ್ಲಿ ತೊಡಗುವರು.

ಬೇಟೆ ಮತ್ತು ಪ್ರಾಣಿ-ಪಕ್ಷಿಗಳನ್ನು ಸೆರೆಹಿಡಿಯಲು

ಪುರಾತನ ಕಾಲದಿಂದಲೂ ಮಾಂಸವನ್ನು ಪ್ರಮುಖ ಆಹಾರವನ್ನಾಗಿ ಮಾಡಿಕೊಂಡರು. ಅಲೆಮಾರಿಗಳು ಅದನ್ನೆ ಒಂದು ಉದ್ಯೋಗವೆಂಬಂತೆ, ಕಾಡಿನಲ್ಲಿ ಬೇಟೆಯ ತಂತ್ರಗಳನ್ನು ಉಪಯೋಗಿಸಿ ಜಿಂಕೆ, ಬೆಕ್ಕು, ಮೊಲ, ಕರಡಿ, ಹಂದಿ, ನವಿಲು, ಬೆಳ್ವ ಪುರಲಿ, ಹಕ್ಕಿ ಇತ್ಯಾದಿ ಪ್ರಾಣಿ ಪಕ್ಷಿಗಳನ್ನು ಹಿಡಿಯುತ್ತಾರೆ. ಕುಲಕಸುಬಿನ ಅನುಕೂಲದ ಉದ್ದೇಶಕ್ಕಾಗಿ ಕರಡಿ, ಕೋತಿ, ಹಾವು, ಗಿಳಿ ಇತರೆ ಪ್ರಾಣಿ-ಪಕ್ಷಿಗಳನ್ನು ಆದಾಯವನ್ನಾಗಿ ದುಡಿಯುವ ಸಾಧನಗಳಾಗಿ ಬಳಸಿಕೊಳ್ಳುವರು. ಇಲ್ಲಿ ಬೇಟೆಯು ಸಿಗಬಹುದು ಸಿಗದೆ ಇರಬಹುದು. ಬೇಟೆ ದೊರತರೆ ಊಟ ಇಲ್ಲವೆಂದರೆ ಸಿಗುವವರೆಗೆ ಉಪವಾಸ. ಎಷ್ಟೆ ಸಮಯವಾದರೂ ಸರಿಯೆ ಪಡೆಯುತ್ತೇನೆಂಬ ಅಚಲ ನಂಬಿಕೆಯಿದೆ. ಕೆಲವೊಂದು ಪ್ರಾಣಿಪಕ್ಷಿಗಳನ್ನು ಸಾಕಿದರೆ ಮತ್ತೆ ಕೆಲವನ್ನು ಮಾರಾಟ ಮಾಡುವರು. ಮತ್ತೆ ಕೆಲವನ್ನು ಊಟಕ್ಕೆ ಉಪಯೋಗಿಸಿಕೊಳ್ಳುವರು.

ರಿಪೇರಿಗಾಗಿ

ಬಳಸುವ ಗೃಹೋಪಯೋಗಿ ವಸ್ತುಗಳಾದ ಪ್ಲಾಸ್ಟಿಕ್ ಕೊಡ, ಹಿತ್ತಾಳೆ, ಹಂಚು, ಬಕೇಟ್, ಬುಟ್ಟಿ ತಂಬಿಗೆ ಇತರೆ ದಿನದ ಬಳಕೆಯಲ್ಲಿ ಉಪಯೋಗಿಸುವ ವಸ್ತುಗಳು ಹಾಳಾಗಿರಬಹುದು. ಇಂತವುಗಳನ್ನು ಉಪಯೋಗಕ್ಕೆ ಯೋಗ್ಯವಾಗುವಂತೆ ಮಾಡುವುದು ರಿಪೇರಿಯಾಗಿದೆ. ಬೆಸುಗೆಯನ್ನು

ಹಾಕಿ ಪುನಃ ಬಳಕೆಗೆ ಬರುವಂತೆ ಮಾಡುತ್ತಾರೆ. ಪ್ರತಿ ಬೀದಿಗಳು ಕೂಗುತ್ತಾ ಕೆಲಸ ಕೇಳುವರು. ಹಾಗೂ ಚಾಕು, ಚೂರಿ, ಕೊಡಲಿ, ಕುಡುಗೋಲು, ಮಚ್ಚು, ಉಳಿ ಇತ್ಯಾದಿಗಳನ್ನು 'ಸಾಣೆ' ಹಿಡಿದು ಮರುಬಳಕೆಗೆ ಬಳಸುವಂತೆ ಮಾಡಿಕೊಡುತ್ತಾರೆ. ಜನರು ಕೊಟ್ಟ ಸಾಮಾನು ರಿಪೇರಿ ಮಾಡುತ್ತಾ, ರಿಪೇರಿಯಿಂದ ಬಂದ ಹಣದಿಂದ ಉಪಜೀವನ ನಡೆಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಸ್ಟೀಲಿನ ಉಪಯೋಗ ವಾಗುತ್ತಿರುವುದರಿಂದ ಅವರ ಕೆಲಸದಲ್ಲಿ ಯಾವುದೆ ಉದ್ಯೋಗವಿಲ್ಲದೆ ಸಮಸ್ಯೆ ಎದುರಿಸಬೇಕಾಗಿದೆ. ಅಲ್ಪಸ್ವಲ್ಪ ಸಿಗುವ ಕೆಲಸಗಳಲ್ಲಿಯು ಜನರೂ ಚೌಕಾಸಿ ಮಾಡುವುದರಿಂದ ಕೂಲಿಯೂ ಗಿಟ್ಟುವುದಿಲ್ಲ. ದಿನಾಲೂ ಬೆಂಕಿಯನ್ನು ಕೈಯಲ್ಲಿ ಹಿಡಿದುಕೊಂಡು ತಿರುಗುವುದರಿಂದ ಆರೋಗ್ಯದ ಮೇಲೆಯು ಪರಿಣಾಮ ಬೀರುತ್ತಿದೆ. ಕಷ್ಟವೊ ಸುಖವೊ ಸಹಿಸಿಕೊಂಡು ರಿಪೇರಿ ಮಾಡುತ್ತಾರೆ.

ವ್ಯಾಪಾರಕ್ಕಾಗಿ

ಉತ್ಪಾದಿಸಿದ ವಸ್ತುಗಳಾದ ಗೊಂಬೆ, ಗಿಳಿ, ತೋರಣ, ಬುಟ್ಟಿ, ಚಾಪೆ, ಸರ, ಗೆಜ್ಜೆ, ಪೊರಕೆ, ಗಿಡಮೂಲಿಕೆ, ಮಾಂಸ, ಹಾಲು, ಜೇನು, ಅಲಂಕಾರಿಕ ಮತ್ತು ಗೃಹೋಪಯೋಗಿ ವಸ್ತುಗಳನ್ನು ತಲೆಮೇಲೆ ಹೊತ್ತು ಬೀದಿ ಬೀದಿಯಲ್ಲಿ ಅಥವಾ ಸಂತೆ ನಗರಪ್ರದೇಶ ಗ್ರಾಮಗಳಲ್ಲಿ ವಸ್ತುವಿನ ಅಂದಚೆಂದ ವರ್ಣಿಸುತ್ತಾ ವಸ್ತು ಮಾರುವರು. ಬೆಲೆಯು ಸಂದರ್ಭದ ತಕ್ಕಂತೆ ಬದಲಾವಣೆ ಹೊಂದ ಬಹುದು. ಆದರೆ ಮಾರಾಟ ಮಾತ್ರ ನಿಲ್ಲುವುದಿಲ್ಲ. ಲಾಭ ಬಂದರು ಸರಿಯೆ ನಷ್ಟವಾದರೂ ಸರಿಯೆ ಬದುಕ ಬೇಕಾಗಿರುವುದರಿಂದ ಕೇಳಿದ ಬೆಲೆಗೆ ಕೊಡುವರು. ಇತ್ತೀಚೆಗೆ ಆಧುನಿಕ ಕಾರ್ಖಾನೆಗಳ ಮೂಲಕ ತಯಾರಾಗುವ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದೆ. ಮತ್ತು ಅವುಗಳ ಬಣ್ಣ ವಿನ್ಯಾಸ ಆಕಾರಗಳು ಅಲಂಕಾರಿಕ ರೂಪಗಳು ಜನರನ್ನು ಆಕರ್ಷಿಸುವಲ್ಲಿ ಹೆಚ್ಚಿನ ಪಾತ್ರವಹಿಸಿರುವುದರಿಂದ ಅಲೆಮಾರಿಗಳ ವಸ್ತುಗಳ ಮಾರಾಟವು ನೆಲಕಚ್ಚಿದೆ. ಇಷ್ಟಾದರೂ ಇವರು ಗ್ರಾಮೀಣ ಪ್ರದೇಶಗಳಿಗೆ ಹೋಗಿ ೩ ರಿಂದ ೫ ಕಿ.ಮೀ. ನಡೆದು ಗ್ರಾಮಗಳನ್ನು ಸುತ್ತಾಡಿ ವಸ್ತುಗಳ ಮಾರಾಟ ಮಾಡುವರು.

ಕಲಾಪ್ರದರ್ಶನಕ್ಕಾಗಿ

ಸಮುದಾಯದ ಜೊತೆ ರಕ್ತಗತವಾಗಿ ಬಂದಿರುವ ಕಲೆಯನ್ನು ಜನರೆದುರು ಅಭಿನಯಿಸಿ ಅದರ ಪ್ರತಿಯಾಗಿ ಜನರಿಂದ ಪ್ರತಿಫಲ ಪಡೆಯುತ್ತಾರೆ. ಪ್ರತಿಫಲವು ನಿಗದಿಯಾಗಿರುವುದಿಲ್ಲ. ಪ್ರೇಕ್ಷಕರು ತಮಗೆ ಮನಸ್ಸಿಗೆ ಬಂದಷ್ಟು ಕೊಡುವರು. ಅದನ್ನೆ ದೊಡ್ಡ ಮೊತ್ತವೆಂದು ಭಾವಿಸಿ ತೆಗೆದುಕೊಳ್ಳುತ್ತಾರೆ.

ಉದಾ: ಡೊಂಬರಾಟ, ಸ್ತ್ರೀಪುರುಷರು ಹಾಗೂ ಮಕ್ಕಳು ಆಟದಲ್ಲಿ ಭಾಗಿಯಾಗಿ ವೈವಿಧ್ಯಮಯ ಕಸರತ್ತು ಹಾಸ್ಯ ಸನ್ನಿವೇಶಗಳು ನರ್ತನೆಯಿಂದ ಜನರನ್ನು ರಂಜಿಸುವರು. ಬುರ್ರಕಥೆ, ಹಗಲುವೇಷ, ಕವಲೆತ್ತು ಆಡಿಸುವುದು, ಹಾವಾಡಿಸುವುದು, ಮಂಗನಾಟ, ಕರಡಿಕುಣಿತ ಇತ್ಯಾದಿ ಆಟಗಳನ್ನು ವೇದಿಕೆ ರಹಿತವಾಗಿ ಬಯಲಿನಲ್ಲಿ ಅಭಿನಯಿಸುವರು.

ಗುಡಿಸಲು ಹೊದಿಕೆ ಮತ್ತು ಪಶುಗಳ ಮೇವಿಗಾಗಿ

ಅಡಿವಿಚೆಂಚರು ಮತ್ತು ಕೊರಚ ಸಮುದಾಯಗಳು ಗುಡ್ಡ-ಗಾಡುಗಳಲ್ಲಿ ಬೆಳೆದುನಿಂತಿರುವ ಹುಲ್ಲು

ಆಯುತ್ತಾರೆ. ಆಯ್ದ ಹುಲ್ಲನ್ನು ಪಶುಗಳಿಗೆ ಆಹಾರವಾಗಿ ಉಪಯೋಗಿಸುತ್ತಾರೆ ಮತ್ತು ಗುಡಿಸಲು ನಿರ್ಮಾಣಕ್ಕಾಗಿ ಉಪಯೋಗಿಸುವರು. ದೂರದ ಪ್ರದೇಶಗಳಿಂದ ಹುಲ್ಲು ಆಯ್ದುಕೊಂಡು ತರುತ್ತಾರೆ. ಇದಕ್ಕೂ ಅರಣ್ಯ ಇಲಾಖೆಯ ಅಡಚಣೆಗಳಿವೆ. ಹುಲ್ಲು ಪೆಂಡಿಕಟ್ಟಿ ಸಮೀಪದ ಗ್ರಾಮಕ್ಕೆ ತೆರಳಿ ೧೦ ರಿಂದ ೨೦ ರೂಪಾಯಿಗಳವರೆಗೆ ಮಾರಾಟ ಮಾಡುವರು.

ಚಿಂದಿ ಆಯುವಿಕೆಗಾಗಿ

ಸ್ತ್ರೀಯರು ಮತ್ತು ಮಕ್ಕಳು ತಮ್ಮ ಬಿಡುವಿನ ವೇಳೆ ಅಥವಾ ಬರಗಾಲದಲ್ಲಿ ಹಾಗೂ ದಿನಾಲು ಒಂದೆ ವೃತ್ತಿ ಮಾಡುವುದರಿಂದ ಬೇಸತ್ತ ಜನ ಭಿಕ್ಷೆ ಕೊಡದಿದ್ದಕ್ಕಾಗಿ ಕುಟುಂಬದ ಆರ್ಥಿಕ ಸಹಾಯಕ್ಕಾಗಿ ಸ್ಪಂದಿಸಲು ಉಪಯೋಗ ಮಾಡಿರಕೊಂಡು, ಬೇರೆ ಬೇರೆ ವೃತ್ತಗಳಾದ ಬಿಸಾಡಿದ, ಪ್ಲಾಸ್ಟಿಕ್ ಚೀಲ, ಪ್ಲಾಸ್ಟಿಕ್ ತುಣುಕುಗಳು, ಮಾದಕ ಪೇಯ, ಬಾಟಲಿಯ ಮುಚ್ಚಳ, ಅಲ್ಯೂಮಿನಿಯಂ, ತಗಡು, ಕಬ್ಬಿಣ, ತಾಮ್ರದ ತುಣುಕು ಇತ್ಯಾದಿಗಳನ್ನು ಬೀದಿಯಲ್ಲಿ ಕಸದ ತೊಟ್ಟಿಯಲ್ಲಿ, ಮಾರುಕಟ್ಟೆಯಲ್ಲಿ, ಚರಂಡಿಯಲ್ಲಿ ಹುಡುಕಾಡಿ ಆಯ್ದುತಂದು ತೊಳೆದು, ಒಣಗಿಸಿ ಹತ್ತಿರದ ಗುಜರಿ ಅಂಗಡಿಗಳಿಗೆ ತೂಕದಂತೆ ಮಾರಾಟಮಾಡುತ್ತಾರೆ. ಇದರಿಂದ ಬಂದ ಹಣದಿಂದ ಜೀವನ ನಡೆಸುತ್ತಾರೆ.

ಭವಿಷ್ಯ ಮತ್ತು ಶಕುನ ಹೇಳಲಿಕ್ಕಾಗಿ

ಮಾನವನು ತನ್ನ ಪಂಚೇಂದ್ರೀಯಗಳ ಮೂಲಕ ತಿಳಿಯಲು ಸಾದ್ಯವಾಗದೆ, ಅತೀಂದ್ರಿಯ ಶಕ್ತಿಯ ಮೂಲಕ ಬೇರೆಯವರ ಮನಸ್ಸಿನ ಅಂತರಾಳದಲ್ಲಿರುವ ಅಲೋಚನೆಗಳನ್ನು ತಿಳಿಯುವುದನ್ನು ಭವಿಷ್ಯ ಎನ್ನುತ್ತೇವೆ. ಇಂಗ್ಲೀಷ್‌ನಲ್ಲಿ Divination ಎಂದು ಕರೆಯುತ್ತೇವೆ."[53] ಈ ವಿದ್ಯೆಯು ಕ್ರಿಯೆಗಳನ್ನು ಹೊಂದಿರುತ್ತದೆ.

೧. ಅಂತರಾಳದ ಆಲೋಚನೆ ತಿಳಿಯುವಿಕೆ

೨. ಕಳೆದು ಹೋಗಿರುವ ವಸ್ತುವನ್ನು ತಿಳಿಯುವುದು

೩. ನಾಳೆ ಏನಾಗಬಹುದೆಂದು ತಿಳಿಯುವುದು

ಇದರಲ್ಲಿ ಎರಡು ವಿಧಾನಗಳನ್ನು ನೋಡಬಹುದು.

೧. ಆಂತರಿಕ ವಿಧಾನ ೨. ಬಾಹ್ಯವಿಧಾನ

ಅಂಜಿನಿ ಹಾಕಿನೋಡುವುದು, ಗಣಿ ಊದಿ ಹೇಳುವುದು ಆಂತರಿಕ ವಿಧಾನವಾಗಿದೆ. ಮೊರದಲ್ಲಿ ಅಕ್ಕಿಕಾಳು ಹಾಕಿ ಕವಡೆ ಹಾಕಿ ನೋಡುವುದು ಬಾಹ್ಯವಿಧಾನವಾಗಿದೆ. ಈ ಮೇಲಿನ ಎರಡು ವಿಧಾನಗಳ ಉದ್ದೇಶಗಳು ಪಂಚೇಂದ್ರಿಯಗಳ ಪರಿಮಿತಿಯನ್ನು ಮೀರಿ ನಡೆಯಬಹುದಾದ ವಿದ್ಯಾಮಾನಗಳನ್ನು ಅರಿಯುವದಾಗಿದೆ. ಈ ರೀತಿಯ ಕಾಯಕ ಪ್ರೀಯರಾದ ಅಲೆಮಾರಿಗಳು ಶತಶತಮಾನಗಳ ಕಾಲದಿಂದಲೂ ವಂಶಪಾರಂಪರ್ಯವಾದ ಭವಿಷ್ಯ ಹೇಳುವುದನ್ನೆ ನಿಷ್ಠೆಯಿಂದ ಕಾಯಕ ಮಾಡಿಕೊಂಡು ಬಂದಿದ್ದಾರೆ.

ಉದಾ ಕೊರವಂಜಿ ಕಣಿ ಹೇಳುವುದು, ಬುಡುಬುಡಕಿ ಶಕುನ ನುಡಿಯುವುದು, ಜ್ಯೋತಿಷ್ಯಗಾರರು ಜ್ಯೋತಿಷ್ಯ ಹೇಳುವುದು ಇತ್ಯಾದಿ. ಇಂತಹ ಕಾಯಕ್ಕಾಗಿ ಬಿಡಾರದಿಂದ ಬಹುದೂರ ಹೋಗಿ ಕಾಯಕ ಮುಗಿದ ಮೇಲೆ ಬಿಡಾರದಲ್ಲಿ ಬರುವರು. ಈ ಕಾಯಕ ಕೊಡುವ ಸಂಭಾವನೆಯು ಜನರನ್ನು ಆಧರಿಸುತ್ತದೆ. ಹೀಗೆ ಅಲೆಮಾರಿ ಸಮುದಾಯಗಳು ಎಲ್ಲಿ ಅನುಕೂಲವಿದೆಯೊ ಅಲ್ಲಿ ಕಷ್ಟ-ನೋವು ಅನುಭವಿಸಿ ತಾತ್ಕಾಲಿಕವಾಗಿ ವಾಸಿಸಿ, ಬದುಕಿಗಾಗಿ ವಾಸದನೆಲೆಯಿಂದ ವಿವಿಧ ಸ್ಥಳಗಳಿಗೆ ಅಲೆದಾಡಿ ಆ ನೆಲೆಗೆ ವಾಪಸ್ಸಾಗುವರು. ತಮ್ಮ ವೃತ್ತಿಗೆ ಪ್ರತಿಫಲ ದೊರೆಯಲಾರದೆಂದು ಕಂಡುಬಂದಾಗ ಮತ್ತೊಂದು ಪ್ರದೇಶದಲ್ಲಿ ಹೋಗುತ್ತಾರೆ. ಆದರೂ ವಾಸದ ನೆಲೆ ಸಿಕ್ಕಿಲ್ಲ, ಅಲೆದಾಟ ತಪ್ಪಿಲ್ಲ.

ಅಡಿಟಿಪ್ಪಣಿ

೧. ಸಮಾಜಶಾಸ್ತ್ರ ಪ್ರವೇಶ., ಎಸ್. ರಾಜಶೇಖರ್, ೨೦೦೪, ಭ್ರಮರ ಪ್ರಕಾಶನ, ಪು. ೪೫

೨. ಸಮಾಜಶಾಸ್ತ್ರದ ಪರಿಕಲ್ಪನೆಗಳು, ಡಾ. ಎಂ. ಪೂರ್ವಚಾರ್, ೨೦೦೪, ಚೇತನಬುಕ್ ಹೌಸ್, ಮೈಸೂರು. ಪು. ೩೬

೩. ಸಮಾಜಶಾಸ್ತ್ರದ ಪರಿಕಲ್ಪನೆಗಳು, ಎಸ್. ರಾಜಶೇಖರ್, ೨೦೦೪, ಚೇತನಬುಕ್ ಹೌಸ್, ಮೈಸೂರು, ಪು. ೩೮

೪. ಸಾಮಾಜಿಕ ಮಾನವಶಾಸ್ತ್ರ, ಎಂ. ನಂಜಮ್ಮಣಿ, ೧೯೭೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ೪೬

೫,೬. ಸಮಾಜಶಾಸ್ತ್ರದ ಪರಿಕಲ್ಪನೆಗಳು, ಡಾ. ಎಂ. ಪೂರ್ವಚಾರ್, ೨೦೦೪, ಚೇತನಬುಕ್ ಹೌಸ್, ಮೈಸೂರು. ಪು. ೮೪

೭. ಗ್ರಾಮ ಸಮಾಜ, ಡಾ. ಜೋಗನಶಂಕರ್, ೧೯೯೫, ಜೀವಪ್ರಕಾಶನ, ಮೈಸೂರು, ಪು.೪೭

೮. ಗ್ರಾಮ ಸಮಾಜ, ಡಾ. ಜೋಗನಶಂಕರ್, ೧೯೯೫, ಜೀವಪ್ರಕಾಶನ, ಮೈಸೂರು, ಪು.೪೮

೯,೧೦. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೮೪

೧೧. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೮೫

೧೨. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೮೮

೧೩. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೯೪

೧೪. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೯೫

೧೫. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೧೪೪

೧೬. ಸಂಸ್ಕೃತಿ ವಿಕಾಸ, ಡಾ. ನಂ. ತಪಸ್ವೀಕುಮಾರ, ೧೯೯೫, ಸಂಸ್ಕೃತಿ ಭಾರತಿ ಪ್ರಕಾಶನ, ಮೈಸೂರು, ಪು.೧೬೨

೧೭,೧೮. ಸಂಸ್ಕೃತಿ ವಿಕಾಸ, ಡಾ. ನಂ. ತಪಸ್ವೀಕುಮಾರ, ೧೯೯೫, ಸಂಸ್ಕೃತಿ ಭಾರತಿ ಪ್ರಕಾಶನ, ಮೈಸೂರು, ಪು.೧೬೧

೧೯. ಸಮಾಜಶಾಸ್ತ್ರದ ಮೂಲತತ್ವಗಳು, ಸಿ.ಬಿ. ಮನೋಹರ್ ಕುಮಾರ, ೨೦೦೪, ಶ್ರವಣ್ ಪ್ರಕಾಶನ್, ಶಿವಮೊಗ್ಗ, ಪು.೧೭೮

೨೦. ಸಮಾಜಶಾಸ್ತ್ರದ ಮೂಲತತ್ವಗಳು, ಪ್ರೊ. ರಾಮಚಂದ್ರ ಜೋಷಿ, ೨೦೦೪, ಸಿದ್ದಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ, ಪು. ೧೬೦

೨೧. ವಕ್ತೃ: ನಿರಂಜನ ರಾಮಣ್ಣ (೪೦), ಸುಡುಗಾಡು ಸಿದ್ಧರು, ಗುಲ್ಬರ್ಗ, ಗುಲ್ಬರ್ಗ ಜಿಲ್ಲೆ.

೨೨. ಭಾರತೀಯ ಸಮಾಜದ ಅಧ್ಯಯನ, ಎಸ್. ರಾಜಶೇಖರ್, ೨೦೦೨, ಭ್ರಮರ ಪ್ರಕಾಶನ, ಪು.೧೩೩

೨೩. ಭಾರತೀಯ ಸಮಾಜಶಾಸ್ತ್ರ., ಡಾ. ಎಂ.ಪಿ. ಶಂಕರಪ್ಪ, ೨೦೦೫, ಕಾಮಧೇನು ಪ್ರಕಾಶನ, ಬೆಂಗಳೂರು, ಪು. ೩೪

೨೪. ಸಮಾಜಶಾಸ್ತ್ರ, (ಸಂ) ಡಾ. ಚಂದ್ರಶೇಖರ್ ದಾಮ್ಲೆ ಮತ್ತು ಪ್ರೊ. ಪಿ.ಜಿ. ನಾಗನೂರಿ, ೨೦೦೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.

೨೫. ಲಿಂಗಭೇದ ಸಮಸ್ಯೆ ಮತ್ತು ನವೋತ್ತರ ಕಾದಂಬರಿಗಳು, (ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ), ಖಾಜಾವಲಿ ಈಚನಾಳ, ೧೯೯೭, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೦

೨೬. ಸ್ತ್ರೀ-ಪುರುಷ, (ಅನು) ಸರಸ್ವತಿ ರಿಸಿಬೂಡ, (ಮೂಲ ಮರಾಠಿ ಲೇಖಕಿ) ಛಾಯಾದಾತರ್, ೧೯೯೨, ಇಳಾ ಪ್ರಕಾಶನ, ಬೆಂಗಳೂರು, ಪು. ೩೧

೨೭. ಸ್ತ್ರೀ-ಪುರುಷ, (ಅನು) ಸರಸ್ವತಿ ರಿಸಿಬೂಡ, (ಮೂಲ ಮರಾಠಿ ಲೇಖಕಿ) ಛಾಯಾದಾತರ್, ೧೯೯೨, ಇಳಾ ಪ್ರಕಾಶನ, ಬೆಂಗಳೂರು, ಪು. ೩೨

೨೮,೨೯. ಸ್ತ್ರೀ-ಪುರುಷ, (ಅನು) ಸರಸ್ವತಿ ರಿಸಿಬೂಡ, (ಮೂಲ ಮರಾಠಿ ಲೇಖಕಿ) ಛಾಯಾದಾತರ್, ೧೯೯೨, ಇಳಾ ಪ್ರಕಾಶನ, ಬೆಂಗಳೂರು, ಪು. ೩೩

೩೦,೩೧. ಸ್ತ್ರೀ-ಪುರುಷ, (ಅನು) ಸರಸ್ವತಿ ರಿಸಿಬೂಡ, (ಮೂಲ ಮರಾಠಿ ಲೇಖಕಿ) ಛಾಯಾದಾತರ್, ೧೯೯೨, ಇಳಾ ಪ್ರಕಾಶನ, ಬೆಂಗಳೂರು, ಪು. ೩೬

೩೨. ಸ್ತ್ರೀ-ಪುರುಷ, (ಅನು) ಸರಸ್ವತಿ ರಿಸಿಬೂಡ, (ಮೂಲ ಮರಾಠಿ ಲೇಖಕಿ) ಛಾಯಾದಾತರ್, ೧೯೯೨, ಇಳಾ ಪ್ರಕಾಶನ, ಬೆಂಗಳೂರು, ಪು. ೩೮

೩೩. ವಕ್ತೃ: ಜಂಭಕ್ಕ (೨೮), ಸಿಂಧೋಳ್ಳು, ಗುಡಾರನಗರ, ಬಳ್ಳಾರಿ.

೩೪. ವಕ್ತೃ: ರಾಹುಲ್ ನಾಗಪ್ಪ (೪೦), ಸಿಂಧೋಳ್ಳು, ಎಂ.ಡಿ.ಕ್ಯಾಂಪ್, ಕಂಪ್ಲಿ, ಹೊಸಪೇಟೆ ತಾ.

೩೫. ಗಿರಿಜನ ಸಂಸ್ಕೃತಿ (ಸಂ) ಪ್ರೊ. ಕಾಳೇಗೌಡ ನಾಗವಾರ್., ಎನ್. ಹುಚ್ಚಪ್ಪ ಮಾಸ್ತರ್, ೨೦೦೦, ಕನ್ನಡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಪು. ೧೪೯

೩೬. ಕರಕುಶಲ ಕಲೆಗಳು, ಡಾ. ಕರೀಗೌಡ ಬೀಚನಹಳ್ಳಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.

೩೭. ಸಮಾಜಶಾಸ್ತ್ರ, ಎಚ್.ಎಂ. ಸದಶಿವಯ್ಯ, ೧೯೭೯, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು. ೬೨

೩೮. ವಕ್ತೃ: ಮಾರಕ್ಕ ಗಂಡ ಜಂಬಯ್ಯ (೩೮), ಸಿಂಧೋಳ್ಳು, ಎಂ.ಡಿ.ಕ್ಯಾಂಪ್, ಕಂಪ್ಲಿ, ಬಳ್ಳಾರಿ ಜಿಲೆ.

೩೯. ಮಾನವ ಭೂಗೋಳಶಾಸ್ತ್ರ, ಪ್ರೊ. ಎಸ್.ಎನ್. ನಂಜಣ್ಣವರ್, ೧೯೯೩, ವಿಜಯಬುಕ್ ಡಿಪೋ, ಗದಗ, ಪು. ೨೬೭

೪೦. ಮಾನವ ಭೂಗೋಳಶಾಸ್ತ್ರ, ಪ್ರೊ. ಎಸ್.ಎನ್. ನಂಜಣ್ಣವರ್, ೧೯೯೩, ವಿಜಯಬುಕ್ ಡಿಪೋ, ಗದಗ, ಪು. ೨೬೮

೪೧. ಪ್ರಪಂಚದ ಬಾಲ್ಯದಲ್ಲಿ, (ಅನು) ಕೆ.ಎಸ್.ಎಸ್. ನರಸಿಂಹಸ್ವಾಮಿ, ೧೯೬೫, ನ್ಯಾಷನಲ್ ಬುಕ್ ಟ್ರಸ್ಟ್, ಮೈಸೂರು, ಪು. ೩೦

೪೨. ಗ್ರಾಮಸಮಾಜ, ಡಾ. ಜೋಗನ್ ಶಂಕರ, ೧೯೯೫, ಜೀವಪ್ರಕಾಶನ, ಮೈಸೂರು, ಪು.೯

೪೩,೪೪. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೮೮

೪೫. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೯೪

೪೬. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೯೭

೪೭. ಮಾನವಶಾಸ್ತ್ರ, ಪ್ರೊ. ಡಿ.ಕೆ. ಶಿವಣ್ಣ, ೧೯೯೩, ಕಲಾಪ್ರಕಾಶನ, ಬೆಂಗಳೂರು, ಪು. ೧೦೦

೪೮. ಮಾನವ ಭೂಗೋಳಶಾಸ್ತ್ರ, ಪ್ರೊ. ಎಸ್.ಎನ್. ನಂಜಣ್ಣವರ್, ೧೯೯೩, ವಿಜಯಬುಕ್ ಡಿಪೋ, ಗದಗ, ಪು. ೨೬೮

೪೯. ಮಾನವ ಭೂಗೋಳಶಾಸ್ತ್ರ, ಪ್ರೊ. ಎಸ್.ಎನ್. ನಂಜಣ್ಣವರ್, ೧೯೯೩, ವಿಜಯಬುಕ್ ಡಿಪೋ, ಗದಗ, ಪು. ೮೮

೫೦. ವಕ್ತೃ: ರಾಜು (೩೫), ದಕ್ಕಲಿಗ, ವೀರಭದ್ರೇಶ್ವರ ಚಲನಚಿತ್ರಮಂದಿರ, ಕೂಡ್ಲಿಗಿ ತಾ. ಮೂಲಸ್ಥಳ ಚಿಕ್ಕಮೇಗಳಗೇರಿ, ಹರಪ್ಪನಹಳ್ಳಿ ತಾ. ದಾವಣಗೆರೆ ಜಿಲ್ಲೆ.

೫೧. ವಕ್ತೃ: ರಾಜು (೩೫), ದಕ್ಕಲಿಗ, ವೀರಭದ್ರೇಶ್ವರ ಚಲನಚಿತ್ರಮಂದಿರ, ಕೂಡ್ಲಿಗಿ ತಾ. ಮೂಲಸ್ಥಳ ಚಿಕ್ಕಮೇಗಳಗೇರಿ, ಹರಪ್ಪನಹಳ್ಳಿ ತಾ. ದಾವಣಗೆರೆ ಜಿಲ್ಲೆ.

೫೨. ವಕ್ತೃ: ಮುತ್ತಯ್ಯ (೪೮), ಹೆಳವರು, ಬಸವಕಲ್ಯಾಣ, ಗುಲ್ಬರ್ಗ.

ಅಧ್ಯಾಯ ೪

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಆರ್ಥಿಕ ರಚನೆ

೪.೧. ಅಲೆಮಾರಿಗಳ ಕಸುಬು ಮತ್ತು ಕರಕುಶಲತೆ

೪.೨. ಅಲೆಮಾರಿಗಳ ಉತ್ಪಾದನಾ ವ್ಯವಸ್ಥೆ

೪.೩. ಅಲೆಮಾರಿಗಳ ಮಾರುಕಟ್ಟೆ ಮತ್ತು ಮಾರಾಟದ ಪ್ರಕ್ರಿಯೆ

೪.೪. ಅಲೆಮಾರಿಗಳ ಪ್ರದರ್ಶನ ಕಲೆ ಮತ್ತು ಸಂಭಾವನೆ

೪.೫. ಅಲೆಮಾರಿಗಳ ದುಡಿಮೆ ಮತ್ತು ಬದುಕು

೪.೬. ಅಲೆಮಾರಿಗಳ ಪಶುಸಂಪತ್ತು ಮತ್ತು ಆದಾಯ

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಆರ್ಥಿಕ ರಚನೆ

ಪ್ರತಿಯೊಂದು ಸಮಾಜದಲ್ಲೂ ಜನರ ಅವಶ್ಯಕತೆಗಳನ್ನು ಪೂರೈಸಲು ಆರ್ಥಿಕ ರಚನೆಯಿರುತ್ತದೆ. ಆರ್ಥಿಕ ಚಟುವಟಿಕೆಗಳು ಮಾನವನ ಬಯಕೆಗಳು ಮತ್ತು ಅವುಗಳ ತೃಪ್ತಿಗಾಗಿ ನಡೆಸುವ ಪ್ರಯತ್ನದೊಡನೆ ನಿಕಟ ಸಂಬಂಧವನ್ನು ಹೊಂದಿವೆ. ಆರ್ಥಿಕ ರಚನೆಯು ಸಮುದಾಯದ ಜನರು ತಮ್ಮ ಜೀವನೋಪಾಯ ವನ್ನು ಕಂಡು ಕೊಳ್ಳುವ ರೀತಿ-ನೀತಿಗಳನ್ನೊಳಗೊಂಡ ಸಂಘಟಿತ ವಿಧಾನವಾಗಿದೆ. ಹಾಗೆಯೆ ವೃತ್ತಿಗಳ ರಚನೆ, ಉತ್ಪಾದನೆ, ವಿತರಣೆ, ಸಾಕಾಣಿಕೆ, ಅನುಭೋಗ, ವಿನಿಮಯ ಇತ್ಯಾದಿಗಳನ್ನೊಳಗೊಂಡಿರುತ್ತದೆ.

ಮಾನವ ಜೀವಿಸಲು ಊಟ, ಬಟ್ಟೆ, ವಸತಿ ಅತ್ಯವಶ್ಯಕವಾಗಿದೆ. ಬಯಕೆಗಳು ಸರ್ವೆಸಾಮಾನ್ಯವಾಗಿದೆ. ಇಂತಹ ಬಯಕೆಗಳನ್ನು ಈಡೇರಿಸಿಕೊಳ್ಳುವ ಮಾರ್ಗಗಳು ಆಯಾ ಜನ ಸಮುದಾಯದಲ್ಲಿ ವೈವಿಧ್ಯಮಯ ವಾಗಿವೆ. ಏಕೆಂದರೆ ನಾವು ಬಯಸಿದ ವಸ್ತುಗಳೆಲ್ಲಾ ಪುಕ್ಕಟೆಯಾಗಿ ದೊರೆಯಲಾರವು. ಆದ್ದರಿಂದ ವೃತ್ತಿ ಕೈಗೊಂಡು ತಮ್ಮ ಬಯಕೆಗಳನ್ನು ಈಡೇರಿಸಿಕೊಂಡು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ.

ಆದಿಮ ಕಾಲದ ಮಾನವನ ಆರ್ಥಿಕ ರಚನೆ ಸರಳವಾಗಿತ್ತು. ಪ್ರಕೃತಿ ಸಂಪತ್ತನ್ನು ತನ್ನ ಅನುಭೋಗ ದಲ್ಲಿ ಅಳವಡಿಸಿಕೊಂಡು, ತನ್ನ ಬಯಕೆಗಳು ಈಡೇರಿಸಿಕೊಂಡನು. ವಾಸವಾದ ತರುವಾಯ ಹೊಸ ಆಹಾರದ ಶೋಧನೆ, ಖಾಸಗಿ ಆಸ್ತಿ-ಪಾಸ್ತಿಗಳ ಕಲ್ಪನೆಗಳಿಂದ ಬಯಕೆಗಳು ಜಟಿಲ ಸ್ವರೂಪ ಪಡೆದು ತಮ್ಮ ವ್ಯಾಪ್ತಿಯನ್ನು ಮೀರಿ ಬೆಳೆಯತೊಡಗಿದವು. ಬಯಸಿದ್ದನ್ನು ಪಡೆಯಲು ಏನೆಲ್ಲಾ ಪ್ರಯತ್ನಗಳನ್ನು ಮಾಡಿಕೊಂಡು ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಲೆ ಇದ್ದಾನೆ. ಇದರ ಹಿನ್ನೆಲೆ, ಬೌದ್ಧಿಕ ವಿಕಾಸ, ಹೊಸ ತಂತ್ರಜ್ಞಾನಗಳ ಆವಿಷ್ಕಾರ. ಬೌದ್ಧಿಕ ವಿಕಾಸದ ಮೇಲೆ ಹೊಸ ತಂತ್ರಜ್ಞಾನಗಳ ಮೂಲಕ ತ್ವರಿತ ಗತಿಯಲ್ಲಿ ಬಯಸಿದ್ದನ್ನು ಪಡೆಯಲು ನಾಗಲೋಟದಿಂದ ಮುನ್ನುಗ್ಗುತ್ತಿದ್ದಾನೆ. ಈ ರೀತಿಯ ಓಟವು ನೆಲನಿಂತವರಿಗೆ ಸಾಮಾನ್ಯವಾಗಿರಬಹುದು. ಆದರೆ ಅಂಬೆಗಾಲನ್ನಿಡಲು ಪ್ರಾಯಸ ಪಡುತ್ತಿರುವ ಅಲೆಮಾರಿ ಸಮುದಾಯಗಳು ಈ ಓಟದಲ್ಲಿ ಬಹು ಹಿಂದಿದ್ದಾರೆ. ೨೧ನೆಯ ಶತಮಾನದಲ್ಲೂ ಪಾರಂಪಾರಿಕ ವೃತ್ತಿಯನ್ನು ನಂಬಿಕೊಂಡು ಬದುಕಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಚಾಲನೆಯಲ್ಲಿದ್ದಾರೆ.

ಹೈದ್ರಾಬಾದ್ ಕರ್ನಾಟಕ ಭಾಗದ ಅಲೆಮಾರಿ ಸಮುದಾಯಗಳ ಆರ್ಥಿಕ ರಚನೆಯು ತಳಪಾಯ ದಲ್ಲಿರುವ ಕಾರಣ ಅಳವಡಿಸಿಕೊಂಡಿರುವ ಮೌಲ್ಯಗಳು, ಆದರ್ಶಗಳು, ಉತ್ಪಾದನಾ ವಿಧಾನ, ಮಾರಾಟ ಮಾಡುವ ವಸ್ತುಗಳಿಗೆ ಹೆಚ್ಚಿನ ಲಾಭವನ್ನು ನಿರೀಕ್ಷಿಸುವುದಿಲ್ಲ. ಕಾರಣ ಹೆಚ್ಚಿನ ಲಾಭ ತೆಗೆದುಕೊಂಡರೆ

ದೇವರ ಶಾಪಕ್ಕೆ ಗುರಿಯಾಗಬೇಕಾಗುತ್ತದೆಂಬ ಮನೋಭಾವನೆಯಿದೆ. ಮೋಸ, ವಂಚನೆಗಳಿಂದ ಕಳಪೆ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲಾರರು. ಮತ್ತು ಮಾರಾಟ ಮಾಡುವುದಿಲ್ಲ. ಭಿಕ್ಷಾಟನೆಯನ್ನೆ ಪ್ರಮುಖ ವೃತ್ತಿಯನ್ನಾಗಿ ಮಾಡಿಕೊಂಡಿರುವ ಅಲೆಮಾರಿಗಳು ಜೀವನವನ್ನು ಉತ್ತಮವಾಗಿ ರೂಪಿಸಿ ಕೊಳ್ಳಲು ಸಾಧ್ಯವಾಗಿಲ್ಲ. ದೇವರ ಆರಾಧನೆ, ಭಿಕ್ಷೆ ಬೇಡುವುದು, ಪ್ರದರ್ಶನ ಕಲೆಗಳನ್ನು ಪ್ರದರ್ಶಿಸುವುದು, ರಿಪೇರಿ ಮಾಡುವುದು, ಚಿಂದಿಗಳನ್ನು ಆಯುವುದು, ಮಾಲಿಕರ ಹತ್ತಿರ ಜೀತಪದ್ಧತಿಯಲ್ಲಿ ದುಡಿಯುವುದು ಇತ್ಯಾದಿಗಳೆಲ್ಲವೂ ಸಮುದಾಯಗಳಿಗೆ ಉತ್ತಮ ಬದುಕನ್ನು ನೀಡಿಲ್ಲ.

ಸಾಮಾನ್ಯವಾಗಿ ಒಂದು ಸಮುದಾಯ ನೆಲೆನಿಂತಿಲ್ಲ ಎಂದರೆ ಆ ಸಮುದಾಯದಲ್ಲಿ ಬೆಲೆಯಿಲ್ಲ. ನೆಲೆ-ನೆಲ-ಬೆಲೆ ಏನೂ ಇಲ್ಲದೆ ಉಪಜೀವನಕ್ಕಾಗಿ ಏನಾದರೊಂದು ವೃತ್ತಿ ಮಾಡಬೇಕಾಗುವುದರಿಂದ ಅನಿವಾರ್ಯವಾಗಿ ನಂಬಿಕೊಡು, ಮುಂದುವರಿಸಿಕೊಂಡು ಬರುತ್ತಿವೆ. ವೃತ್ತಿ ಭದ್ರತೆ, ಕಾನೂನಿನ ರಕ್ಷಣೆ, ಸಾಲದ ಸೌಲಭ್ಯ, ಸಹಕಾರ ಯಾವುದು ಇಲ್ಲವಾಗಿದೆ. ಜೊತೆಗೆ ಆಗಾಗ ಬದಲಾಗುವ ಕಾನೂನುಗಳು. ಅರಣ್ಯ ಕಾಯ್ದೆ, ಭಿಕ್ಷಾಟನೆ ರದ್ದು, ಪ್ರಾಣಿ-ಪಕ್ಷಿಗಳ ಪ್ರದರ್ಶನ ನಿಷೇಧ ಇತ್ಯಾದಿಗಳೆಲ್ಲವು ಅಲೆಮಾರಿಗಳ ಆರ್ಥಿಕ ರಚನೆಯ ಭಾಗವಾಗಿದ್ದವು. ಆದರೆ ಇಂದು ಇವೆಲ್ಲವುಗಳ ನಿರ್ಬಂಧದಿಂದ ದೂರವಾಗಿ ಹಸಿವು-ನೋವುಗಳು ಕಾಡುತ್ತಿವೆ. ಪರ್ಯಾಯ ವೃತ್ತಿಗಳು ಗೊತ್ತಿಲ್ಲ ಒಂದುವೇಳೆ ತಿಳಿದಿದ್ದರು ಅದಕ್ಕೆ ಅವರಿಗೆ ಅವಕಾಶಗಳಿಲ್ಲದಿರುವುದು. ಮೇಲ್ನೋಟದಲ್ಲಿ ಶೋಷಿತರ ದಮನಿತರ, ತಳದಲ್ಲಿರುವವರ ಸಮುದಾಯಗಳಿಗೆ ಯೋಜನೆಗಳೂ ಸೌಲಭ್ಯಗಳು ಬರುತ್ತಲಿವೆ. ಆರ್ಥಿಕ ಸ್ವರೂಪ ಬದಲಾಗುತ್ತಾ ಇದೆ. ಇದರ ಲಾಭ ಮಾತ್ರ ತಿಳಿದಿರುವ ಸಮುದಾಯಗಳಿಗೆ ಸೇರುತ್ತಿದೆ.

ಬ್ರಿಟಿಷ್‌ರ ಕಾಲದಿಂದಲೂ ಭಾರತದಲ್ಲಿ ಮಿಶ್ರ ಆರ್ಥಿಕ ವ್ಯವಸ್ಥೆಯಿದೆ. ಅಂದಿನಿಂದ ಇಂದಿನವರೆಗೂ ಭಾರತವು ಆದಾಯದಲ್ಲಿ, ಆರ್ಥಿಕ, ಆರೋಗ್ಯ, ಶಿಕ್ಷಣ, ಉತ್ಪಾದನೆಯಲ್ಲಿ ಸದೃಢತೆರಾಗಿರುವುದು ಕಂಡುಬರುತ್ತದೆ. ಕರಕುಶಲ ಸಮುದಾಯಗಳ ಪುನರುಜ್ಜೀವನ ನಡೆಯುತ್ತಿದೆ. ಆದರೆ ಪುನರುಜ್ಜೀವನಗೊಳ್ಳುವ ಕಲೆಗಳಾದರು ಬೆರಳೆಣಿಕೆಯಲ್ಲಿವೆ. ಕೇವಲ ಕಸೂತಿ, ಬುಟ್ಟಿ, ನೇಕಾರಿಕೆ ತಯಾರಿಕೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಇದು ಗಾಂಧೀಜಿಯವರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಗಾಂಧೀಜಿಯವರು ಚರಕ ಮತ್ತು ಇತರೆ ಗೃಹಕೈಗಾರಿಕೆಗಳ ಪುನರುಜ್ಜೀವನ ಶಕ್ತಿ ನೀಡಿದರು. ಮತ್ತು ಅಂತಹ ಕಸುಬುಗಳಿಂದಲೆ ಅಭಿವೃದ್ಧಿ ಸಾಧ್ಯವೆಂದರು. ಆದರೆ ಅಲೆಮಾರಿಗಳು ಉತ್ಪಾದಿಸುವ ವಸ್ತುಗಳಿಗೆ ಕರಕುಶಲ ಕಲೆಗಳಿಗೆ ಮಹತ್ವ ಕೊಡದಿರುವುದು ವಿಷಾದದ ಸಂಗತಿಯಾಗಿದೆ. ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ದಲಿತರರಿಗೆ ತಮ್ಮದೆ ಆರ್ಥಿಕ ರಚನೆಯಿದೆ. ಅಂದರೆ ಕೂಲಿಕೆಲಸ, ನೆಲೆನಿಲ್ಲುವಿಕೆ, ಅಲ್ಪ-ಸ್ವಲ್ಪ ಸೌಲಭ್ಯ ಪಡೆದಿರುವುದನ್ನು ಕಾಣಬಹುದಾಗಿದೆ. ಅನ್ಯಾಯವಾದಾಗ ದಲಿತ ಸಂಘಟನೆಗಳು ಹೋರಾಟ ಮಾಡಿ, ಮೂಲ ಸೌಲಭ್ಯಗಳು ಪಡೆದುಕೊಳ್ಳಬಲ್ಲವು. ಹೀಗೆ ಪ್ರತಿ ಜಾತಿ ಸಮುದಾಯದಲ್ಲೂ ಒಂದೊಂದು ರೀತಿಯ ಆರ್ಥಿಕ ರಚನೆ, ಸಂಘಟನೆ ಮತ್ತು ಹೋರಾಟದ ಶಕ್ತಿಯಿದೆ. ಈ ಶಕ್ತಿ ಅಲೆಮಾರಿಗಳಿಗೆ ಇಲ್ಲವಾಗಿದೆ. ಉತ್ಪಾದನೆಯ ವಸ್ತುಗಳನ್ನು, ಮಾರಾಟ ಮಾಡುವ ವಸ್ತುಗಳನ್ನು ಅಸ್ಪೃಶ್ಯ ನೋಟದಿಂದ ನೋಡಲಾಗುವುದು. ಪ್ರದರ್ಶನಕಲೆಗಳನ್ನು ಕೇಳುವವರೆ ಇಲ್ಲ. ಸಮುದಾಯವು ಬದುಕಬೇಕಾಗಿರುವುದರಿಂದ

ಜಾತಿಯ ಸಂಕರದಲ್ಲಿ ಸಿಲುಕಿಕೊಂಡು ಬಂದಷ್ಟು ಬರಲಿ ಎಂದು ಕೊಂಡು ಮೌಲ್ಯ, ಆದರ್ಶಗಳನ್ನು ಮುಖ್ಯವಾಗಿಟ್ಟುಕೊಂಡು ಅವಿತಿರುವ ಕಸುಬುಗಳನ್ನು ಸಮಾಜದೆದುರು ಅನಾವರಣ ಮಾಡುತ್ತಲಿವೆ. ಅನಾವರಣ ಮಾಡುತ್ತಲೆ ಒಂದ್ಹೊತ್ತಿನ ಊಟಕ್ಕಾಗಿ ಪರದಾಡುತ್ತಿದ್ದಾರೆ. ಇಂತಹ ದುರಂತದ ಬದುಕಿದ್ದರು. ದೇವರ ಮೇಲೆ ಅಚಲವಾದ ಭಕ್ತಿ, ನಂಬಿಕೆಗಳು ಸಮುದಾಯಗಳಲ್ಲಿದೆ. ಆದರು ದೈವ ಮನೋಭಾವನೆಯಿಂದ, ಆದರ್ಶದಿಂದ ತಮ್ಮದೆ ಆದ ಆರ್ಥಿಕ ರಚನೆ ರೂಪಿಸಿಕೊಂಡು ಅಲೆಯುತ್ತಿದ್ದಾರೆ.

ಈ ಹಿಂದೆ ಅಲೆಮಾರಿಗಳಿಗೆ ಅಲ್ಪ-ಸ್ವಲ್ಪವಾದರೂ ಕಾಡಿನ ಸಂಪತ್ತು ದೊರೆಯುತ್ತಿತ್ತು. ಅದರಿಂದ ಜೀವನವನ್ನು ಸಾಗಿಸುತ್ತಿದ್ದರು. ಬರಬರುತ್ತ ಸಂಪತ್ತು ಕೇವಲ ಕೆಲವೆ ಸಮುದಾಯಗಳಲ್ಲಿ ಕೇಂದ್ರಿಕೃತವಾದ ಪರಿಣಾಮ ಅಲೆಮಾರಿ ಸಮುದಾಯಗಳ ಬದುಕು ಭರ್ಬರವಾಯಿತು. ಇಂತಹ ಭಯಾನಕ ಆರ್ಥಿಕ ಸ್ಥಿತಿಯಿದ್ದರು ಅಲೆಮಾರಿಗಳು ಲವಲವಿಕೆಯಿಂದಿರುವುದು ವಿಶೇಷವಾಗಿದೆ.

ಜಾತಿವ್ಯವಸ್ಥೆಯ ಶ್ರೇಣಿಕರಣದ ಸಂಕೀರ್ಣದಿಂದ ಸಂಪತ್ತು ಮತ್ತು ಅವಕಾಶ ಕೇಲವೆ ಕೆಲವರ ಮುಷ್ಠಿಯಲ್ಲಿದ್ದರಿಂದ ಅಲೆಮಾರಿಗಳು ತಮ್ಮ ಪಾರಂಪಾರಿಕ ವೃತ್ತಿಗಳೊಂದಿಗೆ ಜೀವನವನ್ನು ಸಾಗಿಸುತ್ತಿದ್ದಾರೆ. ಬದಲಾದ ಸ್ಥಿತಿಯಲ್ಲಿ ಅಲೆಮಾರಿಗಳ ಸಂಪ್ರದಾಯಿಕ ಕಸುಬುಗಳು ಎಷ್ಟರ ಮಟ್ಟಿಗೆ ಬದುಕನ್ನು ನೀಗಿಸಬಲ್ಲವು. ಜನರ ಎಷ್ಟರ ಮಟ್ಟಿಗೆ ವೃತ್ತಿಗಳಿಗೆ ಪ್ರೋತ್ಸಾಹವಿದೆ. ಅಲೆಮಾರಿ ಸಮುದಾಯಗಳು ತಮ್ಮ ಜೀವಿತದ ಬಹುಭಾಗವಾದ ಆರ್ಥಿಕ ರಚನೆಯು ಹೇಗೆ ಸುತ್ತುವರಿದುಕೊಂಡಿದೆ ಎಂಬುದನ್ನು ಅಧ್ಯಯನದಲ್ಲಿ ನೋಡಬಹುದಾಗಿದೆ.

೪.೧. ಅಲೆಮಾರಿಗಳ ಕಸುಬು ಮತ್ತು ಕರಕುಶಲತೆ

ಮಾನವರ ಬದುಕು ನೈಸಗೀಕ ಸಂಪನ್ಮೂಲಗಳು ಹಾಗೂ ವ್ಯಕ್ತಿಗಳ ಶ್ರಮದ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಆರ್ಥಿಕ ಜೀವನದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಇರುವ ಸ್ಥಿತಿಯಲ್ಲಿಯೆ ಉಪಯೋಗಿಸಿಕೊಳ್ಳಲು ಬರುವುದಿಲ್ಲ. ಪರಿಣಾಮ ಆರ್ಥಿಕ ಸಂಪನ್ಮೂಲಗಳನ್ನು ತನಗೆ ಬೇಕಾದ ರೀತಿಯಲ್ಲಿ ಉಪಯೋಗಿಸಿಕೊಂಡು ಜಾಣ್ಮೆಯಿಂದ ಅವರುಗಳು ಬೆಳವಣಿಗೆಯ ಮೂಲಕ ಪ್ರಗತಿ ಸಾಧಿಸಬಹುದಾಗಿದೆ. ಒಂದು ಕುಟುಂಬದಲ್ಲಿ ತನ್ನದೆ ಆರ್ಥಿಕ ಪದ್ಧತಿಯಿಂದ ಸಂಪನ್ಮೂಲಗಳನ್ನು ಹೇಗೆ ಉಪಯೋಗಿಸಿ ಕೊಳ್ಳಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಂಡಿರುತ್ತಾರೆ.

ಕೆಲವು ಸಮುದಾಯಗಳಲ್ಲಿ ಕುಟಂಬವು ಪ್ರಧಾನ ಆರ್ಥಿಕ ಘಟ್ಟವಾಗಿದೆ. ಅಂತಹ ಸಮುದಾಯವೆಂದರೆ ಅಲೆಮಾರಿಗಳು. ಅಲೆಮಾರಿಗಳ ಕೌಟುಂಬಿಕ ಆರ್ಥಿಕ ಪದ್ಧತಿಯಲ್ಲಿ ಕೆಲವು ಮೂಲಭೂತ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅವು ಉತ್ಪಾದನೆ ಹಾಗೂ ಅನುಭೋಗ ಮತ್ತು ಆರ್ಥಿಕ ಬೆಳವಣಿಗೆ ಇತ್ಯಾದಿಗಳು. ಯಾವುದೆ ರೀತಿಯ ಉತ್ಪಾದನೆಯಾದರೂ ಕುಟುಂಬದಲ್ಲಿ ಆದಾಯ ತರುವ ಉದ್ದೇಶದಿಂದ ಉತ್ಪಾದನೆಯು ನಿರಂತರವಾಗಿ ಸಾಗುವಂತೆ ನೋಡಿಕೊಳ್ಳುವುದು. ಪ್ರತಿಯೊಂದು ಆರ್ಥಿಕತೆಯೆ ಮೊದಲ ಕರ್ತವ್ಯವಾಗಿರುವುದರಿಂದ ಆರ್ಥಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಆರ್ಥಿಕತೆಯು ನಿರ್ವಹಿಸಬೇಕಾದ ಎರಡನೆ ಕಾರ್ಯ ಅನುಭೋಗ ಮತ್ತು ಆರ್ಥಿಕ ಬೆಳವಣಿಗೆ.

ಕುಟುಂಬದ ಅಳಿವು-ಉಳಿವು ಆರ್ಥಿಕ ಬೆಳವಣಿಗೆಯು ಅವಲಂಬಿಸಿರುತ್ತದೆ. ಆದ್ದರಿಂದ ಅಲೆಮಾರಿ ಸಮುದಾಯಗಳು ಉಪಜೀವನಗಳಿಗೆ ಬೇಕಾದ ಯಾವುದೆ ತರಹದ ಮೂಲಗಳಿಂದ ಆದಾಯ ಬರುವಂತೆ ಮಾಡಿಕೊಳ್ಳಲು ಕಸುಬುಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇದರಿಂದ ಜೀವನಸಾಗಿಸುವುದು ಅನಿವಾರ್ಯ ವಾಗಿದೆ. ಕುಲಕಸುಬುಗಳು ಆರ್ಥಿಕವಾಗಿ ಮೇಲ್ಮಟ್ಟದಲ್ಲಿ ಬರದೆ ಇದ್ದರೂ ಅನ್ನ ನೀಡುವ ಆರಾಧ್ಯ ದೈವಗಳಾಗಿವೆ.

ಹೀಗೆ ಕುಲಕಸಬುನೊಂದಿಗೆ ತಳಕು ಹಾಕಿಕೊಂಡ ಅಲೆಮಾರಿಗಳು ತಮ್ಮದೆ ಸಂಪ್ರದಾಯಕರ ಕರ ಕರಕೌಶಲ್ಯದಿಂದ ವಿಶೇಷತೆ ಹೊಂದಿದ್ದಾರೆ. ಗುಣಮಟ್ಟದ ವಸ್ತುಗಳು ತಯಾರಿಸುತ್ತಿರುವುದು ಸಮುದಾಯ ಗಳ ಮತ್ತೊಂದು ವಿಶೇಷತೆಯಾಗಿದೆ. ಕುಲಕಸುಬುಗಳನ್ನು ನಂಬಿಕೊಂಡು ಜೀವನ ಸಾಗಿಸುವ ಮೂಲಕ ಕರಕೌಶಲ್ಯದ ಜಾಣ್ಮೆಯ ಕೈಚಳಕದ ನೈಪುಣ್ಯವನ್ನು ಪ್ರತಿಯೊಂದು ವಸ್ತುವಿನಲ್ಲಿ ಕಾಣಿಸುತ್ತಾರೆ. ಇದನ್ನು ಹಿಂದಿನಿಂದಲೂ ರೂಢಿಸಿಕೊಂಡು ಬಂದಿದ್ದಾರೆ. ಒಬ್ಬ ವ್ಯಕ್ತಿ ಆ ಕಸುಬುಗಳಲ್ಲಿ ತೊಡಗಿರದೆ ಇಡಿ ಕುಟುಂಬ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಅಲ್ಲಿ ನಿರ್ದಿಷ್ಟವಾಗಿ ಯಾರು ಯಾವ ಹಂತದ, ಯಾವ ರೀತಿಯ ಕರಕೌಶಲ್ಯದಲ್ಲಿ ತೊಡಗಬೇಕೆಂದು ಹೇಳಿಸಿಕೊಳ್ಳಲಾರದೆ, ತಮ್ಮ ಪಾಡಿಗೆ ತಾವು ಕಾರ್ಯ ಪ್ರವೃತ್ತರಾಗುತ್ತಾರೆ. ವಸ್ತುವಿನ ಕಲ್ಪನಗೆ ತಕ್ಕಂತೆ ಅವಶ್ಯಕ ಪರಿಕರಗಳನ್ನು ಸಂಸ್ಕರಣಕ್ಕೊಳಪಡಿಸಿ, ಕರಕೌಶಲ್ಯದಿಂದ ಭೌತಿಕ ರೂಪ ಕೊಡುವುದು ಕುಲಕಸುಬಿನ ಕುಶಲತೆಯ ವೈಶಿಷ್ಟ್ಯವಾಗಿದೆ. "ರಸಾನುಭವ ವನ್ನು ಉಂಟುಮಾಡಬಹುದಾದ ಯಾವುದೆ ರಚನೆ ಅಥವಾ ಸೃಷ್ಠಿಯನ್ನು ನಾವು ಕಲೆ ಎಂದು ಗುರುತಿಸುತ್ತೇವೆ."[1] ಹೀಗಾಗಿ ಕಲೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಕರಕುಶಲ ಕಲೆಯು ಸಾಂಸ್ಕೃತಿಕ ಪರಂಪರೆಯ ಒಂದು ಪ್ರತೀಕವಾಗಿರುವುದರಿಂದ. ನಿತ್ಯದ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಹೆಣೆದು ಕೊಂಡಿದೆ. ಕಲೆಗಳನ್ನು ೧. ಕರಕುಶಲ ಕಲೆ ೨. ಲಲಿತ ಕಲೆಗಳೆಂದು ವಿಂಗಡಿಸಲಾಗಿದೆ.

ಕರಕುಶಲ ಕಲೆ : ಆದಿಮಾನವನು ತನ್ನ ಉಪಜೀವನಕ್ಕಾಗಿ ಗಡ್ಡೆ-ಗೆಣಸು ಹಣ್ಣು-ಹಂಪಲ ತಿನ್ನುವುದರೊಂದಿಗೆ ಪ್ರಾಣಿ-ಪಕ್ಷಿಗಳು ಬೇಟೆಯಾಡಿ ಭಕ್ಷಿಸುತ್ತಿದನು. ಬೇಟೆಗಾರಿಕೆಯು ಅವರ ಸಂಸ್ಕೃತಿಯ ಜೀವಾಳವಾಗಿತ್ತು. ಬೇಟೆಗಾರಿಕೆ ನಂತರ ಪಶುಪಾಲನೆಗೆ ದಾರಿಮಾಡಿಕೊಟ್ಟಿತು. ಅಲೆಮಾರಿ ಜೀವನ ಸಾಗಿಸುತ್ತಿದ್ದ ಮಾನವರು ಒಂದೆಡೆ ನೆಲೆನಿಂತು, ಕೃಷಿಯನ್ನು ಮಾಡಿಕೊಂಡರು. ಅಂದಿನಿಂದ ಅವುಗಳಿಗೆ ಸಂಬಂಧಿಸಿದ ಉಪಕರಣಗಳನ್ನು ತಯಾರಿಸಲು ಪ್ರಾರಂಭಿಸಿದರು. ಸಂದರ್ಭನುಸಾರವಾಗಿ ಅನೇಕ ರೀತಿಯ ಕರಕುಶಲಕಲೆಗಳು ಉಗಮಗೊಂಡವು. ಸೌಂದರ್ಯ ಕಲ್ಪನೆಯು ಕೂಡ ಕರಕುಶಲ ಕಲೆಗೆ ತೊಡಗುವಂತೆ ಉತ್ತೇಜನ ನೀಡಿತು. ಸಾಮಾಜಿಕ ಜೀವನ ಪದ್ಧತಿಯಲ್ಲಿ ಮಾನವರು ಕಾಡುಪ್ರಾಣಿಗಳಂತೆ ಅಲೆಯುತ್ತಿರುವ ಸಂದರ್ಭದಲ್ಲಿ ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಕಲ್ಲು, ಮರದ ಕೊಂಬೆಗಳು ತನ್ನ ಆಯುಧಗಳನ್ನಾಗಿ ಬಳಸಿಕೊಂಡ ಪ್ರಯುಕ್ತ. ಹಲವು ಬಗೆಯ ಆಯುಧಗಳ ರಚನೆಗೆ ತೊಡಗಲು ಸಹಾಯಕವಾಗಿರಬಹುದು. ಚಳಿ-ಮಳೆ-ಗಾಳಿಯಿಂದ ರಕ್ಷಣೆ ಪಡೆಯಲು ಗಿಡದ ತೊಗಟೆ, ಪ್ರಾಣಿಯ ಚರ್ಮಗಳು, ವಸ್ತ್ರಗಳ ಅನ್ವೇಷಣೆಗೆ ಪ್ರೇರಕವಾಗಿರಬಹುದು. ಹಾಗೂ ಸತ್ತ ಪ್ರಾಣಿಯ ಎಲುಬುಗಳು ಅಲಂಕಾರ ಆಭರಣವಾಗಿ,

ಕರಕುಶಲ ಕಲೆಗಳ ಉಗಮಕ್ಕೆ ಕಾರಣವಾಗಿರಬೇಕು. ಹೀಗೆ ಕರಕುಶಲಕಲೆಯು ಸಂದರ್ಭನುಸಾರವಾಗಿ ಮಾನವ ವಿಕಾಸಗೊಂಡಂತೆ ಕೌಶಲ್ಯವು ನಿಧಾನಗತಿಯಲ್ಲಿ ಬೆಳವಣಿಗೆಯಾಯಿತು.

" 'ಕರಕುಶಲಕಲೆ' ಎಂದರೆ ಕೈ ಹಾಗೂ ಬೆರಳುಗಳನ್ನು ಇತರೆ ಅಂಗಾಂಗಳನ್ನು ಬಳಸಿಕೊಂಡು ಸೂಕ್ತ ಕಚ್ಚಾ ಸಾಮಾಗ್ರಿಗೆ ಉಪಯುಕ್ತ ಹಾಗೂ ಆಕರ್ಷಕ ರೂಪವನ್ನು ಕೊಡುವುದೆ ಆಗಿದೆ."[2] ಇದು ಯಾವುದೊ ವಸ್ತುವೊಂದನ್ನು ನಿರ್ಮಿಸಲು ಎಂಥದೊ ಒಂದು ಮೂಲ ಸಾಮಾಗ್ರಿಯನ್ನು ಬಳಸಿಕೊಳ್ಳುವ ನೈಪುಣ್ಯ ಅಲ್ಲದೆ, ಆ ವಸ್ತುವನ್ನು ತಯಾರಿಸುವಲ್ಲಿನ ಸಾಧನೋಪಕರಣಗಳು ಬಳಕೆಗೆ ಅಷ್ಟೆ ಅಲ್ಲದೆ ಮಾನವನ ಬುದ್ಧಿ, ಭಾವ, ಸ್ಪಂದನದಿಂದ ಬೆಳೆದುಬಂದಿದೆ. ಇಂತಹ ಸ್ಪಂದನದ ಹಿಂದೆ ಜೀವನಾಗತ್ಯದ ಒತ್ತಡ ಇರುತ್ತದೆ. "ಕರಕುಶಲ ಕಲೆಗಳು ಉಗಮವು ಆಗತ್ಯಗಳ ಅನ್ವೇಷಣೆಯಾದರೆ ಅದು ವಿಕಾಸವು ಸೃಜನಶೀಲತೆ ಬೆಳೆದ ರೀತಿ ಎನ್ನಬಹುದು. ಕರಕುಶಲ ಕಲೆಗೆ ಒಂದು ಸುಧೀರ್ಘವಾದ ಸಾಂಪ್ರದಾಯಿಕ ಪರಂಪರೆ ಹಾಗೂ ಇತಿಹಾಸವಿದೆ. ಮನುಕುಲದ ಚರಿತ್ರೆಯಲ್ಲಿ ಮಹಿಳೆಯರ ಕೈ ಕಸುಬು ಆಗಿದೆ. ಆರಂಭವಾಗಿ ವಿಶೇಷ ವಿಸ್ಮಯಕರವಾಗಿ ಬೆಳೆದು ಬಂದಿದೆ. ನಾಗರೀಕತೆ ಬೆಳೆದಂತೆಲ್ಲಾ ಕರಕುಶಲ ಕಲೆಗಳಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆದಿವೆ. ಕರಕುಶಲ ಕಲೆಗಳು ಪ್ರಾಕೃತಿಕ ಹಾಗೂ ಸಾಂಪ್ರದಾಯಿಕ ಬಹುಮುಖ್ಯ ಕಲೆಯಾಗಿದೆ. ಆಯಾ ಪರಿಸರದಲ್ಲಿ ಸಿಗುವ ಕಚ್ಚಾ ಸಾಮಾಗ್ರಿಗಳು ಆಯಾಯ ಕರಕುಶಲ ಕಲೆಗೆ ವಸ್ತುವಾಗುತ್ತಿದ್ದವು. ಅವುಗಳ ಮುಖಾಂತರ ಕುಶಲ ಕರ್ಮಿಯ ಕೈ ಕೆಲಸ ನೈಪುಣ್ಯವಾಗಿತು. ಸೌಂದರ್ಯ ಪ್ರಜ್ಞೆ ಪ್ರತಿ ಫಲಿತವಾಗುತ್ತಿತ್ತು. ವಿಶ್ವದಾದ್ಯಂತ ವಿವಿಧ ಬಗೆಯಲ್ಲಿ ಕರಕುಶಲತೆ ಹೊಸ ಆವಿಷ್ಕಾರಗಳು ಕಂಡುಬಂದವು. ಪರಿಸರ ನಿರಂತರತೆಯಲ್ಲಿ ಇವುಗಳ ಬೆಳವಣಿಗೆಯು ವೈವಿಧ್ಯತೆ ಪಡೆದುಕೊಂಡವು. ಇಂದಿನ ನವ್ಯ ಕಲೆಯ ಆಧುನಿಕ ಗಾಳಿ ಬೀಸಿದರೂ ನಶಿಸಿ ಹೋಗಿಲ್ಲ. ಆರ್ಥಿಕ ಸ್ಥಿತಿ ಎಷ್ಟೆ ಪ್ರಭಾವವಾಗಿದ್ದರೂ ಸಾಂಪ್ರಾದಾಯಿಕವಾದ ಕರಕುಶಲಕಲೆಗಳು ನಾಶ ಹೊಂದಲಾರವು. ಆಧುನಿಕತೆಯು ಎಷ್ಟು ಪ್ರಭಾವವಾಗಿದ್ದರು, ಅಲೆಮಾರಿ ಸಮುದಾಯಗಳು ತಮ್ಮ ದಿನನಿತ್ಯದ ಬದುಕಿಗಾಗಿ ಕರಕುಶಲಕಲೆ ನಂಬಿಕೊಂಡಿದ್ದಾರೆ ಹಾಗೂ ಕಲಾತ್ಮಕವಾಗಿ ಚಿತ್ರಿಸುವುದುಂಟು. ಅವರು ಗೋಡೆ, ಮನೆ, ಬಿಡಾರ, ಬುಟ್ಟಿ ತಯಾರಿಕೆಯಲ್ಲಿ ಮನೆ ಮುಂದಿನ ಅಂಗಳದಲ್ಲಿ ಚಿತ್ರ ಅಲಂಕಾರಗಳನ್ನು ಸೃಜಿಸಿಕೊಂಡರು. ಇಂತಹ ಕರಕುಶಲ ಕಲೆಯು ಒಂದೊಂದು ಸಮುದಾಯದ ವೃತ್ತಿಯಾಗಿ ಮುಂದುವರೆದವು.

ಅಲೆಮಾರಿ ಸಮುದಾಯವು ಶಕುನ ಮತ್ತು ಭವಿಷ್ಯ ಹೇಳಲು ತಾಳೆಗರಿಯ ಮೂಲಕ ಕಲೆಗಳನ್ನು ರಚಿಸಿಕೊಂಡರು. ರಾಮಕೊಂಡಿಗಳು ತಾಳೆಗರಿಯ ಮೇಲೆ ಅನೇಕ ರೀತಿಯ ಚಿತ್ರಗಳನ್ನು ಸೃಷ್ಟಿಸಿ ಕೊಂಡಿದ್ದಾರೆ. ಅವುಗಳಾದ ಕೃಷ್ಣ, ರಾಮ, ಸೀತೆ, ಹಾವು, ಚೇಳು, ಸೂರ್ಯ, ಚಂದ್ರ, ಆದಿಶಕ್ತಿ, ಸರಸ್ವತಿ, ಲಕ್ಷ್ಮಿ, ಬ್ರಹ್ಮ, ಶಿವ, ಆನೆ, ಗರುಡ, ಟಗರು, ಹಂದಿ ಇತ್ಯಾದಿ ಚಿತ್ರಗಳನ್ನು ಸೃಜಿಸಿರುತ್ತಾರೆ. ನಿಸರ್ಗದ ಜೀವಿಗಳು ಹಾಗೂ ದೈವಶಕ್ತಿಗಳ ಚಿತ್ರಗಳನ್ನು ಬರೆದುಕೊಂಡು ಅವುಗಳನ್ನು ಭವಿಷ್ಯದ ಮೂಲಕ ತಿಳಿಸುವ ಸಾಧನವಾಗಿ ಬಳಸಿಕೊಳ್ಳುವರು. ಈ ಕಾರ್ಡುಗಳನ್ನು ತೆಗೆಯಲು ಅವರು ಗಿಳಿಯನ್ನು ಸಾಕಿಕೊಂಡು ಅದರಿಂದ ಭವಿಷ್ಯ ಕೇಳಲು ಉಪಯೋಗಿಸುವರು. ಮುಂದಿನ ಜೀವನ ಯಾವ ರೀತಿಯದು

ಹಾಗೂ ಜೀವನ ಚಿತ್ರಣ ತಿಳಿಯಲು ಗಿಳಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ವ್ಯಕ್ತಿಯ ಭವಿಷ್ಯದ ಕಾರ್ಡು ತೆಗೆಯಲು ಗಿಳಿಗೆ ತಮ್ಮದೆ ಸಂಕೇತದ ಮೂಲಕ ಹೇಳುತ್ತಾನೆ. ಬಂದಿರುವ ಚಿತ್ರವನ್ನು ನೋಡಿ ವರ್ಣನೆ ಮಾಡುತ್ತಾ ಭವಿಷ್ಯ ನುಡಿಯುವರು. ಒಂದೊಂದು ಬಾರಿ ಆ ಚಿತ್ರದಲ್ಲಿ ಏನಾದರೂ ಅನಾಹುತ ಸಂಭವಿಸಬಹುದಾಗಿದ್ದರೆ ಅದರ ಪರಿಹಾರಕ್ಕಾಗಿ ಕರ್ಮ, ಕ್ರಿಯೆಗಳನ್ನು ಮಾಡಬೇಕಾಗಿರುವುದು ಅನಿವಾರ್ಯ ಎಂದು ಹೇಳುತ್ತಾನೆ. ನಿಮಗೆ ಸುಖ ಶಾಂತಿಗಳು ದೊರೆಯುತ್ತವೆಂದು ಮಾತಿನ ಮೋಡಿ ಮಾಡಿ ಜೀವಿಸುತ್ತಾನೆ.

೪.೧.೨. ಕರಕುಶಲ ಕಸುಬುಗಳು

ಅಲೆಮಾರಿ ಸಮುದಾಯಗಳು ಕರಕುಶಲ ವೃತ್ತಿಗಳಾದ ಚಾಪೆ ತಯಾರಿಕೆ, ಕೌದಿ ತಯಾರಿಕೆ, ಭಿಕ್ಷಾಟನೆ ಪರಿಕರ, ವೇಷ ಪರಿಕರಗಳಾಗದ ಕಂಠಿಸರ, ಮುಖ ಅಲಂಕಾರ, ಪ್ರಾಣಿಪಕ್ಷಿ, ಸರ, ಜರಡಿ, ದಬ್ಬಳ ಇತ್ಯಾದಿಗಳ ತಯಾರಿಕೆಯಲ್ಲಿ ಹೇಗೆ ಕೌಶಲ್ಯ ಅಳವಡಿಸಿಕೊಳ್ಳುತ್ತಾರೆಂದು ನೋಡಬಹುದು.

ಹಚ್ಚೆ : ಹಚ್ಚೆ ಸಾಮಾಜಿಕ ಜೀವನದ ವಿಶಿಷ್ಟ ಪದ್ಧತಿಯಾಗಿದೆ. ಸಂಸ್ಕೃತಿಯ ಸಂಕೇತವಾಗಿ ಬೆಳೆದುಕೊಂಡು ಬಂದಿದೆ. ಹುಟ್ಟು ಮತ್ತು ಮರಣದ ಮಧ್ಯೆ ಬಂದು ಹೋಗುವ ಬದಲು ಸತ್ತಾಗ ನಮ್ಮ ಜೊತೆಯಲ್ಲಿಯೆ ಹಿಂದೆ ಬರುವ ಅಮೂಲ್ಯ ಆಸ್ತಿ ಎಂದರೆ 'ಹಚ್ಚೆ' ಎನ್ನಬಹುದು. ಆದುದರಿಂದ ಗ್ರಾಮೀಣ ಮಹಿಳೆಯರಂತೂ ಹಚ್ಚೆ ಹಾಕುವ ಕಲಾವಿದರು ಬಂದರೆ ಎಲ್ಲಿಲ್ಲದ ಸಂತೋಷ. ದೇಹದ ಯಾವುದೆ ಭಾಗದವಾದ ಹಣೆ, ಕೈ, ಕಾಲು, ಗಲ್ಲ, ಎದೆ, ತೊಡೆ, ಇತ್ಯಾದಿ ಅವರಿಗೆ ಎಲ್ಲಿ ಇಷ್ಟವಾಗುತ್ತದೆಯೊ ಅಲ್ಲಿ ತಮಗೆ ಬೇಕಾದವರ ಆಪ್ತರ ಹೆಸರುಗಳು ಹಾಕಿಸುವುದುಂಟು. ಇವರು ಪತಿ-ಪತ್ನಿ ಪ್ರಿಯತಮ, ಪ್ರೇಯಸಿ, ಆಂಜನೇಯ, ನಾಗರಹಾವು, ಗಣೇಶ ಇತ್ಯಾದಿ, ಹಾಗೂ ಹೂವುಗಳನ್ನು ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಸ್ತ್ರೀ-ಪುರುಷರಿಬ್ಬರೂ ಮತ್ತು ಚಿಕ್ಕ ಮಕ್ಕಳು ಹಾಕಿಸಿಕೊಳ್ಳುವುದುಂಟು. ಹಚ್ಚೆ ಪರಿಕರಗಳಾದ ಅರಿಶಿಣ, ಔಡಲ ಬೀಜದ ಎಣ್ಣೆ, ಹಳದಿ ಮಿಶ್ರಿತ ಮಾಡಿದರೆ, ಮತ್ತೆ ಕೆಲವರು ಬೇವಿನ ರಸ, ಎಲೆಗಳಿಂದ ತಯಾರಿಸುತ್ತಾರೆ. ೧೫ ರಿಂದ ೩೫ ಸೂಜಿಯ ಉಪಯೋಗಿಸಿ, ಯಾವ ಚಿತ್ರ ಮತ್ತು ಹೆಸರುಬೇಕೊ ಅದನ್ನು ದೇಹದ ಮೇಲೆ ಅಕ್ಷರ ಚುಚ್ಚಿ ಚುಚ್ಚಿ ತೆಗೆಯುತ್ತಾರೆ. ಚುಚ್ಚುವಾಗ ನೋವುವಾಗುವುದರಿಂದ ನೋವು ಕಾಣದ ಹಾಗೆ ಜಾನಪದ ಹಾಡುಗಳನ್ನು ಹಾಡುತ್ತಾ ಹಾಕುತ್ತಾರೆ. ಹಚ್ಚೆಯು ಶಾಶ್ವತವಾಗಿ ದೇಹದ ಮೇಲೆ ಹಾಗೆಯೆ ಇರುತ್ತದೆ. ಹೀಗೆ ಹಚ್ಚೆ ತುಂಬಾ ಜಾಗೂರೂಕತೆಯಿಂದ ನೋವು ಮರೆಯುವಂತೆ ಹಾಡಿ, ಬೇಕಾದ ಚಿತ್ರವನ್ನು ಬಿಡಿಸಿ ಮನಸ್ಸನ್ನು ಉಲ್ಲಾಸಗೊಳಿಸುವ ಕೌಶಲ್ಯದ ತಂತ್ರಗಾರಿಕೆಯಾಗಿದೆ.

ನಾರಿನ ಹಗ್ಗ : ರಕ್ಕಸಬಾಳೆ ಕತ್ತಾಳೆ ಗರಿಗಳನ್ನು ಕತ್ತರಿಸಿ, ಹಳ್ಳ, ಕೆರೆ, ಊರಿನ ಅಕ್ಕಪಕ್ಕದಲ್ಲಿರುವ ನೀರಿನಲ್ಲಿ ಹಾಕಲಾಗುತ್ತದೆ. ೧೫ ದಿವಸ ಇಲ್ಲವೆ ಒಂದು ತಿಂಗಳನಂತರ ಹೊರಗಡೆ ತೆಗೆಯುತ್ತಾರೆ. ಅದು ಸಂಪೂರ್ಣವಾಗಿ ಮೆತ್ತಗಾಗಿ ಹಳದಿ ಬಣ್ಣ ಬಂದಿರುತ್ತದೆ. ಅದನ್ನು ಕಲ್ಲಿಗೆ ಒಡೆಯಲಾಗುವುದು. ಮತ್ತೆ ನೀರಿನಲ್ಲಿ ತೆಗೆದಾಗ ಬಿಳಿ ನಾರಾಗುತ್ತದೆ. ನಾರನ್ನು ತೆಗೆದುಕೊಂಡು ಉದ್ದನೆಯ ಒಂದೊಂದು ಪೆಂಡಿಗಳಾಗಿ ಮಾಡಿ ಹೊಸೆಯುತ್ತಾರೆ. ಒಂದು ಕಟ್ಟಿಗೆ ಸುತ್ತಿಕೊಂಡು ಹಗ್ಗ ಕಟ್ಟಿ ಮತ್ತೊಂಬರ

ಸಹಾಯದಿಂದ ಸಣ್ಣ ಕಟ್ಟಿಗೆಗೆ ಬಿಗಿಯಾಗಿ ಹಿಂದೆ ಹಿಡಿದುಕೊಂಡು ಒಂದರಲ್ಲಿ ಇನ್ನೊಂದನ್ನು ಸೇರಿಸುತ್ತಾ ಹಗ್ಗ ಮಾಡುತ್ತಾರೆ. ಇದು ದನಗಳನ್ನು ಕಟ್ಟುವ ಹಗ್ಗವೆಂದು ಕರೆಯುತ್ತಾರೆ ಹಾಗೂ ಎತ್ತುಗಳ ಬಾಯಿಗೆ ಕಟ್ಟುವ ಚಿಕ್ಕ, ಮನೆಯಲ್ಲಿ ಹಾಲು ಮೊಸರು ಅಥವಾ ಆಹಾರವನ್ನು ಮೇಲಿಡಲು ತೂಗೂಯ್ಯಾಲೆ ಯಂತೆ ಇರಿಸಲು ನೆಲುವು ಮಾಡುತ್ತಾರೆ.

ಬಳ್ಳಿಯ ಸಿಂಬೆ : ದಾಗಡಿ ಹಾಗೂ ಹಾಲಿನ ಬಳ್ಳಿ ಬಳಸಿಕೊಂಡು, ಹಸಿ ಇರುವಾಗಲೆ ಒಂದರ ಮೇಲೆ ಒಂದರಂತೆ ಬಳ್ಳಿ ಬರುವಂತೆ ಸಿಂಬೆಯಾಕಾರದಲ್ಲಿ ಸುರುಳಿ ಮಾಡುತ್ತಾರೆ. ಇದು ಬಾಡಿದ ಮೇಲೆ ಉಪಯೋಗಿಸಬಹುದು. ಇದನ್ನು ಮಣ್ಣಿನ ಪಾತ್ರೆಯ ಕೆಳಗಿಡಲು ಮತ್ತು ವಿವಿಧ ಸಾಮಾನುಗಳು ನೆಲದಲ್ಲಿ ಉರುಳಿ ಹೋಗದಂತೆ ಉಪಯೋಗಿಸುತ್ತಾರೆ.

ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ದಾರ ಬಳಸಿಕೊಂಡು, ಸಣ್ಣ ಯಂತ್ರದ ಮೂಲಕ ಹಗ್ಗ ತಯಾರಿಸುತ್ತಾರೆ. ಪ್ಲಾಸ್ಟಿಕ್ ಚೀಲಗಳಿಂದ ನೂಲು ತೆಗೆದು ಹಗ್ಗ ತಯಾರಿಸುವುದುಂಟು.

ಚಾಪೆ ತಯಾರಿಕೆ : ಕಾಡುಗಳಲ್ಲಿ ಈಚಲ ರಂಬೆಗಳನ್ನು ಕತ್ತರಿಸಿಕೊಂಡು ಬಿಸಿಲಿನಲ್ಲಿ ಒಣಗಿಸುವುದುಂಟು. ಅದನ್ನ ಸೀಳಿಸಿ ಮುಳ್ಳುಗಳನ್ನು ಕತ್ತರಿಸಿ ನೀರಿನಲ್ಲಿ ಹಾಕುತ್ತಾರೆ. ಒಂದರಲ್ಲಿ ಇನ್ನೊಂದು ಗರಿಯನ್ನು ಪೋಣಿಸುತ್ತಾ, ಅಲಂಕಾರಿಕವಾಗಿ ಸುಮಾರು ೧೦ ರಿಂದ ೧೫ರ ತನಕ ಉದ್ದನೆಯ ಪಟ್ಟಿ ಮಾಡಿ, ನಂತರ ಒಂದರ ಪಕ್ಕದಲ್ಲೊಂದು ಪಟ್ಟಿಯನ್ನು ಈಚಲ ಗರಿಯಿಂದ ಸೇರಿಸುತ್ತಾರೆ ಎರಡು ಕಡೆ ದಿಂಡನ್ನು ಕಟ್ಟಿ ಪೂರ್ಣಗೊಳಿಸುತ್ತಾರೆ. ಇಂತಹ ಕೆಲಸದಲ್ಲಿ ಸ್ತ್ರೀಯರದು ಪ್ರಮುಖ ಪಾತ್ರವಾಗಿದೆ. ಗಂಡಸರು ಇತರೆ ಕಸುಬುಗಳನ್ನು ಮಾಡುವರು. ಚಾಪೆ ಮಾರಾಟದ ಸಂದರ್ಭದಲ್ಲಿಯೆ ತಾಳಿಗರಿಯಿಂದ ಮತ್ತು ತೆಂಗಿನ ಗರಿಯಿಂದ ಮಾಡಿದ ಪೀ.. ಪೀ..ಯಿಂದ ಬೀದಿಯಲ್ಲಿ ನಿಂತು ಪೀ.. ಪೀ... ಎಂದು ಕೂಗಿ ಊದುವರು. ಮಕ್ಕಳೂ ಶಬ್ದವನ್ನು ಕೇಳುತ್ತಲೆ ಬಂದು ಹಣವನ್ನು ಇಲ್ಲವೆ ಆಹಾರವನ್ನು ನೀಡಿ ಪಡೆಯುತ್ತಾರೆ. ದೊಡ್ಡವರು ಚಾಪೆಯನ್ನು ಪಡೆಯುತ್ತಾರೆ.

ಕೌದಿ ಹೊಲಿಯುವುದು : ಅಲೆಮಾರಿಗಳು ತಂಗಿರುವ ಊರಲ್ಲಿ ತಿರುಗಾಡುತ್ತ ಕೌದಿ ಹೊಲಿಯುವುದು "ಇದೆ ಏನಮ್ಮ..." ಎಂದು ಮನೆ ಮನೆಯ ಬಾಗಿಲಲ್ಲಿ ನಿಂತು ಕೂಗುತ್ತಾರೆ. ಆ ಬೀದಿಯ ಆಸಕ್ತರು, ಸ್ತ್ರೀಯರು ತಮ್ಮ ಹಳೆಯ ಸೀರೆಯನ್ನು ಕೊಟ್ಟು ಕೌದಿ ಹೊಲೆಯಲು ಹೇಳುತ್ತಾರೆ. ಹಳೆಯ ಸೀರೆಯನ್ನು ತೆಗೆದುಕೊಂಡು ಸೂಜಿಯಲ್ಲಿ ದಪ್ಪವಾದ ದಾರವನ್ನು ಪೋಣಿಸಿ, ಒಂದರ ಪಕ್ಕದಲ್ಲೊಂದನ್ನು ಎಣಿಗೆ ಹಾಕುತ್ತ, ಹರಿದ ಸೀರೆಯಲ್ಲಿ ಬಣ್ಣಬಣ್ಣದ ಬಟ್ಟೆಗಳಿಂದ ತೇಪೆಗಳನ್ನು ಹಚ್ಚುತ್ತ, ಅಲಂಕಾರವಾಗಿ ಕಾಣುವಂತೆ ಮಾಡುತ್ತಾರೆ. ಹೆಣೆಯುತ್ತ ಒಂದು ಮತ್ತು ಎರಡು ಇಂಚುಗಳ ಅಂತರದಲ್ಲಿ ದಾರದಿಂದ ಹೆಣಿಕೆಯನ್ನು ಹಾಕುತ್ತಾರೆ. ಕೌದಿಯಿಂದ ಚಳಿಗಾಲದಲ್ಲಿ ಬೆಚ್ಚಗೆ ಮತ್ತು ಬಿಸಿಲು ಕಾಲದಲ್ಲಿ ತಂಪು ಮತ್ತು ಮೆತ್ತನೆಯ ಹಾಸಿಗೆಯ ಹೊದಿಕೆಯಾಗಿದೆ.

ಭಿಕ್ಷಾಟನೆಯ ಪರಿಕರಗಳು : ಭಿಕ್ಷೆ ಬೇಡಲು ಜೋಳಿಗೆ ಅವಶ್ಯಕವಾಗಿದೆ. ಇದನ್ನು ಸ್ವತಃ ತಾವೆ ತಯಾರಿಸಿಕೊಳ್ಳುತ್ತಾರೆ. ಜೋಳಿಗೆಯಲ್ಲಿ ವಿವಿಧ ಬಗೆಯಲ್ಲಿ ಕಾಣಬಹುದು. ದೇವರ ಜೋಳಿಗೆ, ದೊಡ್ಡ

ಜೋಳಿಗೆ, ಭೀಕ್ಷೆ ಜೋಳಿಗೆಗಳು, ಜೋಳಿಗೆ ತಯಾರಿಸಲು ಹಳೆಯದಾದ ಬಟ್ಟೆ ಬಳಸಿ, ಸೂಜಿ ದಾರದಿಂದ ನಾಲ್ಕು ಮೂಲೆಯಲ್ಲಿ ಚೌಕಕಾರವಾಗಿ ಹೊಲಿಯುತ್ತಾರೆ. ಇದು ನೋಡಲು ಸುಂದರವಾಗಿ ಕಾಣಿಸುವುದರ ಜೊತೆಗೆ ಭದ್ರವಾಗಿ ಇರುತ್ತದೆ.

ವೇಷ ಪರಿಕರಗಳು : ವಿವಿಧ ಬಗೆಯ ಕಥೆ ಪರಧಿಗಳನ್ನೊಳಗೊಂಡ ವೇಷಗಳು ಹಾಕುವ ಅಲೆಮಾರಿಗಳು ತಮ್ಮ ವೇಷ-ಭೂಷಣಗಳಿಗೆ ಬೇಕಾಗುವ ಮತ್ತು ಉಪಯೋಗಿಸುವ ವಸ್ತುಗಳನ್ನು ತಯಾರಿಸಿ ಕೊಳ್ಳುವುದುಂಟು. ಕೀರಿಟ ತಯಾರಿಸಲು ಹಗುರ ಮತ್ತು ತೆಳುವಾದ ತಗಡನ್ನು ಆಕರ್ಷಕವಾಗಿ ಕತ್ತರಿಸಿ ದುಂಡಾಗಿ ಮಾಡಿ ಬಂಗಾರ ಮಿಶ್ರಿತ ಬಣ್ಣ ಲೇಪನಮಾಡಿ ತಯಾರಿಸುವುದುಂಟು. ನೋಡಲು ತುಂಬಾ ಆಕರ್ಷಣೆಯಿಂದ ಕೂಡಿರುತ್ತದೆ.

ಗಧೆ : ತೆಳುವಾದ ತಗಡಿನಿಂದ ದುಂಡಾಗಿ ಕತ್ತರಿಸಿಕೊಂಡು, ಒಂದು ಕಟ್ಟಿಗೆಗೆ ಸುತ್ತಲೂ ಮಳೆ, ಹೊಡೆಯಲಾಗುವುದು. ತಗಡು ಅಂಟಿಸಿ ಅದಕ್ಕೂ ಬಂಗಾರದ ಬಣ್ಣಲೇಪಿಸುತ್ತಾರೆ.

ಕಂಠಿಸರ : ಬಣ್ಣ ಬಣ್ಣದ ಮಣಿಗಳನ್ನು ತಂದು ಒಂದು ದಾರದಲ್ಲಿ ಪೋಣಿಸಿ ಅಲಂಕೃತವಾಗಿ ತಯಾರಿಸಿಕೊಳ್ಳುತ್ತಾರೆ. ಇದರಲ್ಲಿ ತೋಳುಬಂದಿ, ಉಡುಪುಗಳು ಭಿಕ್ಷೆ ಬಂದಿರುವ ಬಟ್ಟೆಗಳಿಗೆ ವಿಶೇಷ ಆಕಾರವನ್ನು ಕೊಟ್ಟು ಸಿದ್ಧಪಡಿಸುತ್ತಾರೆ. ಕಾಲಿಗೆ ಹಾಕಿಕೊಳ್ಳುವ ಗೆಜ್ಜೆಗಳನ್ನು ತಾವೆ ಸೃಷ್ಠಿಸುವುದುಂಟು.

ಮುಖ ಅಲಂಕಾರ : ಬಣ್ಣವನ್ನು ಬಣ್ಣದ ಕಲ್ಲುಗಳಿಂದ, ಇದ್ದಲಿ ಮತ್ತು ಮಸಿಯಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದಾರೆ. ಇಂದಿನ ಕಿರಾಣಿ ಮಳಿಗೆಗಲ್ಲಿ ವಿವಿಧ ರೀತಿಯ ಬಣ್ಣಗಳು ದೊರೆಯುವುದರಿಂದ ಮುಖದ ಅಲಂಕಾರಕ್ಕಾಗಿ ತಮ್ಮದೆ ಶೈಲಿಯಲ್ಲಿ ಮಿಶ್ರಣ ಮಾಡಿ ಲೇಪಿಸಿಕೊಳ್ಳುವರು.

ಪ್ರಾಣಿ-ಪಕ್ಷಿ : ರೆಕ್ಕೆ-ಪುಕ್ಕಗಳಿಂದ ಹಾಗೂ ಕೂದಲುಗಳಿಂದ ಬೇಕಾದ ರೀತಿಯಲ್ಲಿ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದುಂಟು. ಕುದುರೆಯ ಕೂದಲಿನಿಂದ ಮೀಸೆ ಹಾಗೂ ಗಡ್ಡಗಳು ಮಾಡಿ ಕೊಳ್ಳುವುದು. ಪಕ್ಷಿಗಳ ಪುಕ್ಕಗಳಿಂದ ತಲೆಯಲ್ಲಿ ಶೃಂಗರವಾಗಿ ಕಾಣಲು ಬಳಸಿಕೊಳ್ಳುತ್ತಾರೆ.

ಸ್ಪಟಿಕದ ಸರ : ಅಲೆಮಾರಿಗಳು ಅಂಗಡಿಯಿಂದ ಮಣಿಗಳನ್ನು ತಂದು, ತಮ್ಮ ವೇಷಗಳಿಗೆ ತಕ್ಕಂತೆ ಅಲಂಕಾರಿಕವಾಗಿ ಕಾಣಲು ತಮ್ಮದೆ ಕರಕುಶಲತೆಯಲ್ಲಿ ತಯಾರಿಸುವರು.

ಜರಡಿ ಮತ್ತು ದಬ್ಬಳ ತಯಾರಿಕೆ : ತೆಳುವಾದ ತಗಡನ್ನು ತೆಗೆದುಕೊಂಡು, ದಬ್ಬಳದಿಂದ ಸುತ್ತಲು ರಂಧ್ರ ಮಾಡುತ್ತಾರೆ. ಅದರ ಸುತ್ತ ಮೇಲ್ಮುಖವಾಗಿ ಗಟ್ಟಿ ತಗಡನ್ನು ಕಟ್ಟಾಗಿ ಮಾಡಿರುವುದುಂಟು. ಇದು ದವಸ ಮತ್ತು ಧಾನ್ಯಗಳನ್ನು ಸ್ವಚ್ಚವಾಗಿ ಉಪಯೋಗಿಸಲು ಅಸನ ಮಾಡಲು ಉಪಯೋಗಿ ಸುವುದುಂಟು.

ದಬ್ಬಳ : ಕಬ್ಬಿಣಕ್ಕೆ ಬೆಂಕಿಯ ಶಾಖಕೊಟ್ಟು ಆಕಾರಕ್ಕೆ ಬೇಕಾದಂತೆ ಇಕ್ಕಳ ಮತ್ತು ಕತ್ತರಿ, ಸುತ್ತಿಗೆಯ ಸಹಾಯದಿಂದ ದಬ್ಬಳ ತಯಾರಿಸುವರು.

ಈಳಿಗೆ ಮಣೆ : ಸ್ವಲ್ಪ ಗಟ್ಟಿಯಾದ ಮತ್ತು ಮಧ್ಯಮ ಗಾತ್ರದ ತಗಡನ್ನು ಕಾಮಾನಿನ ಅರ್ಧ ಭಾಗದಷ್ಟು ಕತ್ತರಿಸಿಕೊಳ್ಳುತ್ತಾರೆ. ಬೆಂಕಿಯಲ್ಲಿ ಕಾಯಿಸಿ ಚೂಪಾಗಿರುವ ಕಟ್ಟಿಗೆಗೆ ಅಂಟಿಕೊಳ್ಳುವಂತೆ ಮೊಳೆ ಹೊಡೆಯುತ್ತಾರೆ. ಆಗ ಈಳಿಗೆ ತಯಾರಾಗುತ್ತದೆ. ಇದನ್ನು ಗಡ್ಡೆ-ಗೆಣಸು-ಕಾಯಿ, ತರಕಾರಿಗಳನ್ನು ಕತ್ತರಿಸಲು ಉಪಯೋಗಿಸುವುದುಂಟು.

ಕುಡುಗೋಲು : ಕಬ್ಬಿಣ ಇಲ್ಲವೆ ಉಕ್ಕ ಉಪಯೋಗಿಸಿ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ, ಹರಿತ ಬರುವ ಹಾಗೆ ಮಾಡಿ ಅದನ್ನು ಹಿಡಿದುಕೊಳ್ಳಲು ದುಂಡನೆಯ ಕಟ್ಟಿಗೆಯ ಮೂಲಕ ಸೇರಿಸುತ್ತಾರೆ. ಇದು ಮುಂದೆ ಸ್ವಲ್ಪ ಬಾಗಿಕೊಂಡು ಉದ್ದವಾಗಿರುತ್ತದೆ. ವಿವಿಧ ಬೆಳೆ ಮತ್ತು ಕಟ್ಟಿಗೆ ರಂಬೆಗಳನ್ನು ಕತ್ತರಿಸಲು ಉಪಯೋಗಿಸಬಹುದು.

ಕಂದಿಲು : ಕಂದಿಲು, ಕುಡುಗೋಲು ಹೋಲುತ್ತದೆ. ಕುಡುಗೋಲಿ ಗಿಂತಲೂ ಕಂದಿಲು ದಪ್ಪವಾಗಿ ರುತ್ತದೆ ಮತ್ತು ತುಂಬಾ ಹರಿತವಾಗಿರುತ್ತದೆ. ಇದು ಹೆಚ್ಚಾಗಿ ಗಟ್ಟಿ ವಸ್ತುಗಳ ಕತ್ತರಿಸಲು ಬಳಸುವುದುಂಟು.

ಚಾರುಕೋಲು : ವ್ಯವಸಾಯದ ಸಮಯದಲ್ಲಿ ಎತ್ತುಗಳು ಜೋರಾಗಿ ಎಳೆಯಲು ಅದರ ಚಾಲನೆ ಬೇಕಾಗುತ್ತದೆ. ಆ ಚಾಲನೆ ಸಿಗುವುದು ಬಾರುಕೋಲಿನಿಂದ ಮಾತ್ರ. ಪ್ಲಾಸ್ಟಿಕ್ ಚೀಲಗಳನ್ನು ಕತ್ತರಿಸಿ ಕೊಂಡು, ಅದರ ಏಳೆ ಹೆಣೆದುಕೊಂಡು ಬಿದಿರಿನ ಕೋಲಿಗೆ ರಂಧ್ರಮಾಡಿ ಪೋಣಿಸುತ್ತಾರೆ.

ಬಾಯಿಕುಕ್ಕೆ : ಎತ್ತುಗಳು ಹೊಲ ಊಳುವ ಸಂದರ್ಭದಲ್ಲಿ ಪೈರುಗಳು ಇರುವುದರಿಂದ ಆ ಪೈರನ್ನು ತಿನ್ನಲು ಹಾತೊರೆಯುತ್ತವೆ. ಅದನ್ನು ತಪ್ಪಿಸಲೆಂದು ಬಾಯಿಕುಕ್ಕೆ ಹಾಕುವುದುಂಟು. ಬಾಯಿ ಅಡ್ಡವಾಗಿ ಪ್ಲಾಸ್ಟಿಕ್ ಹಗ್ಗ ಇಲ್ಲವೆ ದಾಗಡಿ ಬಳ್ಳಿಗಳಿಂದ ಬಾಯಿಕುಕ್ಕೆ ತಯಾರಿಸುತ್ತಾರೆ.

ಗುದ್ದಲಿ ಮತ್ತು ಹಾರೆ, ಸಲಿಕೆ : ಗುದ್ದಲಿ ಮತ್ತು ಹಾರೆಗೆ ಕಬ್ಬಿಣ ಮತ್ತು ಉಕ್ಕನ್ನು ಬಳಸಿ ವ್ಯವಸಾಯದಲ್ಲಿ ಅನುಕೂಲವಾಗುವಂತೆ ಮಾಡುವರು. ಸಲಿಕೆಗೆ ಗಟ್ಟಿಯಾದ ತಗಡಿನಿಂದ ಅಗಲ ಮತ್ತು ಚೂಪಾಗಿ ಮಾಡಿ ಸಲಿಕೆಯ ಕಟ್ಟಿನೊಳಗೆ ಕಟ್ಟಿಗೆಯನ್ನು ಸೇರಿಸುತ್ತಾರೆ. ಇದರಿಂದ ಮಣ್ಣು ತುಂಬಲು ಯಾವುದೆ ತರಹದ ಪದಾರ್ಥ ತುಂಬಲು ಬಳಸುತ್ತಾರೆ. ಹಾರೆ ಮತ್ತು ಗುದ್ದಲಿಯನ್ನು ಕಲ್ಲು ಕೀಳಲು ಮಣ್ಣು ಅಗೆಯಲು ಉಪಯೋಗಿಸುವರು.

ಕತ್ತಿ - ಈಟಿ : ಇವು ಆತ್ಮ ರಕ್ಷಣೆಗೆ ಬೇಕಾಗುವ ಆಯುಧಗಳಾಗಿವೆ. ಇವುಗಳನ್ನು ಕಬ್ಬಿಣದಿಂದ ಇಲ್ಲವೆ ಉಕ್ಕನ್ನು ಉಪಯೋಗಿಸಿಕೊಂಡು ವಿವಿಧ ಆಕಾರಗಳಲ್ಲಿ ಮಾಡುವುದುಂಟು.

ಗುಲಾಬಿ ಹೂವು ತಯಾರಿಕೆ : ಮಾರುಕಟ್ಟೆಯಿಂದ ಬಣ್ಣ ಬಣ್ಣದ ಪ್ಲಾಸ್ಟಿಕ್ ಬಟ್ಟೆ, ಮಣಿಗಳು ತಂದು ಗುಲಾಬಿ ಹೂವು ಮಾಡುವುದುಂಟು. ಇದಕ್ಕೆ ಬೇಕಾಗುವ ದಾರ ಮತ್ತು ತಂತಿಯನ್ನು ಬಳಸಿ, ಕತ್ತರಿಯಿಂದ ವಿಶಿಷ್ಟವಾಗಿ ಕತ್ತರಿಸಿಕೊಂಡು ಗುಲಾಬಿ ಹೂವು ತಯಾರಿಸುವರು. ಗುಲಾಬಿ ಹೂವಿನ ಕೆಳಗೆ ಹಸಿರಿರುವ ಬಣ್ಣದ ಪ್ಲಾಸ್ಟಿಕ್ ಬಟ್ಟೆಯಿಂದ ಎಲೆ ಆಕಾರ ಮಾಡುವರು. ಇದು ನೋಡಲು ತುಂಬಾ ಅಂದವಾಗಿರುತ್ತದೆ.

ಪಕ್ಷಿಗಳ ತಯಾರಿಕೆ : ಪ್ಲಾಸ್ಟಿಕ್ ಬಟ್ಟೆಯಿಂದ ವಿವಿಧ ಪಕ್ಷಿಗಳ ಆಕಾರ ಮಾಡುತ್ತಾರೆ. ಪ್ಲಾಸ್ಟಿಕ್ ಮೇಲೆ ವಿವಿಧ ಬಣ್ಣಗಳ ಲೇಪನ ಮಾಡಿ, ನೈಜ ಪಕ್ಷಿಗಳನ್ನು ಹೋಲುವ ರೀತಿಯಲ್ಲಿ ಮಾಡುವುದುಂಟು. ಇಂತಹ ಬಟ್ಟೆಯಿಂದ ಗಿಳಿ, ಗೊಂಬೆ, ನವಿಲು ಇತ್ಯಾದಿಗಳನ್ನು ತಯಾರಿಸುವರು.

ಅಲಂಕಾರಿಕ ಹೂವುಗಳ ತಯಾರಿಕೆ : ವಿವಿಧ ರೀತಿಯ ಹೂವುಗಳನ್ನು ತಯಾರಿಸುವ ಪ್ಲಾಸ್ಟಿಕ್ ಬಳಸಿಕೊಳ್ಳಲಾಗುವುದು. ಪರಿಕರಗಳಾದ ಕಪ್ಪು, ಕೆಂಪು, ಹಸಿರು, ಬಿಳಿ ಬಣ್ಣಗಳು, ಕಬ್ಬಿಣ ತಂತಿ, ಬಿದಿರು ಕಡ್ಡಿಗಳು, ಟೇಪನ್ನು ಬಳಸಿಕೊಂಡು ವೈವಿಧ್ಯಮಯ ಹೂವುಗಳನ್ನು ಅಲಂಕಾರವಾಗಿ ಕಾಣುವಂತೆ ಹೂವು ತಯಾರಿಸುತ್ತಾರೆ. ಇವುಗಳನ್ನು ಟಿ.ವಿಗಳ ಮೇಲೆ ಟೇಬಲ್, ಮನೆಯ ಅಲಂಕಾರಿಕ ಕಪಾಟುಗಳಲ್ಲಿ ಅಂದವಾಗಿ ಕಾಣುವಂತೆ ಬಳಸಲಾಗುವುದು.

ಫೋಟೋ ಹಾರಗಳ ತಯಾರಿಕೆ : ಬಟ್ಟೆ, ಪ್ಲಾಸ್ಟಿಕ್, ತೆಳುವಾದ ತಂತಿ. ವಿವಿಧ ಬಗೆಯ ಮಣಿಗಳು, ಮುತ್ತುಗಳು, ದಾರ ಇತ್ಯಾದಿಗಳನ್ನು ಬಳಸಿಕೊಂಡು ವಿಭಿನ್ನ ಕೌಶಲ್ಯದ ಮೂಲಕ ಇದು ತುಂಬಾ ವೈಶಿಷ್ಟ್ಯಗಳಿಂದ ಕೂಡಿದೆ. ಗಂಧದ ಮರದ ಸಿಪ್ಪೆ, ಮರದ ಕಾಯಿ ತಂದು ಶ್ರೀಗಂಧದ ಹೂವಿನ ಹಾರ ತಯಾರಿಸುವರು. ಮುತ್ತಿನ ಸರ, ಪ್ಲಾಸ್ಟಿಕ್ ಹಾರಗಳು ಇತ್ಯಾದಿಗಳನ್ನು ಹರಳುಗಳಿಂದ ಬಗೆ ಬಗೆಯ ಹಾರಗಳನ್ನು ತಯಾರಿಸುತ್ತಾರೆ. ಇವುಗಳಿಗೆ ಗಣೇಶನ ಹಬ್ಬ, ದಸಾರಾ ಹಾಗೂ ದೀಪಾವಾಳಿಯಲ್ಲಿ ವಿಶೇಷವಾಗಿ ಹೆಚ್ಚಿನ ಬೇಡಿಕೆಯಿರುತ್ತದೆ.

ಕಲ್ಲಿ ತಯಾರಿಕೆ : ಊಟ ತೆಗೆದುಕೊಂಡು ಹೋಗುವ ಪರಿಕರವಾಗಿದೆ. ನಾರಿನ ಹಗ್ಗ ಇಲ್ಲವೆ ಪ್ಲಾಸ್ಟಿಕ್ ಹಗ್ಗದಿಂದ ದುಂಡಾಗಿ ಜರಡಿಯಂತೆ ಮಾಡಿರುತ್ತಾರೆ. ಹೆಗಲಿಗೆ ಹಾಕಿಕೊಂಡು ಹೋಗಬಹುದು. ಕುರಿ ಕಾಯುವವರು, ದನ ಮೇಯಿಸುವವರು ಊಟ(ಬುತ್ತಿ) ತೆಗೆದುಕೊಂಡು ಹೋಗಲು ಹೆಚ್ಚಾಗಿ ಉಪಯೋಗಿಸುತ್ತಾರೆ. ಇಂತಹ ಕಲ್ಲಿಯನ್ನು ತುಂಬಾ ನಾಜೂಕಾಗಿ ಕರಕೌಶಲ್ಯಗಳಿಂದ ಹೊರ ಹೊಮ್ಮಿಸುತ್ತಾರೆ.

ಪೊರಕೆ ತಯಾರಿಕೆ : ಇಚಲು ಗರಿ ತಂದು, ಕಲ್ಲಿನ ಬಂಡೆ ಮೇಲೆ ಮುಳ್ಳು ಉದುರುವಂತೆ ಮಾಡುವರು. ಬಿಸಿಲಿನಲ್ಲಿ ಒಣಗಿಸಿ, ಒಂದರಮೇಲೊಂದರಂತೆ ದುಂಡಾಗಿ ಇಡಿಯಾಗಿ ಗರಿಯನ್ನು ಕಟ್ಟುವುದುಂಟು. ಇದು ಕಸಗೂಡಿಸಲು ಅನುಕೂಲವಾಗಿರುತ್ತದೆ. ತೆಂಗಿನಗರಿ, ಕಾಡಿನ ಹುಲ್ಲುಗಳಿಂದಲೂ ಪೊರಕೆ ತಯಾರಿಸುತ್ತಾರೆ.

ವಿಗ್ರಹಗಳ ತಯಾರಿಕೆ : ಹಳೆಯದಾದ ಅಲ್ಯುಮಿನಿಯಂ ವಸ್ತು ತೆಗೆದುಕೊಂಡು ಕುಲುಮೆಯಲ್ಲಿ ಹೆಚ್ಚು ಶಾಖ ಕೊಡುತ್ತಾರೆ. ಅದು ನೀರಾಗುವಂತೆ ಕರಗಿಸಿ, ಅದರಲ್ಲಿರುವ ಕೊಳಕು ಹೊರತೆಗೆಯ ಲಾಗುತ್ತದೆ. ಮೊದಲು ಸಿದ್ಧವಾಗಿರುವ ಅಚ್ಚುಪಡಿಗಳಲ್ಲಿ ಒಂದು ಚೌಕಕಾರದ ಕಟ್ಟಿಗೆಯ ಪೆಟ್ಟಿಗೆಯಲ್ಲಿ ಒಂದು ಸಣ್ಣ ರಂಧ್ರ ಮಾಡಿರುತ್ತಾರೆ. ರಂಧ್ರದಲ್ಲಿ ಇದರ ರಸವನ್ನು ಸುರಿಯುತ್ತಾರೆ. ಇದರ ಮೊದಲು ಪೆಟ್ಟಿಗೆಯ ಒಳಗಡೆ ಗ್ರಾನೈಟ್ ಪುಡಿಯನ್ನು ಸಮ ಪ್ರಮಾಣದಲ್ಲಿ ನೀರಿನಲ್ಲಿ ಹಾಕಿ ತುಂಬಿರುತ್ತಾರೆ.

ಯಾವ ವಿಗ್ರಹ ರೂಪಬೇಕು ಆ ವಿಗ್ರಹ ಪಡೆಯಚ್ಚು ತೆಗೆದುಕೊಂಡು ಅಚ್ಚುಪಡಿಯಂತೆ ಮಾಡಿ ಅದನ್ನು ಮುಚ್ಚುತ್ತಾರೆ. ರಸವನ್ನು ಅದರಲ್ಲಿ ಸುರಿಯುವರು. ಕೇವಲ ೫ ನಿಮಿಷದಲ್ಲಿ ಗಟ್ಟಿಯಾಗುತ್ತದೆ. ಹೊರ ತೆಗೆದಾಗ ಬೆಳ್ಳಿಯಂತೆ ಹೊಳೆಯುವ ವಿಗ್ರಹ ಮೂರ್ತಿ ಕಂಡು ಬರುತ್ತದೆ. ಹೀಗೆ ಬೇಕಾದ ವಿಗ್ರಹಗಳನ್ನು ಮಾಡುತ್ತಾರೆ. ನಮಗೆ ಬಂಗಾರದ ಬಣ್ಣದ ವಿಗ್ರಹ ಬೇಕಾದರೆ ಅಲ್ಯುಮಿನಿಯಂ ರಸದ ಬದಲು ಬಂಗಾರದ ಬಣ್ಣವನ್ನು ಮಿಶ್ರಣ ಮಾಡಿದರೆ ಬಂಗಾರ ಬಣ್ಣದ ಮೂರ್ತಿ ಕಾಣಬಹುದಾಗಿದೆ.

ತೋರಣಗಳ ತಯಾರಿಕೆ : ಪ್ಲಾಸ್ಟಿಕ್ ಬಳಸಿ ತೆಳುವಾದ ತಂತಿ, ದಾರ, ಸೂಜಿ ಹಾಗೂ ಕತ್ತರಿಯನ್ನು ಉಪಯೋಗಿಸಿಕೊಂಡು ಮಾವಿನ ಎಲೆಯ ಆಕಾರದಂತೆ ಕತ್ತರಿಸಿಕೊಳ್ಳುವರು. ಅದು ಮಾವಿನ ತೋರಣ ವಾಗುತ್ತದೆ. ಮನೆಯ ಬಾಗಿಲಿಗೆ ನೋಡಲು ತುಂಬಾ ಸುಂದರವಾಗಿ ತಾಜಾ ತೋರಣದಂತೆ ಕಂಗೊಳಿ ಸುತ್ತದೆ. ತೋರಣಗಳಿಗೆ ಕೊಳಕು ಅಂಟಿದಾಗ ನೀರಿನಲ್ಲಿ ತೊಳೆಯಬಹುದು. ಅದು ಎಂದಿನಂತೆ ಹೊಸ ಹೊಳಪಿನಂತೆ ಸುಂದರ ಕಾಣುತ್ತದೆ.

ಚಿಮಟಿ ತಯಾರಿಕೆ : ಮೆದುವಾದ ಕಬ್ಬಿಣ ಬಳಸಿಕೊಂಡು ಕುಲುಮೆಯಲ್ಲಿ ಬೆಂಕಿಯಿಂದ ಕಾಯಿಸಿ ಕೊಳ್ಳುವರು. ೩ ಇಂಚು ಉದ್ದ ಮತ್ತು ಸ್ವಲ್ಪ ಅಗಲ ಮುಂದೆ ಚೂಪಾಗಿ ಜೋಡಿಯಾಗಿ ಚಿಮಟಿಗೆ ತಯಾರಿಸುತ್ತಾರೆ. ಇದು ಹಿಡಿದು ಕೊಳ್ಳಲು ಮತ್ತು ಕಳೆದು ಹೋಗದ ಹಾಗೆ ದಾರದ ಸಹಾಯಕ್ಕಾಗಿ ಒಂದು ರಂಧ್ರವನ್ನು ಮಾಡಿರುತ್ತಾರೆ.

ಹಲ್ಲುಕಡ್ಡಿ : ಕಬ್ಬಿಣ್ಣದಿಂದ ಮುಂದೆ ಚೂಪಾಗಿರುವಂತೆ ತಯಾರಿಸುತ್ತಾರೆ. ಹಲ್ಲಲ್ಲಿ ಸಿಕ್ಕಿಕೊಂಡಿರುವ ಪದಾರ್ಥಗಳನ್ನು ಇದರ ಸಹಾಯದಿಂದ ತೆಗೆಯಬಹುದು.

ತಾಯತ : ಮೆದುವಾದ ತಾಮ್ರದ ತಗಡನ್ನು ತೆಗೆದುಕೊಂಡು, ಅದರ ಮೇಲೆ ಮಂತ್ರಗಳ ಅಕ್ಷರ ಗಳನ್ನು ಬರೆದು ಸುರುಳಿಸುತ್ತುತ್ತಾರೆ. ಅದರ ಮೇಲೆ ದಾರ ಪೋಣಿಸಲು ರಂಧ್ರ ಮಾಡಿರುವುದುಂಟು. ಇದರ ಒಳಗಡೆ ಯಾವುದಾದರೂ ದೇವರ ಹೆಸರಿನ ವಿಭೂತಿ, ಬೂದಿ, ಕುಂಕುಮ, ಮಂತ್ರಗಳ ಚೀಟಿಯನ್ನು ಸೇರಿಸಿ ಪೂಜೆ ಮಾಡುತ್ತಾರೆ. ಯಾವುದೆ ಗ್ರಹಗಳ ತೊಂದರೆ ಬಾರದಂತೆ ನೋಡಿಕೊಳ್ಳಲು ಬಳಸುತ್ತಾರೆ.

ಉಂಗುರ, ಓಲೆ, ಡಾಬು, ಕಾಲುಂಗುರ : ಇವುಗಳ ತಯಾರಿಕೆಯಲ್ಲಿ ಅಲ್ಯುಮಿನಿಯಂ ಮತ್ತು ಸ್ಟೀಲ್ ಹಾಗೂ ಎರಕವನ್ನು ಉಪಯೋಗಿಸುತ್ತಾರೆ. ಕುಲುಮೆಯಲ್ಲಿ ಯಾವ ಆಕಾರ ಬೇಕೊ ಅದೆ ರೀತಿಯ ಆಕಾರಗಳನ್ನು ಮಾಡುವುದುಂಟು. ನಂತರ ಉಂಗುರದ ಮೇಲೆ ಹರಳು ಕೂಡಿಸುತ್ತಾರೆ. ಓಲೆಯು ಹರಳಿನ ಅಲಂಕಾರದಿಂದ ಕೂಡಿದ್ದು ಬಂಗಾರದ ಓಲೆಗಳನ್ನು ಮೀರಿಸುವಂತಹ ಕುಶಲತೆಯಲ್ಲಿ ತಯಾರಿಸುತ್ತಾರೆ. ಸೊಂಟದಲ್ಲಿ ಡಾಬನ್ನು ಕಸುರಿಗಳಿಂದ ತಯಾರಿಸುತ್ತಾರೆ.

ಕಡಗ ಮತ್ತು ಸರಗಳ ತಯಾರಿಕೆ : ಸ್ಟೀಲ್ ಮತ್ತು ಎರಕ ಉಪಯೋಗಿಸಿ, ಬಳೆಯಕಾರದಲ್ಲಿ ಕಡಗವನ್ನು ತಯಾರಿಸುತ್ತಾರೆ. ಅಲ್ಯುಮಿನಿಯಂ ಮತ್ತು ತಾಮ್ರದಿಂದ ವಿವಿಧ ರೀತಿಯ ಸರಗಳನ್ನು ತಯಾರಿಸುವರು.

ಬಂಗಾರದ ಆಭರಣಗಳ ತಯಾರಿಕೆ : ಶ್ರೀಮಂತರ ಬಂಗಾರ ಮತ್ತು ಬೆಳ್ಳಿಯ ಕುಲುಮೆಯ ಕೆಲಸದಲ್ಲಿ ನುರಿತ ಕುಶಲಗಾರರು ಹೊಟ್ಟೆಯ ಪಾಡಿಗಾಗಿ ತಾವು ಪಡೆದುಕೊಂಡು ಬಂದಿರುವ ಕೌಶಲ್ಯವನ್ನು ಉಪಯೋಗಿಸಿ ವಿವಿಧ ರೀತಿಯ ಬಂಗಾರದ ಆಭರಣಗಳಾದ ಬೆಂಡೋಲೆ, ಸರ, ನತ್ತು, ಕಾಲು ಚೈನಾ, ಕೈ ಚೈನಾ, ಕಡಗಳನ್ನು ತಯಾರಿಸಲು ಮುಂದಾಗುವರು.

ತೊಗಲುಗೊಂಬೆ ತಯಾರಿಕೆ : ತೊಗಲುಗೊಂಬೆ ಕಲೆ ಒಂದು ವಿಶಿಷ್ಟವಾಗಿದೆ ಹಾಗೂ ಅನನ್ಯ. ಬೇಕಾದ ಗೊಂಬೆಗಳನ್ನು ಸ್ವತಃ ತಯಾರಿಸಿಕೊಳ್ಳುವರು. ಹಿಂದೆ ಜಿಂಕೆಯ ಚರ್ಮವನ್ನು ಉಪಯೋಗಿಸಿ, ತಯಾರಿಸುತ್ತಿದ್ದರು. ಈಗ ಜಿಂಕೆಗಳು ಹೇರಳವಾಗಿ ದೊರೆಯದೆ, ಇರುವುದರಿಂದ ಮೇಕೆಯ ಚರ್ಮ ತೆಗೆದುಕೊಂಡು ಬ್ಲೇಡಿನ ಸಹಾಯದಿಂದ ಕೂದಲು ತೆಗೆಯುವರು. ನೆರಳಿನಲ್ಲಿ ಒಣಗಿಸಲಾಗುವುದು. ಸೋಡಿತ, ಬೆರ, ಮನಾಲ, ದಾಬನಾಸ್ ಆಯುಧಗಳಿಂದ ಯಾವ ಆಕಾರದ ಗೊಂಬೆ ಬೇಕೊ ಆ ಆಕಾರಗಳಲ್ಲಿ ಕತ್ತರಿಸುತ್ತಾರೆ. ಕತ್ತರಿಸಿದ ನಂತರ ಮುತ್ತುಗದ ಹೂವು, ಗೋರಂಟಿ, ಸುಣ್ಣ, ಕಾಚು ಉಪಯೋಗಿಸಿಕೊಂಡು ನೀರಿನಲ್ಲಿ ಮೂರು ದಿವಸ ನೆನೆಹಾಕುತ್ತಾರೆ. ಬೇವಿನ ಅಂಟನ್ನು ಸೇರಿಸಿ ಲೇಪಿಸಿದರೆ ಇದು ಕೆಂಪು ಬಣ್ಣಬರುತ್ತದೆ.

ತೆಂಗಿನ ಚಿಪ್ಪು, ಇದ್ದಿಲು ಉಪಯೋಗಿಸಿ ನೀರಿನಲ್ಲಿ ಮಿಶ್ರಣ ಮಾಡಿ ಅಂಟನ್ನು ಬೆರೆಸಿ ಲೇಪನ ಮಾಡಿದರೆ ಕಪ್ಪುಬಣ್ಣವಾಗುತ್ತದೆ. ಗೋರಂಟಿಯನ್ನು ಸುಣ್ಣ ಮತ್ತು ನಿಂಬೆ ಬೆರೆಸಿ ಲೇಪನ ಮಾಡಿದರೆ ಸಿಂಧೂರ ಬಣ್ಣ ಬರುತ್ತದೆ. ಹೀಗೆ ಯಾವ ರೀತಿಯ ಬಣ್ಣ ಬೇಕೊ ಆ ರೀತಿಯ ಬಣ್ಣಗಳನ್ನು ಸಂದರ್ಭಕ್ಕುಸಾರವಾಗಿ ತಯಾರಿಸಿ ಲೇಪಿಸುತ್ತಾರೆ. ಬಣ್ಣ ಲೇಪಿಸಿದ ನಂತರ ನೆರಳಿನಲ್ಲಿ ಒಣಗಿಸಿದರೆ ಮುಗಿಯಿತು. ತೊಗಲುಗೊಂಬೆ ಸಿದ್ಧಗೊಂಡಂತೆ. ಈ ರೀತಿಯಾಗಿ ತಯಾರಿಸಿದ ಗೊಂಬೆಗಳು ನೋಡಲು ತುಂಬಾ ಆಕರ್ಷಕವಾಗಿ ಕಾಣಿಸುತ್ತವೆ. ವಿಶೇಷ ವೆಂದರೆ ಗೊಂಬೆಯು ಎರಡು ಕಡೆ ಬಣ್ಣಗಳಿಂದ ಕೂಡಿರುತ್ತದೆ. ಗೊಂಬೆಗಳನ್ನು ಆಡಿಸುವಾಗ ಎರಡು ಕಡೆಯಲ್ಲಿ ತೋರಿಸಬೇಕಾಗುತ್ತದೆ. ಹೀಗೆ ಸಮುದಾಯ ತಮ್ಮ ಕೌಶಲ್ಯತೆಯನ್ನು ಉಪಯೋಗಿಸಿ, ತಾಳ್ಮೆಯಿಂದ ತಯಾರಿಸಬಲ್ಲರು. ಇವರು ಪ್ಲಾಸ್ಟಿಕ್ ಗೊಂಬೆಗಳನ್ನು ಸಹ ಮಾಡುವುದುಂಟು. ಪ್ಲಾಸ್ಟಿಕ್ ಗೊಂಬೆ ಮಾಡಬೇಕಾದರೆ ಪ್ಲಾಸ್ಟಿಕ್‌ನಿಂದ ಗೊಂಬೆಗಳನ್ನು ಕತ್ತರಿಸಿ, ಬಣ್ಣ ಹಚ್ಚುವರು. ಹರಿದು ಹೋಗದಂತೆ ಮತ್ತು ಮಳೆ ಬಂದಾಗ ಹಾಳಾಗದಂತೆ ಇರುತ್ತದೆ ಎನ್ನುತ್ತಾರೆ.

ಬೀಸಣಿಕೆ ತಯಾರಿಕೆ : ಬೀಸಣಿಕೆ ತಯಾರಿಸುವುದು ತುಂಬಾ ಸರಳವೆಂದು ಹೇಳುತ್ತಾರೆ. ಬಿದಿರು ಸೀಳಿಕೊಂಡು, ತೆಳುವಾದ ಬಿದಿರಿನಿಂದ ಚೌಕಕಾರದಲ್ಲಿ ಹೆಣೆದು ದಿಂಡನ್ನು ಗಟ್ಟಿಯಾದ ಬಿದರಿನಿಂದ ತಯಾರಿಸಿ ಈ ಚೌಕಕಾರಕ್ಕೆ ಹಾಗೂ ದಿಂಡಿಗೆ ತೆಳುವಾದ ಬಿದಿರು ಅಂಟಿಸುತ್ತಾರೆ. ಇದು ಗಾಳಿ ಇಲ್ಲದ ಸಮಯದಲ್ಲಿ ಉಪಯೋಗಿಸಬಹುದು.

ಮಂಚಗಳ ತಯಾರಿಕೆ : ಮಂಚವನ್ನು ಬಿದಿರು ಮತ್ತು ಕಟ್ಟಿಗೆಗಳಿಂದ ತಯಾರಿಸುತ್ತಾರೆ.

ಚೌಕಕಾರದಲ್ಲಿ ೬ ಅಡಿಯ ಕೊರೆದು ೩ ಅಡಿ ಅಗಲವಾಗಿ ಮೇಲೆ ಸಮ ರೀತಿಯಲ್ಲಿ ಸವಕಳಿ ಮಾಡುತ್ತಾರೆ. ಕೆಳಗೆ ಕಟ್ಟಿಗೆ ಕಾಲುಗಳನ್ನು ನಾಲ್ಕಕಡೆಯಲ್ಲಿ ಜೋಡಿಸಿದಾಗ ಮಂಚ ತಯಾರಾಗುತ್ತದೆ.

ಗೊಟ್ಟ ತಯಾರಿಕೆ : ಜಾನುವಾರುಗಳಿಗೆ ರೋಗ ಬಂದಾಗ ಔಷಧಿ ಬಳಸುತ್ತಾರೆ. ಬಿದರಿನ ಸುಳಿಯಲ್ಲಿ ಔಷಧಿ ಹಾಕಿದಾಗ ಜಾರಿ ಬಾಯಿಯೊಳಗೆ ಹೋಗುತ್ತದೆ.

ಬಂಡಿ ತಟ್ಟಿ : ಗ್ರಾಮೀಣ ಪ್ರದೇಶದಲ್ಲಿ ದವಸ ದಾನ್ಯ ಬೆಳೆಯುವ ಸಂದರ್ಭದಲ್ಲಿ ಬಂಡಿ ತಟ್ಟಿ ಹೆಚ್ಚು ಉಪಯೋಗಿಸುವುದುಂಟು. ಎತ್ತಿನ ಗಾಡಿಗಳಲ್ಲಿ ಉಪಯೋಗಿಸುತ್ತಾರೆ. ಅಲೆಮಾರಿಗಳು ಬಂಟಿ ತಟ್ಟಿಗಳನ್ನು ಕಲಾತ್ಮಕವಾಗಿ ಹೆಣೆಯುತ್ತಾರೆ. ತಯಾರಿಸಲು ಬಿದಿರು ಉಪಯೋಗಿಸುತ್ತಾರೆ. ಮಾರುಕಟ್ಟೆಯಲ್ಲಿ ಬಿದಿರು ತಂದು ಸೀಳಿಸಿ ತಟ್ಟಿಗಳ ರಚನೆ ಮಾಡುತ್ತಾ ಮೊಳೆ ಹೊಡೆಯಲಾಗುತ್ತದೆ. ೪ ಅಡಿ ಅಗಲ ೮ ಅಡಿ ಉದ್ದನೆಯ ತಟ್ಟಿ ತಯಾರಿಸುತ್ತಾರೆ. ಈಚಲು ಕಡ್ಡಿ ಬಳಸಿಕೊಂಡು ತಟ್ಟಿ ತಯಾರಿಸುವರು.

ಗೃಹೋಪಯೋಗಿ ವಸ್ತುಗಳ ತಯಾರಿಕೆ : ಪೆಟ್ಟಿಗೆಯಲ್ಲಿ ಗ್ರಾನೈಟ್ ಪುಡಿ ತುಂಬಿ ತಮಗೆ ಬೇಕಾದ ರೀತಿಯಲ್ಲಿ ಮಾಡಿಕೊಳ್ಳುವರು. ಸೌಟು, ಕೈಬಟ್ಟಲು, ರೊಟ್ಟಿಎಬ್ಬಿಸುವ ಸೌಟು, ಬಟ್ಟಲು ಇತ್ಯಾದಿಗಳ ರೂಪ ಮಣ್ಣಿನಲ್ಲಿ ಚಿತ್ರಿಸಿ ನಂತರ ಅಲ್ಯುಮಿನಿಯಂ ಕರಗಿಸಿ ಆ ಒಂದು ರಂಧ್ರದಲ್ಲಿ ತುಂಬಿಸುತ್ತಾರೆ. ನಂತರ ಅದು ಅದರ ರೂಪ ಮಾಡಿದ ಜಾಗಕ್ಕೆ ಹೋಗಿ ಘನಿಕೃತವಾಗಿ ೧೫ ನಿಮಿಷಗಳ ತೆಗೆದಾಗ ಬೇಕಾದ ಗೃಹಬಳಕೆ ವಸ್ತು ತಯಾರಾಗುತ್ತದೆ. ಬಳಸಿ ಬಿಸಾಡಿದ ಅಲ್ಯುಮಿನಿಯಂನಿಂದ ಹೊಸದಾದ ವಿಶಿಷ್ಟ ಸಾಮಾನು ತಯಾರಿಸಿಕೊಡುವುದು ಅಲೆಮಾರಿಗಳ ಬೃಹತ್ ಕೌಶಲ್ಯ ಯಂತ್ರವನ್ನು ನಾಚಿಸುವಂತಿರುತ್ತದೆ.

ಚರ್ಮದಲ್ಲಿ ವಿನ್ಯಾಸ ಮತ್ತು ಪ್ರಾಣಿ-ಪಕ್ಷಿಗಳ ತಯಾರಿಕೆ : ಕಾಡಲ್ಲಿ ಬೇಟೆಯಾಡಿದ ವಿವಿಧ ಬಗೆಯ ಪ್ರಾಣಿಪಕ್ಷಿಗಳ ಚರ್ಮ ತೆಗೆದುಕೊಂಡು ಅದಕ್ಕೆ ಬಣ್ಣ ಲೇಪನ ಮಾಡಿ, ವಿನ್ಯಾಸಕೊಡುತ್ತಾರೆ.

೧. ಗಿಳಿಯೊಳಗಿನ ಅದರ ಮಾಂಸವನ್ನು ತೆಗೆದು, ಅದರ ಒಳಗಡೆ ಹತ್ತಿಹರಳೆ ಇಟ್ಟಿರುವುದು. ಇದು ನೋಡಲು ಮೃದು ರೀತಿಯಲ್ಲಿ ಕಂಡುಬಂದರೂ, ಜೀವಂತ ಗಿಳಿಯಂತೆ ಕಾಣುತ್ತದೆ.

೨. ಉಣ್ಣೆ ಬಟ್ಟೆಯಿಂದ ಗೊಂಬೆಯಾಕಾರ ಮಾಡಿ ಅದರ ಒಳಗಡೆ ಹರಳೆ ಇಟ್ಟಿರುತ್ತಾರೆ. ಇದು ಕೂಡ ನಿಜವಾದ ಗೊಂಬೆಯಂತೆ ಕಾಣುತ್ತದೆ. ಮಂಗ, ಗೊರಿಲ್ಲಾ, ಕರಡಿ ಇತ್ಯಾದಿಗಳನ್ನು ಇವೆ ಮಾದರಿಯಲ್ಲಿ ತಯಾರಿಸುವರು.

೩. ಹಾವಿನ ಪೊರೆ ತೆಗೆದು ಮೃದು ಹತ್ತಿ ಒಳಗಡೆ ಸೇರಿಸುತ್ತಾರೆ. ಇದು ಜೀವಂತವಾದ ಹಾವಿನಂತೆ ಕಂಡುಬರುತ್ತದೆ.

೪. ಕರಡಿಯ ಚರ್ಮ ಒಣಗಿಸಿ ಕರಡಿಯಂತೆ ಆಕಾರ ನೀಡಲಾಗುವುದು. ಅದರ ಒಳಗಡೆ ಹತ್ತಿ ಇಟ್ಟಿರುವುದುಂಟು. ಆಗ ನಿಜವಾದ ಕರಡಿಯಂತೆ ಕಾಣುತ್ತದೆ.

೫. ಮೇಕೆಯ ಚರ್ಮಗಳಿಗೆ ಜಿಂಕೆಯಾಕಾರದ ಬಣ್ಣ ಲೇಪಿಸಿದಾಗ ನಿಜವಾದ ಜಿಂಕೆಯಂತೆ ಕಂಡು ಬರುತ್ತದೆ.

೬. ಮರಣ ಹೊಂದಿದ ನಾಯಿ ಚರ್ಮ ಒಣಗಿಸಿ, ಹುಲಿಯ ಬಣ್ಣ ಲೇಪಿಸಿ ಅದರೊಳಗೆ ಹತ್ತಿಯನ್ನು ಇಡುತ್ತಾರೆ. ಇದು ನಿಜವಾದ ಹುಲಿ, ಜಿಂಕೆಯಂತೆ ಕಂಡುಬರುತ್ತದೆ. ಹೀಗೆ ಕಾಡಿನ ಪ್ರತಿಯೊಂದು ಸಂಪತ್ತನ್ನು ಉಪಯೋಗಿಸಿಕೊಂಡು ಬೇಕಾದ ಅಭಿರುಚಿಗಳಿಗೆ ವಸ್ತು ನಿರ್ಮಿಸುವರು. ಬೇಡಿಕೆ ಇರಬಹುದಾದ ಪಕ್ಷಿ-ಪ್ರಾಣಿ, ಹಾರ, ಹೂವು, ಇನ್ನಿತರ ಅಲಂಕಾರಿಕ ವಸ್ತುಗಳನ್ನು ಅಲೆಮಾರಿಗಳು ತಮ್ಮ ಕರಕೌಶಲ್ಯದಿಂದ ತಯಾರಿಸುತ್ತಾರೆ. ಹೀಗೆ ತಯಾರಿಸಿದ ವಸ್ತುಗಳನ್ನು ಸುತ್ತಮುತ್ತಲಿನ ನಗರ ಪ್ರದೇಶದಲ್ಲಷ್ಟೆ ಮಾರಾಟವನ್ನಷ್ಟೆ ಮಾಡದೆ, ದೂರದ ಅಂತರ ರಾಜ್ಯ ಮತ್ತು ಅಂತರಾಷ್ಟ್ರಗಳಲ್ಲಿಯೂ ಕರಕುಶಲತೆಯ ಪ್ರತಿಭೆ ತೋರಿಸಿದ್ದಾರೆ.

ಪಿಠೋಪಕರಣ ತಯಾರಿಕೆ : ಆಸನಗಳನ್ನು ತಯಾರಿಸುವಲ್ಲಿ ಅಲೆಮಾರಿಗಲು ನಿಪುಣರು. ಸಂಪಿಗೆ, ಮಾವು, ಮಧೂಕ, ಹಲಸು ಮಳಿಗೆ, ಬೇವು ಮತ್ತು ಪ್ಲೆವುಡ್ ಇತ್ಯಾದಿಗಳನ್ನು ಬಳಸಿ ತುಂಬಾ ನುಣುಪಾಗಿ ಮೇಲಿನ ಪೆಟ್ಟಿಗೆಗೆ ನಾಲ್ಕು ಪಾದಗಳಿಂದ ಜೋಡಿಸಲಾಗುತ್ತದೆ, ಜೊತೆಗೆ ಬೆನ್ನಿಗೆ ಆಸರೆಗಾಗಿ ಇತ್ತೀಚಿಗೆ ಚಾಲ್ತಿಗೆ ಬಂದ ಅಲಂಕಾರಿಕ ಬಟ್ಟೆ ಬಳಸಿಕೊಂಡು ಹರಳೆ ಮತ್ತು ತೆಂಗಿನ ನಾರು ಬಳಸಿ ಮೆತ್ತನೆಯ ಆಸನ ತಯಾರಿಸುವರು.

ಬೇಟೆಯ ಪರಿಕಗಳು : ಕುದುರೆ ಬಾಲದ ಕೂದಲಿನಿಂದ ಉರುಲು ತಯಾರಿಸುತ್ತಾರೆ. ಪಕ್ಷಿಗಳಿಗೆ ಉರುಲು ಹಾಕಲು ಉಪಯೋಗಿಸುವುದುಂಟು. ಹಾಗೂ ವೈರ್‌ಗಳಿಂದಲೂ ತಯಾರಿಸುತ್ತಾರೆ. ಸರಗುಣಿಕೆ ರೂಪದಲ್ಲಿ ಹಾಕಿರುತ್ತಾರೆ. ಉಡಗಳಿಗೆ ಹಾಕುವ ಕಡಗದ ಬಲೆ ತಯಾರಿಸುತ್ತಾರೆ. ಬಿದಿರಿನ ಪರಿಕರ ಕೌಜುಗ ಹಿಡಿಯಲು ಅನುಕೂಲವಾಗುವಂತೆ ಪಾಜಿತ್ತು ಮೀಟುಗಳನ್ನು ತಯಾರಿಸುತ್ತಾರೆ. ಮೀನಿನ ಬಲೆ ಗುಡಾರಗಳಲ್ಲಿ ಹೆಚ್ಚಾಗಿ ಪುರುಷರು ತಯಾರಿಸುತ್ತಾರೆ.

ಪ್ರದರ್ಶನ ಕಲೆ ಮತ್ತು ಇತರ ವೃತ್ತಿ ಪರಿಕರಗಳು : ಹಗಲುವೇಷಗಾರರು ತಮ್ಮ ಪ್ರದರ್ಶನ ಕಲೆಗೆ ಬೇಕಾಗುವ ಹಾರ್ಮೋನಿಯಂ ತಯಾರಿಸಲು ಮೆದುವಾದ ಕಟ್ಟಿಗೆ, ಚರ್ಮ ಮತ್ತು ತಂತಿ ಬಳಸಿಕೊಂಡು ಸ್ವರ ಬರುವಂತೆ ತಯಾರಿಸುತ್ತಾರೆ. ತಬಲ ತಗಡಿನ ಡಗ್ಗ ಇಲ್ಲವೆ ಕಟ್ಟಿಗೆಯ ಡಗ್ಗಕ್ಕೆ ಮೇಕೆಯ ಚರ್ಮವನ್ನು ಉಪಯೋಗಿಸುವುದು. ಕಟ್ಟಿಗೆಯ ದಿಮ್ಮಿಯನ್ನು ಉಪಯೋಗಿಸಿ ಬಾರುಗಳ ಮೂಲಕ ನಿರ್ಮಿಸುವುದು ಹಾಗೂ ದುಂಡಾಗಿ ಲೇಪಿಸುತ್ತಾರೆ. ಇದರಿಂದ ಉತ್ತಮವಾದ ನಾದ ಬರುತ್ತದೆ.

ಚಾಟ ಇತ್ಯಾದಿ : ಸಿಂಧೋಳ್ಳರು ಹಗ್ಗದಿಂದ ಹೆಣೆದು ತಯಾರಿಸುತ್ತಾರೆ. ಷನಾಯಿ ಮೆದುವಾದ ಕಟ್ಟಿಗೆ ತೆಗೆದುಕೊಂಡು ಒಳಗಡೆ ಪೊಳ್ಳುಮಾಡಿ ಕಬ್ಬಿಣದ ಮೂಲಕ ೧೨ ರಂಧ್ರ ಕೊರೆದು ಮೇಲೆ ಹಿತ್ತಾಳೆ ಅಣಸು ಹಾಕಿ ಹಿಂದೆ ಹಿತ್ತಾಳೆಯ ಬಟ್ಟಲು ಹಾಕಿಸಿದ್ಧಗೊಳ್ಳಿಸುತ್ತಾರೆ.

ರುದ್ರಾಕ್ಷಿ ಸರ : ಅರಣ್ಯದಲ್ಲಿ ಗಿಜ್ಜರ್ ಪಟ್ಟು ಕಾಯಿ ಹೆಚ್ಚಾಗಿ ಸಿಗುವುದುಂಟು. ಆ ಕಾಯಿಗಳನ್ನು

ದಾರದಲ್ಲಿ ಬಳಸಿ ಮಧ್ಯದಲ್ಲಿ ಓಂಕಾರ `ಹ' ಎಂಬ ಅಕ್ಷರ ಬರೆದು ರಚಿಸುತ್ತಾರೆ. ಇದನ್ನು ಕೊರಳಲ್ಲಿ ಉಪಯೋಗಿಸುತ್ತಾರೆ.

ಟೋಪ್ಪಿಗೆ ತಯಾರಿಕೆ : ಹದ್ದಿನ ಚರ್ಮ ಹದಮಾಡಿ ಟೋಪ್ಪಿ ತಯಾರಿಸುತ್ತಾರೆ. ಮತ್ತು ಹದ್ದಿನ ಪುಕ್ಕಗಳಿಂದ ಚಿಕ್ಕ ಮಕ್ಕಳ ಟೊಪ್ಪಿ ಹಾಗೂ ಕುರಿಯ ಕೂದಲು ಬಳಸಿಕೊಂಡು ಟೊಪ್ಪಿಗೆಗಳನ್ನು ತಯಾರಿಸುವರು.

೪.೧.೩. ಕಸುಬು ಮತ್ತು ಕರಕುಶಲತೆಯ ಅನುಕೂಲಗಳು

ಅಲೆಮಾರಿಗಳು ತಮ್ಮ ಕುಲಕಸುಬುಗಳಿಂದ ಸಮಾಜದ ಸದಸ್ಯರುಗಳಿಗೆ ಬೇಕಾದ ವಸ್ತುಗಳನ್ನು ತಮ್ಮದೆ ಕರಕೌಶಲ್ಯದಿಂದ ವಿಶಿಷ್ಟವಾಗಿ ರೂಪಕೊಟ್ಟು ವಿತರಿಸುತ್ತಾರೆ. ಇಂತಹ ಕಸುಬುಗಳಿಂದ ಸಮುದಾಯವು ಉತ್ತಮ ಜೀವನ ಮಾಡದಿದ್ದರು, ಒಂದ್ಹೊತ್ತಿನ ಊಟಕ್ಕಾದರು ಮಾಡಿಕೊಳ್ಳುತ್ತಾರೆ. ಕರಕುಶಲತೆಯಿಂದ ಸಮುದಾಯದಲ್ಲಿ ಕೌಶಲ್ಯವು ಜೀವಂತವಾಗಿರುವ ಜೊತೆಯಲ್ಲಿ ವರ್ಷದಿಂದ ವರ್ಷಕ್ಕೆ ಹೊಸ ರೂಪ ಪಡೆದುಕೊಂಡಿದೆ. ಸಮುದಾಯದಲ್ಲಿ ಯಾರೆ ಸದಸ್ಯರು ಸೋಮಾರಿಯಾಗದಂತೆ ಕುಲಕಸುಬುಗಳು ಮಾಡಿಕೊಂಡಿರುವುದು. ಇದು ಪೀಳಿಗೆಯಿಂದ ಪೀಳಿಗೆಗೆ ನಿರಂತರ ಸಾಗಿ ಬಂದಿದೆ. ಸಮುದಾಯಗಳ ಕರಕುಶಲತೆಯಿಂದ ಅನುಕೂಲತೆಗಳಿವೆ.

ಅ. ರಕ್ಷಣೆ ಮತ್ತು ತೊಡಗಿಸಿಕೊಳ್ಳುವಿಕೆ

ಕರ ಕುಶಲತೆ ನಿರುದ್ಯೋಗವನ್ನು ಕಡಿಮೆಗೊಳಿಸುತ್ತದೆ. ಆದರೂ ದುಡಿಯುವ ಕೈಗಳಿಗೆ ಕೆಲಸ ಸಿಗುತ್ತದೆ ಹಾಗೂ ಶ್ರಮಕ್ಕೆ ಬೆಲೆ ಸಿಗುತ್ತದೆ. ಸಮುದಾಯದಲ್ಲಿ ಕರಕುಶಲತೆ ಆತ್ಮವಿಶ್ವಾಸವನ್ನು ನೀಡುತ್ತದೆ. ಅಲ್ಲದೆ ಸಹಕಾರ ಮನೋರಂಜನೆ ನೀಡುತ್ತದೆ. ಕಡಿಮೆ ಪ್ರಮಾಣದಲ್ಲಿ ವಸ್ತುಗಳನ್ನು ಬಳಕೆ ಮಾಡಿಕೊಂಡು, ಸಿದ್ಧವಸ್ತುಗಳನ್ನಾಗಿ ಮಾಡುವುದರಿಂದ ಬಂಡವಾಳದ ಅವಶ್ಯಕತೆ ಇರುವುದಿಲ್ಲ. ದೈಹಿಕ ಬಲ ಮತ್ತು ಬೌದ್ಧಿಕ ಕೌಶಲ್ಯ ತಂತ್ರಗಾರಿಕೆ ಮುಖ್ಯವಾಗಿದೆ. ಸ್ತ್ರೀ-ಪುರುಷರೆಂಬ ಭೇದವಿಲ್ಲದೆ, ಮಕ್ಕಳನ್ನೊಳಗೊಂಡಂತೆ ಭಾಗಿಯಾಗಿರುವುದುಂಟು. ಅವರವರ ಅಭಿರುಚಿಗೆ ತಕ್ಕಂತೆ ಕೆಲಸಗಳನ್ನು ನಿರ್ವಹಿಸಬಹುದು. ಇಲ್ಲಿ ಕೆಲಸವು ವಿಕೇಂದ್ರಿಕರಣಗೊಂಡಿರುತ್ತದೆ. ಬೃಹತ್ ಉದ್ದಿಮೆಗಳಲ್ಲಿರುವಂತೆ ಅಧಿಕಾರವಾದ ಉದ್ಯೋಗದ ಕೇಂದ್ರಿಕರಣವು ಇಲ್ಲಿರುವುದಿಲ್ಲ. ಕೆಲಸದಲ್ಲಿ ತಡವಾಗಿ ಬಂದರೆ ಶಿಕ್ಷೆ ಇರುವುದಿಲ್ಲ. ವೃತ್ತಿ ಭಾವನೆ ಬಂದಾಗ ಪ್ರೀತಿ, ಸಹಕಾರ, ಸಹಬಾಳ್ವೆಯಿಂದ ತೊಡಗಿಸಿಕೊಳ್ಳುತ್ತಾರೆ. ಇದಕ್ಕೆ ವಿದ್ಯಾರ್ಹತೆ ಮತ್ತು ತರಬೇತಿ ಅವಶ್ಯಕತೆಗಳಿರುವುದಿಲ್ಲ. ಪಾರಂಪಾರಿಕವಾಗಿ ಬಂದಂತಹ ಕೌಶಲ್ಯವಿದ್ದರೆ ಸಾಧಾರಣವಾಗಿ ಕ್ರಿಯೆಯಲ್ಲಿ ತೊಡಗಬಹುದು. ಆದುದರಿಂದ ಕರಕುಶಲ ಕಲೆಗಳು ಸಮುದಾಯದ ಬಾಳಿಗೆ ಸಮೃದ್ಧಿ ಆಸರೆಯಾಗಿದೆ.

ಬ. ಆದಾಯ ಸಮಾನ ಹಂಚಿಕೆ

ದೊಡ್ಡ ಉದ್ದಿಮೆಗಳಲ್ಲಿ ಅಧಿಕಾರದ ಕೇಂದ್ರಿಕರಣದಿಂದ ಅತಿಯಾದ ದುಡಿಮೆ, ಕಡಿಮೆ ವೇತನ ಕೊಡುವುದರಿಂದ ಶೋಷಣೆಯಿಂದ ಅಸಮಾನತೆಯಿರುತ್ತದೆ. ಆದರೆ ಇಂತಹ ಕರಕುಶಲತೆಯಿಂದ

ತಯಾರಿಸುವ ಸಮುದಾಯಗಳಲ್ಲಿ ಯಾವುದೆ ಅಸಮಾನತೆಯಿಲ್ಲದೆ, ಬಂದಿರುವ ಆದಾಯವನ್ನು ತಮ್ಮ ಸಮುದಾಯದಲ್ಲಿ ಬಳಸಿಕೊಳ್ಳುವರು. ಕೂಡಿ ದುಡಿಯುವ, ಕೂಡಿ ತಿನ್ನುವ ಸಿದ್ಧಾಂತದಲ್ಲಿ ಅಂಟಿಕೊಂಡಿರುತ್ತಾರೆ. ಎಷ್ಟು ಕೆಲಸ ಮಾಡುತ್ತಾರೊ ಅಷ್ಟು ಆದಾಯವನ್ನು ಸಮುದಾಯಗಳಲ್ಲಿ ಪಡೆಯುವರಾಗಿ ಕಂಡುಬರುತ್ತಾರೆ. ಖರ್ಚುವೆಚ್ಚಗಳ ನಿರ್ದಿಷ್ಟ ಲೆಕ್ಕಗಳಿರುವುದಿಲ್ಲ.

ಶೀಘ್ರ ಪ್ರತಿಫಲ : ಕರುಕುಶಲತೆಯಿಂದ ಶೀಘ್ರದಲ್ಲಿ ಅದರ ಪ್ರತಿಫಲ ಪಡೆಯಬಹುದು. ಇಲ್ಲಿ ಬೃಹತ್ ಉದ್ದಿಮೆಗಳು ಅನುಸರಿಸುವ ಆಮದು ರಫ್ತುಗಳಿಗೆ ಕಾದುಕುಳಿತು ವಸ್ತುಗಳಿಗೆ ಬೇಡಿಕೆ ಬಂದ ಮೇಲೆ ರಫ್ತುಮಾಡಿದ ಮೇಲೆ ಮಾರಾಟ ಮಾಡುತ್ತಾರೆ. ಆದರೆ ಅಲೆಮಾರಿಗಳು ಉತ್ಪಾದಿಸಿದ ಕೂಡಲೆ ಸುತ್ತಮುತ್ತಲ ಪ್ರದೇಶಗಳಲ್ಲಿ ಮಾರಾಟ ಮಾಡುವುದರಿಂದ ಬೇಗ ಅದರ ಫಲಕಾಣಬಹುದು. ಆಕಸ್ಮಿಕವಾಗಿ ಒಮ್ಮೊಮ್ಮೆ ತಯಾರಿಸಿದ ವಸ್ತುಗಳು ಬೇಗ ಮಾರಾಟವಾಗದಿದ್ದರೆ, ತಲೆ ಮೇಲೆ ಹೊತ್ತುಕೊಂಡು ಮಾರಾಟ ಮಾಡುವರು. ಒಮ್ಮೊಮ್ಮೆ ವಸ್ತುಗಳ ಬೆಲೆ ನಷ್ಟವಾದಲ್ಲಿ ಮಾರಾಟಮಾಡಲು ಹಿಂಜರಿಯುವರು. ಕೊಂಡಿರುವ ವಸ್ತುಗಳ ಮೇಲೆ, ಲಾಭವಿಲ್ಲದೆ, ಕಡಿಮೆ ಬೆಲೆಯಲ್ಲಿ ವಸ್ತುಗಳನ್ನು ಮಾರಾಟ ಮಾಡುವರು. ಕಾರಣ ಅವರ ಹಸಿದ ಹೊಟ್ಟೆ. ಅಂದಿನ ಹಸಿವನ್ನು ನೀಗಿಸಲು ಜೀವನಧಾರವಾಗಿರುತ್ತದೆ.

ಸಂಪನ್ಮೂಲಗಳ ಬಳಕೆ : ಅರಣ್ಯದಲ್ಲಿ ಸಿಗುವ ಉತ್ಪನ್ನಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕಾಗಿದೆ. ಇಲ್ಲಿ ದೊರೆಯಬಹುದಾದ ಈಚಲುಗರಿ, ಕಟ್ಟಿಗೆ, ಬಿದಿರು, ಗಡ್ಡೆ-ಗೆಣಸು, ಜೇನು, ಪ್ರಾಣಿಗಳ ಚರ್ಮ, ಗರಿ, ಗಿಡಮೂಲಿಕೆ ಇತ್ಯಾದಿಗಳು. ಆದಕಾರಣ ನೈಸರ್ಗಿಕ ಸಂಪನ್ಮೂಲಗಳು ಉಚಿತವಾಗಿ ದೊರೆಯಬಲ್ಲವು. ಇಂತಹ ಸಂಪನ್ಮೂಲಗಳನ್ನು ಪೋಲಾಗಲು ಬಿಡದೆ, ಅಲೆಮಾರಿಗಳು ಅವಶ್ಯಕವಾಗಿ ಬೇಕಾಗುವ ವಸ್ತುಗಳನ್ನು ತಯಾರಿಸಿಕೊಳ್ಳಲು ಸಾಧ್ಯವಾಗಿದೆ. ಅರಣ್ಯಕಾಯ್ದೆಗಳಿಂದ ಈ ಸಂಪತ್ತನ್ನು ಪಡೆಯುವುದು ತುಂಬಾ ಕಷ್ಟಕರವಾಗಿದೆ.

ವಸ್ತುಗಳ ಗುಣಮಟ್ಟ ಸುಧಾರಣೆ : ಯಂತ್ರೋಪಕರಣಗಳು ತಯಾರಿಸಿದ ವಸ್ತುಗಳಿಗಿಂತ ತಮ್ಮದೆ ಕೌಶಲ್ಯದ ವಿಶಿಷ್ಟತೆ ಕೌಶಲ್ಯ ಉಪಯೋಗಿಸಿದ ಕರಕುಶಲ ವಸ್ತುಗಳು ಹೆಚ್ಚು ಗುಣಮಟ್ಟ ಹೊಂದಿರುತ್ತದೆ. ಕಾರಣ ಯಾರ ಭಯವಿಲ್ಲದೆ, ಒತ್ತಡವಿಲ್ಲದೆ, ತಮ್ಮ ಜ್ಞಾನರ್ಜನೆಯಿಂದ ಕೈಚಳಕದ ಕೌಶಲ್ಯವನ್ನು ಕಾಯ್ದುಕೊಂಡಿರುತ್ತದೆ. ಹಾಗೂ ಇವುಗಳನ್ನು ಬಳಸುವುದರಿಂದ ಇತರೆ ದೈಹಿಕ ತೊಂದರೆಗಳು ನಿರ್ಮೂಲನೆಯಾಗುವುದು.

ಕ. ನವ ಸಮಾಜ ನಿರ್ಮಾಣದ ನಾಂದಿ

ಕರಕುಶಲತೆಯಿಂದ ತಯಾರಿಸುವ ವಸ್ತುಗಳು ಸಮುದಾಯದಲ್ಲಿ ಅಸಮಾನತೆಯನ್ನು ನಿರ್ಮೂಲನೆ ಮಾಡುತ್ತದೆ. ಯಾರು ಎಷ್ಟು ಕೆಲಸ ಮಾಡುತ್ತಾರೊ ಅಷ್ಟು ಪ್ರತಿಫಲವನ್ನು ಪಡೆಯಲು ಇಲ್ಲಿ ಅವಕಾಶವಿದೆ. ಇದರಿಂದ ಶ್ರೀಮಂತ ಶ್ರೀಮಂತನಾಗುವ, ಬಡವ ಬಡವನಾಗುವ ಹುನ್ನಾರ ಇಲ್ಲದಂತಾಗುತ್ತದೆ. ಮತ್ತು ಸಮಾಜದ ಕಲಹಕ್ಕೆ ಆಸ್ಪದವಿರುವುದಿಲ್ಲ. ಸಮಾನತೆಯನ್ನು ಕಾಯ್ದುಕೊಂಡಿರುತ್ತದೆ. ಯಾರು ಯಾರಿಗೆ ಮಾಲಿಕರು ಇರುವುದಿಲ್ಲ. ಎಲ್ಲರೂ ಸಮಾನರೆ ಆಗಿರುತ್ತಾರೆ.

೪.೨. ಅಲೆಮಾರಿಗಳ ಉತ್ಪಾದನಾ ವ್ಯವಸ್ಥೆ

ಜಗತ್ತಿನಲ್ಲಿ ಅತಿ ಹೆಚ್ಚಿನ ಆಶೆ ಇರುವ ಎಲ್ಲಾ ಪ್ರಾಣಿಗಳಲ್ಲಿ ಮನುಷ್ಯ ಮೊದಲ ಪ್ರಾಣಿಯಾಗಿದ್ದಾನೆ. ಮಾನವನ ಬಯಕೆಗಳಿಗೆ ಮಿತಿ ಇಲ್ಲವಾಗಿದೆ. ಪ್ರತಿಯೊಂದು ಚಟುವಟಿಕೆಗಳಿಗೆ ಮೂಲ ಮಾನವನ ಬಯಕೆಗಳಾಗಿವೆ. ಹುಟ್ಟಿನಿಂದ ಬಯಕೆಗಳು ಹುಟ್ಟಿಕೊಂಡಿದ್ದು. ತನ್ನ ಬುದ್ಧಿಶಕ್ತಿ, ಚಿಂತನೆ, ವಿಮೋಚನೆಗಳಿಂದ ಏನೆಲ್ಲ ಮಾಡಲು ಶಕ್ತನಾಗಿದ್ದಾನೆ. ಬಯಕೆಗಳು ಮಾನಸಿಕ ಅವಶ್ಯಕತೆಗಳ ಕಾರಣದಿಂದಾಗಿ ಉಗಮಗೊಂಡಿವೆ. ಬಯಕೆಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ. ಮೊದಲನೆಯದು ಪ್ರಾಥಮಿಕ ಬಯಕೆ. ಎರಡನೆಯದು ಮಾಧ್ಯಮಿಕ ಬಯಕೆಗಳಾಗಿವೆ. ಪ್ರಾಥಮಿಕ ಬಯಕೆಯಲ್ಲಿ ಆಹಾರ, ವಸತಿ, ಬಟ್ಟೆ, ಗಾಳಿ, ನೀರು ಮುಂತಾದವು. ಮಾಧ್ಯಮಿಕ ಬಯಕೆಗಳಲ್ಲಿ ಐಷ್ಯಾರಾಮದ ಬಯಕೆಗಳಾದ ತಂಪುಪಾನಿಯ, ರೇಡಿಯೊ, ಟಿ.ವಿ., ಫ್ಯಾನ್, ಫ್ರಿಜ್, ವಾಹನಗಳು ಇತ್ಯಾದಿಗಳು ಸೇರಿಕೊಂಡಿವೆ.

ಅಪರಿಮಿತವಾದ ಬಯಕೆಗಳನ್ನು ಮಾನವ ಒಮ್ಮಿಂದೊಮ್ಮೆಲೆ ಈಡೇರಿಸಿಕೊಳ್ಳುವ ವಸ್ತುಗಳು ಉತ್ಪಾದನೆಯಾಗಲಾರವು. ಆದುದರಿಂದ ವಸ್ತುಗಳ ಮೂಲಕ ಬಯಕೆಗಳನ್ನು ಪೂರೈಸಿಕೊಳ್ಳುವರು. ಅಂತಹ ವಸ್ತುಗಳ ಉತ್ಪಾದನೆ ಬಹುಮುಖ್ಯವಾಗಿದೆ. ಬಯಕೆಗಳ ಈಡೇರಿಕೆಗೆ ವಸ್ತುಗಳು ಉತ್ಪಾದನೆ ಮಾಡಲು ವಿವಿಧ ಉಪಕರಣ, ಸಲಕರಣೆ, ಆಯುಧ, ಕಚ್ಚಾವಸ್ತುಗಳು, ದೈಹಿಕ, ಮಾನಸಿಕ ಶ್ರಮ ಇತ್ಯಾದಿಗಳು ಬೇಕಾಗುತ್ತದೆ. ಇವುಗಳೆಲ್ಲವನ್ನು ಕೇಂದ್ರಿಕರಿಸಿ, ಯಾವುದನ್ನು ಪಡೆಯಬೇಕು ಅದನ್ನು ಪಡೆಯಲು ಉತ್ಪಾದನೆಯಲ್ಲಿ ತೊಡಗುವರು. ಬಯಕೆಗಳನ್ನು ಪ್ರತಿ ಕುಟುಂಬವು ತಮಗೆ ತಾವೆ ಪೂರೈಸಿಕೊಳ್ಳುವುದು ಅಸಾಧ್ಯವಾಗಿದೆ. ಕೆಲವೊಂದು ಸಮುದಾಯಗಳ ಅವಶ್ಯಕತೆ ಅನಿವಾರ್ಯತೆ ಇದೆ. ಇಂತಹ ಸಮುದಾಯಗಳಿಂದ ಪ್ರಾಥಮಿಕ ಬಯಕೆ ಮತ್ತು ಮಾಧ್ಯಮಿಕ ಬಯಕೆಗಳ ಪೂರೈಕೆಯ ಪೂರಕವಾದ ಸೇವೆಯು ಬೇಕಾಗುತ್ತದೆ. ಈ ಸೇವೆಯನ್ನು ಪೂರೈಸುವ ಸಮುದಾಯ ನಾಡಿನ ಅಲೆಮಾರಿ ಸಮುದಾಯಗಳಾಗಿವೆ.

ಅಲೆಮಾರಿಗಳು ಸಾಮಾಜಿಕ ಜೀವನದಲ್ಲಿ ಬಯಕೆಗಳ ಮೂಲಕ ಸ್ಪಂದಿಸುತ್ತಾ ಬಂದಿದ್ದಾರೆ. ಸ್ಪಂದನದ ಹಿಂದೆ ಅವರ ಆಸೆಯೂ ಅಡಕವಾಗಿದೆ ಎನ್ನುವುದನ್ನು ತಳ್ಳಿ ಹಾಕುವಂತಿಲ್ಲ. ಹೀಗೆ ತನ್ನ ಬಯಕೆ ಮತ್ತು ಇತರರ ಬಯಕೆಗಳನ್ನು ಉತ್ಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉತ್ಪಾದನೆಯಿಂದ ಇತರರ ಬಯಕಗೆಳು ನೀಗುವವು ಹಾಗೂ ಸಮುದಾಯದ ಬಯಕೆಯು ನೀಗುವುದು. ಸಮುದಾಯಗಳು ಬಯಕೆಯು ಕೇವಲ ಹಸಿವಿನ ಬಯಕೆಯಾಗಿದೆ, ಐಷಾರಾಮದ ಬಯಕೆಯಾಗಿರುವುದಿಲ್ಲ. ಇಂತಹ ನೀರಿಕ್ಷೆಯನ್ನು ಎಂದಿಗೂ ಮಾಡುವುದಿಲ್ಲ.

ಉತ್ಪಾದನೆ ಎಂದರೆ ಕಚ್ಚಾವಸ್ತುಗಳನ್ನು ಬಳಸಿಕೊಂಡು, ಸಿದ್ಧವಸ್ತುಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ. ಪರಿಸರದಲ್ಲಿ ದೊರೆಯುವ ವೈವಿಧ್ಯಮಯ ನೈಸರ್ಗಿಕ ಸಂಪನ್ಮೂಲಗಳನ್ನು ಮನುಷ್ಯ ಬಳಸಿಕೊಂಡು ತನ್ನ ಶ್ರಮಶಕ್ತಿಯನ್ನು ಹಾಗೂ ಕೌಶಲ್ಯವನ್ನು ಉಪಯೋಗಿಸಿ ಕೊಳ್ಳುತ್ತಾನೆ. ಬಂಡವಾಳದ

ಅವಶ್ಯಕತೆಯು ಇರುವುದರಿಂದ ಅದನ್ನು ಉಪಯೋಗಿಸಿಕೊಂಡು ಉತ್ಪಾದನೆ ಮಾಡುತ್ತಾರೆ. ವಿನಿಮಯ ದಲ್ಲಿ ಸೇರುವ ಬಯಕಗಳನ್ನು ತೃಪ್ತಿಪಡಿಸಲು ಶಕ್ತಿಯನ್ನು ಅಂದರೆ "ತುಷ್ಠಿ ಗುಣವನ್ನು ಹುಟ್ಟಿಸುವುದು ಇರುವ ವಸ್ತುವಿನಲ್ಲಿ ತುಷ್ಠಿಗುಣವನ್ನು ಹೆಚ್ಚಿಸುವುದು ಉತ್ಪಾದನೆಯ ಮುಖ್ಯ ಗುರಿಯಾಗಿದೆ."[3] ಉತ್ಪಾದಿಸುವುದು ಮಾತ್ರವಲ್ಲದೆ, ಉತ್ಪಾದಿಸಿದ ವಸ್ತುಗಳನ್ನು ಸರಿಯಾಗಿ ರಕ್ಷಿಸುವ, ಜನಸಾಮಾನ್ಯರಿಗೆ ಆಯಾ ಸ್ಥಳದಲ್ಲಿ ಒದಗಿಸುವ ಕಾರ್ಯಗಳೆಲ್ಲವೂ ಉತ್ಪಾದನೆಯಾಗುತ್ತದೆ.

ಉತ್ಪಾದನೆ ಎಂದರೆ ಯಾವುದೆ ಸರಕಿನಲ್ಲಿ ವಿನಿಮಯ ಮೌಲ್ಯ ಮತ್ತು ತುಷ್ಠಿಗುಣವನ್ನು ತುಂಬುವುದಾಗಿದೆ. ಅಂದರೆ ವಸ್ತುವಿನೊಳಗೆ ತುಷ್ಠಿಗುಣವನ್ನು ತುಂಬಿ ಅದರ ಉಪಯೋಗದಲ್ಲಿ ಯೋಗ್ಯವನ್ನಾಗಿ ಮಾಡುವುದು ಉತ್ಪಾದನೆಯಾಗುತ್ತದೆ. ವಾಸ್ತವವಾಗಿ ಉತ್ಪಾದನೆ ಎಂದರೆ ವಸ್ತುಗಳನ್ನು ಹೊಸದಾಗಿ ಸೃಷ್ಟಿಸುವುದೆನೆಂದಲ್ಲ. ಮನುಷ್ಯ ಯಾವುದೆ ವಸ್ತುವನ್ನು ಸ್ವಂತ ಸೃಷ್ಠಿಸುವ ಸಾಮರ್ಥ್ಯ ಪಡೆದು ಕೊಂಡಿಲ್ಲ. ಪ್ರತಿಯಾಗಿ ಅವನು ನಿಸರ್ಗದಲ್ಲಿ ಉಚಿತವಾಗಿ ಕೊಡುಗೆ ರೂಪದಲ್ಲಿ ಲಭ್ಯವಿರುವ ಸಾಧನ ಸಂಪನ್ಮೂಲಗಳನ್ನು ಬಳಸಿಕೊಂಡು, ಅವುಗಳ ರೂಪವನ್ನೆ ಬದಲಾಯಿಸಿ ಉಪಯೋಗವಾಗುವಂತೆ ಉತ್ಪಾದನೆ ಮಾಡುತ್ತಾನೆ. ಈ ಹಿನ್ನೆಲೆಯಲ್ಲಿ ಉತ್ಪಾದನೆ ಎಂದರೆ ಸಂಪನ್ಮೂಲಗಳನ್ನು ಸಂಸ್ಕರಿಸುವ ಮೂಲಕ ಸಿದ್ಧಪಡಿಸಿದ ವಸ್ತುಗಳನ್ನಾಗಿ ಪರಿವರ್ತಿಸುವ ಸಂಘಟಿತ ಚಟುವಟಿಕೆಯಾಗಿದೆ.

'ಉತ್ಪಾದನೆ' ಎಂಬ ಪರಿಭಾವನೆಯನ್ನು ವಿವಿಧ ಅರ್ಥಶಾಸ್ತ್ರಜ್ಞರು ತಮ್ಮದೆ ಆದ ಅಭಿಪ್ರಾಯದಲ್ಲಿ ವಾಖ್ಯಾನಿಸಿದ್ದಾರೆ. "ವಿನಿಮಯದ ಮೂಲಕ ಬೇರೆ ಜನರ ಬಯಕೆಗಳನ್ನು ಈಡೇರಿಸುವತ್ತ ನಿರ್ದೇಶಿತವಾದ ಯಾವುದೆ ಚಟುವಟಿಕೆಯು ಉತ್ಪಾದನೆಯಾಗುತ್ತದೆ ಎಂದು ಪ್ರೊ. ಹಿಕ್ಸ್ ಅವರ ಅಭಿಮತವಾಗಿದೆ. "ಉತ್ಪದಾನೆ ಎಂಬುದು ಸಂಪನ್ಮೂಲಗಳು ಸರಕು ಮತ್ತು ಸೇವೆಗಳ ರೂಪದಲ್ಲಿ ಸಿದ್ಧವಸ್ತುಗಳನ್ನಾಗಿ ಮಾರ್ಪಾಟು ಮಾಡುವ ಸಂಘಟಿತ ಚಟುವಟಿಕೆಯಾಗಿದೆ. ಉತ್ಪಾದನೆಯ ಉದ್ದೇಶವು ಪರಿವರ್ತಿಸಿದ ಸಂಪನ್ಮೂಲಗಳ ಮೂಲಕ ಬೇಡಿಕೆಯನ್ನು ತೃಪ್ತಿಪಡಿಸುವುದಾಗಿದೆ"[4] ಎಂದು -ಜೇಮ್ಸ್ ಬೇಟ್ಸ್ ಮತ್ತು ಜೆ.ಆರ್. ಪಾರ್ಕಿಸನ್ ಅಭಿಮತವಾಗಿದೆ.

ಉತ್ಪಾದನಾ ಕ್ರಿಯೆ ನಡೆಯಬೇಕಾದರೆ ಮೂರು ಅಂಶಗಳ ಅವಶ್ಯಕತೆಗಳು ಇವೆ. ೧. ಭೂಮಿ ೨. ಶ್ರಮ ೩. ಬಂಡವಾಳ ಇವನ್ನು ಉತ್ಪಾದನಾ ಕರ್ತೃಗಳೆಂದು ಅಥವಾ ಉತ್ಪಾದನಾಂಗಗಳು ಎಂದು ಕರೆಯಲಾಗಿದೆ. ಭೂಮಿಯನ್ನು ಬಹು ವಿಶಾಲ ದೃಷ್ಟಿಯಿಂದ ನೋಡಲಾಗಿದೆ. ಭೂಮಿ ಎಂದ ಕೂಡಲೆ ಒಂದು ಕಾರ್ಖಾನೆ ಸ್ಥಾಪಿಸಲು ಬೃಹತ್ ಭೂಮಿಬೇಕಾಗುತ್ತದೆ. ಅದರಂತೆ ಇದು ಎಂದು ಭಾವಿಸಿಲ್ಲ. ಇಲ್ಲಿ 'ಭೂಮಿ' ಎಂದರೆ ಪ್ರಕೃತಿ ಸಂಪತ್ತುಗಳಾದ ಕಾಡು ಅಥವಾ ಅರಣ್ಯ ಎಂದು ಭಾವಿಸಲಾಗಿದೆ. ಭೂಮಿಯ ಮೇಲೆ ಕಾಡು ಇರುವುದರಿಂದ, ಕಾಡಿನ ಸಂಪತ್ತು ಅಲೆಮಾರಿಗಳ ಉತ್ಪಾದನೆಗೆ ಬಹುಮುಖ್ಯ ಕೇಂದ್ರಬಿಂದುವಾಗಿದೆ. ಭೂಮಿ ಅಥವಾ ಕಾಡು ಇರದಿದ್ದರೆ ಉತ್ಪಾದನೆಯು ಆಗಲಾರದು. ಒಂದು ವಸ್ತುವು ಉತ್ಪಾದನೆಯಾಗಬೇಕಾದರೆ ಹಲವಾರು ಅರಣ್ಯ ವಸ್ತುಗಳು ಬೇಕಾಗುವುದು ಅನಿವಾರ್ಯವಾಗಿವೆ.

ಸೊಪ್ಪು, ಹುಲ್ಲು, ಗರಿ, ಕಟ್ಟಿಗೆ, ಬಳ್ಳಿ, ಬಿದಿರು, ಅಂಟು, ಕೊಂಬೆ ಇತ್ಯಾದಿಗಳೆಲ್ಲವನ್ನು ಪಡೆಯಲು ಕಾಡನ್ನು ಅವಲಂಬಿಸಬೇಕಾಗಿದೆ.


'ಶ್ರಮ' ವೆಂದರೆ ಒಂದು ವಸ್ತುವನ್ನು ಉತ್ಪಾದಿಸುವಲ್ಲಿ ವಿನಿಯೋಗಿಸುವ ಶಕ್ತಿಯಾಗಿದೆ ಅಥವಾ ಒಂದು ವಸ್ತುವನ್ನು ತರುವಲ್ಲಿ ವಿನಿಯೋಗಿಸುವ ಸಾಮರ್ಥ್ಯವಾಗಿದೆ. ಉದಾಹರಣೆ ಕಾಡಿನಿಂದ ಹಲವಾರು ವಸ್ತುಗಳನ್ನು ತಮ್ಮ ಪ್ರಾಣಿಗಳಾದ ಎತ್ತು, ಕತ್ತೆ, ಕುದುರೆ, ಒಂಟೆ ಮೂಲಕ ಇಲ್ಲವೆ ತಾವೆ ಸ್ವತಃ ತಲೆಯಮೇಲೆ ಹೊತ್ತು ತರುವ ಒಂದು ಹಂತವಾಗಿದೆ. ಅವುಗಳನ್ನು ತರಲು ಬಳಸುವ ಸಲಕರಣೆಯಿಂದ ತಮಗೆ ಯಾವ ವಸ್ತು ತಯಾರಿಸಲು ಯಾವ ಸಂಪನ್ಮೂಲಬೇಕೆಂದು ಹುಡುಕಾಡಿ ಕೊಯ್ದುಕೊಂಡು ತರಬೇಕಾಗುತ್ತದೆ. ಆದ್ದರಿಂದ ಕಾಡು ಮತ್ತು ಶ್ರಮ ಅಲೆಮಾರಿಗಳ ಅತಿ ಭಾಂದವ್ಯದ ಉತ್ಪಾದನಾಂಗ ವಾಗಿದೆ.

'ಬಂಡವಾಳ' ಎಂದರೆ ಒಂದು ವಸ್ತುವನ್ನು ಉತ್ಪಾದಿಸಲು ಬೇಕಾಗಬಹುದಾದ ಸಲಕರಣೆಗಳಿಗೆ ಹಾಕುವ ಮೊತ್ತ. ಇಲ್ಲಿ ಅಲೆಮಾರಿಗಳು ಉತ್ಪಾದಿಸುವ ವಸ್ತುಗಳಿಗೆ ಬಂಡವಾಳದ ಮೊತ್ತ ಬೇಕಾಗುವುದಿಲ್ಲ. ಸಣ್ಣಪುಟ್ಟ ಸಾಮಾನುಗಳಿದ್ದರೆ ಸಾಕು. ಉದಾ: ಚಾಕು, ಚೂರಿ, ಕುಡುಗೋಲು, ಕೊಡಲಿ, ಕಂದೀಲು, ಸೂಜಿ, ದಾರ, ಮಣಿ, ಪ್ಲಾಸ್ಟಿಕ್ ಹಾಳೆ, ಅರಳೆ, ಅಂಟು, ತಗಡು, ತಂತಿ ಇತರೇ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಕೊಳ್ಳಲು ಮಾತ್ರ ಹಣ ಬೇಕಾಗುತ್ತದೆ. ಉತ್ಪಾದನೆ ಕಡಿಮೆ ಯಾಗಿರುವುದರಿಂದ ಮಾರಾಟ ಮಾಡಿ ಮತ್ತೆ ಅಂತಹ ವಸ್ತು ತರಬಹುದಾಗಿದೆ ಮತ್ತು ಉತ್ಪಾದಿಸ ಬಹುದಾಗಿದೆ.

೪.೨.೨. ಉತ್ಪಾದನಾಂಗಗಳು

ಯಾವುದೆ ವಸ್ತುವು ಉತ್ಪಾದನೆಯಾಗಬೇಕಾದರೆ ಉತ್ಪಾದನಾಂಗಗಳ ಸಹಕಾರದಿಂದ ಮಾತ್ರ ಸಾಧ್ಯವಿದೆ. ಉತ್ಪಾದನಾಂಗಗಳು ಇರದಿದ್ದರೆ ಉತ್ಪಾದನೆಯು ಅಸಾಧ್ಯವಾದದು. ಅಂದರೆ ಶುಷ್ಕ ಹವೆಯಿಂದ ಅಥವಾ ಶೂನ್ಯದಿಂದ ಏನನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ಉತ್ಪಾದನಾಂಗ ವೆಂದರೆ "ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಸಂಪನ್ಮೂಲಗಳಾಗಿ ಬಳಸಲಾಗುವ ಯಾವುದೆ ವಸ್ತು ಅಥವಾ ಅಂಶವನ್ನು ಉತ್ಪಾನಾಂಗ"[5] ಎನ್ನುತ್ತೇವೆ. ಇವುಗಳನ್ನು ಉತ್ಪಾದನಾ ಅಥವಾ ಉತ್ಪದನಾ ಒಳಾಂಗಗಳು, ಆಧಾರಗಳು ಎಂದು ಕರೆಯಬಹುದು. ಬಂಡವಾಳವಿದ್ದರೆ ಸಾಕು ಉಳಿದಂತೆ ಸಮುದಾಯದ ಮುಖ್ಯಸ್ಥನು ಅಥವಾ ಆ ಉತ್ಪಾದನಾ ಕುಟುಂಬದ ಸದಸ್ಯರು ಸಮುದಾಯದ ಸದಸ್ಯರಿಗೆ ವಸ್ತುಗಳನ್ನು ಉತ್ಪಾದಿಸಲು ನಿರ್ದೇಶಿಸುವ ಜೊತೆಯಲ್ಲಿ ತಾನು ತೊಡಗುವನು. ಆದರೆ ಬೃಹತ್ ಬಂಡವಾಳ ಉತ್ಪಾದನಾ ವ್ಯವಸ್ಥೆಯಲ್ಲಿ ಮುಖ್ಯಸ್ಥ ಉತ್ಪಾದನೆಯಲ್ಲಿ ತೊಡುಗುವುದಿಲ್ಲ, ಕೇವಲ ನಿರ್ದೇಶಿಸುತ್ತಾನೆ.

ಈ ಮುಂದಿನ ಚಿತ್ರದಲ್ಲಿ ತೋರಿಸಿರುವಂತೆ ಉತ್ಪಾದನಾಂಗಗಲ್ಲಿ ವಸ್ತುಗಳನ್ನು ಉತ್ಪಾದಿಸಲು ಅನಿವಾರ್ಯ ಹಾಗೂ ಕಡ್ಡಾಯ ಇಲ್ಲದಿದ್ದರೆ ವಸ್ತು ಉತ್ಪಾದಿಸುವುದು ಅಸಾಧ್ಯ. ಉತ್ಪಾದನಾಂಗದ ನಂತರ ಉತ್ಪಾದನಾ ಮುಖ್ಯಸ್ಥನು ಉತ್ಪಾದಿಸಲು ಏನು ಸಿದ್ಧತೆಗಳು ಬೇಕು ಅದನ್ನು ಮಾಡುವನು.


ಉತ್ಪಾದನಾಂಗಗಳು
ಪ್ರಾಥಮಿಕ ಅಥವಾ ಮೂಲ ಉತ್ಪಾದನಾಂಗಗಳು
ಮಾಧ್ಯಮಿಕ ಅಥವಾ ಅವತರಿಸಿದ ಉತ್ಪಾದನಾಂಗಗಳು
ಭೂಮಿ ಅಥವಾ ಪ್ರಕೃತಿ ಸಂಪತ್ತು ಕಾಡು, ಸಮುದ್ರ
ಮಾನಸಿಕ ಮತ್ತು ದೈಹಿಕ ಶ್ರಮ ಮತ್ತು ಕೌಶಲ್ಯ
ಮಾರುಕಟ್ಟೆ, ಕಚ್ಚಾ ಪದಾರ್ಥಗಳು ಮತ್ತು ಬಂಡವಾಳ
ಸಂಘಟನೆ ಮತ್ತು ಹಂಚಿಕೆ
ನಿಸರ್ಗದತ್ತ
ಮಾನವಿಕ
ಉತ್ಪಾದನೆಯ ಉತ್ಪಾದಿತ ಸಾಧನ
ಉತ್ಪಾದನೆಯ ಮುಖ್ಯಸ್ಥ



೪.೨.೩. ಉತ್ಪಾದನಾ ಮುಂಚಿನ ಯೋಜನೆಗಳು

ಉತ್ಪಾದನೆ ಮಾಡಲು ಉತ್ಪಾದನಾಂಗಗಳನ್ನು ಮೊದಲು ಪಡೆದುಕೊಳ್ಳುತ್ತಾರೆ. ಉತ್ಪಾದನೆ ಮಾಡುವ ಮುಂಚಿತವಾಗಿ ಅಲೆಮಾರಿಗಳು ಅಲ್ಲಿನ ಪ್ರದೇಶದ ಬಗ್ಗೆ ತಾವೆ ಸೂಕ್ಷ್ಮವಾಗಿ ಯೋಚನೆ ಮಾಡಿ, ಅಲ್ಲಿನ ಸಂಪತ್ತನ್ನು ಉಪಯೋಗಿಸಿಕೊಂಡು ಏನು? ಹೇಗೆ? ಯಾವ ಮಟ್ಟದವರೆಗೆ? ಯಾರಿಗಾಗಿ? ಎಂತಹ ವಸ್ತುಗಳನ್ನು ಉತ್ಪಾದಿಸಬಹುದು? ಎಂದು ಯೋಜನೆ ಹಾಕಿಕೊಳ್ಳುತ್ತಾರೆ. ಹೀಗಾದಾಗ ಮಾತ್ರ ವಸ್ತುಗಳನ್ನು ಉತ್ಪಾದನೆ ಮಾಡಲು ಸಾಧ್ಯ. ಅದನ್ನು ಬಿಟ್ಟು ಇಚ್ಛಾನುಸಾರಾವಾಗಿ ವಸ್ತುಗಳನ್ನು ಉತ್ಪಾದಿಸಿದರೆ ಉತ್ಪಾದಿಸಿದ ವಸ್ತುಗಳನ್ನು ಕೊಳ್ಳುವವರಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಕೊಳ್ಳುವವರ ಹಾಗೂ ವರ್ತಮಾನದ ಬೇಡಿಕೆಯನ್ನು ತಿಳಿದುಕೊಂಡು ಉತ್ಪಾದನೆಯಲ್ಲಿ ತೊಡಗಿಸಿಕೊಂಡರೆ ಉತ್ಪಾದನೆ ಸಾರ್ಥಕವಾಗುತ್ತದೆ. ಉತ್ಪಾದನಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೊದಲು ಈ ಕೆಳಗಿನಂತೆ ಸಿದ್ಧತೆ ಮಾಡಿಕೊಳ್ಳುತ್ತಾರೆ.

ಯಾವುದನ್ನು ಉತ್ಪಾದಿಸಬೇಕು : ಅಲೆಮಾರಿಗಳು ಉತ್ಪಾದನಾ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವ ಮೊದಲು ಯಾವ ವಸ್ತುವನ್ನು ಉತ್ಪಾದಿಸಬೇಕೆಂದು ಪೂರ್ವಪರ ನಿರ್ಧಾರ ಮಾಡುವರು. ಏಕೆಂದರೆ ಒಂದು ಅಲೆಮಾರಿ ಸಮುದಾಯಗಳ ಹತ್ತಿರ ಹಲವಾರು ಕೌಶಲ್ಯಗಳು ಅಡಗಿರುವು ದರಿಂದ ಯಾವ ಪ್ರದೇಶದಲ್ಲಿ ಹೋಗುತ್ತಾರೆ ಅಲ್ಲಿನ ಬೇಡಿಕೆಯ ವಸ್ತುಗಳನ್ನು ಮಾತ್ರ ಉತ್ಪಾದನೆ ಮಾಡಬಹುದು. ಎಂಬುದಾಗಿ ಚಿಂತನೆ ಮಾಡುವರು. ಉದಾ: ಒಬ್ಬ ಅಲೆಮಾರಿ ಸಮುದಾಯ ಕೌದಿ, ಚಾಪೆ, ಅಲಂಕಾರಿಕ, ಸಾಮಾನ್ಯ ವಸ್ತು, ಗೃಹೋಪಯೋಗಿ ಉಪಕರಣಗಳನ್ನು ಉತ್ಪಾದನೆ ಮಾಡುವುದರಿಂದ ಆಯಾ ಭೌಗೋಳಿಕ ಪರಿಸರ ಜನರ ಅಭಿರುಚಿ ತಿಳಿದುಕೊಂಡು ಉತ್ಪಾದಿಸುವರು ಜೊತೆಗೆ ಕಾಲಮಾನ ಗಳಿಗೆ ತಕ್ಕಂತೆ ವಸ್ತುಗಳನ್ನು ಉತ್ಪಾದಿಸುವುದು ಅನಿವಾರ್ಯವಾಗುತ್ತದೆ.

ಮತ್ತೊಂದು ಬಹುಮುಖ್ಯ ಕಾರಣವೆಂದರೆ ಕೆಲವೊಂದು ವಸ್ತುಗಳನ್ನು ಉತ್ಪಾದನೆ ಮಾಡಲು ಕಾಡಿನ ಜನ್ಯಗಳು ತುಂಬಾ ಅವಶ್ಯಕವಾಗಿದೆ. ಈಗ ನಾವು ಉತ್ಪಾದನೆ ಮಾಡಬೇಕೆಂಬ ವಸ್ತು ಉತ್ಪಾದನೆ ಮಾಡಲು ಅಗತ್ಯವಾದ ವಸ್ತುಗಳು ದೊರೆಯುವವು ಎಂದು ತಿಳಿಯಬೇಕಾಗುತ್ತದೆ. ದೊರೆಯುತ್ತವೆ ಎಂದಾಗ ಯಾವ ರೀತಿಯ ವಸ್ತುಗಳು ದೊರೆಯಬಲ್ಲವು? ಉಳಿದವನ್ನು ಹೇಗೆ ತರಬೇಕು? ಅದನ್ನು ತಿಳಿಯುವುದು ಅನಿವಾರ್ಯವಾಗಿದೆ. ಇಲ್ಲಿ ಏನು ಸಾಧ್ಯವೊ ಅದನ್ನು ಉತ್ಪಾದಿಸಲು ಅನುಕೂಲವಾಗಬಹುದು. ಹಾಗೆ ಕಾಡು ಇವರು ತಂಗಿರುವ ಪ್ರದೇಶದಿಂದ ಎಷ್ಟು ದೂರವಿದೆ, ಅಲ್ಲಿಂದ ಯಾವ ರೀತಿಯಾಗಿ ವಸ್ತುವನ್ನು ತರಲು ಸಾಧ್ಯ ಇತ್ಯಾದಿಗಳೆಲ್ಲವನ್ನು ಪೂರ್ವಯೋಜಿತವಾಗಿ ಯೋಜನೆ ಹಾಕಿಕೊಂಡು ಕುಟುಂಬದ ಮುಖ್ಯಸ್ಥ ಉತ್ಪಾದಿಸುವ ಹಂತದಲ್ಲಿ ಬರುತ್ತಾನೆ.

ಹೇಗೆ ಉತ್ಪಾದಿಸಬೇಕು : ಬಿಡಾರ ಹೂಡಿ ನಗರ ಅಥವಾ ಗ್ರಾಮೀಣ ಪ್ರದೇಶದ ಜನರ ಅಭಿರುಚಿ, ಆಸಕ್ತಿ ಯಾವ ವಸ್ತುವಿನೊಂದಿಗಿದೆ ಎಂಬುದನ್ನು ಆ ಸ್ಥಳದಲ್ಲಿ ಭೇಟಿ ನೀಡಿದಾಗ ಊಹೆ ಮಾಡಬಹುದು. ಮೊದಲೆ ಅಲೆಮಾರಿಗಳಾದರಿವರು ಯಾವ ಭಾಗದ ಜನತೆ ಯಾವ ರೀತಿಯ ವಸ್ತುಗಳಲ್ಲಿ ಅಪೇಕ್ಷೆಯನ್ನು ಹೊಂದಿದವರೆಂದು ಗೊತ್ತಿರುತ್ತದೆ. ಅದೆ ವಸ್ತುವನ್ನು ಉತ್ಪಾದಿಸಲು ಮುಂದಾಗುವರು.

ಒಂದು ವಸ್ತುವನ್ನು ಯಾವ ತಂತ್ರದಿಂದ ಉತ್ಪಾದಿಸಿದರೆ ಗ್ರಾಹಕರು ಇಷ್ಟಪಟ್ಟು ಕೊಳ್ಳುತ್ತಾರೆಂದು ತಿಳಿಯುತ್ತಾರೆ. ಉದಾ: ಸೇರು(ಲೀಟರ್)ನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದಲ್ಲಿ ದೊಡ್ಡದಾದ ಅದರಲ್ಲೂ ಗಟ್ಟಿಮುಟ್ಟಾದ ತಗಡಿನಿಂದ ತುಂಬಾ ಅಚ್ಚುಕಟ್ಟಾಗಿ ಉತ್ಪಾದಿಸಿಕೊಡಬೇಕಾಗುತ್ತದೆ. ಇದೆ ಸೇರನ್ನು ಮುಂದುವರಿದ ನಗರದಲ್ಲಿ ತೆಳುವಾದ, ಹೊಳುಪು, ತಗಡಿನಿಂದ ತಯಾರಿಸಬೇಕಾಗುತ್ತದೆ. ಆದ್ದರಿಂದ ಯಾವ ಭಾಗದ ಜನತೆ, ಯಾವ ರೀತಿಯ ತಂತ್ರಗಳೂ ಮುಖ್ಯವೆಂದು ಯೋಚಿಸಿ ವಿಚಾರಿಸಿ ಉತ್ಪಾದಿಸುವರು.

ಯಾರಿಗಾಗಿ ಉತ್ಪಾದಿಸಬೇಕು : ಒಂದು ವಸ್ತುವನ್ನು ಉತ್ಪಾದಿಸುವಾಗ ಯಾರಿಗಾಗಿ ಉತ್ಪಾದಿಸಬೇಕೆಂದು ಮೊದಲೆ ನಿರ್ಧಾರ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ಏಕೆಂದರೆ ಒಂದು ಪ್ರದೇಶದಲ್ಲಿನ ಬೇರೆ ಬೇರೆ ಸಮುದಾಯಗಳ ಅಭಿರುಚಿ, ಅಪೇಕ್ಷೆ ಬೇರೆ ಬೇರೆಯಾಗಿರುವುದರಿಂದ ಯಾರಿಗಾಗಿ, ಎಂತಹ ವಸ್ತುಗಳನ್ನು ಉತ್ಪಾದಿಸಬೇಕೆಂಬುದನ್ನು ತಿಳಿಯುತ್ತಾರೆ. ಉದಾ: ಕೆಳ ಸಮುದಾಯಗಳು ಹೆಚ್ಚಾಗಿ ಬುಟ್ಟಿಯನ್ನು ಕಡಿಮೆ ಬೆಲೆಯಲ್ಲಿ ಅಪೇಕ್ಷೆ ಪಡುವರು. ಹಾಗೆ ಜರಡಿ, ಕುಡುಗೋಲು, ಒಡಲಿ, ಈಳಿಗೆ, ಮಸೆಯುವ ಪ್ಲೇಟು, ಸೌಟು, ಕೈಬಟ್ಟಲು ಇತರೆ ವಸ್ತುಗಳನ್ನು ಕೆಳ ಮತ್ತು ಮಧ್ಯಮ ವರ್ಗದ ಸಮುದಾಯಗಳು ಇಷ್ಟಪಡುವರು. ಚಾಪೆ, ಕೌದಿ ಇತ್ಯಾದಿಗಳು ಇವರಿಗಾಗಿ ಹೇಳಿ ಮಾಡಿಸಿದ ವಸ್ತುಗಳಾಗಿವೆ. ಈ ರೀತಿಯ ವಸ್ತುಗಳನ್ನು ಮುಂದುವರಿದ ಸಮುದಾಯಗಳಾದ ಶ್ರೀಮಂತ ವರ್ಗವು ಮಸೆಯುವ ಪ್ಲೇಟು, ಚೌಟು, ಈಳಿಗೆ, ಕೈ ಬಟ್ಟಲು ಮುಂತಾದವುಗಳನ್ನು ಅಲ್ಯೂಮಿನಿಯಂ ಇಲ್ಲವೆ ಸ್ಟೀಲ್‌ನಿಂದ ಉತ್ಕೃಷ್ಟವಾಗಿ ತಯಾರಿಸಲ್ಪಟ್ಟಿರುವ ಪರಿಕರಗಳು ಇತ್ಯಾದಿಗಳನ್ನು ಮಳಿಗೆಗಳಿಂದ ಕೊಂಡು ತರುವರು.

ಚಾಪೆ ಮತ್ತು ಕೌದಿಯನ್ನು ಕೊಳ್ಳುವುದೆ ಇಲ್ಲ. ಆದ್ದರಿಂದ ಸಮುದಾಯಗಳು ಅಪೇಕ್ಷೆ ಪಡಬಹುದಾದ ಅಲಂಕಾರಿಕ ಸಾಮಾನುಗಳಾದ ಹೂವಿನ ಹಾರ, ಪಕ್ಷಿ, ಪ್ರಾಣಿಗಳು ಇತ್ಯಾದಿಗಳನ್ನು ಉತ್ಪಾದಿಸ ಬೇಕಾಗುತ್ತದೆ. ವಸ್ತುಗಳನ್ನು ಇಂತಹ ಅಲೆಮಾರಿಗಳಿಂದ ಕೊಂಡರೆ ಘನತೆಗೆ ಕುಂದು ಬರುತ್ತದೆಂಬ ಕಾರಣಕ್ಕಾಗಿ ಅಲೆಮಾರಿಗಳು ಯಾರಿಗಾಗಿ ವಸ್ತುಗಳನ್ನು ಉತ್ಪಾದಿಸಬೇಕೆಂದು ಕೊಳ್ಳುವುದರಲ್ಲಿ ತಪ್ಪಿಲ್ಲ.

ಯಾವ ಮಟ್ಟದವರಿಗೆ ಉತ್ಪಾದಿಸಬೇಕು : ಒಂದು ಪ್ರದೇಶದಲ್ಲಿ ತಾತ್ಕಾಲಿಕವಾಗಿ ನೆಲೆನಿಂತ ಅಲೆಮಾರಿ ಸಮುದಾಯವು. ಎಲ್ಲಿಯವರೆಗೂ ಈ ಪ್ರದೇಶದಲ್ಲಿ ಇರಲು ಸಾಧ್ಯವೆಂದು ಗ್ರಹಿಸಿಕೊಂಡು ಯಾವ ಮಟ್ಟದವರೆಗೂ ಉತ್ಪಾದಿಸಬೇಕೆಂದು ತಿಳಿದುಕೊಂಡು ವಸ್ತುಗಳನ್ನು ಉತ್ಪಾದಿಸುವರು. ಈ ಪ್ರದೇಶದಲ್ಲಿ ಇಷ್ಟು ದಿವಸಗಳ ಕಾಲ ಇಂತಹ ವಸ್ತುಗಳನ್ನು ಕೊಳ್ಳಬಲ್ಲರೆಂದು ತಿಳಿದುಕೊಂಡು ವಸ್ತುವನ್ನು ಉತ್ಪಾದಿಸುವರು. ಯಾವಾಗ ಆ ಸ್ಥಳದಲ್ಲಿ ಆ ವಸ್ತುವಿಗೆ ಬೇಡಿಕೆ ಕಡಿಮೆಯಾಗುತ್ತದೆಯೊ ಮುಂದಿನ ಪ್ರದೇಶದಲ್ಲಿ ಹೋಗಿ ಅಲ್ಲಿ ಆ ವಸ್ತುವನ್ನು ಉತ್ಪಾದಿಸುವರು.


ಸಾಧ್ಯವಾದಷ್ಟು ಇವರು ಆಯಾ ಪ್ರದೇಶದಲ್ಲಿ ಕೊಳ್ಳಬಹುದಾದ ವಸ್ತುಗಳನ್ನು ಮಾತ್ರ ಉತ್ಪಾದಿಸುವರು. ಅಗತ್ಯಕ್ಕಿಂತ ಹೆಚ್ಚು ವಸ್ತುಗಳನ್ನು ಉತ್ಪಾದಿಸುವುದಿಲ್ಲ. ಕಾರಣ ಆರ್ಥಿಕ ಶಕ್ತಿ

ಸಂಪನ್ಮೂಲಗಳ ಸೌಲಭ್ಯ ಲಭ್ಯವಿಲ್ಲದಿರುವುದು. ಆಕಸ್ಮಿಕವಾಗಿ ಲಭ್ಯವಿದ್ದರು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಿದ ವಸ್ತುಗಳನ್ನು ರಕ್ಷಣೆ, ಸಂಗ್ರಹಿಸುವ ಸ್ಥಳದ ಕೊರತೆ ಹಾಗೂ ವಲಸೆಯ ಸಮಯದಲ್ಲಿ ಸಾಗಿಸಲು ಕಷ್ಟವಾಗುತ್ತದೆ. ಇದರಿಂದ ಅವರು ಯಾವ ಮಟ್ಟದಲ್ಲಿ ಉತ್ಪಾದಿಸಬೇಕೊ ಆ ಮಟ್ಟದಲ್ಲಿ ಮಾತ್ರ ಉತ್ಪಾದನೆ ಮಾಡುವರು.


೪.೨.೪. ಉತ್ಪಾದನಾ ಹಂತಗಳು

ಅಲೆಮಾರಿ ಸಮುದಾಯಗಳು ಒಂದು ವಸ್ತುವನ್ನು ಉತ್ಪಾದಿಸುವಾಗ ಅನೇಕ ವಿವಿಧ ರೀತಿಯ ವಸ್ತುಗಳ ಸಂಯೋಜನೆ ಮಾಡುತ್ತಾರೆ. ಸಂಯೋಜನೆ ಮಾಡಿದಾಗ ಮಾತ್ರ ಒಂದು ವಸ್ತು ಉತ್ಪಾದನೆಯಾಗಲು ಸಾಧ್ಯವಿದೆ.

ವಸ್ತುಗಳ ಪೂರೈಕೆ



ಈ ಮೇಲಿನ ಮೂರು ಸದಸ್ಯರು ತಮಗೆ ನಿಯೋಜಿತವಾದ ಉತ್ಪಾದನಾ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಉದಾ: ಕಲಾಯಿ ವಸ್ತುಗಳ ಉತ್ಪಾದನೆಯಲ್ಲಿ ಪುರುಷನು ಅಲ್ಯೂಮಿನಿಯಂ ಕರಗಿಸುತ್ತಿದ್ದರೆ, ಸ್ತ್ರೀಯು ಅಚ್ಚುಪಡಿ ಸಿದ್ಧತೆಯಲ್ಲಿರುತ್ತಾಳೆ. ಮಕ್ಕಳು ರಾಟೆ ತಿರುಗಿಸುತ್ತಾರೆ: ಕೌದಿಗಾಗಿ ಗಂಡಸರು ಸೀರೆಯನ್ನು ಪಟ್ಟೆಯಾಗಿ ಕತ್ತರಿಸಿ ಕೊಟ್ಟರೆ, ಸ್ತ್ರೀಯು ಕತ್ತರಿಸಿದ ಪಟ್ಟಿಗಳನ್ನು ದಾರದಿಂದ ಹೊಲಿಯುತ್ತಾಳೆ: ಹಗ್ಗವನ್ನು ತಯಾರಿಸಲು ಸ್ತ್ರೀಯು ದಾರದ ಎಳೆಗಳನ್ನು ಕಿತ್ತುಕೊಟ್ಟರೆ, ಪುರುಷನು ಒಂದರ ಮೇಲೊಂದರಂತೆ ಒಸೆಯುತ್ತಾ ಸೇರಿಸುತ್ತಾನೆ ಹಾಗೂ ಹಗ್ಗವನ್ನಾಗಿಸುತ್ತಾನೆ. ಮಕ್ಕಳು ಹಗ್ಗವನ್ನು ಉದ್ದದಲ್ಲಿ ಗಂಟು ಬೀಳದಂತೆ, ತಡೆಯಲು ಹಿಂದಕ್ಕೆ ಜಗ್ಗಿಕೊಂಡು ನಿಂತಿರುತ್ತಾರೆ. ಹೀಗೆ ವಿವಿಧ ಬಗೆಯ ಕೆಲಸಗಳಲ್ಲಿ ತಮ್ಮ ಶ್ರಮ ಮತ್ತು ಕೌಶಲ್ಯಗಳಿಗೆ ತಕ್ಕಂತೆ ಉತ್ಪಾದನೆಯಲ್ಲಿ ತೊಡುಗವರು.



ಉತ್ಪಾದಿಸಿದ ವಸ್ತುಗಳನ್ನು ಒಣಗಿಸುವಿಕೆ

↓

ಕೂಡಿಡುವುದು

↓

ರಕ್ಷಿಸುವುದು

↓

ರಕ್ಷಿಸಿದ ವಸ್ತುಗಳನ್ನು ಮಾರುಕಟ್ಟೆಗೆ ತಲುಪಿಸುವಿಕೆ

↓

ಮಾರುಕಟ್ಟೆಯಿಂದ ಗ್ರಾಹಕರಿಗೆ ವಿತರಿಸುವಿಕೆ

ಉತ್ಪಾದಕರು ಉತ್ಪಾದನೆಯಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಸ್ತುಗಳನ್ನು ಉತ್ಪಾದಿಸುವರು. ಅವು ಯಾವುದೆಂದರೆ

ವಸ್ತು

↓

ವಸ್ತುವಿನ ಪರಿಭಾವನೆ

↓

ವಸ್ತುಗಳ ಮಿಶ್ರಣ ತಂತ್ರಗಳು

↓

ವಸ್ತುಗಳ ಜೀವಿತ ಕಾಲಚಕ್ರ

↓

ವಸ್ತುಗಳ ವೈವಿಧ್ಯತೆ

↓

ವಸ್ತುವಿನ ಸ್ಥಾನ ನಿರ್ಧರಿಸುವಿಕೆ

↓

ವಸ್ತುವಿನ ಯೋಜನೆ ಮತ್ತು ಅಭಿವೃದ್ಧಿ ತಂತ್ರ

↓

ಹೊಸ ವಸ್ತುವಿನ ಯೋಜನಾ ಪ್ರಕ್ರಿಯೆ

↓

ಸಂವೇಷ್ಟಿಸುವಿಕೆ ಮತ್ತು ಮುದ್ರೆ ಹಾಕುವಿಕೆ

ಈ ಅಂಶಗಳಲ್ಲಿ ಎಲ್ಲವನ್ನು ಅಲೆಮಾರಿಗಳು ಪಾಲಿಸಲಾರರು. ಏಕೆಂದರೆ ಯಾವುದೆ ಸ್ವಂತ ನೆಲೆ ಇಲ್ಲದೆ, ಬಿಡಾರದಲ್ಲಿ ವಸ್ತುಗಳನ್ನು ತಯಾರಿಸುವುದುಂಟು. ಮೇಲಿನ ಅಂಶಗಳಲ್ಲಿ ಮುಖ್ಯವಾದ ಸಮಸ್ಯೆವೆಂದರೆ ಮುದ್ರೆ ಹಾಕುವಿಕೆ. ಅಲೆಮಾರಿಗಳಿಗೆ ಎಟುಕದ ವಿಚಾರವಾಗಿದೆ. ಒಂದು ಕೌದಿಗೆ, ಗೊಂಬೆಗೆ, ಚಾಪೆ, ಹಗ್ಗ, ಕುಕ್ಕೆ, ಕೊಡಲಿ, ಕುಡುಗೋಲು, ಮೂರ್ತಿ, ವಿವಿಧ ಸಣ್ಣಪುಟ್ಟ ಅತ್ಯಾವಶಕ ವಸ್ತುಗಳಿಗೆ ಮುದ್ರೆ ಹಾಕುವುದು ಸಾಧ್ಯವಿಲ್ಲದ ಮಾತು. ತಾವು ಉತ್ಪಾದಿಸಿದ ವಸ್ತುಗಳನ್ನು ಮನವೊಲಿಸಿ ಮಾರಾಟ ಮಾಡವುದೆ, ಪ್ರಮುಖ ತಂತ್ರವಾಗಿದೆ. ಮುದ್ರೆ ಹಾಕುವ ಕೆಲಸಕ್ಕೆ ಹೋಗಲಾರರು. ಅಷ್ಟಕ್ಕೂ

ಇಂತಹ ವ್ಯವಸ್ಥೆ ಆದರೂ ಎಲ್ಲಿದೆ. ಇಂದು ಈ ಊರು ನಾಳೆ ಮತ್ತೊಂದೂರು ಎನ್ನುವ ಸಮುದಾಯ ಹೇಗೆ ತಾನೆ ಮುದ್ರೆ ಹಾಕಲು ಸಾಧ್ಯ. ಹೀಗಾಗಿ ಇವರ ನಿಯಮಗಳ ಜೊತೆಯಲ್ಲಿ ವಸ್ತುವಿನ ಗುಣಮಟ್ಟದಲ್ಲಿ ದೋಷವಿಲ್ಲದೆ, ಉತ್ಪಾದಿಸುತ್ತಾರೆ. ಉತ್ಪಾದನೆಯಲ್ಲಿ ಬೇಕಾದ ತಂತ್ರಗಳ ಶಿಕ್ಷಣ ಇವರಿಗಿಲ್ಲ. ಕೇವಲ ಸಂಪ್ರದಾಯಿಕ ತಂತ್ರಜ್ಞಾನ, ಅನುಭವಗಳಿಂದ ಉತ್ಪಾದಿಸುವರು. ಹೊಸ ಅನುಭವದಲ್ಲಿ ಸಮುದಾಯವು ವಸ್ತುವಿನ ವಿನ್ಯಾಸ, ಗುಣಮಟ್ಟ ಬದಲಾಯಿಸುವುದೆ ಹೊರತು, ಬೇರೆ ಯಾವುದೆ ರೀತಿಯ ತರಬೇತಿಯನ್ನು ಹೊಂದಿಲ್ಲ.

೪.೨.೫. ಅಲೆಮಾರಿಗಳ ಉತ್ಪಾದನೆಯ ಉತ್ಪಾದಿತ ವಸ್ತುಗಳು

ಮಾನವ ಸಮುದಾಯದಲ್ಲಿ ಬೇಕಾಗಬಹುದಾದ ಬಹುಪಯುಕ್ತವಾದ ವಸ್ತುಗಳ್ನು ಉತ್ಪಾದಿಸುವರು. ಆ ವಸ್ತುಗಳೂ ಮಾನವನ ಪ್ರಾಥಮಿಕ ಅವಶ್ಯಕತೆಗಳಿಂದ ಹಿಡಿದು ಆವನ ಐಷ್ಯಾರಾಮದ ಜೀವನದ ಅಂತ್ಯದವರೆಗೂ ಉಪಯುಕ್ತವಾಗಬಹುದಾದ ವಸ್ತುಗಳನ್ನು ಉತ್ಪಾದಿಸುವರು.

ವಸ್ತುಗಳು

- ಪ್ರಾಥಮಿಕ ಬಯಕೆ ಪೂರೈಸುವಲ್ಲಿ ನೆರವಾಗುವ ವಸ್ತುಗಳು
  - ಬುಟ್ಟಿ, ಕುಡುಗೋಲು, ಹಾರಿ ಕಂದೀಲು, ಈಳಿಗೆ, ಹಗ್ಗ, ಕುಕ್ಕೆ ಪಟುಗೋಣಿ, ಅಡಿಗೆ ಉಪಕರಣ ಚಾಕು, ಚೂರಿ, ಔಷಧಿ ಇತ್ಯಾದಿ
- ಮಾಧ್ಯಮಿಕ ಬಯಕೆ ಪೂರೈಸುವಲ್ಲಿ ನೆರವಾಗುವ ವಸ್ತುಗಳು
  - ಕೌದಿ, ಕಸಬರಿಗೆ, ಮಂಚ ತಡಿ, ಪಾಟು, ಮನೋರಂಜನಾ ಪರಿಕರ ಇತ್ಯಾದಿಗಳು
- ಸಂಪ್ರದಾಯ ಅಲಂಕಾರಿಕ ಬಯಕೆ ಪೂರೈಸುವ ವಸ್ತುಗಳು
  - ಆಭರಣಗಳು, ಅಲಂಕಾರ ಮತ್ತು ಸಂಪ್ರದಾಯದ ವಸ್ತುಗಳು, ಹಚ್ಚೆ, ಗೃಹ ಉಪಯೋಗಿ ವಸ್ತು ಇತ್ಯಾದಿ

ಪ್ರಾಥಮಿಕ ಬಯಕೆ ತೀರಿಸುವಲ್ಲಿ ಕೆಲವು ವಸ್ತುಗಳನ್ನು ಕಾಡಿನ ಸಂಪತ್ತು ಹಾಗೂ ಮಳಿಗೆಯಲ್ಲಿ ವಸ್ತುಗಳು ಕೊಂಡು ತಂದು ಉತ್ಪಾದಿಸುವರು. ವಸ್ತುಗಳನ್ನು ಅತಿ ಅವಶ್ಯಕವಾದ ಅವಶ್ಯಕತೆಗಳನ್ನು ಭರಿಸುವ ಅಥವಾ ಪೂರೈಸುವಲ್ಲಿ ನೆರವಾಗುವವು. ಉದಾಹರಣೆ ಒಂದು ಆಹಾರ ಪಡೆಯಲು ಅತಿ ಅವಶ್ಯಕವಾದ ಕೆಲವು ಉಪಕರಣಗಳೂ ಬೇಕಾಗಿದೆ. ಅವುಗಳನ್ನು ಬಳಸಿಕೊಂಡು ತನ್ನ ಅವಶ್ಯಕತೆಗಳನ್ನು ಪೂರೈಸಕೊಳ್ಳಬಹುದಾಗಿದೆ. ಆದ್ದರಿಂದ ಅಲೆಮಾರಿಗಳು ಯಾವಾಗ ಯಾವ ರೀತಿಯ ಅವಶ್ಯಕ ವಸ್ತುಗಳನ್ನು ಅಥವಾ ಪ್ರಾಥಮಿಕ ಬಯಕೆ ಪೂರೈಸುವಲ್ಲಿ ನೆರವಾಗಬಲ್ಲ ವಸ್ತುಗಳಾವುವು ಎಂಬುದನ್ನು ತಿಳಿದುಕೊಂಡು ಉತ್ಪಾದಿಸುವರು. ಉದಾ: ಕುಡುಗೋಲು, ಈಳಿಗೆ, ಕಂದಿಲು, ಚಾಕು, ಗೃಹೋಪಯೋಗಿ ವಸ್ತುಗಳು.

ಮಾನವನ ಬಯಕೆಗಳಿಗೆ ಕೊನೆ ಇಲ್ಲದಿರುವುದರಿಂದ ಒಂದು ಬಯಕೆಯನ್ನು ಪೂರೈಸಿಕೊಂಡಾಗ ಮತ್ತೊಂದು ಬಯಕೆ ಉದ್ಭವಿಸುತ್ತದೆ. ಹಿಂದೆ ಇಂತಹ ಬಯಕೆಗಳಿಗೆ ಅಷ್ಟೊಂದು ಬೇಡಿಕೆ ಇರಲಿಲ್ಲ.

ಕೇವಲ ಇತಿಮಿತಿ ಒಳಗೊಂಡಿತ್ತು. ನಾಗರಿಕತೆ ಬೆಳೆದಂತೆಲ್ಲಾ ಆವನ ಆಸಕ್ತಿ, ಅಭಿರುಚಿಗಳು ಕವಲೊಡೆದು, ಬಯಕೆಗಳು ವಿಸ್ತಾರಗೊಂಡವು. ಅವುಗಳನ್ನು ಪೂರೈಸಿಕೊಳ್ಳಲು ಬೇಕಾದ ವಸ್ತುಗಳಲ್ಲಿ ಕೆಲವನ್ನು ಉತ್ಪಾದಿಸುವರು. ಉದಾ: ಕೌದಿ, ಕಸಬರಿಗೆ, ಮಂಚ, ತಡಿ, ಮನೋರಂಜನಾ ಇತ್ಯಾದಿ ವಸ್ತುಗಳು ಮಾಧ್ಯಮಿಕ ಬಯಕೆಗಳನ್ನು ಪೂರೈಸುವಲ್ಲಿ ನೆರವಾಗುವವು.

ಕೆಲವು ವಸ್ತುಗಳು ಸಂಪ್ರದಾಯದ ಸಂಕೇತವಾಗಿ ಬಯಕೆಯನ್ನು ಪೂರೈಸುತ್ತದೆ. ಅವು ಮಾನವನ ಮನಸ್ಸಿನ ಮೇಲೆ ಪ್ರಭಾವ ಬೀರುವುದುಂಟು. ಅವುಗಳಲ್ಲಿ ಅಲಂಕಾರಗೊಳಿಸುವ ಜೊತೆಯಲ್ಲಿ ಮಾನಸಿಕ ನೆಮ್ಮದಿಯೂ ಕೊಡಬಲ್ಲದು. ಅದರಿಂದ ಅಲೆಮಾರಿಗಳು ಅಂತಹ ವಸ್ತುಗಳನ್ನು ಉತ್ಪಾದಿಸಲು ಮುಂದಾಗುವರು. ಅಲೆಮಾರಿಗಳು ಅವಲಂಭಿಸಿರುವ ಕರಕುಶಲ ವಸ್ತುಗಳು ಸಮುದಾಯದ ಜೀವಾಳ ವಾಗಿವೆ. ಇವರು ತಮ್ಮ ಕುಲಕಸುಬಿನ ಮೂಲಕ ತಮ್ಮ ತಾತ್ಕಾಲಿಕ ವಾಸಸ್ಥಾನದಲ್ಲಿ ಉತ್ಪಾದಿಸುವರು. ಕುಟುಂಬದ ಸದಸ್ಯರೆಲ್ಲರು ಕುಲಕಸುಬುಗಳನ್ನು ಮಾಡುವರು. ಇವರು ತಮ್ಮ ವೃತ್ತಿಯಿಂದ ವಸ್ತುಗಳನ್ನು ಉತ್ಪಾದಿಸುವಾಗ ಯಾವುದೆ ವಿದ್ಯುತ್, ಯಂತ್ರೋಪಕರಣಗಳನ್ನಾಗಲಿ ಬಳಸುವುದಿಲ್ಲ.

ಉತ್ಪಾದನೆಯಲ್ಲಿ ಬಳಸುವ ಸಲಕರಣೆಗಳು

ಹಡಗಲ್ಲು, ಸುತ್ತಿಗೆ, ಇಕ್ಕಳಿಕೆ, ಕತ್ತರಿ, ಆರಾ, ಕಂಬೇವು, ಚಿಮಣಿ, ಬಂಕನಳ, ಚರಕ, ಮೂಸೆ, ಚಾಲಾ, ಬ್ರಸ್, ಚೌಕಟ್ಟು, ಬಣ್ಣ, ನೀರಿನ ತಟ್ಟು, ಪಡಿಹಚ್ಚು, ಕುಡುಗೋಲು, ಕೊಡಲಿ, ಕಂದೀಲು, ರಾಟಿ, ದಬ್ಬಳ, ಸೂಜಿ ಇತ್ಯಾದಿಗಳನ್ನು ಉತ್ಪಾದನೆಯಲ್ಲಿ ಉಪಕರಣಗಳಾಗಿ ಉಪಯೋಗಿಸಿ ಕೊಳ್ಳುತ್ತಾರೆ.

೪.೨.೬. ತುಷ್ಟಿಗುಣ

"ಮಾನವರ ಬಯಕೆಗಳನ್ನು ತೃಪ್ತಿಪಡಿಸುವ ಗುಣವನ್ನು ತುಷ್ಟಿಗುಣ ಎಂದು ಕರೆಯಬಹುದು."[6] ಒಂದು ವಸ್ತು ಅಥವಾ ಸೇವೆ ಮಾನವರ ಬಯಕೆಯನ್ನು ತೃಪ್ತಿಪಡಿಸುವ ಅಂಶವನ್ನು ಒಳಗೊಂಡಿದ್ದರೆ ಅದನ್ನು ತುಷ್ಟಿಗುಣವೆನ್ನಬಹುದು. ತುಷ್ಟಿಗುಣವು ಎಲ್ಲ ಕಾಲದಲ್ಲಿ ಎಲ್ಲ ಜನರಿಗೂ ಏಕ ರೀತಿಯಲ್ಲಿ ಇರುವುದಿಲ್ಲ. ಅದು ವ್ಯಕ್ತಿಯಿಂದ ವ್ಯಕ್ತಿಗಳಿಗೆ ಬದಲಾಗುತ್ತದೆ. ಇಂತಹ ತುಷ್ಟಿಗುಣವು ಅಲೆಮಾರಿಗಳು ನೀಡುವ ಪ್ರದರ್ಶನದಲ್ಲಿದೆ, ಮನೋರಂಜನೆಯಲ್ಲಿದೆ, ಉತ್ಪಾದಿಸುವ ವಸ್ತುಗಳಲ್ಲಿದೆ. ಉದಾ: ಒಂದು ಪ್ರದೇಶದಲ್ಲಿ ಸರ್ಕಸ್‌ನ್ನು ಪ್ರದರ್ಶನ ಅಥವಾ ಹಗಲುವೇಷದ ಅಭಿನಯ ನೀಡಿದಾಗ ಅದನ್ನು ನೋಡಿದ ಪ್ರೇಕ್ಷಕರು ಸಂತೋಷರಾಗುತ್ತಾರೆ, ಖುಷಿಪಟ್ಟುಕೊಳ್ಳುತ್ತಾರೆ, ಕಲೆಯಿಂದ ಜನರಿಗೆ ನೀಡುವ ತುಷ್ಟಿಗುಣ ಎಂದು ಹೇಳಬಹುದು. ಇಲ್ಲಿ ಹಣ ಕೊಡುವುದು ಬಿಡುವುದು ಎರಡನೆಯ ವಿಷಯವಾದರೂ ತುಷ್ಟಿಗುಣ ಮಾತ್ರ ಪ್ರೇಕ್ಷಕರಿಗೆ ದೊರೆಯುತ್ತದೆ.

ಜೊತೆಯಲ್ಲಿ ಅಲೆಮಾರಿಗಳು ಕೂಡ ಇದರಿಂದ ತುಷ್ಟಿಗುಣ ಪಡೆದು ಸಮುದಾಯವನ್ನು ತೃಪ್ತಿಪಡಿಸ ಬಹುದಾಗಿದೆ. ಆದರೆ ಇದು ಯಾವಾಗಲು ಒಂದೆ ರೀತಿಯಲ್ಲಿರುತ್ತದೆ ಎಂದು ಹೇಳಲು ಆಗದು. ಜನತೆಗೆ ಮಾತ್ರ ತುಷ್ಟಿಗುಣ ದೊರೆಯುತ್ತದೆ. ಅಲೆಮಾರಿಗಳಿಗೆ ಸಿಗುವುದು ಅಪೇಕ್ಷೇಣೀಯ ಎಂದು

ಹೇಳಬಹುದು. ಅಲೆಮಾರಿಗಳು ತಯಾರಿಸುವ ವಸ್ತುವಿನಿಂದಲೂ ತುಷ್ಟಿಗುಣ ಪಡೆಯಬಹುದಾಗಿದೆ. ಒಂದು ವಸ್ತುವಿನ ರೂಪ ಬದಲಾಯಿಸಿ ಸಮಯಗಳಿಗೆ ತಕ್ಕಂತೆ ತುಷ್ಟಿಗುಣವನ್ನು ಅನುಭವಿಸಲು ಉತ್ಪಾದನೆ ಕೈಗೊಳ್ಳುವರು.

ಒಂದು ವಸ್ತುವಿನ ಉಪಭೋಗ ಎಂದು ಅಪೇಕ್ಷಿಸಿದಾಗ ವಸ್ತುವನ್ನು ಉತ್ಪಾದಿಸಲು ಸಾಧ್ಯ. ಆದ್ದರಿಂದ ಮೊದಲು ಉಪಭೋಗ ನಂತರ ಉತ್ಪಾದನೆಯಾಗುತ್ತದೆ. ಉತ್ಪಾದನೆಯು ಉಪಭೋಗದಲ್ಲಿ ಅಧೀನವಾಗಿರುತ್ತದೆ. ಹೀಗೆ ಉಪಭೋಗವು ಗುರಿಯಾದರೆ ಉತ್ಪಾದನೆಯು ಸಾಧನವಾಗುತ್ತದೆ. ಉಪಭೋಗದಲ್ಲಿ ನಮ್ಮ ಬಯಕೆಗಳನ್ನು ನೇರವಾಗಿ ತೃಪ್ತಿಪಡಿಸಿಕೊಳ್ಳುತ್ತೇವೆ. ಆದರೆ ಉತ್ಪಾದನೆಯಲ್ಲಿ ನಮ್ಮ ಬಯಕೆಗಳನ್ನು ನಿಸರ್ಗದಲ್ಲಿ ದೊರೆಯಬಹುದಾದ ವಸ್ತುಗಳನ್ನು ತೆಗೆದುಕೊಂಡು ತುಷ್ಟಿಗುಣವನ್ನು ಉತ್ಪಾದಿಸಲಾಗುತ್ತದೆ. ಯಾವುದೆ ಪದಾರ್ಥ ಆಗಿರಲಿ ಅದು ಪ್ರಾಕೃತಿಕ ಶಕ್ತಿಯಿಂದ ಬಂದಿದೆ. ಮಾನವರು ನಿರ್ಮಾಣ ಮಾಡಲಾರರು. ಉದಾ: ಕಟ್ಟಿಗೆ, ಮಣ್ಣು, ಕಲ್ಲು, ಮರಗಳು, ಇವು ಪ್ರಕೃತಿದತ್ತವಾಗಿ ಬಂದಿವೆ. ವಸ್ತುಗಳನ್ನು ತೆಗೆದುಕೊಂಡು, ತನಗೆ ಬೇಕಾದ ರೀತಿಯಲ್ಲಿ ತುಷ್ಟಿಗುಣ ಪಡೆಯಬಹುದಾಗಿದೆ.

ಮೂರು ಹಂತದಲ್ಲಿ ತುಷ್ಟಿಗುಣ ವರ್ಗೀಕರಿಸಬಹುದು.

೧. ಆಕಾರ ತುಷ್ಟಿಗುಣ

೨. ಸ್ಥಾನ ತುಷ್ಟಿಗುಣ

೩. ಸಮಯ ತುಷ್ಟಿಗುಣ

೧. ಆಕಾರ ತುಷ್ಟಿಗುಣ

ಕಾಡಿನಲ್ಲಿ ದೊರೆಯಬಹುದಾದ ಪದಾರ್ಥವನ್ನು ಅಥವಾ ವಸ್ತುವನ್ನು ಅದರ ಮೂಲದಲ್ಲಿ ಇದ್ದರು, ಅದರ ಆಕಾರ ಅಥವಾ ತೂಕವನ್ನು ಬದಲಿಸಿ, ಉತ್ಪಾದನೆಯ ತಾಂತ್ರಿಕತೆ ಹಾಗೂ ಕೌಶಲ್ಯದಿಂದ ಅದರ ಮೂಲರೂಪವನ್ನು ಬದಲಾಯಿಸಿ, ತುಷ್ಟಿಗುಣ ಬರುವಂತೆ ಮಾಡುವರು.

೧. ಬಳ್ಳಿಗಳಿಂದ - ಸಿಂಬೆ ಮಾಡುವುದು.

೨. ಈಚಲಗರಿಯಿಂದ - ಪೊರಕೆ, ತಟ್ಟಿ, ಬುಟ್ಟಿ.

೩. ಬಿದಿರಿನಿಂದ - ಬುಟ್ಟಿ, ಅಲಂಕೃತ ವಸ್ತು ಉತ್ಪಾದಿಸುವುದು.

೪. ಅಲ್ಯೂಮಿನಿಯಂ - ಕಾಯಿಸಿ ದಿನನಿತ್ಯದ ಬಳಕೆ ವಸ್ತು ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು.

೫. ರಗಸ ಬಟ್ಟೆಯಿಂದ - ನಾರು, ಹಗ್ಗ, ಕಣ್ಣಿ ತಯಾರಿಸುವುದು.

೬. ಹಳೆ ಸೀರೆಯಿಂದ - ಕೌದಿ ಮಾಡುವುದು.

೨. ಸ್ಥಾನ ತುಷ್ಟಿಗುಣ

ಉಪಯುಕ್ತವಾಗಬಲ್ಲ ವಸ್ತುವನ್ನು ಒಂದು ಸ್ಥಾನದಿಂದ ಮತ್ತೊಂದು ಸ್ಥಾನದಲ್ಲಿ ಬದಲಾಯಿಸಿದರೆ, ಆ ವಸ್ತುವಿನ ತುಷ್ಟಿಗುಣ ದೊರೆಯುತ್ತದೆ. ಉದಾ: ಅರಣ್ಯದಲ್ಲಿ ಕಟ್ಟಿಗೆ, ಜೇನು, ಹಣ್ಣುಗಳು,

ಪ್ರಾಣಿ-ಪಕ್ಷಿಗಳು, ಔಷಧಿಗಾಗಿ ಗಿಡಮೂಲಿಕೆ ಇತ್ಯಾದಿಗಳು ತರುವುದು. ಇವುಗಳಿಂದ ತುಷ್ಟಿಗುಣವನ್ನು ಪಡೆಯಬಹುದಾಗಿದೆ.

೩. ಸಮಯ ತುಷ್ಟಿಗುಣ

ಒಂದು ವಸ್ತುವನ್ನು ಮುಂದಿನ ಭವಿಷ್ಯದಲ್ಲಿ ಸಂಗ್ರಹಣೆ ಮಾಡಿದರೆ ವಸ್ತುವಿನ ತುಷ್ಟಿಗುಣ ಪಡೆಯಬಹುದು. ಅರಣ್ಯದಲ್ಲಿ ಸಿಗುವ ಯಾವುದೆ ಕಾಯಿಗಳು ತಂದು, ನಾಲ್ಕಾರು ದಿನಗಳ ನಂತರ ನೋಡಿದರೆ ಹಣ್ಣಾಗಿರುತ್ತದೆ. ಇದರಿಂದ ತುಷ್ಟಿಗುಣ ಪಡೆಯಬಹುದು. ಬಟ್ಟೆಗಳು ಜೋಪಾನವಾಗಿಟ್ಟರೆ ಮತ್ತೆ ನಾಳಿನ ಉಪಯೋಗದಲ್ಲಿ ಬರುವುದು. ಹಳೆ ಸೀರೆ ಕೌದಿಯಾಗಿ ಉಪಯೋಗಿಸಬಹುದು. ಮಾನವನು ತನ್ನ ಕೌಶಲ್ಯದಿಂದಲೆ ಮಾನಸಿಕ ಶಕ್ತಿ ಹಾಗೂ ದೈಹಿಕ ಶಕ್ತಿ ಎರಡನ್ನು ವಿನಿಯೋಗಿಸಿ, ಅರಣ್ಯದಲ್ಲಿ ಸಿಗುವ ವಸ್ತುಗಳಿಗೆ ಬೇರೊಂದು ರೂಪ ನೀಡಿ ತುಷ್ಟಿಗುಣ ಬರುವಂತೆ ನಿರ್ಮಿಸುವುದನ್ನು ಉತ್ಪಾದನೆ ಎನ್ನುತ್ತೇವೆ.

೪.೨.೭. ಅಲೆಮಾರಿಗಳ ಉತ್ಪಾದನಾ ಸಮಸ್ಯೆಗಳು

ಅಲೆಮಾರಿಗಳು ತಮ್ಮ ಕುಲ ಕಸುಬುಗಳಿಂದ ವಸ್ತುಗಳನ್ನು ಉತ್ಪಾದಿಸುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಈ ಸಮಸ್ಯೆಗಳಿಗೆ ಇಂದಿಗೂ ಸೂಕ್ತವಾದ ಪರಿಹಾರ ಕಾಣದೆ ತಮ್ಮ ಉತ್ಪಾದನೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಆದರೂ ತಮ್ಮ ಕುಲ ಕಸುಬುಗಳನ್ನು ದೃಢವಾದ ನಂಬಿಕೆ ಮೇಲೆ ಉತ್ಪಾದಿಸಲು ಕಾರಣವಾಗಿದೆ. ಇತರೆ ಉತ್ಪಾದಕರ ಸಮಸ್ಯೆಗಳಿಗಿಂತ ಇವರ ಸಮಸ್ಯೆಗಳು ಹೆಚ್ಚಾಗಿ ಕಂಡುಬರುವುದುಂಟು.

೪.೨.೭.೧ ಕಚ್ಚಾಪದಾರ್ಥದ ಸಮಸ್ಯೆ

ಉತ್ಪಾದನೆ ನಿಯಂತ್ರಿಸುವ ಅಂಶಗಳಲ್ಲಿ ಕಚ್ಚಾಪದಾರ್ಥ ಪ್ರಮುಖವಾದ ಅಂಶವಾಗಿದೆ. ಉತ್ಪಾದಿತ ವಸ್ತುವಿನ ಗುಣಮಟ್ಟ ಅದರ ಉತ್ಪಾದನೆಯಲ್ಲಿ ಬಳಸಿದ ಕಚ್ಚಾಪದಾರ್ಥದ ಗುಣಮಟ್ಟ ಅವಲಂಬಿಸಿರುತ್ತದೆ. ಅಲೆಮಾರಿಗಳು ಕುಲ ಕಸುಬುಗಳಲ್ಲಿ ಬಳಸುವ ಕಚ್ಚಾಪದಾರ್ಥಗಳು ಹುಲ್ಲು, ಗರಿ, ಕೊಂಬೆ, ರಂಬೆ, ಎಲೆ. ಕಟ್ಟಿಗೆ, ಬಳ್ಳಿ, ಅಂಟು, ಗಿಡಮೂಲಿಕೆ, ಗುಲಗಂಜಿ ಬೀಜ, ಕಲ್ಲು, ಒಣಗಿದ ಸಸ್ಯ ಕಾಯಿಗಳು, ಈಚಲು, ದಾಗಡಿಬಳ್ಳಿ, ರಗಸಬಟ್ಟೆ ಇತ್ಯಾದಿಗಳೆಲ್ಲವೂ ಅತಿ ಮುಖ್ಯವಾಗಿರುತ್ತದೆ.

ಇಂತಹ ಕಚ್ಚಾ ಪದಾರ್ಥಗಳು ಅರಣ್ಯದಲ್ಲಿ ನೈಸರ್ಗಿಕವಾಗಿ ಬೆಳೆದಿರುತ್ತದೆ. ಮಳೆಗಾಲದಲ್ಲಿ ರಮ್ಯವಾಗಿ ಬೆಳೆದಿರುತ್ತವೆ. ಬೇಸಿಗೆ ಬಂದಂತೆ ಒಣಗುತ್ತದೆ. ಅದು ಪ್ರಕೃತಿ ನಿಯಮ ಹೌದು. ಕೆಲವು ಬಾರಿ ಪ್ರಕೃತಿ ವಿಕೋಪದಲ್ಲಿ ಹಾಳಾಗುವುದುಂಟು. ಹೈದ್ರಾಬಾದ್ ಕರ್ನಾಟಕದಲ್ಲಿ ಕಾಡು ಇರದಿರುವುದರಿಂದ ಕಚ್ಚಾಪದಾರ್ಥ ದೊರೆಯುವುದು ಕಠಿಣವಾಗಿದೆ. ಆದರೂ ಕಡಿಮೆ ಕಾಡುಗಳಿಂದ ಕಚ್ಚಾವಸ್ತು ಪಡೆಯುವರು. ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ತಾಲ್ಲೂಕಿನ ಬಣವಿಕಲ್ಲು, ಹೊಸಪೇಟೆ ತಾಲ್ಲೂಕಿನ ಚಿಲಕನಹಟ್ಟಿ, ಬೀದರ್, ಗುಲ್ಬರ್ಗ, ರಾಯಚೂರು ಹಾಗೂ ಕೊಪ್ಪಳ ಭಾಗದಲ್ಲಿ ಕಾಡುಗಳು ಕಂಡು ಬರುತ್ತವೆ. ಆದರೆ ಹೇರಳವಾಗಿ ಕಂಡುಬರುವುದಿಲ್ಲ. ಸಿಗುವಷ್ಟು ಕಚ್ಚಾಪದಾರ್ಥಗಳನ್ನು ತರುವರು.

೪.೨.೭.೨. ಗುಣಮಟ್ಟದಲ್ಲಿ ವ್ಯತ್ಯಾಸ

ಉತ್ಪಾದನಾ ಸಿದ್ಧಾಂತದ ಪ್ರಕಾರ ಉತ್ಪಾದಿತ ವಸ್ತುವಿನ ಗುಣಮಟ್ಟವು ಅದರ ಉತ್ಪಾದನೆಯಲ್ಲಿ ಬಳಸಿದ ಕಚ್ಚಾವಸ್ತುವಿನ ಗುಣಮಟ್ಟ ಅವಲಂಭಿಸಿರುತ್ತದೆ. ಪ್ರತಿ ಉತ್ಪಾದಕನೂ ಉತ್ಪಾದನಾ ವಸ್ತುವನ್ನು ಕಚ್ಚಾವಸ್ತುವಿನ ಅಳತೆ ಮಾಡುವನು. ಮಳೆಗಾಲದಲ್ಲಿ ಸೊಗಸಾದ ಕಚ್ಚಾಪದಾರ್ಥ ದೊರೆಯುವುದರಿಂದ ಅದರ ಗುಣಮಟ್ಟ ಚೆನ್ನಾಗಿರುತ್ತದೆ. ಉತ್ಪಾದನಾ ವಸ್ತುವು ಗುಣಮಟ್ಟದ್ದಾಗಿರುತ್ತದೆ. ಆದರೆ ಬೇಸಿಗೆಯಂತಹ ಸಮಯದಲ್ಲಿ ಕಚ್ಚಾವಸ್ತು ಕಳಪೆ ಮಟ್ಟದ್ದಾಗಿರುವುದರಿಂದ ವಸ್ತುವಿನ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಉತ್ಪಾದನಾ ಮಟ್ಟವು ಕಡಿಮೆಯಾಗುತ್ತದೆ.

೪.೨.೭.೩. ಸಾಗಾಟದ ಅಧಿಕ ವೆಚ್ಚ

ಹೈದ್ರಾಬಾದ್ ಕರ್ನಾಟಕದಲ್ಲಿ ಕಚ್ಚಾಪದಾರ್ಥವು ಕಡಿಮೆ ಪ್ರಮಾಣದಲ್ಲಿ ಸಿಕ್ಕಿದರೂ, ಕೂಡ ಹೆಚ್ಚು ಮಲೆನಾಡು ಹಾಗೂ ಅಂತರ ರಾಜ್ಯಗಳಿಂದ ಕಚ್ಚಾವಸ್ತುಗಳು ತರಬೇಕಾಗುವುದು ಅನಿವಾರ್ಯವಾಗಿದೆ. ಆದರೆ ಹೊರಗಡೆಯಿಂದ ಕಚ್ಚಾಪದಾರ್ಥಗಳನ್ನು ತರಲು ಸಾರಿಗೆ ವೆಚ್ಚವು ಬೇಕಾಗುವುದು. ಇವರು ಒಂದ್ಹೊತ್ತಿನ ಊಟಕ್ಕಾಗಿ, ಕಚ್ಚಾಪದಾರ್ಥಗಳನ್ನು ದೂರದ ಪ್ರದೇಶದಿಂದ ಹೇಗೆ ತರಲು ಸಾಧ್ಯ. ಆದರೂ ಅನಿವಾರ್ಯವಾಗಿ ಸಾಲಮಾಡಿ ಆಂಧ್ರ ಮತ್ತು ಮಹಾರಾಷ್ಟ್ರದಿಂದ ಕೆಲವು ಕಚ್ಚಾಪದಾರ್ಥಗಳನು ತರುವರು. ಮಲೆನಾಡು ಪ್ರದೇಶದಿಂದ ಲಾರಿ, ರೈಲಿನಲ್ಲಿ ತರುವರು. ಒಮ್ಮೊಮ್ಮೆ ಅಂತಹ ಪ್ರದೇಶದಲ್ಲಿ ಹೋಗಿ ವಸ್ತುಗಳು ಉತ್ಪಾದಿಸಿದ ಸ್ಥಳಿಯ ನೆಲೆಯಲ್ಲಿ ಮಾರಾಟ ಮಾಡುವರು. ಆದರೂ ಅಲೆದಾಡುವ ಅಲೆಮಾರಿಗಳಿಗೆ ನಿಲುಕದ ಮಾತಾಗಿದೆ. ಇದ್ದಷ್ಟು ದೊರೆಯುವ ಪದಾರ್ಥಗಳನ್ನೆ ಉಪಯೋಗಿಸಿಕೊಂಡು ವಸ್ತುಗಳನ್ನು ಉತ್ಪಾದಿಸುವರು.

೪.೨.೭.೪. ಹಣಕಾಸು ಸಮಸ್ಯೆ

ಒಂದು ವಸ್ತುವಿನ ಉತ್ಪಾದನೆಯಲ್ಲಿ ಕಚ್ಚಾಪದಾರ್ಥದ ನಂತರ ಬಹುಮುಖ್ಯವಾಗಿ ಬೇಕಾಗುವ ಮೂಲಧಾತುವೆಂದರೆ ಹಣ. ಅವಶ್ಯವಾದಷ್ಟು ಹಣವನ್ನು ಸೂಕ್ತ ಸಮಯದಲ್ಲಿ ದೊರಕಿಸಿಕೊಂಡು ಬೇಕಾದ ವಸ್ತು ಕೊಳ್ಳಬೇಕಾಗುವುದು. ಅಲೆಮಾರಿಗಳ ಹತ್ತಿರ ಹಣ ಇರಲಾರದು ಅಲ್ಪ-ಸ್ವಲ್ಪ ಪ್ರಮಾಣ ದಲ್ಲಿ ಇದ್ದರು, ಅದು ಅವರ ದೈನಂದಿನ ಚಟುವಟಿಕೆಗಳಿಗೆ ಬೇಕಾಗುತ್ತದೆ. ಹೀಗಾಗಿ ಹಣವನ್ನು ಸಾಲದ ರೂಪದಲ್ಲಿ ಕೇಳಿದರು, ನೀಡಲು ಮುಂದೆ ಬರುವರು ಯಾರು? ಒಂದು ವೇಳೆ ಸಾಲ ದೊರೆತರು ಅದರಿಂದ ಬಂಡವಾಳವನ್ನಾಗಿ ಬಳಸಿ ವಸ್ತುಗಳನ್ನು ಉತ್ಪಾದಿಸಿದರು ಯಾವುದೊ ಕಾರಣಾಂತರ ಗಳಿಂದ ಉತ್ಪಾದಿಸಿದ ವಸ್ತುಗಳಿಗೆ ಬೆಂಕಿಯಿಂದ, ಮಳೆಯಿಂದ, ಕಳ್ಳರಿಂದ ಹಾನಿಗೊಳಪಟ್ಟರೆ ಉತ್ಪಾದನೆ ಗಾಗಿ ವಿನಿಯೋಗಿಸಿರುವ ಸಾಲದ ಹಣ ಪೂರ್ತಿಯಾಗಿ ನಷ್ಟವಾಗುತ್ತದೆ. ವ್ಯಾಪಾರವು ಗ್ರಾಹಕರ ಅಭಿರುಚಿ, ಅಪೇಕ್ಷೆಗಳು ಬದಲಾದಾಗ ಅನಿವಾರ್ಯವಾಗಿ ಬೇಕಾಬಿಟ್ಟಿಯಾಗಿ ಮಾರಾಟ ಮಾಡುವ ಪರಿಸ್ಥಿತಿಯಿಂದ ಉತ್ಪಾದನೆಯಲ್ಲಿ ವಿನಿಯೋಗಿಸಿರುವ ಹಣ, ಶ್ರಮದಿಂದ ನ್ಯಾಯಿತ ಬೆಲೆ ಬರಲಾರದು.

ಸರ್ಕಾರದಿಂದ ದೊರೆಯುವ ಸಾಲದ ಸೌಲಭ್ಯಗಳೂ ಇವರಿಗೆ ತಿಳಿಯಲಾರವು. ತಿಳಿದರೂ ಬೇಕಾದ ಕಾಗದ ಪತ್ರಗಳು ಇವರ ಬಳಿ ಇರಲಾರವು. ಸಾಲ ಪಡೆಯಲು ಇರಬೇಕಾದ ನಿಯಮಗಳು ತಿಳಿಯದೆ, ಸಾಲ ಪಡೆಯಲು ಇರಬಹುದಾದ ಮಾಹಿತಿ ಇಲ್ಲದಿರುವುದು. ಸಾಲ ಸೌಲಭ್ಯ ಪಡೆಯಲು ಮುಂದೆ ಬರಲಾರರು.

೪.೨.೭.೫. ಯೋಜನಾ ಸಮಸ್ಯೆ

ಯೋಜನೆ ಎಂದರೆ ಭವಿಷ್ಯವನ್ನು ಕುರಿತಾಗಿ ಪ್ರಸ್ತುತದಲ್ಲಿ ಯೋಜಿಸುವಿಕೆ. ಯಾವ ವಸ್ತುವನ್ನು ಯಾವ ಮಟ್ಟದಲ್ಲಿ ಉತ್ಪಾದಿಸಬೇಕು, ಹೇಗೆ ಉತ್ಪಾದಿಸಬೇಕು, ಬಂಡವಾಳದಲ್ಲಿ ನಿಯಮಗಳಾವುವು, ಸೌಲಭ್ಯಗಳಾವುವು, ಯಾವ ಹಂತದಲ್ಲಿ ಚಿಂತನೆ ಮಾಡಲು ಸಾಧ್ಯ, ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆಯನ್ನು ಒದಗಿಸುವ, ಮಾರಾಟದ ಹಂತಗಳು, ಬಂಡವಾಳ ಮತ್ತು ಶ್ರಮದ ಪ್ರತಿಫಲ ಪಡೆಯುವ ಕುರಿತಾಗಿ ನಿರ್ಧರಿಸುವುದು ಅವೈಜ್ಞಾನಿಕವಾಗಿದೆ. ಏಕೆಂದರೆ ಹೆಚ್ಚಾಗಿ ಬೃಹತ್ ಉದ್ದಿಮೆಗಳ ವಸ್ತುವನ್ನು ಬಳಸುವುದರಿಂದ ಅಲೆಮಾರಿಗಳ ವಸ್ತುವನ್ನು ಕೊಳ್ಳಲು ಮುಂದೆ ಬರಲಾರರು. ಈ ಸಮುದಾಯಗಳಿಗೆ ಇರುವ ಆಧುನಿಕ ತಂತ್ರಜ್ಞಾನದ, ತರಬೇತಿ, ಶಿಕ್ಷಣ, ಮಾರಾಟದ ಸಂಪರ್ಕ, ಸಾಧನಗಳು ನಿಲುಕದೆ ದೂರವಿರುವುದರಿಂದ ಉತ್ಪಾದನಾ ವ್ಯವಸ್ಥೆ ಪಡೆಯುವ, ಆದಾಯಗಳ ಬಗ್ಗೆ ಪೂರ್ವಮಾಹಿತಿ ಗ್ರಹಿಕೆ ಇರದಿರುವುದರಿಂದ, ಅಲೆಮಾರಿಗಳು ಉತ್ಪಾದನಾ ವ್ಯವಸ್ಥೆ ಕುಂಠಿತಗೊಳ್ಳುವುದು. ಆದುದರಿಂದ ಈ ಸಮುದಾಯವು ವಸ್ತುಗಳನ್ನು ಉತ್ಪಾದಿಸಲು ಬೇಕಾಗುವ ಎಲ್ಲಾ ಹಂತದ ಸಮಸ್ಯೆಗಳನ್ನು ನೀಗಿಸಿ ಅಲೆಮಾರಿಗಳಲ್ಲಿ ಅಡಗಿರುವ ಕೌಶಲ್ಯ ಮತ್ತು ಜ್ಞಾನವನ್ನು ಹೊರತೆಗೆದು ಉತ್ಕೃಷ್ಟ ಗುಣಮಟ್ಟದ ವಸ್ತುಗಳು ಉತ್ಪಾದನೆಯಾಗಲು ಸಹಕಾರ ಮತ್ತು ಸಹಾಯ ಮಾಡಬೇಕಾಗಿದೆ.

ಉತ್ಪಾದನಾ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡವರ ಸ್ತ್ರೀ ಮತ್ತು ಪುರುಷ ಅನ್ವಯಗೊಂಡ ಶೇಕಡವಾರು

ಸಮುದಾಯಗಳು	ಉತ್ಪಾದನಾ ವಸ್ತು	ಗಂಡು	ಹೆಣ್ಣು	ಶೇಕಡವಾರು
ದೊಂಬರು	ಹೂವಿನ ತೋರಣ	೦೯	೦೪	೫
ಗೋಸಂಗಿಗಳು	ಮಂಚ, ಸೋಫಾ	೦೭	೦೩	೪
ಹಕ್ಕಿಪಿಕ್ಕಿ	ಅಲಂಕಾರಿಕ, ಕಾಡುಜನ್ಯ	೦೮	೧೦	೭
ರಾಜಗೊಂಡ	ಆಯುರ್ವೇದಿಕ್, ಅಲಂಕಾರಿಕ	೦೪	೦೮	೪
ಕಿಳ್ಳೇ/ಶಿಳ್ಳೇಕ್ಯಾತ	ಕೌದಿ ಮತ್ತು ಪ್ಲಾಸ್ಟಿಕ್‌ಪಾಟು	೦೫	೦೩	೩
ಸಿಂಧೋಳ್ಳು	ಕೌದಿ ಮತ್ತು ಬಲೆಗಳು	೦೬	೦೪	೪
ಬುಡ್ಗಜಂಗಮ್	ಪ್ಲಾಸ್ಟಿಕ್ ಸಾಮಾನುಗಳು	೧೫	೧೦	೯
ಸುಡುಗಾಡು ಸಿದ್ಧರು	ಅಲಂಕಾರಿಕ ವಸ್ತುಗಳು	೦೬	೧೦	೬

ದಕ್ಕಲಿಗರು	ಕೌದಿ, ಪ್ಲಾಸ್ಟಿಕ್ ಪಾಟು	೦೧	೦೨	೧
ಸಿಕ್ಕಲಿಗಾರರು	ಗೃಹಪಯೋಗಿ, ಕೃಷಿ ವಸ್ತು	೧೫	೧೦	೯
ಹೆಳವರು	ಗಿಡಮೂಲಿಕೆ, ಅಲಂಕಾರಿಕ	೧೦	೦೮	೭
ಕೊರವ	ಗೃಹಪಯೋಗಿ, ಕೃಷಿ ವಸ್ತು	೧೧	೧೭	೧೦
ಚೆನ್ನದಾಸರು	ಅಲಂಕಾರಿಕ ವಸ್ತುಗಳು	೦೮	೦೫	೫
ಹಂದಿಜೋಗಿ	ಅಲಂಕಾರಿಕ ವಸ್ತುಗಳು	೮	೧೦	೭
ಗೊಂದಲಿಗರು	ಅಲಂಕಾರಿಕ ವಸ್ತುಗಳು, ಕೌದಿ	೬	೭	೫
ಬೈಲುಪತ್ತಾರ್	ಅಲಂಕಾರಿಕ ಸಮಾನುಗಳು	೨೬	೧೫	೧೫
ಅಡವಿಚೆಂಚು	ಕಾಡುಜನ್ಯ	೦೩	೦೨	೨

ಈ ಮೇಲ್ಕಾಣಿಸಿದ ಉತ್ಪಾದನಾ ವ್ಯವಸ್ಥೆಯಲ್ಲಿ ತೊಡಗಿಕೊಂಡಿರುವ ಸಮುದಾಯಗಳ ಜನಸಂಖ್ಯೆವಾರುಗಳಲ್ಲಿ ಶೇ. ೧೫ರಷ್ಟು ಬೈಲುಪತ್ತಾರ್ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿ ತೊಡಗಿಸಿಕೊಂಡರೆ, ಶೇ. ೧೧ರಷ್ಟು ಕೊರವ ಸಮುದಾಯ ದ್ವಿತೀಯ ಸ್ಥಾನದಲ್ಲಿ ಕಂಡುಬಂದಾಗ ಉಳಿದ ಸಮುದಾಯಗಳು ತೃತೀಯ ಸ್ಥಾನದಲ್ಲಿ ಉತ್ಪಾದನೆಯಲ್ಲಿ ನಿರತರಾಗಿರುವುದನ್ನು ಕಾಣಬಹುದಾಗಿದೆ.

೪.೩. ಅಲೆಮಾರಿಗಳ ಮಾರುಕಟ್ಟೆ ಮತ್ತು ಮಾರಾಟದ ಪ್ರಕ್ರಿಯೆ

ಪ್ರತಿಯೊಬ್ಬರು ತಮಗೆ ಬೇಕಾದ ಪ್ರತಿಯೊಂದನ್ನು ಉತ್ಪಾದನೆ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಇಂದಿನ ಜನ ಜೀವನದಲ್ಲಿ ಒಂದು ಊರು ತನಗೆ ಬೇಕಾದ ಪ್ರತಿಯೊಂದನ್ನು ಉತ್ಪಾದಿಸಿಕೊಳ್ಳುವುದು ಅಸಾಧ್ಯ. ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಶ್ರಮವಿಭಜನೆಯ ಆಧಾರದ ಮೇಲೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಜನ ಲಾಭದಾಯಕ ಪ್ರಮಾಣಗಳಲ್ಲಿ ವಸ್ತುಗಳನ್ನು ಉತ್ಪಾದಿಸುತ್ತಾರೆ. ಈ ಉತ್ಪಾದನೆಗಳನ್ನು ಅದನ್ನು ಕೊಳ್ಳುವ ಜನರಿಗೆ ತಲುಪಿಸುವುದು ಹೇಗೆ? ಇವುಗಳಿಗೆ ಮಾರುಕಟ್ಟೆಗಳು ಹೇಗೆ ಉಪಯುಕ್ತವಾಗುತ್ತವೆ? ಈ ಹಿನ್ನೆಲೆಯಲ್ಲಿ ಮಾರುಕಟ್ಟೆ ಉತ್ಪಾದಿತ ವಸ್ತುಗಳ ಹಂಚಿಕೆಯನ್ನು ನಿರ್ಧರಿಸುತ್ತದೆ. ಚಲನೆ ಮತ್ತು ಲಾಭವನ್ನು ಸಹ ನಿರ್ಧರಿಸುತ್ತದೆ. ಹೀಗಾಗಿ ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎನ್ನುವುದು ಅತಿಮುಖ್ಯವಾಗಿದೆ. ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ ಎಂದರೇನು? ಅದರ ಉದ್ದೇಶವೇನು? ಅದರ ಅವಶ್ಯಕತೆ ಎಷ್ಟಿದೆ? ಹಾಗೂ ಅಲೆಮಾರಿಗಳ ಮಾರುಕಟ್ಟೆ ಇತರ ಮಾರುಕಟ್ಟೆಗಿಂತ ಹೇಗೆ ಭಿನ್ನವಾಗಿದೆ? ಏಕೆ ಭಿನ್ನವಾಗಿದೆ? ಹೇಗೆ ಮಾರಾಟ ಪ್ರಕ್ರಿಯೆ ಕೈಗೊಳ್ಳುತ್ತಾರೆ? ಎಂಬುದನ್ನು ಮುಂದಿನಂತೆ ನೋಡುಬಹುದು. ಮಾರುಕಟ್ಟೆ ಎಂದರೆ ಮಾರಾಟಕ್ಕೆ ಇರುವ ಸ್ಥಳ ಎನ್ನುವ ಸೀಮಿತ ಅರ್ಥವನ್ನು ಬಹಳಷ್ಟು ಜನ ಮಾರುಕಟ್ಟೆ ಎಂದು ಭಾವಿಸುತ್ತಾರೆ. ಮಾರುಕಟ್ಟೆ ಎನ್ನುವುದು ಈಗ ಸ್ಥಳ ಮೀರಿ ಬೆಳೆದಿದೆ. ಸೀಮೆಗಳು ಮೀರಿ, ಹೊಸ ಸೀಮೆಗಳನ್ನು ಸೃಷ್ಟಿಸಿಕೊಂಡಿದೆ. ಇಂದಿನ ಜಗತ್ತಿಗೆ ಇಡಿ ಜಗತ್ತೆ

ಮಾರುಕಟ್ಟೆಯಾಗಿ ನಿರ್ಮಾಣವಾಗಿದೆ. ಹೀಗಾಗಿ ಕೊಳ್ಳುವಿಕೆ ಮತ್ತು ಮಾರಾಟಗಳು ದೂರವಾಣಿಯಲ್ಲಿ, ಇಂಟರ್‌ನೆಟ್, ಮೊಬೈಲ್‌ಗಳ ಮುಖಾಂತರಗಳಿಂದ ನಡೆಯುತ್ತಿವೆ. ಕೊಳ್ಳುವವರು ಮತ್ತು ಮಾರಾಟ ಮಾಡುವವರು ಸಂಧಿಸುವ ಸ್ಥಳ ಮಾರುಕಟ್ಟೆ ಎಂದು ಹೇಳಲಾಗುವುದಿಲ್ಲ. ಕೊಳ್ಳುವವರು ಮತ್ತು ಮಾರಾಟ ಮಾಡುವವರು ಒಂದುಕಡೆ ಸಂಧಿಸಬೇಕಾದ ಅವಶ್ಯಕತೆಯಿಲ್ಲವಾಗಿದೆ. ಆದರೂ ಮಾರಕಟ್ಟೆಯು ತುಂಬಾ ವಿಸ್ತಾರವಾಗಿ ಬೆಳೆದಿದೆ.

ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆಯ ಬಗ್ಗೆ ಅರ್ಥಶಾಸ್ತ್ರ ಚಿಂತಕರು ತಮ್ಮದೆ ವ್ಯಾಖ್ಯೆಗಳನ್ನು ನೀಡಿದ್ದಾರೆ. "ಒಂದು ಪ್ರದೇಶದ ಬೆಲೆಯು ಇನ್ನೊಂದು ಪ್ರದೇಶದ ಬೆಲೆಯ ಮೇಲೆ ಪ್ರಭಾವ ಬೀರುವಷ್ಟು ವ್ಯಾಪಾರಿಗಳು ಮತ್ತು ಗ್ರಾಹಕರು ನಿಕಟವಾಗಿರುವ ಒಂದು ಪ್ರದೇಶವನ್ನು ಒಂದು ಮಾರುಕಟ್ಟೆ ಎಂದು ಬೆನಹ್ಯಾಮ್ ಅಭಿಪ್ರಾಯವಾಗಿದೆ. ಈ ಪ್ರಭಾವ ನೇರವಾಗಿ ಇರಬಹುದು ಅಥವಾ ನೇರವಾಗಿ ಇಲ್ಲದೆ ಇರಬಹುದು. ಇಲ್ಲಿ ಪ್ರಭಾವ ಸಾಧ್ಯವಾಗುತ್ತದೆ ಎನ್ನವುದಷ್ಟೆ ಮುಖ್ಯ". "ಕೊಳ್ಳುವವರು ಮತ್ತು ಮಾರುವವರು ಸಂಧಿಸುವ ಪ್ರದೇಶ ಮಾರುಕಟ್ಟೆ ಅಲ್ಲ. ಬದಲಿಗೆ ಕೊಳ್ಳುವವರು ಮತ್ತು ಮಾರುವವರು ಚೌಕಾಸಿ ಮಾಡಿಕೊಂಡು ಒಂದು ನಿರ್ದಿಷ್ಟ ಬೆಲೆಗೆ ಒಪ್ಪಿಕೊಳ್ಳುವ ಮತ್ತು ಅವಕಾಶವಿರುವ ಮುಕ್ತ ವ್ಯವಹಾರ ಹೊಂದಿರುವ ಯಾವುದೆ ಸಮಸ್ತ ಪ್ರದೇಶವನ್ನು ಅವರು ಮಾರುಕಟ್ಟೆ ಎನ್ನಲಾಗುವುದು". ಎಂದು ಅರ್ಥಶಾಸ್ತ್ರಜ್ಞಗಾದ ಕಾರ್ನಾಟ್‌ರವರ ಅಭಿಪ್ರಾಯವಾಗಿದೆ. ಮಾರುಕಟ್ಟೆ ಎಂದರೆ ಕೊಳ್ಳುವವರು ಮತ್ತು ಮಾರುವವರ ನಡುವೆ ಒಂದಲ್ಲ ಒಂದು ರೀತಿಯಲ್ಲಿ ಸಂಪರ್ಕ ಏರ್ಪಡುತ್ತದೆ. ಅದು ಪ್ರತ್ಯೇಕ್ಷ ವಾಗಿರಬಹುದು ಅಥವಾ ಪರೋಕ್ಷವಾಗಿರಬಹುದು. ಮಾರಾಟ ಮಾಡುವ ನಿರ್ದಿಷ್ಟ ಗುಣಮಟ್ಟದ ವಸ್ತುಗಳಿರುತ್ತವೆ ಮತ್ತು ನಿರ್ದಿಷ್ಟ ಬೆಲೆಗೆ ಕೊಳ್ಳುವವರು ಮತ್ತು ಮಾರುವವರು ಕಂಡುಬರುತ್ತಾರೆ. ಹಾಗೆಯೆ ನಿರ್ಧಿಷ್ಟ ಬೆಲೆಗಳಲ್ಲಿ ಒಪ್ಪಿಕೊಳ್ಳುತ್ತಾರೆ. "ಮಾರುಕಟ್ಟೆ ಎಂದರೆ ಹಣವನ್ನು ಸರಕಿಗೆ ಅಥವಾ ಸರಕುಗಳನ್ನು ಸರಕುಗಳಿಗೆ ವಿನಿಮಯಿಸುವ ಉದ್ದೇಶದಿಂದ ಮಾರುವವರು ಮತ್ತು ಕೊಳ್ಳುವವರ ಸಂಧಿಸುವ ಸ್ಥಳವಾಗಿದೆ."[7] ಎಂಬುದು ಡಬ್ಲ್ಯೂ.ಎಸ್. ಜೇಮ್ಸ್‌ರವರ ವ್ಯಾಖ್ಯಾನವಾಗಿದೆ. "ಒಂದು ವಸ್ತುವಿನ ಬೆಲೆ ಸುಲಭ ಮತ್ತು ಶೀಘ್ರುವಾಗಿ ಸಮಾನತೆ ಸಾಧಿಸುವ ಮಾರುವ ಕೊಳ್ಳುವವರ ಪರಸ್ಪರರ ನಡುವೆ ಮುಕ್ತ ಸಂಪರ್ಕ ಹೊಂದಿರುವ ಯಾವುದೇ ಸಮಸ್ತ ಪ್ರದೇಶವೆ ಮಾರುಕಟ್ಟೆಯಾಗಿದೆ."[8] ಎಂದು ಕಾರ್ನಾಟ್‌ರವರ ವ್ಯಾಖ್ಯಾನವಾಗಿದೆ.

ದೇಶದ ಆರ್ಥಿಕ ವ್ಯವಸ್ಥೆಯೆ ಆಗಲಿ ರಾಜ್ಯದ ಆರ್ಥಿಕ ವ್ಯವಸ್ಥೆಯೆ ಇರಲಿ ಸಮುದಾಯದ ಆರ್ಥಿಕ ವ್ಯವಸ್ಥೆಯಾಗಲಿ, ವಸ್ತುಗಳ ಉತ್ಪಾದನೆ ಎಷ್ಟು ಮುಖ್ಯವೊ ಅಷ್ಟೆ ಅವುಗಳ ಮಾರಾಟದ ಮುಖ್ಯವಾಗಿದೆ. ಉತ್ಪಾದಿಸಿದ ವಸ್ತುವನ್ನು ಮಾರಾಟದಲ್ಲಿ ಸಿದ್ಧಪಡಿಸಿ ಬಿಟ್ಟಾರೆ, ಉತ್ಪಾದನಾ ಕಾರ್ಯ ಕೊನೆಗೊಳ್ಳುತ್ತದೆ. ಅಲ್ಲಿಂದ ಮುಂದಕ್ಕೆ ಅಂದರೆ ವಸ್ತುಗಳು ಉತ್ಪಾದಕನಿಂದ ಬಳಕೆದಾರನ ಕೈಗೆ ಸೇರುವವರೆಗೂ ನಡೆಯುವ ಎಲ್ಲ ಪ್ರಯತ್ನಗಳು ಮಾರಾಟದ ಭಾಗವಾಗುತ್ತವೆ. ಆದ್ದರಿಂದ ಕೇವಲ ಹೆಸರಿಗೆ ಮಾತ್ರ ಮಾರುಕಟ್ಟೆಯಾಗಿರದೆ ಅದು ಯಾವುದೆ ತೊಂದರೆ ಇಲ್ಲದೆ ವಸ್ತುಗಳನ್ನು ಮಾರಾಟ ಮಾಡಲು ಮತ್ತು ಸರಕುಗಳನ್ನು ಕೊಂಡುಕೊಳ್ಳಲು ಎಲ್ಲಾ ಸೌಲಭ್ಯಗಳನ್ನು ಸಿಗುವಂತೆ ಮಾರುಕಟ್ಟೆ

ಯಾಗಿರಬೇಕು. ಇಲ್ಲಿ ಕೊಂಡು ಕೊಳ್ಳುವವರು ಒಂದು ನಿಶ್ಚಿತ ಪಡಿಸಿದ ಸ್ಥಳದಲ್ಲಿ ಬರುವುದುಂಟು. ಆ ಸ್ಥಳದಲ್ಲಿ ಭೇಟಿ ನೀಡಿ ವಸ್ತುಗಳು ಖರೀದಿಸುತ್ತಾರೆ.

೪.೩.೨. ಮಾರುಕಟ್ಟೆಯ ಸ್ವರೂಪ

ಮಾರುಕಟ್ಟೆಯು ತನ್ನದೆ ಸ್ವರೂಪವನ್ನು ಪಡೆದುಕೊಂಡು, ಕ್ರಯಗಾರರು ಮತ್ತು ವಿಕ್ರಯಗಾರರ ಕಾರ್ಯಸ್ಥರಾಗಿ ಸಂಧಿಸುವ ಸ್ಥಳವಾಗಿದೆ.

೧. "ಮಾರಾಟ ಸ್ಥಳ ಎಂದರೆ ಗೊತ್ತಾದ ಸ್ಥಳ ಅಥವಾ ಗೊತ್ತಾದ ಭೌಗೋಳಿಕ ಪರಿಸರ.


೨. ವಸ್ತುಗಳು ಹೊರಗೆ ಮತ್ತು ಒಳಗಡೆ ಸಾಗಾಟವಾಗುತ್ತವೆ.

೩. ಸ್ಥಳದಿಂದ ಸ್ಥಳಗಳಿಗೆ ವಸ್ತುಗಳು ಸಾಗುವಾಗ ವಸ್ತುಗಳ ಒಡೆತನದ ಬದಲಾವಣೆಯಾಗುತ್ತಿರುತ್ತದೆ.

೪. ಬೇಡಿಕೆ ಮತ್ತು ಪೂರೈಕೆಯ ಶಕ್ತಿಗಳು ಅನುಕೂಲಕರ ಸ್ಥಳಗಳಲ್ಲಿ ಪ್ರವರ್ತಿಸುತ್ತಿರುತ್ತದೆ."[9]

ಮಾರುಕಟ್ಟೆಯು ತನ್ನದೆ ಸ್ವರೂಪ ಪಡೆದುಕೊಂಡು ತನ್ನದೆ ವಿಂಗಡಣೆಯ ಮೂಲಕ ಸ್ಥಳಿಯ ಪ್ರದೇಶದಿಂದ ಅಂತರಾಷ್ಟ್ರೀಯವರೆಗೂ ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ.

ಅಲೆಮಾರಿಗಳು ಉತ್ಪಾದಿಸಿದ ವಸ್ತುಗಳ ಮಾರಾಟದಲ್ಲಿ ಹಾಗೂ ಕೊಂಡುತಂದ ವಸ್ತುಗಳ ಮಾರಾಟಕ್ಕಾಗಿ ಇಂತಹ ಸ್ಥಳಗಳು ದೂರವಾಗಿವೆ. ಕಾರಣ ಅಲೆಮಾರಿ ಜನರ ಮನೋಭಾವದಲ್ಲಿ ಅಸ್ಪೃಶ್ಯತೆ ಮನೋಭಾವ ಇರಬಹುದು. ಮಾರುಕಟ್ಟೆಯ ನಿಯಮಗಳು, ತೆರಿಗೆಗಳು, ಇವರಿಗೆ ಒಗ್ಗದ ವಿಷಯವಾಗಿರಬಹುದು. ಇತ್ಯಾದಿ ಕಾರಣಗಳಿಂದ ಮಾರುಕಟ್ಟೆಯಿಂದ ದೂರ ಉಳಿದಿದ್ದಾರೆ. ಹೀಗಾಗಿ ಅಲೆಮಾರಿಗಳು ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಬೇಕಾಗಿರುವುದು ಅನಿವಾರ್ಯ. ಮಾರುಕಟ್ಟೆ ವ್ಯವಸ್ಥೆಯ ಮೂಲಕ ಮಾರಾಟ ಮಾಡುವರು. ಅಲ್ಲದೆ ಮಾರಾಟ ಮಾಡುವ ಹಂತದಲ್ಲಿ ತಮ್ಮದೆ ನಿಯಮ ಕಾರ್ಯಸೂಚಿ ರೂಪಿಸಿಕೊಂಡು, ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.



ವಿನಿಮಯ ಕಾರ್ಯಗಳು

ಒಂದು ವಸ್ತು ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ವರ್ಗಾವಣೆ ಮಾಡುವುದೆ ವಿನಿಮಯ ಕಾರ್ಯ. ಇಲ್ಲಿ ಇಬ್ಬರೂ ತಮ್ಮ ಕಾರ್ಯದಲ್ಲಿ ಸಮನಾಗಿ ಪಾಲ್ಗೊಳ್ಳುವರು. ಒಡೆತನದ ವರ್ಗಾವಣೆ ಮಾಡುವ ವಸ್ತುಗಳ ಒಡೆಯ ವಿಕ್ರಯಗಾರನಾದರೆ ಅಥವಾ ಮಾರುವವನಾದರೆ, ಒಡೆತನವನ್ನು ಪಡೆಯುವವನನ್ನ ಕ್ರಯಗಾರ ಅಥವಾ ಕೊಳ್ಳುವವನು ಎನ್ನಬಹುದು. ಇಲ್ಲಿ ಇಬ್ಬರಿಗೂ ಜವಬ್ದಾರಿಗಳಿರುತ್ತವೆ. ಇಂತಹ

ವಿನಿಮಯ ಕಾರ್ಯ ಕೇವಲ ಮಾರುಕಟ್ಟೆಯಲ್ಲಿ ಆಗಬೇಕೆಂದಿಲ್ಲ. ಆದ್ದರಿಂದ ಅಲೆಮಾರಿಗಳು ಬೀದಿ, ಜನಸಂದಣಿ ಇತರೆ ಪ್ರದೇಶಗಳಲ್ಲಿ ಹೋಗಿ ಕ್ರಯಗಾರನಿಗಾಗಿ ಶ್ರಮಿಸುತ್ತಾರೆ.

ವಿಕ್ರಯ

ವಿಕ್ರಯಗಾರರಾದ ಅಲೆಮಾರಿಗಳು ಕ್ರಯಗಾರರನ್ನು ಹುಡುಕಿಕೊಂಡು ಹೋಗಿ ತಮ್ಮ ಬಳಿ ಇರುವ ವಸ್ತುಗಳನ್ನು ಕೊಳ್ಳಲು ಒಂದಲ್ಲ ಒಂದು ತಂತ್ರ ಹಾಗೂ ಮನವಿಯ ಮೂಲಕ ಶ್ರಮಿಸುತ್ತಾರೆ. ಇಬ್ಬರಿಗೂ ಸಾಮೀಪ್ಯ ಬಂದಾಗ ತಮ್ಮಲಿದ್ದ ವಸ್ತುವನ್ನು ವಿಕ್ರಯಗಾರ ಕ್ರಯಗಾರನಿಗೆ ಕೊಡುತ್ತಾನೆ. ಅದು ಹಣ, ದವಸ, ಬಟ್ಟೆ, ವಸ್ತುಗಳ ರೂಪದಲ್ಲಿ ಆಗಬಹುದು. ಇಲ್ಲಿ ಹೆಚ್ಚಾಗಿ ವಿಕ್ರಯಗಾರನೆ ಹಿಂದಕ್ಕೆ ಸರಿಯುತ್ತಾನೆ. ಕ್ರಯಗಾರನು ಯಾವುದೆ ಕಾರಣದಲ್ಲಿ ಹಿಂದೆ ಸರಿಯದೆ ಬೇಕಾಬಿಟ್ಟಿಯಾಗಿ ವಸ್ತುವಿನ ಬೆಲೆಯ ಅರ್ಧ ಅಥವಾ ಕಾಲುಭಾಗದಲ್ಲಿ ಕೇಳುತ್ತಾರೆ. ಅನಿವಾರ್ಯ ಕಾರಣದಿಂದ ವಿಕ್ರಯ ಮಾಡಬೇಕಾಗಿರುವುದರಿಂದ ಅಲೆಮಾರಿಗಳು ಹಿಂದಕ್ಕೆ ಸರಿಯುವರು.

ಕ್ರಯ

ಅಲೆಮಾರಿಗಳ ವಸ್ತುಗಳನ್ನು ವಿಕ್ರಯಗಾರನು ಅವರ ಮನೋಭಾವ ನೋಡಿಯೆ ಅಥವಾ ಹಸಿವಿನ ಮುಖವನ್ನು ನೋಡಿ ಆ ವಸ್ತುವನ್ನು ಹಣ, ದವಸ ಅಥವಾ ಅನ್ನದ ರೂಪದಲ್ಲಿ ಬೇಕಾಬಿಟ್ಟಿಯಾಗಿ ಕೇಳಿ ತನ್ನದಾಗಿಸಿಕೊಳ್ಳುವನು. ಇಲ್ಲಿ ಕ್ರಯಗಾರನೆ ಪ್ರಮುಖ ವ್ಯಕ್ತಿಯಾಗಿರುತ್ತಾನೆ. ವಿಕ್ರಯಗಾರನು ತನ್ನ ಸ್ಥಾನ ರಹಿತ ನಾಗಿರುತ್ತಾನೆ. ಕಾರಣ ಹಸಿವು ಇತ್ಯಾದಿಗಳು. ವಸ್ತುಗಳ ಮಾರಾಟದಿಂದ ಒಂದ್ಹೊತ್ತಿನ ಊಟ ದೊರೆಯುತ್ತದೆ ಎಂಬ ಕಾರಣದಿಂದ ಲಾಭ-ನಷ್ಟ ನೋಡದೆ ಕೊಡುತ್ತಾನೆ. ಒಮ್ಮೊಮ್ಮೆ ಲಾಭ ಬರಬಹುದು.

ಭೌತಿಕ ಹಂಚಿಕೆ ಕಾರ್ಯಗಳು

"ವಸ್ತುಗಳ ಭೌತಿಕ ನಿರ್ವಹಣೆ ಅಂದರೆ ಉತ್ಪಾದಕರಿಂದ ಬಳಕೆದಾರ ಅಥವಾ ಉಪಯೋಗಿಸುವವನಿಗೆ ವಸ್ತುಗಳು ಸಾಗುವುದು."[10] ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿ ವಸ್ತುಗಳನ್ನು ಭೌತಿಕವಾಗಿ ಸಾಗಿಸುವುದು. ಸಾಗಾಣಿಕೆ ಉತ್ಪಾದನಾ ಮತ್ತು ಮಾರಾಟ ಆಗುವವರೆಗೂ ವಸ್ತುಗಳು ಯಾವ ಸ್ಥಳದಲ್ಲಿ ಯಾದರೂ ಮಾರಾಟ ಮಾಡಬಹುದು. ಸಂಚಾರಿಕಾರ್ಯದಲ್ಲಿ ಅಲೆಮಾರಿಗಳು ತಾವು ತಯಾರಿಸಿದ ವಸ್ತುಗಳು ತಮ್ಮ ಬಿಡಾರದಲ್ಲಿಡುವರು. ನಂತರ ಮಾರಾಟ ಮಾಡುವ ಪ್ರದೇಶದಲ್ಲಿ ಸಾಗಿಸುತ್ತಾರೆ.

ಸಾಗಾಣಿಕೆ

ಸಾಗಾಣಿಕೆ ವ್ಯವಸ್ಥೆಯಿಂದ ಪ್ರಪಂಚದ ಮಾರಾಟದಲ್ಲಿ ಕ್ರಾಂತಿ ನಡೆದಿದೆ. ಸಾಗಾಣಿಕೆ ವ್ಯವಸ್ಥೆಯಿಂದ ವಸ್ತು ತಲುಪ ಬೇಕಾದವರಿಗೆ ತಲುಪುತ್ತವೆ. ಇಲ್ಲದಿದ್ದರೆ ವಸ್ತು ನಾಶಹೊಂದುತ್ತವೆ. ತನ್ನ ಗುಣಮಟ್ಟ ಕಳೆದು ಕೊಳ್ಳುತ್ತವೆ. ಪರಿಣಾಮ ಉತ್ಪಾದಕ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಅಲೆಮಾರಿಗಳಿಗೆ ಯಾವುದೆ ತರಹದ ಪ್ರತ್ಯೇಕ ಸಾರಿಗೆ ವ್ಯವಸ್ಥೆ ಇಲ್ಲವಾದರೂ ತಲೆಯ ಮೇಲೆಯೆ ತಮ್ಮ ಬಿಡಾರದಿಂದ ಬಳಕೆದಾರನ ಮನೆಯ ಬಾಗಿಲಿಗೆ ಹೋಗಿ ಮಾರಾಟ ಮಾಡುವರು. ಒಮ್ಮೊಮ್ಮೆ ಬಸ್ಸು, ರೈಲುಗಳಲ್ಲಿ

ಮಾರಾಟ ಮಾಡುವರು. ಇವರ ಉತ್ಪಾದನೆ ಮತ್ತು ಮಾರಾಟ ಅಧಿಕ ಪ್ರಮಾಣದಲ್ಲಿರುವುದಿಲ್ಲ. ಅಂದಿನ ಊಟಕ್ಕಾಗಿ ಉತ್ಪಾದಿಸುತ್ತಾರೆ ಮತ್ತು ಮಾರಾಟ ಮಾಡುತ್ತಾರೆ.

ಸಂಚಯ

"ಉಪಯೋಗಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಬೇಕಾದಾಗ ವಸ್ತುಗಳು ಸುಲಭವಾಗಿ ದೊರಕಲು ಅನುಕೂಲವಾದಂತ ಒಂದು ಗೊತ್ತಾದ ಸ್ಥಳದಲ್ಲಿ ವಸ್ತುಗಳನ್ನು ಸಂಗ್ರಹ ಮಾಡಿರುವುದೇ ಸಂಚಯ."[11]

ಅಲೆಮಾರಿಗಳು ತಾವು ಉತ್ಪಾದಿಸಿದ ಅಥವಾ ಮಾರಾಟ ಮಾಡುವ ವಸ್ತುಗಳನ್ನು ಪ್ರತ್ಯೇಕವಾಗಿ ಸಂಗ್ರಹ ಮಾಡಲಾರರು. ಅವರಿಗೆ ವಾಸಿಸಲು ಮನೆ ಇಲ್ಲ. ಪರಿಣಾಮ ತಮ್ಮ ಬಿಡಾರದಲ್ಲಿ ಸ್ವಲ್ಪ ಸ್ಥಳಮಾಡಿ, ಉತ್ಪಾದಿತ ವಸ್ತುಗಳನ್ನು ಮೂಟೆಯಲ್ಲಿ ಕಟ್ಟಿ ಇಡುವರು. ಮಾರಾಟದಲ್ಲಿ ಹೋಗುವಾಗ ಅವುಗಳನ್ನು ತೆಗೆದುಕೊಂಡು ಹೋಗುವರು.

ಸಹಾಯಕ ಕಾರ್ಯಗಳು

ಮಾರಾಟದ ಚಟುವಟಿಕೆಗಳಿಗೆ ಸಹಾಯ ಮಾಡಬಹುದಾದ ಕಾರ್ಯಗಳು, ಬೆಲೆವಿಲೇವಾರಿ, ರಕ್ಷಣಾಕ್ರಮ, ಗುಣಮಟ್ಟ ಪರೀಕ್ಷೆಗಳು ಸಹಾಯಕ ಕಾರ್ಯಗಳಲ್ಲಿ ಸೇರಿಕೊಂಡಿವೆ.

ಬೆಲೆ ವಿಲೆವಾರಿ

ಅಲೆಮಾರಿಗಳು ಉತ್ಪಾದಿಸಿದ ಅಥವಾ ಮಾರಾಟದ ವಸ್ತುವನ್ನು ಬಳಕೆದಾರನೊಂದಿಗೆ ಸಮಾಗಮ ಮಾಡಿಕೊಂಡು ವಸ್ತುವಿನ ಬೆಲೆ ಕ್ರಯಗಾರನಿಂದ ವಿಲೆವಾರಿ ಮಾಡಿಕೊಳ್ಳುತ್ತಾನೆ. ಬೆಲೆಯು ಹಣ, ದವಸ, ವಸ್ತುಗಳ ರೂಪದಲ್ಲಿಯೂ ಆಗಬಹುದು. ಇದರ ಪ್ರತಿಯಾಗಿ ವಿಕ್ರಯ ವಸ್ತು ಕ್ರಯಗಾರನಿಗೆ ವಿಲೆವಾರಿ ಮಾಡುತ್ತಾನೆ.

ರಕ್ಷಣಾ ಕ್ರಮ

ವಸ್ತುಗಳನ್ನು ಉತ್ಪಾದಕರಿಂದ ಬಳಕೆದಾರರಿಗೆ ತಲುಪುವ ನಡುವೆ ಹಲವಾರು ಸಮಸ್ಯೆ ಎದುರಿಸುವ ಸಾಧ್ಯತೆಗಳಿವೆ. ಅಲೆಮಾರಿಗಳು ಉತ್ಪಾದಿಸಿದ ವಸ್ತುಗಳು ಬಿಡಾರದಲ್ಲಿರುವುದರಿಂದ ಸರಿಯಾದ ರಕ್ಷಣಾ ವ್ಯವಸ್ಥೆ ಇರಲಾರದು. ಕಾರಣ ಮಳೆ, ಬೆಂಕಿ, ಕಳ್ಳತನ, ಪ್ರಾಣಿ-ಪಕ್ಷಿಗಳಿಂದ ನಷ್ಟವಾಗಬಹುದು. ಆದ್ದರಿಂದ ವಸ್ತುಗಳನ್ನು ಜಾಗೃತದಿಂದ ರಕ್ಷಿಸಬೇಕಾಗುತ್ತದೆ ಮತ್ತು ರಕ್ಷಿಸುತ್ತಾರೆ.

ಗುಣಮಟ್ಟದ ಪರೀಕ್ಷೆ

ಅಲೆಮಾರಿ ವಿಕ್ರಯಗಾರ ಬಳಕೆದಾರನಾದ ಕ್ರಯಗಾರನಿಗೆ ವಸ್ತುಗಳನ್ನು ಯಾವುದೆ ತಂತ್ರದ ಮೂಲಕ ಮಾರಾಟ ಮಾಡಿದರು, ಕೊಂಡವನು ಆ ವಸ್ತುವಿನ ಗುಣಮಟ್ಟ ಪರೀಕ್ಷೆ ಮಾಡುತ್ತಾನೆ. ಏಕೆಂದರೆ ಮೊದಲೆ ವಸ್ತುವಿನ ಗುಣಗಾನ ಮಾಡಿರುವುದರಿಂದ ಕುತೂಹಲ ಬರುವುದು ಸಹಜ. ಈ ಹಂತದಲ್ಲಿ ವಸ್ತು ಕಳಪೆ ಆದರೆ, ವಿಕ್ರಯಗಾರ ಮತ್ತೊಂದು ವಸ್ತುವನ್ನು ಕೊಡಬೇಕಾಗುತ್ತದೆ. ಇದನ್ನು ಆತನೇ ಭರಿಸಬೇಕಾಗುತ್ತದೆ. ಆದರೆ ಅಲೆಮಾರಿಗಳು ವಸ್ತುವಿನ ಬಗ್ಗೆ ಮೋಸ ಮಾಡಲಾರರು.

೪.೩.೩. ಅಲೆಮಾರಿಗಳ ಮಾರಾಟದ ವರ್ಗೀಕರಣ

ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾದಂತಹ ಮಾರುಕಟ್ಟೆ ವ್ಯವಸ್ಥೆ ಇರುವುದಿಲ್ಲ. ಮಾರುಕಟ್ಟೆಯಲ್ಲಿ ಇವರಿಗಾಗಿ ಪ್ರತ್ಯೇಕ ಸ್ಥಳವು ಕಂಡುಬರುವುದಿಲ್ಲ. ಆದರೂ ಮಾರುಕಟ್ಟೆ ವ್ಯವಸ್ಥೆ ಇರದಿದ್ದರೂ ತಮ್ಮದೆ ಸಂಚಾರಿ ಮಾರುಕಟ್ಟೆ ಮೂಲಕ ವಸ್ತುಗಳನ್ನು ಮಾರಾಟಮಾಡುವರು. ಇದು ಅವರ ಬದುಕಿಗೆ ಅನಿವಾರ್ಯವಾಗಿದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳದಲ್ಲಿ ಮಾರಾಟದ ವ್ಯಾಪ್ತಿಯನ್ನು ವಿಸ್ತರಿಸುತ್ತಾ ತಮ್ಮ ತಂತ್ರಗಾರಿಕೆಯ ಮೂಲಕ ಮಾರಾಟ ಮಾಡುವರು.

ಮಾರಾಟದ ವರ್ಗೀಕರಣ

ಸಂತೆಗಳು

↓

ಜಾತ್ರೆಗಳು

↓

ಬೀದಿಗಳು

↓

ನಿಲ್ದಾಣಗಳು

↓

ಯಾತ್ರಾಸ್ಥಳಗಳು

↓

ರಸ್ತೆಬದಿಗಳು

↓

ಸುಗ್ಗಿಕಾಲಗಳು

↓

ಜನಸಂದಣಿ ಪ್ರದೇಶಗಳು

ಹೀಗೆ ಅಲೆಮಾರಿಗಳು ವಿಶಿಷ್ಟ ರೀತಿಯ ಮಾರುಕಟ್ಟೆಯ ವ್ಯವಸ್ಥೆಯ ಮೂಲಕ ಮಾರಾಟದ ಕಾರ್ಯಗಳಲ್ಲಿ ತೊಡಗಿಸಿಕೊಂಡು ತಮ್ಮ ಮೌಲ್ಯಗಳ ಮೂಲಕ ಜನರನ್ನು ನಂಬಿಕೊಂಡಿದ್ದಾರೆ. ಉತ್ಪಾದಿಸಿದ ಮತ್ತು ಮಳಿಗೆಯಿಂದ ಕೊಂಡು ಬಳಕೆದಾರರಿಗೆ ತಲುಪಿಸಲು ಪ್ರದೇಶದಿಂದ ಪ್ರದೇಶಕ್ಕೆ ಅಲೆಯುತ್ತಿದ್ದಾರೆ. ಕಾರಣ ಇಂತಹ ಪ್ರದೇಶಗಳಲ್ಲಿ ತೆರಿಗೆಯ ಹೊರೆ, ಕಿರುಕುಳ ಇತರೆ ತೊಂದರೆಗಳು ಕಡಿಮೆ ಇರುವುದರಿಂದ ಹೆಚ್ಚಾಗಿ ಈ ಸ್ಥಳಗಳನ್ನು ಮಾರುಕಟ್ಟೆಯಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಆಧುನಿಕ ವಸ್ತುಗಳು ಬರುವುದರಿಂದ ಕಡಿಮೆ ಬೆಲೆ ಸುಂದರವಾಗಿರುವ ವಸ್ತುಗಳು ಕಾಣುವುದರಿಂದ ಅಲೆಮಾರಿಗಳ ವಸ್ತುಗಳನ್ನು ಖರೀದಿಸಲು ಮೀನಾಮೇಷ ಎಣಿಸುವುದರಿಂದ ಹೆಚ್ಚಾಗಿ ಇಂತಹ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಾರೆ.

೪.೩.೪. ಮಾರಾಟ ಪ್ರಕ್ರಿಯೆ

"ಒಂದು ವಸ್ತುವಿನ ಉತ್ಪಾದನೆಯು ಸಫಲವಾಗಬೇಕೆಂದರೆ ಆ ವಸ್ತುವು ಅವರ ಅಪೇಕ್ಷೆ ಮತ್ತು ಅವಶ್ಯಕತೆಗನುಗುಣವಾಗಿ ಅನುಭೋಗಿಗಳಿಗೆ ಸೇರಬೇಕು ಏಕೆಂದರೆ ಉತ್ಪಾದಿಸಿದ ವಸ್ತುವನ್ನು ಹಾಗೆಯೆ ಇಡುವುದು ತಪ್ಪಾಗುತ್ತದೆ. ಅದರ ಗುಣಮಟ್ಟಗಳು ಕ್ಷೀಣಿಸುವ ಮೊದಲು ಎಲ್ಲಿ ಸೇರಬೇಕೊ ಅಲ್ಲಿಗೆ ಸೇರಿಸಬೇಕಾಗುತ್ತದೆ."[12] ಹಾಗೆ ಮಾಡುವುದರಿಂದ ಆ ವಸ್ತುವಿನ ಉತ್ಪಾದಕನಿಗೆ ಸಾರ್ಥಕವಾಗುತ್ತದೆ.

ಉತ್ಪಾದಿತ ವಸ್ತುವನ್ನು ಬಳಕೆದಾರರಿಗೆ ಸೇರಿಸುವ ಅಥವಾ ವರ್ಗಾಯಿಸುವ ಕ್ರಿಯೆಯನ್ನು ಮಾರಾಟದ ಪ್ರಕ್ರಿಯೆ ಎಂದು ಕರೆಯಬಹುದು. ಉತ್ಪಾದಕರಿಂದ ಬಳಕೆದಾರರಿಗೆ ಅಥವಾ ಅನುಭೋಗಿಗಳಿಗೆ ಸರಕು ಸೇವೆಗಳ ಪರಿಚಲನೆಯನ್ನು ನಿಯಂತ್ರಿಸುವ ವ್ಯವಹಾರಿ ಚಟುವಟಿಕೆಗಳ ನಿರ್ವಹಣೆ ಮಾರಾಟದ ಪ್ರಕ್ರಿಯೆ ಯಾಗಿದೆ. ವಸ್ತು ಮಾರಾಟದ ಪ್ರಕ್ರಿಯೆಯಲ್ಲಿ ಅನುಭೋಗಿಗಳಿಗೆ ತಲುಪುವ ವೇಳೆಗೆ ಅನೇಕ ಹಂತಗಳನ್ನು ದಾಟಿಕೊಂಡು ಬರುತ್ತದೆ.

ಮಾರಾಟದ ಪ್ರಕ್ರಿಯೆಗಳು

ಉತ್ಪಾದನಾ ಪ್ರಾಧಾನ್ಯಹಂತ

↓

ವಸ್ತು ಪ್ರಾಧ್ಯಾನಹಂತ

↓

ಮಾರಾಟ ಪ್ರಾಧ್ಯಾನಹಂತ

↓

ಗ್ರಾಹಕ ಪ್ರಾಧ್ಯಾನಹಂತ

↓

ಸಾಮಾಜಿಕ ಪ್ರಾಧ್ಯಾನಹಂತ

↓

ಬಳಕೆದಾರ ಪ್ರಾಧ್ಯಾನಹಂತ

ಹೀಗೆ ಹಂತಹಂತವಾಗಿ ಅಲೆಮಾರಿಗಳೂ ಉತ್ಪಾದಿಸಿದ ವಸ್ತುಗಳನ್ನು ಅನುಭೋಗಿಗಳಿಗೆ ಅಥವಾ ಬಳಕೆದಾರರಿಗೆ ಸೇರಬೇಕಾಗಿವೆ. ಅಲೆಮಾರಿಗಳು ವಸ್ತುವನ್ನು ಉತ್ಪಾದಿಸಿ ನೇರವಾಗಿ ಮಾರಾಟದಲ್ಲಿ ತೊಡಗುತ್ತರಾದರು ಉತ್ಪಾದನಾ ವಸ್ತು ಈ ಹಂತದಿಂದ ಹರಿದು ಬರಬೇಕಾಗಿದೆ. ಒಂದು ವಸ್ತುವನ್ನು ಹಲವಾರು ತೊಂದರೆಗಳ ನಡುವೆ ಉತ್ಪಾದಿಸಿ ಅದನ್ನು ತುಂಬಾ ಜಾಗ್ರತವಾಗಿ ಬಿಡಾರದಲ್ಲಿಟ್ಟುಕೊಂಡು ಮಾರುಕಟ್ಟೆ ಅಥವಾ ನೇರ ಮಾರಾಟದ ಮೂಲಕ ಗ್ರಾಹಕರನ್ನು ಹುಡುಕಿಕೊಂಡು ಹೋಗಿ ವಸ್ತುಗಳನ್ನು ಮಾರಾಟ ಮಾಡುವರು. ಮಾರಾಟದ ನಂತರ ಬಳಕೆದಾರನ ಕೈ ಸೇರಿದ ಮೇಲೆ ಆ ವಸ್ತುವಿನ ಗುಣಮಟ್ಟ ಅಥವಾ ತುಷ್ಟಿಗುಣ ಗ್ರಾಹಕನಿಗೆ ಬಿಟ್ಟಾ ವಿಚಾರವಾಗಿರುತ್ತದೆ. ಬಳಕೆದಾರನಿಗೆ ಮುಟ್ಟಿಸಿ ಅದರಿಂದ ಪ್ರತಿಫಲ ಪಡೆಯುವುದು ಉದ್ದೇಶವಾಗಿದೆ.

ಉತ್ಪಾದಿತ ವಸ್ತುವಿನ ಮಾರಾಟದ ಪ್ರಕ್ರಿಯೆಯಲ್ಲಿ ತೊಡಗುವ ಮುಂಚೆ ಅಲೆಮಾರಿಗಳು ಕೆಲವೊಂದು ಅಂಶಗಳನ್ನು ಗಮನದಲ್ಲಿಟ್ಟುಕೊಂಡೆ ಮುನ್ನಡೆಯುವರು. ಮುಂಜಾಗ್ರತೆ ಯೋಜನೆ ಇರದಿದ್ದರೆ ಮಾರಾಟ ಮಾಡಬೇಕಾದ ವಸ್ತು, ಕಾಲ ವಿಳಂಬವಾಗಿ ದೊರೆಯುವ ಗಂಜಿಯು ದೊರೆಯ ಲಾರದು. ಆದ್ದರಿಂದ ಯಾವ ತೆರನಾಗಿ ಮಾರಾಟದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು? ಅನುಸರಿಸುವ ಅಂಶಗಳಾವುವು ಎಂಬುದನ್ನು ಆಲೋಚಿಸಿ ಚಾಚು ತಪ್ಪದೆ ಅನುಸರಿಸುತ್ತಾರೆ.

ಮಾರಾಟ ಪ್ರಕ್ರಿಯೆ ಅಂಶಗಳು

೧. ಆಂತರಿಕ ಅಂಶಗಳು	೨. ಬಾಹ್ಯ ಅಂಶಗಳು
↓	↓
ಉತ್ಪಾದಿತ ವಸ್ತುವಿನ ಗುಣಮಟ್ಟ	ಕೊಳ್ಳುವವರ ವರ್ತನೆ
↓	↓
ಯೋಗ್ಯ ಬೆಲೆ ನಿರ್ಧಾರ	ಸಂದರ್ಭಕ್ಕನುಸಾರ ಮಾರಾಟದ ವರ್ತನೆ
↓	↓
ಮಾರಾಟದ ತಂತ್ರ	ಸ್ಪರ್ಧಾ ರಹಿತ ವರ್ತನೆ
↓	↓
ವಿಭಿನ್ನ ವಿತರಣೆ ವ್ಯವಸ್ಥೆ	ಸಮಾಜದ ಧೋರಣೆ

೧. ಆಂತರಿಕ ಅಂಶಗಳು

ಅಲೆಮಾರಿಗಳು ಉತ್ಪಾದಿಸಿದ ವಸ್ತುಗಳು ಗ್ರಾಹಕರನ್ನು ತಲುಪಬೇಕಾದಲ್ಲಿ ಮತ್ತು ಗ್ರಾಹಕನು ಅವುಗಳ ಕೊಳ್ಳಬೇಕಾದಲ್ಲಿ ಅವುಗಳ ಆಕರ್ಷಣೆ. ಮಾತುಗಾರಿಕೆ ಮೂಲಕ ಹೇಗೆ ನಿಭಾಯಿಸಬೇಕು ಹಾಗೆ ನಿಭಾಯಿಸುತ್ತಾರೆ. ಇಂತಹ ಮಾತುಗಾರಿಕೆಯೆ ಮಾರಾಟದ ವಿಶಿಷ್ಟ ಕೌಶಲ್ಯವಾಗಿದೆ.

ಉತ್ಪಾದಿತ ವಸ್ತುವಿನ ಗುಣಮಟ್ಟ

ಅಲೆಮಾರಿಗಳು ಉತ್ಪಾದಿಸುವ ವಸ್ತು ಅದರ ಶ್ರಮ ಮತ್ತು ಸಂಪ್ರದಾಯ ಕೂಡಿದೆ. ಅವರು ಯಾವ ವಸ್ತುವನ್ನು ಹೇಗೆ ಅಲಂಕೃತವಾಗಿರಬೇಕು? ಯಾವ ವಸ್ತುವಿಗೆ ಯಾವ ವಿನ್ಯಾಸ ಕೊಡಬೇಕೆಂದು. ವೈಜ್ಞಾನಿಕ ವಿಧಾನ ತಿಳಿದಿರುವುದುಂಟು. ಇವರು ಲಾಭಕ್ಕಿಂತ ಸೇವೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಏಕೆಂದರೆ ಕಳಪೆ ಮಟ್ಟದ ವಸ್ತುವನ್ನು ಗ್ರಾಹಕರಿಗೆ ವಿತರಿಸಿದಾಗ ಅದರ ವಸ್ತುವಿನ ಗುಣಮಟ್ಟ ಮಾಡುವುದುಂಟು. ಅದು ಉತ್ಕೃಷ್ಟವಾಗಿದು ಎಂದು ತಿಳಿದು ಬಂದರೆ ಕೊಳ್ಳುವವರು ಆ ವಸ್ತು ಕಳಪೆ ಎಂದು ತಿಳಿದಾಗ ಯಾರೂ ಕೊಳ್ಳಲು ಮುಂದೆ ಬರುವುದಿಲ್ಲ. ಆದುದರಿಂದ ಅಲೆಮಾರಿಗಳು ನಂಬಿಕೆಯ ಮೇಲೆ ನಯ-ವಿನಯದಿಂದ ಬೇಡಿಕೊಂಡು, ವಸ್ತುವಿನ ಗುಣಮಟ್ಟ ತಾಳಿಕೆ ಇತ್ಯಾದಿಗಳನ್ನು ಕೂಲಂಕುಷವಾಗಿ ತಿಳಿಸಿ ಮಾರಾಟ ಮಾಡುವರು.

ಯೋಗ್ಯಬೆಲೆ ನಿರ್ಧಾರ

ವಸ್ತುವನ್ನು ಉತ್ಪಾದನೆ ಮಾಡಿದ ನಂತರ ಅದರ ಯೋಗ್ಯಬೆಲೆಯನ್ನು ಗುರುತಿಸುತ್ತಾರೆ. ಯಾವುದೆ ಕಾರಣಕ್ಕೂ ಉದ್ಯಮ ನಿಗದಿಪಡಿಸುವಂತೆ ನಿಗದಿಪಡಿಸಲಾರರು.

ಬೆಲೆನಿರ್ಧಾರ

ಉತ್ಪಾದಿಸುವ ವಸ್ತುವಿಗೆ ಬೆಲೆ ಕಟ್ಟುವುದು ಸಹಜ. ಹಾಗೆಯೆ ಬೆಲೆ ನಿರ್ಧರಿಸಿದ ಮೇಲೆ "ವಸ್ತುವನ್ನು ಜನರು ಹೇಗೆ ಸ್ವೀಕರಿಸುತ್ತಾರೆ, ಎಂಬುದನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧಾರವಾಗಬೇಕಾಗುತ್ತದೆ."[13] ಇಲ್ಲಿ ವಸ್ತು ಉತ್ಪಾದನೆ ಮಾಡಲು ವಸ್ತುವಿನ ಖರ್ಚು ವೆಚ್ಚಗಳನ್ನು ತೆಗೆಯಲಾಗುತ್ತದೆ. ಸಾಮಾನ್ಯವಾಗಿ ಜನರಿಗೆ ತುಂಬಾ ಸರಳವಾಗಿ ಕೈಗೆಟುಕುವ ಬೆಲೆ ನಿರ್ಧರಿಸುತ್ತಾರೆ. ನಿರ್ಧರಿಸಿದ ಬೆಲೆಗಳು ಜಾತ್ರೆ, ಸಂತೆ, ಮಾರುಕಟ್ಟೆ, ಹಬ್ಬ-ಹರಿದಿನ ಹಾಗೂ ಪ್ರವಾಸ ಸ್ಥಳಗಳಲ್ಲಿ ಹಾಗೂ ದೇವಾಸ್ಥಾನ ಇತ್ಯಾದಿಗಳಲ್ಲಿ ಏರಿಕೆ ಅಥವಾ ಇಳಿಕೆಯಲ್ಲಿ ಕಂಡುಬರುವುದುಂಟು. ಅಲ್ಲಿ ಪರಿಸ್ಥಿತಿಗನುಗುಣವಾಗಿ ವಸ್ತುವನ್ನು ಕೊಡುತ್ತಾರೆ. ಅವರ ಮಾತುಗಾರಿಕೆ ವಸ್ತುವಿನ ಮೇಲೆ ಮಾರಾಟ ಮಾಡುತ್ತಾರೆ. ಒಮ್ಮೊಮ್ಮೆ ವಸ್ತುವಿಗೆ ಬೆಲೆ ಇಲ್ಲದಿದ್ದಾಗ ಅನಿವಾರ್ಯ ಸಂದರ್ಭಗಳಲ್ಲಿ ನಷ್ಟವಾದರೂ ಕೊಡುವುದುಂಟು.

ಬೆಲೆ ನಿರ್ಧಾರದ ಅಂಶಗಳು

ಉತ್ಪಾದನಾ ವೆಚ್ಚ : "ಒಂದು ವಸ್ತುವನ್ನು ಉತ್ಪಾದಿಸಬೇಕಾದರೆ ತಗಲುವ ಎಲ್ಲ ವಿಧವಾದ ವೆಚ್ಚವನ್ನು ಉತ್ಪಾದನಾ ವೆಚ್ಚವೆಂದು ಹೇಳಬಹುದು."[14] ವಸ್ತು ಉತ್ಪಾದನೆಯಾಗಬೇಕಾದರೆ ಏನೆಲ್ಲಾ ಉತ್ಪಾದನಾಂಗಗಳು ಬೇಕಾಗಿದೆ.

ಹಣರೂಪಿ ವೆಚ್ಚ : ವಸ್ತುವಿನ ಉತ್ಪಾದನೆಗೆ ಬೇಕಾದ ಕಚ್ಚಾ ಸಾಮಾಗ್ರಿಗಳು ಅಥವಾ ಸಲಕರಣೆಗಳು ಕೊಳ್ಳಬೇಕಾಗುವುದರಿಂದ ಹಣದ ರೂಪದಲ್ಲಿ ಕೊಟ್ಟು, ಸಲಕರಣೆಗಳು ತರಬೇಕಾಗುತ್ತದೆ. ಇದನ್ನು ಅಲೆಮಾರಿಗಳು ಚಿಕ್ಕ ಪ್ರಮಾಣದಲ್ಲಿ ಕೈಗೊಳ್ಳುವರು. ಎಷ್ಟು ವಸ್ತುವಿಗೆ, ಯಾವ ವಸ್ತುವಿಗೆ ಎಷ್ಟ ಹಣ ಬೇಕಾಗಬಹುದೆಂಬ ಅಂದಾಜಿನಂತೆ ಹಣವನ್ನು ತೊಡಗಿಸುವುದುಂಟು.

ನೈಜ ವೆಚ್ಚ : ಅಲೆಮಾರಿಗಳ ವಸ್ತುಗಳ ಉತ್ಪಾದನೆಯಲ್ಲಿ ಹಣರೂಪಿ ವೆಚ್ಚಕ್ಕಿಂತ ನೈಜ ವೆಚ್ಚ ಅಧಿಕವಾಗಿದೆ. ಹೆಚ್ಚಾಗಿ ಶ್ರಮ ಇಲ್ಲಿ ವ್ಯಯ ಮಾಡ ಬೇಕಾಗುತ್ತದೆ. ಶ್ರಮ ತುಂಬಾ ಶ್ರದ್ಧೆಯಿಂದ ಹಂತ ಹಂತವಾಗಿ ಯಾವ ವಯೋಮಾನದವರು ಎಷ್ಟು ವಿನಿಯೋಗಿಸಬೇಕು. ಎಂತಹ ಕರಕುಶಲತೆ ಬೇಕು, ಎಲ್ಲಿಯ ತನಕ ಬೇಕು ಎಂದು ವರ್ಗೀಕರಣ ಮಾಡಿಕೊಂಡು ವ್ಯಯ ಮಾಡುತ್ತಾರೆ. ಅಲೆಮಾರಿಗಳ ವಸ್ತು ಉತ್ಪಾದನೆ, ಹಣ ಇಲ್ಲದಿದ್ದರೂ ಇವರ ನೈಜ ಶಕ್ತಿಯಿಂದ ವಸ್ತು ಉತ್ಪಾದಿಸಬಲ್ಲರು.

ಮಾರಾಟದ ತಂತ್ರ : ವಸ್ತುವಿನ ಮಾರಾಟವನ್ನು ಹೆಚ್ಚಿಸುವುದೆ ಮಾರಾಟದ ತಂತ್ರವಾಗಿದೆ. ಬೃಹತ್ ಮಾರಾಟಗಾರರು ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಲು ಹಲವಾರು ತಂತ್ರಗಾರಿಕೆ

ಮಾಡುವುದುಂಟು. ಅದು ಜಾಹಿರಾತು, ಪ್ರಚಾರಕಲೆ, ಪ್ರದರ್ಶನ ಇತ್ಯಾದಿ. ಜಾಹೀರಾತುಗಳಾದ ಲಕ್ಸ್‌ಸೋಪು ಕೊಂಡರೆ, ಪೆನ್ನು ಉಚಿತವಾಗಿ ಕೊಡುವುದು. ಹಾಗೆಯೆ ಒಂದು ಕೊಂಡರೆ ಮತ್ತೊಂದು ಉಚಿತ. ಆದರೆ ಅಲೆಮಾರಿಗಳಿಂದ ಇದು ಅಸಾಧ್ಯವಾಗಿದೆ. ಇವರು ಒಂದ್ಹೊತ್ತಿನ ಊಟಕ್ಕಾಗಿ ದೂರದ ಪ್ರದೇಶದಿಂದ ಕಚ್ಚಾಸಾಮಾಗ್ರಿಗಳನ್ನು ಸಾಲ ಮಾಡಿ, ವಸ್ತುಗಳು ಉತ್ಪಾದಿಸಿ, ಬದುಕುವ ಸಮುದಾಯ ಇದಾಗಿರುವುದರಿಂದ ಬೃಹತ್ ಮಟ್ಟದ ತಂತ್ರಗಾರಿಕೆ ಅಸಾಧ್ಯ. ಬದಲಾದ ತಂತ್ರಗಾರಿಕೆ ಮೂಲಕ ಗ್ರಾಹಕರನ್ನು ಸೆಳೆಯಲ್ಪಡುತ್ತಾರೆ. ಉತ್ಪಾದಿಸಿದ ವಸ್ತುಗಳು ಬೀದಿ ಬದಿಯಲ್ಲಿ ರಸ್ತೆ ಬದಿ ಇತ್ಯಾದಿ ಸ್ಥಳಗಳಲ್ಲಿ ಮಾರಾಟ ಮಾಡುವುದು ಹಾಗೂ ತಲೆಯ ಮೇಲೆ ಹೊತ್ತು ಜನರಿದ್ದ ಸ್ಥಳದಲ್ಲಿ ಹೋಗಿ ವಸ್ತುವನ್ನು ಕೊಂಡುಕೊಳ್ಳುವಂತೆ ಗ್ರಾಹಕರ ಮನವೊಲಿಸುವುದು, ಗ್ರಾಮೀಣ ಪ್ರದೇದಲ್ಲಿ ಮಹಿಳೆಯರನ್ನು ವಿಶಿಷ್ಟ ಮಾತುಗಾರಿಕೆಯ ಮೂಲಕ ಗ್ರಾಹಕರನ್ನು ತಮ್ಮತ್ತ ಸೆಳೆದು ಕೊಳ್ಳಲು ಮುಂದಾಗುತ್ತಾರೆ.

ವಿಭಿನ್ನ ವಿತರಣ ವ್ಯವಸ್ಥೆ : ಉತ್ಪಾದಿತ ವಸ್ತು ಗ್ರಾಹಕರನ್ನು ತಲುಪಿಸುವ ವ್ಯವಸ್ಥೆಯೆ ವಿತರಣ ವ್ಯವಸ್ಥೆ. ಅಲೆಮಾರಿಗಳು ವಿತರಿಸುವ ವ್ಯವಸ್ಥೆ ವಿಭಿನ್ನವಾಗಿದೆ. ದೊಡ್ಡ ದೊಡ್ಡ ಉತ್ಪಾದಕರು ದಲ್ಲಾಳಿಗಳ ಮೂಲಕ ಇಲ್ಲವೆ ಮಾರಾಟ ಸಂಘಗಳ ಮೂಲಕ ವಸ್ತುವನ್ನು ವಿತರಿಸಿದರೆ ಅಲೆಮಾರಿಗಳು ತಾವೆ ಮಾರುಕಟ್ಟೆಯಲ್ಲಿ, ಬೀದಿಯಲ್ಲಿ, ಹಬ್ಬ-ಹರಿದಿನಗಳಲ್ಲಿ, ಯಾತ್ರಾಸ್ಥಳದಲ್ಲಿ ಹಾಗೂ ಮನೆ ಮನೆಯ ಬಾಗಿಲಿನಲ್ಲಿ ವಸ್ತುವನ್ನು ಗ್ರಾಹಕರಿಗೆ ವಿತರಿಸುವ ಸುಲಭ ವ್ಯವಸ್ಥೆಯಾಗಿದೆ. ಇದರಿಂದ ವಸ್ತು ಯೋಗ್ಯ ಬೆಲೆಗೆ ಮಾರಾಟವಾಗುವುದು, ಗ್ರಾಹಕರಿಗೂ ಉತ್ತಮ ಬೆಲೆಗೆ ದೊರೆಯುವುದು.

೨. ಬಾಹ್ಯ ಅಂಶಗಳು

ಉತ್ಪಾದಿಸಿದ ವಸ್ತುಗಳ ಮಾರಾಟದ ಪ್ರಕ್ರಿಯೆಯಲ್ಲಿ ಎಲ್ಲವೂ ಅಂದುಕೊಂಡಂತೆ ಲಾಭ ಬರುವುದಿಲ್ಲ. ಅಷ್ಟೆ ಸುಲಭವಾಗಿ ವ್ಯಾಪಾರವು ನಡೆಯುವುದಿಲ್ಲ. ಅವು ಬಳಕೆದಾರರ ಮೇಲೆ ಅವಲಂಬಿತವಾಗಿರುತ್ತವೆ. ಅವುಗಳನ್ನು ಯಾವುದೆ ಕಾರಣದಿಂದ ನಿಯಂತ್ರಿಸಲು ಸಾಧ್ಯವಿಲ್ಲ.

ಕೊಳ್ಳುವವರ ವರ್ತನೆ : ಉತ್ಪಾದಿಸಿದ ವಸ್ತುಗಳು ಬಳಕೆದಾರರಿಗೆ ಮುಟ್ಟಿಸುವುದು ಅಲೆಮಾರಿಗಳ ಕಾರ್ಯವಾಗಿದೆ. ಅವರು ಅಂದುಕೊಂಡಂತೆ ಬಳಕೆದಾರರು ಕೊಳ್ಳಲಾರರು, ಆದ್ದರಿಂದ ಉತ್ಪಾದನೆ ಮಾಡುವಾಗಲೂ ಮತ್ತು ಮಾರಾಟ ಸಂದರ್ಭದಲ್ಲಿ ಕೊಳ್ಳುವವರ ವರ್ತನೆ ನೋಡಿಕೊಂಡು ವಸ್ತುವನ್ನು ಕೊಳ್ಳಲು ಮುಂದೆ ಬೀಳುವುದುಂಟು.

ಗ್ರಾಹಕರ ಆಸಕ್ತಿ ಅಭಿರುಚಿಯ ಮೇಲೆ ಸಾಂದರ್ಭಿಕವಾಗಿ ವಸ್ತುಗಳ ಉತ್ಪಾದನೆ ಹಾಗೂ ಮಾರಾಟದ ಬೆಲೆಗಳಲ್ಲಿ ಬದಲಾವಣೆಗಳು ಆಗುತ್ತವೆ. ಹಣ ಇಲ್ಲವೆ ದವಸ, ಬಟ್ಟೆಗಳಿಗೂ ವಸ್ತುಗಳನ್ನು ವಿತರಿಸುವರು. ಒಮ್ಮೊಮ್ಮೆ ಅನಿವಾರ್ಯ ಸಂದರ್ಭದಲ್ಲಿ ನಷ್ಟವಾದರೂ ಕೊಡುವರು. ಇದರಿಂದ ಮಾರಾಟವು ಕೊಳ್ಳುವವರ ವರ್ತನೆ ಮೇಲೆ ನಿಂತಿರುತ್ತದೆ.

ಸಂದರ್ಭಕ್ಕನುಸಾರ ಮಾರಾಟದ ವರ್ತನೆ : ಅಲೆಮಾರಿಗಳು ವಸ್ತುಗಳನ್ನು ಮಾರಾಟ ಮಾಡುವಾಗ ಸಮಯ ಸಂದರ್ಭದಲ್ಲಿ ಮಾರಾಟ ಮಾಡುವರು. ಅದು ಸಂತೆ, ಜಾತ್ರೆಗಳಲ್ಲಿ, ದೇವಾಸ್ಥಾನದ ಹತ್ತಿರ, ಸಾಮಾನ್ಯ ದಿನಗಳಲ್ಲಿ, ನಗರ, ಪಟ್ಟಣ, ಜನನಿಬಿಡ ಪ್ರದೇಶ ಇತ್ಯಾದಿಗಳಲ್ಲಿ. ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಮಾರಾಟದ ಬೆಲೆ ಮತ್ತು ಪ್ರಕ್ರಿಯೆಯ ಲಾಭ ಮತ್ತು ಆದಾಯ ಎಲ್ಲವೂ ನಿಂತಿರುತ್ತದೆ. ಇಲ್ಲಿ ಲಾಭ ಹೆಚ್ಚಾಗಬಹುದು ಅಥವಾ ನಷ್ಟವಾಗಬಹುದು. ಏಕ ರೀತಿಯ ವಸ್ತುಗಳು ಸಮುದಾಯ ಹೆಚ್ಚು ಉತ್ಪಾದಿಸಿ ಮಾರಟಕ್ಕೆ ತಂದಿದ್ದರೆ ಎಲ್ಲರು ಕೂಡಿ ಮಾರಾಟ ಮಾಡುವರು.

ಸ್ಪರ್ಧಾರಹಿತ ವರ್ತನೆ : ವಸ್ತುಗಳು ಮಾರಾಟವಾಗುವ ತನಕ ಅಲೆಮಾರಿಗಳು ಶ್ರಮಿಸುತ್ತಾರೆ. ಆಕಸ್ಮಿಕ ಮಾರಾಟವಾಗದಿದ್ದರೆ, ಮುಂದಿನ ಸ್ಥಳದಲ್ಲಿ ಮಾರಾಟ ಮಾಡಲು ಹೋಗುತ್ತಾರೆ. ಆದರೆ ಸ್ಪರ್ಧಾತ್ಮಕ ಮಾರಾಟ ಇಲ್ಲವಾಗಿದೆ.

ಸಮಾಜದ ಧೋರಣೆ : ಅಲೆಮಾರಿಗಳು ತಮ್ಮ ವೃತ್ತಿಯ ಧೋರಣೆಯನ್ನು ಮೌಲ್ಯಮಾಪನ ಮಾಡುವರು. ಅಂದರೆ ನಮ್ಮ ವಸ್ತುವಿಗೆ ಸಮಾಜವು ಎಷ್ಟರ ಮಟ್ಟಿಗೆ ಸ್ಪಂದಿಸುತ್ತದೆ. ಯಾವ ಭಾಗದಲ್ಲಿ, ಯಾವ ದಿನಗಳಲ್ಲಿ ಗ್ರಾಮೀಣ ಮತ್ತು ನಗರಗಳಲ್ಲಿ ಹೇಗೆ ಧೋರಣೆಯಿದೆ. ಮಕ್ಕಳ, ಪುರುಷರ, ಮಹಿಳೆಯರ ಧೋರಣೆ ಹೇಗಿದೆ ಎಂಬಿತ್ಯಾದಿಗಳನ್ನು ತಿಳಿದುಕೊಂಡು ಅವುಗಳಿಗೆ ತಕ್ಕಂತೆ ಪ್ರಕ್ರಿಯೆಯಲ್ಲಿ ತೊಡಗುವರು. ಸಾಮಾಜಿಕ ಪರಿಸರದಲ್ಲಿ ಒಳ್ಳೆಯ ಅಭಿಪ್ರಾಯ ದೊರೆಯದಿದ್ದಾಗ ಅವರು ಅಲ್ಲಿಂದ ಮತ್ತೊಂದು ಪ್ರದೇಶದಲ್ಲಿ ಹೊರಡುವರು.

ಉತ್ಪಾದಿಸಿದ ವಸ್ತುಗಳನ್ನು ಮಾರುಕಟ್ಟೆಗೆ ಬರುವ ಮುನ್ನ ಅದರ ತಗಲಿದ ವೆಚ್ಚವನ್ನು ಅಂದಾಜು ಲೆಕ್ಕ ಹಾಕಿ, ಅದಕ್ಕೆ ವಿನಿಯೋಗಿಸಿದ ಸಮಯ, ಸದಸ್ಯರ ಸಂಖ್ಯೆ, ವಸ್ತುಗಳ ಉತ್ಪಾದನೆ, ಕಚ್ಚಾ ವಸ್ತುಗಳ, ಶ್ರಮ ಇತ್ಯಾದಿಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧಾರ ಮಾಡುವರು. ಬೆಲೆ ನಿರ್ಧಾರದ ನಂತರ ಮಾರಾಟದಲ್ಲಿ ಇಳಿಯುವರು. ಮಾರಾಟದಲ್ಲಿ ನಿಖರವಾದ ಬೆಲೆ ಇರಲಾರದು. ಏಕೆಂದರೆ ಅಂದಿನ ಸ್ಥಿತಿ ಸಮಯ, ಸಂದರ್ಭ ಮೊದಲಾದ ಅಂಶಗಳು ಪ್ರಭಾವ ಬೀರುವುದರಿಂದ ವ್ಯತ್ಯಾಸ ಆಗುತ್ತವೆ. ಹಾಗೂ ವ್ಯತ್ಯಾಸದ ನಂತರ ಒಂದಿಷ್ಟದರೂ ಲಾಭ ಬರುತ್ತದೆ. ವಸ್ತುಗಳು ಯಾರು ಖರೀದಿಸದಿದ್ದಾಗ ಅರ್ಧ ಬೆಲೆಯಲ್ಲಿ ಮಾರಾಟ ಮಾಡುವರು.

ಅಂದಾಜು ಬೆಲೆ ನಿರ್ಧಾರ ಮತ್ತು ಬರಬಹುದಾದ ಲಾಭ

ಉತ್ಪಾದನಾ ವಸ್ತುಗಳು	ತೊಡಗಿಸಿದ ವೆಚ್ಚ ಕಚ್ಚಾಸಾಮಗ್ರಿ ಮತ್ತು ಬಂಡವಾಳ ಅನ್ವಯಗೊಂಡಂತೆ	ಬೆಲೆ ನಿರ್ಧಾರ (ರೂ.ಗಳಲ್ಲಿ)	ಬರಬಹುದಾದ ಲಾಭ (ರೂ.ಗಳಲ್ಲಿ)
೧	೨	೩	೪
ಬಳ್ಳೆಯ ಸಿಂಬೆ	೦೨	೦೩	೦೧
ಬೀಸಣಿಕೆ	೦೧	೦೬	೦೨
ಬಂಡಿತಟ್ಟೆ	೪೦	೬೦	೨೦
ಚಾಪೆ	೨೫	೪೦	೧೫
ಕೌದಿ	೨೦	೪೦	೨೦
ಬಾರುಕೋಲು	೦೫	೧೦	೦೫
ಉಳುವಹಗ್ಗ	೧೦	೨೦	೧೦
ಬಾಯಿಕುಕ್ಕೆ	೦೮	೧೫	೦೭
ಮೊರ	೧೫	೨೫	೧೦
ಪೊರಕೆ	೦೩	೦೬	೦೩
ಆಸನ	೨೦೦೦	೩೦೦೦	೧೦೦೦
ಬೇಟೆ ಪರಿಕರ	೧೦೦	೧೫೦	೫೦
ರುದ್ರಾಕ್ಷಿಸರ	೦೩	೦೫	೦೨
ಟೊಪ್ಪಿಗೆ	೦೨	೦೪	೦೨
ಛತ್ರಿ	೨೦	೩೫	೧೫
ಕಲ್ಲಿ	೦೨	೦೪	೦೨
ವಿಗ್ರಹ	೧೫	೨೫	೧೦
ತೋರಣ	೧೫	೨೫	೧೦
ಚಿಮಟಿಗೆ	೧೫	೨೫	೦೨
ಹಲ್ಲುಕಡ್ಡಿ	೦೫	೧೦	೦೫
ತಾಯಿತ	೦೩	೦೫	೦೨
ಉಂಗುರ	೧೫	೨೫	೧೦
ಓಲೆ	೨೫	೩೫	೧೫
ಡಾಬು	೩೦	೪೫	೧೫
ಕಾಲುಂಗುರು	೨೦	೩೦	೧೦

೧	೨	೩	೪
ಕಡಗ	೩೫	೪೫	೧೦
ಸರ	೧೫	೨೫	೧೦
ಗೊಂಬೆ	೧೦	೧೫	೦೫
ಮಂಚ	೧೦೦೦	೧೩೦೦	೩೦೦
ಚರ್ಮದ ಪ್ರಾಣಿ	೯೦	೧೨೫	೨೫
ಚರ್ಮದ ಪಕ್ಷಿ	೩೦	೪೫	೧೫
ಬಟ್ಟೆಯ ಪಕ್ಷಿ	೧೫	೨೫	೧೦
ಬಟ್ಟೆಯ ಪ್ರಾಣಿ	೧೫	೨೫	೧೦
ಉಣ್ಣೆಬಟ್ಟೆ ಪ್ರಾಣಿ	೩೦	೪೫	೧೫
ಉಣ್ಣೆಬಟ್ಟೆ ಪಕ್ಷಿ	೩೦	೪೫	೧೫
ಉಣ್ಣೆಬಟ್ಟೆ ಗೊಂಬೆ	೩೦	೪೫	೧೫
ಜರಡಿ	೧೮	೨೫	೦೭
ದಬ್ಬಳ	೦೧	೦೨	೦೧
ಈಳಿಗೆ	೦೬	೧೦	೦೪
ಕುಡುಗೋಲು	೦೮	೧೫	೦೭
ಕಂದೀಲು	೭೫	೯೦	೧೫
ಗುದ್ದಲಿ	೨೦	೩೫	೧೫
ಹಾರಿ	೧೨೫	೧೫೦	೨೫
ಸಲಿಕೆ	೪೦	೬೦	೨೦
ಈಟಿ	೪೦	೬೦	೨೦
ಬಟ್ಟೆಯ ಗುಲಾಬಿಹೂವು	೦೮	೧೨	೦೪
ಇತರೆ ಹೂವು	೦೬	೧೦	೦೪
ಪಕ್ಷಿಗಳು	೧೦	೧೫	೦೫
ಪೋಟೋಹಾರಗಳು	೧೫	೨೦	೦೫

ಅಲೆಮಾರಿ ಸಮುದಾಯಗಳು ಮಾರಾಟ ಮಾಡುವ ಎಲ್ಲ ವಸ್ತುಗಳನ್ನು ಉತ್ಪಾದಿಸಲಾರರು. ಉತ್ಪಾದಿಸುವ ಕೌಶಲ್ಯವಿದ್ದರು ಕಚ್ಚಾವಸ್ತುಗಳ ಪೂರೈಕೆ, ಬಂಡವಾಳ, ಸಮಯ, ಸ್ಥಳ, ಸಲಕರಣೆ ಇತ್ಯಾದಿ ಸೌಕರ್ಯಗಳು ಇರುವುದರಿಂದ ಮಾರುಕಟ್ಟೆಗಳಲ್ಲಿ ಹಾಗೂ ಮಳಿಗೆ ಮಾಲೀಕರ ಹತ್ತಿರ ಕಡಿಮೆ ಬೆಲೆಯಲ್ಲಿ ತರುವರು.

ಮಾರಾಟದಲ್ಲಿ ಹೆಚ್ಚು ಕಡಿಮೆ ಲಾಭ ಬರುತ್ತದೆ. ಕೆಲವೊಮ್ಮೆ ನಷ್ಟವು ಆಗುಬಹುದು. ಆದುದರಿಂದ ವಸ್ತು ಬಹಳಷ್ಟು ತಂದು, ಬಿಡಾರದಲ್ಲಿ ಇಡುವುದಿಲ್ಲ. ಮಳೆ ಕಾರಣದಿಂದ ವಸ್ತುಗಳು ಹಾಳಗಬಹುದು.

ಮಾರಾಟದ ಬೆಲೆ ಮತ್ತು ಲಾಭ

ವಸ್ತುಗಳು	ಮಾರುಕಟ್ಟೆ ಬೆಲೆ	ಮಾರಾಟದ ಬೆಲೆ ರೂ.	ಲಾಭ ರೂ.
೧	೨	೩	೪
ಹೂವು	೧೦	೧೫	೦೫
ಮಣಿಸರ	೦೫	೧೦	೦೫
ಡಾಬು	೨೫	೪೦	೧೫
ಮುತ್ತಿನ ಸರ	೧೫	೨೫	೧೦
ನತ್ತು	೦೩	೦೫	೦೨
ದಾರ	೦೧	೦೨	೦೧
ತಾಳಿಮಣಿ	೦೨	೦೩	೦೧
ಉಡುದಾರ	೦೧	೦೨	೦೧
ಲಾಟೀನು ಬುಡ್ಡಿ	೧೦	೧೫	೦೫
ಸೇರು (ಲಿಟರ್)	೧೦	೧೫	೦೫
ಪಾತ್ರೆ	೧೫	೨೫	೧೦
ತಟ್ಟೆ	೧೫	೨೫	೧೦
ಸೌಟು	೧೨	೧೮	೦೬
ಪ್ಲೇಟು	೦೫	೧೦	೦೫
ಲೋಟ	೦೫	೧೦	೦೫
ತಂಬಿಗೆ	೧೦	೧೫	೦೫
ಬೆಸನ್	೨೦	೩೫	೧೫
ಚಮಚ	೦೩	೦೫	೦೨
ಲಾಳಿಕೆ	೦೨	೦೪	೦೨
ಕೊಡಲಿ	೨೫	೩೫	೧೦
ಕುಡುಗೋಲು	೧೫	೨೫	೧೦
ಚಾಕು	೧೦	೧೫	೦೫
ಚೂರಿ	೧೫	೨೦	೦೫
ಚುಚ್ಚಗ	೧೦	೧೫	೦೫
ಲತ್ತಿಮಣಿ	೦೮	೧೫	೦೭
ಹಂಚು	೨೦	೩೫	೧೫
ಕೊಣಿಗೆ	೩೦	೪೦	೧೦
ಕೊಡ / ಬಾಕೇಟು	೩೦	೪೫	೧೫
ಕರಿಮಣಿ ಸರ	೧೦	೧೫	೦೫
ಚೈನು	೨೫	೩೫	೧೦
ಒಲೆ	೩೦	೪೫	೧೦

೧	೨	೩	೪
ಕೈಸೆಟ್ಟು	೧೦	೧೫	೦೫
ಬೊಂಬೆ	೧೦	೧೫	೦೫
ಪಿರಪಿನ್ನು	೦೨	೦೩	೦೧
ನಶಿಡಬ್ಬಿ	೦೨	೦೩	೦೧
ಬಾಚಣಿಕೆ	೦೨	೦೩	೦೧
ಕನ್ನಡಿ	೧೨	೧೮	೦೬
ಕಾಡಿಗೆ	೦೨	೦೩	೦೧
ಟೇಪು	೦೨	೦೩	೦೧
ಜಡೆ ರಬ್ಬರ್	೦೨	೦೩	೦೧
ಪೌಡರ್	೦೮	೧೨	೦೪
ಸ್ನೋವು	೦೮	೧೨	೦೪
ಸೂಜಿ	೦೨	೦೩	೦೧
ದಬ್ಬಳ	೦೧	೦೨	೦೧
ಟಿಕ್ಕಲಿ	೦೧	೦೨	೦೧
ಉಂಗುರ	೦೫	೦೭	೦೨
ವಿಗ್ರಹ	೨೦	೨೫	೦೫
ತೋರಣ	೧೦	೧೫	೦೫
ಮಂಚ	೧೫೦	೨೦೦	೫೦
ಚರ್ಮದ ಪ್ರಾಣಿ	೫೦	೬೦	೧೦
ಚರ್ಮದ ಪಕ್ಷಿ	೫೦	೬೦	೧೦
ರುದ್ರಾಕ್ಷಿಸರ	೧೦೦	೧೧೦	೧೦
ಛತ್ರಿ	೨೫	೩೫	೧೦
ಟೊಪ್ಪಿ	೧೫	೨೦	೦೫
ಬಟಾಣಿ	೨೫	೩೫	೧೦
ಪೇರಲ	೧೦೦	೧೫೦	೫೦
ಸೀಬು	೮೦	೧೦೦	೨೦
ಹಲಸು	೨೦	೪೦	೨೦
ಅನಾನಸ್	೧೫	೨೦	೦೫
ಐಸ್ ಕ್ರೀಂ	೭೫ ಪೈ	೦೧	೨೫ ಪೈ
ಮಾವು	೨೦ ೧ ಕೆ.ಜಿ.	೩೦	೧೦
ಕಲ್ಲಂಗಡಿ	೧೦	೧೫	೦೫
ತರಕಾರಿ ಸೊಪ್ಪು	೦೧	೦೨	೦೧

ಗಿಡಮೂಲಿಕೆ ಮಾರಾಟ


ಔಷಧಿಗಳು	ಮಳಿಗೆಗಳ ಬೆಲೆ	ಮಾರಾಟದ ಬೆಲೆ	ಬರುವ ಲಾಭ
ನಿರಂಜನ ಫಲ	೧ ತೊಲ ೧೫.೦೦	೨೦.೦೦	೫.೦೦
ಮದನ ಮಸ್ತ	೧ ತೊಲ ೬೫.೦೦	೮೦.೦೦	೧೫.೦೦
ಇಸ್ಕಂಬರ್	೧ ತೊಲ ೧೮೦.೦೦	೨೦೦.೦೦	೨೦.೦೦
ಮಧು ಕಲಪನಾ	೧ ತೊಲ ೧೦೦.೦೦	೧೨೦.೦೦	೨೦.೦೦

೪.೩.೫. ಸಾಟಿ ವಿನಿಮಯ ಪದ್ಧತಿ

ಪ್ರಾಚೀನ ಕಾಲದಲ್ಲಿ ಹಣದ ಬಳಕೆ ಜನರಿಗೆ ತಿಳದಿರಲಿಲ್ಲ. ಮಾನವನ ಬಯಕೆಗಳು ಮಿತವಾಗಿದ್ದವು. ಆರ್ಥಿಕ ಜೀವನ ಸರಳವಾಗಿತ್ತು. ಹೆಚ್ಚು ಕಡಿಮೆ ಜನರು ಸ್ವಯಂ ಪೂರ್ಣತೆ ಪಡೆದುಕೊಂಡಿದ್ದರು. ತಮಗೆ ಬೇಕಾದ ವಸ್ತುಗಳನ್ನು ತಾವೆ ಉತ್ಪಾದಿಸಿಕೊಳ್ಳುತ್ತಿದ್ದರು. ಕಾಲ ಕ್ರಮೇಣ ಜನಸಂಖ್ಯೆ ಹೆಚ್ಚಾಗಿ, ಗ್ರಾಮಗಳು ಬೆಳೆದಂತೆ ಜನರು ತಮಗೆ ಬೇಕಾದ ವಸ್ತುಗಳನ್ನು ಒದಗಿಸಿಕೊಳ್ಳವುದು ಕಷ್ಟವಾದ್ದರಿಂದ ತಾವು ತಯಾರಿಸಿದ ವಸ್ತುಗಳಲ್ಲಿ ಸ್ವಲ್ಪ ಭಾಗವನ್ನು ಇತರರಿಗೆ ಕೊಟ್ಟು, ಅವರಿಂದ ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುತ್ತಿದ್ದರು. ಇದರ ಪ್ರಕಾರ ವಸ್ತುಗಳ ವಿನಿಮಯ ಆರಂಭವಾಯಿತು.

ವಸ್ತುಗಳು-ವಸ್ತುಗಳಿಗೆ ನೇರವಾಗಿ ವಿನಿಮಯ ಮಾಡಿಕೊಳ್ಳುವ ಕ್ರಮಕ್ಕೆ "ಸಾಟಿ ವಿನಿಮಯ ಪದ್ಧತಿ" ಎಂದು ಕರೆಯುವುದುಂಟು. ಆದರೆ ಕಾಲ ಗತಿಸಿದಂತೆ ಸಾಟಿ ವಿನಿಮಯ ಪದ್ಧತಿಯು ಹೆಚ್ಚು ಕಾಲ ಮುಂದುವರಿಲಿಲ್ಲ. ಮೂಲಭೂತ ದೋಷಗಳಿಂದ. ಬಯಕೆಗಳ ಹೊಂದಾಣಿಕೆಯ ಅಭಾವ, ಮೌಲ್ಯ ಮಾಪನದ ಕೊರತೆ, ವಿಭಜನಯ ಕೊರತೆ ಇತ್ಯಾದಿ ಸಮಸ್ಯೆಗಳು ಬಂದಿರುವುದರಿಂದ ಸಾಟಿ ವಿನಿಮಯ ಪದ್ಧತಿ ನಿಂತಿತು. ತದ ನಂತರ ಹಣದ ಮೂಲಕ ವ್ಯವಹಾರ ಮಾಡಲಾಯಿತು.

ಆದರೆ ಅಲೆಮಾರಿ ಸಮುದಾಯಗಳು ಇನ್ನೂ ಕೂಡ ಸಾಟಿ ವಿನಿಮಯ ಪದ್ಧತಿಯ ಮೂಲಕ ಇತರರಿಗೆ ಉತ್ಪಾದಿತ ವಸ್ತುಗಳನ್ನು ಮಾರಾಟ ಮಾಡುವರು. ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಮತ್ತು ಇತರೆ ಗೃಹೋಪಯೋಗಿ ವಸ್ತುಗಳನ್ನು ಉತ್ಪಾದನೆ ಮಾಡಿಕೊಂಡು ಮಾರಾಟದಲ್ಲಿ ಹೋದರೆ ಹಣದ ತೊಂದರೆಯೊ ಅಥವಾ ಇನ್ನಾವುದೊ ಕಾರಣದಿಂದ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ವಿನಿಮಯದಲ್ಲಿ ಆಯಾ ವಸ್ತುಗಳ ಅಂದಾಜು ಮೌಲ್ಯ ಮಾತ್ರವಿರುತ್ತದೆ. ನಿರ್ದಿಷ್ಟವಾಗಿ ಮೌಲ್ಯ ಮಾಡಲು ಸಾಧ್ಯವಿಲ್ಲ. ಒಂದು ರೀತಿಯಲ್ಲಿ ಇವರ ಮೌಲ್ಯ ಹೊಟ್ಟೆ ಹಿಟ್ಟಿನ ಮೌಲ್ಯವಾಗಿದೆ. ಹಣವೆ ಪ್ರಧಾನವಲ್ಲ. ಆಹಾರ ಪ್ರಧಾನ ಆದರೂ, ಹಾಕಿದ ಬಂಡವಾಳದ ಖರ್ಚನ್ನಾದರೂ ಪಡೆಯಲೇ ಬೇಕಾಗುವುದು ಅದೂ ಕೂಡ ಕಷ್ಟ.



ವಸ್ತುಗಳು	ದವಸ	ಆಹಾರ	ಬಟ್ಟೆ	ಪಕ್ಷಿಗಳು	ಕಚ್ಚಾವಸ್ತುಗಳು
ಕಲ್ಲಿ	೨ ಸೇರು	ರೊಟ್ಟಿ	ಬಟ್ಟೆ		
ತೋರಣ	ರಾಗಿ ಅಥವಾ	ಇಲ್ಲವೆ			
ಚಿಮಟಿಗೆ	ಜೋಳ	ಅನ್ನ,			
ಹಲ್ಲುಕಡ್ಡಿ		ಮುದ್ದೆ			
ತಾಯಿತ	೪ ಸೇರು	ರೊಟ್ಟಿ			
ಬಳ್ಳಿಯ ಸಿಂಬೆ	ಜೋಳ	ಮುದ್ದೆ			
ಬೀಸಣಿಕೆ		ಅನ್ನ			
ಬೇಟೆ ಪರಿಕರ	೪ ಸೇರು		ಅಂಗಿ	ಕೋಳಿ	
ಛತ್ರಿ	ಜೋಳ		ಸೀರೆ	೨ ಕೋಳಿ	
ಚಾಪೆ					
ಕೌದಿ					
ಜರಡಿ		ರೊಟ್ಟಿ			ತಗಡಿನಡಬ್ಬಿ
ದಬ್ಬಳ		ಮುದ್ದೆ			ಕಬ್ಬಿಣ
ಈಳಿಗೆ		ಅನ್ನ			ಪ್ಲೇಟ್
ಕುಡುಗೋಲು					
ಕಂದಿಲು					
ಬಾರುಕೋಲು	೧ ಸೇರು				
ಬಾಯಿಕುಕ್ಕೆ	ರಾಗಿ ಅಥವಾ	ರೊಟ್ಟಿ			
ಗಿರಗಟ್ಟೆ	ಜೋಳ	ಮುದ್ದೆ			
ಪೀಪಿ		ಅನ್ನ			
ಬುಟ್ಟಿ	೧ ಸೇರು			ಸಣ್ಣಕೋಳಿ	
ಬೀಗದ ಕೈ	ರಾಗಿ ಅಥವಾ	ಮುದ್ದೆ			
	ಜೋಳ	ಅನ್ನ			

ಮಾರಾಟದಲ್ಲಿ ತೊಡಗಿಸಿಕೊಂಡವರ ಸ್ತ್ರೀ ಮತ್ತು ಪುರುಷ ಅನ್ವಯಗೊಂಡ ಶೇಕಡವಾರು

ಸಮುದಾಯಗಳು	ಮಾರಾಟದ ವಸ್ತು	ಗಂಡು	ಹೆಣ್ಣು	ಶೇಕಡವಾರು
ದೊಂಬರು	ಅಲಂಕಾರಿಕ, ಪಾತ್ರೆಗಳು	೧೧	೦೯	೩
ಗೋಸಂಗಿಗಳು	ಮಸಾಲೆ ಪದಾರ್ಥ, ಸುಗಂಧ ದ್ರವ್ಯ	೪೫	೨೫	೯
ಹಕ್ಕಿ-ಪಿಕ್ಕಿ	ಅಲಂಕಾರಿಕ, ಕಾಡುಜನ್ಯ	೪೦	೩೦	೯
ರಾಜಗೊಂಡ	ಗಿಡಮೂಲಿಕೆ ಔಷಧಿ, ಅಲಂಕಾರಿಕ	೬೫	೨೦	೧೧
ಕಿಳ್ಳೆಶಿಳ್ಳೆಕ್ಯಾತ	ಮೀನು, ಗೃಹೋಪಯೋಗಿ, ತರಕಾರಿ	೩೦	೩೦	೮
ಸಿಂಧೋಳ್ಳ್	ಮೀನು, ಗೃಹೋಪಯೋಗಿ, ಅಲಂಕಾರಿಕ	೧೫	೧೫	೪
ಬುಡ್ಗಜಂಗಮ್	ಪ್ಲಾಸ್ಟಿಕ್ ಸಾಮಾನುಗಳು	೨೫	೨೦	೬
ಸುಡುಗಾಡುಸಿದ್ಧರು	ಅಲಂಕಾರಿಕ ವಸ್ತುಗಳು	೨೭	೧೭	೬
ದಕ್ಕಲಿಗರು	ಪ್ಲಾಸ್ಟಿಕ್ ಪಾಟು	೦೫	೦೨	೧
ಸಿಕ್ಕಲಿಗಾರರು	ಗೃಹೋಪಯೋಗಿ, ಕೃಷಿ ಸಲಕರಣೆ	೩೫	೩೦	೮
ಹೆಳವರು	ರುದ್ರಾಕ್ಷಿ, ಮಣಿಸರ ಅಲಂಕಾರಿಕ	೨೨	೧೨	೫
ಕೊರವ	ಗೃಹೋಪಯೋಗಿ, ಕೃಷಿ ವಸ್ತುಗಳು	೨೮	೧೬	೬
ಚನ್ನದಾಸರು	ಮೀನು, ಪಾತ್ರೆಗಳು	೩೮	೧೮	೭
ಹಂದಿ ಜೋಗಿ	ಕೇಶಾಲಂಕಾರಿಕ, ಅಲಂಕಾರಿಕ,	೩೧	೧೯	೭
ಗೊಂದಲಿಗರು	ಅಲಂಕಾರಿಕ	೩೨	೧೬	೬
ಬೈಲುಪತ್ತಾರ್	ಅಲಂಕಾರಿಕ, ಗೃಹ ಮತ್ತು ಕೃಷಿಸಲಕರಣೆ	೧೫	೧೦	೩
ಅಡವಿಚೆಂಚರು	ಕಾಡುಜನ್ಯ, ಅಲಂಕಾರಿಕ	೦೮	೦೫	೨

ಈ ಮೇಲ್ಕಾಣಿಸಿದ ಮಾರಾಟದ ವ್ಯವಸ್ಥೆಯಲ್ಲಿ ತೊಡಗಿಕೊಂಡಿರುವ ಸಮುದಾಯಗಳ ಜನಸಂಖ್ಯೆವಾರುಗಳಲ್ಲಿ ಶೇ. ೧೧ರಷ್ಟು ರಾಜಗೊಂಡರು ಮಾರಾಟದಲ್ಲಿ ಪ್ರಥಮ ಸ್ಥಾನದಲ್ಲಿ ತೊಡಗಿಸಿಕೊಂಡರೆ, ಶೇ. ೯ರಷ್ಟು ಗೋಸಂಗಿ ಮತ್ತು ಹಕ್ಕಿಪಿಕ್ಕಿ ಸಮುದಾಯ ದ್ವಿತೀಯ ಸ್ಥಾನದಲ್ಲಿ ಕಂಡುಬಂದರೆ ಉಳಿದ ಸಮುದಾಯಗಳು ತೃತೀಯ ಸ್ಥಾನದ ಮಾರಾಟದಲ್ಲಿ ನಿರತರಾಗಿರುವುದನ್ನು ಕಾಣಬಹುದಾಗಿದೆ.

೪.೩.೬. ಮಾರಾಟ ಪ್ರಕ್ರಿಯೆಯ ಸಮಸ್ಯೆಗಳು

ಮಾರಾಟದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ಅಲೆಮಾರಿ ಸಮುದಾಯಗಳು ಹಲವಾರು ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ. ಅಂತ ಸಮಸ್ಯೆಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಸಂಗ್ರಹಣ ಸಮಸ್ಯೆ

ವಸ್ತುಗಳನ್ನು ಉತ್ಪಾದಿಸಿ ಹಾಗೂ ಮಾರುಕಟ್ಟೆಗಳಿಂದ ಕೊಂಡುತಂದು ಮಾರಾಟಮಾಡಲು ವಸ್ತುಗಳು ಸ್ಥಳದಲ್ಲಿ ಸಂಗ್ರಹಿಸಬೇಕಾಗುತ್ತದೆ. ಅಲೆಮಾರಿಗಳು ತಯಾರಿಸುವ ವಸ್ತುಗಳನ್ನು ಸಂಗ್ರಹಿಸಲು ತಮ್ಮ ಬಿಡಾರ ನೆಚ್ಚಿಕೊಂಡಿರಬೇಕಾಗಿದೆ. ಮಳೆಗಾಲದಲ್ಲಿ ಸಂಗ್ರಹಿಸಿಡುವುದು ತುಂಬಾ ಕಷ್ಟಕರ. ಮಳೆ ಬರುವುದರಿಂದ ವಸ್ತುಗಳು ಹಾಳಾಗುತ್ತವೆ. ಪ್ಲಾಸ್ಟಿಕ್ ಹಾಳೆಯಿಂದ ರಕ್ಷಿಸುತ್ತಾರಾದರರೂ ವಸ್ತು ನಷ್ಟವಾಗುವ ಸಾಧ್ಯತೆ ಹೆಚ್ಚು. ತಾವು ಇರುವ ಪ್ರದೇಶ ಕೊಳಚೆ ಪ್ರದೇಶವಾಗಿರುತ್ತದೆ. ಒಮ್ಮೊಮ್ಮೆ ತಂದ ವಸ್ತುಗಳು ಮಾರಾಟ ಆಗುವವರೆಗೂ ನೆಮ್ಮದಿಯಿಂದ ನಿದ್ದೆ ಮಾಡಲಾರರು. ಬಿಡಾರದಲ್ಲಿ ಸುಸಜ್ಜಿತವಾಗಿ ರಕ್ಷಿಸುವುದು ಕಷ್ಟವಾಗಿದೆ. ಕಡಿಮೆ ಸ್ಥಳವಿರುವುದರಿಂದ ಕುಟುಂಬದ ಸಾಮಾನುಗಳು ಇರುವುದರಿಂದ ವಸ್ತುಗಳನ್ನು ಸಂಗ್ರಹಿಸುವುದು ಕಷ್ಟವಾಗಿದೆ.

ಮುದ್ರ ನಾಮದ ಸಮಸ್ಯೆ

ವ್ಯಾಪಾರದಲ್ಲಿ ಅನೇಕ ಮುದ್ರೆ ನಾಮಗಳಿವೆ ವ್ಯಾಪಾರದ ಮುದ್ರೆಗಳು, ರಚನಾ ರೂಪಗಳು, ಸಂಕೇತಗಳು, ಚಿಹ್ನೆಗಳು, ಅಕ್ಷರಗಳು, ಸಂಖ್ಯೆಗಳು ಸೇರಿಕೊಂಡಿವೆ. ಅಲೆಮಾರಿಗಳು ಉತ್ಪಾದಿಸುವ ವಸ್ತುಗಳಿಗೆ ಮುದ್ರೆ ಇರುವುದಿಲ್ಲ. ಬೇರೆಯವರು ಉತ್ಪಾದಿಸಿದ ವಸ್ತುಗಳಿಗೆ ಮುದ್ರೆ ಹಾಕಿಸುವುದುಂಟು. ಜನರ ಮನೋಭಾವನೆ ಹೇಗಿದೆ ಎಂದರೆ ಮುದ್ರೆ ಇರುವ ವಸ್ತುಗಳು ಮಾತ್ರ ಉತ್ಕೃಷ್ಟ ಮಟ್ಟದ್ದು. ಮುದ್ರೆ ಇಲ್ಲದ ವಸ್ತುಗಳು ಕಳಪೆಮಟ್ಟದವು ಎನ್ನುವ ನಂಬಿಕೆಯಿಂದ, ಇವರ ವಸ್ತುಗಳನ್ನು ಕೊಳ್ಳಲು ಮುಂದೆ ಬರಲಾರರು. ಆದರೂ ಬಲವಂತವಾಗಿ ಮಾರಾಟ ಮಾಡುವ ಸಲುವಾಗಿ ಗ್ರಾಹಕರನ್ನು ಕಾಡಿ ಬೇಡಿಯೆ ಮಾರಾಟ ಮಾಡುವಂತ ಸ್ಥಿತಿ ಬಂದಿದೆ.

ಜಾಹಿರಾತು ಸಮಸ್ಯೆ

ಜಾಹಿರಾತುಗಳ ಮೂಲಕ ವಸ್ತುಗಳಿಗೆ ಬೇಡಿಕೆ ಸೃಷ್ಟಿ ಮಾಡುವುದಾಗಿದೆ. ಜಾಹಿರಾತು, ಲಿಖಿತ ಮುದ್ರಿತ ಚರಣಗಳು, ಚಿತ್ರಗಳು, ನಕ್ಷೆಗಳು, ರೇಖಾಚಿತ್ರಗಳು, ಸಂಕೇತ ಇತ್ಯಾದಿ ಚಿಹ್ನೆಗಳಿಂದ ಕೂಡಿರುತ್ತದೆ. ಜಾಹಿರಾತು ಸಂಪರ್ಕ ಮಾಧ್ಯಮವಾಗಿದೆ. ಬೇಡಿಕೆ ಸೃಷ್ಟಿಸುವ ಸಾಮರ್ಥ್ಯ ಪಡೆದುಕೊಂಡಿದೆ. ಅನೇಕ ಕ್ರಯಗಾರರೊಡನೆ ಜಾಹಿರಾತು ಅತಿ ಕಡಿಮೆ ವೆಚ್ಚದಲ್ಲಿ ಸಂಪರ್ಕ ಕಲ್ಪಿಸುತ್ತದೆ. ಪ್ರಕಟಣಾ ಒಕ್ಕಣೆಯನ್ನು ಆಕರ್ಷಕವಾಗಿ ರೂಪಿಸಿ ಸರಿಯಾದ ಪದಗಳ ಮೂಲಕ ನಿರ್ದಿಷ್ಟ ಮಟ್ಟದಲ್ಲಿ ಪ್ರಕಟಿಸಲಾಗುವುದು. ವಿಕ್ರಯಗಾರ ಬೇಡಿಕೆ ಸ್ಪಷ್ಟ ಮಾಡಲು ಇರಬಹುದಾದ ಸುಲಭ ಸಾಧನವಾಗಿದೆ. ವಸ್ತುಗಳ ಗುಣಮಟ್ಟ ಆಕರ್ಷಕವಾಗಿ ತೋರಿಸುವುದರಿಂದ ಬೇಡಿಕೆ ಹೆಚ್ಚುತ್ತದೆ. ಆದರೆ ಅಲೆಮಾರಿಗಳಿಗೆ ಇಂತಹ ವ್ಯವಸ್ಥೆ ಇರುವುದಿಲ್ಲ. ತಮ್ಮ ವಸ್ತುವಿಗೆ ತಾವೆ ಜಾಹಿರಾತು ನೀಡಿ ಅಂದರೆ ಬೀದಿಯಲ್ಲಿ ಹೋಗುವಾಗ ಮನೆಗಳ ಮುಂದೆ ವಸ್ತುವಿನ ಗುಣಮಟ್ಟ ಹೇಳುವ ಮೂಲಕ ಮಾರಾಟ ಮಾಡುವ ಸ್ಥಿತಿ ಬಂದಿದೆ. ವಿಪರ್ಯಾಸವೆಂದರೆ ಜಾಹಿರಾತಿನಲ್ಲಿ ತೋರಿಸುವ ವಸ್ತುವನ್ನು ಕೊಳ್ಳಲು ಬಳಕೆದಾರರು ಮುಂದೆ ಬರುವುದರಿಂದ ಇವರ ಮಾರಾಟದಲ್ಲಿ ಪೆಟ್ಟು ಬಿದ್ದಿದೆ.

ಸಾಗಾಣಿಕೆ ಸಮಸ್ಯೆ

ಉತ್ಪಾದಿಸಿದ ವಸ್ತುಗಳು ಮಾರಾಟದಲ್ಲಿ ಸಾಗಿಸುವುದರಿಂದ ಸಾಗಾಣಿಕೆ ಉಂಟುಮಾಡುತ್ತದೆ. ಉತ್ಪಾದನಾ ಕಾಲದಿಂದ ಹಿಡಿದು ಮಾರಾಟ ಮಾಡುತ್ತಿರುವ ಕಾಲದವರೆಗೂ ಹಾಗೂ ಉಪಯೋಗಿಸುವ ಸಮಯದವರೆಗೂ ವಸ್ತುಗಳನ್ನು ಸಂಚಯ ಮಾಡುತ್ತಿರಬೇಕಾಗುತ್ತದೆ. ಏಕೆಂದರೆ ವಸ್ತುಗಳ ಸಂಚಯ ಬದಲಾಗಬೇಕಾದರೆ ಸಾಗಾಣಿಕೆ ಅತ್ಯವಶ್ಯಕವಾಗಿದೆ. ವಸ್ತುಗಳ ಸಾಗಾಣಿಕೆ ನಿರಂತರ ಆದುದೆನಲ್ಲ. ಸಾಗಾಣಿಕೆ ನಿಂತೊಡನೆಯೆ ವಸ್ತುಗಳ ಸಂಚಯ ಅತ್ಯಗತ್ಯ. ಮಾರಾಟ ವ್ಯವಸ್ಥೆ ಯಶಸ್ವಿ ಕಾರ್ಯ ವಹಿಸಬೇಕಾದಲ್ಲಿ ಅದರ ಪರಿಣಾಮಕಾರಿ ಸಾರಿಗೆ ಸಂಪರ್ಕ ಬೇಕಾಗಿದೆ. ಈ ತರಹದ ವ್ಯವಸ್ಥೆ ಉದ್ದಿಮೆಗಳಲ್ಲಿ ಕಾಣಬಹುದು. ಆದರೆ ಅಲೆಮಾರಿಗಳಲ್ಲಿ ಈ ರೀತಿಯ ವ್ಯವಸ್ಥೆ ಇರುವುದಿಲ್ಲ. ಉತ್ಪಾದಿಸಿದ ವಸ್ತು ಅಥವಾ ಮಾರಾಟದ ವಸ್ತು ಮಾರುಕಟ್ಟೆಗೆ ಇಲ್ಲವೆ ಮಾರಾಟದ ಪ್ರದೇಶದಲ್ಲಿ ವಸ್ತುಗಳನ್ನು ಸಾಗಿಸಲು ಸಾರಿಗೆ ವ್ಯವಸ್ಥೆ ಕಂಡುಬರುವುದಿಲ್ಲ. ಬದಲಾಗಿ ಕಾಲ್ನಡಿಗೆಯಲ್ಲಿ ವಸ್ತುಗಳನ್ನು ಸಾಗಿಸುವರು. ಇದರಿಂದ ದಣಿವು ಮತ್ತು ಸಮಯ ಎರಡು ಪೋಲಾಗುತ್ತವೆ. ಬಹಳಷ್ಟು ವಸ್ತುಗಳನ್ನು ಸಾಗಿಸಬೇಕಾದರೆ ಬಸ್ಸು, ರೈಲು, ಲಾರಿ, ಟೆಂಪೊ ಇತ್ಯಾದಿಗಳ ಮೂಲಕ ಹಣಕೊಟ್ಟು ಮಾರಾಟ ಮಾಡುತ್ತಾರೆ. ಬರುವುದೆ ಕಡಿಮೆ ಲಾಭ ಅದರಲ್ಲಿಯೆ ಸಾರಿಗೆಗೂ ಕೊಡಬೇಕಾಗುವುದು ಮಾರಾಟದಲ್ಲಿ ಸಮಸ್ಯೆ ಇದ್ದರೂ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ.

ಮಾರುಕಟ್ಟೆ ಸಮಸ್ಯೆ

ನಿರ್ದಿಷ್ಟ ಸ್ಥಳದಲ್ಲಿ ವಸ್ತುಗಳನ್ನು ಮಾರುವ ಉದ್ದೇಶಕ್ಕಾಗಿ ಸಂಗ್ರಹಣೆ ಮಾಡಿದರೆ ಅದನ್ನು ಮಾರಾಟದ ಸ್ಥಳ ಅಥವಾ ಮಾರುಕಟ್ಟೆ ಎನ್ನಬಹುದು. ಸಂಗ್ರಹಣೆಯ ಉದ್ದೇಶ ದೊಡ್ಡ ಪ್ರಮಾಣದಲ್ಲಿ ವಸ್ತು ಸಂಗ್ರಹಣೆ ಇರುವುದುಂಟು. ಆದರೆ ವಸ್ತುಗಳ ಒಡೆತನದ ವರ್ಗಾವಣೆ ಮಾಡುವದೆ ಸಂಗ್ರಹಣೆಯ ಮೂಲ ಉದ್ದೇಶವಾಗಿದೆ. ಅಂತಹ ಸ್ಥಳ ಮಾರಾಟದ ಸ್ಥಳವಾಗುತ್ತದೆ. ಈ ರೀತಿಯ ಮಾರುಕಟ್ಟೆಯ ವ್ಯವಸ್ಥೆ ಅಲೆಮಾರಿಗಳಿಗೆ ಇಲ್ಲವಾಗಿದೆ. ಮಾರುಕಟ್ಟೆಯಲ್ಲಿ ತರಕಾರಿ, ಮೀನು, ಮಾಂಸ, ಬಟ್ಟೆ, ದಿನಸಿ ಇತ್ಯಾದಿಗಳೆಲ್ಲವೂ ಇರುವುದಾದರೂ ಅವರು ಖಾಯಂ ಸ್ಥಳದಲ್ಲಿ ತೆರಿಗೆ ನೀಡಿ ಮಾರಾಟ ಮಾಡುವರು. ಅಲೆಮಾರಿಗಳಿಗೆ ಈ ರೀತಿಯ ವ್ಯವಸ್ಥೆ ಇಲ್ಲವಾಗಿದೆ. ದಿನಂಪ್ರತಿ ಅಲೆಯುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಅಲೆದು ಮಾರಾಟ ಮಾಡಬೇಕಾಗುತ್ತದೆ. ಒಮ್ಮೊಮ್ಮೆ ಮಾರುಕಟ್ಟೆಯ ಕೊನೆಯ ಸ್ಥಳದಲ್ಲಿ ಮಾರಾಟ ಮಾಡುತ್ತಾರೆ. ಬೇರೆ ವಸ್ತುಗಳನ್ನು ಕೊಂಡಂತೆ ಇವರ ವಸ್ತುಗಳನ್ನು ಕೊಳ್ಳಲು ಯಾರು ಮುಂದೆ ಬರಲಾರರು. ವಸ್ತುಗಳು ಅಸ್ಪೃಶ್ಯ ಮನೋಭಾವದಲ್ಲಿ ನೋಡಲಾಗುವವರು. ವಸ್ತುವಿಗೆ ಬೇಡಿಕೆ ಬರಬೇಕಾದರೆ ಮಾರುಕಟ್ಟೆಯಲ್ಲಿ ಇವರಿಗಾಗಿ ಸ್ಥಳಬೇಕಾಗಿದೆ.

ಕೊಳ್ಳುವವರ ಸಮಸ್ಯೆ

ಯಾರಿಗಾಗಿ ವಸ್ತುಗಳು ಉತ್ಪಾದಿಸಿರುತ್ತಾರೊ ಅವರು ಉತ್ಪಾದಿಸಿದ ವಸ್ತುಗಳನ್ನು ಕೊಂಡರೆ ಮಾತ್ರ ವಸ್ತುವಿಗೆ ಹಾಗೂ ಉತ್ಪಾದಿಸಿದ ವ್ಯಕ್ತಿಗೆ ಬೆಲೆ ಬರುವುದುಂಟು. ಇಲ್ಲದಿದ್ದರೆ ವಸ್ತುವನ್ನು

ಉತ್ಪಾದಿಸಿ ನಷ್ಟವಾಗಬಹುದು. ಅದನ್ನು ನಂಬಿಕೊಂಡವರು ಬೀದಿಗಿಳಿಯಬೇಕಾಗುತ್ತದೆ. ಅಲೆಮಾರಿಗಳು ವಸ್ತುಗಳನ್ನ ಉತ್ಪಾದಿಸುತ್ತಾರೆ. ಕೊಂಡು ತಂದು ಮಾರಾಟಮಾಡಲು ಮುಂದೆ ಬರುತ್ತಾರೆ. ಆದರೆ ಕೊಳ್ಳುವವರ ಸಮಸ್ಯೆಯಿದೆ. ಪ್ರತಿ ಮನೆ, ಬೀದಿಗಳಲ್ಲಿ ಹೋಗಿ ವಸ್ತುವನ್ನು ಮಾರಾಟ ಮಾಡಿದರೂ ಕೊಳ್ಳಲಾರರು. ಅಲ್ಪಸ್ವಲ್ಪ ಜನರು ಮಾತ್ರ ಕೊಳ್ಳಬಲ್ಲರು. ಗ್ರಾಮೀಣ ಪ್ರದೇಶದಲ್ಲಿ ಕೆಲವರು ಕೊಳ್ಳುತ್ತಾರೆ. ಕೊಂಡರು ಬೆಲೆಯಲ್ಲಿ ಇಳಿತ ತಪ್ಪಿದ್ದಲ್ಲ ಕೆಲವು ಸಲ ಹಣ ದವಸ ಆಹಾರ ಇತ್ಯಾದಿಗಳ ಮೂಲಕ ಕೊಳ್ಳುವರು. ಕೊಳ್ಳುವವರ ಮನೋಭಾವನೆಯು ಅಲೆಮಾರಿಗಳ ವಸ್ತುವಿನೊಂದಿಗೆ ಉತ್ತಮ ಸಂಬಂಧ ಬೆಸೆದುಕೊಂಡಿಲ್ಲ.

ಆಧುನಿಕ ವಸ್ತುಗಳ ಭರಾಟೆ

ಹೊಸ ತಂತ್ರಜ್ಞಾನದ ವಸ್ತುಗಳು ಮಾರುಕಟ್ಟೆಯಲ್ಲಿ ದೊರೆಯುವುದರಿಂದ ಅಲೆಮಾರಿಗಳ ವಸ್ತುಗಳಿಗೆ ದಕ್ಕೆ ಬಂದಿದೆ. ಅದರಲ್ಲೂ ವಿಶೇಷವಾಗಿ ಪ್ಲಾಸ್ಟಿಕ್ ವಸ್ತುಗಳುಗಳು ಮಾರಾಟ ಬಂದಿರುವುದರಿಂದ ಮತ್ತಷ್ಟು ಅಲೆಮಾರಿಗಳ ಉತ್ಪನ್ನಗಳು ನೆಲಕಚ್ಚಿವೆ. ಈ ಕಾರಣಕ್ಕಾಗಿ ಉತ್ಪಾದನೆಯಲ್ಲಿ ಕಡಿಮೆ ಪ್ರಮಾಣ, ಕೌಶಲ್ಯದ ಶಿಥಿಲೀಕರಣ ಆಗುತ್ತದೆ. ವಸ್ತು ಕೊಂಡು ಮತ್ತೆ ಮಾರಾಟ, ಮಾಡಿ ಸ್ವಲ್ಪಮಟ್ಟಿಗಾದರು ಗಂಜಿ ಕಾಣುವರು.

ಕಚ್ಚಾ ಸರಕುಗಳ ಕೊರತೆ ಉಪಕರಣಗಳ ಅಭಾವ ಬಂಡವಾಳದ ಕೊರತೆ ಮಾರಾಟ ಸೌಲಭ್ಯದ ಅಭಾವ ಉತ್ಪಾದನಾ ವಿಧಾನದ ಪೈಪೋಟಿ ಮಾರುಕಟ್ಟೆ ಸಮಸ್ಯೆ, ಸಾರಿಗೆ ಸಮಸ್ಯೆ, ರಕ್ಷಣಾ ಸಮಸ್ಯೆ, ಬೆಲೆ ನಿರ್ಧಾರಗಳ ಸಮಸ್ಯೆ, ಆಧುನಿಕ ತಂತ್ರಜ್ಞನದ ಭರಾಟೆ ಇತ್ಯಾದಿಗಳ. ಮಧ್ಯೆಯು ಅಲೆಮಾರಿ ಸಮುದಾಯಗಳು ತಮ್ಮ ಸಂಪ್ರದಾಯಿಕ ದೇಶಿ ಕೌಶಲ್ಯದಿಂದ ಗಟ್ಟಿ ವಸ್ತುಗಳನ್ನು ತಯಾರಿಸುವರು.

೪.೪. ಅಲೆಮಾರಿಗಳ ಪ್ರದರ್ಶನ ಕಲೆ ಮತ್ತು ಸಂಭಾವನೆ

"ಆರ್ಟ್ ಈಜ್ ಲಾಂಗ್; ಲೈಫ್ ಈಜ್ ಶಾರ್ಟ್" ಎಂಬ ಇಂಗ್ಲಿಷಿನಲ್ಲಿರುವ ಗಾದೆಯಂತೆ ಜೀವನಕ್ಕಿಂತ ವಿಸ್ತಾರವಾದದ್ದು ಕಲೆ. ಕಲೆಯು ಕಲಿತಷ್ಟು ಕಲೆಯಿರುತ್ತದೆ. ಅದು ಮುಗಿದಷ್ಟು ಬೆಳೆಯುತ್ತಿರುತ್ತದೆ. ಈ ರೀತಿಯಾಗಿ ವೈಶಾಲ್ಯತೆಯನ್ನು ಬೆಳೆಸಿಕೊಂಡ ಕಲೆಯಿಂದ ಅನೇಕ ಸಮುದಾಯಗಳು ತಮ್ಮ ಬದುಕಿನ ಬಂಡಿಯನ್ನು ಓಡಿಸುತ್ತಿದ್ದಾರೆ. ಆರ್ಥಿಕ ಮೂಲವಿಲ್ಲದ ಅಲೆಮಾರಿಗಳು ಪರಂಪರಾಗತ ಕಾಲದಿಂದಲೂ ಕಾಪಾಡಿಕೊಂಡು ಬಂದ ಕಲೆಯಿಂದ ಅನ್ನ ದೊರಕಿಸಿಕೊಳ್ಳುತ್ತಿದ್ದಾರೆ.

'ಕಲೆ' ಎಂದರೆ ಅದೊಂದು ರೀತಿಯ ಕೌಶಲ್ಯ. ಕೌಶಲ್ಯದಿಂದ ಭಾವನೆಗಳ ಮೂಲಕ ಆಲೋಚನೆಗಳನ್ನು ಮನಮುಟ್ಟುವಂತೆ ಇತರರಿಗೆ ತಿಳಿಸುವುದು. ಅದರಿಂದ ಆನಂದ ಪಡೆಯುವುದು. ಕಲೆಗಳೆಲ್ಲವೂ ಆದಿಮಾನವನ ಮುಗ್ಧ ವಿಸ್ಮಿತ ಅನುಕರಣೆಗಳು. ಇವೆ ಮುಂದೆ ಕಲೆಯ ಹೆಸರಲ್ಲಿ ವಿಕಾಸಗೊಂಡು ಬೃಹತ್ ರೂಪವಾಗಿ ಬೆಳೆದು ನಿಂತಿವೆ.

ಕಲೆಗಳನ್ನು ಸೌಂದರ್ಯದಿಂದ ಆನಂದಿಸಿದರೆ ಮತ್ತೆ ಕೆಲವು ಕಲೆಗಳನ್ನು ನೋಡಿ ಕೇಳಿ

ಅನುಭವಿಸಬೇಕಾಗುತ್ತದೆ. ಹೀಗೆ ಆನಂದ ನೀಡುವ ಹಾಗೂ ಕಣ್ಣಿಗೆ ಸೌಂದರ್ಯ ನೀಡುವ ಕಲೆಗಳೆಲ್ಲವೂ ಪ್ರದರ್ಶನ ಕಲೆಗಳಾಗಿವೆ. ಕಲೆಗಳು ಎಂದು, ಯಾರಿಂದ, ಯಾವ ಸ್ಥಳದಲ್ಲಿ ಜನ್ಮ ತಾಳಿದವು ಎಂದು ಚರಿತ್ರೆಯ ಪುಟಗಲ್ಲಿ ನಿಖರವಾಗಿ ಕಂಡುಬರುವುದಿಲ್ಲ. ಆದರೆ ಅಲ್ಪ-ಸ್ವಲ್ಪ ಕುರುಹುಗಳಿಂದ ಕಲೆಯ ಉಗಮವನ್ನು ಅಂದಾಜು ಮಾಡಬಹುದು. ಅತ್ಯಂತ ಪ್ರಾಚೀನ ಇತಿಹಾಸವೆಂದು ಕರೆಸಿಕೊಂಡ ಈಜಿಪ್ಟ್‌ನಲ್ಲಿ ನಾಲ್ಕು ಸಾವಿರ ವರ್ಷಗಳ ಹಿಂದೆಯೆ ಧಾರ್ಮಿಕ ಉತ್ಸವಗಳಲ್ಲಿ ದೇವತೆಯ ಮುಂದೆ ಅಲ್ಲಿನ ಅರಸರು ನರ್ತಿಸುತ್ತಿದ್ದರು. ಪ್ರಾಚೀನ ಗ್ರೀಸ್‌ನಲ್ಲಿ ಉತ್ಸವದ ಸಂದರ್ಭದಲ್ಲಿ ಐವತ್ತು ಜನರ ಮೇಳವು ದೇವತೆಯ ಮುಂದೆ ಹಾಡುತ್ತ, ಕುಣಿಯುತ್ತಿದ್ದಾರೆಂದು ತಿಳಿದು ಬಂದಿದೆ.

ಇಂತಹ ಕಲೆಗಳ ಬಗ್ಗೆ ಸಾಮಾನ್ಯ ಮಾಹಿತಿ ಸಿಗಬಹುದೆ ವಿನಹ ಎಲ್ಲಿಯೂ ಕಲೆಯ ಉಗಮದ ನಿಖರತೆ ಕಾಣಲು ಸಾಧ್ಯವಾಗಿಲ್ಲ. ಇಲ್ಲಿ ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಬಹುತೇಕವಾಗಿ ಇಂದು ಅಲೆಮಾರಿಗಳು ಪ್ರದರ್ಶಿಸುವ ಕಲೆಗಳಲೆಲ್ಲವೂ ಹೆಚ್ಚಾಗಿ ಆರಾಧನಾ ಕಲೆಗಳಾಗಿವೆ. ಆ ಆರಾದನಾ ಕಲೆಗಳೆ ಅವರ ಬದುಕಾಗಿ ರೂಪಾಂತರಗೊಂಡಿವೆ ಎಂದು ಹೇಳಬಹುದು. "ಪ್ರಕೃತಿಯ ಮತ್ತು ಮಾನವನ ಅನುಸಂಧಾನ ಅಲ್ಲಿನ ಪ್ರಾಣಿ-ಪಕ್ಷಿಗಳ ನೈಸರ್ಗಿಕ ಪರಿಳಿತ ಹಾಗೂ ನಿಗೂಢಗಳಿಂದ ಭಯಗ್ರಸ್ತನಾಗಿ, ಒಮ್ಮೊಮ್ಮೆ ಉಲ್ಲಾಸಭರಿತನಾಗಿ, ಕೆಲವೊಮ್ಮೆ ಶೌರ್ಯಭರಿತನಾಗಿ ಅನುಕರಣೆ ಮಾಡಿದ ಅಭಿವ್ಯಕ್ತಿಯು ಆತನ ಕುಣಿತವಾಗಿ ಹೊರಹೊಮ್ಮಿರಬೇಕು."[15] ಕುಣಿತಗಳು ಉದ್ದೇಶ ಪೂರಕವಾಗಿದ್ದಲ್ಲ. ಆಕಸ್ಮಿಕ ಎಂಬುದನ್ನು ಮರೆಯಬಾರದು. ಕುಣಿತವು ಆರಾಧನಾ ಸಂದರ್ಭದಲ್ಲಿಯೆ ಹುಟ್ಟಿರುವ ಸಾಧ್ಯತೆಯೆ ಹೆಚ್ಚು. ಕಾರಣ ಇವತ್ತು ಆರಾಧಿಸುವ ಕಲೆಗಳೆಲ್ಲವೂ ಅಥವಾ ಪ್ರದರ್ಶಿತಗೊಳ್ಳುವ ಕಲೆಗಳೆಲ್ಲವೂ ದೇವತೆಯ ಮುಂದೆ ಇಲ್ಲವೆ ದೇವರ ಜೊತೆ ಜೊತೆಯಲ್ಲಿ ಪ್ರದರ್ಶನ ಕಾಣುತ್ತವೆ.

ಹೀಗೆ ಆದಿಮಾನವನು ಪ್ರಕೃತಿಯ ವಿಕೋಪ ಎಂದು ತಿಳಿದುಕೊಂಡ ಪ್ರಕೃತಿಯು ತನ್ನಿಂದ ಮುನಿಸಿಕೊಂಡಿದೆ ಎಂದು ಭಾವಿಸಿದನು. ತಾನು ಶಾಂತವಾಗಿರಲು ತನ್ನ ಕಲ್ಪನೆಯಂತೆ ದೇವತೆಯನ್ನು ಸೃಷ್ಟಿಸಿಕೊಂಡನು. ದೇವರ ಆರಾಧಾನೆ ಮಾಡುತ್ತಾ, ಕುಣಿಯುತ್ತಾ, ಅನೇಕ ರೀತಿಯಲ್ಲಿ ವರ್ತಿಸಿದ್ದನು. ದೇವತೆಯು ಶಾಂತಿ ಇರಲೆಂದು ಪ್ರಾಣಿ-ಪಕ್ಷಿಗಳನ್ನು ಬಲಿ ನೀಡುವ ಆಚರಣೆಗಳ ಮೂಲಕ ಬಂದನು. ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ದೇವರ ಮುಂದೆ ಬೇಡಿಕೊಂಡನು. ಮಳೆ ಬಾರದಿದ್ದಾಗ ಮಳೆ ಭರಿಸಲು ಆತನ ಕಲ್ಪನೆಯ ಪ್ರಯತ್ನದಂತೆ ಪ್ರಯತ್ನಿಸಿರಬಹುದು. ಅಂದಿನಿಂದ ಆರಾಧಾನೆಯು ಕಾಂಕ್ರೀಟ್ ಶೈಲಿಯಂತೆ ಕೂಡಿದೆ. ಇದು ಪ್ರದರ್ಶನ ಕಲೆಯಾಗಿ ಬೆಳಕು ಕಂಡಿದೆ. ಹೀಗೆ ಬೆಳಕು ಕಂಡ ಕಲೆಯು ಏಕವ್ಯಕ್ತಿಯಿಂದ ಜನ್ಮತಾಳಿದೆಯೊ ಸಮೂಹದಿಂದ ಜನ್ಮ ತಾಳಿದೆಯೊ ಎಂದು ನಿಖರವಾಗಿ ಹೇಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವತ್ತು ಪ್ರದರ್ಶನಗೊಳ್ಳುವ ಅಲೆಮಾರಿಗಳ ಕಲೆ ಎಲ್ಲವೂ ಸಮೂಹ ಸಮ್ಮೇತವಾಗಿ ಭಾಗವಹಿಸುತ್ತವೆ. ಆದ್ದರಿಂದ ವ್ಯಷ್ಟಿ ಮತ್ತು ಸಮಷ್ಠಿ ಎರಡು ಸಂದರ್ಭದಲ್ಲಿಯೂ ಜನ್ಮತಾಳಿರುವ ಸಾಧ್ಯತೆಗಳು ಹೆಚ್ಚು. ಮಾನವರು ಕಲೆಯನ್ನು ನಿರಂತರ ಪೋಷಿಸಿಕೊಂಡು ಪ್ರಗತಿಯತ್ತ ಸಾಗಿಸಿದರು. ದೇವರ ಮುಂದೆ ಪ್ರದರ್ಶನ ಮಾಡಲು ಗೀತೆ, ನೃತ್ಯದೊಂದಿಗೆ ಸಂಗೀತ ವಾದ್ಯವನ್ನು

ಬಳಸಿಕೊಂಡರು. ಹಾಡುಗಳನ್ನು ಸೃಷ್ಟಿಸಿ ಹಾಡಿಗೆ ತಕ್ಕಂತೆ ರಾಗಗಳನ್ನು ಸೃಷ್ಟಿಸಿಕೊಂಡರು. ಆ ಹಾಡು ಮತ್ತು ರಾಗದಲ್ಲಿ ಹೆಚ್ಚು ಪ್ರಾಧಾನ್ಯತೆ ಕೊಡಲು ಪಾತ್ರಗಳನ್ನು ಸೃಷ್ಠಿಸಿ ಕೊಂಡರು. ವ್ಯವಸ್ಥಿತವಾದ ಗೀತನೃತ್ಯ, ಸಂಗೀತ ಅಭಿನಯ ಮಾತುಗಾರಿಕೆ ಇತ್ಯಾದಿಗಲೆಲ್ಲವೂ ಏಕಕಾಲದಲ್ಲಿ ಪ್ರದರ್ಶನ ಮಾಡಿದರು. ಉಡುಪು, ಬಣ್ಣ ಮುಂತಾದವುಗಳನ್ನು ಬಳಸಿಕೊಂಡು ಕಲೆ ಬೆಳೆಸಲಾಯಿತು. ಮಾನವನ ಕುಶಲ ಅಭಿವ್ಯಕ್ತಿಯಾಗಿ ರೂಪಗೊಂಡ ಕಲೆಯು ಪರಂಪರೆಯಿಂದ ಪರಂಪರೆಗೆ ಹರಿದು ಬಂದಿತು. ಸಮುದಾಯದ ಬದುಕನ್ನು ನಿರಂತರ ಸಾಗಿಕೊಂಡು ಕಲೆಯು ಉಳಿದುಕೊಂಡಿದೆ. ಆದರೂ ಕಲೆಗೆ ಮಾನ್ಯತೆ ಸಿಗಬೇಕಾಗಿದೆ.

ಪ್ರಾಚೀನ ಕಾಲದಿಂದಲೂ ಅಲೆಮಾರಿಗಳು ಪ್ರದರ್ಶನ ಕಲೆಗಳು ರೂಢಿಸಿಕೊಂಡು ಬಂದಿರುವುದು ಚರಿತ್ರೆಯಲ್ಲಿ ನೋಡಬಹುದಾಗಿದೆ. ಪ್ರದರ್ಶನ ಕಲೆಗಳು ಸಮುದಾಯದ ರಂಜನೆಗೆ ಮೀಸಲಾಗಿಲ್ಲ. ಬದಲಾಗಿ ಆಳುವ ವರ್ಗಗಳು ನೆಲೆನಿಂತವರ ರಂಜನೆಗಾಗಿ ತಮ್ಮನ್ನು ತಾವೆ ಅರ್ಪಿಸಿಕೊಂಡಿದ್ದಾರೆ. ಪ್ರದರ್ಶನ ಕಲೆಗಳನ್ನು ಪೂಜ್ಯಭಾವದಿಂದ ಕಾಪಾಡಿಕೊಂಡು ಬಂದಿದ್ದಾರೆ. ಇವರು ಪ್ರದರ್ಶಿಸುವ ಕಲೆ ಯಾವ ಗುರುವಿನಿಂದ ಪಡೆದುಕೊಂಡಿಲ್ಲ. ತಾವೆ ಸಂಗೀತ ಮತ್ತು ರಾಗಗಳನ್ನು ಸಂಯೋಜಿಸಿಕೊಂಡು, ಸಾಹಿತ್ಯ ಸೃಷ್ಟಿಸಿಕೊಂಡಿದ್ದಾರೆ. ಅಭಿನಯ ಮೈಗೂಡಿಸಿಕೊಂಡು ಸುಮಧುರವಾಗಿ ಪ್ರದರ್ಶಿಸುವರು.

ಪ್ರದರ್ಶನ ಕಲೆಯ ಮುಖ್ಯ ಉದ್ದೇಶ ಬೇರೆಯವರ ದೃಷ್ಟಿಯಲ್ಲಿ ರಂಜನೆಯಾಗಿರಬಹುದು. ಆದರೆ ಸಮುದಾಯಗಳ ದೃಷ್ಟಿಯಲ್ಲಿ ಹಸಿವನ್ನು ನೀಗಿಸುವ ಹಾಗೂ ಜೀವನೋಪಾಯದ ಮಾರ್ಗಗಳಾಗಿವೆ. ಅವರ ವೈವಿಧ್ಯಮಯವಾಗಿ ರೂಪಾಂತರ ಮಾಡಿಕೊಂಡಿದ್ದಾರೆ. ಅಲೆಮಾರಿ ಸಮುದಾಯಗಳ ಕಲೆ ಎಷ್ಟರ ಮಟ್ಟಿಗೆ ಇದೆ? ಎಂಬುದನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಪ್ರದರ್ಶನ ಕಲೆ ಅಲೆಮಾರಿಗಳಿಗೆ ಆರ್ಥಿಕ ಭದ್ರತೆಯನ್ನು ಕೊಟ್ಟಿರುವುದಿಲ್ಲ. ಸಮಾಜ ನವ ನಿರ್ಮಾಣವಾದರೂ ಅವರ ಕಷ್ಟ ನಿರ್ಮೂಲನೆಯಾಗಿಲ್ಲ. ಆದರೂ ಪ್ರದರ್ಶನ ಕಲೆ ಅರಾಧ್ಯ ದೈವವಾಗಿದೆ. ಕಲೆಯಲ್ಲಿ ಕಲೆ ಆಗಿರುವುದರಿಂದ ಅದನ್ನು ಬಿಟ್ಟು ಬದುಕಲಾರರು. ದಾನ ನೀಡುವಷ್ಟು ನೀಡಲಿ ಎಂದು ಕಲೆ ಪ್ರದರ್ಶಿಸುವುದುಂಟು. ಪ್ರದರ್ಶಿಸುವ ಕಲೆಯಲ್ಲಿ ನೈತಿಕತೆ, ಸಂಗೀತ, ಸಾಹಿತ್ಯ, ಹೋರಾಟ, ಸಂಧಾನ, ಗೌರವ, ದುಡಿಮೆ, ಮೌಲ್ಯ ಅನೇಕ ಇತ್ಯಾದಿಗಳೆಲ್ಲವೂ ಒಳಗೊಂಡಿವೆ. ಆದರೂ ಪ್ರತಿಫಲಗಳಿಗಾಗಿ ಮತ್ತು ಬೇರೆಯವರ ರಂಜನೆಗಾಗಿ ಬಿತ್ತರಿಸುವರು.

ಪ್ರದರ್ಶಿಸುವ ಕಲೆಗಳು

ಕ್ರ.ಸಂ.	ಸಮುದಾಯ	ಪ್ರದರ್ಶನ ಕಲೆ
೦೧	ದೊಂಬರು	ಸಾಹಸ, ನೃತ್ಯ, ಹಾಸ್ಯಚಟಾಕಿ.
೦೨	ಕಿಳ್ಳೆ/ಶಿಳ್ಳೆಕ್ಯಾತರು	ತೊಗಲು ಗೊಂಬೆ ಆಟ.
೦೩	ಸಿಂಧೋಳ್ಳರು	ಪೋತರಾಜನ ವೇಷ.
೦೪	ಬುಡ್ಗಜಂಗಮ್	ಹಗಲುವೇಷ, ಬುರ್ರಕಥೆ.

೦೫	ಸುಡುಗಾಡು ಸಿದ್ದರು	ಬುಡಬುಡಕೆ, ಭವಿಷ್ಯ ಹೇಳುವಿಕೆ, ಮಾಟ-ಮಂತ್ರ.
೦೬	ದಕ್ಕಲಿಗರು	ಅಭಿನಯ, ನೃತ್ಯ (ಮಾದಿಗ ಸಮುದಾಯದ ಪೂರ್ವ ಕಥೆಗಳನ್ನೊಳಗೊಂಡಿವೆ.)
೦೭	ಗೊಂದಲಿಗರು	ಗೊಂದಲ ಹಾಕುವುದು, ಕವಲೆತ್ತುಆಟ.
೦೮	ಹಾವಾಡಿಗರು	ಹಾವಿನ ಆಟ, ಮಂಗನ ಆಟ, ಮಾಟ-ಮಂತ್ರ.
೦೯	ಹಂದಿಜೋಗಿ	ಕಥೆ ಹೇಳುವಿಕೆ, ಹಾಡುಗಾರಿಕೆ.
೧೦	ಚನ್ನದಾಸರು	ದಾಸರಾಟ, ಸೋಗು, ಕೀರ್ತನೆ ಹಾಡುವಿಕೆ.

೪.೪.೧. ಪ್ರದರ್ಶನ ಕಲೆ ಹಾಗೂ ಸಂಭಾವನೆ

'ಪ್ರದರ್ಶನ ಕಲೆ' ಎಂದರೆ ಈಗಾಗಲೆ ತಮ್ಮೊಳಗೆ ಸಿದ್ದಿಯಾಗಿರುವ ಕೌಶಲ್ಯವನ್ನು ತಮ್ಮ ನಟನೆ ಮತ್ತು ಭಾವನೆಗಳ ಮೂಲಕ ನೋಡುಗರ ಮನಮುಟ್ಟುವಂತೆ ಅಭಿವ್ಯಕ್ತ ಪಡಿಸಬಹುದಾದ ಕಲೆಯನ್ನು ಪ್ರದರ್ಶನ ಕಲೆ ಎಂದು ಕರೆಯಬಹುದು. ಅಲೆಮಾರಿಗಳು ಪ್ರದರ್ಶನವನ್ನು ಯಾವ ಸ್ಥಳದಲ್ಲಾದರು ಮಾಡುವುದುಂಟು. ಪ್ರತಿಯಾಗಿ ಹಣ, ದವಸಧಾನ್ಯ, ಆಹಾರ, ಬಟ್ಟೆ, ಆಭರಣಗಳು ಇತ್ಯಾದಿಗಳು ಪಡೆಯವುದುಂಟು. ಸಮುದಾಯದಲ್ಲಿ ಅಂಟಿಕೊಂಡಿರುವ ಪ್ರದರ್ಶನಕಲೆಗಳನ್ನು ಅಭಿವ್ಯಕ್ತ ಪಡಿಸಿದಾಗ ನೋಡುಗರು ಪ್ರತಿಫಲವನ್ನು ನೀಡುತ್ತಾರೆಂಬ ವಿಶ್ವಾಸದಿಂದ ಪ್ರದರ್ಶಿಸುವರು. ಆದರೆ ದಾನ ಮಾಡುವುದು, ಬಿಡವುದು ಅಪೇಕ್ಷಣೀಯ ಕೊಡಲೆ ಬೇಕೆಂಬ ನಿಯಮ ಇಲ್ಲ. ಇಂತಿಷ್ಟೆ ನೀಡಬೇಕು ಎಂಬ ಮಿತಿಯೆ ಇಲ್ಲ.

ಪ್ರದರ್ಶನ ಕಲೆಗಳಿಗೆ ರಂಗಮಂದಿರ, ಬಯಲು ಪ್ರದೇಶ, ವಿದ್ಯುತ್ ದೀಪಗಳು, ಧ್ವನಿವರ್ಧಕಗಳು, ಪಿಠೋಪಕರಣಗಳು ಇತ್ಯಾದಿ ಪರಿಕರಿಗಳು ಬೇಕಾಗಿರುವುದಿಲ್ಲ. ಬಯಲು ಬೀದಿ, ಶಾಲಾ ಮೈದಾನ, ರೈಲ್ವೆ ನಿಲ್ದಾಣ, ಬಸ್ಸುನಿಲ್ದಾಣ, ಕೃಷಿ ಮಾರುಕಟ್ಟೆ ಸ್ಥಳ ಹಾಗೂ ಪ್ರತಿ ಮನೆ ಮುಂದಿನ ಅಂಗಳದಲ್ಲಿ ಕಲೆಯ ಪ್ರದರ್ಶನ ಮಾಡುವರು. ಜಾತ್ರೆ ಹಬ್ಬಗಳಲ್ಲಿ ವಿಶೇಷ ಕಲೆ ಪ್ರದರ್ಶಿಸುವರು.

೧. ಬೀದಿಯಲ್ಲಿ ಪ್ರದರ್ಶನ

ಬೀದಿಗಳ ಮಧ್ಯದಲ್ಲಿ ತಮ್ಮ ಕಲೆಯನ್ನು ಅಲೆಮಾರಿ ತಂಡದ ಸದಸ್ಯರು ಪ್ರದರ್ಶನ ಮಾಡುವುದುಂಟು. ಇವರ ಕಲೆ ಬೀದಿಯ ಜನರು ದಾರಿಯಲ್ಲಿರುವ ಜನರು ಮಹಿಳೆಯರು ವೀಕ್ಷಿಸಿ, ಪ್ರದರ್ಶನ ಮುಗಿದ ಮೇಲೆ ತಂಡದ ಪ್ರಮುಖನು ಪ್ರತಿಫಲ ಕೇಳಲು ಮುಂದೆ ಬರುವನು. ಅವನ ಕೈಯಲ್ಲಿ ತಟ್ಟೆ ಇಲ್ಲವೆ ಬಟ್ಟೆಯನ್ನು ನೆಲದ ಮೇಲೆ ಹಾಕುವನು. ಇದರ ಪ್ರತಿಯಾಗಿ ವೀಕ್ಷಕರು ತಮಗಿಚ್ಚೆ ಬಂದಷ್ಟು ಸಂಭಾವನೆ ನೀಡುವರು.

ಸಂಭಾವನೆಯ ಸಾಧಕ ಮತ್ತು ಭಾದಕಗಳು

* ಪ್ರದರ್ಶನ ಮುಗಿಯುವ ಸಂದರ್ಭದಲ್ಲಿ ಪುರುಷರು ಹಾಗೂ ಮಹಿಳೆಯರು

ಏನು ನೀಡದೆ ಅಲ್ಲಿಂದ ತೆರಳುವರು.

* ಚಿಲ್ಲರೆ ಇಲ್ಲವೆಂದು ಹೇಳುವರು.

* ೫ ರೂಪಾಯಿ ಅಥವಾ ೧೦ ರೂಪಾಯಿವರೆಗೆ ಕೊಡವರು.

* ಮೆಚ್ಚುಗೆ ಹಾಗೂ ಚಪ್ಪಾಳೆ ಹಾಕುವರು.

೨. ಗ್ರಾಮೀಣ ಪ್ರದೇಶದ ಮನೆಯ ಮುಂದೆ ಪ್ರದರ್ಶನ

ಅಲೆಮಾರಿ ಸಮುದಾಯ ತಮ್ಮ ಕಲೆ ಪ್ರದರ್ಶಿಸಲು ಗ್ರಾಮದ ಪ್ರತಿ ಮನೆಮುಂದೆ ಹಾಡುತ್ತಾ, ಕುಣಿಯುತ್ತಾ ಅಭಿನಯಿಸುವರು. ಆಟ ಮುಗಿದ ಮೇಲೆ ಪ್ರತಿಫಲ ಕೇಳುವರು.

ದವಸಧಾನ್ಯಗಳು	ತರಕಾರಿಗಳು
ರಾಗಿ	ಮೆಣಸಿನಕಾಯಿ
ಜೋಳ	ಬೆಂಡೆಕಾಯಿ
ಶೇಂಗಾ	ಸೊಪ್ಪು
ಅಕ್ಕಿ	ಈರುಳ್ಳಿ
ನವಣೆ	ಹೀರೆಕಾಯಿ
ಸಜ್ಜೆ	ಬದನೆಕಾಯಿ

ಸಂಭಾವನೆಯ ಸಾಧಕ ಮತ್ತು ಬಾಧಕಗಳು

* ಕಲೆಗೆ ಪ್ರತಿಯಾಗಿ ಸಂಭಾವನೆ ಪಡೆಯುವುದುಂಟು.

* ಮುಂದೆ ಹೋಗಿರಿ, ಅಡುಗೆ ಮಾಡಿತ್ತೀವಿ ಎನ್ನುವರು.

* ಪೂಜೆ ಮಾಡಲಿದ್ದೇನೆ, ಮುಂದೆ ಹೋಗಪ್ಪಾ ಎನ್ನುವರು.

* ಸ್ನಾನ ಮಾಡಿಲಿದ್ದೀನಿ ಮುಂದೆ ಹೋಗಯ್ಯ

* ದಯವಿಟ್ಟು ಕೊಡಿರಿ ಎಂದು ಅಂಗಲಾಚಿದಾಗ ಹೋಗಯ್ಯ ನಮಗೆ ತಿನ್ನಲಿಕ್ಕಿಲ್ಲ ಬಂದು ಬಿಟ್ಟ ಇವರಪ್ಪ ದುಡಿದು ಇಟ್ಟಾನಿಲ್ಲಿ ಎಂದು ಬೈಗುಳ ಸುರಿಮಳೆ ತಪ್ಪಿದ್ದಲ್ಲ.

೩. ಪ್ರದರ್ಶನ ಮತ್ತು ಪುಸ್ತಕದಲ್ಲಿ ದೇಣಿಗೆ

ಗ್ರಾಮದಲ್ಲಿ ಪ್ರದರ್ಶನ ಮಾಡಿದ ಮೇಲೆ ಕೊನೆಯಲ್ಲಿ ಅಂದರೆ ಆ ಗ್ರಾಮದಲ್ಲಿ ಆಟ ಮುಗಿಯಿತು ಎಂದು ತಿಳಿದ ಮೇಲೆ ಮುಂದಿನ ಊರಿಗೆ ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಅಂತಹ ಸಂದರ್ಭದಲ್ಲಿ ಆಟ ಮಾಡಿರುವ ವ್ಯಕ್ತಿಯೂ ಪ್ರತಿ ಮನೆಗೂ ಪುಸ್ತಕ ತೆಗೆದುಕೊಂಡು ನನ್ನ ಮಗಳ ಮದುವೆ ಇದೆ. ಶುಭಕಾರ್ಯಗಳಿಗೆ ತಾವು ದೊಡ್ಡ ಮನಸ್ಸು ಮಾಡಿರಿ. ಪುಸ್ತಕದಲ್ಲಿ ಬರೆಯಿರಿ ಎಂದು

ಬೇಡುವರು. ಅನಾರೋಗ್ಯದಿಂದ ಮಗ/ಮಗಳು ಬಳಲುತ್ತಿದ್ದಾರೆ. ದಾನ ನೀಡಿರಿ ಎಂದು ಪರಿಪರಿಯಿಂದ ಕೇಳುತ್ತಾರೆ. ಪುಸ್ತಕದಲ್ಲಿ ಬರೆಯುವ ದಾನಿಗಳು ತಮಗಿಷ್ಟ ಬಂದಷ್ಟು ಹಣವನ್ನು ಬರೆದು ನೀಡುವರು.

ಹೆಸರು	ಸಂಭಾವನೆ	ಗ್ರಾಮ	ವಿಳಾಸ
ಎಂ. ನಾಗರಾಜ್	೨೫.೦೦	ಕೂಡ್ಲಿಗಿ	ಪ್ರೇಮ್ ಹೇರ್‌ಡ್ರೆಸಸ್ ಕೂಡ್ಲಿಗಿ ತಾ. ಬಳ್ಳಾರಿ ಜಿ.
ಪಿ. ಕೊಟ್ರೇಶ್	೨೫.೦೦	ಕೂಡ್ಲಿಗಿ	ಫೈನನ್ಸ್ ಕಾರ್ಪೋರೇಷನ್ ಕೂಡ್ಲಿಗಿ ತಾ. ಬಳ್ಳಾರಿ ಜಿ.
ಡಿ.ಬಿ. ಜ್ಯೋತಿ	೧೦೧.೦೦	ಕೂಡ್ಲಿಗಿ	ಭರಮಪ್ಪ, ೨ನೇ ವಾರ್ಡ್ ಕೂಡ್ಲಿಗಿ ತಾ. ಬಳ್ಳಾರಿ ಜಿ.
ಎಚ್. ಮೂಗಮ್ಮ	೫೧.೦೦	ಹಿರೇಹೆಗ್ಡಾಳ್	ಶ್ರೀ ನಿಂಗಪ್ಪ, ಡಾ.ಬಿ.ಆರ್.ಅಂಬೇಡ್ಕರ್ ನಗರ, ಹಿರೇಹೆಗ್ಡಾಳ
ಎ. ಪ್ರಕಾಶ್‌ಚಾರಿ	೨೧.೦೦	ಕೂಡ್ಲಿಗಿ	ಕೂಡ್ಲಿಗಿ ತಾ. ಬಳ್ಳಾರಿ ಜಿ.
ಎ.ಕೆ. ತಿಪ್ಪೇಸ್ವಾಮಿ	೭೫.೦೦	ರಾಮಸಾಗರ ಹಟ್ಟಿ	ಕೂಡ್ಲಿಗಿ ತಾ. ಬಳ್ಳಾರಿ ಜಿ.
ಕುಮಾರ್‌ನಾಯ್ಕ	೧೦.೦೦	ಕಗ್ಗಲಗಟ್ಟೆ ತಾಂಡ	ಹೂವಿನಹಡಗಲಿ ತಾ.
ಸಿ.ಜೆ. ಸಿದ್ದಲಿಂಗಪ್ಪ	೨೧.೦೦	ಕೂಟ್ಟೂರು	ಕೂಡ್ಲಿಗಿ ತಾ. ಬಳ್ಳಾರಿ ಜಿ.
ಎನ್. ಕಲ್ಲಪ್ಪ	೫೧.೦೦	ಕೂಡ್ಲಿಗಿ	ಕೂಡ್ಲಿಗಿ ತಾ. ಬಳ್ಳಾರಿ ಜಿ.

ಸಂಭಾವನೆಯ ಸಾಧಕ ಮತ್ತು ಭಾದಕಗಳು

* ಹತ್ತು ರೂಪಾಯಿ ಯಿಂದ ನೂರು ರೂಪಾಯಿಗಳವರೆಗೆ ಕೊಡುವುದುಂಟು. ಕೆಲವು ವ್ಯಕ್ತಿಗಳು ನೀಡುವುದಿಲ್ಲ.
* ಸಹಾಯ ಮಾಡಿದವರಿಗೆ ಕೃತಜ್ಞತೆ ಸಲ್ಲಿಸುತ್ತಾರೆ.

೪. ಸಿಂಧೋಳ್ಳರ ಪ್ರದರ್ಶನ

ಸಿಂಧೋಳ್ಳ ಸಮುದಾಯದ ಪೂಜಾರಿಯು ಬುಟ್ಟಿ ಮತ್ತು ಪೆಟ್ಟಿಗೆ ದೇವರು ಹೊತ್ತುಕೊಂಡು ಗ್ರಾಮ, ನಗರ, ಓಣಿ, ವಠಾರದ ಮಧ್ಯದಲ್ಲಿ ಭಿಕ್ಷೆ ಬೇಡುವುದಕ್ಕೆ ಹೋಗುವನು. ಬುರ್ರಬುರ್ರ ವಾದ್ಯದೊಂದಿಗೆ ತೀವ್ರಗತಿಯಲ್ಲಿ ಕುಣಿಯುತ್ತಾ ಹ್ಹಾ... ಹ್ಹಾ... ಹ್ಹಾ... ಹಾ....... ಎಂದು ಬರಿ ಮೈಯಲ್ಲಿ ಚಾಟಿಯಿಂದ ಹೊಡೆದುಕೊಳ್ಳುತ್ತಾ, ದೇವರಿಗೆ ರಕ್ತವನ್ನು ಸುರಿಸುತ್ತಾ, ದೇವಿಯ ಬಗ್ಗೆ

ಹಾಡಿನ ಮೂಲಕ ಗುಣಗಾನ ಮಾಡುತ್ತಾನೆ.

ಹ್ಹಾ ಹ್ಹಾ ಹ್ಹಾ........
ದುರುಗಮ್ಮ ಬಂದಾಳೆ
ಮಾರಮ್ಮ ಬಂದಾಳೆ
ದಾನಮ್ಮ ಬಂದಾಳೆ
ಕೂಗಮ್ಮ ಬಂದಾಳೆ
ಸುಂಕಲಮ್ಮ ಬಂದಾಳೆ
ಸೀತಾಳಮ್ಮ ಬಂದಾಳೆ
ದಾಡಾರಮ್ಮ ಬಂದಾಳೆ
ಪರಕೆ ಹೊತ್ತವರು



ಹಣವನ್ನಾಗಲಿ, ಕಾಳಕಡಿಯನ್ನಾಗಲಿ ಕೊಡಬೇಕು ಇಲ್ಲದಿದ್ದರೆ ಬಹಳ ಹೊಣೆಯಾಗುವುದು ಹರಕೆ, ಮುಡುಪು ಹೊಂದಿರುವವರು ನಿಮ್ಮ ಮುಡುಪು ಕೊಡಬೇಕು ಎಂದು ತನ್ನ ಹೆಂಡತಿಯೊಂದಿಗೆ ಈ ಮೇಲಿನಂತೆ ಓಣಿಯಲ್ಲಿ ಹೇಳುತ್ತಾ ಹೋಗುತ್ತಾನೆ. ಮಹಿಳೆ ಬುರ್ರಬುರ್ರ ವಾದ್ಯ ನುಡಿಸುತ್ತಾಳೆ. ಜನರು ಸಂಭಾವನೆಯ ಕೊಡುವರು.

ಸಂಭಾವನೆಗಳು

ಆಹಾರ	ದವಸಧಾನ್ಯ	ಹಣಕಾಸು	ಆಭರಣಗಳು	ಉಡುಪು
ಅನ್ನ	ಅಕ್ಕಿ	೫೦ ಪೈಸೆ	ದೇವಿಗೆ ಬೆಳ್ಳಿ ಮೂಗುತಿ	ನಿಕ್ಕರ್
ಚಾಪತಿ	ಬೇಳೆ	೧ ರೂ.	ಸೊಂಟಪಟ್ಟಿ	ಹಳೆ ಲುಂಗಿ
ಸಾರು, ರೊಟ್ಟಿ	ರಾಗಿ	೨ ರೂ.	ಗೆಜ್ಜೆ	ಹಳೆ ಸೀರೆ
ಸಿಹಿತಿಂಡಿ	ನವಣೆ	೩ ರೂ.	ಬೆಂಡೋಲಿ	ಹಳೆ ಬಟ್ಟೆ
ಪಲವ್	ಸಜ್ಜೆ	೪ ರೂ.	ಲಿಂಗದಕಾಯಿ	ಚೂಡಿದಾರ
ಪಾಯಸ	ಮೆಕ್ಕೆಜೋಳ	೫ ರೂ.	ಮಾಂಗಲ್ಯ ಸರ	ಕುಪ್ಪಸ
ಇತ್ಯಾದಿಗಳು	ಇತ್ಯಾದಿಗಳು	೧೧-೨೦ ರೂ.	ಛತ್ರಿ, ಮುಖವಾಡ ಇತ್ಯಾದಿ	ಇತ್ಯಾದಿ

ಸಂಭಾವನೆ ಪಡೆದ ನಂತರ ಮೊರದಲ್ಲಿ ದವಸಧಾನ್ಯ, ಹಣಕಾಸು, ಆಭರಣ ಸ್ವೀಕಾರ ಮಾಡಿ ಅದನ್ನು ಮೂರು ಹಿಡಿ ಜೋಳ ಮತ್ತು ದೇವಿ ಭಂಡಾರ ಮೊರದಲ್ಲಿ ಹಾಕಿ ಕೊಡುವರು. ಇದನ್ನು ಭಕ್ತರು ದೇವಿಯ ಪ್ರಸಾದವೆಂದು ಸ್ವೀಕಾರ ಮಾಡಿಕೊಳ್ಳುವರು.



೫. ದವಸ ಮತ್ತು ಬಟ್ಟೆಗಳನ್ನು ಸಂಭಾವನೆಯಾಗಿ ಪಡೆಯುವುದು

ಪ್ರತಿ ಮನೆ ಮನೆಗೂ ಅಲೆಮಾರಿಗಳು ಹೋಗುವುದುಂಟು. ಕಾರಣ ಅವರ ಮೈಮೇಲೆ ಬಟ್ಟೆ ಇರುವುದಿಲ್ಲ. ಅವರು ಅಮ್ಮ.., ಅಪ್ಪ..., ನಾವು ಮುಂದಿನ ಊರಿಗೆ ಹೋಗುತ್ತೇವೆ. ನಿಮ್ಮ ಮನೆಯಲ್ಲಿ ದವಸ ಆಗಲಿ ಅಥವಾ ಬಟ್ಟೆಯಾಗಲಿ ದಾನ ಮಾಡ್ರಿಯಪ್ಪಾ..., ಎಂದು ಕೇಳುವರು.

೬. ಸ್ತ್ರೀಯರ ಗಂಗೆ-ಗೌರಿ ಪ್ರದರ್ಶನ

ಅಲೆಮಾರಿ ಮಹಿಳೆಯರು ಗಂಗೆ-ಗೌರಿ ಮೂರ್ತಿಗಳನ್ನು ಮಾಡಿಕೊಂಡು, ಪ್ರತಿ ಮನೆ ಮನೆಗೂ ಭಿಕ್ಷೆಬೇಡಲು ಹೋಗುವುದುಂಟು. ಶಿವನ ಗಂಗೆ-ಗೌರಿ ಜಗಳಗಳನ್ನು ಹಾಡುಗಳ ಮೂಲಕ ಗೊಂಬೆ ಕುಣಿಸುತ್ತಾ ಆಟ ಪ್ರದರ್ಶಿಸುವರು. ಇದರ ಪ್ರತಿಯಾಗಿ ಭಿಕ್ಷಾಟನೆಯಲ್ಲಿ ಅನ್ನ, ಮುದ್ದೆ, ರೊಟ್ಟಿ, ಸಿಹಿತಿಂಡಿ, ಇತರೆ ಪದಾರ್ಥಗಳನ್ನು ಪಡೆಯುವುದುಂಟು ಕೆಲವರು ಮುಂದಕ್ಕೆ ಕಳಿಸುವವರು ಇದ್ದಾರೆ.

೭. ಅಲೆಮಾರಿ ಮಕ್ಕಳ ಅಭಿನಯ

ಅಲೆಮಾರಿ ಮಕ್ಕಳು ಭುಜದ ಮೇಲೆ ಜೋಳಿಗೆ ಹಾಕಿಕೊಂಡು, ಕೈಯಲ್ಲಿ ತಟ್ಟೆ ಹಿಡಿದುಕೊಂಡು ಬಸ್‌ನಿಲ್ದಾಣ, ರೈಲ್ವೆನಿಲ್ದಾಣ, ನಗರ ಮತ್ತು ಹಳ್ಳಿ ಹಳ್ಳಿಗೂ ಒಮ್ಮೊಮ್ಮೆ ಹೋಗುವುದುಂಟು. ಭಿಕ್ಷೆ ಬೇಡುವ ಬಾಲಕ ಮನೆ ಮುಂದಗಡೆಯಲ್ಲಿ ಹೊಟ್ಟೆ ಹೊಡೆದು ಕೊಳ್ಳುತ್ತಾನೆ, ಕುಣಿಯುತ್ತಾ, ಭಿಕ್ಷೆಯನ್ನು ಕೇಳುವನು. ಮಕ್ಕಳನ್ನು ನೋಡಿದವರು ಸಂಭಾವನೆ ನೀಡುವುದುಂಟು.

ಕ್ರ.ಸಂ.	ಆಹಾರ	ದವಸಧಾನ್ಯ	ಹಣಕಾಸು
೦೧	ರೊಟ್ಟಿ	ಅಕ್ಕಿ	೧ ರೂ.
೦೨	ಮುದ್ದೆ	ಜೋಳ	೨ ರೂ.
೦೩	ಅನ್ನ	ನವಣೆ	೩ ರೂ.
೦೪	ಸಾರು	ಶೇಂಗಾ	೪ ರೂ.
೦೫	ಪಲಾವ್	ಮೆಕ್ಕೆ ಜೋಳ	೫ ರೂ.

೮. ಸಂತೆಯಲ್ಲಿ ಪ್ರದರ್ಶನ

ಅಲೆಮಾರಿಗಳು ಸಂತೆಯಲ್ಲಿ ವಿಶೇಷ ಭಿಕ್ಷಾಟನೆಯ ಕಲೆ ಪ್ರದರ್ಶನ ಮಾಡುವರು. ಅಂದು ಅವರಿಗೆ ಜನದಟ್ಟಣೆ ಇರುವುದರಿಂದ ಅಧಿಕ ಭಿಕ್ಷೆ ಸಿಗುವ ಸ್ಥಳಗಳನ್ನು ನೋಡಿಕೊಂಡು ಪ್ರದರ್ಶನ ಮಾಡುವರು. ನಂತರ ಪ್ರತಿಫಲ ಬೇಡುವರು, ಪ್ರತಿಯಾಗಿ ಸೇರಿದ ಜನರು ಆಹಾರ, ಹಣಕಾಸು ಮತ್ತು ಇತ್ಯಾದಿ ಸಾಮಾಗ್ರಿಗಳನ್ನು ಕೊಡುವುದುಂಟು.

ಕ್ರ.ಸಂ.	ತರಕಾರಿ	ಆಹಾರ	ಹಣಕಾಸು
೦೧	ಈರುಳ್ಳಿ	ಮಂಡಕ್ಕಿ	೫೦ ಪೈ.
೦೨	ಮೆಣಸನಕಾಯಿ	ಮೆಣಸಿನಕಾಯಿ	೧ ರೂ.
೦೩	ಟೊಮೊಟು	ವಡೆ, ಮಿರ್ಚಿ	೨ ರೂ.
೦೪	ಬದನೆಕಾಯಿ	ಕಾರ, ತಿಂಡಿ	೩ ರೂ.

ಸಂತೆಯಲ್ಲಿ ತಾಯತ / ಮಂತ್ರದ ಮರಾಟ

ಅಲೆಮಾರಿಗಳಾದ ದೊಂಬರು, ಹಾವಾಡಿಗರು, ತಮ್ಮ ಆಟಗಳನ್ನು ತೋರಿಸುತ್ತ ತಂದಿರುವ ಮಂತ್ರದ ತಾಯತ ಮತ್ತು ಇತರೆ ಔಷಧಿ ಮರಾಟ ಮಾಡಲು, ಆಟ ನೋಡಲು ಬಂದಿರುವ ಜನಗಳ ಹತ್ತಿರ ಬಂದು, "ಸ್ವಾಮಿ, ಅಪ್ಪ, ಅವ್ವಾ, ಅಣ್ಣ... ಈ ಮಂತ್ರ ತೆಗೆದು ಕೊಳ್ಳಿ ನಿಮಗೆ ಮೈನೋವು, ಕೆಟ್ಟ ಕನಸುಗಳು, ಹೆದರಿಕೆ, ಭಯ, ರಾತ್ರಿಯಲ್ಲಿ ಬರುವ ಭೂತ, ಪಿಶಾಚಿ, ದುಷ್ಟಶಕ್ತಿಗಳಿಂದ ದೂರ ಇರುವಂತೆ ಮಾಡುವ ಅಪಾರ ಶಕ್ತಿ ಹೊಂದಿದೆ. ಇದರಿಂದ ನಿಮಗೆ ಯಾವುದೆ ಕಾಯಿಲೆಗಳು ಬರುವುದಿಲ್ಲ" ಎಂದು ಆ ಮಂತ್ರದ ಗುಣಗಳು ತಿಳಿಸುತ್ತ ಪ್ರದರ್ಶನದ ಜೊತೆಯಲ್ಲಿ ಇಂತಹ ವಸ್ತುಗಳನ್ನು ಮಾರಾಟ ಮಾಡಲು ಉತ್ಸಹಕನಾಗಿರುತ್ತಾನೆ.

ಖಾಯಿಲೆಗಳು	ಬಳಸುವ ಔಷಧಿಗಳು	ಬೆಲೆ
ಜ್ವರ	ಚಿಕ್ಕ ಜಾದು	೫ ರೂ.
ಹೊಟ್ಟೆನೋವು	ಉಡದ ತುಪ್ಪ	೫ ರೂ.
ತೆಲೆನೋವು	ಚಿಕ್ಕೆ	೧೦ ರೂ.
ತೊಡೆನೋವು	ಸಳಂಗಪುಡಿ	೧೫ ರೂ.
ರಾತ್ರಿ ದುಸ್ವಪ್ನಗಳು	ಗಂಜಿನ ಪುಕ್ಕೆ	೧೦ ರೂ.
ಮಕ್ಕಳ ಭೇದಿ	ಮಾವುಪುಡಿ	೧೦ ರೂ.

ಹೋಟೆಲ್ ಸಮೀಪ ಪ್ರದರ್ಶನ

ಸುಡುಗಾಡು ಸಿದ್ಧರು ತಮ್ಮ ಮೋಡಿಕಾರದ ಆಟವನ್ನು ಹೋಟೆಲ್‌ಗಳ ಮುಂಭಾಗದಲ್ಲಿ ಪ್ರದರ್ಶನ ನೀಡುವುದುಂಟು. ಗುಂಡುನುಂಗುವುದು, ಚೇಳು ಮೂಗಿನಲ್ಲಿ ಬಿಟ್ಟುಕೊಳ್ಳುವುದು, ಕಿವಿಯಲ್ಲಿ ನಾಣ್ಯ ಸೇರಿಸಿಕೊಳ್ಳುವುದು, ಪ್ರಾಣಿಗಳ ರೀತಿಯಲ್ಲಿ ಕಿರಿಚಿಕೊಳ್ಳುವುದು ಹೀಗೆ ಹಲವು ಮನೋರಂಜನೆ ಚಮತ್ಕಾರ ಪ್ರದರ್ಶನ ಮಾಡುವರು. ಹೋಟೆಲ್‌ನಲ್ಲಿ ಹಾಗೂ ಅಲ್ಲಿನ ಹತ್ತಿರವಿರುವ ಜನಗಳು ಹಣ ಭಿಕ್ಷೆ ನೀಡುವುದುಂಟು.

ಶಾಸ್ತ್ರ ಪ್ರದರ್ಶನ

ಬುಡಕಟ್ಟು ಸಮುದಾಯಗಳಾದ ಕೊರವಂಜಿ, ರಾಮಕೋಡಿಗಳು, ಬುಡುಬುಡುಕೆಯವರು ಇತ್ಯಾದಿಗಳು. ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಕಂಡುಬರುವುದುಂಟು. ಇವರು ಬಸ್ಸು, ರೈಲ್ವೆ ನಿಲ್ದಾಣದ ಹೊರ ಭಾಗ ಸಂತೆ, ಶಾಲಾ, ಚಿತ್ರಮಂದಿರದ ಮೈದಾನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಜನರನ್ನು "ನೋಡಿ ಬಾ ಅಣ್ಣ.... ಬಾ ಅಕ್ಕ...... ಬಾ ಯಾಜಮಾನ್ರೆ,..... ನಿಮ್ಮ ರಾಶಿ ಫಲ ನೋಡುತ್ತೆವೆ.... ನಿಮ್ಮ ಮನೆಗೆ ಲಕ್ಷ್ಮಿ ಬರುವಳು.... ನಿಮ್ಮ ಕಂಟಕಗಳನ್ನು ದೂರ ಮಾಡುವುದು"[16], ಕೆಲಸಗಳಲ್ಲಿ ಆಗುವ ಅಡ್ಡಿ ಅತಂಕಗಳ ಪರಿಹಾರವಾಗಿ ಶಾಸ್ತ್ರ ಹೇಳುತ್ತೇವೆ. ಹೀಗೆ ದುಃಖ, ಸಮಸ್ಯೆಗಳು ಕಂಡುಬಂದರು ಪರಿಹರಿಸುವುದಾಗಿ ಹೇಳುವರು. ಕೇಳಲು ಬಂದ ವ್ಯಕ್ತಿಯನ್ನು ತಮ್ಮ ಶಾಸ್ತ್ರದ ಮೂಲಕ ಅವನಲ್ಲಿ ನಡೆಯುವ ಮುಂದಿನ ಭವಿಷ್ಯವನ್ನು ಸವಿಸ್ತಾರವಾಗಿ ಹೇಳುವ ಮುಂಚೆ ಅವನಿಗೆ ಶಾಸ್ತ್ರದ ಕಾಣಿಕೆಯನ್ನು ಮೊದಲು ನೀಡಬೇಕಾಗುತ್ತದೆ. ಅದು ಸಂಪ್ರಾದಾಯ ವಾಗಿದೆ. ಭವಿಷ್ಯದಲ್ಲಿರುವ ವಿಷಯಗಳನ್ನು ನಂಬಿಕೆಯ ರೀತಿಯಲ್ಲಿ ಶಾಸ್ತ್ರದಂತೆ ಮನವರಿಕೆಯಾಗುವಂತೆ ಹೇಳುತ್ತಾನೆ.

ಸಂಭಾವನೆಯ ರೂಪದಲ್ಲಿ

*ಎಲೆ ಮತ್ತು ಅಡಿಕೆಯಲ್ಲಿ ೧.೨೫ ಪೈ.ಯಿಂದ ೧೧ ರೂ., ೨೧ ರೂ., ೫೧ರವರೆಗೆ ಕಾಣಿಕೆ ನೀಡುವುದುಂಟು.

*ಮದುವೆ ತಡವಾಗಿದ್ದರೆ ಶಾಸ್ತ್ರದ ಪ್ರಕಾರ ೧೦೦ ಗ್ರಾಂ ಕೊಬ್ಬರಿ, ಒಂದು ನಿಂಬೆ ಹಣ್ಣು, ೨೦ ರಿಂದ ೫೦ ರೂಪಾಯಿ ಪಡೆಯುವರು.

*ಮಕ್ಕಳ ಫಲವಂತಿಕೆ ತಡವಾದರೆ, ಒಂದು ಕೋಳಿ ಬಲಿಯಾಗಿ ನೀಡಬೇಕಾಗಿದೆ.

ಸಂಘ-ಸಂಸ್ಥೆಗಳಿಂದ ಪ್ರದರ್ಶನ

ನಗರ ಮತ್ತು ಗ್ರಾಮಗಳಲ್ಲಿ ಅಭಿವೃದ್ಧಿಯತ್ತ ಸಾಗುತ್ತಿರುವುದರಲ್ಲಿ ಸಂಘಸಂಸ್ಥೆಗಳ ಪಾತ್ರ ಅಮೋಘವಾದದು. ಹೈದ್ರಾಬಾದ್ ಕರ್ನಾಟಕದಲ್ಲಿ ಅನೇಕ ಸಂಘಸಂಸ್ಥೆಗಳಿವೆ. ಬುಡಕಟ್ಟು ಸಮುದಾಯಗಳಿಗೆ ನಿರಂತರ ಸಾಮಾಜಿಕ ಬದಲಾವಣೆಗಳಿಗೆ ಗಮನಹರಿಸಲು ಪ್ರಯತ್ನಿಸುತ್ತಿದೆ. ಬುಡಕಟ್ಟು ಸಂಸ್ಕೃತಿಯ ಉಳಿಸಿಕೊಳ್ಳುವ ಅನೇಕ ಕಾರ್ಯಕ್ರಮಗಳಿಗೆ ಇವರನ್ನು ಆಹ್ವಾನಿಸುವುದುಂಟು. ಅಲೆಮಾರಿಗಳು ತಮ್ಮ ಪ್ರದರ್ಶನಗಳ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮೆಚ್ಚುಗೆಯೂ ಪಡೆದಿರುವುದುಂಟು.

ಸಂಭಾವನೆಗಳು

ಸಂಘಸಂಸ್ಥೆ	ಪ್ರದರ್ಶನ ಕೊಟ್ಟ ಸಮುದಾಯ	ಸ್ಥಳ	ಪ್ರದರ್ಶನ ಸಹಾಯ	ಆಹಾರ
ಸಂಪರ್ಕ ಸಂಸ್ಥೆ	ಜೋಗಿ	ಕೂಡ್ಲಿಗಿ	೧೦೦ ರೂಪಾಯಿ	ಊಟ/ತಿಂಡಿ
ಮೈರಾಡ	ದೊಂಬರು	ಕೊಟ್ಟುರು	೧೦೧ ರೂಪಾಯಿ	ಊಟ/ತಿಂಡಿ

ಶ್ರೀ ರೇಣುಕಾ ಗ್ರಾಮೀಣ-ಅಭಿವೃದ್ಧಿ ಸಂಸ್ಥೆ	ಹೆಳವರು	ಹಿರೇಕುಂಬಳ ಕುಂಟೆ	೧೦೧ ರೂಪಾಯಿ	ಊಟ/ತಿಂಡಿ
ಸ್ನೇಹ ಸಂಸ್ಥೆ	ಸುಡ್ಗುಗಾಡು ಸಿದ್ದ	ಕೂಡ್ಲಿಗಿ	೧೦೧ ರೂಪಾಯಿ	ಊಟ/ತಿಂಡಿ
ಮಹಿಳಾ ಸಂಘ	ಸಿಂಧೋಳ್ಳು	ಕಂಪ್ಲಿ	೧೦೧ ರೂಪಾಯಿ	ಊಟ/ತಿಂಡಿ

ಜಾತ್ರೆ, ಉತ್ಸವ ಹಾಗೂ ಹಬ್ಬಗಳಲ್ಲಿ ಪ್ರದರ್ಶನ

ರಾತ್ರಿ ನಿದ್ದೆಯಿಂದ ದೂರವಿರಲು ಹಾಗೂ ಊರಿಗೆ ಒಳ್ಳೆಯದಾಗುತ್ತದೆಂಬ ಮನೋಭಾವನೆಯಿಂದ ಅಲೆಮಾರಿ ಕಲಾ ತಂಡಗಳನ್ನು ಆಹ್ವಾನಿಸುವುದುಂಟು. ಆ ತಂಡದಿಂದ ಪುರಾಣದ ಕಥೆಗಳನ್ನು, ಹಾಸ್ಯಗಳನ್ನು, ನೃತ್ಯ ಗೀತೆಗಳ ಮನೋರಂಜನೆ ನೀಡಲು ಮುಂದಾಗುವರು. ಪ್ರದರ್ಶನ ರಾತ್ರಿಯಿಂದ ಬೆಳಗಿನ ಸಮಯದವರೆಗೆ ನಡೆಯುತ್ತದೆ ನಂತರ ಇವರ ಪ್ರದರ್ಶನದ ಪ್ರತಿಯಾಗಿ ಸಂಭಾವನೆ ನೀಡುವುದುಂಟು.

ಕ್ರ.ಸಂ.	ಸಮುದಾಯಗಳು	ಸಂಭಾವನೆ
೦೧	ಗೊಂದಲಿಗರು	ಬಸ್ ಚಾರ್ಜ
೦೨	ಜೋಗಿಯರು	ತಿಂಡಿ ರಾತ್ರಿ ಊಟ
೦೩	ಬುರ್ರಕಥಾಮೇಳ	ಧೂಮಪಾನ, ಮಧ್ಯಪಾನ ಜೊತೆಯಲ್ಲಿ ಈ ಮೂರು ಸಮುದಾಯಗಳು ೫೦೦ ರಿಂದ ೧೦೦೦ ರೂಪಾಯಿ ಸಂಭಾವನೆ ನೀಡುವುದುಂಟು.

ಸಾವಿನ ತಿಥಿಗಳಲ್ಲಿ ಪ್ರದರ್ಶನ

ಕುಟುಂಬದಲ್ಲಿ ಹಿರಿಯರ ಶಾಂತಿಗಾಗಿ ತಿಥಿ ಮಾಡಿಸುವುದುಂಟು. ಇಂತಹ ಕಾರ್ಯಕ್ರಮಗಳಲ್ಲಿ ಗೊಂದಲಿಗ ಮತ್ತು ಜೋಗಿ ಸಮುದಾಯದವರನ್ನು ಕರೆಸುತ್ತಾರೆ. ಇವರಿಂದ ದೇವರ ಕಥೆ ಮತ್ತು ಭಜನೆಗಳು ಹಾಡಿಸಲಾಗುತ್ತದೆ. ಸಮುದಾಯಗಳಿಗೆ ಊಟೋಪಚಾರ, ಸಂಭಾವನೆ ೫೦೦ ರಿಂದ ೧೦೦೦ ರೂಪಾಯಿಗಳವರಗೆ ಕೊಡುವುದುಂಟು.

ಸಮ್ಮೇಳನಗಳಲ್ಲಿ ಪ್ರದರ್ಶನ

ಅಲೆಮಾರಿಗಳು ಜನಪದ, ಸಾಹಿತ್ಯ, ಸಮ್ಮೇಳನ, ಹಂಪಿ ಉತ್ಸವ, ಮೈಸೂರು ದಸರಾ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಲೆ ಪ್ರದರ್ಶಿಸಲು ಆಹ್ವಾನಿಸುವರು. ಇವರ ಆಹ್ವಾನದ ಮೇರೆಗೆ ತಮ್ಮ ಕಲೆ ಪ್ರದರ್ಶಿಸುವರು. ಪ್ರದರ್ಶನದ ಸಂಭಾವನೆಯಾಗಿ ಪ್ರಯಾಣ ಭತ್ಯೆ, ಊಟದ ಖರ್ಚು, ಜೊತೆಯಲ್ಲಿ ೧೦೦೦ ದಿಂದ ೫೦೦೦ ರೂಪಾಯಿಗಳವರೆಗೆ ಆರ್ಥಿಕ ಸಹಾಯ ನೀಡುವುದುಂಟು.

ಬರಗಾಲದಲ್ಲಿ ಪ್ರದರ್ಶನ

ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಬಾರದಿದ್ದಾಗ, ಮಳೆ ಬರುವ ಸಲುವಾಗಿ ದೇವಸ್ಥಾನಗಳಲ್ಲಿ ದೇವರ ಹೆಸರಿನಲ್ಲಿ ಪೂಜೆ ಮಾಡಿಸುವುದುಂಟು. ಇಂತಹ ಸಂದರ್ಭದಲ್ಲಿ ಜೋಗಿ ಸಮುದಾಯದವರನ್ನು ಕೀರ್ತನೆಗಳು, ಪುರಾಣ ಕಥೆ ಹೇಳಲು ಕರೆಸುವುದುಂಟು. ಈ ರೀತಿ ಸಮುದಾಯದವರು ಕೀರ್ತನೆಗಳು, ಪುರಾಣ ಕಥೆಗಳನ್ನು ಹೇಳುವುದರಿಂದ ವರುಣನ ಕೃಪೆಯಿಂದ ಗ್ರಾಮದಲ್ಲಿ ಮಳೆ ಬರುವುದು ಎಂಬ ನಂಬಿಕೆಯಿದೆ.

ಸಮುದಾಯ	ಸಂಭಾವನೆ
ಜೋಗಿ	ಪ್ರಯಾಣ ಭತ್ಯೆ, ಊಟದ ಖರ್ಚು ಹಾಗೂ ೧೦೦ ರಿಂದ ೨೦೧ ರವರೆಗೆ ನಗದು ಹಣ ನೀಡುತ್ತಾರೆ.

ಶಾಲೆಗಳಲ್ಲಿ ಪ್ರದರ್ಶನ

ದೊಂಬರ ಸಮುದಾಯ ಪ್ರಾಥಮಿಕದಿಂದ ಪ್ರೌಢಶಾಲೆಯವರೆಗೆ ಹೋಗುವುದುಂಟು. ಅವರ ಶಾಲೆಯಲ್ಲಿ ಶಿಕ್ಷಕರ ಅನುಮತಿಯನ್ನು ಪಡೆದುಕೊಂಡು, ಶಾಲಾ ಮಕ್ಕಳಿಗಾಗಿ ರಂಜನೆ ನೀಡುವರು. ವಿವಿಧ ಬಗೆ ಬಗೆಯ ಪ್ರದರ್ಶನಗಳನ್ನು ಮಾಡಿ ಮಕ್ಕಳಿಗೆ ಸಂತೋಷವಾಗುವಂತೆ ಮಾಡುವರು. ಎಲ್ಲ ಆಟಗಳನ್ನು ಪ್ರದರ್ಶನವಾಗಿ ನೀಡುತ್ತಾರೆ. ಪ್ರತಿಯಾಗಿ ಮಕ್ಕಳಲ್ಲಿ ೫೦ ಪೈಸೆಯಿಂದ ೧ ರೂಪಾಯಿ ನೀಡುತ್ತಾರೆ. ಅಲ್ಲದೆ ಶಿಕ್ಷಕರು, ಸಿಬ್ಬಂದಿಗಳಲ್ಲಿ ಸಂಭಾವನೆಯನ್ನು ಭಿಕ್ಷಾವನ್ನಾಗಿ ಸ್ವೀಕರಿಸುತ್ತಾರೆ.

ಅಂತರರಾಜ್ಯ ಮತ್ತು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರದರ್ಶನ

ಸಮುದಾಯಗಳ ಬಗ್ಗೆ ಆಸಕ್ತಿಯಿರುವ ಕೆಲವರು ಅಲೆಮಾರಿ ತಂಡಗಳನ್ನು ಕರೆದುಕೊಂಡು ರಾಜ್ಯದ ವಿಶ್ವವಿದ್ಯಾಲಯ, ಅಂತರರಾಜ್ಯ ವಿಶ್ವವಿದ್ಯಾಲಯಗಳು, ಜಾನಪದ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವುದುಂಟು. ಇವರು ತಮ್ಮ ಕಲೆ ಪ್ರದರ್ಶನ ನೀಡುವರು. ಅದರ ಪ್ರತಿಯಾಗಿ ಸಂಭಾವನೆಯನ್ನು ಪಡೆಯುವರು.

ಪ್ರದರ್ಶನ ಮತ್ತು ಪ್ರಾಣಿ-ಪಕ್ಷಿಗಳನ್ನು ಸಂಭಾವನೆಯಾಗಿ ಪಡೆಯುವುದು

ಹಗಲುವೇಷವನ್ನುಅನೇಕ ಸ್ಥಳಗಳಲ್ಲಿ ಮನೋಜ್ಞವಾಗಿ ಪ್ರದರ್ಶಿಸುವರು. ಇದರ ಪ್ರತಿಯಾಗಿ ಹಸು, ಕೋಳಿ, ಎತ್ತು, ಎಮ್ಮೆ, ಮೇಕೆ, ಕುರಿ ಇತ್ಯಾದಿಗಳನ್ನು ಸಂಭಾವನೆಯ ರೂಪದಲ್ಲಿ ದಾನ ಪಡೆಯುವರು. ದಾನವನ್ನು ಸ್ವೀಕರಿಸಿಕೊಂಡು ದಾನ ನೀಡಿದ ವ್ಯಕ್ತಿಗೆ ನಿಮ್ಮ ಮನೆ, ನೀವು ಮಾಡುವ ಪ್ರತಿಯೊಂದು ಕೆಲಸಗಳು ಯಾವುದೆ ಅಡ್ಡಿ-ಅತಂಕಗಳಿಲ್ಲದೆ ನಿರ್ವಿಘ್ನವಾಗಿ ನಡೆಯಲಿ ಎಂದು ಹಾರೈಸುತ್ತಾರೆ. ಹೀಗೆ ಅಲೆಮಾರಿಗಳು ತಮ್ಮಲ್ಲಿರುವ ಕಲಾವಂತಿಕೆಯಿಂದ ಪ್ರದರ್ಶನ ಮಾಡುತ್ತಾ ಅದರಿಂದ ಬಂದ ಸಂಭಾವನೆಯಿಂದ ಊಟ ಮಾಡುವರು. ಇದೇ ದೊಡ್ಡ ಆದಾಯವೆಂದು ಭಾವಿಸುವರು.

ಈ ಮೇಲೆ ಹೇಳಿದ ಸಂಭಾವನೆ ಹೈದ್ರಾಬಾದ್ ಕರ್ನಾಟಕದಲ್ಲಿ ಎಲ್ಲಾ ಪ್ರದರ್ಶನ ತಂಡಗಳಿಗೆ ಸಿಗುತ್ತವೆ. ಎಂದು ಹೇಳಾಲಾಗದು. ಕೆಲವೆ ತಂಡದಲ್ಲಿ ಕಂಡುಬರುತ್ತದೆ. ಇಂದಿನ ಅಲೆಮಾರಿಗಳ ಕಲೆಯನ್ನು ಇತರೆ ಸಮುದಾಯಗಳು ಅನುಕರಣೆ ಮಾಡಿ, ಬೇರೆ ರೀತಿಯಲ್ಲಿ ಸಂಭಾವನೆ ಪಡೆಯುತ್ತಿದ್ದಾರಂತೆ.

ಪ್ರದರ್ಶನದಲ್ಲಿ ತೊಡಗಿಸಿಕೊಂಡವರ ಸ್ತ್ರೀ ಮತ್ತು ಪುರುಷ ಅನ್ವಯಗೊಂಡ ಶೇಕಡವಾರು

ಸಮುದಾಯಗಳು	ಪ್ರದರ್ಶನಗಳು	ಗಂಡು	ಹೆಣ್ಣು	ಶೇಕಡವಾರು
ದೊಂಬರು	ಸರ್ಕಸ್, ಹಾವಾಟ	೧೫	೧೫	೧೬
ಕಿಳ್ಳೆ/ಶಿಳ್ಳೇಕ್ಯಾತ	ತೊಗಲುಗೊಂಬೆಯಾಟ	೧೧	೦೬	೯
ಬುಡ್ಗಜಂಗಮ್	ಹಗಲುವೇಷ, ಬುರ್ರಕಥೆ	೨೨	೦೫	೧೫
ಸಿಂಧೋಳ್ಳು	ಪೋತರಾಜನ ವೇಷ	೨೫	೨೫	೨೬
ಸುಡುಗಾಡುಸಿದ್ಧ	ಮೋಡಿ ಆಟಗಾರರು	೧೪	-	೮
ದಕ್ಕಲಿಗರು	ಮಾದಿಗರ ಮೂಲಕಥೆ	೦೮	೦೩	೬
ಗೊಂದಲಿಗರು	ಗೊಂದಲಿಹಾಕುವರು	೧೩	-	೭
ಹಂದಿಜೋಗಿಗಳು	ಕಥೆಗಳು, ಲಘು ನರ್ತನ	೧೬	-	೯
ಚನ್ನದಾಸರು	ದಾಸರಾಟ, ತತ್ವಪದಗಳು	೦೮	-	೪

ಈ ಮೇಲ್ಕಾಣಿಸಿದ ಪ್ರದರ್ಶನ ಕಲೆಯಲ್ಲಿ ತೊಡಗಿಕೊಂಡಿರುವ ಸಮುದಾಯಗಳ ಜನಸಂಖ್ಯೆ ವಾರುಗಳಲ್ಲಿ ಶೇ. ೨೬ರಷ್ಟು ಸಿಂಧೋಳ್ಳು ಸಮುದಾಯವು ಪ್ರದರ್ಶನದಲ್ಲಿ ಪ್ರಥಮ ಸ್ಥಾನ ತೊಡಗಿಸಿಕೊಂಡರೆ, ಶೇ. ೧೫ರಷ್ಟು ಬುಡ್ಗಜಂಗಮ್‌ರು ದ್ವಿತೀಯ ಸ್ಥಾನದಲ್ಲಿ ಹಾಗೂ ಉಳಿದ ಸಮುದಾಯಗಳು ತೃತೀಯ ಸ್ಥಾನದಲ್ಲಿ ಪ್ರದರ್ಶನ ಕಲೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಉತ್ಪಾದನೆ, ಮಾರಾಟ ಮತ್ತು ಪ್ರದರ್ಶನದಲ್ಲಿ ನೋಡುವಂತೆ ಕೂಲಿ, ಪಶುಗಾರಿಕೆ, ರೀಪೇರಿ, ಚಿಂದಿಹಾಯುವಿಕೆ, ಕಾಡಿನ ಪರಿಕರ, ಭಿಕ್ಷಾಟನೆಗಳಲ್ಲಿ ಇನ್ನುಳಿದವರು ಇತರೆ ಕೆಲಸಗಳಾಗಿ ತೊಡಗಿಸಿಕೊಂಡಿದ್ದಾರೆ.

೪.೪.೨. ಅಲೆಮಾರಿಗಳ ಪ್ರದರ್ಶನ ಕಲೆಯ ವಿಧಗಳು

ಸಮುದಾಯಗಳಲ್ಲಿ ವೈವಿಧ್ಯಮಯ ಕಲೆಗಳು ನಿಧಿ ತುಂಬಿಕೊಂಡಿದೆ. ನಿಧಿಯಿಂದ ವ್ಯಕ್ತಿಗಳಿಗೆ, ಮಹಿಳೆಯರಿಗೆ, ಅಧಿಕಾರಿವರ್ಗದವರಿಗೆ ಪ್ರತಿಯೊಂದು ಕ್ಷೇತ್ರದಲ್ಲಿ ಬಿತ್ತರಿಸಿದಾಗ ಇದರಿಂದ ಅಲೆಮಾರಿಗಳು ರೂಪಿಸಿಕೊಂಡಿದ್ದಾರೆ. ಇದು ಸಂಸ್ಕೃತಿಯ ಅನನ್ಯತೆಯು ಹೌದು. ಬದುಕನ್ನು ಇವರು ಪ್ರದರ್ಶಿಸುವ ಪ್ರದರ್ಶನದಲ್ಲಿ ಒಂದೊಂದು ಕಲೆಯಲ್ಲಿಯೂ ಕೃತಿಗಳನ್ನೊಳಗೊಂಡಿದೆ ಹಾಗೂ ಕೌಶಲ್ಯ, ತಾತ್ವಿಕತೆ ಇದೆ. ಸಮಾಜದಲ್ಲಿ ಮನೋರಂಜನೆ ಹಾಗೂ ವೈವಿಧ್ಯಮಯ ಕಲೆಗಳು ನಡೆಯುವುದನ್ನು ಈ ಅಧ್ಯಯನದಲ್ಲಿ ಚಿತ್ರಿಸಲಾಗಿದೆ.

೧. ಗೀತಾ ಪ್ರಧಾನ ಪ್ರದರ್ಶನ ಕಲೆಗಳು

ಪ್ರದರ್ಶನ ಕಲೆಯಲ್ಲಿ ಕಥೆಯನ್ನು, ಹೇಳುತ್ತಾ ಆಟ ಮುಂದುವರಿಯುವುದು. ಆದರೆ ಇಲ್ಲಿ ಕಥೆಗಿಂತ ಗೀತೆ ಪ್ರಧಾನವಾಗಿರುತ್ತದೆ. ಗೀತೆಯೊಂದಿಗೆ ಲಘು ನರ್ತನ ಹಾಡುಗಳೊಂದಿಗೆ ಆಟವು ಮುಂದುವರಿಯುವುದು. ಉದಾ: ಗೊಂದಲಿಗರು, ಚನ್ನದಾಸರು/ದೊಂಬಿದಾಸರು/ದಕ್ಕಲಿಗರು.

೨. ವಾದ್ಯ ಪ್ರಧಾನ ಪ್ರದರ್ಶನ ಕಲೆಗಳು

ಕಲೆಯಲ್ಲಿ ಸಂಭಾಷಣೆಗೆ ತಕ್ಕ ಹಾಗೆ ಮಧ್ಯ ಮಧ್ಯದಲ್ಲಿ ತುಂಬಾ ರಸವಾದ ವಾದ್ಯವು ಮೇಳೈಸುತ್ತದೆ. ಅಂದರೆ ವಾದ್ಯವೆ ಪ್ರಧಾನ ಭಾಗವಾಗಿರುತ್ತದೆ. ಉದಾ: ಬುಡಬುಡಕಿಯವರು, ರಾಮಕೊಂಡಿಗಳು. ಮಾತಿಗಿಂತ ತಮ್ಮ ವಾದ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ.

೩. ಆರಾಧಾನ ಪ್ರಧಾನ ಪ್ರದರ್ಶನ ಕಲೆಗಳು

ಧಾರ್ಮಿಕ ಭಿಕ್ಷಾಟನೆ ಪ್ರಾಚೀನ ಕಾಲದಿಂದಲೂ ಬಂದಿದೆ. ಮಾರಮ್ಮ, ದುರುಗಮ್ಮ, ಕೂಗಮ್ಮ, ಸುಂಕಮ್ಮ, ಗಾಳೆಮ್ಮ ಇತ್ಯಾದಿ ದೇವಿಯ ಗುಣಗಾನ ಮಾಡುತ್ತಾ, ರೋಷದಿಂದ, ಆವೇಶ ಭರಿತನಾಗಿ ಪೋತರಾಜನು ತನ್ನ ಕುಣಿತದೊಂದಿಗೆ ಚಾಟಿಯಿಂದ ದೇಹವನ್ನು ದಂಡಿಸುತ್ತಾನೆ. ಹಾಗು ರಕ್ತವನ್ನು ಚಿಮ್ಮಿಸುತ್ತಾನೆ. ಸಿಂಧೋಳ್ಳರು ತಮ್ಮ ವಿಶಿಷ್ಠ ಅಭಿನಯದಲ್ಲಿ ಆರಾಧಾನ ಕಲೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಅವರ ಧಾರ್ಮಿಕ ಭಿಕ್ಷಾಟನೆ ಸಂಸ್ಕೃತಿಯ ಜೀವಾಳವಾಗಿದೆ.

ಆದರೆ ಒಂದ್ಹೊತ್ತಿನ ಗಂಜಿಯು ಕೂಡ ಒಮ್ಮೊಮ್ಮೆ ಊರಿನಲ್ಲಿ ದೊರಕಲಾರದು. ಕಾರಣ ಅದೆ ಊರಿನಲ್ಲಿ ಟೀಕಾಣಿ ಹೂಡುವುದರಿಂದ ಅದೆ ಪ್ರದರ್ಶನ ಮಾಡುವುದರಿಂದ ಪದೆ ಪದೆ ನೋಡವರಾರು? ಎಂಬಂತೆ ಕಾಣುತ್ತದೆ. ಹಾಗೂ ನೋಡಿದರು ಮತ್ತೆ ಮತ್ತೆ ಭಿಕ್ಷೆ ಹಾಕುವವರು ಯಾರು? ಆದ್ದರಿಂದ ಸಮುದಾಯ ಎಲ್ಲಿಯವರೆಗೆ ಊರಿನ ಆಸರೆಯಾಗುತ್ತದೆಂದು ತಿಳಿದು ಕೊಂಡು ಅಲ್ಲಿಂದ ಜಾಗಖಾಲಿ ಮಾಡುವರು. ಅವರ ಮುಂದಿನ ಊರಿನಲ್ಲಿ ಹೊಟ್ಟೆಯನ್ನು ತುಂಬಿಸಲು ತೆರಳಬೇಕಾಗುತ್ತದೆ.

ಮುಂದಿನ ಊರಿನಲ್ಲಿ ಹೋಗಬೇಕಾಗಿರುವುದರಿಂದ ಸಂಗ್ರಹಣೆ ಮಾಡಿದ ದವಸವನ್ನು ಅದೆ ಊರಿನ ಅಂಗಡಿಯಲ್ಲಿ ಮಾರಾಟ ಮಾಡಿ, ಅದರ ಪ್ರತಿಯಾಗಿ ಹಣ ತೆಗೆದುಕೊಂಡು ಮುಂದಿನ ಅವಶ್ಯಕತೆ ಈಡೇರಿಸಿಕೊಳ್ಳುವವರು. ದವಸಗಳನ್ನು ಒಂದು ಊರಿನಿಂದ ಮತ್ತೊಂದು ಊರುಗಳಿಗೆ ಸಾಗಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಸಂಗ್ರಹಿಸಿದ ದವಸಗಳನ್ನು ತಮಗೆ ಎಷ್ಟು ಬೇಕೊ ಅಷ್ಟನ್ನು ಮಾತ್ರ ತೆಗೆದುಕೊಂಡು ಉಳಿದ ದವಸಗಳು ಅದೆ ಊರಿನಲ್ಲಿ ಮಾರಾಟ ಮಾಡುತ್ತಾರೆ. ಕೆಲವು ಪ್ರಾಣಿ-ಪಕ್ಷಿಗಳು ದಾನವಾಗಿ ಪಡೆದವುಗಳಲ್ಲಿ ಕೆಲವನ್ನು ತಮ್ಮಲ್ಲಿಯೆ ಇರಿಸಿಕೊಂಡು ಆಹಾರಕ್ಕಾಗಿ ಬಳಸಿ ಕೊಳ್ಳುತ್ತಾರೆ. ಇಂದಿನ ದಿನಗಳಲ್ಲಿ ದವಸಗಳ ಬೆಳೆಗಿಂತ, ವಾಣಿಜ್ಯ ಬೆಳೆಗಳೆ ಬೆಳೆಯುವುದರಿಂದ ದವಸವು ಸಿಗುವುದು ಕಷ್ಟಕರವಾಗಿದೆ. ಕೆಲವು ವೇಳೆ ಸಿಗುವ ಅಂದಿನ ಭಿಕ್ಷೆ ಆ ದಿನದಲ್ಲಿ ಸಾಕಾಗುವುದಿಲ್ಲ. ಇನ್ನು ಆಹಾರ ಸಂಗ್ರಹಿಸುವ ವಿಷಯ ದೂರದ ಮಾತಾಗಿದೆ. ಇದರಿಂದ ನಿರಾಸೆಯಿಂದ ಬೇರೆ ಕೆಲಸಗಳನ್ನು ಮಾಡಲು ಪ್ರಯತ್ನಿಸುತ್ತಿದ್ದರು, ದಾರಿಗಳು ಕಾಣದೆ ಮಂಕಾಗಿದ್ದಾರೆ.

೪. ಪ್ರಾಣಿ ಸಂವಹನಾ ಪ್ರಧಾನ ಪ್ರದರ್ಶನ ಕಲೆಗಳು

ಪ್ರಾಣಿ-ಪಕ್ಷಿಗಳು ಪ್ರದರ್ಶನ ಕಲೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಹಿಂದೆ ಮಾನವನು ಕೃಷಿ ಚಟುವಟಿಕೆ ಪ್ರಾಣಿಗಳನ್ನು ಪಳಗಿಸಿ, ತನ್ನ ಕೃಷಿ ಬಳಕೆಗಾಗಿ ಬಳಸಿಕೊಂಡನು. ಆದರೆ ನೆಲ-ನೆಲೆ-ಕೃಷಿ ಮೂರರಿಂದಲೂ ದೂರವಾದ ಅಲೆಮಾರಿಗಳು ಇನ್ನೊಂದು ರೀತಿಯಲ್ಲಿ ಆಲೋಚಿಸಿ ಅರಣ್ಯದಲ್ಲಿರುವ ಪ್ರಾಣಿ-ಪಕ್ಷಿಗಳು ತಂದು ಅವುಗಳಿಗೆ ತರಬೇತಿಯನ್ನು ನೀಡಿ ತಮ್ಮ ವೃತ್ತಿಗೆ ಬಳಸಿಕೊಂಡರು. ಕೇವಲ ಮಾನವರ ಹತ್ತಿರವೆ ಕೌಶವಲ್ಯವಿದೆ ಎನ್ನವುದನ್ನು ಸುಳ್ಳು ಮಾಡಲು ಪ್ರಾಣಿ ಪಕ್ಷಿಗಳಲ್ಲಿಯೂ ಕೌಶಲ್ಯವಿದೆ ಎಂದು ತೋರಿಸಿಕೊಟ್ಟರು. ಅದರಲ್ಲಿ ಕವಲೆತ್ತಿನವರು, ಹಾವಾಡಿಗರು, ಕರಡಿ ಕುಣಿಸುವರು ಇತ್ಯಾದಿಯವರು.

೫. ಅನುಕರಣಾ ಪ್ರಧಾನ ಪ್ರದರ್ಶನ ಕಲೆಗಳು

ಪ್ರದರ್ಶನ ಕಲೆಯಲ್ಲಿ ಅನುಕರಣೆ ಪ್ರಧಾನವಾಗಿರುತ್ತದೆ. ಹಿಂದೆ ನಡೆದಿರುವ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಪಾತ್ರಕ್ಕನುಗುಣವಾಗಿ ಕಥೆ ಸೃಷ್ಟಿಸಿ, ಅನುಕರಣೆಯೊಂದಿಗೆ ಅಭಿನಯಿಸುವರು. ಅವುಗಳಲ್ಲಿ ಬುಡ್ಗಜಂಗಮರ ಸಮುದಾಯದಲ್ಲಿ ಹಗಲುವೇಷದ ಸನ್ನಿವೇಶದಲ್ಲಿ ರಾಕ್ಷಸವೇಷ, ಆಂಜನೇಯ, ರಾಮ, ಕೃಷ್ಣ, ನಾರದ, ಋಷಿ, ಕರಡಿ, ಹುಲಿವೇಷ ಹೀಗೆ ನಾನಾ ರೀತಿಯ ವೇಷಗಳನ್ನು ಧರಿಸುವುದುಂಟು. ವೇಷಕ್ಕೆ ತಕ್ಕಂತೆ ಪಾತ್ರವನ್ನು ಅಭಿನಯಿಸುವರು.

೬. ಶೃಂಗಾರ ಪ್ರಧಾನ ಪ್ರದರ್ಶನ ಕಲೆಗಳು

ಹಚ್ಚೆ ಸಂಸ್ಕೃತಿ ಮೂಲಕ ಪ್ರತಿಬಿಂಬಿಸುತ್ತದೆ. ಅಲೆಮಾರಿ ಸಮುದಾಯಗಳು ಕೈಗಳಿಗೆ ಹಚ್ಚೆ ಹಾಕುವವರನ್ನು ನಾವು ನೋಡುತ್ತೇವೆ. ಇವರು ಹಚ್ಚೆ ಹಾಕುವ ವೇಷಗಳು ಹಾಗೂ ಅವರ ಕಾರ್ಯ ವೈಖರಿ ಬೇರೆ ರೀತಿಯಾಗಿರುತ್ತದೆ. ನೋವಿನ ಅನುಭವ ಆಗದಂತೆ ನಗೆಯ ಹಾಡುಗಳನ್ನು ಹೇಳುತ್ತ, ಕಥೆಗಳನ್ನು ಹೇಳುತ್ತ, ಹಚ್ಚೆ ಹಾಕಿಸುಕೊಳ್ಳುವವರಿಗೆ ಹಚ್ಚೆಯ ನೋವು ಅರಿವೆ ಬಾರದಂತೆ ಹಾಡು, ಕಥೆಗಳಲ್ಲಿ ಅವರ ಮನಸ್ಸು ಕೇಂದ್ರಿಕರಿಸುವ ತಂತ್ರವು ಇವರಲ್ಲಿರುತ್ತದೆ. ಈ ರೀತಿಯ ಕಲೆಯಲ್ಲಿ ಶೃಂಗಾರ ಪ್ರಧಾನವಾಗಿರುತ್ತದೆ ಅಂದರೆ ಗಲ್ಲ, ಮುಖ, ಕೈ, ಕಾಲು, ಹಣೆ ಇತರೆ ಅಂಗಗಳಲ್ಲಿ ತಮಗೆ ಪ್ರೀಯವಾದವರ ಹೆಸರು, ಭಕ್ತಿಗಾಗಿ ದೇವರುಗಳ ಹೆಸರು, ಅಲಂಕಾರಿಕವಾಗಿ ಕರಕಮಲಗಳಲ್ಲಿ ನಲಿದಾಡುವ ಹೂವುಗಳ ಬಳ್ಳಿ ಚಿತ್ರಗಳನ್ನು, ಪ್ರಾಣಿಪಕ್ಷಿಗಳನ್ನು ಹಾಕಿಸಿಕೊಳ್ಳುತ್ತಾರೆ.

೪.೪.೩. ಅಲೆಮಾರಿ ಪ್ರದರ್ಶನ ಕಲೆಗಳ ಕಾರ್ಯಗಳು

ಭಾರತದ ಚರಿತ್ರೆಯಲ್ಲಿಗುಲಾಮಗಿರಿ, ಉಳಿಗಮಾನ್ಯ ಪದ್ಧತಿ, ವಸಾಹತು ಶಾಹಿಗಳ ದಬ್ಬಾಳಿಕೆ ಜಾತಿ ಸಂಕರಣ, ಆರ್ಥಿಕ ಅಸಮಾನತೆಯ ದೃಷ್ಟಿಕೋನದಲ್ಲಿ ಅಲೆಮಾರಿಗಳು ಜೀವಿಸುತ್ತಲೆ ಬಂದಿದ್ದಾರೆ. ಪ್ರತಿಷ್ಠಿತ ಸಮುದಾಯಗಳಿಂದ ಆಹಾರದ ನಿರೀಕ್ಷೆಯಲ್ಲಿ ತಮ್ಮ ಕಲಾಸೇವೆಯನ್ನು ಮುಡುಪಾಗಿಟ್ಟಿದ್ದಾರೆ ಹಾಗೂ ಆರಾಧ್ಯಸಿದ್ದಾರೆ. ಆದರೆ ಅಲೆಮಾರಿಗಳು ಪ್ರದರ್ಶಿಸುವ ಕಲೆಗಳೆಲ್ಲವೂ ಹಿಂಸೆ ಸಾಹಸ,

ಮಾನಸಿಕ, ದೈಹಿಕ ಶ್ರಮದಿಂದ ಕೂಡಿದ ತೊಳಲಾಟದ್ದಾಗಿದೆ. ಇಂತಹ ಕಲೆಗಳಿಗೆ ಮಾನ್ಯತೆ ನೀಡಿದರು ಅವರಿಗೆ ನೋವು ಕೊಟ್ಟಿದೆ. ಅದನ್ನು ಅನುಭವಿಸಿ ಇತರರಿಗೆ ರಂಜನೆ ನೀಡುತ್ತಿದ್ದಾರೆ.

ಎಷ್ಟೆ ಹಿಂಸೆಯಿಂದ ಕೂಡಿದ್ದರು ಕಲೆಗಳಲ್ಲಿ ಕಾರ್ಯ ವೈಖರಿಯು ತುಂಬಾ ಪ್ರಾಧ್ಯಾನತೆಯಾಗಿದೆ. ಅನೇಕ ಜನರ ಉಪಯೋಗ ತಿಳಿಸುವ ಕೆಲಸಗಳನ್ನು ಪ್ರದರ್ಶನ ಕಲೆಯು ಒಳಗೊಂಡಿದೆ. ಆ ಕಲೆಗೆ ಜನರು ಪ್ರತಿಫಲ ನೀಡದಿದ್ದರೂ ತಮ್ಮ ಪಾಲಿಗೆ ಏನು ಮಾಡಬೇಕೊ ಅದನ್ನು ಮಾಡುತ್ತಾರೆ. ಆದರೆ ಪ್ರದರ್ಶನ ವಿಕ್ಷೀಸುವ ಜನರು ಕೈಬಿಡುವುದಿಲ್ಲವೆಂಬ ಮನೋಭಾವ ಇವರದಾಗಿದೆ. ಒಬ್ಬರು ಇಲ್ಲದಿದ್ದರು ಇನ್ನೊಬ್ಬರು ಆಸರೆಯೊಂದಿಗೂ, ಆಶಾಭಾವನೆಯೊಂದಿಗೆ ಕಲೆಯನ್ನು ಪ್ರದರ್ಶನ ಮಾಡುವುದುಂಟು. ಅಧ್ಯಯನದ ದೃಷ್ಟಿಕೋನದಲ್ಲಿ ಅಲೆಮಾರಿ ಪ್ರದರ್ಶನ ಕಲೆಗಳ ಕಾರ್ಯಗಳನ್ನು ನೋಡಲಾಗಿದೆ.

೧. ಮನೋರಂಜನಾ ಕಾರ್ಯಗಳು

೨. ಸಾಮಾಜಿಕ ಕಾರ್ಯಗಳು

೩. ಧಾರ್ಮಿಕ ಕಾರ್ಯಗಳು

೪. ಆರೋಗ್ಯದ ಕಾರ್ಯಗಳು

೫. ಶೈಕ್ಷಣಿಕ ಕಾರ್ಯಗಳು

೬. ರಾಜಕೀಯ ಕಾರ್ಯಗಳು

೭. ಸರ್ಕಾರದ ಯೋಜನಾ ಸಂಘಸಂಸ್ಥೆಯ ವೈವಿಧ್ಯಮಯ ಅಭಿವೃದ್ಧಿ ಕಾರ್ಯಗಳು

೮. ಆಶಾಬಾವನಾ ಕಾರ್ಯಗಳು

೯. ಇತಿಹಾಸ ನೆನಪಿಸುವ ಕಾರ್ಯಗಳು

೧. ಮನೋರಂಜನಾ ಕಾರ್ಯಗಳು : ಅಲೆಮಾರಿಗಳು ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ಕಲೆಗಳನ್ನು ಪ್ರದರ್ಶನ ಮಾಡುವುದುಂಟು. ಅಭಿನಯದಲ್ಲಿ ಸುಖ-ದುಃಖ, ಹಾಸ್ಯಗಳನ್ನು ನೀಡುತ್ತಾ ಮನದಲ್ಲಿರುವ ಸ್ವ-ಬಿಂಬಿತ ಚಿತ್ರಣದಂತೆ ದುಃಖ, ಆತಂಕ, ಜಿಗುಪ್ಸೆಗಳನ್ನು ನಿರ್ಮೂಲನೆ ಮಾಡಲು ಹಾಗೂ ದಣಿದ ಮನಸ್ಸುಗಳಿಗೆ ನವಶಕ್ತಿ ಬರುವಂತೆ ಹಾಡಿ, ಆಡಿ ಆನಂದ ಉಂಟುಮಾಡುತ್ತಾರೆ. ಚಿಕ್ಕ ಮಕ್ಕಳಂತೂ ಅಲೆಮಾರಿಗಳ ಕಲಾ ತಂಡದ ಜೊತೆಯಲ್ಲಿ ಬೀದಿ ಬೀದಿ ಸುತ್ತುತ್ತ ನೋಡುತ್ತಾ ಸಂತೋಷಪಡುವರು. ಒಟ್ಟಿನಲ್ಲಿ ಅಲೆಮಾರಿಗಳು ಚಿಕ್ಕವರಿಂದ, ವೃದ್ಧರವರೆಗೂ ಉಚಿತ ಮನೋರಂಜನೆಯನ್ನು ನೀಡುವರು.

೨. ಸಾಮಾಜಿಕ ಕಾರ್ಯಗಳು : ಸಮಾಜದಲ್ಲಿ ಸಂಬಂಧಗಳು ಹೇಗಿರುತ್ತವೆ ಮತ್ತು ಮೌಲ್ಯಗಳು ಎಂದರೇನು? ಆ ಮೌಲ್ಯಗಳ ಪಾತ್ರವೇನು? ಈ ಮೌಲ್ಯಗಳನ್ನು ಗಾಳಿಗೆ ತೂರಿದಾಗ ಆಗಬಹುದಾದ ಅನಾಹುತಗಳೇನು? ಮತ್ತು ನ್ಯಾಯ-ನೀತಿ ಸಹಕಾರ-ಸಹಬಾಳ್ವೆಯ ಸಾರ ಹಕ್ಕು ಮತ್ತು ಕರ್ತವ್ಯಗಳ ಪ್ರಜ್ಞೆ ಮೋಸ ವಂಚನೆ ಭಯೋತ್ಪಾದನೆ ಹೀಗೆ ಎಲ್ಲ ರಂಗಗಳಲ್ಲಿ ಪ್ರವೇಶಿಸಿ ಅದರಲ್ಲಿನ ಸಮಸ್ಯೆಯನ್ನು ಹೋಗಲಾಡಿಸಲು ಪ್ರಯತ್ನಪಡುತ್ತವೆ.

೩. ಧಾರ್ಮಿಕ ಕಾರ್ಯಗಳು : ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಅಲೆಮಾರಿಗಳು ದೇವರ ಆರಾಧಿನೆಗಾಗಿ ಕಾಯಕ ಮುಡುಪಾಗಿಟ್ಟದ್ದಾರೆ. ಅಂದರೆ ಕಲೆಯು ಆ ಸಮುದಾಯದ ಒಂದು ಕಸುಬು ಆಗಿದೆ. ಅದರ ಒಳ ತಿರುಳು ಮಾತ್ರ ಆರಾಧನೆಯಾಗಿದೆ. ಆ ಮೂಲಕ ಇವರ ನಂಬಿಕೆ ನಿಷೇಧಗಳ ಮೇಲೆ ನಡೆಯುವುದುಂಟು.

೪. ಆರೋಗ್ಯದ ಕಾರ್ಯಗಳು : ಅಲೆಮಾರಿಗಳು ಸರ್ಕಾರ ಮತ್ತು ಸಂಘುಸಂಸ್ಥೆಗಳ ಸಂಯೋಜನೆದೊಂದಿಗೆ, ಬೀದಿ ನಾಟಕ, ಸಾಮಾಜಿಕ ಸಮಸ್ಯೆಗಳ ನಿರ್ಮೂಲನೆಗಾಗಿ ಅಭಿನಯ ನೀಡುವುದುಂಟು. ಅನಾರೋಗ್ಯವನ್ನು ತಡೆಯುವಲ್ಲಿ ಪ್ರದರ್ಶನ ನೀಡುವರು. ಉದಾ: ಏಡ್ಸ್, ಮಲೇರಿಯಾ, ಟಿಬಿ, ಕ್ಯಾನ್ಸರ್, ಗರ್ಭಪಾತ ಇತ್ಯಾದಿ ಕಾಯಿಲೆಗಳ ಲಕ್ಷಣಗಳು ಹೇಗಿರುತ್ತವೆ? ಇವುಗಳ ಬಗ್ಗೆ ಅಲಕ್ಷಿತನ ಮಾಡಿದರೆ, ಯಾವ ರೀತಿಯ ಪರಿಣಾಮಗಳು ಉಲ್ಬಣಗೊಳ್ಳುತ್ತವೆ? ಇದರಿಂದ ಸಾವುಗಳು ಸಂಭವಿಸುವ ಸಾಧ್ಯತೆಗಳು ಹೇಗೆ ಹೆಚ್ಚಾಗಿರುತ್ತದೆ? ಇವುಗಳನ್ನು ತಡೆಯಲು ಹೇಗೆ ಸಾಧ್ಯವೆಂದು ಜನ ಸಾಮಾನ್ಯರಿಗೆ ನಾಟಕಗಳ ಮೂಲಕ ಪ್ರಚೋದಿಸುವುದುಂಟು. ಅವರು ಸಮಾಜದಲ್ಲಿ ಜನರು ಹೇಗೆ ಇರಬೇಕು, ಬಳಸುವ ಆಹಾರ ಸೇವನೆ ಯಾವ ರೀತಿಯಾಗಿರಬೇಕು ವಾಸಸ್ಥಳಗಳನ್ನು ಹೇಗೆ ಸುಚಿತ್ವಗೊಳಿಸಿಕೊಳ್ಳಬೇಕು ಎಂಬ ಸಲಹೆಗಳನ್ನು ಕಲೆಯ ಪ್ರದರ್ಶನ ಕಲೆಯ ಮೂಲಕ ಹೇಳುವುದುಂಟು.

೫. ಶೈಕ್ಷಣಿಕ ಕಾರ್ಯಗಳು : ಸಮುದಾಯವು ಶಿಕ್ಷಣದಿಂದ ವಂಚಿತರಾದರು ಅವರ ಹೊಟ್ಟೆಪಾಡಿಗೋಸ್ಕರ ಕೂಲಿ ಸಿಗುತ್ತದೆಂಬ ಕಾರಣಕ್ಕಾಗಿ ನಟನೆಗಳ ಮೂಲಕ ಪ್ರತಿಯೊಬ್ಬರಿಗೂ ಅಕ್ಷರದ ಅವಶ್ಯಕತೆ ಇದೆ. ಅಕ್ಷರ ಕಲಿತವರು ಅನಕ್ಷರಸ್ಥರ ಮೇಲೆ ಎಂತಹ ದೌರ್ಜನ್ಯಗಳನ್ನು ಮಾಡುವ ಸಾಧ್ಯತೆಗಳಿವೆ? ಎಂಬುದನ್ನು ವಿವಿಧ ಪಾತ್ರಗಳ ಮೂಲಕ ತೋರಿಸುವರು. ಅಕ್ಷರ ಕಲಿಯದಿದ್ದರೆ. ಸಮಸ್ಯೆಗಳು ಹೇಗೆ ಬರುತ್ತವೆಂದು ತಿಳಿಸುತ್ತಾ, ಅಕ್ಷರ ಕಲಿಯಿರಿ ಎಂಬ ಸಂದೇಶವನ್ನು ಬಿತ್ತರಿಸುತ್ತಾರೆ.

೬. ರಾಜಕೀಯ ಕಾರ್ಯಗಳು : ರಾಜಕೀಯದಿಂದ ಪ್ರದರ್ಶನಕ್ಕೆ ಮುಂದಾಗುವರು ಆ ಮೂಲಕ ನಾಯಕರುಗಳ ಅನುಗ್ರಹದೊಂದಿಗೆ ಕೂಲಿ ದೊರೆಯುವುದು. ಪಕ್ಷದ ಸಿದ್ಧಾಂತ, ಉದ್ದೇಶ ಮತ್ತು ಮತದ ಮಹತ್ವ ಆ ಮತವು ಯಾವುದರಿಂದ ದೂರವಾಗಿರಬೇಕೆಂದು ಹೇಳುತ್ತಾ, ಪ್ರತಿಯೊಬ್ಬನು ಜಾಗೃತೆಯಿಂದ ಮತಚಲಾಯಿಸಿ ದಕ್ಷನಾಯಕನನ್ನು ಸಮಾಜದಲ್ಲಿ ಕೊಡಬೇಕೆಂಬ ಸಂದೇಶ ಸಾರುವರು. ಆದರೆ ಅವರೆ ಮತದಾನದ ಹಕ್ಕುಗಳಿಂದ ದೂರವಾಗಿರುವುದು ವಿಪರ್ಯಾಸ.

೭. ಸರ್ಕಾರದ ಯೋಜನಾ ಮತ್ತು ಸಂಘುಸಂಸ್ಥೆಯ ಯೋಜನಾ ಮತ್ತು ಅಭಿವೃದ್ಧಿಯ ಕಾರ್ಯ: ಸರ್ಕಾರ ತಂದಿರುವ ಯೋಜನೆಗಳೂ ಪ್ರತಿಯೊಬ್ಬರಿಗೂ ಗೊತ್ತಾಗುವಂತೆ ಮುಟ್ಟಿಸುವಲ್ಲಿ ಇಂತಹ ತಂಡದ ಅವಶ್ಯವಿದೆ. ಆದ್ದರಿಂದ ಈ ತಂಡವನ್ನು ಹುಡುಕಾಡಿ ತಂದಿರುವ ಯೋಜನೆಗಳು, ಸೌಲಭ್ಯಗಳು, ಅದರ ಮಹತ್ವ ಪಡೆಯುವ ಬಗೆ ಇತ್ಯಾದಿ. ವಿವಾಹದ ವಯಸ್ಸು, ವರದಕ್ಷಿಣೆಯ ಅವಾಂತರ,

ಜನಸಂಖ್ಯೆ ಸಮಸ್ಯೆ ಹೀಗೆ ವಿವಿಧ ಬಗೆಯ ಬಹುಜನ ಉಪಯೋಗಿಯ ಕಾರ್ಯಗಳನ್ನು ತಮ್ಮ ತಂಡದಿಂದ ಅಭಿನಯಿಸಿ ಬಿತ್ತರಿಸುವರು. ಆದರೆ ಅವರೆ ಯೋಜನಾ ಲಾಭಪಡೆಯುವಲ್ಲಿ ಹಿಂದುಳಿದಿದ್ದಾರೆ.

೮. **ಆಶಾಭಾವನಾ ಕಾರ್ಯಗಳು** : ಬಂದಿರುವ ಸಮಸ್ಯೆ ಹೇಗೆ ಎದುರಿಸಬಹುದು. ಇದರ ಸಮಸ್ಯೆಯನ್ನು ಹಿಂದಿನ ತಲೆಮಾರಿನವರು ಹೇಗೆ ಎದುರಿಸಿ ಜಯಶೀಲರಾದರು. ಸಮಸ್ಯೆ ಬಂದಾಗ ಆತ್ಮಹತ್ಯೆ ಮಾಡಿಕೊಳ್ಳದೆ ಮುನ್ನುಗ್ಗಬೇಕೆಂದು, ಪ್ರದರ್ಶಿತ ಕಲೆಯಲ್ಲಿ ಅಭಿವ್ಯಕ್ತಪಡಿಸುವರು. ಉದಾ: ನಷ್ಟದ ಸಂದರ್ಭ ಮತ್ತು ಶುಭಕಾರ್ಯಕ್ಕಾಗಿ ಶಾಸ್ತ್ರ ಕೇಳಿಸುವುದು.

೯. **ಪುರಾಣ ಮತ್ತು ಇತಿಹಾಸ ನೆನಪಿಸುವ ಕಾರ್ಯಗಳು** : ಮಹಾಭಾರತ, ರಾಮಾಯಣ, ಶ್ರೀ ಕೃಷ್ಣಪಾರಿಜಾತ ಇತ್ಯಾದಿಗಳನ್ನು ಪಾತ್ರ ಸಮೇತವಾಗಿ ಮಾತನಾಡುವಂತೆ ಅಭಿನಯಿಸುವರು. ಹಾಗೂ ಶ್ರೀಕೃಷ್ಣದೇವರಾಯ, ಹೈದರಾಲಿ, ಬ್ರಿಟಿಷರ್ ಆಡಳಿತ, ಮೈಸೂರು ಸಾಮ್ರಾಜ್ಯದ ಆಡಳಿತ ಇತ್ಯಾದಿಗಳ ಕಾರ್ಯ ವೈಖರಿ ಕುರಿತು ಅಭಿನಯಗಳ ಮೂಲಕ ಪ್ರದರ್ಶನ ಮಾಡುವರು. ಅನೇಕ ಬಗೆಯ ಕಥೆಗಳ ಅಭಿನಯಿಸುವ ಮೂಲಕ ಹಳೆ ಚಿತ್ರಣಗಳ ಬಗ್ಗೆ ನೆನಪು ಮಾಡುತ್ತಾರೆ.

೧೦. **ಪ್ರತ್ಯೇಕ್ಷತಾ ಕಾರ್ಯಗಳು** : ಮೆಟ್ರೊಪಾಲಿಟಿಸಿಟಿ, ಸಿಲಿಕಾನ್‌ಸಿಟಿಯಲ್ಲಿ ಶ್ರೀಮಂತರು ಕೆಲವೊಂದು ಪ್ರಾಣಿಗಳನ್ನು ನೋಡಿರುವುದಿಲ್ಲ. ನೋಡಿದ್ದರು ಅವುಗಳ ಆಟದ ಪ್ರದರ್ಶನವನ್ನು ಕಂಡಿರುವುದಿಲ್ಲ. ಇಂತಹ ಕಾರ್ಯವನ್ನು ಅಲೆಮಾರಿಗಳು ಕೈಗೊಳ್ಳುವರು. ಕೋತಿ, ಕರಡಿ, ಹಾವು, ಹಸು ಇತ್ಯಾದಿ ಪ್ರಾಣಿಗಳ ಆಟ ಆಡಿಸುವುದು ಅವುಗಳ ಕೌಶಲ್ಯ ಹೇಗಿರುತ್ತದೆ ಎಂದು ಪ್ರತ್ಯೇಕ್ಷವಾಗಿ ತೋರಿಸುತ್ತಾರೆ. ಇದರಿಂದ ಪ್ರಾಣಿ-ಪಕ್ಷಿಗಳ ಬಗ್ಗೆ ಒಲವು ಬರಲು ಅವುಗಳನ್ನು ಬೇಟೆಗಳಲ್ಲಿ ಕೊಲ್ಲದೆ ಪ್ರೀತಿಸಬೇಕೆಂದು, ಸಂದೇಶ ಸಾರುವುದುಂಟು.

ಅಲೆಮಾರಿ ಸಮುದಾಯಗಳು ಉಪವಾಸದಿಂದ ಪ್ರದರ್ಶನ ಕಲೆ ಪ್ರದರ್ಶಿಸಿ, ರಂಜಿಸುತ್ತಾರೆ. ಸಮಾಜದ ಒಳಿತಿಗಾಗಿ ಅನನ್ಯ ಕಾರ್ಯಕ್ರಮಗಳನ್ನು ನೀಡುವುದುಂಟು. ಹೀಗಿದ್ದರು ಅವರ ಹೊಟ್ಟೆ ಮಾತ್ರ ಖಾಲಿ. ಆದುದರಿಂದ ಸರ್ಕಾರವು ಪ್ರದರ್ಶನ ಕಲೆಯನ್ನು ಮಾನ್ಯ ಮಾಡಿ ಸಮುದಾಯವು ಸದೃಢವಾಗಲು ಸಹಾಯ ನೀಡಬೇಕಾಗಿದೆ. ಇಲ್ಲದೆ ಹೋದರೆ ಮುಂದಿನ ದಿನ ಪ್ರದರ್ಶನ ಕಲೆಗಳು ನಶಿಸುವ ಸಾಧ್ಯತೆಗಳಿವೆ. ಪ್ರದರ್ಶನ ಕಲೆಯನ್ನೇ ನಂಬಿಕೊಂಡ ಅಲೆಮಾರಿಗಳಿಗೆ ಆರ್ಥಿಕ ಸಹಾಯ ಅತಿಮುಖ್ಯವಾಗಿದೆ. ಆ ಮೂಲಕ ಅವರಲ್ಲಿರುವ ಉತ್ಕೃಷ್ಟ ಕಲೆ ಹೊರ ತೆಗೆಯ ಬೇಕಾಗಿರುವುದು ಸಮಾಜದ ಎಲ್ಲಾ ಸದಸ್ಯರ ಪಾತ್ರವಿದೆ.

೪.೫ ಅಲೆಮಾರಿಗಳ ದುಡಿಮೆ ಮತ್ತು ಬದುಕು

ಆರ್ಥಿಕ ಚಟುವಟಿಕೆಯ ಮೂಲ ಮಾನವನ ಬಯಕೆಗಳಲ್ಲಿದೆ. ಮೂಲಭೂತ ಬೇಡಿಕೆಗಳಾದ ಆಹಾರ, ಬಟ್ಟೆ, ವಸತಿ, ಮನೋರಂಜನೆ, ವಿದ್ಯೆ, ವೈದ್ಯಕೀಯ, ಸಾರಿಗೆ-ಸಂಪರ್ಕ ಇತ್ಯಾದಿಗಳನ್ನು ತೃಪ್ತಿಗೊಳಿಸುವುದಕ್ಕಾಗಿ ಅನೇಕ ಕ್ರಿಯೆಯಲ್ಲಿ ತೊಡಗುತ್ತಾನೆ. ಪ್ರತಿ ಸಮುದಾಯದಲ್ಲಿ ಉದ್ಯೋಗ

ಬೇಕಾಗುವುದು ಹಾಗೂ ಸುಭದ್ರತೆಯು ಬೇಕಾಗಿದೆ. ಅದು ಮಾನಸಿಕ ಶ್ರಮ, ದೈಹಿಕ ಶ್ರಮ ಆಗಿರಬಹುದು. ಶ್ರಮದಿಂದ ಬರುವ ಪ್ರತಿಫಲದಿಂದ ಜೀವನ ರೂಪಿಸಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಹೈದ್ರಾಬಾದ್ ಕರ್ನಾಟಕದ ಅಲೆಮಾರಿ ಸಮುದಾಯಗಳಲ್ಲಿ ತಮ್ಮ ಪಾರಂಪಾರಿಕ ಕಸುಬುಗಳು ಒಮ್ಮೊಮ್ಮೆ ಕೈಬಿಡುವುದುಂಟು. ಆಧುನಿಕ ಮಾಧ್ಯಮಗಳು ಜನರನ್ನು ಸ್ಪಂದಿಸದಿರಬಹುದು, ಬರಗಾಲವು ಇರಬಹುದು ಮತ್ತು ಒಂದೆ ಪ್ರದೇಶದಲ್ಲಿ ಬಹುಕಾಲ ವೃತ್ತಿಯನ್ನು ನಿರ್ವಹಿಸುವುದರ ಫಲವಿರಬಹುದು. ಇಂತಹ ಸಂದರ್ಭದಲ್ಲಿ ಬದುಕು ಕಠಿಣವಾಗುವುದರಿಂದ ಏನಾದರೂ ಮಾಡಿ ದುಡಿಯ ಬೇಕಾಗುವುದು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅನಿವಾರ್ಯವಾಗಿ ದುಡಿಮೆಯಲ್ಲಿ ಭಾಗವಹಿಸಿ ಬಂದಿರುವ ಹಣ ಮತ್ತಾವುದೆ ಪ್ರತಿಫಲದಿಂದ ಜೀವನ ಮಾಡಬೇಕಾಗಿದೆ.

'ದುಡಿಮೆ' ಎಂಬುದು ಸಜೀವ ಉತ್ಪಾದನಾಂಗವಾಗಿದೆ. ಅದು ಆದಾಯಗಳಿಸುವ ಉದ್ದೇಶದಿಂದ ವಿನಿಯೋಗಿಸುವ ದೈಹಿಕ ಹಾಗೂ ಮಾನಸಿಕ ಶಕ್ತಿ. ನಿರೀಕ್ಷೆಯೊಂದಿಗೆ ಮಾಡಲಾಗುವ ಶ್ರಮವೆ ದುಡಿಮೆಯಾಗಿದೆ. ಸಾಮಾನ್ಯವಾಗಿ ನೈಪುಣ್ಯವಿಲ್ಲದ ವ್ಯಕ್ತಿಗಳು ಪೂರೈಸುವ ಅಥವಾ ತೊಡಗಿಸಿಕೊಳ್ಳುವ ಶಾರೀರಿಕ ಕ್ರಮವನ್ನು ದುಡಿಮೆಯೆನ್ನಲಾಗುವುದು ಅಥವಾ ದೈಹಿಕ, ಮಾನಸಿಕವಾಗಿ ಪಡಬಹುದಾದ ಪ್ರಯಾಸವನ್ನು ದುಡಿಮೆ ಎನ್ನಲಾಗವುದು. ಇದರಿಂದ ನೇರವಾದ ಸಂತೋಷ ಸಿಗುತ್ತದೆಂದು ಹೇಳಲಾಗದು. ಆದರೆ ದುಡಿಮೆಯಿಂದ ಪ್ರತಿಫಲ ದೊರೆಯುತ್ತದೆ.

ಮನಶಾಂತಿಗಾಗಿ ಪೂರೈಸುವ ಚಟುವಟಿಕೆಯು ದುಡಿಮೆ ಎನಿಸಿಕೊಳ್ಳಲಾರದು. ಏಕೆಂದರೆ ಇಲ್ಲಿ ಹಣದ ಅಪೇಕ್ಷೆಯು ಗೌಣವಾಗಿ, ಪ್ರೀತಿಪೂರ್ವಕ ಸೇವೆಯಾಗಿರುತ್ತದೆ. ಜೀವನಕ್ಕಾಗಿ ಪಡುವ ಶ್ರಮದಾಯಕವೂ ಕಷ್ಟಕರವಾಗಿದೆ. ತಮ್ಮ ಶ್ರಮವನ್ನು ಒಡೆಯರಿಗೆ ಅರ್ಪಿಸುವ ಮೂಲಕ ಜೀವನ ನಿರ್ವಹಿಸುತ್ತಾರೆ. ಇಂತಹ ಶ್ರಮ ಮನಪೂರ್ವಕವಾಗಿದ್ದು, ಅದರ ಮೂಲಕ ಜೀವಿಸ ಬೇಕಾಗಿರುತ್ತದೆ. ಅರ್ಥಶಾಸ್ತ್ರದ ಪ್ರಕಾರ ದುಡಿಮೆಯೆಂದರೆ ಕೂಲಿ, ವೃತ್ತಿ, ಸಂಭಾವನೆ ಪಡೆಯುವ ದೈಹಿಕ ಶ್ರಮವಾಗಿದೆ. ಹಾಗೂ "ಆದಾಯ ತರುವ ಕಾರ್ಯ ಅಥವಾ ವಿಶ್ರಾಂತಿ ಅಥವಾ ಸಂತೋಷದ ತ್ಯಾಗದೊಂದಿಗೆ ಶಕ್ತಿಯ ವ್ಯಯಗಳನ್ನೊಳಗೊಂಡ ಉದ್ದೇಶಯುಕ್ತ ಚಟುವಟಿಕೆಯೆ ದುಡಿಮೆಯಾಗುತ್ತದೆ."[17]

ಅಂದಿನ ಸಂದರ್ಭದಲ್ಲಿ ದುಡಿಮೆ ಅಥವಾ ದೈಹಿಕ ಶ್ರಮದಲ್ಲಿ ಮಾನ್ಯತೆಯಿದ್ದು ದೈಹಿಕ ಶ್ರಮದಂತೆ ದುಡಿಯುವವನಿಗೆ ವಿಶೇಷವಾದ ಗೌರವಗಳು ಇರುವವು. ಆದರೆ ಸಂದರ್ಭ ಬದಲಾದಂತೆ ದುಡಿಮೆ ಅರ್ಥ ಹಾಗೂ ವ್ಯಾಖ್ಯಾನ ಬದಲಾಗಿರಬಹುದು ಇದರ ಮುಖ್ಯ ಕಾರಣ ಹಣದ ಮಾರುಕಟ್ಟೆಯ ವ್ಯವಸ್ಥೆ. ಪರಿಣಾಮ ದುಡಿಮೆ ಎಂದರೆ ವೃತ್ತಿ ಅಥವಾ ಹಣ ಎಂಬ ಮನೋಸ್ಥಿತಿಗೆ ಬಂದಿದೆ. ಇಂದಿನ ಸಂದರ್ಭದಲ್ಲಿ ಹಣ ಹೂಡಿ ಶ್ರಮವಹಿಸದೆ, ಮಾನಸಿಕ ಶಕ್ತಿಯಿಂದ ಹಣಗಳಿಸಬಹುದಾಗಿದೆ. ಆದರೆ ಅಲೆಮಾರಿ ಸಮುದಾಯಗಳು ಬಂಡವಾಳ ಹಾಕಿ ಬುದ್ಧಿವಂತಿಕೆಯಿಂದ ಹಣ ಪಡೆಯುವ ಅವಕಾಶಗಳಿಲ್ಲದಿರುವುದರಿಂದ ತಮ್ಮ ಬಳಿಯಿರುವ ಶಕ್ತಿಯನ್ನು ದುಡಿಮೆಯ ಮೂಲಕ ವ್ಯಯ ಮಾಡಿ ಬಂದಿರುವ ಕೂಲಿಯಿಂದ ಜೀವನವನ್ನು ಸಾಗಿಸುವರು.

ಅಲೆಮಾರಿಗಳ ದುಡಿಮೆಯ ಲಕ್ಷಣಗಳು

೧. ಅಲೆಮಾರಿ ಸಮುದಾಯಗಳಿಗೆ ದುಡಿಮೆ ಬಗ್ಗೆ ನಿರ್ದಿಷ್ಟ ಗುರಿ, ಉದ್ದೇಶ, ಭದ್ರತೆಗಳು ಇರುವುದಿಲ್ಲ.

೨. ಕಚ್ಚಾಸಾಮಗ್ರಿ ಹಾಗೂ ಸ್ಥಳೀಯ ತಂತ್ರಜ್ಞಾನದಿಂದ ದುಡಿಮೆ ಕೂಡಿರುತ್ತದೆ.

೩. ದುಡಿಮೆ ತುಂಬಾ ಕಠಿಣವಾಗಿರುತ್ತದೆ.

೪. ವೃತ್ತಿಗಳನ್ನೊಳಗೊಂಡವರಿಗೆ ಉದ್ಯೋಗದ ಭರವಸೆ, ವೈದ್ಯಕೀಯ ಸೌಲಭ್ಯ, ವೃದ್ಧಾಪವೇತನ, ಕಾನೂನಿನ ರಕ್ಷಣೆ, ಪರಿಹಾರ ಇತ್ಯಾದಿಗಳು ಇರುವುದಿಲ್ಲ.

೫. ಕಾರ್ಖಾನೆಗಳು ನಿಯಮದ ಪ್ರಕಾರ ದುಡಿಮೆಗೆ ಕೂಲಿ ನಿರ್ಧರಿಸುತ್ತದೆ. ದುಡಿಮೆಗೆ ನೇಮಿಸುವ ಮತ್ತು ತೆಗೆದು ಹಾಕುವ ಹಕ್ಕು ಕಾರ್ಮಿಕ ಮತ್ತು ಕಾರ್ಖಾನೆಗಳ ಬಿಟ್ಟ ವಿಚಾರವಾಗಿದೆ.

೬. ದುಡಿಮೆ ಮುಂಜಾನೆ ೮ ರಿಂದ ಸಂಜೆ ೬ರ ತನಕ ಇರುತ್ತದೆ.

೭. ದುಡಿಮೆಯಲ್ಲಿ ಶಬ್ದ, ದೂಳು, ವಿಷಾನಿಲಗಳ ಹವೆ ಇತ್ಯಾದಿಗಳಿಂದ ಕಾಯಿಲೆಗಳಿಗೆ ಒಳಪಡಬೇಕಾಗುತ್ತದೆ.

೮. ದುಡಿಮೆಯು ಕೆಲವೆ ಕಾಲಗಳಲ್ಲಿ ಮಾತ್ರ ಇರುತ್ತದೆ.

೧೦. ಶಿಕ್ಷಣ, ಕೌಶಲ್ಯ, ತರಬೇತಿಗಳ ಕೊರತೆ.

೧೧. ದುಡಿಯುವ ಸಂದರ್ಭದಲ್ಲಿ ಕಟ್ಟಡವನ್ನೆ ವಾಸದ ನೆಲೆಯಾಗಿ ಮಾರ್ಪಡಿಸಿಕೊಳ್ಳುವರು.

೧೨. ಮಕ್ಕಳು ದುಡಿಮೆಯಲ್ಲಿ ತೊಡಗುವರು.

೪.೫.೧. ಅಲೆಮಾರಿಗಳ ದುಡಿಮೆ ಮತ್ತು ಕೂಲಿ

ಅಲೆಮಾರಿ ಸಮುದಾಯಗಳು ಸ್ತ್ರೀ-ಪುರುಷರು ಮತ್ತು ಮಕ್ಕಳು ನಗರದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದುಡಿಮೆಯನ್ನು ಹುಡುಕಿಕೊಂಡು ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಸಮುದಾಯ ಎಲ್ಲಿಯವರೆಗೂ ಆ ಸ್ಥಳದಲ್ಲಿ ವಾಸಿಸುತ್ತದೆ ಅಲ್ಲಿಯವರೆಗೆ ತಮ್ಮ ಕುಲಕಸುಬು ಬೇಡಿಕೆ ಕಡಿಮೆಯಾದಾಗ, ಶ್ರಮದ ದುಡಿಮೆಗೆ ಮುಂದಾಗಬೇಕಾಗುವುದುರಿಂದ ಅನಿವಾರ್ಯವಾಗಿ ದುಡಿಮೆಯಲ್ಲಿ ತೊಡಗುತ್ತಾರೆ.

ದುಡಿಮೆಗೆ ಪ್ರತಿಫಲವಾಗಿ ಕೂಲಿಯು ದೊರೆಯುತ್ತದೆ. ಕೂಲಿ ಎಂದರೆ ಶ್ರಮಶಕ್ತಿಯ, ದುಡಿಮೆ ಬೆಲೆಯ ಮೌಲ್ಯ ಪರಿವರ್ತಿತ ರೂಪ ಎನ್ನಬಹುದು. ಶ್ರಮಿಕನು ತನ್ನ ಶ್ರಮಶಕ್ತಿಗೆ ವಿನಿಮಯವಾಗಿ ಏನನ್ನು ಪಡೆಯುತ್ತಾನೆ ಅದೆ ಕೂಲಿಯಾಗುತ್ತದೆ. ಕೂಲಿಯು ನಗರ ಪ್ರದೇಶದಲ್ಲಿ ಒಂದು ರೀತಿಯಾದರೆ. ಗ್ರಾಮೀಣ ಪ್ರದೇಶದಲ್ಲಿ ಮತ್ತೊಂದು ರೀತಿಯಲ್ಲಿರುತ್ತದೆ. ದುಡಿಮೆ ಗಾತ್ರವನ್ನು ಅವಲಂಬಿಸಿರುತ್ತದೆ. ಸಂದರ್ಭ ತಕ್ಕಂತೆ ಬದಲಾಗುತ್ತಿರುತ್ತದೆ.

ಸಮುದಾಯಗಳು ಅವರು ವಾಸಿಸುವ ಸ್ಥಳದ ಮಾಲಿಕರ ಜಮೀನಿನಲ್ಲಿ ಕೃಷಿ ವೃತ್ತಿಗಾಗಿ ಅವರ

ಬಳಿ ಹೋಗುವುದುಂಟು. ಅವರ ಮಾಲಿಕರರಿಂದ ಗೊತ್ತುಪಡಿಸಿಕೊಂಡು ಕೂಲಿಗಾಗಿ ಹಣದ ರೂಪದಲ್ಲಿ ಇಲ್ಲವೆ ದವಸ ಧಾನ್ಯಗಳ ರೂಪದಲ್ಲಿ ಪಡೆಯುತ್ತಾರೆ. ಇದು ಸಹಜ ಪ್ರಕ್ರಿಯೆಯಾಗಿದೆ. ಇವರಲ್ಲಿ ಲಿಂಗ ತಾರತಮ್ಯವಿಲ್ಲದೆ, ಸ್ತ್ರೀಯರು ಮತ್ತು ಪುರುಷರು ಕೂಲಿಗಾಗಿ ದುಡಿಯಲು ಒಗ್ಗಟ್ಟಿನಿಂದ ನಿರಂತರ ದುಡಿಯುತ್ತಾರೆ.

ದುಡಿಮೆ ವಿಧಗಳು : ಜೀವನ ನಿರ್ವಹಣೆಗಾಗಿ ದುಡಿಮೆ ಸಹಕಾರಿಯಾಗಿದೆ. ಕೂಲಿಯಿಂದ ಬರುವ ದುಡಿಮೆ ಕುಟುಂಬದಲ್ಲಿ ಆಸರೆಯಾಗಿದೆ. ಮೇಲ್ನೋಟದಲ್ಲಿ ಇದು ಅಂಥ ಬದಲಾವಣೆ ಆಗದಿದ್ದರೂ, ಇವರ ದೃಷ್ಟಿಯಲ್ಲಿ ಬದಲಾವಣೆಯಾಗಿದೆ. ದುಡಿಮೆಗಳಲ್ಲಿ, ೧. ಸಸಿ ನಾಟಿ ಮಾಡುವುದು ೨. ಕಳೆ ತೆಗೆಯುವುದು ೩. ಭತ್ತ ಕಟಾವು ಮಾಡುವುದು ಇತ್ಯಾದಿಗಳು.

೧. ಸಸಿ ನಾಟಿ ಮಾಡುವುದು : ತುಂಗಾಭದ್ರ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತ ಹೆಚ್ಚಾಗಿ ಬೆಳೆಯುವುದುಂಟು. ಇಲ್ಲಿನ ಭೂಮಾಲಿಕರು ಭತ್ತ ಸಸಿ ನಾಟಿ ಮಾಡಲಿಕ್ಕೆ ಸ್ತ್ರೀಯರನ್ನು ನೇಮಿಸಿ ಕೊಳ್ಳುತ್ತಾರೆ. ಅಲೆಮಾರಿಗಳ ಮಹಿಳೆಯರು ಗುಂಪಿನೊಂದಿಗೆ ನಾಟಿ ಮಾಡಲು ಹೋಗುತ್ತಾರೆ. ಮಾಡುವಾಗ ದಣಿವು, ಬೇಸರ ಕಳೆಯಲು ಹಾಡುಗಳನ್ನು ಹೇಳಿ ಇತರರಿಗೆ ರಂಜನೆ ನೀಡುತ್ತಾರೆ. ಕೂಲಿಗಾಗಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಲೆಮಾರಿಗಳು ಬಹುತೇಕವಾಗಿ ಹೋಗುತ್ತಾರೆ. ಸಸಿ ನಾಟಿ ಮಾಡುವ ಮಹಿಳೆಯರಿಗೆ ದಿನಗೂಲಿ ೩೦.೦೦ ರೂ.ಗಳು ಹಾಗೂ ಊಟ ಕೊಡುವುದುಂಟು.

೨. ಕಳೆ ತೆಗೆಯುವುದು : ಅಧಿಕ ಒಣ ಭೂಮಿ ಹೊಂದಿರುವ ಭೂ ಮಾಲೀಕರ ಕುಟುಂಬದಲ್ಲಿ ಜೋಳ, ಶೇಂಗಾ, ರಾಗಿ, ನವಣೆ ಇತ್ಯಾದಿ ಬೆಳೆಗಳ ಕಳೆ ಕೆಲಸ ಮಾಡಲು ಗುಂಪು ಗುಂಪುಗಳಾಗಿ ಹೋಗುತ್ತಾರೆ. ಇದನ್ನು ಕಳೆ ಕೆಲಸ ಎಂದು ಗ್ರಾಮೀಣ ಭಾಗದಲ್ಲಿ ಕರೆಯುವುದುಂಟು. ಇದು ಋತುಮಾನಗಳಿಗೆ ಅನುಸಾರವಾಗಿ ದುಡಿದ ಪ್ರತಿಫಲವಾಗಿರುತ್ತದೆ. ದಿನ ಕೂಲಿಗಾಗಿ ಊಟದ ವ್ಯವಸ್ಥೆ ಮಾಡಿರುತ್ತಾರೆ.

ಕಳೆ ದುಡಿಮೆಯ ಕೂಲಿಯ ಧರಗಳು

ಸಂ.	ದುಡಿಮೆಯ ಹೆಸರು	ರೂಪಾಯಿ
೧.	ಜೋಳದ ಕಳೆ	೧೫.೦೦
೨.	ಶೆಂಗಾ ಕಳೆ	೨೦.೦೦
೩.	ರಾಗಿ ಕಳೆ	೧೫.೦೦
೪.	ಸಜ್ಜೆ ಕಳೆ	೧೫.೦೦
೫.	ನವಣೆ ಕಳೆ	೧೫.೦೦

೩. ಭತ್ತಕೊಯ್ಯುವ ದುಡಿಮೆ : ಅಲೆಮಾರಿಗಳ ಪುರುಷರು ಹೆಚ್ಚಾಗಿ ಭತ್ತ ಕೊಯ್ಯುವ ದುಡಿಮೆಗೆ ಹೋಗುತ್ತಾರೆ. ಇವರು ಕೆಲವು ತಿಂಗಳ ಕಾಲ ಕೊಪ್ಪಳ ಜಿಲ್ಲೆಯ ಕಾರಟಗಿ ಮತ್ತು ರಾಯಚೂರು

ಸ್ಥಳಗಳಿಗೆ ವಲಸೆ ಹೋಗುವುದುಂಟು. ಭತ್ತ ಕೊಯ್ಯುವ ಸ್ಥಳದಲ್ಲಿ ಗುಡಾರಗಳನ್ನು ಹಾಕಿಕೊಳ್ಳುತ್ತಾರೆ. ಎಲ್ಲ ರೀತಿಯ ದುಡಿಮೆ ಮಾಡಿದ ನಂತರ ಮಾಲಿಕರು ಕೂಲಿ ಹಣ ಹಾಗೂ ಚೀಲಗಟ್ಟಲೆ ಭತ್ತ ಉಚಿತವಾಗಿ ಕೊಡುತ್ತಾರೆ. ಬಂದಿರುವ ಭತ್ತವನ್ನು ಗಿರಣಿಗಳಿಗೆ ಹಾಕಿಸಿ, ಹಬ್ಬ-ಹರಿದಿನಗಳಲ್ಲಿ ಹಾಗೂ ಮದುವೆ ಕಾರ್ಯಕ್ರಮದಲ್ಲಿ ಬಳಸಿಕೊಳ್ಳುತ್ತಾರೆ.

ಭತ್ತದ ದುಡಿಮೆಯ ಕೂಲಿಯ ಧರಗಳು

ಸಂ.	ಕೂಲಿಯ ಹೆಸರು	ರೂಪಾಯಿ
೧.	ಭತ್ತ ಕೊಯ್ಯುವುದು	೫೦.೦೦
೨.	ಭತ್ತ ರಾಶಿ ಮಾಡುವುದು	೫೦.೦೦
೩.	ಭತ್ತ ಮಿಷನ್‌ಗೆ ಹಾಕುವುದು	೫೦.೦೦
೪.	ಭತ್ತದ ಚೀಲಗಳನ್ನು ಹೊರುವುದು	
	ಒಂದು ಚೀಲಕ್ಕೆ	೦೧.೦೦

೪. ಮನೆಕಟ್ಟುವವರ ಜೊತೆಯಲ್ಲಿ ದುಡಿಮೆ/ಬೇಲ್ದಾರ ದುಡಿಮೆ : ಭಿಕ್ಷಾಟನೆ ಮಾಡಿ ಜೀವನ ಸಾಗಿಸುತ್ತಿದ್ದ ಅಲೆಮಾರಿಗಳು ಇಂದು ಮನೆ ಕಟ್ಟುವವರ ಜೊತೆಯಲ್ಲಿ ದುಡಿಮೆಗೆ ಹೋಗುತ್ತಿದ್ದಾರೆ. ಕೇವಲ ಮಳೆ, ಗಾಳಿ, ಚಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಗುಡಾರವನ್ನು ನಿರ್ಮಿಸಿಕೊಳ್ಳುತ್ತಿದ್ದ ಕೈಗಳು ಇಂದು ಸಿಮೆಂಟು ಕಲೆಸುವ, ಸಾಮರ್ಥ್ಯವನ್ನು ಪಡೆದುಕೊಂಡಿದ್ದಾರೆ. ಇದು ಒಂದು ರೀತಿಯ ಕಷ್ಟದ ಕೆಲಸ. ಅಲೆಮಾರಿಗಳು ದೈಹಿಕ ಬಲಶಾಲಿಗಳಾಗಿರುವುದರಿಂದ ಇಂತಹ ಕೆಲಸ ನಿರ್ವಹಿಸುವುದರಲ್ಲಿ ಪ್ರವೀಣರಾಗಿದ್ದಾರೆ. ದುಡಿಮೆಯನ್ನು ಅವಲಂಬಿಸಿರುವ ಕುಟುಂಬಗಳು ಸುಖ ಜೀವನ ಸಾಗಿಸದಿದ್ದರೂ ಕುಟುಂಬದಲ್ಲಿ ಆಸರೆಯಾಗುತ್ತದೆ. ಮೊದಲಿಗೆ ಇಂತಹ ದುಡಿಮೆ ಮಾಡುವಲ್ಲಿ ಈ ಸಮುದಾಯದವರ ಪಾಲು ಸೊನ್ನೆಯಾಗಿತ್ತು. ಕಾಲಕಳೆದಂತೆ ದುಡಿಮೆ ಅನುಸರಿಸುತ್ತಿರುವುದನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದಾಗಿದೆ. ಈಗಲೂ ಇತರೆ ಸಮುದಾಯದೊಂದಿಗೆ ಬೆರತುಕೊಂಡು ದುಡಿಮೆ ನಿರ್ವಹಿಸುತ್ತಾರೆ.

ಮನೆ ಕಟ್ಟುವ ಕೂಲಿಯ ಧರಗಳು

ಸಂ.	ದುಡಿಮೆಯ ಹೆಸರು	ರೂಪಾಯಿ
೧.	ಇಟ್ಟಿಗೆ ತುಂಬಿ ಹಾಕುವುದು	೪೦.೦೦
೨.	ಕಾಂಕ್ರೀಟ್ ಕಲಿಸುವುದು	೫೦.೦೦
೩.	ಸಿಮೆಂಟ್ ಕಲಿಸುವುದು	೪೦.೦೦
೪.	ಭಾರವಾದ ಸಾಮಾನುಗಳ ಹೊರುವುದು	೫೦.೦೦
೫.	ಕಡಪ ಬಂಡೆಗಳ ಹೊತ್ತು ತರುವುದು	೫೦.೦೦

ಇತರೆ ದುಡಿಮೆ : ಅಲೆಮಾರಿಗಳು ಮೀನುಗಾರಿಕೆ ಮತ್ತು ಬಕೇಟ್ ರೀಪೇರಿಯ ದುಡಿಮೆ ಮಾಡುತ್ತಾರೆ.

೧. **ಮೀನುಗಾರಿಕೆ ದುಡಿಮೆ :** ಉತ್ತಮ ಬೇಟೆಗಾರರಾದ ಅಲೆಮಾರಿಗಳು ಮೀನು ಹಿಡಿಯುವ ಕೆಲಸವನ್ನು ಚೆನ್ನಾಗಿ ನಿಭಾಯಿಸಬಲ್ಲರು. ಕೆರೆಯ ಅಕ್ಕಪಕ್ಕದ ಪ್ರದೇಶಗಳಲ್ಲಿ ವಾಸಿಸುವ ಅಲೆಮಾರಿಗಳೆಲ್ಲರೂ ಮೀನು ಶಿಕಾರಿಯನ್ನು ಚೆನ್ನಾಗಿ ಹಿಡಿಯಬಲ್ಲರು. ಕೆರೆ, ಕಾಲುವೆ ಇನ್ನಿತರ ಪ್ರದೇಶಗಳಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಅನುಮತಿ ಪಡೆದುಕೊಳ್ಳುವರು. ಮೀನುಗಾರರ ಸಂಘದ ಅಡಿಯಲ್ಲಿ ಮೀನು ಹಿಡಿದು ಕೊಡುವ ದುಡಿಮೆಗೆ ಸೇರಿಕೊಳ್ಳುತ್ತಾರೆ. ಒಂದು ಕೆ.ಜಿ. ಮೀನು ಹಿಡಿದರೆ ಇಂತಿಷ್ಟು ಸಂಭಾವನೆ ಎಂಬ ಕರಾರಿನ ಮೇಲೆ ಮೀನು ಹಿಡಿಯುವರು.[೬೦] ಸಾಮಾನ್ಯವಾಗಿ ಒಂದು ಕೆ.ಜಿ. ಮೀನು ಹಿಡಿದರೆ ೧೦ ರಿಂದ ೧೨ ರೂಪಾಯಿ ಸಂಭಾವನೆ ಕೊಡುತ್ತಾರೆ. ಹೀಗೆ ಕನಿಷ್ಟ ದಿನದಲ್ಲಿ ೧೦೦ ರಿಂದ ೧೨೦ ರೂಪಾಯಿಗಳವರೆಗೆ ದುಡಿಯುತ್ತಾರೆ. ಕೆಲವು ಪ್ರದೇಶಗಳಲ್ಲಿ ಕೆರೆ, ಹಳ್ಳಗಳ ಪ್ರದೇಶಗಳಲ್ಲಿ ತಾವೆ ಸ್ವತಂತ್ರವಾಗಿ ಮೀನು ಹಿಡಿದು ಊರಲ್ಲಿ ವ್ಯಾಪಾರ ಮಾಡುತ್ತಾರೆ. ಸಾಮಾನ್ಯವಾಗಿ ಪುರುಷರು ಮೀನು ಹಿಡಿದು ತಂದರೆ ಸ್ತ್ರೀಯರು ಮಾರಾಟ ಮಾಡಿ ಹಣ ಸಂಗ್ರಹಿಸುತ್ತಾರೆ.

ಬಕೇಟ್ ರೀಪೇರಿ : ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಅನೇಕ ದುಡಿಮೆಗಳಲ್ಲಿ ಇದು ಒಂದು. ಅಲೆಮಾರಿಗಳು ಬಕೆಟ್ ರೀಪೇರಿ ಕೆಲಸವನ್ನು ಮಾಡುತ್ತಾರೆ. ಪ್ಲಾಸ್ಟಿಕ್ ಕೊಡ ಮತ್ತು ಬಕೇಟ್ ರೀಪೇರಿ ಮಾಡಲು ಹಳ್ಳಿ ಹಳ್ಳಿಗೂ ಹೋಗುವುದುಂಟು. ಬಕೇಟ್ ರೀಪೇರಿ ಮಾಡುವ ಪರಿಕರಗಳೆಂದರೆ ಕಟ್ಟಿಗೆ ಅಥವಾ ಪ್ಲಾಸ್ಟಿಕ್ ಹಿಡಿಕೆಯುಳ್ಳ ಅಗಲವಾದ ಎರಡು ಕಬ್ಬಿಣದ ಪಟ್ಟಿಕೆಗಳು (L) ಎಲ್ ಆಕಾರದ ಒಂದು ಕಬ್ಬಿಣದ ಸಲಾಕೆ (ಇದು ಇಕ್ಕಟ್ಟಿನ ಸ್ಥಳಗಳಲ್ಲಿ ಬೆಸಿಗೆಯಾಕಲು ಬಳಸುವರು). ಚಿಕ್ಕ ಚಿಕ್ಕ ರಂಧ್ರಗಳು ಒಂದು ತಗಡಿನ ಡಬ್ಬಿ ಇದಕ್ಕೆ ಒಂದು ತಂತಿಯ ಹಿಡಿಕೆಯನ್ನು ಹಾಕಿರುತ್ತಾರೆ. ತೇಪೆ ಹಾಕಲು ಬಳಸುವ ಸಾಧನೆಗಳನ್ನು ಬಿಸಿ ಮಾಡಲು ಇದ್ದಿಲು, ಬೆಂಕಿ ಮಾಡಲು ಊದಲು ಬೇಕಾಗುವ ಒಂದು ಉದೊಗೊಳವಿ, ಶೇವ್ ಮಾಡಿ ಬಿಟ್ಟ ಹಳೆ ಬ್ಲೇಡ್ ಮತ್ತು ತೇಪೆ ಹಾಕಲು ಪ್ಲಾಸ್ಟಿಕ್ ತುಂಡುಗಳು ಬೇಕಾಗುತ್ತದೆ. ಬಕೇಟ್ ರೀಪೆರಿ ಮಾಡುವ ಪರಿಕರಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯೂ ಇಲ್ಲ. ಹೆಚ್ಚೆಂದರೆ ೧೦-೩೦ ರೂಪಾಯಿಗಳಿಗೆ ಈ ಎಲ್ಲಾ ಪರಿಕರಗಳು ದೊರಕುತ್ತವೆ. ವಿವಿಧ ರೀತಿಯ ಗುಣಮಟ್ಟದ ಪ್ಲಾಸ್ಟಿಕ್ ವಸ್ತುಗಳನ್ನು ರಿಪೇರಿ ಮಾಡಬೇಕಾದ ಸಂದರ್ಭದಲ್ಲಿ ರೀಪೇರಿ ಮಾಡುವವನಿಗೆ ಇದರಲ್ಲಿ ಹೆಚ್ಚಿನ ಬುದ್ಧಿವಂತಿಕೆ ಇರುತ್ತದೆ. ಈ ಉದ್ಯೋಗ ಉತ್ತಮ ಬದುಕು ಕಟ್ಟಿಕೊಡದಿದ್ದರು ಆರ್ಥಿಕ ಚಟುವಟಿಕೆಯಲ್ಲಿ ಸಹಾಯಕವಾಗಿದೆ.

ಅಲೆಮಾರಿಗಳ ಆರ್ಥಿಕ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಒಂದೊತ್ತಿನ ಊಟಕ್ಕಾಗಿ ಪರದಾಡುವಂತಹ ಸ್ಥಿತಿ ಇವರದಾಗಿದೆ. ಒಂದು ದಿನ ಭಿಕ್ಷಾಟನೆ ಅಥವಾ ದುಡಿಯಲು ಹೋಗಲಿಲ್ಲವೆಂದರೆ ಅಂದು ಉಪವಾಸವೆ. ಕೆಲವು ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವವರಿದ್ದರೂ ಸಹ ಆರ್ಥಿಕ ಮಟ್ಟ ಸುಧಾರಿಸಿಲ್ಲ. ಯಾವುದಾದರೂ ವ್ಯಾಪಾರ ಮಾಡಲು ಬಂಡವಾಳದ ಕೊರತೆ ಎದ್ದು ಕಾಣುತ್ತದೆ. ಅಲೆಮಾರಿಗಳಾಗಿರುವುದರಿಂದ ಇವರಿಗೆ ಯಾರೂ ಆರ್ಥಿಕ ಭದ್ರತೆಯನ್ನು ನೀಡಲು ಮುಂದಾಗುತ್ತಿಲ್ಲ. ಇವರ ದುಡಿಮೆಗೆ ಸರಿಯಾದ ಪ್ರತಿ ಫಲಸಿಗದ ಕಾರಣ

ಇನ್ನೂ ಶೋಷಣೆಯ ಹಂತದಲ್ಲಿರುವುದರಿಂದ ಇವರ ಜೀವನಮಟ್ಟ ಸುಧಾರಿಸಲು ಸಾಧ್ಯವಾಗುತ್ತಿಲ್ಲ. ಕೆಲವೊಂದು ಪ್ರದೇಶಗಳಲ್ಲಿ ಅವರ ಬುದ್ಧಿಶಕ್ತಿಗನುಗುಣವಾಗಿ ದುಡಿದು, ದುಂದುವೆಚ್ಚ ಮಾಡದೆ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸಿಕೊಂಡಿದ್ದಾರೆ. ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಬದುಕು ತುಂಬಾ ಕಷ್ಟದಲ್ಲಿದೆ. ಶಿಕ್ಷಣದಿಂದ ವಂಚಿತವಾದ ಸಮುದಾಯಗಳು ಆಧುನಿಕ ಸಮಾಜದಲ್ಲಿ ತುಂಬಾ ತೊಂದರೆಯನ್ನು ಅನುಭವಿಸುತ್ತಿದೆ. ಹೀಗೆ ಅಲೆಮಾರಿಗಳ ಬದುಕು ನಿರಂತರವಾಗಿ ಅತಂತ್ರ ಸ್ಥಿತಿಯಲ್ಲಿದೆ. ಆದಕಾರಣ ಸರಿಯಾದ ಸೌಲಭ್ಯಗಳನ್ನು ನೀಡುವುದು ಸರ್ಕಾರದ ಕರ್ತವ್ಯವಾಗಿದೆ.

೪.೬. ಅಲೆಮಾರಿಗಳ ಪಶುಸಂಪತ್ತು ಮತ್ತು ಆದಾಯ

ಪಶುಸಂಪತ್ತು ಅಲೆಮಾರಿ ಸಮುದಾಯಗಳ ಆರ್ಥಿಕ ರಚನೆಯಲ್ಲಿನ ಪಾತ್ರವು ಮಹತ್ವದ್ದಾಗಿದೆ. ಪಶುಸಂಪತ್ತುಗಳಿಂದ ಸಮುದಾಯದ ಬಳಕೆಗೆ ಹಾಲು, ಮಾಂಸ ಸಾಗುವಳಿಗೆ ಬೇಕಾದ ಶಕ್ತಿ, ಗೊಬ್ಬರದ ಇಂಧನ ಇತ್ಯಾದಿಗಳಲ್ಲಿ ಹಣ ಒದಗಿಸುವ ಕಾರ್ಯವಾಗಿದೆ. ಹಾಗೆಯೆ ಪಶುಗಳನ್ನು ದೈವ ಸಮಾನವೆಂದು ಭಾವಿಸುವುದುಂಟು. ಆಹಾರಕ್ಕಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದಲ್ಲಿ ತಂಡೋಪ ತಂಡವಾಗಿ ವಲಸೆ ಹೋಗುವ ಸಮುದಾಯಗಳು ಸರಂಜಾಮುಗಳನ್ನು ಕುದುರೆ, ಕತ್ತೆ, ಎತ್ತು, ಆಕಳುಗಳ ಮೇಲೆ ಹಾಕಿಕೊಂಡು ಪ್ರಯಾಣಿಸುತ್ತಾರೆ. ಇಂದಿನ ದಿನದಲ್ಲಿ ಈ ವ್ಯವಸ್ಥೆ ಕಡಿಮೆಯಾದರು ಹೆಳವರಂತ ಸಮುದಾಯದಲ್ಲಿ ತಮ್ಮ ಪರಿಕರಗಳನ್ನು ಪ್ರಾಣಿಗಳ ಮೇಲೆ ಹಾಕಿಕೊಂಡು ಸಾಗಿಸಲಾಗುತ್ತದೆ. ಬದಲಾದ ಸಂದರ್ಭದಲ್ಲಿ ಅಲೆಮಾರಿಗಳು ಭಿಕ್ಷಾಟನೆ, ವ್ಯಾಪಾರ ಇತ್ಯಾದಿಗಳನ್ನು ಮಾಡುತ್ತಾರಾದರೂ ಜೀವನದ ಆಸರೆಯಾಗಿ ಪ್ರಾಣಿ-ಪಕ್ಷಿಗಳು ಆಸರೆ ನೀಡುತ್ತವೆ. ಸಮುದಾಯದ ವೃದ್ಧರು ಪ್ರಾಣಿ-ಪಕ್ಷಿಗಳನ್ನು ಸಾಕುವುದರಲ್ಲಿ ನಿರತರಾಗುವರು.

ಪ್ರಾಣಿ-ಪಕ್ಷಿಗಳನ್ನು ಪಡೆಯುವ ಬಗೆ

ಪ್ರಾಣಿ-ಪಕ್ಷಿಗಳನ್ನು ತಮ್ಮ ಕುಲ ವೃತ್ತಿಯ ಮೂಲಕ ಭಿಕ್ಷೆ ರೂಪದಲ್ಲಿ ಪಡೆಯುವುದುಂಟು. ಹೆಳವರು ತಮಗೆ ಈಗಾಗಲೆ ನಿಯೋಜಿತವಾಗಿರುವ ಕುಟುಂಬದಲ್ಲಿ ವರ್ಷದಲ್ಲಿ ಒಂದು ಬಾರಿ ಅಥವಾ ಎರಡು ಬಾರಿಯಾದರು ಕುಟುಂಬ ವಂಶಾವಳಿ ಬಗ್ಗೆ ಸುಧೀರ್ಘವಾಗಿ ಹೇಳಬೇಕಾಗುತ್ತದೆ. ಆ ವರ್ಷದಲ್ಲಿ ಹುಟ್ಟಿದವರ, ಸತ್ತವರ ವಿಷಯಗಳನ್ನು ವಂಶಾವಳಿಯಲ್ಲಿ ಸೇರ್ಪಡೆಗೊಳ್ಳುತ್ತವೆ. ಇದರ ಪ್ರತಿಯಾಗಿ ಕುಟುಂಬದಿಂದ ಹಸು, ಎಮ್ಮೆ, ಕುರಿ, ಮೇಕೆ, ಕೋಳಿ ಇತ್ಯಾದಿಗಳನ್ನು ದಾನದ ರೂಪದಲ್ಲಿ ಪಡೆಯುವುದುಂಟು. ವಂಶದ ಇತಿಹಾಸವನ್ನು ಆಲಿಸಿದ ಸಮುದಾಯಗಳು ಅವರವರ ಇಚ್ಛೆಗನುಸಾರವಾಗಿ ಭಿಕ್ಷೆ ನೀಡುವುದುಂಟು. ದಾನಗಳ ಜೊತೆಯಲ್ಲಿ ಪ್ರಾಣಿ-ಪಕ್ಷಿಗಳನ್ನು ನೀಡುತ್ತಾರೆ.

ಪ್ರಾಣಿ-ಪಕ್ಷಿಗಳಿಂದ ಆದಾಯ

ಪ್ರಾಣಿ-ಪಕ್ಷಿಗಳನ್ನು ವೃತ್ತಿಗಳಲ್ಲಿ ಬಳಸಿಕೊಂಡು ಆದಾಯ ತರಬಲ್ಲ ಸಾಧಕವಾಗಿದೆ. ಇವುಗಳನ್ನು ಮಾರಾಟ ಮಾಡುವಲ್ಲಿ ಬಳಸಿಕೊಂಡು ಆದಾಯವನ್ನಾಗಿ ಮಾಡಿಕೊಳ್ಳುತ್ತಾರೆ. ಪ್ರಾಣಿ-ಪಕ್ಷಿಗಳು ನೇರವಾಗಿ ಮತ್ತು ಪರೋಕ್ಷವಾಗಿ ಆದಾಯವನ್ನು ಗಳಿಸುವ ಸಾಧನವಾಗಿವೆ.

ಪ್ರಾಣಿ-ಪಕ್ಷಿಗಳು	ಕ್ರಿಯೆ	ಹಣ ಆಹಾರದ ರೂಪದಲ್ಲಿ ಆದಾಯ ರೂಪಾಯಿಗಳಲ್ಲಿ
ಆಕಳು	ಕೋಲೆ ಬಸವ ಪ್ರದರ್ಶನ	೨೦-೪೦ ರೂ.ಗಳು ಹಾಗೂ ದವಸಗಳು
ಎತ್ತು	ಗಾಡಿ, ಛಕ್ಕಡಿ ಎಳೆಯುವುದು	ಪ್ರಯಾಣದ ಖರ್ಚು ಉಳಿಕೆ
ಎಮ್ಮೆ	ಹಾಲು, ಮೊಸರು, ಗೊಬ್ಬರ	ಕುಟುಂಬದ ಆಹಾರ
ಕುದುರೆ, ಕತ್ತೆ	ಸಾಮಾನು ಸಾಗಿಸಲು	ಪ್ರಯಾಣಭತ್ಯೆ ಉಳಿಕೆ
ಮೇಕೆ, ಕುರಿ	ಮಾಂಸ, ಹಾಲು ಮತ್ತು ಮಾರಾಟಕ್ಕಾಗಿ ಆಹಾರ ಬಳಕೆ	ಹಾಲು ಮತ್ತು ಮಾಂಸ
ಹಂದಿ	ಮಾಂಸ ಮತ್ತು ಮಾರಾಟ	೩೦೦-೬೦೦ರೂ ಗಳವರೆಗೆ ಹಾಗೂ ಆಹಾರ
ನಾಯಿ	ಬೇಟೆಗಾಗಿ	ಕಳ್ಳರು, ಪ್ರಾಣಿಗಳ ರಕ್ಷಣೆ
ಕರಡಿ	ಪ್ರದರ್ಶನ	ಒಂದು ದಿನಕ್ಕೆ ೫೦-೧೦೦ ರೂ.
ಹಾವು	ಪ್ರದರ್ಶನ	ಒಂದು ದಿನಕ್ಕೆ ೨೦-೫೦ ರೂ.
ಕೋತಿ	ಪ್ರದರ್ಶನ	ಒಂದುದಿನಕ್ಕೆ ೫೦-೭೫ ರೂ.
ಗಿಳಿ	ಜೋತಿಷ್ಯಶಾಸ್ತ್ರ ಹೇಳಲು	೫-೫೦ ರೂ. ವರೆಗೆ
ಕೌಜುಗ	ಮಾಂಸ	ಆಹಾರ ಬಳಕೆ
ಕೋಳಿ	ಮಾಂಸ	ಆಹಾರ ಮತ್ತು ಆರ್ಥಿಕ ಪರಿಸ್ಥಿತಿ ಎದುರಾದಾಗ ಮಾರಾಟ

ಅಲೆಮಾರಿ ಸಮುದಾಯಗಳು ಪ್ರಾಣಿ-ಪಕ್ಷಿಗಳನ್ನು ಸಾಕಿಕೊಂಡಿರುವುದರಿಂದ ಬದುಕಿಗೆ ಆಸರೆಯಾಗಿವೆ. ಹಾಗೂ ತುರ್ತು ಪರಿಸ್ಥಿತಿಗಳಲ್ಲಿ ಕೆಲವು ಪ್ರಾಣಿ ಪಕ್ಷಿಗಳನ್ನು ಮಾರಾಟ ಮಾಡುತ್ತಾರೆ. ಪ್ರದರ್ಶನ ಕಲೆಯಲ್ಲಿ ಇವುಗಳ ಪಾತ್ರಗಳು ಅಮೋಘವಾದದು. ಸಾಮಾನ್ಯವಾಗಿ ಪ್ರಾಣಿ-ಪಕ್ಷಿಗಳು, ನೀರು-ಮೇವು ಸಿಗುವ ಸ್ಥಳದಲ್ಲಿ ಅಲೆಮಾರಿಗಳು ಬಿಡಾರ ನಿರ್ಮಾಣಗೊಳಿಸುತ್ತಾರೆ. ಕೃಷಿ ಭೂಮಾಲಿಕರಿಂದ ಕಣದಲ್ಲಿರುವ ಮೇವನ್ನು ಪ್ರಾಣಿಗಳಿಗೆ ಬೇಡಿಕೊಂಡು ತರುತ್ತಾರೆ. ಸ್ತ್ರೀಯರು, ಮಕ್ಕಳು, ವೃದ್ಧರು ಬಿಡಾರದಿಂದ ಹೊರಬಂದು ಪ್ರಾಣಿಗಳನ್ನು ಹೊರವಲಯದಲ್ಲಿ ಮೇಯಿಸುವುದುಂಟು. ಹೆಳವ ಸಮುದಾಯವು ಮೇವು ಮತ್ತು ನೀರು ಇದ್ದಲ್ಲಿ ನೆಲೆಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಕುರಿಗಳನ್ನು ಹೊಲ-ಗದ್ದೆಗಳಲ್ಲಿ ತಂಗಿಸುತ್ತಾರೆ. ಇದರಿಂದ ಹೊಲ-ಗದ್ದೆಗಳಿಗೆ ಗೊಬ್ಬರ ಉಪಯೋಗವಾಗುತ್ತದೆ. ಪ್ರತಿಯಾಗಿ ಹೊಲಗದ್ದೆಗಳ ಮಾಲಿಕರು ಜೋಳ ಅಥವಾ ಹಣ ಕೊಡುತ್ತಾರೆ.

ಹಂದಿ ಸಾಕಣಿಕೆಯಲ್ಲಿ ಖರ್ಚು ವೆಚ್ಚಗಳು ಹೆಚ್ಚಾಗಿರುವುದಿಲ್ಲ. ಊರಿನ ಚರಂಡಿಗಳಲ್ಲಿ ಕೊಳೆತ ತಿಪ್ಪೆಗಳಲ್ಲಿ ಆಹಾರ ಹುಡುಕಿಕೊಂಡು ಜೀವಿಸುತ್ತವೆ. ಆದ್ದರಿಂದ ಇವುಗಳ ಸಾಕುವ ಹೊಣೆಗಾರಿಕೆ ಹೆಚ್ಚಾಗಿರುವುದಿಲ್ಲ. ಹಂದಿಗಳ ಮಾಂಸಕ್ಕಾಗಿ ಬೇಕಾದವರು ಇವುಗಳನ್ನು ಖರೀದಿಸಿಕೊಂಡು ಹೋಗುತ್ತಾರೆ.

ಹೀಗೆ ಪ್ರಾಣಿಗಳ ಮಾರಾಟದಿಂದ ಇವರ ದೈನಂದಿನ ಬದುಕುಗಳನ್ನು ಪೂರೈಸಿಕೊಳ್ಳುತ್ತಾರೆ. ಅಲೆಮಾರಿ ಸಮುದಾಯಗಳ ಜೀವನದ ಆರ್ಥಿಕ ನಿರ್ವಹಣೆಯಲ್ಲಿ ಪ್ರಾಣಿ-ಪಕ್ಷಿಗಳ ಪಾತ್ರವು ಮಹತ್ವದ್ದಾಗಿದೆ. ಯಾವುದೆ ಕಾಲದಲ್ಲಿ ಇವುಗಳನ್ನು ಸಾಕುವ ಹೊಣೆಯು ಇವರದ್ದಾಗಿರುತ್ತದೆ. ಹಾಗೂ ಇವುಗಳ ಆಹಾರ ಎಲ್ಲಿ ಲಭ್ಯವು ಅಲ್ಲಿಯೆ ಇವರ ವಾಸ ಹೆಚ್ಚಾಗಿರುತ್ತದೆ. ಹೀಗೆ ಅಲೆಮಾರಿಗಳು ತಮ್ಮದೇ ಆದ ಆರ್ಥಿಕ ರಚನೆಯ ಮೂಲಕ ಬದುಕು ಸಾಗಿಸುತ್ತಾರೆ.

ಅಡಿಟಿಪ್ಪಣಿ

೧. ಕರಕುಶಲ ಕಲೆಗಳು, (ಸಂ) ಡಾ. ಕರೀಗೌಡ ಬೀಚನಹಳ್ಳಿ, ೨೦೦೦, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು.೧

೨. ಕರಕುಶಲ ಕಲೆಗಳು, (ಸಂ) ಡಾ. ಕರೀಗೌಡ ಬೀಚನಹಳ್ಳಿ, ೨೦೦೦, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೧೭೯

೩. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಚ್ಚಾರ್ಕೆ, ೨೦೦೩, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪು. ೧೮೯

೪. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಚ್ಚಾರ್ಕೆ, ೨೦೦೩, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪು. ೧೯೦

೫. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಂ. ಗುಪ್ತಾ, ೧೯೯೮, ಎಸ್.ಬಿ.ಎಸ್.ಪಬ್ಲಿಷನ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪು. ೧೩೯

೬. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಚ್ಚಾರ್ಕೆ, ೨೦೦೩, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪು. ೪೨

೭. ಆಧುನಿಕ ಅರ್ಥಶಾಸ್ತ್ರ, ಕೆ.ಡಿ. ಬಸವ, ೨೦೦೦, ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳಿ, ಪು. ೨೫೮

೮. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಂ. ಗುಪ್ತಾ, ೧೯೯೮, ಎಸ್.ಡಿ.ಎಸ್.ಪಬ್ಲಿಷನ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪು. ೫

೯. ಮಾರಾಟದ ಕಾರ್ಯಗಳು, ಎಂ.ವಿ. ರಾವ್, ೧೯೮೬, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು. ೧೫

೧೦. ಮಾರಾಟದ ಕಾರ್ಯಗಳು, ಎಂ.ವಿ.ರಾವ್, ೧೯೮೬, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು. ೬೭

೧೧. ಮಾರಾಟದ ಕಾರ್ಯಗಳು, ಎಂ.ವಿ.ರಾವ್, ೧೯೮೬, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು. ೯೭

೧೨. ಮಾರುಕಟ್ಟೆ ನಿರ್ವಹಣೆ, ಕೆ.ಡಿ. ಬಸವ, ೨೦೦೦, (ಅಮೇರಿಕನ್ ಮಾರ್ಕೆಟಿಂಗ್ ಅಸೋಷಿಯನ್ ನೀಡಿದ ವ್ಯಾಖೆ) ವಿದ್ಯಾವಾಹಿನಿ ಪ್ರಕಾಶನ ಹುಬ್ಬಳಿ, ಪು. ೨೭

೧೩. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಂ. ಗುಪ್ತಾ, ೧೯೯೮, ಎಸ್.ಡಿ.ಎಸ್.ಪಬ್ಲಿಷನ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಪು. ೨೮೭

೧೪. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಚ್ಚಾರ್ಕೆ, ೨೦೦೩, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪು. ೨೩೮

೧೫. ಕರ್ನಾಟಕದ ಕಲೆಗಳು, ಸಂಪುಟ-೩, ಬೆನಕನಹಳ್ಳಿ ಜಿ. ನಾಯಕ್, ೧೯೮೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೩

೧೬. ವಕ್ತೃ: ಕಿವುಟು ಚಂದ್ರಪ್ಪ, ೭೦, ಸುಡುಗಾಡು ಸಿದ್ಧರು, ಬಡೇಲಡಕು, ಕೂಡ್ಲಿಗಿ ತಾ. ಬಳ್ಳಾರಿ ಜಿ.

೧೭. ವ್ಯವಹಾರಿಕ ಅರ್ಥಶಾಸ್ತ್ರ, ಪ್ರೊ. ಎಚ್ಚಾರ್ಕೆ, ೨೦೦೩, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪು. ೩೫೨

ಅಧ್ಯಾಯ ೫

ಸರ್ಕಾರದ ಯೋಜನಾ ಕ್ರಮಗಳು ಮತ್ತು ಅಲೆಮಾರಿಗಳು

೫.೧. ಸರ್ಕಾರದ ಅಭಿವೃದ್ಧಿ ಕ್ರಮ

೫.೨. ಯೋಜನೆಗಳ ಸಮಾಜೋ-ಆರ್ಥಿಕ ನೀತಿ

೫.೩. ಅಂಬೇಡ್ಕರ್ ತತ್ವ ಮತ್ತು ಅಲೆಮಾರಿ ಸಮಾಜದ ಅಭಿವೃದ್ಧಿ

೫.೪. ಮೀಸಲಾತಿ ಮತ್ತು ಮೂಲ ಸೌಕರ್ಯ

೫.೫. ಅಲೆಮಾರಿಗಳ ಸಬಲೀಕರಣದ ಪರ್ಯಾಯಗಳು

ಸರ್ಕಾರದ ಯೋಜನಾ ಕ್ರಮಗಳು ಮತ್ತು ಅಲೆಮಾರಿಗಳು

ನಾಳಿನ ಜೀವನದ ಅಸ್ಥಿರತೆ ಮತ್ತು ಅನಿರ್ದಿಷ್ಟತೆಯ ಭಯದಿಂದ, ದೂರಮಾಡಿ ಗೌರವದ ಜೀವನ ನಡೆಸಲು ಅನುಕೂಲ ಮಾಡುವ ಸಲುವಾಗಿ ಸರ್ಕಾರಗಳು ಯೋಜನೆಗಳನ್ನು ರೂಪಿಸಿ, ಆ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರ ವೈಯಕ್ತಿಕವಾಗಿ ಮಾಡುತ್ತಿಲ್ಲ. ಸಂವಿಧಾನದಲ್ಲಿ ಹೇಳಲಾಗಿದೆ. ಯಾರು ಮೂಲ ಸೌಕರ್ಯಗಳಿಂದ ವಂಚಿತರಾಗಿರುವರೊ. ಅಂತವರ ಜೀವನ ಮಟ್ಟ ಸುಧಾರಿಸಲು ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳು ಅವಶ್ಯಕ ಮತ್ತು ಕಡ್ಡಾಯವೂ ಕೂಡ. ಆ ನಿಟ್ಟಿನಲ್ಲಿ ಸರ್ಕಾರವು ಕೆಲವಾರು ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳು ಸಮಾಜದ ಅಂಚಿನ ವ್ಯಕ್ತಿಗಳಾದ ಅಲೆಮಾರಿಗಳ ಪರ ಇಲ್ಲವಾಗಿದೆ. ನೆಲೆನಿಂತವರ ಪರವಾಗಿ ಇವೆ. ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳೂ ಸಾಗಬೇಕಾದ ದಿಕ್ಕಿನಡೆಗೆ ಸಾಗದೆ ಬೇರೊಂದು ದಿಕ್ಕಿನಡೆಗೆ ಸಾಗುತ್ತಿವೆ.

೫.೧ ಸರ್ಕಾರದ ಅಭಿವೃದ್ಧಿ ಕ್ರಮ

ದೀರ್ಘ ಕಾಲದಿಂದ ತಾರತಮ್ಯ ಮತ್ತು ತುಳಿತಕ್ಕೆ ಒಳಗಾಗಿ ಮೂಲಭೂತ ಸೌಲಭ್ಯಗಳಿಂದ ವಂಚಿತರಾದ ಸಮುದಾಯಗಳನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಮಾನರಾಗಿ ಪರಿಗಣಿಸಲು ಅಥವಾ ಅಂತಹ ಸಮುದಾಯಗಳನ್ನು ಸಂರಕ್ಷಣೆ ಮತ್ತು ಕಲ್ಯಾಣದಲ್ಲಿ ಮಹತ್ವ ನೀಡಲು ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ ಬಂದಿದೆ.

"ಅಭಿವೃದ್ಧಿ ಎಂದರೆ ಅಭ್ಯುದಯ, ಶ್ರೇಯಸ್ಸು, ಏಳಿಗೆ ಮುಂತಾದ ಸಮಾನಾರ್ಥದಲ್ಲಿ ಬಳಸಬಹುದು."[1] ಅಂದರೆ ಸಮಾನತೆಯ ಮೌಲ್ಯಗಳ ಮೇಲೆ ಸ್ಥಾಪಿತವಾದ ಪ್ರತಿಯೊಬ್ಬ ವ್ಯಕ್ತಿ ತನ್ನ ಸುಪ್ತ ಸಾಮರ್ಥ್ಯ ಅರಿಯಲು ಅವಶ್ಯಕವಾದವೆಲ್ಲವನ್ನು ಅವರುಗಳ ಕೈಗೆ ಸಿಗುವಂತ ಶೋಷಣೆಗೆ ಎಡೆಯೆ ಇಲ್ಲದಂತಹ ಸಮಾಜದ ಸೃಷ್ಟಿಯೆ ಅಭಿವೃದ್ಧಿಯ ಪ್ರಮುಖ ಉದ್ದೇಶ. ಆದರೆ ಸರ್ಕಾರದ ಅಭಿವೃದ್ಧಿ ಕ್ರಮ ಬೇರೊಂದು ದಿಕ್ಕಿನಲ್ಲಿ ಸಾಗುತ್ತಿದೆ. ಬೃಹತ್ ಕೈಗಾರಿಕೆ, ಅಣೆಕಟ್ಟುಗಳು, ಅಣುಶಕ್ತಿ ಸ್ಥಾವರುಗಳು ಗಣಿಗಳು ಪೇಪರ್‌ಕಾರ್ಖಾನೆಗಳನ್ನು ಸ್ಥಾಪಿಸುವುದು ಅಭಿವೃದ್ಧಿ ಕ್ರಮವಾಗಿದೆ. ಇಂತಹ ಕ್ರಮದಿಂದ ಉಪಯೋಗವಾಗುವುದು ಅಂಚಿನ ಸಮುದಾಯಗಳಿಗಲ್ಲ. ಬದಲಾಗಿ ಬಂಡವಾಳಶಾಹಿಗಳಿಗೆ ಭೂಮಾಲಿಕರಿಗೆ ಅನುಕೂಲವಾಗಿದೆ. ಇಂತಹ ಅಭಿವೃದ್ಧಿ ಕ್ರಮದಿಂದ ಕೈಗೊಳ್ಳುವ ಸ್ಥಳದಲ್ಲಿ ಸಾವಿರಾರು

ವರ್ಷಗಳಿಂದ ವಾಸಿಸಿಕೊಂಡು ಬಂದ ಸಮುದಾಯಗಳನ್ನು ಸ್ಥಳಾಂತರಿಸಲಾಗುತ್ತಿದೆ. ಬದುಕನ್ನು ಕಸಿದು ಕೊಳ್ಳುತ್ತಿದೆ. ಒಂದು ಸಮುದಾಯ ಎಲ್ಲಿ ನೆಲೆಯಾಗಿರುತ್ತದೆಯೊ ಅಲ್ಲಿ ತನ್ನದೆ ಆದ ರಚನೆಯ ಮೂಲಕ ಅಲ್ಲಿನ ಪರಿಸರದಲ್ಲಿ ಹೊಂದಿಕೊಂಡು ಜೀವಿಸುತ್ತಿರುತ್ತದೆ. ಈ ಸಂದರ್ಭದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲಿಂದ ಆ ಸಮುದಾಯಗಳನ್ನು ಒಡಿಸುವುದು ಮಾತ್ರವಲ್ಲದೆ ಆ ಸಂಪತ್ತನ್ನು ನಂಬಿ ಬದುಕುತ್ತಿದ್ದವರಿಗೆ ಆ ಸಂಪತ್ತೆ ಇರುವುದಿಲ್ಲ. ಉದ್ಯಾನವನ, ಪ್ರವಾಸೋದ್ಯಮ, ರೈಲ್ವೆ ಯೋಜನೆ ಇತ್ಯಾದಿಗಳಿಂದ ಕಾಡನ್ನೆ ನಂಬಿದ ಸಮುದಾಯಗಳಿಗೆ ಕಾಡು ಕಡಿಯುವುದರಿಂದ ಬದುಕು ಅತಂತ್ರ ವಾಗುವುದು. ಬೇರೊಂದು ಸ್ಥಳದಲ್ಲಿ ಆಶ್ರಯ ನೀಡಬಹುದಾದರೂ ಬದುಕಲು ಬೇಕಾದ ಅವಕಾಶಗಳನ್ನು ಮಾಡಿಕೊಡದಿರುವುದು ದುರಂತಮಯ. ಅಭಿವೃದ್ಧಿಯ ಕ್ರಮದ ಲೋಪದೋಷ, ನೀತಿಗಳಿಂದ ಸಾಧಿಸುವು ದಕ್ಕಿಂತ ನಷ್ಟಗಳೆ ಆಗುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮ ಹಮ್ಮಿಕೊಳ್ಳುವ ಮೊದಲು ಯಾರಿಗಾಗಿ ಅಭಿವೃದ್ಧಿ, ಎಂತಲ್ಲಿ ಅಭಿವೃದ್ಧಿ ಅಂತಹ ಅಭಿವೃದ್ಧಿಯ ಬಗ್ಗೆ ಸ್ಥಳಿಯ ಜನರ ಆಸಕ್ತಿ ಹೇಗಿದೆ ಎಂದು ತಿಳಿಯುವುದು. ಅದಕ್ಕೆ ಬೇಕಾದ ಪರ್ಯಾಯ ಯಾವ ತೆರನಾಗಿ ಸಾಧ್ಯ ಎಂಬುದನ್ನು ಆಲೋಚಿಸದೆ ದಿಡೀರನೆ ಕಾರ್ಯರೂಪದಲ್ಲಿ ಇಳಿಯುವುದರಿಂದ ಅಭಿವೃದ್ಧಿ ಕ್ರಮಗಳು ಸೋಲುತ್ತವೆ. ಆದುದರಿಂದ ಅಭಿವೃದ್ಧಿಯ ಕ್ರಮಗಳು ಏಕಮುಖವಾಗದೆ, ಬಹುಮುಖವಾಗಿ ಅಂಚಿನ ಸಮುದಾಯಗಳನ್ನು ಮೇಲೆ ತರಬೇಕಾಗಿದೆ. ಇದರಲ್ಲಿ ಎರಡು ರೀತಿಯ ಅಭಿವೃದ್ಧಿಯಾಗಬೇಕಿದೆ. ೧. ಆರ್ಥಿಕಾಭಿವೃದ್ಧಿ ೨. ಮಾನವಾಭಿವೃದ್ಧಿ.

೧. ಆರ್ಥಿಕಾಭಿವೃದ್ಧಿ

ಆರ್ಥಿಕ ಅಭಿವೃದ್ಧಿಯಲ್ಲಿ ಸಮುದಾಯ ನಿಷ್ಠವಾದ ಜಾತ್ಯತೀತವಾದ, ತಾರತಮ್ಯ ರಹಿತವಾದ ಆರ್ಥಿಕ ಸಂಹಿತೆಗಳು ಬಹುಕಾಲದ ಸ್ವಾಸ್ಥ್ಯವನ್ನು ಉಳಿಸಬಲ್ಲದು. ಅಂತಹ ದಿಕ್ಕಿನಲ್ಲಿ ಅಂಚಿನ ಸಮುದಾಯ, ಅಲೆಮಾರಿಗಳು ಪ್ರಯಾಣ ಮಾಡಬಲ್ಲರು. ಅಂತಹ ಆರ್ಥಿಕ ಸಂಹತಿಗಳನ್ನು ಕೇವಲ ಆರ್ಥಿಕ ತಜ್ಞರು, ಯೋಜನಾಕಾರರಷ್ಟೆ ರೂಪಿಸದೆ ಸಂಬಂಧಪಡುವ ಮಾನವ ಸಮಾಜ, ಆರ್ಥಿಕ ತಜ್ಞರು ಒಳಗೊಂಡ, ಸಮುದಾಯ ಕೇಂದ್ರಬಿಂದುವಾಗಿ ಅಭಿವೃದ್ಧಿ ಕ್ರಮಗಳೂ ಜಾರಿಯಾಗಬೇಕಿದೆ. ಏಕೆಂದರೆ ಇಲ್ಲಿಯ ತನಕವೂ ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನಾಕಾರರು ಗಮನಕೊಡದೆ, ಸಂಪತ್ತಿನ ಕೇಂದ್ರದಿಂದ ಬಂಡವಾಳದ ಪ್ರಜ್ಞೆಯಿಂದ ಕೃತಕ ಅಭಿವೃದ್ಧಿ ಮಾದರಿಗಳನ್ನು ಪ್ರತಿಪಾದಿಸುತ್ತಾ ಬಂದಿದ್ದಾಗಿದೆ.

೨. ಮಾನವಾಭಿವೃದ್ಧಿ

ಮಾನವ ಸಂಪತ್ತಿನ ಅರ್ಥಪೂರ್ಣ ವಿಕಾಸ ಮತ್ತು ಅಂತಃಕರಣದ ಅಂತರ್ಗತ ಸಂಬಂಧವೆ ಶ್ರೇಷ್ಠವಾದ ಅಭಿವೃದ್ಧಿ ಎನ್ನಬಹುದು. ಈ ಹಿಂದೆ ರೂಪಿಸಿದಂತಹ ಅಭಿವೃದ್ಧಿ ಮಾನದಂಡಗಳು ಆ ಸಮುದಾಯದೊಂದಿಗೆ ಅನುಸಂಧಾನವಿಲ್ಲದೆ, ವಿಕಾಸವಿಲ್ಲದೆ, ನಾಗರಿಕತೆಗಳೂ ಸಂಪತ್ತಿನ ಕೇಂದ್ರದಲ್ಲಿ

ಭೋಗದ ಲಾಲಾಸೆಯನ್ನು ಆರ್ಥಿಕ ಅಪಮೌಲ್ಯಗಳನ್ನು ಬಲಪಡಿಸಿಕೊಂಡು ವೈರುಧ್ಯಗಳೂ ಬೆಳೆದುಕೊಂಡು ಬಂದಿವೆ. ಹೀಗಾಗಿ ಸಮುದಾಯಗಳ ಉತ್ಪಾದನಾ ಸಾಮರ್ಥ್ಯಕ್ಕೂ ಅವರ ಶ್ರಮದ ರೀತಿ ನೀತಿಗು ಸಂಪತ್ತಿನ ಕೇಂದ್ರೀಕರಣಕ್ಕೂ ಮತ್ತು ಅಭಿವೃದ್ಧಿಯ ಮಾನದಂಡಗಳಿಗೂ ಸಂಬಂಧ ಇಲ್ಲದಂತ ಬಿರುಕುಗಳು ಏರ್ಪಟ್ಟು ಮಾನವೀಯ ಅಂತಃಕರಣದ ಅಭಿವೃದ್ಧಿ ಈತನಕ ಆಗಿರುವುದಿಲ್ಲ. ಇಂತಹ ಅಭಿವೃದ್ಧಿಯ ಮಾನದಂಡದಿಂದ ಸಂಬಂಧಗಳು ಮೂಲೆಗುಂಪಾಗಿವೆ. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬ ಗಳಾಗುತ್ತಿವೆ. ಸಹಬಾಳ್ವೆಗೆ ಬದಲು ಸ್ಪರ್ಧೆ ಬೆಳೆಯುತ್ತಿದೆ. ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನತೆ ಬಿಂಬಿ ಸುತ್ತಿದೆ. ಆದುದರಿಂದ ಸಮಾಜದ ವಿಘಟನೆಗೆ ಅಭಿವೃದ್ಧಿಯ ಕ್ರಮ ದಾರಿಮಾಡಿಕೊಟ್ಟಂತಾಗುತ್ತದೆ. ಅಮರ್ತ್ಯಸೇನ್ ಪ್ರತಿಪಾದಿಸುವುದೆಂದರೆ "ಮಾನವ ಮತ್ತು ಮಾನವ ಮುಖಿ ಅಭಿವೃದ್ಧಿಯನ್ನು"[2] ಇಂತಹ ಅಭಿವೃದ್ಧಿಯಿಂದ ಮಾನವ ಸಮಾಜ ಸಮಸ್ಯೆಯಿಂದ ಹೊರಬಂದು ಸಮಾಜಿಕ ಅಸಮಾನತೆ ತಡೆಯಬಹುದಾಗಿದೆ" ಎನ್ನುತ್ತಾರೆ. ಈ ತೆರನಾದ ಅಭಿವೃದ್ಧಿ ಕ್ರಮದ ಜರೂರಿದೆ.

ಅಭಿವೃದ್ಧಿ ಕ್ರಮಗಳು ಈ ಕೆಳಗಿನಂತೆ ಆಗಬೇಕಾಗಿದೆ

೧. ಮಾನವ ಸಂಪತ್ತಿನಿಂದ ಅಭಿವೃದ್ಧಿಯಾಗಬೇಕಾಗಿದೆ. ಇಂತಲ್ಲಿ ಆ ಸಮುದಾಯ ಬಯಸುವಂತ ಮತ್ತು ಬಹುಕಾಲದವರೆಗೂ ಬದುಕನ್ನು ಕಟ್ಟಿಕೊಡಲು ಬೇಕಾದ ಅಭಿವೃದ್ಧಿ ಕ್ರಮ ಕೈಗೊಳ್ಳ ಬೇಕಾಗಿದೆ.

೨. ಕರಕುಶಲ ತಂತ್ರಜ್ಞಾನವನ್ನು ಆಧುನಿಕತೆಯ ಸಂಯೋಗದಿಂದ ಸಮಕಾಲೀನಗೊಳಿಸಬೇಕು. ಅವುಗಳಿಗೆ ಬೇಕಾದ ಮಾರುಕಟ್ಟೆಯನ್ನು ದೇಶಿಯವಾಗಿ ವಿಸ್ತರಿಸಬೇಕಾಗಿದೆ. ಆ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ಜಾಗತೀಕರಣಗೊಳಿಸಬೇಕು.

೩. ಕರಕುಶಲ ಸಮುದಾಯಗಳಿಗೆ ಪ್ರತ್ಯೇಕವಾದ ಆರ್ಥಿಕ ಸ್ವಾಯತ್ತತೆ ಬೇಕು. ಅದನ್ನು ಸರ್ಕಾರ ನೀಡಬೇಕು.

೪. ಸಮುದಾಯಗಳನ್ನು ಹೊಸ ಕಾಲದ ಎಚ್ಚರದಲ್ಲಿ ಅವರ ಸಂಸ್ಕೃತಿ ಸಾಧ್ಯವಾಗಿಸಿಟ್ಟು ಉತ್ಪಾದನಾ ಆಧ್ಯಾತ್ಮದಲ್ಲಿ ಪುನರ್ ಸಂಘಟಿಸಬೇಕು.

೫. ಸಮುದಾಯಗಳ ಆರೋಗ್ಯ ಸುಧಾರಿಸಬೇಕು.

೬. ಸ್ಥಳೀಯ ಉತ್ಪಾದನಾ ಪರಿಕರಗಳನ್ನು ಪುನಶ್ಚೇತನಗೊಳಿಸಲು ಪ್ರಾದೇಶಿಕ ವಲಯಗಳನ್ನು ನಿರ್ಮಿಸ ಬೇಕು.

೭. ಸಂವಿಧಾನಿಕ ಸಂಹಿತೆಗಳನ್ನು ಮತ್ತಷ್ಟು ಬಲಪಡಿಸಬೇಕು.

೮. ಮಾನವ ಕೇಂದ್ರಿತ ಆರ್ಥಿಕ ಯೋಜನಾ ವ್ಯವಸ್ಥೆಯ ಬದಲು ನಿಸರ್ಗದ ಸಹಜ ತಾರ್ಕಿಕ ಗತಿಯಲ್ಲಿ ಉತ್ಪಾದನಾ ಕ್ರಮಗಳನ್ನು ಬೆಳಸಬೇಕು.

೯. ಸಂಪತ್ತಿನ ಕೇಂದ್ರಿಕರಣ ತಡೆದು ಸಂಪತ್ತಿನ ಪಾಲುಗಳು ಅಲೆಮಾರಿಯಂತಹ ಅಂಚಿನ ಸಮುದಾಯ ಗಳಿಗೆ ಸೇರುವಂತ ಕ್ರಮ ಆಗಬೇಕು.

೧೦. ಬೃಹತ್ ಉದ್ದಿಮೆದಾರರ ಕಪಿಮುಷ್ಠಿಯಿಂದ ಸಿಲುಕಿಕೊಂಡಿರುವ ಸಮುದಾಯಗಳನ್ನು ಬಿಡುಗಡೆ ಗೊಳಿಸಿ ಆರ್ಥಿಕವಾಗಿ ಸಬಲರಾಗುವಂತ ವಾತವಾರಣ ಸೃಷ್ಟಿಸಬೇಕು.

೧೧. ಮಾನವರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅತಿ ಬೇಗನೆಯಲ್ಲಿ ಕಲ್ಪಿಸಿಕೊಡಬೇಕು.

ಹೀಗಾದಾಗ ಮಾತ್ರ ಅಭಿವೃದ್ಧಿಯು ಯಶಸ್ಸುಗೊಂಡ ಅಲೆಮಾರಿಗಳು ಕೂಡ ನೆಲೆನಿಂತು ಬದುಕನ್ನು ರೂಪಿಸಬಲ್ಲರು. ಅಂತಹ ಅಭಿವೃದ್ಧಿಯ ಕಾರ್ಯಕ್ರಮಗಳು ಬೇಗ ಆಗಬೇಕಾಗಿದೆ.

೫.೨. ಯೋಜನೆಗಳ ಸಮಾಜೋ-ಆರ್ಥಿಕ ನೀತಿ

ಶತ ಶತಮಾನಗಳ ಕಾಲದಿಂದಲೂ ಸಾಮಾಜಿಕ ಅಸಮಾನತೆಯ ಬಾಹುಗಳಲ್ಲಿ ಬಂಧಿತರಾಗಿ, ಬದುಕನ್ನು ಕಳೆದುಕೊಂಡ ಸಮುದಾಯಗಳು ಸಾಕಷ್ಟಿವೆ. ಅಂತಹ ಸಮುದಾಯಗಳು ಶೈಕ್ಷಣಿಕ, ಆರ್ಥಿಕ, ರಾಜಕೀಯ ಹಾಗೂ ಇತರೆ ಕ್ಷೇತ್ರಗಳಲ್ಲಿ ಹಿಂದುಳಿದಿವೆ. ಈ ಅಸಮಾನತೆ ನಿರ್ಮೂಲನೆ ಮಾಡಿ ದಾರಿದ್ರ್ಯ ಬದುಕಿನಿಂದ ಮುಖ್ಯವಾಹಿನಿಗೆ ಕರೆತರಲು ಸರ್ಕಾರವು ಅಭಿವೃದ್ಧಿ ಕಾರ್ಯಗಳನ್ನು ಹಾಕಿಕೊಳ್ಳಲು ಮುಂದಾಯಿತು. ಅಭಿವೃದ್ಧಿ ಕಾರ್ಯಕ್ರಮಗಳು ಜಾರಿಗೆ ಬರಲು, ಅಭಿವೃದ್ಧಿಯನ್ನು ಮುನ್ನಡೆಸಿಕೊಂಡು ಹೋಗಲು ದಿಕ್ಸೂಚಿಯಾಗುವಂತ ಯೋಜನೆಗಳು ಅವಶ್ಯಕವೆನಿಸಿತು. ಯೋಜನೆಗಳು ಇರದಿದ್ದರೆ ಅಭಿವೃದ್ಧಿ ಕಾರ್ಯಕ್ರಮಗಳು ಅವೈಜ್ಞಾನಿಕವಾಗುವವು. ಹಾಗೂ ವಿಫಲವಾಗುವವು ಆದುದರಿಂದ ಯೋಜನೆಯು ಬಹುಮುಖ್ಯವೆನಿಸಿತು.

ಯೋಜನೆ ಎಂದರೆ ಗುರಿಯನ್ನು ಸಾಧಿಸಲು ಮೊದಲು ನಿರ್ಧಾರ ಮಾಡಿದ ರೀತಿಯಲ್ಲಿ ಕಾರ್ಯ ನಡೆಸುವುದು. ಆಯ್ಕೆ ಅಥವಾ ಆಧ್ಯತೆಗಳನ್ನು ನಿರ್ಧರಿಸುವುದು ಎಂದು ಹೇಳಬಹುದು. ವಿಶಾಲಾರ್ಥದಲ್ಲಿ ಹೇಳಬೇಕೆಂದರೆ ಮಾನವರ ವ್ಯವಹಾರಗಳಿಗೆ ಸಂಬಂಧಿಸಿದ ಅತ್ಯಂತ ವಿವೇಚನಾ ಪೂರ್ಣವೆನ್ನುವ ಕಾರ್ಯ ಚಟುವಟಿಕೆಯಾಗಿದೆ. ಇದು ಸಾಮಾಜಿಕ ಸುಧಾರಣೆಗಿಂತ ಭಿನ್ನವಾದುದು. ಸುಧಾರಣೆಯು ಪರಿಹಾರವಾದುದು. ದೋಷವನ್ನು ತಿದ್ದುವಂತದು ಆದರೆ ಯೋಜನೆಯು ಪ್ರತಿಬಂಧಕ ಹಾಗೂ ರಚನಾತ್ಮಕ ಸ್ವರೂಪದಾಗಿರುತ್ತದೆ. ಇದು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸಾಧಿಸಬೇಕಾಗುವುದೇನು ಎಂಬುದನ್ನು ಸೂಚಿಸುತ್ತದೆ. ಇದು ಕಾಲ್ಪನಿಕಕ್ಕಿಂತ ಪ್ರಾಯೋಗಿಕ ಅಂಶಗಳಿಗೆ ಹೆಚ್ಚಿನ ಮಹತ್ವ ನೀಡುತ್ತದೆ.

ಯೋಜನೆ ಎಂಬುದು ೨೦ನೆಯ ಶತಮಾನದ ಬಹುಮುಖ್ಯ ಪರಿಕಲ್ಪನೆ. ಇಂತಹ ಯೋಜನೆಯು ಒಂದು ಕ್ಷೇತ್ರದಲ್ಲಿ ಮೀಸಲಾಗಿರದೆ ವಿಶಾಲವಾಗಿ ಕಾರ್ಯವ್ಯಾಪ್ತಿಯನ್ನು ಚಾಚಿಕೊಂಡಿದೆ. ಯೋಜನೆಯು ಮೊಟ್ಟಮೊದಲು ಕಾಣಿಸಿಕೊಂಡಿದ್ದು ರಷ್ಯಾದಲ್ಲಿ ೧೯೨೮ರಲ್ಲಿ ಮೂವತ್ತರ ದಶಕದ ಆರ್ಥಿಕ ಮುಗ್ಗಟ್ಟು ಇಡಿ ಜಗತ್ತನ್ನೆ ತಲ್ಲಣಗೊಳಿಸಿದ್ದರಿಂದ ಆ ಮುಗ್ಗಟ್ಟಿನಿಂದ ಹೊರ ಬರಲು ಯೋಜನೆಗಳನ್ನು ರೂಪಿಸ ಲಾಯಿತು. ಭಾರತದಲ್ಲಿ ೧೯೫೧ರಿಂದ ಯೋಜನೆಗಳು ಜಾರಿಗೆ ಬಂದವು.

ಯೋಜನೆಗಳ ಗುರಿಗಳು

- ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸುವುದು.
- ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು.
- ಕೈಗಾರಿಕೆಗಳ ಅಭಿವೃದ್ಧಿ.
- ಬಂಡವಾಳ ಸಂಗ್ರಹಣೆ.
- ಆದಾಯ ಮತ್ತು ಸಂಪತ್ತನ್ನು ಸಮನಾಗಿ ಹಂಚುವುದು.
- ಜನಸಂಖ್ಯೆ ನಿಯಂತ್ರಣ
- ಗೃಹಕೈಗಾರಿಕೆಗಳ ಪುನರುಜ್ಜೀವನ.

ಹೀಗೆ ಹತ್ತಾರು ಗುರಿ, ಉದ್ದೇಶಗಳನ್ನಿಟ್ಟುಕೊಂಡು ಯೋಜನೆಗಳು ಜಾರಿಗೆ ಬಂದವು. ಈ ಯೋಜನೆಗಳಿಂದ ಜನರ ಜೀವನಮಟ್ಟ ಸುಧಾರಿಸಬಹುದೆಂಬ ನಂಬಿಕೆ ಬಂದಿತು. ಆದರೆ ನಿಜಸ್ಥಿತಿ ಬೇರೆಯಾಯಿತು. ೨೧ನೆಯ ಶತಮಾನದಲ್ಲೂ ಬಡತನ, ಅನಾರೋಗ್ಯ, ಅನಕ್ಷರತೆ, ಅಸಮಾನತೆಯಿಂದ ಹೊರಬರಲು ಸಾಧ್ಯವಾಗಿಲ್ಲ. ಕಾರಣ ಯೋಜನೆಗಳ ರೀತಿ-ನೀತಿಗಳಾಗಿವೆ.

ಯಾವುದೆ ಒಂದು ನೀತಿಯು ವ್ಯಕ್ತಿಗಳು ಮತ್ತು ಸಮುದಾಯಗಳ ಜೀವನದ ಮೇಲೆ ಪ್ರಭಾವ ಬೀರಬಲ್ಲವಂತವಾಗಿವೆ. ಯೋಜನಾ ನೀತಿಗಳು ಹೆಚ್ಚಿನ ಗೊಂದಲಗಳಿಗೆ ಅವಕಾಶ ಮಾಡಿಕೊಡದೆ ವೈಜ್ಞಾನಿಕ ಮತ್ತು ಪಾರದರ್ಶಕ ತಳಹದಿಯ ಮೇಲೆ ಅನುಷ್ಠಾನಗೊಳಿಸಬೇಕಾಗುತ್ತದೆ. ಸರ್ಕಾರದ ಅಭಿವೃದ್ಧಿಗಳು ದೊಡ್ಡವೆ. ಆದರೆ ರೂಪಿಸುವ ಯೋಜನಾ ನೀತಿಗಳಲ್ಲಿರುವ ದೋಷದಿಂದ ಏನು ಸಾಧಿಸಬೇಕಿತ್ತೊ, ಅದನ್ನು ಸಾಧಿಸಲು ಆಗುತ್ತಿಲ್ಲ. ಕೇವಲ ಕೆಲವು ಉದ್ದೇಶ ಮತ್ತು ಅವಸರದ ನೀತಿಗಳನ್ನು ರೂಪಿಸುವುದರಿಂದ ಹಣ, ಸಮಯ ಹಾಗೂ ಸಂಪತ್ತು ಪೋಲಾಗುತ್ತಿವೆ. ಜೀವನ ಮಟ್ಟ ಎಲ್ಲಿತ್ತೋ ಅಲ್ಲಿಯೆ ಇದೆ.

ಇಂದಿಗೂ ನಮ್ಮಲ್ಲಿರುವ ಯೋಜನಾ ನೀತಿಗಳಲ್ಲಿ ವಸಾಹತು ಶಾಹಿಯ ಚಹರೆ ಗುರುತಿಸಬಹುದಾಗಿದೆ. ಅಂದರೆ ವಸಾಹತು ಶಾಹಿಯ ಮುಖ್ಯ ಸ್ಥಿತಿ ಎಂದರೆ ಬಂಡವಾಳ ಪ್ರಧಾನ. ಅದನ್ನೆ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿದೆ. ಬೃಹತ್ ಬಂಡವಾಳ ಹಾಕಿ ಬೃಹತ್ ಕಟ್ಟಡ, ಕೈಗಾರಿಕೆ, ಅಣುವಿದ್ಯುತ್ ಘಟಕಗಳು, ಗಣಿಗಾರಿಕೆ, ಕಂಪ್ಯೂಟರ್‌ನ ಸಾಫ್ಟ್‌ವೇರ್ ಕ್ರಾಂತಿ, ರೈಲ್ವೆ ಯೋಜನೆಗಳು, ಅರಣ್ಯಗಳು, ಪ್ರವಾಸೋದ್ಯಮ ಮತ್ತು ಸ್ಥಳಾಂತರ ಇತ್ಯಾದಿಗಳನ್ನೆ ಮುಖ್ಯವಾಗಿಟ್ಟು ಯೋಜನೆಯನ್ನಾಗಿಟ್ಟುಕೊಂಡು ಕಾರ್ಯನೀತಿಯನ್ನು ರೂಪಿಸಲಾಗುತ್ತಿದೆ. ಆ ಕಾರ್ಯ ನೀತಿಗಳು ಆಯಾ ಪರಿಸರದಲ್ಲಿ ವಾಸವಿರುವ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಮೇಲೆ ಸವಾರಿ ಮಾಡುತ್ತವೆ. ಬದುಕನ್ನು ಅತಂತ್ರ ಮಾಡಲ್ಪಟ್ಟಿವೆ. ಪರಿಣಾಮ ಬುಡಕಟ್ಟುಗಳು ಮತ್ತು ಅಲೆಮಾರಿ ಸಮುದಾಯಗಳ ಬದುಕು ಮತ್ತಷ್ಟು ಸಂಕೀರ್ಣವಾಗುತ್ತಿದೆ. ಇದಕ್ಕೆಲ್ಲಾ ಬಹುಮುಖ್ಯ ಕಾರಣ ಯೋಜನೆಯ ನೀತಿಗಳು. ಆದುದರಿಂದ

ಒಂದು ಯೋಜನೆಯನ್ನು ರೂಪಿಸಿ ಕಾರ್ಯ ರೂಪದಲ್ಲಿ ತರುವ ಮೊದಲು ಯೋಜನಾ ನೀತಿಗಳನ್ನು ಪರಿಷ್ಕರಿಸಬೇಕಿದೆ. ಪರಿಷ್ಕರಣೆಗೊಂಡ ನೀತಿಗಳನ್ನು ಸಮುದಾಯ ನಿಷ್ಠೆಯಿಂದ ಒಪ್ಪಿಕೊಳ್ಳುವಂತಾಗಬೇಕು. ಹಾಗದಾಗ ಮಾತ್ರ ಅನುಷ್ಠಾನಕ್ಕೆ ಬರುವ ಯೋಜನೆಗಳು ಮತ್ತು ನೀತಿಗಳು ಸಫಲವಾಗುವವು.

ಅಲೆಮಾರಿ ಸಮುದಾಯಗಳಿಗೆ ಅನ್ವಯಗೊಂಡಂತೆ ಅಲ್ಲಲ್ಲಿ ಕೆಲವು ಅಭಿವೃದ್ಧಿಯ ಪರವಾದ ಕಾರ್ಯಕ್ರಮಗಳಿವೆ. ಆ ಕಾರ್ಯಗಳಲ್ಲಿ ಯೋಜನಾ ನೀತಿಯ ವೈಫಲ್ಯ ಕಾಣಬಹುದಾಗಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಜಿಲ್ಲೆಯ ಹೊರವಲಯದ ಶ್ರೀಧರ ಗಡ್ಡೆ ಹತ್ತಿರ ಅಲೆಮಾರಿ ಸಮುದಾಯ ಗಳು "ಗುಡಾರ ನಗರ"ವೆಂಬ ವಸತಿ ಸಮುಚ್ಚಯ ಅನಾವರಣಗೊಂಡಿದೆ. ಇಲ್ಲಿ ೧೦ ಅಲೆಮಾರಿ ಸಮುದಾಯಗಳಿಗೆ ವಸತಿ ಕೊಡಲಾಗಿದೆ. ಆದರೆ ಆ ಸಮುದಾಯ ನೆಮ್ಮದಿಯುತ ಜೀವನಕ್ಕೆ ಬೇಕಾದ ವಾತವರಣವಿಲ್ಲವೆಂದು ಹೇಳುತ್ತಾರೆ. ವಾಸಿಸಲು ವಸತಿ ಕಲ್ಪಿಸಲಾಗಿದೆ. ವಸತಿಗೆ ಬೇಕಾದ ಮೂಲ ಸೌಕರ್ಯಗಳ ಕೊರತೆಯಿದೆ. ವಿದ್ಯುತ್‌ಚ್ಛಕ್ತಿ, ಸಾಮೂಹಿಕ ಶೌಚಾಲಯವಿಲ್ಲವಾಗಿದೆ. ಗುಡಾರ ನಗರದ ಸುತ್ತಲೂ ಖಾಸಗಿಯರ ಆಸ್ತಿಯಿರುವುದರಿಂದ ಆ ಸ್ಥಳದಲ್ಲಿ ಹೋಗಲು ಅವಕಾಶವಿಲ್ಲ. ಕುಡಿಯಲು ನೀರಿನ ಸರಿಯಾದ ಸೌಕರ್ಯವಿಲ್ಲ. ಇದ್ದರು ನೀರು ಸರಿಯಾದ ಸಮಯದಲ್ಲಿ ದೊರೆಯುತ್ತಿಲ್ಲ. ರಾತ್ರಿಯ ವೇಳೆ ಬೀದಿ ದೀಪದ ಸಮಸ್ಯೆಯಿದೆ.

ಊರೂರು ಅಲೆದು ತಮ್ಮ ಪಾರಂಪಾರಿಕ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದ ಅಲೆಮಾರಿಗಳನ್ನು ಕೂಡಿ ಹಾಕಿರುವುದರಿಂದ ನಿರುದ್ಯೋಗ ತಾಂಡವಾಡುತ್ತಿದೆ. ಕಾರಣ ಅಲೆಮಾರಿತನದ ಬದುಕು ಇವರ ದಾಗಿರುವುದರಿಂದ ಹೆಚ್ಚಾಗಿ ವ್ಯಾಪಾರ, ಕರಕುಶಲ ಕೈಗಾರಿಕೆಗಳನ್ನು ಇಷ್ಟಪಡುತ್ತಾರೆ. ಇಂತವರಿಗೆ ಬಯಸಿದ ಸಹಕಾರ ಸಹಾಯವಿಲ್ಲವಾಗಿದೆ. ಒಂದು ಎಮ್ಮೆ, ಇಲ್ಲವೆ ಹಸು ಕೊಟ್ಟರೆ ಎಷ್ಟರ ಮಟ್ಟಿಗೆ ಸಬಲರಾಗಲು ಸಾಧ್ಯ. ಹಸು ಅಥವಾ ಎಮ್ಮೆ ಕೊಡಿಸದರೆ ಆಹಾರದ ಸಮಸ್ಯೆ ಬರುತ್ತದೆ ಅದನ್ನು ಭರಿಸುವುದು ಹೇಗೆ? ಎಲ್ಲಕ್ಕಿಂತ ಮುಖ್ಯವಾಗಿ ಆ ಉದ್ಯೋಗವನ್ನು ಆ ಸಮುದಾಯ ಬಯಸಿತ್ತೆ ಎನ್ನುವುದು ಮುಖ್ಯ. ಅಲ್ಪ-ಸ್ವಲ್ಪ ಜನರು ಮಾತ್ರ ಹತ್ತಿರದ ನಗರದಲ್ಲಿ ತಮ್ಮ ವೃತ್ತಿಕೈಗೊಳ್ಳಬಹುದು. ಒಂದು ವೃತ್ತಿಯನ್ನು ಅದೆ ನಗರದಲ್ಲಿ ಎಲ್ಲಿಯ ತನಕ ನಡೆಸಲು ಸಾಧ್ಯ. ಮನೆಗೆ ಬಂದರೆ ಅನ್ನವಿಲ್ಲ. ಆದುದರಿಂದ ಮತ್ತೆ ಎಂದಿನಂತೆಯೆ ಆ ಸಮುಚ್ಚಯ ಬಿಟ್ಟು ಅಲೆದಾಟದಲ್ಲಿ ತೊಡಗಬೇಕಾಗುತ್ತದೆ. ಮಳೆಗಾಲದಲ್ಲಂತೂ ವಿಪರೀತ ತೊಂದರೆಗಳು ತಗ್ಗು ಪ್ರದೇಶದಲ್ಲಿ ನಗರ ಸ್ಥಾಪಿಸಿರುವುದರಿಂದ ಮೇಲು ಪ್ರದೇಶದ ನೀರೆಲ್ಲಾ ನಗರಕ್ಕೆ ಹರಿದು ಬಂದು ವಸತಿಯೊಳಗೆ ಬರುತ್ತವೆ. ಹೀಗಾಗಿ ಯಾವುದೆ ಯೋಜನೆ ಯನ್ನು ಅನುಷ್ಠಾನದಲ್ಲಿ ತರುವ ಮೊದಲು ಆ ಸಮಾಜವನ್ನು ಅಥವಾ ಆ ಸಮುದಾಯವನ್ನು ಸಮಗ್ರ ವಾಗಿ ಅಧ್ಯಯನಿಸಬೇಕಾಗುತ್ತದೆ. ಕೇವಲ ಯೋಜನಾಕಾರರಷ್ಟೆ ಯೋಜನೆ ರೂಪಿಸದೆ ಬಹುಮುಖಿ ಚಿಂತನೆ ಒಳಗೊಂಡಂತೆ ನೀತಿ ಬೇಕಾಗುತ್ತದೆ.

ಪ್ರತಿಯೊಂದು ಸಮಾಜಕ್ಕೂ ಅಥವಾ ಸಮುದಾಯಕ್ಕೂ ತಮ್ಮದೆ ಆದ ಆರ್ಥಿಕ ನೀತಿಯಿರುತ್ತದೆ. ಯೋಜನೆಗೂ ಮತ್ತು ಅಭಿವೃದ್ಧಿ ಪಡಿಸಬೇಕೆಂಬ ಸಮುದಾಯದ ಸಮಾಜಕ್ಕೂ ಹಾಗೂ ರೂಪಿಸ


ಬಹುದಾದ ನೀತಿಗೂ ಅಂತರ ಸಂಬಂಧವಿದೆ. ಹಾಗಾಗಿ ಅಲೆಮಾರಿ ಸಮುದಾಯಗಳಿಗೂ ಒಂದು ಸಮಾಜೊ-ಆರ್ಥಿಕ ನೀತಿಯಿದೆ. ಅಂದರೆ ಸಮುದಾಯವು ತನ್ನ ಸಾಮಾಜಿಕ ರಚನೆಗೆ ಅನ್ವಯಗೊಂಡಂತೆ ಮೌಲ್ಯ ಮತ್ತು ವೃತ್ತಿಗಳಿಗೆ ಅನ್ವಯಗೊಂಡಂತೆ ಒಂದು ನೀತಿಯಿದೆ. ಸಮುದಾಯ ಎಲ್ಲಿ ಅಲೆಯು ತ್ತಿರುತ್ತದೆ ಆ ಪ್ರದೇಶದಲ್ಲಿ ಆ ಸಮುದಾಯಕ್ಕೆ ಇರಬಹುದಾದ ಉದ್ಯೋಗವಕಾಶಗಳೇನು ಜನರ ಪ್ರತಿಕ್ರಿಯೆ ಏನು ಆ ಉದ್ಯೋಗದಿಂದ ಬರುವ ಆದಾಯ ಹೇಗೆ, ಯಾವುದಕ್ಕೆ ಎಷ್ಟೆಷ್ಟು ಪ್ರಮಾಣದಲ್ಲಿ ಭರಿಸಬೇಕಾಗುತ್ತದೆ ಎಂಬ ನೀತಿಗಳಿವೆ. ಆ ನೀತಿಗೆ ತಕ್ಕಹಾಗೆ, ಸಮುದಾಯದ ಸದಸ್ಯರು ನಡೆದು ಕೊಳ್ಳುತ್ತಾರೆ. ಆದುದರಿಂದ ಅಲೆಮಾರಿ ಸಮುದಾಯವೆ ಆಗಲಿ, ಮತ್ತೊಂದು ಸಮುದಾಯದ ಅಭಿವೃದ್ಧಿಗೆ ರೂಪಿಸುವ ಯೋಜನೆಗಳಾಗಲಿ ಪಾರದರ್ಶಕ ನೀತಿಯನ್ನು ಒಳಗೊಂಡಿರಬೇಕು. ಸಮುದಾಯದ ಬದುಕನ್ನು ಸುಧಾರಿಸುವ ನಿಟ್ಟಿನಲ್ಲಿ ಆಗಬೇಕಾಗಿದೆ. ಸರ್ಕಾರಗಳು ತಮ್ಮ ಸಾಧನೆ ಎಂದು ಮಂಡಿಸುವ ಎಲ್ಲಾ ಆರ್ಥಿಕ ಯೋಜನೆಗಳು ರಾಜಕಾರಣದ ತಂತ್ರಗಳಿಂದ ಗುರುತಿಸಲ್ಪಡುತ್ತವೆ. ಮತದಾರರ ಗಮನ ಸೆಳೆಯುವಂತೆ ಅಭಿವೃದ್ಧಿಯ ಮುಸುಕ ಹಾಕಿಕೊಂಡು ಜೊತೆಗೆ ಸಾಮಾಜಿಕ ನ್ಯಾಯದ ವೇಷ ಧರಿಸಿ ಯೋಜನೆಗಳು ರಾಜಕೀಯವಾಗಿ ಪ್ರಚಾರ ಗೊಳ್ಳುತ್ತವೆ. ಅಂದರೆ ದೇಶದ ಒಟ್ಟು ಆರ್ಥಿಕ ವ್ಯವಸ್ಥೆಯಲ್ಲಿ ಆಯಾ ರಾಜಕೀಯ ಪಕ್ಷಗಳ ಮುಖವಾಣಿ ಯಂತೆ ಜಾರಿಗೊಳ್ಳುತ್ತವೆ. ಜಾತಿ, ಧರ್ಮ, ವರ್ಗ, ಪ್ರದೇಶಗಳು ಲೆಕ್ಕದಲ್ಲಿ ಆರ್ಥಿಕ ಯೋಜನೆಗಳ ಕೈವಾಡವಿರುತ್ತದೆ. ಬಹುಪಾಲು ಯೋಜನೆಗಳ ಬಂಡವಾಳವು ಅಧಿಕಾರಿಶಾಹಿಯ ಉದ್ದಕ್ಕೂ ಸೋರಿಕೆ ಯಾಗುತ್ತ ರಾಜಕಾರಣದ ಆಳದಲ್ಲೂ ಹಂಚಿಕೆಯಾಗಿರುತ್ತದೆ. ಪ್ಯಾಕೇಜ್ ಕಾರ್ಯಕ್ರಮಗಳನ್ನು ಆದಿವಾಸಿ ಮತ್ತು ಅಲೆಮಾರಿಗಳು, ಬುಡಕಟ್ಟುಗಳ ಬಗ್ಗೆ ರೂಪಿಸಿದ್ದರು ಅವೆಲ್ಲವೂ ನಿಜವಾದ ಕಲ್ಯಾಣ ಕ್ರಾಂತಿಯ ಗುರಿಯಿಂದ ಬರುವಂತವಾಗಿಲ್ಲ.


ಹೀಗಾಗಿ ಅಲೆಮಾರಿ ಸಮುದಾಯಗಳಿಗೆ ಯೋಜನೆ ರೂಪಿಸಬೇಕಾದರೆ ಕೇವಲ ಆರ್ಥಿಕ ತಜ್ಞರಷ್ಟೆ ಬೇಕೆನ್ನುವುದು ತಪ್ಪಾಗುತ್ತದೆ. ಮಾನವರಿಗಾಗಿ ರೂಪಿಸುವ ಯೋಜನೆಗಳಾಗಿದ್ದರಿಂದ ಮಾನವಶಾಸ್ತ್ರಜ್ಞರು ಬೇಕು, ಸಾಮಾಜಿಕ ವಿಷಯವಾಗಿರುವುದರಿಂದ ಸಮಾಜಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ಸಂಪನ್ಮೂಲ ವ್ಯಕ್ತಿಗಳ ಸಮುದಾಯದ ಕಾಳಜಿಯ ವ್ಯಕ್ತಿಗಳನ್ನೊಳಗೊಂಡಂತೆ ಸಮುದಾಯದ ಸದಸ್ಯರೊಂದಿಗೆ ಯೋಜನಾ ನೀತಿ ರೂಪಿಸಬೇಕಾಗಿದೆ. ಏಕೆಂದರೆ ಅಭಿವೃದ್ಧಿ ಎನ್ನುವಂತದ್ದು ಏಕಮುಖವಾಗದೆ ಬಹುಮುಖಿ ಯಾಗಲು ಆ ಸಮುದಾಯದ ಸಮಷ್ಠಿತನವನ್ನು ಒಳಗೊಂಡಂತ ರೂಪರೇಷೆಗಳು ಬರಬೇಕಿದೆ. ಆದುದರಿಂದ ಸಮುದಾಯದ ಸಮಗ್ರ ಅಧ್ಯಯನ ಕೈಗೊಂಡು ಸಮುದಾಯ ಇಷ್ಟಪಡುವ ಪ್ರದೇಶದಲ್ಲಿ ನೆಲೆನಿಲ್ಲಿಸಬೇಕಿದೆ. ಆ ಸಮುದಾಯದಲ್ಲಿ ಒಪ್ಪುವಂತಹ ಉದ್ಯೋಗದ ಅವಕಾಶ ಮಾಡಿಕೊಡಬೇಕಿದೆ. ಆತ್ಮವಿವಾಸ ತುಂಬಬೇಕಿದೆ. ಹಾಗಾದಾಗ ಮಾತ್ರ ಅಲೆಮಾರಿಗಳೂ ನೆಲೆ ನಿಂತವರ ಬದುಕಿನಂತೆ ಬದುಕನ್ನು ರೂಪಿಸಿಕೊಳ್ಳಬಲ್ಲರು. ಯೋಜನೆ ಮತ್ತು ಯೋಜನೆಗಳು ಯಾವ ಮಾನದಂಡಗಳಿಂದ ಕೂಡಿರಬೇಕೆಂಬುದನ್ನು ಖ್ಯಾತ ಅರ್ಥಶಾಸ್ತ್ರಜ್ಞರರಾದ ಮೆಹಬೂಬ್ ಉಲ್-ಹಕ್‌ರವರು ಹೇಳುವುದೆಂದರೆ "ಸರ್ಕಾರದ ನೀತಿ ನಿರೂಪಣೆಗಳು ಜನತೆಯ ಆಶೋತ್ತರಗಳಿಗೆ ತಕ್ಕಂತೆ ಸ್ಪಂದಿಸಬೇಕು. ಜನತೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ, ನೀತಿ ನಿರೂಪಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಜನತೆಯ ಮನೆ

ಬಾಗಿಲಿಗೆ ಆಡಳಿತ ಮತ್ತು ಅಧಿಕಾರ ವಿಕೇಂದ್ರಿಕರಣಗೊಳ್ಳಬೇಕು. ಅಭಿವೃದ್ಧಿಯು ಜನತೆಯಿಂದ ಜನರಿಗೋಸ್ಕರ ಜನರಿಂದ ತಯಾರಾಗಬೇಕು"[3] ಎನ್ನುತ್ತಾರೆ.

ಹೀಗಾಗಿ ಯೋಜನೆಯ ಉದ್ದೇಶ ಸಮುದಾಯದ ಸಮಷ್ಠಿತನದೊಂದಿಗೆ ಬದುಕು ಸುಧಾರಿಸಬೇಕು. ನಿರ್ದಿಷ್ಟ ಗುರಿಯಿರಬೇಕು. ಆ ಗುರಿಯನ್ನು ಮುಟ್ಟಲು ಆಗಾಗ್ಗೆ ನೀತಿ ಕಾರ್ಯಕ್ರಮಗಳಿಗೆ ಪುಷ್ಠಿಯನ್ನು ನೀಡಬೇಕಾಗಿದೆ. ಆ ಯೋಜನೆಗಳ ಅನುಷ್ಠಾನದ ತರುವಾಯ ಮೌಲ್ಯಮಾಪನ ಮಾಡಬೇಕು. ದೀರ್ಘ ಮತ್ತು ಪ್ರತ್ಯೇಕವಾದ ಹಾಗೂ ಅಲ್ಪಾವಧಿಯ, ಬೃಹತ್ ಯೋಜನೆಗಳನ್ನು ರೂಪಿಸಬೇಕಿದೆ. ಅಂತಹ ಯೋಜನೆಗಳೂ ದೇಶಿಯ ನೆಲೆಯಿಂದ ಬರಬೇಕಾಗಿದೆ.

ಅಲೆಮಾರಿಗಳಿಗೆ ಕೈಗೊಳ್ಳಬೇಕಾಗಿರುವ ಯೋಜನೆಯ ನೆಲೆಗಳು, ಗುರಿ ಮತ್ತು ಉದ್ದೇಶ





ಈ ಮೇಲಿನ ಗುರಿ ಉದ್ದೇಶಕ್ಕಾಗಿ ಸರ್ಕಾರ ಮುಂದಾಗಬೇಕಿದೆ. ಏಕೆಂದರೆ ೧೯೫೧ ರಿಂದ ನೆಲೆನಿಂತ ಸಮುದಾಯಗಳ ಪರವಾದ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಬಂದಿವೆ. ಅಲೆಮಾರಿ ಸಮುದಾಯಗಳನ್ನು ಕೇಂದ್ರ ಬಿಂದುವಾಗಿಟ್ಟುಕೊಂಡ ಕಾರ್ಯಗಳು ಕೇವಲ ಬೆರಳೆಣಿಕೆಯ ಕಾರ್ಯಕ್ರಮಗಳಾಗಿರುವುದರಿಂದ ಅಲೆಮಾರಿಗಳಿಗಾಗಿ ಆ ಸಮಾಜದಲ್ಲಿ ಅನ್ವಯವಾಗುವ ಯೋಜನಾ ಆರ್ಥಿಕ ನೀತಿಯ ಕಾರ್ಯಕ್ರಮ ಜರೂರಿದೆ.

೫.೩. ಅಂಬೇಡ್ಕರ್ ತತ್ವ ಮತ್ತು ಅಲೆಮಾರಿ ಸಮಾಜದ ಅಭಿವೃದ್ಧಿ

ಬಹುಸಾಧ್ಯತೆಗಳ ಸಂವೇದನಾ ಕ್ರಿಯಾಶೀಲವಾದ, ಮಾವೀಯ ತಾಯ್ತನದ ತುಡಿತವಿರುವ ಅಂಬೇಡ್ಕರ್‌ರವರ ತತ್ವಗಳು, ಧರ್ಮದ ಪ್ರಭುತ್ವವನ್ನು, ಜಾತಿಯ ಯಜಮಾನ್ಯವನ್ನು ಲಿಂಗಭೇದದ ವಿಕಾರವನ್ನು ಅಸಮಾನತೆಯ ವಿಕೃತಿಯನ್ನು ಮುರಿಯುವ ಮೂಲಕ ಬಹುಸಮಾಜಗಳ ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಾಗಿವೆ. ಅಂಬೇಡ್ಕರ್ ತತ್ವಗಳು ಏಕಮುಖವಾಗದೆ ಅಥವಾ ಕೇವಲ ದಲಿತರಿಗಷ್ಟೆ ಸೀಮಿತವಾಗದೆ, ತಿರಸ್ಕೃತ ಸಮಾಜಗಳ ಅಸ್ಥಿತ್ವ ರೂಪಿಸುವ ಚೈತನ್ಯವಾಗಿ, ಬಹುಮುಖ ಹೊಣೆಗಾರಿಕೆಯ ಮತ್ತು ನಾಳಿನ ಜವಬ್ದಾರಿಗಳನ್ನು ಹೊತ್ತುಕೊಳ್ಳುವ ಮೂಲಕ ಸಾಮಾಜಿಕ ಸಾಮರಸ್ಯದ, ಭವಿಷ್ಯದ ಬದುಕು ರೂಪಿಸುವ ದಿಕ್ಸೂಚಿಗಳಾಗಿವೆ.

ತಿರಸ್ಕೃತ ಸಮಾಜಗಳು ವಿಕಾಸವಾಗಬೇಕಾದಂತಹ ಅಪರಿಮಿತ ಆಯ್ಕೆ ಮತ್ತು ಸ್ವಾತಂತ್ರ್ಯಗಳ ಕಡೆಗೆ ಪಯಣಿಸಲು ಬೇಕಾದಂತಹ, ಮುಕ್ತಿಯ ಅಂತರ್ಜಲದ ತತ್ವಗಳನ್ನು, ಕಳಂಕಿತರೆನಿಸಿಕೊಂಡ ಸಮುದಾಯಗಳಿಗೆ ಸಂವಿಧಾನ ಬದ್ಧವಾಗಿ ಕೊಡಮಾಡಿದರು. ಅಂಬೇಡ್ಕರ್‌ರವರು ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಕುರಿತಂತೆ ನೇರವಾಗಿ ವಿಚಾರಿಸಿಲ್ಲ ಎನ್ನುವ ವಾದವು ತಪ್ಪು. ಅವರ ದೃಷ್ಟಿಯಲ್ಲಿ ಸಾಮಾಜಿಕ ಅಸಮಾನತೆ ಅನುಭವಿಸುತ್ತಿರುವ ಎಲ್ಲ ಸಮಾಜಗಳ ಮುಕ್ತಿಗೆ ಬೇಕಾದ ಎಲ್ಲ ಅವಕಾಶಗಳನ್ನು ಅನಾವರಣ ಮಾಡಿದವರು. ಯೋಚಿಸಿದಂತಹ ಚಿಂತನೆಗಳು ಹಾಕಿಕೊಳ್ಳಬಹುದಾದ ತತ್ವಗಳು ಕಾರ್ಯಕ್ರಮಗಳು ಸಮಾಜದ ನಿಷ್ಠ ಮತ್ತು ಸಮುದಾಯ ನಿಷ್ಠವಾದಂತಹ ಅಭಿವೃದ್ಧಿ ಕಾರ್ಯಕ್ರಮಗಳಾಗಿವೆ. ಅಂತಹ ಕಾರ್ಯಕ್ರಮಗಳು ಮತ್ತು ತತ್ವಗಳು ಯಾವುವು, ಅಲೆಮಾರಿ ಸಮಾಜದಲ್ಲಿ ಹೇಗೆ ಅನ್ವಯವಾಗಬಲ್ಲವು, ಅನ್ವಯವಾಗಬೇಕೆಂಬುದರ ಬಗ್ಗೆ ಅಂಬೇಡ್ಕರ್ ದೃಷ್ಟಿ ಎಂತಹದಿತ್ತು ಎಂಬುದನ್ನು ತಿಳಿಯಬೇಕಾಗುತ್ತದೆ.

೫.೩.೧. ಸಾಮಾಜಿಕ ಸ್ವಾಸ್ಥ್ಯ ತತ್ವಗಳು ಮತ್ತು ಅಲೆಮಾರಿಗಳು

ಜಾತಿ ವ್ಯವಸ್ಥೆಯ ಮತ್ತು ಅಸಮಾನತೆಯ ತವರಾದ ಭಾರತದಲ್ಲಿ ದಲಿತರಷ್ಟೇ ಅಸಮಾನತೆ ಅನುಭವಿಸದೆ, ಅದರಷ್ಟೆ ಗಾತ್ರದ ಅಲೆಮಾರಿ ಸಮಾಜವು ಅಸಮಾನತೆ ಮತ್ತು ಅಪಮಾನತೆ ಅನುಭವಿ ಸುತ್ತದೆ. ಅಂತಹ ಸಮಾಜ ಅಂಬೇಡ್ಕರ್‌ರವರು ಪ್ರತಿಪಾದಿಸುವ ಸಾಮಾಜಿಕ ಸ್ವಾಸ್ಥ್ಯ ತತ್ವಗಳು, ಸಮಸ್ಯೆ ನಿವಾರಿಸಬಲ್ಲವು ಮತ್ತು ಬದುಕುವ ಆತ್ಮವಿಶ್ವಾಸ ತುಂಬಿಕೊಡಬಲ್ಲವು. ಸಮಾಜಲ್ಲಿ ಸಾಮಾಜಿಕ ಸ್ವಾಸ್ಥ ನೆಲೆಸಬೇಕಾದರೆ ಸಾಮಾಜಿಕ ಸಿದ್ಧಾಂತದ ಹಿನ್ನಲೆಯಿಂದ ಬಂದ ತನ್ನದೆ ಆದ ಅಂಶಗಳನ್ನಿಟ್ಟು ಕೊಳ್ಳಬೇಕಾಗುತ್ತದೆ.

ಸಾಮಾಜಿಕ ಸ್ವಾಸ್ಥ್ಯ ತತ್ವಗಳು

೧. ಸ್ವಾತಂತ್ರ್ಯ

೨. ಸಮಾನತೆ

೩. ಸಹೋದರತೆ

೧. **ಸ್ವಾತಂತ್ರ್ಯ** : ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುವಂತಹ ವಾತವರಣವನ್ನು ಕಲ್ಪಿಸಿ ಅದನ್ನು ಕಾಪಾಡುವುದು ಆಗಿದೆ. ಅಂದರೆ ಒಬ್ಬ ವ್ಯಕ್ತಿಯು ನಿಜವಾಗಿಯೂ ಸ್ವಾತಂತ್ರವಾಗಿ ತನ್ನ ದಿನ ನಿತ್ಯದ ಚಟುವಟಿಕೆಗಳನ್ನು ನೆರವೇರಿಸಲು ಸಹಾಯವಾಗುವ ಪರಿಸರ ಸ್ವಾತಂತ್ರ್ಯ. ಸ್ವಾತಂತ್ರ ಸಾಪೇಕ್ಷವಾಗಿದ್ದು ಒಬ್ಬ ವ್ಯಕ್ತಿಯ ಸ್ವಾತಂತ್ರ ಮತ್ತೊಬ್ಬ ವ್ಯಕ್ತಿಯ ಸ್ವಾತಂತ್ರದ ಮೇಲೆ ಆಧಾರಪಟ್ಟಿರುತ್ತದೆ. ಅಂದರೆ ಸಮಾಜದಲ್ಲಿ ಜೀವಿಸುವಾಗ ಸಮಾನತೆ ಸಹಜೀವಿಗಳ ಹಿತಾಸಕ್ತಿ ಯನ್ನು ಸಂಪೂರ್ಣವಾಗಿ ತಿರಷ್ಕರಿಸಿ ಜೀವಿಸಲು ಸಾಧ್ಯವಿಲ್ಲ. ಸ್ವಾತಂತ್ರ ಸಕ್ರಮದವಾದ ನ್ಯಾಯವಾದ ಮತ್ತು ಕಾನೂನಿನ ದೃಷ್ಟಿಯಲ್ಲಿ ಸರಿ ಎನಿಸಿದ ರೀತಿಯಲ್ಲಿರಬೇಕು. ವಿಶಾಲಾರ್ಥದಲ್ಲಿ ಹೇಳಬೇಕೆಂದರೆ ಯಾವುದೆ ಬಾಹ್ಯ ಅಡಚಣೆಯಿಲ್ಲದೆ ತನ್ನ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮುಕ್ತ ಪರಿಸರ

ಮತ್ತು ವ್ಯಕ್ತಿಯ ಸಮಗ್ರ ಅಭಿವೃದ್ಧಿಯಲ್ಲಿ ಸಹಾಯಕವಾಗುವಂತ ಪರಿಸರ. ಇಂತಹ ವಾತವರಣ ತಳಸಮುದಾಯಗಳಿಗೆ ಅಥವಾ ಸಮಾಜದ ಕೊನೆಯ ವ್ಯಕ್ತಿಗಳಿಗೆ ಇದ್ದಿರುವುದಿಲ್ಲ. ಹಿಂದಿನಿಂದಲೂ ಹೇರಿದ ನಿಷೇಧಗಳಿಂದ ಕೆಲವು ಸಮುದಾಯ ತಮ್ಮ ಸ್ವಾತಂತ್ರ ಕಳೆದುಕೊಂಡಿದ್ದವು. ಆದುದರಿಂದ ಅಂಬೇಡ್ಕರ್‌ರವರು ಮನುಷ್ಯನ ವ್ಯಕ್ತಿತ್ವ ವಿಕಾಸವಾಗಲು ಮತ್ತು ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಸ್ವಾತಂತ್ರಬೇಕೆಂದು ಅಗ್ರಹಿಸಿದರಲ್ಲದೆ, ಹೋರಾಟ ಮಾಡಿ, ಸಂವಿಧಾನದ ಮೂಲಕ ಕೊಡಿಸಿದರು. ಆ ನಿಟ್ಟಿನಲ್ಲಿ ಸಾಮಾಜಿಕ ಅಸಮಾನತೆಯಲ್ಲಿದ್ದ ಸಮುದಾಯಗಳಿಗೆ ಸ್ವತಂತ್ರವಾಗಿ ಬದುಕನ್ನು ರೂಪಿಸುವ ಅವಕಾಶ ಮಾಡಿಕೊಟ್ಟರು. ಇದು ಕೇವಲ ದಲಿತರಿಗಷ್ಟೆ ಎಂದು ಭಾವಿಸದೆ ಅಲೆಮಾರಿಗಳು ಒಳಗೊಳ್ಳುತ್ತಾರೆ. ಅಲೆಮಾರಿಗಳಲ್ಲಿ ತಮ್ಮ ವೈಯಕ್ತಿಕ ಸಾಮಾಜಿಕ ರಚನಾ ವ್ಯವಸ್ಥೆಯಲ್ಲಿ ಸ್ವಾತಂತ್ರವಿದೆ. ಸಾಮಾಜಿಕ ಬದುಕಿನಲ್ಲಿ ಸ್ವಾತಂತ್ರವಿಲ್ಲ. ಆದುದರಿಂದ ಅಂಬೇಡ್ಕರ್ ಪ್ರತಿಪಾದಿಸಿದ ಸ್ವಾತಂತ್ರವನ್ನು ಅಲೆಮಾರಿಗಳು ಅವಡಿಸಿಕೊಂಡು ಪ್ರಗತಿ ಕಾಣಬಹುದಾಗಿದೆ.

೨. **ಸಮಾನತೆ** : ಸ್ವಾತಂತ್ರದಂತೆ ಸಮಾನತೆಯು ಮನುಷ್ಯನ ವ್ಯಕ್ತಿತ್ವದ ಸಂಪೂರ್ಣ ವಿಕಾಸ ಮತ್ತು ಬೆಳವಣಿಗೆಗೆ ಅತ್ಯಂತ ಅವಶ್ಯಕ ಅಂಶವಾಗಿದೆ. ಸಮಾಜದಲ್ಲಿ ಎಷ್ಟೆ ಸಾಧನೆ ಮಾಡಿದ್ದರು. ಸಮಾನತೆ ಇರದಿದ್ದರೆ ಯಾವುದೆ ಸಾಧನೆಗಳು ನಿಷ್ಪ್ರಯೋಜಕವಾಗುತ್ತವೆ. ಸಮಾನತೆ ಎಂದರೆ ಎಲ್ಲಾ ಮನುಷ್ಯರನ್ನು ಒಂದೆ ಸಮಾನವಾಗಿ ಕಾಣುವುದು. ಸಮಾನತೆಯ ಮೂಲ ಅರ್ಥ ಎಲ್ಲಾ ರೀತಿಯ ಮಾನವ ನಿರ್ಮಿತ ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯನ್ನು ಹೋಗಲಾಡಿಸುವುದಾಗಿದೆ. ಎಲ್ಲರಿಗೂ ಸಮಾನ ಹಕ್ಕುಗಳು ಅಥವಾ ವ್ಯಕ್ತಿ ವಿಕಾಸದಲ್ಲಿ ಸಮಾನ ಅವಕಾಶ ಸಮಾನತೆಯ ತಿರುಳಾಗಿದೆ. ಜಾತಿ, ಧರ್ಮ, ಬುಡಕಟ್ಟು, ಜನಾಂಗ, ಅಲೆಮಾರಿ, ಲಿಂಗ, ವರ್ಣ ಇವುಗಳ ಆಧಾರದಮೇಲೆ ಭೇದ ಮಾಡಿದಾಗ ಆ ವ್ಯಕ್ತಿಯಲ್ಲಿ ಕೀಳಿರಿಮೆ ಉಂಟಾಗಿ ವ್ಯಕ್ತಿಯ ವಿಕಾಸವು ಕುಂಠಿತಗೊಳ್ಳುತ್ತದೆ. ಎಲ್ಲರಿಗೂ ಸಮಾನ ಹಕ್ಕು ಮತ್ತು ಗೌರವ ಕೊಟ್ಟಾಗ ಎಲ್ಲರೂ ತಮ್ಮ ಯೋಗ್ಯತೆ ಮತ್ತು ಸಾಮರ್ಥ್ಯ ದಲ್ಲಿ ಅನುಗುಣವಾಗಿ ಯಾವುದೆ ಜಾತಿ, ಧರ್ಮ, ವರ್ಣ ಮತ್ತು ಭೇದ-ಭಾವವಿಲ್ಲದೆ ಬೆಳೆಯುತ್ತಾರೆ. ಇಂತಹ ವಾತಾವರಣದಿಂದ ವಂಚಿತರಾದ ಸಮುದಾಯಗಳಿಗೆ ಹೋರಾಟದ ಮೂಲಕ ಯಶಸ್ವಿಯಾಗಿ, ಸಂವಿಧಾನಾತ್ಮಕವಾಗಿ ತಳಸಮುದಾಯಗಳಿಗೆ ಕೊಡಿಸಿದರು. ಹೀಗಾಗಿ ಅಲೆಮಾರಿಗಳು ಸಮಾನತೆಯ ತತ್ವವನ್ನು ಅಳವಡಿಸಿಕೊಳ್ಳಬೇಕಾಗಿದೆ. ನೆಲೆನಿಂತವರು ಸಮಾನತೆಯತತ್ವ ಅಳವಡಿಸಿಕೊಂಡು ಅಲೆಮಾರಿಗಳ ಬದುಕಿಗೆ ಆಸರೆಯಾಗಬೇಕಿದೆ. ಆಗ ಮಾತ್ರ ಸಮಾನತೆ ಎಂಬುದು ಅಲೆಮಾರಿಗಳಂತ ಅಂಚಿನ ಸಮುದಾಯಗಳಿಗೆ ದೊರೆಯಬಲ್ಲದು.

೩. **ಸಹೋದರತೆ** : ಎಲ್ಲರ ನಡುವೆ ಇರುವ ಸಹೋದರ ಭಾವನೆಯಾಗಿದೆ. ಭಾರತಿಯರೆಲ್ಲರು ಒಂದೆ ಜಾತಿ, ಜನಾಂಗಗಳ ರಾಷ್ಟ್ರಕ್ಕೆ ಸೇರಿದವರು. ಆದರೆ ಜಾತಿವ್ಯವಸ್ಥೆ ರಾಷ್ಟ್ರವಿರೋಧಿ ಭಾವೆಯನ್ನು ಹುಟ್ಟುಹಾಕಿದೆ. ಅದು ಸಾಮಾಜಿಕ ಜೀವನದಲ್ಲಿ ಒಡಕನ್ನುಂಟು ಮಾಡುತ್ತದೆ. ಜಾತಿಜಾತಿಗಳ ನಡುವೆಯೂ ವೈಷಮ್ಯಗಳು ಈರ್ಷೆಯನ್ನು ಹುಟ್ಟುಹಾಕುವ ಇವುಗಳು ಸಮಾನತೆಯ ವಿರೋದಿಯಾಗಿದೆ. ಪರಿಣಾಮ

ಸಾಮಾಜಿಕ ಅಸಮಾನತೆ ಮೂಡಿ ಸಮಾಜವು ಅಶಾಂತವಾಗುತ್ತದೆ. ಶತಶತಮಾನಗಳ ಕಾಲದಿಂದಲೂ ಇಂತಹ ಸಹೋದರತೆಯ ಅನುಕಂಪದಿಂದ ದೂರವಾದ ತಳಸಮುದಾಯಗಳು, ಸಾಮಾಜಿಕವಾಗಿ ಬೇರೆಯಾಗಿದೆ. ಇಂತಹ ಅಸಮಾನತೆಯನ್ನು ಹೊಡೆದೊಡಿಸಲು ಮತ್ತು ಸಹೋದರತೆ ಭಾವ ಮೂಡಿಸಲು ಅಂಬೇಡ್ಕರ್ ಕ್ರಾಂತಿಯನ್ನೆ ಮಾಡಿ ಸಂವಿಧಾನದ ಮೂಲಕ ಸಹೋದರತೆಯ ಭಾವನೆಗಳು ಬರುವಂತೆ ಶ್ರಮಿಸಿದರು. ಕಾಲ ಬದಲಾದಂತೆ ಮೊದಲಿದ್ದ ಬಿಗುವು ಕಡಿಮೆಯಾಗುತ್ತಾ ಬಂದು ಸಹೋದರತೆ ಮೂಡುತ್ತಿದೆ. ಅಲೆಮಾರಿಗಳ ಸಮುದಾಯದಲ್ಲಿ ವೈಯಕ್ತಿಕ ರಚನೆಯಲ್ಲಿ ಸಹೋದರತೆ ಭಾವವಿದೆ. ಆದರೆ ಸಾಮಾಜಿಕವಾಗಿ ಕೊರತೆಯಿದೆ. ಈ ಕೊರತೆಯನ್ನು ನೀಗಿಸಲು ಅಂಬೇಡ್ಕರ್‌ರವರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಹಾಗಾಗಿ ಅಲೆಮಾರಿಗಳನ್ನು ನೆಲೆನಿಂತವರು ಸಹೋದರ ಭಾವನೆಯಿಂದ ಕಾಣಬೇಕಿದೆ. ಉತ್ತಮವಾಗಿ ಬದುಕಲು ಅವಕಾಶ ಮಾಡಿಕೊಡಬೇಕಿದೆ. ಒಟ್ಟಾರೆ ಅಂಬೇಡ್ಕರ್‌ರವರು ಸಾಮಾಜಿಕ ಸ್ವಾಸ್ಥ್ಯ ಕಾಪಾಡಲು ಇಂತಹ ಮಹತ್ವದ ಅಂಶಗಳನ್ನು ಮೊದಲ ಬಾರಿಗೆ ಸಂವಿಧಾನದ ಮೂಲಕ ಕೊಡಿಸುವ ಜೊತೆ ಜೊತೆಯಲ್ಲಿ ಸಾಮರಸ್ಯ ಮೂಡಿಸಲು ಮುಂದಾದರು. ಅವರ ಸಾಮರಸ್ಯದ ತತ್ವವನ್ನು ಅಳವಡಿಸಿಕೊಂಡು ವಿಶಾಲವಾದ ಮನೋಭಾವ ಬೆಳೆಸಿಕೊಂಡು ಸಹೋದರತೆಯಿಂದ ಬಾಳಬೇಕಾಗಿದೆ.

೫.೩.೨. ಅಂಬೇಡ್ಕರ್‌ರವರ ತ್ರಿರತ್ನಗಳು ಮತ್ತು ಅಲೆಮಾರಿಗಳು

ಸಮಾಜದ ಕೆಳವರ್ಗಗಳಿಗೆ ದಾಸ್ಯದಿಂದ ಮುಕ್ತಿ ಹೊಂದಲು ಅಂಬೇಡ್ಕರ್‌ರವರು ಪಾರದರ್ಶಕತೆಯಿಂದ ಕೂಡಿದ ತತ್ವಗಳನ್ನು ಜಾರಿಗೆ ತರುವಲ್ಲಿ ಹೋರಾಟ ಮಾಡಿದವರಲ್ಲದೆ ಅಂತಹ ತತ್ವಗಳ ಮಹತ್ವವನ್ನು ಕುರಿತು ಯೋಚಿಸಿದರು. ಪ್ರತಿ ಕೊನೆಯ ವ್ಯಕ್ತಿಯು ಬದಲಾಗಬೇಕಾದರೆ ತಮ್ಮ ಬದುಕನ್ನ ಸುಧಾರಿಸಿಕೊಳ್ಳಬೇಕೆಂದರೆ ತಪ್ಪದೆ ಅವುಗಳನ್ನು ತಮ್ಮ ವಶಮಾಡಿಕೊಳ್ಳಬೇಕು. ಆಗ ಮಾತ್ರ ಸಮಾಜದಲ್ಲಿ ಇತರರಂತೆ ಬದುಕಲು ಸಾಧ್ಯವಾಗಬಹುದೆಂಬುದನ್ನು ಅಗ್ರಹಿಸಿ ಅನಕಾಶ ಮಾಡಿಕೊಟ್ಟರು. ಬದುಕನ್ನು ಹಸನ ಮಾಡುವಂತ ತ್ರಿರತ್ನಗಳು ಅಂಚಿನಲ್ಲಿರುವವರಿಗೆ ಅನಿವಾರ್ಯವೆಂದರು. ಇಂತಹ ತತ್ವಗಳು ಕೇವಲ ಒಂದೆರಡು ಸಮುದಾಯಗಳಿಗೆ ಸೀಮಿತವಾಗಿಲ್ಲ. ಅದರ ಪರಿಧಿಯೊಳಗೆ ಅಲೆಮಾರಿಗಳು ಬರಲಿದ್ದಾರೆ.

ತ್ರಿರತ್ನಗಳು

೧. ಶಿಕ್ಷಣ

೨. ಸಂಘಟನೆ

೩. ಹೋರಾಟ

೧. ಶಿಕ್ಷಣ : ಎಲ್ಲಾ ಪ್ರಜೆಗಳಿಗೆ ಶಿಕ್ಷಣ ಅತ್ಯಗತ್ಯವಾಗಿದೆ. ಶಿಕ್ಷಣದಿಂದ ಮಾತ್ರ ಏಳಿಗೆ ಸಾಧ್ಯವೆಂದು ಮನಗಂಡ ಅಂಬೇಡ್ಕರ್‌ರವರು ದೇಶದಲ್ಲಿ ಕಡ್ಡಾಯ. ಶಿಕ್ಷಣ ಅಗತ್ಯತೆ ಪ್ರತಿಪಾದಿಸಿದರು. ಶಿಕ್ಷಣವು ದುರ್ಬಲರ, ಶೋಷಿತರ, ಅಸಮಾನದ ಅಂಚಿನ ಸಮುದಾಯಳ ಏಳಿಗೆಯು ಶಿಕ್ಷಣದ ಮೂಲಕ ಸಾಧ್ಯವೆಂದು ಹಕ್ಕೋತ್ತಾಯ ಮಾಡಿದ್ದಾರೆ. ಶಿಕ್ಷಣ ಪಡೆದರೆ ಎಲ್ಲಾ ಸಮುದಾಯಗಳ

ಸ್ಥಿತಿಗತಿಗಳಲ್ಲಿ ಬದಲಾವಣೆ ಕಾಣಲು ಸಾಧ್ಯ. ಶಿಕ್ಷಣದಿಂದ ಬದುಕಿನ ಕ್ರಮಗಳು. ಸುಧಾರಣೆಯಾಗಬಲ್ಲವು. ಜ್ಞಾನ, ಜ್ಞಾನದಿಂದ ಸ್ವಾಭಿಮಾನ, ಸ್ವಾಭಿಮಾನದಿಂದ ಸ್ಥಾನಮಾನಗಳು ವೃದ್ಧಿಸಬಲ್ಲವು. ಪರಿಣಾಮ ಕೀಳರಿಮೆ ದೂರಮಾಡಬಹುದು. ಸುಖ, ಶಾಂತಿ ದೊರಕಿಸಿಕೊಳ್ಳಬಹುದು. ಬದುಕಿನ ಪ್ರಜ್ಞೆ ತರಬಹುದು. ಪರಿಸರದ ಅರಿವು ಮೂಡಬಹುದು. ತಮ್ಮ ಕುಟುಂಬದ ಏಳಿಗೆ ಬಗ್ಗೆ ಚಿಂತಿಸುವ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನಿಸುವ ಹಂಬಲ ತರಬಲ್ಲದು. ಆದುದರಿಂದ ಸಾಮಾಜಿಕ ಅಸಮಾನರಾಗಿರುವ, ಬದುಕನ್ನು ಮುಂದುವರಿಸಿಕೊಂಡಿರುವ ಅಲೆಮಾರಿ ಸಮುದಾಯಗಳು ಅಂಬೇಡ್ಕರ್‌ರವರು ಪ್ರತಿಪಾದಿಸುತ್ತಿರುವ ಶಿಕ್ಷಣವನ್ನು ಕಲಿಯಬೇಕಾಗಿದೆ. ಶಿಕ್ಷಣ ಕಲಿತಾಗ ತನ್ನ ಮೂಲ ಕಸುಬುಗಳನ್ನು ಬಿಡಬೇಕೊ, ಮುಂದು ವರಿಸಿಕೊಂಡು ಹೋಗಬೇಕೊ ಎಂಬುದು ಅರಿವಾಗುತ್ತದೆ. ಶಿಕ್ಷಣದಿಂದ ವಂಚಿತರಾದ ಎಲ್ಲ ಅಲೆಮಾರಿ ಗಳಿಗು ಸರ್ಕಾರ ಆಯಾ ಸಮುದಾಯ ಬಯಸುವ ವಿಧಾನಗಳ ಮೂಲಕ ಅದರ ಮಹತ್ವವನ್ನು ತಿಳಿಸ ಬೇಕಿದೆ. ಹಾಗಾದಾಗ ಮಾತ್ರ ಅಲೆಮಾರಿಗಳು ತಲೆಎತ್ತಿ ನಡೆಯಬಲ್ಲರು ಅಂಬೇಡ್ಕರ್‌ರವರ ಕನಸು ಕೈಗೂಡಬಲ್ಲದು.

೨. **ಸಂಘಟನೆ :** ಸಮುದಾಯಗಳ ಸಮಸ್ಯೆಗಳಿಗೆ ಸಂಘಟನೆಗಳು ಸ್ಪಂದಿಸುತ್ತವೆ. ಸಮುದಾಯವು ಸೂಕ್ಷ್ಮವಾದ ಕೆಲವು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಎಲ್ಲ ಸದಸ್ಯರನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ಏಳಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ, ಸಂಘಟನೆಯನ್ನು ಬಲಪಡಿಸಿಕೊಂಡು ಹೋರಾಟ ವನ್ನು ಮಾಡಬಹುದಾಗಿದೆ. ಇಂತಹ ಸಂಘಟನೆಗಳು ಛಿದ್ರವಾಗಿರುವ ಸಮುದಾಯಗಳಿಗೆ ಅನಿವಾರ್ಯವಾಗಿವೆ. ಆ ಛಿದ್ರಗೊಂಡ ಸಮಾಜವು ಭೇದ-ಭಿನ್ನತೆ ಮರೆತು ಒಂದುಗೂಡುವ ಮೂಲಕ ಹೋರಾಟ ಮಾಡಬೇಕು. ಇಂತಹ ಸಂಘಟನೆಗಳು ಕ್ಷುಲ್ಲಕ ವಿಚಾರಗಳಿಂದ ದೂರವಿರಬೇಕು. ಏನು ಪಡೆಯಬೇಕಾಗಿದೆ ಅದನ್ನು ಪಡೆಯಲು ಅಂಬೇಡ್ಕರ್‌ರವರು ಸಂಘಟನೆಯ ಮಹತ್ವವನ್ನು ತಿಳಿಸಿದರು. ಮತ್ತು ಸಂಘಟನೆಯ ಆಳ ಹೇಳುವ ಮೂಲಕ ಆ ಶಕ್ತಿಗೆ ಒತ್ತು ಕೊಟ್ಟರು. ಸಂಘಟನೆಯು ಒಳ ಜಗಳ, ನಿರಾಸಕ್ತಿ ಸ್ಪರ್ಧೆ ಮನೋಭಾವ, ತತ್ವರಹಿತ ಉದ್ದೇಶ, ರಹಿತ ಸಂಘಟನೆಯಾಗಿರಬಾರದು. ಅಧಿಕಾರಕ್ಕಾಗಿ ಪೈಪೋಟಿ, ತ್ಯಾಗರಹಿತ ಮನೋಭಾವ, ಕಾಲು ಎಳೆಯುವಿಕೆ ಜಾತಿ ಉಪಜಾತಿಗಳ ಸಂಘರ್ಷ, ಮೇಲುಕೀಳುಗಳು ಅಸಂಬದ್ಧವಾದ ವಾದಗಳು ಇತ್ಯಾದಿಗಳೆಲ್ಲವನ್ನು ತ್ಯಜಿಸಬೇಕಾಗುತ್ತದೆ. ಹಾಗಾಗಿ ಪ್ರತಿ ಅಲೆಮಾರಿ ಸಮುದಾಯವು ಸಂಘಟನೆಯ ತತ್ವಗಳನ್ನು ಪಾಲಿಸಬೇಕು. ಸಂಘಟನೆಗಳ ಬಲವನ್ನು ಅರಿಯಬೇಕು. ಸಂಘಟನೆಗಳಿಂದಲೇ ಹಕ್ಕುಗಳನ್ನುಗಳಿಸಬೇಕಾಗಿದೆ. ಏಕೆಂದರೆ ಹಕ್ಕುಗಳು ತಾವಾಗಿಯೆ ಬರುವುದಿಲ್ಲ. ಎಲ್ಲವನ್ನು ಸಂಘಟನೆಯಿಂದ ಪಡೆಯಬೇಕಿದೆ. ಸಂಘಟನಾ ಶಕ್ತಿ ಇಲ್ಲದೆ ಸಮಸ್ಯೆಗೆ ಪರಿಹಾರ ಅಸಾಧ್ಯ ಎಂಬುದನ್ನು ಎಲ್ಲಾ ಅಲೆಮಾರಿಗಳು ಅರಿಯಬೇಕು. ಅಂಬೇಡ್ಕರ್ ಹೇಳಿದ ಸಂಘಟನೆಯು ಮನಸ್ಸಿನ ಆಳದಲ್ಲಿ ಬೇರೂರಬೇಕು. ಜಾಗೃತರಾಗಿರಬೇಕು, ಎಚ್ಚರಗೊಳ್ಳಬೇಕು, ಎಚ್ಚರಿಸಬೇಕು ಎಲ್ಲಾ ಸಂದರ್ಭ ದಲ್ಲಿ, ಎಲ್ಲಾ ಕಾಲಗಳಲ್ಲಿ ರಕ್ತ ಪರಿಚಯಲನೆಯ ಶಬ್ದದಂತೆ ಮನಸ್ಸು ಮಿಡಿಯುತ್ತಿರಬೇಕು. ತಮ್ಮವರಿ ಗಾಗಿ ಶ್ರಮಿಸುತ್ತಿರಬೇಕು. ಹೀಗಾದಾಗ ಮಾತ್ರ ಅಂಬೇಡ್ಕರ್‌ರವರ ಕನಸು ನನಸಾಗಿ ಅಂಚಿನಲ್ಲಿರುವ ಅಲೆಮಾರಿಗಳು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಿದೆ.

೩. **ಹೋರಾಟ** : ಶಿಕ್ಷಣ ಪಡೆದ ತರುವಾಯ ಸಂಘಟನೆಯ ಮೂಲಕ ಸಮಾಜದಲ್ಲಿ ಬದುಕಲು ಏನು ಮೂಲಭೂತವಾದ ಸೌಲಭ್ಯ ಬೇಕೊ ಅದನ್ನು ಪಡೆಯಬಹುದೆಂದರು. ಹಾಗೆಯ ಅಂತಹ ಹೋರಾಟವು ಅನಿವಾರ್ಯವಾಗಿದೆ. ಆದರೆ ಅದು ಹಿಂಸಾತ್ಮಕದಿಂದ ಕೂಡಿರದೆ ಅಹಿಂಸಾತ್ಮಕ ಹೋರಾಟ ವಾಗಿರಬೇಕು. ಅಹಿಂಸಾತ್ಮಕ ಹೋರಾಟವು ಪರಿಣಾಮಕಾರಿಯಾದ ಸುಧಾರಣೆ ತರಬಲ್ಲದಾಗಿದೆ ಎಂದರು. ಕೇಳಿದರೆ ಯಾರು ಕೊಡಲಾರರು ಕೊಡುವಂತಹ ಮನೋಧರ್ಮವು ಇಲ್ಲವಾದ್ದರಿಂದ ಅಸಮಾನತೆಯ ಸಮುದಾಯಗಳು ಹೋರಾಟ ಮಾಡಬೇಕು ಎಂದು ಹುರಿದುಂಬಿಸಿದರು. ಹೀಗಾಗಿ ಅಲೆಮಾರಿ ಸಮುದಾಯ ಗಳು ಅಂಬೇಡ್ಕರ್‌ವರ ದೂರದೃಷ್ಟಿ ಅರಿತುಕೊಂಡು, ಸಂಘಟಿತರಾಗಿ ಕಳೆದು ಕೊಂಡಿರುವ ಹಕ್ಕುಗಳನ್ನು ಗಿಟ್ಟಿಸಿಕೊಳ್ಳಬೇಕಿದೆ. ಇಲ್ಲವೆಂದರೆ ಎಂದಿನಂತತೆಯೆ ಅಲೆದಾಟದ ಬದುಕಿನಲ್ಲಿ ನರಳಬೇಕಾಗುತ್ತದೆ. ಹೀಗೆ ಅಲೆಮಾರಿಗಳು ಹಂತಹಂತವಾಗಿ ಸಮಾನತೆಗೆ ಬರಬೇಕಾಗಿದೆ. ಅಂತಹ ಅವಕಾಶವನ್ನು ಅಂಬೇಡ್ಕರ್ ಈಗಾಗಲೆ ಕೊಟ್ಟಿದ್ದಾರೆ. ಅದನ್ನು ಆ ಸಮುದಾಯ ಅಳವಡಿಸಿಕೊಂಡು ಮುಕ್ತಿಗೆ ದಾರಿಕಾಣಬೇಕಾಗಿದೆ.

೫.೩.೩. ಅಲೆಮಾರಿಗಳ ಅಭಿವೃದ್ಧಿ ಮತ್ತು ಅಂಬೇಡ್ಕರ್ ತತ್ವಗಳು

ಸಮಾಜವು ಅಭಿವೃದ್ಧಿಯಾಗುವುದು ಎಂದರೆ ಬದುಕುವ ಆಯ್ಕೆಯಲ್ಲಿ ಯಾವ ಬಗೆಯಲ್ಲಿ ಸಮುದಾಯಗಳಿಗೆ ಆತಂಕವಿರಬಾರದು, ಹಾಗೂ ಅಪ್ರಮಾಣಿಕ ಪರಿಸರವಿರಬಾರದು. ಅಂದರೆ ಭೂಮಾಲಿಕ ನಿಲ್ಲದ, ಗೇಣಿದಾರನಿಲ್ಲದ ಭೂರಹಿತ ಕಾರ್ಮಿಕನಿಲ್ಲದ ಹಸಿವು ಅನಾರೋಗ್ಯ, ಅನಕ್ಷರತೆ, ಅಸಮಾನತೆ, ಅಭದ್ರತೆ, ಆಶ್ರಯ ಹೀನತೆ, ಜಾತೀಯತೆಯ ವಾತವಣವು ಸುಳಿಯ ಕೂಡದು. ಹೀಗಾದಾಗ ಮಾತ್ರ ಆರೋಗ್ಯಕರವಾದ ಸಮಾಜ ನಿರ್ಮಾಣ ಹೊಂದಲು ಸಾಧ್ಯ. ಅಂತಹ ಸಮಾಜದಲ್ಲಿ ಅಂಚಿನ ಸಮುದಾಯ ಗಳು ನಿರಂತಕವಾಗಿ ಬಾಳಬಲ್ಲವು. ಇಂತಹ ವಾತವರಣವು ಮಾನವೀಯತೆಯ ನೆಲೆಯಿಂದ ಬರಬೇಕಿದೆ. ಏಕೆಂದರೆ ಕಾನೂನಿಂದ ಎಲ್ಲವನ್ನು ರಕ್ಷಿಸಲಾಗದು. ರಕ್ಷಿಸುವ ಮಹಾನ್ ಶಕ್ತಿಯೆಂದರೆ ಸಮಾಜದ ನೈತಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಗಳಾಗಿವೆ. ಈ ರೀತಿಯಾಗಿ ಅಂಬೇಡ್ಕರ್‌ವರು ಚಿಂತನೆ ಮಾಡುತ್ತಿದ್ದರು. ಚಿಂತನೆ ಅಷ್ಟೆ ಮಾಡದೆ ಕಾರ್ಯರೂಪದಲ್ಲಿ ತಂದಿದ್ದರು. ತಳ ಸಮುದಾಯಗಳ ಪರವಾದ ಅಭಿವೃದ್ಧಿ ಶೀಲಗಳನ್ನು ಅಂಬೇಡ್ಕರ್ ಕೊಟ್ಟಿದ್ದಾರೆ. ಆ ತತ್ವಗಳ ಮೂಲಕ ಅಲೆಮಾರಿ ಸಮುದಾಯವು ಅಭಿವೃದ್ಧಿ ಹೊಂದಬಲ್ಲರು. ಮುಖ್ಯವಾಗಿ ಪ್ರಾಮಾಣಿಕತನದಿಂದ ವಂಚನೆಯಾದವರಿಗೆ ಸಿಗುವಂತಹ ಅವಕಾಶ ಮಾಡಿಕೊಡಬೇಕಾಗಿದೆ.

ಅಂಬೇಡ್ಕರ್‌ರವರ ಅಭಿವೃದ್ಧಿ ಶೀಲ ತತ್ವಗಳು

೧. ಗುಡಿಕೈಗಾರಿಕೆಗಳ ವಿಸ್ತರಣೆ ಮತ್ತು ಅಭಿವೃದ್ಧಿ.

೨. ದೊಡ್ಡ ಕೈಗಾರಿಕೆಗಳನ್ನು ಸರ್ಕಾರದ ವಶದಲ್ಲಿ ತೆಗೆದುಕೊಳ್ಳುವುದು.

೩. ಕಾರ್ಮಿಕರಿಗೆ ತಾಂತ್ರಿಕ ಶಿಕ್ಷಣ ಒದಗಿಸುವುದು.

೪. ಅಭಿವೃದ್ಧಿ ಹೊಂದಿದ ಆರೋಗ್ಯಕರ ವಸತಿ ಕಲ್ಪಿಸುವುದು.

೫. ಭೂ-ಸುಧಾರಣೆಯಿಂದ ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರ.

೬. ಸಮಾನತೆ ಆಧಾರದ ಮೇಲೆ ಹೊಸ ಸಮಾಜ ರಚನೆ.

೭. ಜಾತಿ ರಹಿತ ಸಮಾಜ ಸ್ಥಾಪನೆ.

೮. ಧಾರ್ಮಿಕ ಅಂಧಾನುಕರಣೆಗೆ ಶಿಕ್ಷೆ.

೯. ಪ್ರಜಾಸತ್ತಾತ್ಮಕ ಮೌಲ್ಯಗಳಿಗಾಗಿ ಪ್ರಚಾರ.

೧೦. ಕೃಷಿಯನ್ನು ಸರ್ಕಾರಿ ಕೈಗಾರಿಕೆ ಎಂದು ಘೋಷಿಸುವುದು.

೧೧. ವಿಮಾ-ವಾಣಿಜ್ಯ ರಾಷ್ಟ್ರೀಕರಣ.

೧೨. ಕುಟುಂಬ ಕಲ್ಯಾಣ ಯೋಜನೆಯು ವೈಜ್ಞಾನಿಕ ವಿಧಾನಗಳ ಮೂಲಕ ಜನಸಂಖ್ಯೆ ನಿಯಂತ್ರಣ.

೧೩. ಮಹಿಳೆಯರಿಗೆ ಮತ್ತು ಶೋಷಿತರಿಗೆ ಪ್ರತ್ಯೇಕ ಮೀಸಲಾತಿ ಮತ್ತು ಅಭಿವೃದ್ಧಿ ಕಾರ್ಯಗಳ ಪ್ರತಿಪಾದನೆ.

೧೪. ಆಧುನಿಕ ಕೃಷಿ ಪದ್ಧತಿ ಅಳವಡಿಕೆ.

೧೫. ಗ್ರಾಮೀಣಾಭಿವೃದ್ಧಿ ಮತ್ತು ನಿರುದ್ಯೋಗ ನಿವಾರಣೆ.

೧೬. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಹ.

೧೭. ಪೌರೋಹಿತ್ಯ ಸಾಮಾಜೀಕರಣ.

ಹೀಗೆ ಅಂಬೇಡ್ಕರ್‌ವರ ತತ್ವಗಳೂ ಬಹು ವೈಶಾಲ್ಯಾತ್ಮಕ ತಳಹದಿಯ ಮೇಲೆ ರೂಪಗೊಂಡಿದೆ. ಇಂತಹ ತತ್ವಗಳಿಗಾಗಿ ಅವಿರತವಾಗಿ ಹೋರಾಟ ಮಾಡಿ ಒದಗಿಸಿಕೊಟ್ಟರು. ಈ ಮೇಲಿನ ಅಂಶಗಳೂ ಕಡ್ಡಾಯವಾಗಿ ಅನುಷ್ಠಾನದಲ್ಲಿ ತಂದಿದ್ದರೆ.

೧. ಬಡತನ ನಿವಾರಣೆಯಾಗುತ್ತಿತ್ತು.

೨. ಎಲ್ಲರಿಗೂ ಸಾಮೂಹಿಕ ಕೃಷಿಯಿಂದ ಭೂಮಿ ದೊರೆಯುತ್ತಿತ್ತು.

೩. ಆಧುನಿಕ ಕೃಷಿಯಿಂದ ಕ್ಷಿಪ್ತ ಪ್ರಗತಿ ಸಾಧಿಸಬಹುದಿತ್ತು.

೪. ಎಲ್ಲ ಕೃಷಿಕರು ಒಂದುಗೂಡುವುದರಿಂದ ನಿಧಾನವಾಗಿ ಜಾತಿಯ ಕೊಂಡಿ ಕಳಚುತಿತ್ತು.

೫. ನಿರಾಶ್ರಿತರಿಗೆ ಆಶ್ರಯ ದೊರೆಯುತಿತ್ತು.

೬. ವಸತಿ ಹೀನರು ವಸತಿ ಸಹಿತರಾಗಬಹುದಿತ್ತು.

೭. ಬದುಕನ್ನು ಕಳೆದುಕೊಂಡವರು ಬದುಕನ್ನು ರೂಪಿಸಿಕೊಳ್ಳಬಹುದಿತ್ತು.

೮. ಅಲೆಮಾರಿಯಂತಹ ಸಮುದಾಯಗಳು ನೆಲೆನಿಲ್ಲಬಹುದಿತ್ತು.

ಈ ರೀತಿಯಾಗಿ ಅಂಬೇಡ್ಕರ್ ಕಂಡ ಕನಸು ನನಸಾಗುತಿತ್ತು. ತಳಸಮುದಾಯಗಳ ಬದುಕು

ಹುಸನಾಗುತ್ತಿತ್ತು. ಸರಿಯಾದ ರೀತಿಯಲ್ಲಿ ಅನುಷ್ಠಾನದಲ್ಲಿ ಬರಲಿಲ್ಲ. ಸಮಸ್ಯೆಗಳು ಬಗೆಹರಿಯಲಿಲ್ಲ. ಇನ್ನು ಒಂದು ಹೆಜ್ಜೆ ಮುಂದಿಟ್ಟ ಅಂಬೇಡ್ಕರ್‌ರವರು ವಿವಾಹವಾಗಲು ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಮರ್ಥ್ಯವಿರಬೇಕೆಂದರಲ್ಲದೆ ಪ್ರತಿ ವಿವಾಹಿತರು ತನ್ನ ಕುಟುಂಬದ ಪ್ರಮಾಣ ನಿಯಂತ್ರಿಸಬೇಕೆಂದರೆ ಮೀಸಲಾತಿ ಪಡೆದುಕೊಂಡವರು ಮೀಸಲಾತಿ ಪಡೆಯದೆ ಇರುವ ಅದೆ ಸಮುದಾಯಗಳಿಗೆ ಕೊಡಿ ಮತ್ತು ಕೊಡಿಸಿರಿ ಎಂದರು. ಸ್ವಾಭಿಮಾನಿಯಾಗಿ ಬದುಕಲು ಆಹಾರ, ಉಡುಪು, ವಾಕ್ ಚಾತುರ್ಯ, ನಂಬಿಕೆ, ಸ್ವ-ಪ್ರಜ್ಞೆ ಇತ್ಯಾದಿಗಳನ್ನು ಮೈಗೂಡಿಸಿಕೊಳ್ಳಲು ಚಾಲನೆಕೊಟ್ಟರು. ಅದೃಷ್ಟ ವಾದವನ್ನು ನಂಬಿದ್ದವರಿಗೆ ಅದೃಷ್ಟ ವಾದವನ್ನು ನಂಬದಿರಿ ನಿಮ್ಮ ಬಲದಲ್ಲಿ ನಂಬಿಕೆ ಇಡಿ, ಮತ್ತು ಅಂದು ಕೊಂಡಿದ್ದನ್ನು ಘನತೆ ಹಾಗೂ ಗೌರವ, ಪರಿಶ್ರಮದಿಂದ ಸಾಧ್ಯವೆಂದರು. ಅಂಬೇಡ್ಕರ್‌ರವರ ದೂರದೃಷ್ಟಿ ಅರಿತುಕೊಂಡು ಸಮಾಜದ ತಳದಲ್ಲಿರುವ ಸಮುದಾಯಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ಮುಂದಾಗಬೇಕಿದೆ. ಇಲ್ಲವೆಂದರೆ ಅಂಬೇಡ್ಕರ್ ತತ್ವಗಳಿಗೆ ಕಾಗದದಲ್ಲಿ ನ್ಯಾಯ ಒದಗಿಸಿ ದಂತಾಗುತ್ತದೆ.

೫.೪. ಮೀಸಲಾತಿ ಮತ್ತು ಮೂಲ ಸೌಕರ್ಯ

೧. ಮೀಸಲಾತಿ

ಮೀಸಲಾತಿಯ ಕಕ್ಷೆಯೊಳಗೆ ಪರಿಭ್ರಮಿಸುವ ಜನ ಜಾತಿಗಳಿಲ್ಲ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಆಯಾಮಗಳ ಮೇಲೆ ಮೀಸಲಾತಿಯ ಸವಲತ್ತು ಮತ್ತು ಸೌಕರ್ಯಗಳು ಪ್ರಭಾವ ಬೀರುತ್ತವೆ. ಹಾಗಾಗಿಯೆ ಮೀಸಲಾತಿಯು ಒಂದೆ ರೂಪದ್ದಲ್ಲ, ತದ್ವಿರುದ್ಧ, ಪರಿಣಾಮಗಳ ಒಡಲ ವೈರುಧ್ಯಗಳ ಆಗರ. ಎರಡು ಮುಖಗಳ ಅಂಕಣವಾಗಿದೆ. "ಇದು ಅಸಮಾನತೆಯ- ಸಮಾನತೆಯ ಸಾಧನ, ಗುಲಾಮಗಿರಿ- ವಿಮುಕ್ತಿಯ- ಆಯಾಮ, ಶತೃತ್ವ- ಸ್ನೇಹಕ್ಕೂ ಸೇತುವೆ, ಕಡುಬಡತನ- ದ್ವೇಷ, ಅಸೂಯೆ, ಪ್ರೀತಿ, ವಾತ್ಸಲ್ಯ- ಅನುಕಂಪಕ್ಕೆ ಆಧಾರ, ಸುಳ್ಳು- ಸತ್ಯಕ್ಕೂ ಅಡಿಪಾಯ, ಜಡತ್ವ- ಜಂಗಮಕ್ಕೆ ಹಾದಿಯಾಗಿದೆ."[4]

ದೇಶದ ವಿಕಲಾಂಗತೆಗೆ ಹಿನ್ನೆಲೆಯಾದ ಮೀಸಲಾತಿ ಸದೃಢತೆಗೂ ಪೌಷ್ಠಿಕ ಅಂಶವಾಗುತ್ತಿದೆ. ಮೀಸಲಾತಿಯು ಸೃಜನಶೀಲತೆಗಳಿಗೆಲ್ಲಾ ದಾರಿಯಾಗಿದೆ. ಇಂತಹ ಅದ್ಭುತ ಮಿಂಚನ್ನು ತನ್ನೊಳಗೆ ಹುದುಗಿಸಿಕೊಂಡಿದೆ. "ಇದು ಕೆಡುವುದರ- ಕಟ್ಟುವುದರ- ಪರಿಕರ, ಋಣಾತ್ಮಕ- ಧನಾತ್ಮಕದ ಅಂಗಳ, ನೆಗಟಿವ್- ಪಾಸಿಟಿವ್‌ಗಳ ಕಣಜ, ವ್ಯವಕಲನ- ಸಂಕಲನದ ಸಮ್ಮಿಲನ, ನೇತ್ಯಾತ್ಮಕ- ಇತ್ಯಾತ್ಮಕಗಳ ಸಂಗಮ"[5] ಇಂತಹ ವಿಶಾಲ ವ್ಯಾಪ್ತಿ ಮೈಗೂಡಿಸಿಕೊಂಡ ಮೀಸಲಾತಿಯು ಒಂದು ಸನ್ನೆಗೋಲಾಗಿದೆ. ಮೀಸಲಾತಿ ಎಂದರೆ ಕಾಯ್ದುಕೊಳ್ಳುವುದು ಅಥವಾ ಕಾಯ್ದಿರುಸುವುದಾಗಿದೆ. ಅಥವಾ ಯಾವ ಸೌಲಭ್ಯವು ಬೇರೆಯವರ ಹುನ್ನಾರ ಪ್ರಕೋಪದಿಂದ ವಂಚಿಸಲ್ಪಟ್ಟಿರುತ್ತಾವೆಯೋ ಅಂತಹುಗಳನ್ನು ಕಾನೂನು ಬದ್ಧವಾಗಿ ಸಲ್ಲುವಂತೆ ಮಾಡುವ ಕ್ರಮವಾಗಿದೆ.

ಮೀಸಲಾತಿಯು ಸಾಮಾಜಿಕ ನ್ಯಾಯದ ತಕ್ಕಡಿ, ಜಾತಿ, ನಿಷ್ಠ ಸಮಾಜದಿಂದ ಮುಕ್ತಿ ಪಡೆಯಲು ಮೀಸಲಾತಿಯು ಒಂದು ಆಸರೆಯ ಕೋಲು. ತಳ ಸಮುದಾಯಗಳ ಮೇಲಿನ ಶೋಷಣೆಯನ್ನು

ನಿಯಂತ್ರಿಸುವ ಸಲುವಾಗಿ ರೂಪಿಸಿಕೊಂಡ ಮಾನವೀಯ ಮೌಲ್ಯವಾಗಿ "ಧ್ವನಿ ಇಲ್ಲದವರಿಗೆ ಧ್ವನಿಯಾಗಿ ಅವರವರ ಅಸ್ತಿತ್ವವನ್ನು ಕಂಡುಕೊಳ್ಳಲು, ಆ ಮೂಲಕ ಅಸಮಾನತೆಯನ್ನು ಹೋಗಲಾಡಿಸಲು ಅನು ಶಾಸನಿಸಿಕೊಂಡ ಹೊಣೆಗಾರಿಕೆ"[6]ಯಾಗಿದೆ.

ಶತಮಾನಗಳ ಕಾಲದಿಂದ ಮೂಲಭೂತ ಸೌಕರ್ಯ ಮತ್ತು ಹಕ್ಕುಗಳಿಂದ ವಂಚಿತರಾದವರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸ್ವಾತಂತ್ರ ಕಳೆದುಕೊಂಡವರಿಗೆ ಸಮಾಜದ ಎಲ್ಲರಂತೆ ಬಾಳಲು ಅವಕಾಸ ಮಾಡಿಕೊಡುವ ಸಲುವಾಗಿ ಹಾಗೂ ಮುಖ್ಯವಾಹಿನಿಗೆ ಸೇರಲು ಸಾಧ್ಯವಾಗುವಂತೆ ಮಾಡುವ ಸಾಮಾನ್ಯ ಸಾಧನವಾಗಿದೆ. ಸಮಾಜದ ಅಂಚಿನಲ್ಲಿರುವ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾದ ಮೀಸಲಾತಿಯು ಇಲ್ಲವಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಮಾತ್ರ ಮೀಸಲಾತಿ ಕೊಡಲಾಗಿದೆ. ಅದು ಆಯಾ ಜಾತಿಯ ಜನಸಂಖ್ಯೆ ಅನುಗುಣವಾಗಿ ಕೂಡ ಕೊಡಮಾಡಿಲ್ಲ. ಅಧಿಕ ಜನಸಂಖ್ಯೆ ಕಡಿಮೆ ಮೀಸಲಾತಿ ವ್ಯವಸ್ಥೆಯಿದೆ. ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಲ್ಲಿ ಕೆಲವು ಅಲೆಮಾರಿ ಸಮುದಾಯಗಳು ಸೇರ್ಪಡೆಗೊಳ್ಳುತ್ತವೆ. ಸಮಸ್ಯೆ ಎಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದೂಳಿದ ವರ್ಗಗಳ ಕೆಲವೆ ಕೆಲವು ಜನರು ಮಾತ್ರ ಮೀಸಲಾತಿಯ ಸೌಲಭ್ಯ ಪಡೆಯುತ್ತಿದ್ದಾರೆ. ಅಲೆಮಾರಿ ಸಮುದಾಯಗಳ ಪಾಲು ಅದರಲ್ಲಿ ಗೌಣವಾಗಿದೆ. ಅಸಮರ್ಪಕ, ಅನುಷ್ಠಾನ ಮತ್ತು ಅಸಮಾನ ವಿತರಣೆಯಿಂದ ಪಡೆಯಲಾಗುತ್ತಿಲ್ಲ. ನೆಲೆ ನಿಲ್ಲದೆ, ಸರಿಯಾದ ಮಾಹಿತಿ ಇಲ್ಲದೆ ಪಡೆದುಕೊಳ್ಳುವಲ್ಲಿ ಹಿಂದುಳಿದಿದ್ದಾರೆ.

ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಸಮಾಜದ ದುರ್ಬಲರಿಗೆ ಮೀಸಲಾತಿಯ ಅವಶ್ಯಕತೆ ತಿಳಿಸಿ ಕೊಡ ಮಾಡಿದ್ದಾರೆ. ತಲುಪಬೇಕಾದವರಿಗೆ ತಲುಪಿಲ್ಲ. ಈಗ ಚಾಲ್ತಿಯಲ್ಲಿರುವ ಮೀಸಲಾತಿಯು ಸಿಗಬೇಕಾದವರಿಗೆ ಸಿಗುತ್ತಿಲಿಲ್ಲ. ಶೋಷಿತರ ಬದುಕು ಮರುಕಳಿಸಲು ಸಾಮಾಜಿಕ ನ್ಯಾಯ ಒದಗಿಸಲು ಡಾ. ಬಿ.ಆರ್. ಅಂಬೇಡ್ಕರ್‌ರವರು ಮೀಸಲಾತಿಗಾಗಿಯೇ ದೊಡ್ಡ ಹೋರಾಟ ಮಾಡಿ ಸಂವಿಧಾನಾತ್ಮಕವಾಗಿ ಕೊಡಿಸಿದರು.

"ಕೆಳಸಮುದಾಯಗಳಿಗೆ ಮತ್ತು ಸಾಮಾಜಿಕವಾಗಿ ಶೋಷಣೆಗೊಳಗಾದ ಸಮುದಾಯಗಳಿಗೆ ಕಲ್ಪಿಸಿದ ಮೀಸಲಾತಿಯು ಅಂಬೇಡ್ಕರ್‌ರವರ ಬಹುದೊಡ್ಡ ಕೊಡಗೆಯಾಗಿದೆ."[7] ಮೀಸಲಾತಿ ಕೇಳುವ ಮತ್ತು ರೂಪಿಸುವ ಹಂತದಲ್ಲಿ ಅಂಬೇಡ್ಕರ್ ಅತ್ಯಂತ ವಿಲಕ್ಷಣ ರಾಜಕೀಯ ಸವಾಲುಗಳನ್ನು ಎದುರಿಸಿದ್ದಾರೆ. ಈ ದೇಶದಲ್ಲಿನ ಧ್ವನಿ ಇಲ್ಲದ ಮತ್ತು ಶತಮಾನಗಳಿಂದ ಶೋಷಣೆಗೊಳಗಾದ ಸಮುದಾಯಗಳಿಗೆ ರಾಜಕೀಯ, ಆರ್ಥಿಕ ಸವಲತ್ತುಗಳನ್ನು ಒದಗಿಸುವ ಮೀಸಲಾತಿಯನ್ನು ಕೇಳುವ ಸಂದರ್ಭದಲ್ಲಿ ದೇಶ ದ್ರೋಹಿಯ ಪಟ್ಟ ಕಟ್ಟಿಸಿ ಕೊಂಡಿದ್ದರು. ಇಂತಹ ಮಾತುಗಳನ್ನು ಮೈಮೇಲೆ ಹೇರಿಕೊಂಡು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೀಸಲಾತಿ ಕಲ್ಪಿಸಲು ಮುಂದಾಗಿ ಯಶಸ್ಸುಕಂಡರು. ಪರಿಣಾಮ ಮೀಸಲಾತಿ ಯನ್ನು ಸಂವಿಧಾನ ಬದ್ಧ ಮಾಡಿದರು. ಸಂವಿಧಾನದ ಕೆಲವು ಅನುಚ್ಛೇದದಲ್ಲಿ ಮೀಸಲಾತಿಯ ಸೌಲಭ್ಯ ವನ್ನು ಅವಡಿಸಿದರು. ಉದ್ಯೋಗದಲ್ಲಿ ಮೀಸಲಾತಿ ಮತ್ತು ಶೈಕ್ಷಣಿಕದಲ್ಲಿ ಪ್ರವೇಶ ಮೀಸಲಾತಿ ಕೊಡ ಮಾಡಿದ್ದಾರೆ.

೧. ೩೩೦ನೆ ವಿಧಿ- ಪರಿಶಿಷ್ಟರಿಗೆ ಪಾರ್ಲಿಮೆಂಟ್ ಸದಸ್ಯತ್ವದಲ್ಲಿ ಮೀಸಲಾತಿ ನೀಡಲಾಗಿದೆ.

೨. ೩೩೨ನೆ ವಿಧಿ- ರಾಜ್ಯಗಳಲ್ಲಿನ ಪರಿಶಿಷ್ಟರಿಗೆ ಮೀಸಲಾತಿಯನ್ನು ನೀಡಲಾಗಿದೆ.

೩. ೩೩೪ನೆ ವಿಧಿ- ಪ್ರತಿ ಹತ್ತು ವರ್ಷಗಳಿಗೊಮ್ಮೆ ಮೀಸಲಾತಿಯ ಮುಂದೂಡಿಕೆಯನ್ನು ಪರಿಷ್ಕರಿಸಲು ಅವಕಾಶ ಮಾಡಿಕೊಟ್ಟಿದೆ.

೪. ೨೩೪ನೆ ವಿಧಿ- ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯ್ತಿಗಳಲ್ಲಿ ಪಟ್ಟಣ ಮತ್ತು ನಗರ ಸಭೆಗಳಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಕಲ್ಪಿಸಲಾಗಿದೆ.


ಮೀಸಲಾತಿಯು ಕೇವಲ ದಲಿತರಿಗಷ್ಟೆ ಸೀಮಿತವಾದುದು ಎಂದು, ಅಲೆಮಾರಿ ಸಮುದಾಯಗಳಿಗೆ ಅನ್ವಯವಾಗಲರದೆಂದು ತಪ್ಪು ತಿಳಿಯಬಾರದು. ಅಲೆಮಾರಿಗಳಿಗಾಗಿ ಪ್ರತ್ಯೇಕ ಮೀಸಲಾತಿಯ ಮಹತ್ವವನ್ನು ಹೇಳಬೇಕಾಗಿಲ್ಲ. ಅಂಬೇಡ್ಕರ್‌ರವರ ದೂರದೃಷ್ಟಿ ಎಂದರೆ ಸಾಮಾಜಿಕವಾಗಿ ತಳದಲ್ಲಿರುವ ಅಥವಾ ಕಟ್ಟಕಡೆಯ ವ್ಯಕ್ತಿಗೆ ದೊರೆಯುವಂತಾಗಬೇಕೆಂಬುದಾಗಿದೆ. ಆದುದರಿಂದ ಅಲೆಮಾರಿ ಸಮದಾಯಗಳು ಕಟ್ಟಕಡೆಯ ವ್ಯಕ್ತಿಗಳೆ, ಹಾಗಾಗಿ ಮೀಸಲಾತಿಯನ್ನು ಪಡೆಯಬಹುದಾಗಿದೆ. ಮೀಸಲಾತಿಯ ಪಟ್ಟಿಯಲ್ಲಿ ಅಲೆಮಾರಿಗಳು ಸೇರ್ಪಡೆಯಾಗುತ್ತಾರೆ. ಮೀಸಲಾತಿಯ ದೃಷ್ಟಿಕೋನ ಅಂದು ಅಂಬೇಡ್ಕರ್‌ರವರಿಗೆ ಸಮಷ್ಠಿತನ ಮೀಸಲಾತಿ ಬೇಕಿತ್ತು. ಅಲೆಮಾರಿಗಳು ಮೀಸಲಾತಿಯಿಂದ ದೂರವೆ ಉಳಿದಿರಬಹುದು. ಇದು ಅಂಬೇಡ್ಕರ್‌ವರ ತಪ್ಪಲ್ಲ. ಮೀಸಲಾತಿ ಮುಟ್ಟಿಸುವವರ ತಪ್ಪಾಗಿದೆ. ಮುಟ್ಟಿಸುವಲ್ಲಿ ವಿಫಲರಾಗಿದ್ದಾರೆ. ಹಾಗೂ ಮೀಸಲಾತಿಯ ಮಹತ್ವ ಅಲೆಮಾರಿಗಳಿಗೆ ಗೊತ್ತಿಲ್ಲವಾಗಿದೆ. ಗೊತ್ತಿದ್ದರು ಒಂದು ಪಟ್ಟಿಯಲ್ಲಿ ಹಲವಾರು ಜಾತಿ, ಉಪಜಾತಿಗಳು ಆ ಮೀಸಲಾತಿಯನ್ನು ಪಡೆದಿರಬಹುದು. ಆದುರಿಂದ ಬದಲಾದ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಜಾತಿ ಸಮೀಕ್ಷೆ ಕೈಗೊಂಡು ಯಾರು ಕೊನೆಯ ವ್ಯಕ್ತಿಗಳೆಂದು ತಿಳಿದು ಆ ವ್ಯಕ್ತಿಗೆ ಮುಟ್ಟಿಸಬೇಕಿದೆ. ಅಗತ್ಯವಿದ್ದಲ್ಲಿ ಕಾನೂನು ತಿದ್ದುಪಡಿಮಾಡಿ ಅಸಮಾನತೆ ಹೋಗಲಾಡಿಸಬಹುದಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪಡೆಯಬಹುದಾಗಿದೆ. ಮೀಸಲಾತಿಯನ್ನು ಪಡೆಯಬೇಕು ಮತ್ತು ನಮ್ಮದೆ ಎಂಬ ಮನಸ್ಸು ಅಲೆಮಾರಿಗಳಲ್ಲಿ ಬಂದಿರುವುದರಿಂದ ಅಂಬೇಡ್ಕರ್‌ರವರ ದೂರದೃಷ್ಟಿ ಸಾರ್ಥಕವಾಗುತ್ತಿದೆ. ಆದುದರಿಂದ ಅಲೆಮಾರಿ ಸಮುದಾಯಗಳು ಮೀಸಲಾತಿ ಪಡೆದು ಬದುಕನ್ನು ರೂಪಿಸಿಕೊಳ್ಳಬೇಕಿದೆ. ಮೀಸಲಾತಿ ತಲುಪಿಸುವವರು ತಪ್ಪದೆ ತಲುಪಿಸಬೇಕಾಗಿದೆ.

೨. ಮೂಲ ಸೌಕರ್ಯ

ಮಾನವರು ಪ್ರಾಣಿವರ್ಗದಿಂದ ಪ್ರತ್ಯೇಕಗೊಂಡಂದಿನಿಂದ ಹೆಚ್ಚಾಗಿ ಸಹಜ ವಸ್ತುಗಳನ್ನು, ಹುಟ್ಟುವಳಿಗಳನ್ನು ಉಪಯೋಗಿಸುತ್ತಾ ಬಂದರು. ಆದಿಮ ಕಾಲದಲ್ಲಿ ತಮ್ಮ ಉಪಜೀವನಕ್ಕಾಗಿ ನಿಸರ್ಗದಲ್ಲಿ ಲಭ್ಯವಾದ ವಸ್ತುಗಳನ್ನು ಉಪಯೋಗಿಸಿಕೊಂಡು ತಮ್ಮ ಭೌತಿಕ ಅಗತ್ಯದ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಚರಿತ್ರೆಯಲ್ಲಿ ಮುನ್ನಡೆದಂತೆ ಬದಲಾವಣೆ ಕಂಡ ಪರಿಣಾಮ, ನೆಲೆನಿಲ್ಲುತ್ತಲೆ ತನಗೆ

ಬೇಕಾದ ಮೂಲಸೌಕರ್ಯಗಳನ್ನು ತಾನಿರುವ ಕಡೆ ಉತ್ಪಾದಿಸಿಕೊಳ್ಳಲು ಅಥವಾ ದೊರಕಿಸಿಕೊಳ್ಳಲು ಮುಂದಾದರು. ಇವು ಕೆಲವು ಸಮುದಾಯಗಳಿಗೆ ಸೀಮಿತವಾದವು. ಇನ್ನು ಕೆಲವು ಸಮುದಾಯಗಳಿಗೆ ಉತ್ಪಾದಿಸಲು ಅಥವಾ ದೊರಕಿಸಿಕೊಳ್ಳಳು ಅವಕಾಶ ಮತ್ತು ಅನುಕೂಲವಿರದಿದ್ದರಿಂದ ಮೂಲ ಸೌಕರ್ಯಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯಲು ಮುಂದಾದರು. ಅಲೆಯುತ್ತಲೆ ಇದ್ದಾರೆ.

ಮೂಲ ಸೌಕರ್ಯ ವೆಂದರೆ ಮಾನವರಿಗೆ ಅಗತ್ಯವಿರುವ ಮೂಲಧಾರ ಸೇವೆಗಳನ್ನು ಒದಗಿಸುವ ವಸ್ತುಗಳಾಗಿವೆ. ಇವು ಎಲ್ಲ ಮಾನವರಿಗೂ ಅತಿ ಅವಶ್ಯಕ. ಮೂಲ ಸೌಕರ್ಯವು ತಾನಿರುವ ಕಡೆ ದೊರೆತರೆ ಮಾನವರ ಅಭಿವೃದ್ಧಿ ಸಾಧ್ಯವಾಗುತ್ತದೆ. ಇಲ್ಲವೆಂದರೆ ಅಲೆದಾಟ ಮಾಡಬೇಕಾಗುತ್ತದೆ. ಬಹುಹಿಂದಿನಿಂದಲೂ ಕೆಲವು ಸಮುದಾಯಗಳು ಮೂಲಸೌಕರ್ಯಗಳಿಂದ ವಂಚಿತವಾಗಿವೆ. ಅವುಗಳೆಂದರೆ, ಅಲೆಮಾರಿಗಳು, ದಲಿತರು ಮತ್ತು ಬುಡಕಟ್ಟು ಸಮುದಾಯಗಳು. ಬದಲಾದ ಸ್ಥಿತಿಯಲ್ಲೂ ದಲಿತರು ಅಲ್ಪಸ್ವಲ್ಪವಾದರೂ ಮೂಲಸೌಕರ್ಯ ಪಡೆಯುವಲ್ಲಿ ಮುಂದಾಗುತ್ತಿದ್ದಾರೆ. ಆದರೆ ಅಲೆಮಾರಿಗಳು ಮತ್ತು ಬುಡಕಟ್ಟುಗಳು ಈ ಸೌಕರ್ಯ ಪಡೆಯುವಲ್ಲಿ ಹಿಂದಿದ್ದಾರೆ. ಹಿಂದಿದ್ದಾರೆ ಎನ್ನುವುದಕ್ಕಿಂತ ಅವಕಾಶ ಮತ್ತು ಅನುಕೂಲವಿಲ್ಲ ಎನ್ನುವುದು ಸೂಕ್ತ. ಸಂವಿಧಾನದಲ್ಲಿ ಮೂಲ ಸೌಕರ್ಯದಿಂದ ವಂಚಿತರಾದವರಿಗೆ ಸೌಕರ್ಯ ಕಲ್ಪಿಸುವ ಅವಕಾಶವಿದೆ. ಆದರೆ ಕಲ್ಪಿಸುವರು ಯಾರು? ಸರ್ಕಾರವು ಆ ಹೊಣೆ ಹೋರಬೇಕಾಗುತ್ತದೆ. ಆದರೆ ಆ ಹೊಣೆಯಿಂದ ದೂರವಿದೆ. ಆ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದ್ದರೆ ಇಂದು ಅಲೆಮಾರಿಗಳಿಗೆ ಅಲೆಯುವ ಪ್ರಮೇಯ ಬರುತ್ತಿರಲಿಲ್ಲ.



ಈ ಮೇಲಿನ ಎಲ್ಲ ಮೂಲ ಸೌಕರ್ಯಗಳು ಅಲೆಮಾರಿಗಳಿಗೆ ಇಲ್ಲವಾಗಿದೆ. ಆದುದರಿಂದ ಕೂಡಲೆ ಮೂಲ ಸೌಕರ್ಯಗಳನ್ನು ಒದಗಿಸುವತ್ತಾ ವ್ಯವಸ್ಥೆ ಮುಂದಾಗಬೇಕಾಗಿದೆ. ಅಂದಾಗ ಮಾತ್ರ ಅಲೆಮಾರಿಗಳು ನಿರಾತಂಕವಾಗಿ ಬದುಕಬಲ್ಲರು. ಇಲ್ಲವೆಂದರೆ ಎಂದಿನಂತೆಯೆ ಮೂಲಸೌಕರ್ಯಕ್ಕಾಗಿಯೆ ಅಲೆಯಬೇಕಾಗುತ್ತದೆ. ಕೆಲವರು ಮಾತ್ರ ಮೂಲ ಸೌಕರ್ಯ ಪಡೆದು ಕೆಲವರು ಪಡೆಯದಿದ್ದರೆ ಅದು ಸಾಮಾಜಿಕ ಅನಾರೋಗ್ಯತೆಯನ್ನು ಎತ್ತಿ ತೋರಿಸುತ್ತದೆ. ಹಾಗಾಗಿ ಮೀಸಲಾತಿ ಮತ್ತು ಮೂಲ ಸೌಕರ್ಯ ವ್ಯವಸ್ಥೆ ರೂಪಿತವಾಗಬೇಕಿದೆ ಮತ್ತು ಕಾರ್ಯ ಪ್ರವೃತ್ತರಾಗಬೇಕಾಗಿದೆ.



೫.೫. ಅಲೆಮಾರಿಗಳ ಸಬಲೀಕರಣದ ಪರ್ಯಾಯಗಳು

ಶತ ಶತಮಾನಗಳ ಕಾಲದಿಂದಲೂ ಪಾರಂಪರಿಕ ಕಸುಬುಗಳನ್ನು ನೆಚ್ಚಿಕೊಂಡು ಬಂದಿದ್ದಾರೆ. ಬಡತನದ ಬೇಗೆಯಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಹಸಿವನ್ನು ಹಿಂಗಿಸಿಕೊಳ್ಳಲು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶದಲ್ಲಿ ಅಲೆಯುತ್ತಿರುವ ಅಲೆಮಾರಿಗಳ ಜೀವನ ಕ್ರಮ, ಸಾಮಾಜಿಕ ವ್ಯವಸ್ಥೆ ಹಾಗೂ ಆರ್ಥಿಕ ರಚನೆಯನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದಾಗಿದೆ.

ಬದುಕಿನ ಜಂಜಾಟದಲ್ಲಿ ಹೋರಾಟ ಮಾಡುತ್ತಿರುವ ಅಲೆಮಾರಿಗಳ ಬದುಕು ರೂಪಿಸಲು ಹಾಗೂ ಸಬಲರಾಗಲು ಯಾವ ರೀತಿಯ ಕಾರ್ಯಕ್ರಮಗಳೂ ಬೇಕು ಎಂಬುದನ್ನು ಸಮುದಾಯದ ಸಮಷ್ಠಿ ವಿವೇಕದಿಂದ ಮತ್ತು ಆ ಕ್ಷೇತ್ರದಲ್ಲಿ ದುಡಿದ ಯೋಜನಾಕಾರರು, ಅಧ್ಯಯನಕಾರರು, ಸಂಪನ್ಮೂಲ ವ್ಯಕ್ತಿಗಳು, ಸರ್ಕಾರ ಒಟ್ಟಿಗೆ ಕೂಡಿಕೊಂಡು ಅಲೆಮಾರಿ ಸಮುದಾಯಗಳು ಸಬಲರಾಗಲು ಅಥವಾ ನೆಲೆನಿಂತು ಇತರರಂತೆ ಬದುಕುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಈ ದೃಷ್ಠಿಯಿಂದ ಸಬಲೀಕರಣದಂತಹ ಅಭಿವೃದ್ಧಿ ಪ್ರಣಾಳಿಕೆಯ ಕಾರ್ಯಕ್ರಮಗಳು, ಸಬಲೀಕರಣದ ವಾತವರಣವು ಸೃಷ್ಠಿ ಗೊಳ್ಳಬೇಕಿದೆ. ಹಾಗಾದರೆ ಸಬಲೀಕರಣ ಎಂದರೇನು? ಎಂಬ ಪ್ರಶ್ನೆ ಮೂಡಬಹುದು ಆದ್ದರಿಂದ ಸಬಲೀಕರಣದ ಸಾರಾಂಶವನ್ನು ತಿಳಿಯಲೇಬೇಕಾಗುವುದು ಅನಿವಾರ್ಯವಾಗಿದೆ.

"೧೯೮೦ರ ದಶಕದಲ್ಲಿ ಅಭಿವೃದ್ಧಿಯ ಕುರಿತ ಚರ್ಚೆಯಲ್ಲಿ ಹೆಚ್ಚು ಆಸಕ್ತಿ ಕೆರಳಿಸಿದ ಹಾಗೂ ಚರ್ಚೆಯ ಮುಂಚೂಣಿಗೆ ಬಂದ ಪರಿಭಾವನೆ ಎಂದರೆ 'Empowerment.' "[8] ಸಾಮಾಜಿಕ ಚೌಕಟ್ಟಿನಲ್ಲಿ ಬಡವರು ದುರ್ಬಲರ ಹಾಗೂ ಮಹಿಳೆಯರ ವಂಚಿತರ ಬದುಕನ್ನು ಉತ್ತಮಪಡಿಸುವ ದಿಸೆಯಲ್ಲಿ ಇಂತಹ ಸಬಲೀಕರಣವು ನೆರವಾಗಬಲ್ಲದೆಂಬುದನ್ನು ಮನಗಾಣಲಾಯಿತು. "Empowerment ಸಿದ್ಧಾಂತದ ಮೂಲವನ್ನು ಲ್ಯಾಟಿನ್ ಅಮೇರಿಕದಲ್ಲಿ ೧೯೭೦ರ ದಶಕದಲ್ಲಿ ಆರಂಭಗೊಂಡ ಜನಪ್ರಿಯ ಶಿಕ್ಷಣ ಚಳುವಳಿಯಲ್ಲಿ ಗುರುತಿಸಬಹುದಾಗಿದೆ."[9] ಸಬಲೀಕರಣವು ಕೇವಲ ಒಂದೆರಡು ಸಮುದಾಯಗಳಿಗೆ ಅಥವಾ ಒಂದೆರಡು ದೇಶಗಳಿಗೆ ಸೀಮಿತವಾಗಿಲ್ಲ. ಎಲ್ಲೆಲ್ಲಿ ದಮನಿತರಿದ್ದಾರೆ ಅಲ್ಲೆಲ್ಲ ಈ ಸಿದ್ಧಾಂತದ ಛಾಪನ್ನು ಮೂಡಿಸಬಹುದಾಗಿದೆ.

'ಸಬಲೀಕರಣ' ಎಂದರೆ ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಮಾನಸಿಕ ಮತ್ತು ಬೌದ್ಧಿಕತೆಗೆ ಸಂಬಂಧಿಸಿದಂತೆ ಶಾಸನ ಬದ್ಧವಾದ ಮತ್ತು ನೈತಿಕ ಶಕ್ತಿಯನ್ನು ಕೊಡುವ ಚೈತನ್ಯವೆ ಸಬಲೀಕರಣವಾಗಿದೆ.

ಆರ್ಥಿಕ ದೃಷ್ಟಿಕೋನದಲ್ಲಿ ಸಬಲೀಕರಣ ವೆಂದರೆ ಕಡಿಮೆ ಆದಾಯದಿಂದ ಅಧಿಕ ಆದಾಯದ ಕಡೆಗೆ, ಕಡಿಮೆ ಅನುಭೋಗದಿಂದ ಅಧಿಕ ಅನುಭೋಗದ ಕಡೆಗೆ, ಜೀವನಾಧಾರ ಮಟ್ಟದಿಂದ ಅಧಿಕ ಜೀವನ ಮಟ್ಟದ ಕಡೆ, ಪ್ರಾಥಮಿಕ ವಲಯದಿಂದ ಪ್ರಾಧಾನ್ಯತೆಯಿಂದ ದ್ವಿತೀಯ, ತೃತೀಯ ವಲಯದ ಕಡೆ, ಕಡಿಮೆ ಉಳಿತಾಯ ಮತ್ತು ಬಂಡವಾಳ ಸಂಗ್ರಹದಿಂದ ಅಧಿಕ ಉಳಿತಾಯ ಮತ್ತು ಬಂಡವಾಳ

ಸಂಗ್ರಹದ ಕಡೆಗೆ ಚಲಿಸುವ ಒಂದು ಕ್ರಿಯೆಯಾಗಿದೆ. ಇದೊಂದು ನಿರಂತರ ಅಭಿವೃದ್ಧಿ ಪ್ರಕ್ರಿಯೆಯಾಗಿದೆ. ವಿಶಾಲಾರ್ಥದಲ್ಲಿ ಹೇಳಬೇಕೆಂದರೆ ದಮನ, ಅನ್ಯಾಯ, ವಂಚನೆ, ತಾರತಮ್ಯ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಸಾಮಾಜಿಕ, ಶಾಸನಾತ್ಮಕವಾಗಿ ಹೋರಾಡುವುದು ಮತ್ತು ಈ ರೀತಿಯ ವಾತವರಣಗಳು ಸೃಷ್ಟಿಸಲು ಬೇಕಾಗುವ ಶಕ್ತಿಯೆ ಸಬಲೀಕರಣ.

ನಾಲ್ಕನೆಯ ಅಂತರಾಷ್ಟ್ರೀಯ ಬೀಜಿಂಗ್ ಮಹಿಳಾ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಭಾರತ ಸರ್ಕಾರದ ವರದಿಯ ಪ್ರಕಾರ ಸಬಲೀಕರಣದ ವ್ಯಾಖ್ಯಾನ ಹೀಗಿದೆ. "ಸಬಲೀಕರಣವೆಂದರೆ ಅಧಿಕಾರ ರಹಿತ ಭಾಗದಿಂದ ಅಧಿಕಾರ ಹಿಡಿಯುವತ್ತ ಕಾರ್ಯೋನ್ಮುಖವಾಗುವುದೆಂದು ಅರ್ಥೈಸಲಾಗಿದೆ."[10] ಇದನ್ನು ಮಹಿಳೆಯರ ಸಬಲೀಕರಣಕ್ಕೆ ಸಂಬಂಧಪಟ್ಟ ವ್ಯಾಖ್ಯಾ ಎಂದು ತಿಳಿಯಬಾರದು. ಏಕೆಂದರೆ ಅಲೆಮಾರಿಗಳು ಕೂಡ ಅಧಿಕಾರ ರಹಿತರು ಹಾಗಾಗಿ ಅಧಿಕಾರ ಹಿಡಿಯುವುತ್ತ ಸಾಗಬೇಕಾಗಿದೆ. ಇಂತಹ ಸ್ಪಷ್ಟ ಅರ್ಥವನ್ನು ನೀಡುವ ಸಬಲೀಕರಣ ಅಲೆಮಾರಿ ಸಮುದಾಯಗಳಿಗೆ ಸಬಲರಾಗಲು ಹೊಸ ಚೈತನ್ಯ ಮೂಡಿಸಬಲ್ಲದು.

ಒಟ್ಟಾರೆ ಸಬಲೀಕರಣದ ಮುಖ್ಯ ಉದ್ದೇಶವೆಂದರೆ ಸ್ವಾವಲಂಬನೆಗೆ ತಳುಕು ಹಾಕುವಂತಾಗಿದೆ. ಅಲೆಮಾರಿಗಳು ಸ್ವಾವಲಂಬಿಗಳಾಗಬೇಕೆಂಬುದು ನಿಜವಾದರೂ ಸ್ವಾಲಂಬನೆಯು ಸಬಲೀಕರವೆನ್ನಿಸಿ ಕೊಳ್ಳುವುದಿಲ್ಲ. ಏಕೆಂದರೆ ಸ್ವಾಲಂಭನೆಯು ಅಲೆಮಾರಿಗಳ ಸ್ಥಿತಿಗತಿಯನ್ನು ಉತ್ತಮ ಪಡಿಸಬಹುದು. ಸಮಸ್ಯೆಯಿರುವುದು ಅಲೆಮಾರಿಗಳ ನೆಲೆನಿಲ್ಲಿಸುವಿಕೆಯ ವಿಚಾರದ ಸಂಬಂಧಿಸಿದ್ದು. ಅಲೆಮಾರಿಗಳು ನೆಲೆ ನಿಲ್ಲುವುದು ಆಸ್ತಿವಂತರಾಗುವುದು, ಆಸ್ತಿಯ ಮಾಲೀಕತ್ವದ ಹಕ್ಕು ಪ್ರಾಪ್ತವಾಗುವುದು. ಅಲೆಮಾರಿಗಳ ಜೊತೆ ನೆಲೆ ನಿಂತವರೂ ಮುಖಾಮುಖಿಯಾಗಬೇಕು. ಸಮಾಜದಲ್ಲಿ ಸ್ಥಾನಮಾನವು ಅಲೆಮಾರಿಗಳಿಗೆ ಸಿಗಬೇಕು ಹೀಗೆ ಇವೆಲ್ಲವೂ ಸಬಲೀಕರಣದ ಧ್ಯೇಯದೋಶವಾಗಿದೆ.

ಸಬಲೀಕರಣದ ಪರ್ಯಾಯ ಕಾರ್ಯಕ್ರಮಗಳು

ಯಾವ ಕಾರ್ಯಕ್ರಮಗಳು ಅಲೆಮಾರಿ ಸಮುದಾಯಗಳ ಕಾರ್ಯಕ್ರಮವೆ ಮತ್ತು ಭಾಗವಹಿಸುವಿಕೆ ಯನ್ನು ಹೆಚ್ಚಿಸುತ್ತವೆಯೊ, ಅದು ನೆಲೆನಿಂತವರ ಅಧಿಕಾರವನ್ನು ಕಡಿತಗೊಳಿಸಿ, ಪ್ರಶ್ನಿಸುವ ಕಾರ್ಯಕ್ರಮ ಗಳೂ ಮಾತ್ರ ಸಬಲೀಕರಣ ಕಾರ್ಯಕ್ರಮಗಳಾಗಬಲ್ಲವು.

೧. ಅಲೆಮಾರಿಗಳು ಗುರುತಿಸಿಕೊಳ್ಳವ ಪ್ರದೇಶದಲ್ಲಿ ಸಂಪತ್ತಿನ ಹಂಚಿಕೆಯಾಗಬೇಕು.

೨. ಅಲೆಮಾರಿಗಳ ಅಂತರ ಶಕ್ತಿ, ಸ್ವ-ಪ್ರತಿಷ್ಠೆ ಹೆಚ್ಚಿಸುವ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಅಂತಸ್ತುಗಳ ಮುಕ್ತ ಜೀವನದಲ್ಲಿ ಅವಕಾಶ ಕೊಡುವುದು.

೩. ದಿಟ್ಟತನದ ವಿಚಾರಗಳನ್ನು ಸೃಷ್ಟಿಸಬೇಕು.

೪. ಆಯ್ಕೆ ಮತ್ತು ಅವಕಾಶಗಳ ವಿಸ್ತರಣೆಯಲ್ಲಿ ಅಲೆಮಾರಿಗಳ ಸಾಮರ್ಥ್ಯವನ್ನು ವರ್ಧಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಮೌಲ್ಯಯುತ ಹಾಗೂ ಆತ್ಮಗೌರವವುಳ್ಳ ಜೀವನ ನಡೆಸುವ ಪ್ರೇರಣೆ ಯಾಗಬೇಕು.

೫. ಸಮಾಜದ ಅಗತ್ಯಗಳನ್ನು ಪೂರೈಸುವಂತೆ ಶಕ್ತಿಯನ್ನು ಕೊಡಬೇಕು.

೬. ಅಧಿಕಾರದ ಮರುಹಂಚಿಕೆ ಇದು ದಮನಕಾರರಿಂದ ದಮನದಲ್ಲಿ ಒಳಗಾದವರಿಗೆ ಅಧಿಕಾರ ನೀಡುವುದಾಗಿದೆ.

೭. ಅಲೆಮಾರಿಗಳ ಪರವಾದ ನಿಲುವುಗಳನ್ನು ಬಹಿರಂಗವಾಗಿ ಘೋಷಿಸುವುದು.


೮. ಸಾಮಾಜಿಕವಾಗಿ ಸಮಾನರೆಂದು ಪ್ರತಿಪಾದಿಸುವುದು.

೯. ಅವಕಾಶ ಸಿಕ್ಕರೆ ಅತ್ಯುತ್ತಮ ಸಾಧನೆಗಯ್ಯಬಲ್ಲರೆಂದು ಮನದಟ್ಟು ಮಾಡಿಕೊಡುವುದು.

೧೦. ಪರ್ಯಾಯ ಬದುಕನ್ನು ರೂಪಿಸುವುದು

೧೧. ಎಲ್ಲಾ ವಲಯಗಳಲ್ಲೂ ಅಲೆಮಾರಿಗಳ ಇರುವಿಕೆ ದೃಢಪಡಿಸುವುದು.

ಸಬಲೀಕರಣದ ಪರ್ಯಾಯ ಅಂಶಗಳು



ಈ ಮೇಲಿನ ಎಲ್ಲ ಪರ್ಯಾಯ ಅಂಶಗಳ ರೂಪಿಸಿ, ಯಶಸ್ವಿಗೊಳಿಸಬೇಕಾಗಿದೆ. ಅಲೆಮಾರಿ ಸಮುದಾಯಗಳು ವ್ಯಕ್ತಿಗತ ನೆಲೆಯಿಂದ ಮತ್ತು ಸಂಘಟಿತ ನೆಲೆಯಿಂದ ಮುನ್ನುಗ್ಗಿ ಹಕ್ಕೊತ್ತಾಯ ಮಾಡಬೇಕಾಗಿದೆ.

ಅಲೆಮಾರಿಗಳು ಎದುರಿಸುತ್ತಿರುವ ಸಮಸ್ಯೆಗಳು, ತಾರತಮ್ಯಗಳು, ದೌರ್ಜನ್ಯ ಮತ್ತು ಶೋಷಣೆಗಳನ್ನು ಮನಗಂಡು ಈ ಪ್ರವೃತ್ತಿಗಳನ್ನು ವಿಮುಕ್ತಿಗೊಳಿಸಲು ಸರ್ಕಾರದ ಪಾತ್ರ, ಸಂಘಸಂಸ್ಥೆಗಳು, ಸಾರ್ವಜನಿಕರ ಅಭಿಮತ, ಅಲೆಮಾರಿ ಸಮುದಾಯ ಹಾಗೂ ಅರೆ ಅಲೆಮಾರಿ ಸಮುದಾಯಗಳ ಸಂಘಟನೆಗಳು, ಧಾರ್ಮಿಕ ವಲಯಗಳ ಪಾತ್ರ ಈ ರೀತಿಯ ಅಂಶಗಳು ಸಬಲೀಕರಣದ ಪರ್ಯಾಯ ಅಂಶಗಳಾಗಿ ಬೆಳಕಿಗೆ ಬರಬೇಕಾಗಿದೆ.

೧. ಸರ್ಕಾರದ ಪಾತ್ರ

- ಅರಣ್ಯ ಪ್ರದೇಶವನ್ನು ಬಿಟ್ಟು, ಅರಣ್ಯದ ಹೊರಗಿನ ಭಾಗದಲ್ಲಿ ಜೀವಿಸುತ್ತಿರುವ ಅಲೆಮಾರಿ ಸಮುದಾಯಗಳು ಕೃಷಿಸಂಪತ್ತು, ಜಲಸಂಪತ್ತು ಇತ್ಯಾದಿಗಳು ಪಡೆದುಕೊಳ್ಳಬೇಕು. ಈ ದಿಸೆಯಲ್ಲಿ



ಸರ್ಕಾರ ಅಲೆಮಾರಿ ಸಮುದಾಯಗಳಿಗೆ ಏತನೀರಾವರಿ, ತುಂತುರು ನೀರಾವರಿ ಮತ್ತು ಹನಿ ನೀರಾವರಿ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳು ರೂಪಿಸಬೇಕಾಗಿದೆ.

- ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆ ಬಾವಿ ಮತ್ತು ಸಾಮೂಹಿಕ ನೀರಾವರಿ ಬಾವಿಗಳ ನಿರ್ಮಾಣ ಮಾಡಬೇಕಾಗಿದೆ.
- ಕೃಷಿ ಇಲಾಖೆಯಿಂದ ಜಲಾನಯನ ಕಾಮಗಾರಿಗಳ ಅನುಷ್ಠಾನ ಮಾಡಬೇಕಾಗಿದೆ.
- ಇತ್ತೀಚಿನ ದಿನಗಳಲ್ಲಿ ಅಲೆಮಾರಿ ಸಮುದಾಯದವರು ಕೃಷಿಯೇತರ ಕೂಲಿಗಾಗಿ ಕೆಲಸ ಮಾಡಲು ಹೋಗುತ್ತಾರೆ. ಆದ್ದರಿಂದ ಇವರನ್ನು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಭಾಗವಹಿಸ ಬೇಕಾಗಿದೆ. ಸರ್ಕಾರ ಅಲೆಮಾರಿ ಸಮುದಾಯದವರನ್ನು ಪ್ರಥಮರನ್ನಾಗಿ ಆಯ್ಕೆಯಲ್ಲಿ ಪರಿಗಣಿಸ ಬೇಕಾಗಿದೆ.
- ಅಲೆಮಾರಿ ಸಮುದಾಯದವರಿಗೆ ಕೃಷಿ ಅವಲಂಬನೆಯಾಗುವುದರಿಂದ ಅವರಿಗೆ 'ಕೃಷಿ ಸಹಾಯಕ ವಸ್ತುಗಳನ್ನು ಮತ್ತು ಪಶುಸಂಗೋಪಾನೆ ನೀಡಬೇಕಾಗಿದೆ.
- ಅತಿವೃಷ್ಟಿ-ಅನಾವೃಷ್ಟಿಯಿಂದಾದ ಬೆಳೆ ಹಾನಿಗಳು ಸಂಭವಿಸಿದಾಗ ಅಲೆಮಾರಿ ಸಮುದಾಯದವರಿಗೆ "ಬೆಳೆವಿಮಾ" ಪರಿಹಾರದ ಯೋಜನೆ ರೂಪಿಸಬೇಕಾಗಿದೆ.
- ಗರ್ಭಿಣಿ ಹಾಗೂ ಬಾಣಂತಿಯರಿಗೆ ಪ್ರಸೂತಿ, ಕುಟುಂಬ ಯೋಜನೆ ಮತ್ತು ಪೌಷ್ಟಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸಿ, ಸವಲತ್ತುಗಳನ್ನು ನೀಡುವುದು.
- ಅಲೆಮಾರಿ ಕುಟುಂಬಗಳಿಗಾಗಿ ಏನಾದರೂ ಸಮಸ್ಯೆಗಳು ಉಂಟಾದಾಗ ಉದಾ ಆಸ್ಪತ್ರೆ ವೆಚ್ಚ, ಸ್ವಾಭಾವಿಕ ಮತ್ತು ನೈಸರ್ಗಿಕ ಮರಣ, ಸಂಪೂರ್ಣ ಮತ್ತು ಅರೆ, ಅಂಗವೈಕಲ್ಯ, ಗುಡ್ಡಗಾಡು, ಅರಣ್ಯದ ಹೊರಗಿನ ಪ್ರದೇಶದ ನಿವಾಸದಲ್ಲಿ ಅಪಘಾತಗಳು ಸಂಭವಿಸಿದಾಗ ಕುಟುಂಬಗಳಿಗೆ ನೆರವಾಗಲು ಕುಟುಂಬ ವಿಮಾ ಯೋಜನೆ ಹಾಗೂ ಪರಿಹಾರ ಪ್ರತ್ಯೇಕ ನೆರವಿನಿಂದ ಕಲ್ಪಿಸಬೇಕಾಗಿದೆ.
- ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆದಾಯ ತರುವ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಸಣ್ಣ ಕೈಗಾರಿಕೆ, ಮೀನುಗಾರಿಕೆ ಇತರೆ ಕಾರ್ಯಕ್ರಮ ಗಳಿಗೆ ಸಹಾಯ ಧನ ನೀಡಬೇಕಾಗಿದೆ.
- ಬಹುತೇಕವಾಗಿ ಅಲೆಮಾರಿ ಸಮುದಾಯಗಳು ಗುಡಾರ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ.
- ಅಲೆಮಾರಿ ಸಮುದಾಯಗಳಿಗೆ ಆರೋಗ್ಯ ತಪಾಸಣೆ ಮತ್ತು ಔಷದೋಪಾಚರದ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ ಮಾಡಬೇಕಾಗಿದೆ.
- ಸಮುದಾಯ ವಾಸಿಸುವ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳು, ಗುಡಾರ ಶಾಲೆಗಳು, ವಸತಿ ಶಾಲೆ, ಮುರಾರ್ಜಿ ಶಾಲೆ ಹಾಗೂ ಪ್ರೌಢಶಾಲೆಯವರೆಗೂ ಕಲ್ಪಿಸಬೇಕಾಗಿದೆ.

- ಅಲೆಮಾರಿ ಸಮುದಾಯದವರು ಊರಿನ ಬಯಲು ಪ್ರದೇಶ, ಕೊಳಚೆ ಪ್ರದೇಶ, ಶಾಲಾ ಮೈದಾನ, ಸಾರ್ವಜನಿಕ ಸ್ಥಳ ಇತ್ಯಾದಿ ಸ್ಥಳಗಳಲ್ಲಿ ವಾಸಿಸುವುದು ಕಾಣಬರುತ್ತದೆ. ಇದರಿಂದ ಚರಂಡಿಗಳ ಸ್ವಚ್ಛತೆ ಹಾಗೂ ಕೊಳಚೆ ನಿರ್ಮೂಲನೆಯ ಕಾರ್ಯದ ಕಾಮಗಾರಿಕೆಯನ್ನು ಮಾಡಬೇಕಾಗಿದೆ.
- ಅಂತ್ಯೋದಯ ಪಡಿತರ ಚೀಟಿ ಪ್ರತಿಯೊಂದು ಅಲೆಮಾರಿ ಕುಟುಂಬಗಳಿಗೂ ದೊರಕಿಸಬೇಕಾಗಿದೆ.
- ಅಲೆಮಾರಿ ಸಮುದಾಯಗಳು ಕತ್ತಲೆಯ ಪ್ರದೇಶದಲ್ಲಿ ಇರುವುದರಿಂದ ಅಲ್ಲಿ ಬೀದಿ ದೀಪ, ಮನೆಗಳಿಗೆ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಮತ್ತು ಸೋಲಾರ್ ದೀಪಗಳ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕಾಗಿದೆ.
- ಅಲೆಮಾರಿ ಸಮುದಾಯಗಳ ಕಾಲೋನಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳನ್ನು ಮಾಡುವುದು.
- ಇವರು ವಾಸಿಸುವಂತಹ ಸ್ಥಳಗಳಲ್ಲಿ ಮಕ್ಕಳಿಗಾಗಿ ಬಾಲವಾಡಿ, ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿ; ಶಿಕ್ಷಣವನ್ನು ನೀಡಬೇಕಾಗಿದೆ.
- ಶಿಕ್ಷಣದಲ್ಲಿ ಪ್ರಗತಿ ಸಾಧಿಸಿದ ಅಲೆಮಾರಿ ಮಕ್ಕಳಿಗೆ ನಗದು ಬಹುಮಾನ, ಶಿಷ್ಯವೇತನ, ಸಮವಸ್ತ್ರಗಳು, ಪಠ್ಯಪುಸ್ತಕಗಳು, ಶಾಲೆ ಬಿಸಿಊಟ ಇತರೆ ಸೌಲಭ್ಯಗಳು ಕಲ್ಪಿಸಿಕೊಡಬೇಕು.
- ಮತದಾನಕ್ಕಾಗಿ ಗುರುತಿನ ಚೀಟಿಗಳನ್ನು ನೀಡುವುದು.
- ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಕಾಲೋನಿಗಳಲ್ಲಿ ಸಮುದಾಯ ಭವನ ನಿರ್ಮಾಣ ಮಾಡಬೇಕಾಗಿದೆ. ಅಲ್ಲಿ ಟಿ.ವಿ., ದಿನಪತ್ರಿಕೆಗಳು, ಗ್ರಂಥಾಲಯಗಳನ್ನು ತೆರೆಯುವ ವ್ಯವಸ್ಥೆಯನ್ನು ಮಾಡಬೇಕು.
- ವ್ಯಾಪಾರ ದೃಷ್ಟಿಕೊನದಿಂದ ಸಾಲದ ವ್ಯವಸ್ಥೆಗಾಗಿ ಬ್ಯಾಂಕ್‌ಗಳ ಮೂಲಕ ಕಲ್ಪಿಸುವುದು. ಸಾಲದ ಬಾಧೆಯಲ್ಲಿ, ಸಂಕಷ್ಟದಲ್ಲಿ ನೆರವಾಗಲು ಮಾರ್ಗದರ್ಶನದ ಸಲಹಾ ಕೇಂದ್ರಗಳನ್ನು ಸ್ಥಾಪಿಸಬೇಕಾಗಿದೆ. ಇದರಿಂದ ಅವರನ್ನು ಆತ್ಮಹತ್ಯೆಯಂತಹ ಧಾರುಣ ಸ್ಥಿತಿಯಿಂದ ಪಾರುಮಾಡಲು ಅನುಕೂಲಕರ ವ್ಯವಸ್ಥೆಯನ್ನು ನೀಡಬೇಕಾಗಿದೆ.
- ಅಲೆಮಾರಿ ಸಮುದಾಯದವರ ವಾಸಸ್ಥಳಗಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಲೋಕಸಭೆ ಸದಸ್ಯರು, ಶಾಸಕರು, ತಿಂಗಳಿಗೊಮ್ಮೆ ಭೇಟಿ ನೀಡಿ, ಅವರ ಕುಂದುಕೊರತೆಗಳ ಬಗ್ಗೆ ವಿಚಾರಣೆ ಹಾಗೂ ಪರಿಶೀಲನೆ ಮಾಡುವುದು.
- ಅಲೆಮಾರಿ ಮಹಿಳೆಯರಿಗೆ ಸ್ವಸಹಾಯ ಗುಂಪಿನಲ್ಲಿ ಭಾಗವಹಿಸುವಂತೆ ಪ್ರೇರಣೆ ಮಾಡಿ ಅವರಿಗೆ ಅನೇಕ ಮಾಹಿತಿಗಳು ನೀಡಬೇಕಾಗಿದೆ.

೨. ಸಂಘಸಂಸ್ಥೆಗಳ ಪಾತ್ರ

- ಸ್ವಯಂ ಸೇವಾ ಸಂಸ್ಥೆಗಳು ಅಲೆಮಾರಿ ಸಮುದಾಯಗಳ ಅಭಿವೃದ್ಧಿಗಾಗಿ ಮುಂದಾಗಬೇಕು.
- ಅಲೆಮಾರಿ ಸಮುದಾಯಗಳಿಗೆ ಸಂಘಟನೆ ಹೆಚ್ಚಿಸಲು ನೆರವಾಗಬೇಕು.
- ಅಲೆಮಾರಿ, ಅರೆಅಲೆಮಾರಿಗಳ ಸಮುದಾಯದ ಸಂಪೂರ್ಣ ಮಾಹಿತಿಯನ್ನು ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರಕ್ಕೆ ಮನವಿ ಪತ್ರಗಳನ್ನು ಕೊಡುವುದರ ಮೂಲಕ ನ್ಯಾಯ ದೊರಕಿಸಬೇಕಾಗಿದೆ.
- ಸಣ್ಣ ಕೈಗಾರಿಕೆಗಳಾದ ಬೀಡಿತಯಾರಿಕೆ, ಮೀನುಗಾರಿಕೆ, ಟೈಲರ್, ಹಾಲು ಘಟಕಗಳು, ಪೇಪರ್ ತಯಾರಿಕೆ, ಕಂಬಳಿ, ಬಟ್ಟೆಗಳ ಕೈಮಗ್ಗಗಳು, ರೇಷ್ಮೆ, ಉಡುಪುಗಳ ತಯಾರಿಕೆ, ಮುದ್ರಣ, ಉದುಬತ್ತಿ ತಯಾರಿಕೆ, ಮೊಂಬತ್ತಿ, ಬೆಂಕಿಕಡ್ಡಿಗಳ ತಯಾರಿಕೆ, ಇನ್ನಿತರ ಕೈ ಕಸುಬುಗಳು ಮಾಡುವಂತಹ ಸಲಕರಣೆಗಳನ್ನು ನೀಡಬೇಕಾಗಿದೆ.
- ಲ್ಯಾಂಪ್ ಸಹಕಾರ ಸಂಘಗಳ ಮೂಲಕ ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣಾ ಘಟಕ ಸ್ಥಾಪನೆ ಮಾಡಬೇಕಾಗಿದೆ.
- ಸಂಘಸಂಸ್ಥೆಗಳು ಹೆಚ್ಚಾಗಿ ಬಾಲವಾಡಿ ಕೇಂದ್ರಗಳು, ವಿದ್ಯಾಆಶ್ರಮ, ವಸತಿ, ಅಲೆಮಾರಿ ವೃದ್ಧರಿಗಾಗಿ ಆಶ್ರಮಗಳು ಇತರೆ ವ್ಯವಸ್ಥೆಗಳನ್ನು ಕಲ್ಪಿಸಬೇಕಾಗಿದೆ.
- ಮೀಸಲಾತಿಯಿಂದ ವಂಚಿತರಾಗಿರುವ ಅನೇಕ ಸಮುದಾಯಗಳನ್ನು ಮೀಸಲಾತಿಯಲ್ಲಿ ಸೇರಿಸಿ ಕೊಳ್ಳುವಂತೆ ಸಹಕರಿಸುವುದು ಹಾಗೂ ಸರ್ಕಾರದ ಮೀಸಲಾತಿಯ ಎಲ್ಲಾ ಸೌಲಭ್ಯಗಳನ್ನು ಕೊಡಿಸುವುದು.
- ಕಾಲೋನಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೩. ಸಾರ್ವಜನಿಕರ ಅಭಿಮತ

- ಸಮಸ್ಯೆಗಳು ಕಂಡುಬಂದರೆ, ಅಲ್ಲಿನ ಜನರ ಸಹಾಯ ಸಹಕಾರ ನೀಡುವುದು ಅತ್ಯವಶಕವಾಗಿದೆ. ಕೆಲವೊಂದು ಸ್ಥಳಗಳಲ್ಲಿ ಇವರ ಬೆಂಬಲಕ್ಕಾಗಿ ಹಾಗೂ ಸಹಕಾರಕ್ಕೆ ಸಾರ್ವಜನಿಕರು ಬಾರದೆ ಇರುವುದಾಗಿದೆ. ಇದರಿಂದ ಅಲೆಮಾರಿಗಳಿಗೆ ಸಾರ್ವಜನಿಕರ ಸಹಾಯಗಳು ಬೇಕಾಗಿವೆ. ಇದರಿಂದ ಅವರಿಗೆ ಜೀವನದಲ್ಲಿ ಬರುವ ತೊಂದರೆಗಳು ಕಡಿಮೆಯಾಗಬಹುದು.
- ಅಲೆಮಾರಿ ಸಮುದಾಯದವರು ಅಸ್ಪೃಶ್ಯರು, ದಲಿತರು, ಕೆಳಜಾತಿಯವರು ಎಂಬ ಮನೋಭಾವನೆ ಗಳನ್ನು ಬೆಳಸದೆ ಪ್ರೀತಿಯಿಂದ ಮಾನವಿಯ ಮೌಲ್ಯಗಳಲ್ಲಿ ಕಾಣಬೇಕಾಗಿದೆ.
- ಶ್ರೀಮಂತರು, ಮಧ್ಯಮ ವರ್ಗದವರು, ಸಾಮಾನ್ಯವರ್ಗದವರು ಅಲೆಮಾರಿಗಳ ಬದುಕು ಮತ್ತು ಅವರ ಜೀವನಕ್ಕಾಗಿ ಸಹಾಯಮಾಡಬೇಕಾಗಿದೆ.

- ದಲಿತ ಸಮುದಾಯಗಳು ಮತ್ತು ಅಲೆಮಾರಿ ಸಮುದಾಯಗಳ ವಿರಸ ಇರುವುದು ಸಾಮಾನ್ಯವಾಗಿದೆ. ದಲಿತ ಸಮುದಾಯಗಳು ಮತ್ತು ಅಲೆಮಾರಿ ಸಮುದಾಯಗಳು ಸಾಮಾಜಿಕ ಸಾಮರಸ್ಯ ಬೆಳೆಸಿ ಕೊಳ್ಳಬೇಕಾಗಿದೆ.
- ಅಲೆಮಾರಿ ಸಮುದಾಯದವರು ಭಿಕ್ಷಾಟನೆ ಸಂದರ್ಭದಲ್ಲಿ ಅಲ್ಲಿನ ಜನರು ಅನ್ನ, ಸಾರು, ರೊಟ್ಟಿ, ದವಸಧಾನ್ಯ, ಹಣ ಕೊಡುವುದುಂಟು ಆದರೆ ಅವರಿಗೆ ಭಿಕ್ಷಾಟನೆ ನಿರ್ಮೂಲನೆ ಮಾಡುವಂತೆ ತಮ್ಮ ಕೆಲವು ಸಲಹೆಗಳನ್ನು ಹೇಳಿ, ಅವರನ್ನು ಅನೇಕ ವೃತ್ತಿಗಳಿಗೆ ಜೀವಿಸುವ ಪ್ರೇರಣೆಯನ್ನು ನೀಡಬೇಕಾಗಿದೆ.
- ಊರಿಂದ ಊರಿಗೆ ಅಲೆದಾಡುವ ಈ ಸಮುದಾಯಗಳಿಗೆ ಆಯಾ ಊರಿನ ಸ್ಥಳದ ಮಾಲಿಕರು ಇವರನ್ನು ಕೆಲವು ಕಾಲ ನೆಲೆ ನಿಲ್ಲಲ್ಲು ಅವಕಾಶವನ್ನು ನೀಡಬೇಕಾಗಿದೆ. ಅವರು ಗುಡಾರಗಳನ್ನು ನಿರ್ಮಿಸಿಕೊಂಡು, ಆ ಊರಿನಲ್ಲಿ ತಂಗುವರು.
- ಅಲೆಮಾರಿ ಸಮುದಾಯದ ಪ್ರದರ್ಶನ ಕಲೆ ಇತ್ಯಾದಿಗಳನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಂತೆ ಅವರಿಗೆ ವೇದಿಕೆಯನ್ನು, ಪ್ರೋತ್ಸಾಹವನ್ನು ನೀಡಬೇಕು.
- ಅಲೆಮಾರಿ ಸಮುದಾಯದವರು ತಯಾರಿಸುವ ಕರಕುಶಲವಸ್ತುಗಳನ್ನು ಜನರು ಖರೀದಿಸಿ, ಅವರ ಉತ್ಪಾದನೆಗೆ ಸಹಾಯ ಸಹಕಾರ ನೀಡಬೇಕಾಗಿದೆ ಹಾಗೂ ದೇಶಿಯ ಕಲೆಗಳು ಜೀವಂತವಾಗಿರಿಸಿ ಕೊಳ್ಳಬೇಕು.

೪. ಅಲೆಮಾರಿ ಅರೆಅಲೆಮಾರಿ ಸಮುದಾಯಗಳ ಪಾತ್ರ

- ತಮ್ಮ ಸ್ಥಿತಿಗಳನ್ನು ಗುರುತಿಸಿ ಕೊಳ್ಳುವುದು.
- ಅಲೆದಾಟಕ್ಕೆ ಕಾರಣ ತಿಳಿದುಕೊಳ್ಳುವುದು.
- ನೆಲೆ ನಿಲ್ಲುವ, ಸ್ವಾಭಿಮಾನ, ಭರವಸೆ, ಸ್ವಾಯತ್ತತೆ ಗುಣಗಳನ್ನು ಬೆಳೆಸಿಕೊಳ್ಳುವುದು.
- ಪ್ರತಿಯೊಂದು ಅಲೆಮಾರಿ ಸಮುದಾಯಗಳು ಒಂದಾಗಬೇಕು. ಸಮಸ್ಯೆಗಳನ್ನು ಪರಸ್ಪರ ಸಮುದಾಯ ಗಳು ಬಗೆಹರಿಸಿಕೊಳ್ಳಬೇಕಾಗಿದೆ.
- ಅಲೆಮಾರಿ ಸಮುದಾಯಗಳು ಏಣಿ-ಶ್ರೇಣಿಗಳನ್ನು ಮರೆತು ಎಲ್ಲ ಅಲೆಮಾರಿ ಸಮುದಾಯಗಳು ಒಂದಾಗಬೇಕು ಶ್ರೇಣಿಕರಣದ ಸಂಕರದಲ್ಲಿ ಸಿಲುಕಬಾರದು.
- ಸಮುದಾಯದಲ್ಲಿ ಏನಾದರೂ ಸಮಸ್ಯೆಗಳು ಕಂಡುಬಂದಾಗ ಸಮುದಾಯಗಳು, ಸರ್ಕಾರ, ಖಾಸಗಿ, ಸಂಘ ಸಂಸ್ಥೆಗಳು ಸಮಸ್ಯೆಯ ವಿರುದ್ಧ ಪ್ರತಿಭಟನೆ, ಹೋರಾಟಗಳನ್ನು ಮಾಡಬೇಕಾಗಿದೆ.
- ಅಲೆಮಾರಿ ಸಮುದಾಯದವರು ಉನ್ನತವಾದ ವಿಚಾರಗಳತ್ತ ಗಮನಹರಿಸುವುದು.
- ನ್ಯಾಯಪಂಚಾಯತಿಯ ಬದಲಾವಣೆಯಲ್ಲಿ ಸುಧಾರಣೆಯಾಗಬೇಕಾಗಿದೆ.

- ಸಮುದಾಯದವರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಅಲ್ಲಗಳೆಯದೆ, ಇತರೆ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುವುದು.
- ಕೆಲವು ಸಮುದಾಯಗಳು ಕೆಳಮಟ್ಟದ ವೃತ್ತಿಗಳನ್ನು ಬಿಟ್ಟು, ಪರಿವರ್ತನೆಯಲ್ಲಿ ಕಂಡುಬಂದಾಗ ಅಲ್ಲಿನ ಅಲೆಮಾರಿಗಳು ಬೇರೆ ವೃತ್ತಿಗಳನ್ನು ನೋಡಿ ಮಾಡಬೇಕಾಗಿದೆ.
- ರಾಜಕೀಯ ಕ್ಷೇತ್ರದಲ್ಲಿ ಅಲೆಮಾರಿ ಸಮುದಾಯಗಳು ಭಾಗವಹಿಸಬೇಕಾಗಿದೆ. ಆದರೆ ಕೋಮು ಭಾವನೆಗಳಿಗೆ ಒಳಗಾಗಬಾರದು.
- ಅಲೆಮಾರಿ-ಅರೆಅಲೆಮಾರಿ ಸಮುದಾಯದವರು ತಮ್ಮ ವೈದ್ಯ ಪದ್ಧತಿಯನ್ನು, ಗಿಡಮೂಲಿಕೆಯ ಔಷಧಿಗಳನ್ನು ಕಾಪಾಡಿಕೊಂಡು, ಬೆಳೆಸಿಕೊಂಡು ಬರಬೇಕಾಗಿದೆ.

೫. ಅಲೆಮಾರಿಗಳಿಗೆ ಧಾರ್ಮಿಕ ವಲಯದ ಪಾತ್ರ

- ಅಲೆಮಾರಿ ಸಮುದಾಯದವರು ತಮ್ಮ ಧರ್ಮವನ್ನು ಕಾಪಾಡಿಕೊಂಡು ಬೆಳಸಬೇಕು ಜೊತೆಗೆ ಕೆಲವು ನಂಬಿಕೆಗಳನ್ನು ಬಿಡಬೇಕಾಗಿದೆ.
- ಅಲೆಮಾರಿ ಸಮುದಾಯ ಅನ್ಯ ಧರ್ಮದಲ್ಲಿ ಒಳಗಾಗಬಾರದು.
- ಅಲೆಮಾರಿ ಸಮುದಾಯದವರಿಗೆ ಧಾರ್ಮಿಕ ಸ್ಥಳ, ಕ್ಷೇತ್ರಗಳಲ್ಲಿ ಮುಕ್ತವಕಾಶವನ್ನು ಕಲ್ಪಿಸಬೇಕಾಗಿದೆ.
- ಅಲೆಮಾರಿ ಸಮುದಾಯಗಳಲ್ಲಿ ಕಂಡುಬರುವ ದೈವರಾಧನೆಗಳನ್ನು ನಿರಂತರವಾಗಿ ಆರಾಧಿಸಲು ಸಮುದಾಯ ಮುಂದೆ ಬಂದರೆ ಸಹಕರಿಸಬೇಕು.

ಒಟ್ಟಾರೆ ಸಬಲೀಕರಣದ ಉದ್ದೇಶ ಅಸಮಾನತೆ ಅರಿತು ಅದನ್ನು ಬದಲಾಯಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿದೆ. ಇದೊಂದು ಪ್ರಕ್ರಿಯೆಯಾಗಿರುವುದರಿಂದ ಅದನ್ನು ಪಡೆದು ಬದುಕುವುದಾಗಿದೆ. ಇಂತಹ ವಾತವರಣ ಸೃಷ್ಟಿಗೊಳ್ಳಬೇಕು.

ಅಡಿಟಿಪ್ಪಣಿ

೧. ಅಭಿವೃದ್ಧಿ ಮೀಮಾಂಸೆ, ಟಿ.ಆರ್. ಚಂದ್ರಶೇಖರ್, ೧೯೯೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೩

೨. ಅಮರ್ತ್ಯಸೇನ್‌ರ ಅಭಿವೃದ್ಧಿ ಕಥನಾ, ಟಿ.ಆರ್. ಚಂದ್ರಶೇಖರ್, ಪು.೯

೩. ಅಪ್ಲೇಕೆಷನ್ಸ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ಮೆಹಬೂಬ್ ಹುಲ್-ಹಕ್, ೧೯೯೬, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಪು. ೨೦

೪. ಮೀಸಲಾತಿ ಮತ್ತು ಭವಿಷ್ಯದ ಪಥಗಳು, ಪ್ರೊ. ಮಹೇಶ್, ೨೦೦೩, ವಿಮೋಚನಾ ಪ್ರಕಾಶನ, ಚಿತ್ರದುರ್ಗ, ಪು. ೨

೫. ಮೀಸಲಾತಿ ಮತ್ತು ಭವಿಷ್ಯದ ಪಥಗಳು, ಪ್ರೊ. ಮಹೇಶ್, ೨೦೦೩, ವಿಮೋಚನಾ ಪ್ರಕಾಶನ, ಚಿತ್ರದುರ್ಗ, ಪು. ೩

೬. ದಲಿತ ಕಥನಾ, ಡಾ. ಮೊಗಳ್ಳಿ ಗಣೇಶ್, ೨೦೦೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೯೪

೭. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಎ.ಎಸ್. ಪ್ರಭಾಕರ್, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೫

೮. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್. ಚಂದ್ರಶೇಖರ್, ೨೦೦೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೨೦೯

೯. ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ.ಆರ್. ಚಂದ್ರಶೇಖರ್, ೨೦೦೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೨೧೨

೧೦. ಮಹಿಳೆ ಮತ್ತು ಅಭಿವೃದ್ಧಿ, ಕೆ. ಶಿವ ಚಿತ್ತಪ್ಪ, ೨೦೦೫, ಚಿನ್ಮಯಿ ಪ್ರಕಾಶನ, ಪು. ೩

ಅಧ್ಯಾಯ ೬

ಸಮಾರೋಪ

೬.೧. ಅಧ್ಯಯನದ ಫಲಿತಗಳು

೬.೨. ಸಮಸ್ಯೆಗಳು

೬.೩. ಸಲಹೆಗಳು

ಸಮಾರೋಪ

ಭಾರತಿಯ ಸಮಾಜ ಎಷ್ಟು ಪ್ರಾಚೀನವೊ ಅಷ್ಟೆ ಸಂಕೀರ್ಣವಾದುದು. ಸುದೀರ್ಘ ಇತಿಹಾಸದ ಕಾಲ ತೆಕ್ಕೆಯಲ್ಲಿ ಪರಕೀಯರ ವಲಸೆಯಿಂದಾಗಿ ವಿವಿಧ ಕುಲಗಳು ಮತ್ತು ಭಾಷೆಗಳ ಕುಟುಂಬಗಳು ಭಾರತೀಯ ಜೀವಸಂಕುಲದಲ್ಲಿ ಲೀನವಾದವು. ಪರಿಣಾಮ ಭಾರತಿಯ ಸಮಾಜ ಸಂಪದ್ಭರಿತ, ಸತ್ವಭರಿತ ಮತ್ತು ವೈವಿಧ್ಯತೆಯಿಂದ ವಿಶೇಷವಾಯಿತು. ವೈವಿಧ್ಯತೆಯ ತವರಾದ ಇಲ್ಲಿ ಅನೇಕ ತರದ ಸಮುದಾಯಗಳು ನೆಲೆಗೊಂಡಿವೆ. ನೆಲೆಗೊಳ್ಳುವ ಮೂಲಕ ವಿಶಿಷ್ಟ ಜೀವನ ಶೈಲಿ ರೂಢಿಸಿಕೊಂಡಿವೆ.

ಮಾನವೀಯ ಮೌಲ್ಯಗಳು ನೆಲೆಕಳೆದುಕೊಳ್ಳುತ್ತಿರುವ ಈ ನಾಗರಿಕ ಸಮಾಜಕ್ಕೆ ವ್ಯತಿರಿಕ್ತವಾದ ಸಮಾಜವೊಂದಿದೆ ಅದುವೆ ಅಲೆಮಾರಿ ಸಮಾಜ. ಶುದ್ಧ ಮಾನವೀಯ ಮೌಲ್ಯಗಳು, ಸಾರ್ವತ್ರಿಕ ಮೌಲ್ಯಗಳು ಸಾಮುದಾಯಿಕ ಕಲ್ಪನೆಗಳನ್ನು ಜೀವಂತವಾಗಿಟ್ಟು ಕೊಂಡು, ಸಮಕಾಲೀನ ಸಮಾಜಗಳ ನಡುವೆಯೆ ಜೀವಿಸುತ್ತಾ, ಇಂದಿಗೂ ಜೀವಂತವಾಗಿವೆ. ಮೇಲೆ ತಿಳಿಸಿರುವ ಎಲ್ಲಾ ಮೌಲ್ಯಗಳನ್ನು ಇಂದಿನವರೆಗೂ ಉಳಿಸಿಕೊಂಡು ಬಂದಿರುವ ಸಮುದಾಯಗಳ ಬದುಕು ಅಲೆದಾಟದಲ್ಲಿದೆ. ಅಲೆಮಾರಿ ಗಳಲ್ಲಿ ಹೇರಳವಾದ ಜ್ಞಾನಸಂಪತ್ತಿದೆ, ಕೌಶಲ್ಯವಿದೆ, ದೈಹಿಕಶಕ್ತಿಯಿದೆ, ಉತ್ಕೃಷ್ಟ ಸಾಹಿತ್ಯವಿದೆ ಇಷ್ಟೆಲ್ಲಾ ಸಂಪತ್ತುಗಳಿದ್ದರೂ ಬದುಕಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಟ ತಪ್ಪಿಲ್ಲ. ನೆಲ-ನೆಲೆ- ಬೆಲೆ ಎಲ್ಲವನ್ನು ಕಳೆದುಕೊಂಡು ಆತಂಕದೊಂದಿಗೆ ೨೧ನೇ ಶತಮಾನದಲ್ಲೂ ಒಂದ್ಹೊತ್ತಿನ ಊಟಕ್ಕಾಗಿ ಅಲೆಯುತ್ತಿರುವುದು ದುರಂತ.

ಕರ್ನಾಟಕ ರಾಜ್ಯದ ಉತ್ತರಭಾಗದಲ್ಲಿರುವ ಗುಲ್ಬರ್ಗ ವಿಭಾಗವು ಹೈದ್ರಾಬಾದ್ ಕರ್ನಾಟಕವೆಂದೆ ಹೆಸರಾಗಿದೆ. ಈ ಪ್ರದೇಶವು ಮಳೆಯಿಲ್ಲದ ಒಣ ಹವೆಯಿಂದ ಕೂಡಿದೆ. ಮಳೆಯನ್ನೆ ಆಶ್ರಯಿಸಿ ಬದುಕು ಸಾಗಿಸುವ ವಿಶಾಲವಾದ ನಾಡಲ್ಲಿ ಅನೇಕ ಸಮುದಾಯಗಳು ಇರುವುದನ್ನು ಕಾಣುತ್ತೇವೆ. ಅಕ್ಷರ ಲೋಕದಿಂದ ದೂರವಿದ್ದು. ಸ್ವಂತ ವಾಸದ ನೆಲೆಯಿಲ್ಲದೆ ಹಾಗೂ ಆದಾಯದ ಮೂಲವಿಲ್ಲದೆ ಇದೆ ಭಾಗದ ಜನತೆಯನ್ನು ನಂಬಿಕೊಂಡು ಬದುಕುತ್ತಿರುವ ಅಲೆಮಾರಿ ಸಮುದಾಯಗಳ ಬದುಕನ್ನು ಶೋಧಿಸಿ, ದಾಖಲಿಸುವುದು ಅಧ್ಯಯನದ ಉದ್ದೇಶವಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಅನ್ವಯಗೊಂಡಂತೆ ಅಲೆಮಾರಿ ಸಮುದಾಯಗಳ ಸಮಾಜೋ-ಆರ್ಥಿಕ ವ್ಯವಸ್ಥೆಯ ಅಧ್ಯಯನ ಆಗಿಲ್ಲ ವೆಂದರೆ ತಪ್ಪಾಗಲಾರದು. ಅಲೆಮಾರಿ ಸಮುದಾಯಗಳ ಸಮಾಜೋ-ಆರ್ಥಿಕ ಅಧ್ಯಯನದ ದೃಷ್ಟಿಕೋನ ದಿಂದ ಪ್ರಸ್ತುತ "ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ" ಎಂಬ ಅಧ್ಯಯನ ಮಾಡಲಾಗಿದೆ.

ಹೈದ್ರಾಬಾದ್ ಕರ್ನಾಟಕದ ನಾನಾ ಸ್ಥಳಗಳಲ್ಲಿ ಅಲೆಮಾರಿಗಳು ವಾಸಿಸುತ್ತಿದ್ದಾರೆ. ಅಲೆಮಾರಿಗಳ ಪ್ರಮುಖ ನೆಲೆಯಾದ ಬಳ್ಳಾರಿ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಉಳಿದಂತೆ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

"ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ" ಎಂಬ ಅಧ್ಯಯನದ ನಿಬಂಧವು ಕ್ಷೇತ್ರಮಾಹಿತಿ ಮತ್ತು ಹಲವು ಪೂರಕ ಗ್ರಂಥಗಳ ನೆರವು ಮತ್ತು ಮಾಹಿತಿಯ ಸಹಾಯದಿಂದ ರೂಪಗೊಂಡಿದೆ.

ಪ್ರಥಮ ಅಧ್ಯಾಯವು 'ಪ್ರವೇಶ' ಎಂಬ ಪೀಠಿಕಾ ಭಾಗದಿಂದ ಪ್ರಾರಂಬಿಸಲಾಗಿದೆ. ಈ ಅಧ್ಯಾಯ ದಲ್ಲಿ ಅಲೆಮಾರಿ ಸಮುದಾಯಗಳ ಅಧ್ಯಯನದ ಪ್ರಾಮುಖ್ಯತೆಯನ್ನು ನಿರ್ಧರಿಸುತ್ತದೆ. ಪ್ರಸ್ತುತ ಸಂಶೋಧನೆಯ ಉದ್ದೇಶಗಳು, ವ್ಯಾಪ್ತಿ ಮತ್ತು ಅಳವಡಿಸಿಕೊಂಡ ವಿಧಾನಗಳ ಮೇಲೆ ಬೆಳಕು ಚೆಲ್ಲುತ್ತದೆ.

ದ್ವಿತೀಯ ಅಧ್ಯಾಯವು ಹೈದ್ರಾಬಾದ್ ಕರ್ನಾಟಕ ಮತ್ತು ಅಲೆಮಾರಿ ಸಮುದಾಯಗಳು ಎಂಬ ಶೀರ್ಷಿಕೆ ಹೊಂದಿದೆ. ಈ ಅಧ್ಯಾಯದಲ್ಲಿ ಹೈದ್ರಾಬಾದ್ ಕರ್ನಾಟಕದ ಸಂಕ್ಷಿಪ್ತ ಪರಿಚಯವನ್ನು ವಿಶ್ಲೇಷಿಸಲಾಗಿದೆ. ಅಲೆಮಾರಿಗಳೆಂದರೆ ಯಾರು ಎಂಬುದನ್ನು ತಿಳಿಯಲು ಅಲೆಮಾರಿ ಎಂಬ ಪದದ ಪರಿಚಯ ಅಧ್ಯಯನಕ್ಕೆ ಆಯ್ದುಕೊಂಡ ಅಲೆಮಾರಿಗಳ ಸಂಕ್ಷಿಪ್ತ ಪರಿಚಯ ಹಾಗೂ ಅಲೆಮಾರಿಗಳ ಮೂಲ ಹುಡುಕಾಟದ ತೊಂದರೆಯನ್ನು ಕುರಿತು ಚರ್ಚಿಸಲಾಗಿದೆ.

ಮೂರನೆ ಅಧ್ಯಾಯವು ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಾಮಾಜಿಕ ವ್ಯವಸ್ಥೆ ಎಂಬ ಶೀರ್ಷಿಕೆ ಹೊಂದಿದ್ದು ಅಲೆಮಾರಿ ಸಮುದಾಯಗಳ ಸಾಮಾಜಿಕ ರಚನೆ ಮತ್ತು ರಚನೆಗಳಲ್ಲಿ ಮೌಲ್ಯಗಳ ಪಾತ್ರ. ಸಾಮಾಜಿಕ ರಚನೆಯ ಅಂಶಗಳು, ಮೌಲ್ಯಗಳ ಗುಣಗಳು, ಅಲೆಮಾರಿಗಳ ಕುಟುಂಬ ವ್ಯವಸ್ಥೆ ಮತ್ತು ವಿಶಿಷ್ಟ ಗುಣಲಕ್ಷಣಗಳು, ಪಾತ್ರಗಳು ಹಾಗೂ ಅಲೆಮಾರಿಗಳ ಜಾತಿವ್ಯವಸ್ಥೆ ನೆಲೆನಿಂತವರ ಜಾತಿ ವ್ಯವಸ್ಥೆ, ಅಲೆಮಾರಿಗಳ ಜಾತಿ ವ್ಯವಸ್ಥೆಯ ವಿಶಿಷ್ಟತೆ, ಅನುಭವಿಸುವ ಯಾತನೆ ಪ್ರಭಾವ ಬೀರುವ ಅಂಶಗಳು ಹಾಗೂ ಜಾತಿಯಲ್ಲಿಯೆ ಹೇಗೆ ಉಪಜಾತಿಯ ರಚನೆಯಿದೆ, ಇದರಿಂದಾಗಿ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ಚರ್ಚಿಸಲಾಗಿದೆ.

ಅಲೆಮಾರಿಗಳ ಲಿಂಗ ಸಂಬಂಧಗಳು ಹೇಗಿವೆ. ಸ್ತ್ರೀ-ಪುರುಷರಿಬ್ಬರು ಹೇಗೆ ಬದುಕಿನಲ್ಲಿ ಭಾಗಿಯಾಗು ತ್ತಾರೆ. ಇರಬಹುದಾದ ಅವಕಾಶಗಳೇನು ಎಂಬುದರ ಬಗ್ಗೆ ವಿಶ್ಲೇಷಿಸಲಾಗಿದೆ. ಅಲೆಮಾರಿಗಳ ವಾಸದ ನೆಲೆಯು ಯಾವ ತರದ್ದು ಅಲ್ಲಿನ ಸಂಬಂಧಗಳು ಹೇಗಿರುತ್ತವೆ ಅನುಭವಿಸುವ ತೊಂದರೆಗಳಾವುವು ಮತ್ತು ಯಾವ ಯಾವ ಕಾರಣಕ್ಕಾಗಿ ವಾಸದ ನೆಲೆಯಿಂದ ಅಲೆಯುತ್ತಿರುತ್ತಾರೆ. ಅಲೆದಾಟದ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಅರ್ಥಿಕ ರಚನೆ ಎಂಬ

ವಿಷಯದ ಮೇಲೆ ಕೇಂದ್ರಿಕರಿಸಲಾಗಿದೆ. ಅಲೆಮಾರಿಗಳ ಕಸುಬಿನ ಸ್ವರೂಪ. ಕಸುಬು ಮತ್ತು ಕರಕುಶಲತೆಯಿಂದ ಯಾವ ವಸ್ತುಗಳನ್ನು ತಯಾರಿಸುತ್ತಾರೆ. ಅಲೆಮಾರಿಗಳ ಉತ್ಪಾದನಾ ವ್ಯವಸ್ಥೆ ಹೇಗಿದೆ. ಯಾವ ವಸ್ತುಗಳನ್ನು ಬಳಸಿ ಉತ್ಪಾದಿಸುತ್ತಾರೆ. ಸಮಸ್ಯೆಗಳೇನು? ಅನುಭವಿಸುತ್ತಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಮಾರುಕಟ್ಟೆ ವ್ಯವಸ್ಥೆಯಲ್ಲಿ ಅಲೆಮಾರಿಗಳ ಪಾಲು ಎಷ್ಟಿದೆ. ಇವರಿಗಾಗಿಯೆ ಮಾರುಕಟ್ಟೆ ಏಕಿಲ್ಲ? ಮತ್ತು ಉತ್ಪಾದಿಸಿದ ವಸ್ತುವನ್ನು ಹೇಗೆ ಸಾಗಿಸುತ್ತಾರೆ. ಹೇಗೆ ಮಾರಾಟ ಮಾಡುತ್ತಾರೆ. ಮಾರಾಟದ ತಂತ್ರಗಳಾವುವು. ಮಾರಾಟದಿಂದ ಸಿಗುವ ಆದಾಯವೆಷ್ಟು. ಎದುರಾಗುವ ಸಮಸ್ಯೆಗಳೇನು ಎಂಬುದರ ಬಗ್ಗೆ ವಿವರಿಸಲಾಗಿದೆ. ಅಲೆಮಾರಿಗಳ ಪಾರಂಪಾರಿಕ ಕಸುಬುಗಳ ಪ್ರದರ್ಶನ ಕಲೆಯ ವೈಶಿಷ್ಟ್ಯ, ಅದರಿಂದ ಬರುವ ಆದಾಯ. ಜನರ ಪ್ರೋತ್ಸಹ ಬರುವ ಸಮಸ್ಯೆ ಇತ್ಯಾದಿಗಳ ಬಗ್ಗೆ ಚರ್ಚಿಸಲಾಗಿದೆ.

ಅಲೆಮಾರಿಗಳು ಯಾವ ತೆರನಾದ ದುಡಿಮೆಯಲ್ಲಿ ಪಾಲ್ಗೊಳುತ್ತಾರೆ ಅದರಿಂದ ಅವರ ಬದುಕು ನಡೆಯಲಿದೆಯೆ ದೊರೆಯುವ ಕೂಲಿ ಎಷ್ಟು, ಎಂತೆಂತ ದುಡಿಮೆಗೆ ಎಷ್ಟೆಷ್ಟು ಕೂಲಿಯಿದೆ ಮತ್ತು ಪಶು ಸಂಪತ್ತು ಹೇಗೆ ಜೀವನದಲ್ಲಿ ಆಸರೆಯಾಗಿವೆ, ಅವುಗಳ ಲಾಲನೆ ಪಾಲನೆ ಹೇಗಿದೆ ಅದರಿಂದ ಬರುವ ಆದಾಯ ಎಷ್ಟು, ಬದುಕಿಗೆ ಹೇಗೆ ಆಸರೆಯಾಗಿದೆ ಎಂಬಿತ್ಯಾದಿ ಅಂಶಗಳ ಬಗ್ಗೆ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸರ್ಕಾರದ ಯೋಜನೆಗಳ ಕ್ರಮಗಳು ಮತ್ತು ಅಲೆಮಾರಿಗಳು ಎಂಬ ವಿಷಯದ ಬಗೆಗೆ ಗಮನಹರಿಸಲಾಗಿದೆ. ಸರ್ಕಾರದ ಅಭಿವೃದ್ಧಿ ಕ್ರಮ ಹೇಗಿದೆ. ಅಲೆಮಾರಿಗಳಿಗೆ ಎಷ್ಟರ ಮಟ್ಟಿಗೆ ಅನ್ವಯ, ಯೋಜನೆಗಳೆಂದರೇನು? ಯೋಜನೆಗೂ ಮತ್ತು ಸಮಾಜದ ಆರ್ಥಿಕ ನೀತಿಗೂ ಹೇಗೆ ಸಂಬಂಧವಿದೆ ಇದು ಅಲೆಮಾರಿಗಳ ಬದುಕಲ್ಲಿ ಎಷ್ಟರ ಮಟ್ಟಿಗೆ ಸಾಫಲ್ಯ? ವಿಫಲಕ್ಕೆ ಕಾರಣಗಳೇನು? ಯೋಜನಾ ಸಿದ್ಧತೆಯಲ್ಲಿ ಸಮುದಾಯಗಳ ಪಾತ್ರವೇನು? ಎಂಬುವುದರ ಬಗೆಗೆ ಚರ್ಚಿಸಲಾಗಿದೆ.

ಅಲೆಮಾರಿಗಳ ಬದುಕಿಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ ತತ್ವಗಳೂ ಅಭಿವೃದ್ಧಿಪಡಿಸುವಲ್ಲಿ ಎಷ್ಟರ ಮಟ್ಟಿಗೆ ಪ್ರಭಾವಬೀರಬಲ್ಲವು ಅಂತಹ ತತ್ವಗಳಾವುವು? ಮೀಸಲಾತಿ ಎಂದರೇನು? ಯಾರಿಗೆ ಮೀಸಲಾತಿ ಸಲ್ಲಬೇಕು? ಅಲೆಮಾರಿಗಳ ಪಾಲು ಎಷ್ಟಿರಬೇಕು? ಹಾಗೂ ಮೂಲ ಸೌಕರ್ಯವೆಂದರೇನು? ಯಾವ ತರಹದ ಮೂಲ ಸೌಕರ್ಯಗಳ ಅವಶ್ಯಕತೆಯಿದೆ? ಅಲೆಮಾರಿಗಳು ಸಬಲರಾಗಲು ಯಾವ ತರಹದ ಪರ್ಯಾಯಗಳನ್ನು ಕೊಡಬಹುದಾಗಿದೆ. ಪರ್ಯಾಯದ ಅಂಶಗಳಾವವು ಎಂಬುದರ ಬಗ್ಗೆ ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯವು ಮಹಾಪ್ರಬಂಧದ 'ಸಮಾರೋಪ' ಎಂಬ ಶೀರ್ಷಿಕೆಯಿಂದ ಕೂಡಿದೆ. ಇದರಲ್ಲಿ ಎಲ್ಲಾ ಅಧ್ಯಾಯಗಳ ಸಾರಾಂಶ ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ಸಲಹೆಗಳು ಮುಂದಿನ ಅಧ್ಯಯನದ ಸಾಧ್ಯತೆಗಳ ಮಾಹಿತಿಗಳನ್ನು ಒಳಗೊಂಡಿದೆ.

ಅನುಬಂಧದಲ್ಲಿ ಗ್ರಂಥಋಣ, ಮಾಹಿತಿದಾರರ ಪಟ್ಟಿ ಸಮುದಾಯಗಳ ಸಾಂದರ್ಭಿಕ ಛಾಯಚಿತ್ರಗಳನ್ನು ಒಳಗೊಂಡಿದೆ.

೬.೧. ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

೧. ಅಲೆಮಾರಿ ಸಮುದಾಯಗಳಿಗೆ ಭಿಕ್ಷೆಯು ಹೊಟ್ಟೆ ಹೊರೆಯ ಬಲ್ಲದು ಎಂಬ ಮನೋಭಾವನೆ ಮುಂದುವರಿದಿದೆ.

೨. ವೃತ್ತಿಗಳ ಆಧಾರದ ಮೇಲೆ ಆಯಾ ಸಮುದಾಯಕ್ಕೆ ಅನ್ವಯಗೊಂಡಂತೆ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಆ ಹೆಸರುಗಳೆ ಜಾತಿ ಎಂಬಂತೆ ಬಿಂಬಿತವಾಗುತ್ತಿವೆ.

೩. ದೈವಭಕ್ತಿ ಅಪಾರವಾಗಿ ನೆಲೆಯೂರಿದೆ.

೪. ಭಿಕ್ಷೆಗಾಗಿ ಅಂತರ ಜಿಲ್ಲೆ ಮತ್ತು ಅಂತರ ರಾಜ್ಯದಲ್ಲಿ ವಲಸೆ ಹೋಗುವರು.

೫. ಅಲೆಮಾರಿಗಳು ಗ್ರಾಮದ ಕೊನೆಯ ಭಾಗ, ಶಾಲೆ, ಸ್ಮಶಾನ, ಹಳ್ಳಕೊಳ್ಳ, ಕಾಡು, ಕೋಟೆ-ಕೊತ್ತಲುಗಳು, ರೈಲ್ವೆನಿಲ್ದಾಣಗಳು, ಬಸ್ಸುನಿಲ್ದಾಣಗಳು, ಕೊಳಚೆ ಪ್ರದೇಶ, ಸಂತೆಮೈದಾನ, ಸರ್ಕಾರಿ ಕಟ್ಟಡ, ಸ್ಥಗಿತಗೊಂಡ ವಾಹನ, ಸರ್ಕಾರಿ ಕಛೇರಿಗಳ ಬಳಿ ಗುಡಾರ ಮತ್ತು ಗುಡಿಸಿಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದಾರೆ.

೬. ಅಲೆಮಾರಿ ಸಮುದಾಯಗಳ ಸಾಮಾಜಿಕ ಸ್ಥಾನಮಾನವು ಆರೋಗ್ಯಕರವಾಗಿಲ್ಲ.

೭. ಉಡುಪುಗಳಲ್ಲಿ ಸುಧಾರಣೆಯಾಗುತ್ತಿದೆ.

೮. ಕುಲ ಪಂಚಾಯತಿಗಳ ಮೂಲಕ ವ್ಯಾಜ್ಯ ಮತ್ತು ಇತರೆ ಎಲ್ಲ ಕಾರ್ಯಗಳು ನಡೆಯುತ್ತವೆ.

೯. ಬೇಟೆಯು ಆಹಾರದ ಪ್ರಮುಖ ಭಾಗವಾಗಿದೆ.

೧೦. ಅಲ್ಲಲ್ಲಿ ನೆಲೆನಿಲ್ಲುತಿದ್ದಾರೆ.

೧೧. ಗಿಡಮೂಲಿಕೆ ವೈದ್ಯ ಪದ್ಧತಿಯು ವಂಶಪರಂಪಾರಿಕವಾಗಿ ಬೆಳೆದು ಬಂದಿದೆ ಮತ್ತು ಅದನ್ನು ನಂಬಿಕೊಂಡಿದ್ದಾರೆ.

೧೨. ಕುಲಕಸುಬಿನ ಜೊತೆಯಲ್ಲಿ ಕೂಲಿ, ರೀಪೇರಿ ಕೆಲಸ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

೧೩. ವ್ಯಾಪಾರ ಪ್ರಮುಖ ವೃತ್ತಿಯಾಗಿದ್ದು, ವಿವಿಧ ಬಗೆಯ ವಸ್ತುಗಳನ್ನು ಅಂತರ ರಾಜ್ಯಕ್ಕೂ ವಲಸೆ ಹೋಗಿ ವ್ಯಾಪಾರಗಳನ್ನು ಮಾಡುತ್ತಾರೆ.

೧೪. ಕರಕುಶಲ ಕಲೆ ಜೀವಂತವಾಗಿದ್ದು ಅದರ ಮೂಲಕ ವಿವಿಧ ವಸ್ತು ತಯಾರಿಸುತ್ತಾರೆ.

೧೫. ಆಯಾ ಪ್ರದೇಶದ ಅನ್ವಯವಾಗುವಂತ ವಸ್ತುಗಳನ್ನು ಉತ್ಪಾದಿಸುತ್ತಾರೆ.

೧೬. ಸಾಟಿ ವಿನಿಮಯ ಮತ್ತು ಹಣದ ಮೂಲಕ ಮಾರಾಟ ಮಾಡುವರು.

೧೭. ಇತ್ತೀಚೆಗೆ ಹುಟ್ಟಿದ ಮಕ್ಕಳಿಗೆ ಸಮಯ ಸಂದರ್ಭ ಕಾಲಮಾನ ಮತ್ತು ಚಲನಚಿತ್ರದ ಹೆಸರನ್ನು ನಾಮಕರಣ ಮಾಡುತ್ತಾರೆ.

೧೮. ಪ್ರಮುಖ ಹಬ್ಬಗಳಲ್ಲಿ ಬಲಿ ಆಚರಣೆಗಳು ಚಾಲ್ತಿಯಲ್ಲಿದೆ.

೧೯. ಅತ್ಯುತ್ತಮ ಅಭಿನಯ ಸಾಹಿತ್ಯ, ನೃತ್ಯ ಹೇರಳವಾಗಿದೆ.

೨೦. ಅಲೆಮಾರಿಗಳಿಗೆ ಮೂಲಭೂತ ಸಮಸ್ಯೆಗಳಿವೆ.

೨೧. ಕೂಡಿಕೆ ಮತ್ತು ವಿಧವಾ ವಿವಾಹ ವಧುದಕ್ಷಿಣೆ ಚಾಲ್ತಿಯಲ್ಲಿದೆ.

೨೨. ಸ್ತ್ರೀ-ಪುರುಷರಿಬ್ಬರು ಸಮಾನತೆಯಿಂದ ದುಡಿಯುವರು.

೨೩. ಅಕ್ಷರ ಲೋಕದಿಂದ ದೂರವಿದ್ದಾರೆ.

೨೪. ಪ್ರಾಣಿ-ಪಕ್ಷಿಗಳು ಕುಟುಂಬದಲ್ಲಿ ಆದಾಯ ತರುವಂತ ಮೂಲಗಳಾಗಿವೆ.

೨೫. ಸರ್ಕಾರದ ಸೌಲಭ್ಯ ಪಡೆಯುವಲ್ಲಿ ಹಿಂದುಳಿದಿದ್ದಾರೆ.

೨೬. ಉತ್ಪಾದಿಸಿದ ವಸ್ತುವಿನ ಸಾಗಾಣಿಕೆ, ಕಚ್ಚಾವಸ್ತು ಸಾಗಾಣಿಕೆ ಮಾರಾಟಕ್ಕಾಗಿ ಸಾಗಾಣಿಕೆಗಾಗಿ ಕಾಲು ನಡಿಗೆಯೆ ಅನಿವಾರ್ಯವಾಗಿದೆ.

೨೭. ಪ್ರದರ್ಶನ ಕಲೆಗಳಿಗೆ ಬೇಡಿಕೆ ಕಡಿಮೆಯಿದೆ.

೬.೨. ಸಮಸ್ಯೆಗಳು

ಮಾನವ ಸಂಘಜೀವಿ. ಅವನು ತಂದೆ-ತಾಯಿಯರ ಜೊತೆಯಲ್ಲಿ, ಸಹೋದರ-ಸಹೋದರಿ, ಚಿಕ್ಕಪ್ಪ-ಚಿಕ್ಕಮ್ಮ, ಮಕ್ಕಳು ಹೀಗೆ ಇತರೆ ಸದಸ್ಯರೊಡನೆ ಕೂಡಿಕೊಂಡು ಜೀವಿಸುತ್ತಾನೆ. ನೆರೆಹೊರೆಯವರೊಡನೆ ಕೂಡಿ ಸಹಬಾಳ್ವೆ ನಡೆಸುತ್ತಾನೆ. ಅನೇಕ ಸಂಘ-ಸಂಸ್ಥೆ ನೀತಿ-ನಿಯಮಗಳನ್ನು ರೂಢಿಸಿಕೊಂಡು, ವ್ಯವಸ್ಥಿತ ಜೀವನವನ್ನು ನಡೆಸುತ್ತಿದ್ದಾನೆ. ಹಾಗೂ ತನ್ನದೆ ಒಂದು ಸಮಾಜವನ್ನು ನಿರ್ಮಿಸಿಕೊಂಡಿರುತ್ತಾನೆ. ಇಂತಹ ಸಮಾಜದಲ್ಲಿ ವ್ಯವಸ್ಥಿತವಾದ ಜೀವನ ನಡೆಸುವುದೆ ಅವನ ಜೀವನದ ಮುಖ್ಯ ಗುರಿ. ಮಾನವ ವಿಶಿಷ್ಟವಾದ ಗುಣ, ವಿಶೇಷಗಳಿಂದ ಪ್ರಾಣಿಗಳಿಗಿಂತ ತೀರಭಿನ್ನವಾಗಿ ವಿಶಿಷ್ಟವಾಗಿ ತೋರಿ ಬರುತ್ತಾನೆ. ಅಲೋಚನಾ ಶಕ್ತಿ, ವಾಕ್‌ಶಕ್ತಿ ಮಾನವನ್ನು ಪ್ರಾಣಿ ವರ್ಗದಿಂದ ಬೇರ್ಪಡಿಸುವ ವಿಶಿಷ್ಟ ಗುಣಗಳಾಗಿವೆ. ಇಂತಹ ವಿಶಿಷ್ಟ ಗುಣಗಳಿಂದ ಕೂಡಿದ ಮಾನವ ತನ್ನ ಬುದ್ಧಿಶಕ್ತಿಯಿಂದ ವ್ಯವಸ್ಥಿತ ಜೀವನ ನಡೆಸಲು ಸಮರ್ಥನಾಗಿದ್ದಾನೆ. ಅತ್ಯುತ್ತಮ ಹಾಗೂ ಆಶ್ಚರ್ಯಕರ ಪ್ರಗತಿಯನ್ನು ಜೀವನದಲ್ಲಿ ಸ್ಥಾಪಿಸಿದ್ದರೂ ಕೂಡ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಸಮಸ್ಯ ರಹಿತ ಸಮಾಜವನ್ನು ಎಂದೆಂದಿಗೂ ಕಾಣಲು ಅಸಾಧ್ಯ. ಆದರೆ ಸಮಸ್ಯೆಗಳು ಆಯಾ ಜಾತಿ ಸಮುದಾಯಗಳಿಗೆ ತಕ್ಕಂತೆ ತಮ್ಮದೆ ಆದ ಸಮಸ್ಯೆಗಳಿರುತ್ತವೆ. ಅಲೆಮಾರಿಗಳ ಸಮಸ್ಯೆಗಳು ಎಲ್ಲರ ಸಮಸ್ಯೆಗಿಂತ ಭಿನ್ನವಾಗಿವೆ. ಇನ್ನೂ ಸಮುದಾಯದ ರೂಪ ಬದಲಾವಣೆಯಾಗಿಲ್ಲ, ಸಮಸ್ಯೆಗಳ ಮಧ್ಯೆ ಸಂಕಷ್ಟಗಳ ಮಧ್ಯೆ ಸಿಲುಕಿಕೊಂಡಿದ್ದಾರೆ. ಅವುಗಳಲ್ಲಿ,

೧. ನೆಲೆನಿಲ್ಲುವ ಸಮಸ್ಯೆ

೨. ಸಾಮಾಜಿಕ ಸಮಸ್ಯೆ

೩. ರಾಜಕೀಯ ಸಮಸ್ಯೆ

೪. ಆರ್ಥಿಕ ಸಮಸ್ಯೆ

೫. ಶೈಕ್ಷಣಿಕ ಸಮಸ್ಯೆ

೬. ಆರೋಗ್ಯ ಮತ್ತು ನೈರ್ಮಲ್ಯ ಸಮಸ್ಯೆ

೭. ಇನ್ನಿತರ ಸಮಸ್ಯೆಗಳು

* ಹೈದ್ರಾಬಾದ್ ಕರ್ನಾಟಕದ ಅಲೆಮಾರಿ ಸಮುದಾಯಗಳು ಗುಡಾರಗಳಲ್ಲಿ ವಾಸ ಮಾಡುತ್ತಿದ್ದಾರೆ. ಸರ್ಕಾರದ ಅಲಕ್ಷತೆಗೆ ತುತ್ತಾಗಿ ಇವರು ಡಾ. ಬಿ.ಆರ್.ಅಂಬೇಡ್ಕರ್ ಯೋಜನೆ, ಜನತಾ ಆಶ್ರಯ ಮನೆಗಳು, ವಾಲ್ಮೀಕಿ ಆಶ್ರಯ ಮನೆ ಮುಂತಾದ ಯೋಜನೆಗಳಿಂದ ವಂಚಿತರಾಗಿದ್ದಾರೆ. ಸರ್ಕಾರದಿಂದ ದೊರಕುತ್ತಿರುವ ನೆರವು ಅತ್ಯಲ್ಪವಾಗಿದೆ.

* ಇತ್ತೀಚಿನ ದಿನಗಳಲ್ಲಿ ಅಲೆಮಾರಿ ಸಮುದಾಯಗಳು ಕೃಷಿ ಆಧಾರಿತ ಕೂಲಿ ಚಟುವಟಿಕೆಗಳಲ್ಲೆ ತೊಡಗಿರುವುದರಿಂದ ಅವರಿಗೆ ಹೆಚ್ಚು ಭೂಮಿ ಬೇಕಾಗಿದೆ. ಹೀಗಾಗಿ ಈ ಜನವರ್ಗವು ಅಧಿಕ ಭಿಕ್ಷಾಟನೆಯಿಂದ ಕಡಿಮೆ ಮಾಡುವುದರ ಮೂಲಕ ಹೊಸ ಬದುಕನ್ನು ರೂಪಿಸುವುದು ಅನಿವಾರ್ಯವಾಗಿದೆ.

* ಅಲೆಮಾರಿ ಸಮುದಾಯದ ಮಕ್ಕಳು ಹಸಿವಿನಿಂದ ಕಂಗಾಲಾಗಿದ್ದು, ಅವರಿಗೆ ಅಂಗನವಾಡಿ ಕೇಂದ್ರಗಳ ಮತ್ತು ಪಡಿತರ ಚೀಟಿ ಸೌಲಭ್ಯ ಕೊರತೆಯೂ ಇದೆ.

* ಸರ್ಕಾರದ ವತಿಯಿಂದ ಈ ಸಮುದಾಯದ ಜನರಿಗೆ ದೊರೆಯುವ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳಾದ, ಸಹಕಾರಿ ಬ್ಯಾಂಕು, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಮೊದಲಾದವುಗಳಿಂದ ಸಾಲದ ವ್ಯವಸ್ಥೆ ದೊರೆಯುತ್ತಿಲ್ಲ. ಇವರ ಅಜ್ಞಾನ ಮತ್ತು ಅನಕ್ಷರತೆಯಿಂದ ಸಾಲನೀಡುವಲ್ಲಿ ಬ್ಯಾಂಕಿನ ಅಧಿಕಾರಿಗಳು ಹಿಂದೆ ಮುಂದೆ ನೋಡುತ್ತಿದ್ದಾರೆ. ಆದಕಾರಣ ಈ ಸಮುದಾಯಗಳು ಭವಿಷತ್ತಿನ ದಿನಗಳ ಬಗ್ಗೆ ಆತಂಕಪಡುತ್ತಿವೆ.

೬.೩. ಸಲಹೆಗಳು

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ ಆರ್ಥಿಕ ವ್ಯವಸ್ಥೆಯ ಅಧ್ಯಯನದ ಹಿನ್ನೆಲೆಯಲ್ಲಿ ಈ ಸಮುದಾಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೆಳಗಿನ ಸೂಕ್ತ ಸಲಹೆಗಳನ್ನು ನೀಡಲಾಗಿದೆ. ಸಮಾಜ, ಸರ್ಕಾರ, ಸಂಘ-ಸಂಸ್ಥೆಗಳು ಈ ಕುರಿತು ಗಂಭೀರವಾಗಿ ಚಿಂತಿಸಿ, ಸಹಾಯ ಹಸ್ತ ನೀಡಬೇಕಾಗಿದೆ.

- ಹೈದ್ರಾಬಾದ್ ಕರ್ನಾಟಕ ಅಲೆಮಾರಿಗಳು ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬಹುತೇಕವಾಗಿ ಗುಡಾರ, ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸುವುದು.
- ಈ ಸಮುದಾಯಗಳು ವಾಸಿಸುವ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳು ಇರುವುದಿಲ್ಲ. ಆದಕಾರಣ ಇವರ ವಾಸಸ್ಥಳಗಳಲ್ಲಿ ವಸತಿ ಶಾಲೆಗಳನ್ನು ಸ್ಥಾಪಿಸುವುದು.

* ಅಲೆಮಾರಿಗಳ ವಾಸಿಸುವ ಕಾಲೋನಿಗಳಲ್ಲಿ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯ ಇರುವುದಿಲ್ಲ. ಕಾರಣ ಪ್ರತಿಯೊಂದು ಗುಡಿಸಲು ಮನೆಗಳಿಗೂ ವಿದ್ಯುತ್ ಸೌಲಭ್ಯ ಒದಗಿಸುವುದು. ಹಾಗೂ ಇವರು ವಾಸಿಸುವ ಸ್ಥಳಗಳು ಕತ್ತಲೆ ಪ್ರದೇಶಗಳಾಗಿರುವುದರಿಂದ ಅಲ್ಲಿ ಬೀದಿ ದೀಪಗಳ ವ್ಯವಸ್ಥೆ ಮಾಡುವುದು.
* ಅಂತ್ಯೋದಯ ಪಡಿತರ ಚೀಟಿ ಪ್ರತಿಯೊಂದು ಕುಟುಂಬಗಳಿಗೂ ದೊರಕಿಸುವುದು.
* ಮತದಾನಕ್ಕಾಗಿ ಎಲ್ಲ ಸಮುದಾಯಗಳ ಅಲೆಮಾರಿಗಳಿಗೆ ಮತದಾನದ ಗುರುತಿನ ಚೀಟಿ ನೀಡುವುದು.
* ಇವರು ವಾಸಿಸುವ ಪ್ರದೇಶಗಳಲ್ಲಿ ಸರ್ಕಾರ ತುರ್ತಾಗಿ ನಿವೇಶನಗಳನ್ನು ನೀಡಿ ಆಶ್ರಯ ಯೋಜನೆಗಳಲ್ಲಿ ಮನೆಗಳನ್ನು ನಿರ್ಮಿಸಿ ಕೊಡುವುದು.
* ಇತ್ತೀಚಿನ ದಿನಗಳಲ್ಲಿ ಅಲೆಮಾರಿಗಳು ಕೃಷಿಯೇತರ ಕೂಲಿಗಾಗಿ ಕೆಲಸ ಮಾಡಲಿಕ್ಕೆ ಹೋಗುತ್ತಿದ್ದಾರೆ. ಆದಕಾರಣ ಈ ಸಮುದಾಯಕ್ಕೆ ಸರ್ಕಾರವು ವ್ಯವಸಾಯಕ್ಕಾಗಿ ಭೂಮಿಯನ್ನು ಒದಗಿಸುವುದು.
* ಇತ್ತೀಚಿಗೆ ಇವರು ಪ್ಲಾಸ್ಟಿಕ್ ಕೊಡಪಾನ ಮೊದಲಾದ ವ್ಯಾಪಾರ ಮಾಡುತ್ತಿದ್ದು ಇಂತಹ ಕಸುಬುಗಳಿಗೆ ಬಂಡವಾಳದ ಅವಶ್ಯಕತೆ ಇದೆ. ಅದಕ್ಕಾಗಿ ಸರಕಾರ ಸಾಲ ಸೌಲಭ್ಯವನ್ನು ಕಲ್ಪಿಸುವುದು.
* ಪುರುಷರು ಮತ್ತು ಸ್ತ್ರೀಯರು ಏಕ ರೀತಿಯಲ್ಲಿ ಕೂಲಿಕೆಲಸ ಮಾಡುವುದುರಿಂದ ಅಲ್ಲಿನ ಮಾಲೀಕರು ಸಮ ಪ್ರಮಾಣದಲ್ಲಿ ಕೂಲಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು.
* ಇವರು ವಾಸಿಸುವಂತಹ ಕಡೆಗಳಲ್ಲಿ ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವುದರಿಂದ ಸರ್ಕಾರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪನೆ ಮಾಡಲು ಮುಂದಾಗುವುದು.
* ಶಿಕ್ಷಣದಲ್ಲಿ ಪ್ರಗತಿಸಾಧಿಸಿದ ಅಲೆಮಾರಿ ಮಕ್ಕಳಿಗೆ ಹೈದ್ರಬಾದ್ ಕರ್ನಾಟಕದ ಯೋಜನೆ ಅಡಿಯಲ್ಲಿ ಕಾರ್ಖಾನೆ ಮತ್ತು ಸರ್ಕಾರಿ ಕಛೇರಿಗಳಲ್ಲಿ ಉದ್ಯೋಗ ಕಲ್ಪಿಸುವುದು.
* ಸ್ವಯಂ ಸೇವಾ ಸಂಸ್ಥೆಗಳು ಸರಕಾರ ಮತ್ತು ಸಮುದಾಯಗಳ ನಡುವೆ ಕೊಂಡಿಯಾಗಿ ಸರಕಾರದ ಯೋಜನೆಗಳನ್ನು ಕಾರ್ಯಗತಗೊಳಿಸಲು ಮುಂದಾಗುವುದು
* ಅಲೆಮಾರಿಗಳು ವಾಸಿಸುವ ಕಡೆಗಳಲ್ಲಿ ಅಲ್ಲಿನ ಶಾಸಕರು ಮತ್ತು ಲೋಕಸಭ ಸದಸ್ಯರು ತಿಂಗಳಿಗೊಮ್ಮೆ ಭೇಟಿನೀಡಿ ಅವರ ಕುಂದುಕೊರತೆಗಳ ಬಗ್ಗೆ ವಿಚಾರಣೆ ಮಾಡಲು ಮುಂದಾಗುವುದು.
* ಅಲೆಮಾರಿಗಳು ವಾಸಿಸುವ ಸ್ಥಳಗಳಲ್ಲಿ ಗುಡಿ ಕೈಗಾರಿಕೆಗಳ ತರಬೇತಿಯನ್ನು ನೀಡುವುದು.
* ಮಹಿಳೆಯರನ್ನು ಸ್ವ-ಸಹಾಯ ಗುಂಪಿನಲ್ಲಿ ಸೇರುವಂತೆ ಪ್ರೇರೇಪಣೆ ಮಾಡಿ, ಅವರಿಗೆ ಅನೇಕ ಬಗೆಯ ಪುಸ್ತಕಗಳನ್ನು ಪರಿಚಯಿಸಿ ಮಾಹಿತಿ ಒದಗಿಸುವುದು.
* ವ್ಯಾಪಾರದಲ್ಲಿ ನಿರತ ಪುರುಷ ಮತ್ತು ಮಹಿಳೆಯರಿಗೆ ಐ.ಆರ್.ಡಿ.ಪಿ. ಯೋಜನೆಯ ವಿಶೇಷ

ಸಾಲ ಸೌಲಭ್ಯಗಳನ್ನು ಬ್ಯಾಂಕ್‌ಗಳಿಂದ ದೊರೆಯುವಂತೆ ಮಾಡಿ, ಉಳಿತಾಯ ಮನೋಭಾವನೆ ಬೆಳೆಸುವುದು.

- ಅಲೆಮಾರಿಗಳ ನಿರ್ಲಕ್ಷಿತ ವೃದ್ಧರಿಗೆ, ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸುವುದು.

- ಸ್ತ್ರೀ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಅಗತ್ಯವಾಗಿದೆ.

ಮುಂದಿನ ಅಧ್ಯಯನದ ಸಾಧ್ಯತೆಗಳು

ಅಲೆಮಾರಿಗಳ ಸಂಸ್ಕೃತಿ ಮರೆಮಾಚುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು, ಅಧ್ಯಯನಕಾರರು, ಇಂತಹ ಸಮುದಾಯದ ಬಗ್ಗೆ, ಸಾಮಾಜಿಕ, ರಾಜಕೀಯ, ಆರ್ಥಿಕ, ಮಹಿಳಾ ಮತ್ತು ಮಾನವಶಾಸ್ತ್ರೀಯ ದೃಷ್ಟಿಕೋನಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಹರಡಿಕೊಂಡಿರುವ ಅಲೆಮಾರಿ ಸಮುದಾಯಗಳ ಕುರಿತು ಅಧ್ಯಯನ ಮಾಡುವವರಿಗೆ ಪ್ರಸ್ತುತ ಈ ಮಹಾಪ್ರಬಂಧ ಮಾರ್ಗಸೂಚಿಯಾಗಬಹುದು. ಒಟ್ಟಿನಲ್ಲಿ **ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ** ಎಂಬೀ ವಿಷಯದ ನಿಬಂಧ ಅಲೆಮಾರಿ ಸಮುದಾಯದ ವಿವಿಧ ಅಂಶಗಳ ಕುರಿತು ಮಾಹಿತಿ ದೊರಕಿಸಿಕೊಡಬಲ್ಲ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಆದಾಗ್ಯೂ ನನ್ನ ಗಮನಕ್ಕೆ ಬರದೆ ಇರುವ ಸಂಶೋಧನಾಂಶಗಳು ಉಳಿದಿರುವ ಸಾಧ್ಯತೆಗಳಿವೆ. ಆಸಕ್ತಿ ಇರುವ ಅಧ್ಯಯನಕಾರರು ಆ ಬಗೆಗೆ ಹೆಚ್ಚಿನ ಅಧ್ಯಯನವನ್ನು ಮಾಡಬಹುದಾಗಿದೆ.

ಅನುಬಂಧಗಳು

- ಗ್ರಂಥಋಣ
- ವಕ್ತೃದಾರರ ಪಟ್ಟಿ
- ಪ್ರಶ್ನಾವಳಿ
- ಛಾಯಾಚಿತ್ರಗಳು

ಗ್ರಂಥಋಣ

ಅಕ್ಕಮಹಾದೇವಿ., *ಬುಡಕಟ್ಟು ನ್ಯಾಯ,* ಕವಿಶೈಲಿ ಮುದ್ರಣಾಲಯ, ಮೈಸೂರು

ಅಬ್ದುಲ್ ಅಜೀಜ್, ಕೆ.ಜಿ. ವಾಸುಕಿ., *ಕನ್ನಡ ಅಧ್ಯಯನ ಕರ್ನಾಟಕ ಆರ್ಥಿಕತೆ,* ೧೯೯೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಅಂಜಿನಪ್ಪ ಯಳನಾಡು., *ಹಗಲುವೇಷದವರ ಸಂಸ್ಕೃತಿ,* ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಅಮರೇಶ್ ನುಗುಡೋಣಿ., ಹೈದ್ರಾಬಾದ್ ಕರ್ನಾಟಕದ ಹಾಡು-ಪಾಡು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈಶ್ವರ ಎಂ.ಜಿ., *ಮ್ಯಾಸಬೇಡರು,* ೧೯೯೮, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಉಮಾಪತಿ ಬಿ.ಎ., (ಲೇ) ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು, ೧೯೭೯, ಹಾ.ಮಾ.ನಾಯಕ. (ಪ್ರ.ಸಂ.) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ,

ಉಷಾ ಎಂ., ಮಹಿಳೆ ಮತ್ತು ಜಾತಿ, ೨೦೦೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಎಲ್ಲಪ್ಪ ಕೆ.ಕೆ. ಪುರ., *ದೊಕ್ಕಲು ಮಕ್ಕಳು ಒಂದು ಅಧ್ಯಯನ,* ೧೯೯೯, ಶ್ರೀದುರ್ಗಾ ಪ್ರಕಾಶನ ರಾಂಪುರ, ಮೊಳಕಾಲ್ಮೂರು ತಾ. ಚಿತ್ರದುರ್ಗ ಜಿಲ್ಲೆ.

ಓಬಳೇಶ ಘಟ್ಟಿ., *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ,* ಕೇಂಬ್ರಿಡ್ಜ್ ಕಂಪನಿ, ೧೯೯೯, ಬೆಂಗಳೂರು.

ಕರಿಶೆಟ್ಟಿರುದ್ರಪ್ಪ., *ಮ್ಯಾಸನಾಯಕರ : ಒಂದು ಜನಾಂಗಿಕ ಅಧ್ಯಯನ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೃಷ್ಣ ಬಿ.ಆರ್., *ಆಧುನೀಕರಣ ಸಮಾಜಶಾಸ್ತ್ರ,* ಚೇತನ ಬುಕ್‌ಹೌಸ್, ಮೈಸೂರು.

ಕೃಷ್ಣಮೂರ್ತಿ ಹನೂರು., *ಮ್ಯಾಸಬೇಡರ ಸಂಸ್ಕೃತಿ* ೧೯೯೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಖಂಡೋಬಾ ಪಿ.ಕೆ., *ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ,* ೧೯೯೧, ಪ್ರಕಟಿತ ಪಿಎಚ್.ಡಿ. ಪ್ರಬಂಧ ತೇಜ್‌ಸಿಂಗ್ ರಾಠೋಡ, ಮೆಮೊರಿಯಲ್ ಟ್ರಸ್ಟ್, ಗುಲ್ಬರ್ಗಾ.

ಖಂಡೋಬಾ ಪಿ.ಕೆ., *ಗಿರಿಜನಸಿರಿ,* ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.

ಗೀತಾನಾಗಭೂಷಣ., *ದುರುಗಿಮುರಗಿಯರ ಸಂಸ್ಕೃತಿ* ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗೋವಿಂದರಾಜು ಟಿ., *ಗೊಂಬೆರಾಮರ ಸಂಸ್ಕೃತಿ* ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಚನ್ನಬಸಪ್ಪ ಗೊ.ರು., *ಗ್ರಾಮಜ್ಯೋತಿ, ಕೆ.ಆರ್.ಲಿಂಗಪ್ಪ ಅವರ ಅಭಿನಂದನ ಗ್ರಂಥ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಚಂದ್ರಶೇಖರ ಟಿ.ಆರ್., *ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಚಿಕ್ಕೇರಿ ಶಿವಶಂಕರ, *ಗೊರವರ ಸಂಸ್ಕೃತಿ*, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಚಿನ್ನಸ್ವಾಮಿ ಸೋಸಲೆ ಎನ್., *ಗ್ರಾಮಗಳು ಅಂದು ಇಂದು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಚೆನ್ನಣ್ಣವಾಲೀಕಾರ., *ಸಮಗ್ರ ಜಾನಪದ ಸಂಪ್ರಬಂಧ ಸಂಪುಟ*, ದಲಿತ ಬಂಡಾಯ, ಸಾಹಿತ್ಯ ಪ್ರಕಾಶನ, ಸೇಡಂ.

ಚೆಲುವರಾಜು., *ದೊಕ್ಕಲರ ಸಂಸ್ಕೃತಿ*, ೧೯೯೯, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಜಗದೀಶ್ ವಿ., ಮಾನವಶಾಸ್ತ್ರ, ೨೦೦೫, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಜೋಗನ್ ಶಂಕರ., *ಗ್ರಾಮಸಮಾಜ*, ೧೯೯೮, ಜೀವ ಪ್ರಕಾಶನ, ಮೈಸೂರು.

ಜ್ಯೋತ್ಸ್ನಾಕಾಮತ., *ಮಹಿಳೆ ಒಂದು ಅಧ್ಯಯನ*, ೧೯೯೯, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

ದಾದಪೀರ್ ಬಿ.ಸಿ., *ಪಿಂಜಾರರ ಸಂಸ್ಕೃತಿ*, ೧೯೯೦, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ದಾಸನೂರು ಕೂಸಣ್ಣ., *ಶೋಷಿತ ಜಂಗಮರ ಮೀಸಲಾತಿ*, ಮಾತಂಗ ಪ್ರಕಾಶನ, ಮೈಸೂರು

ದೀಪಿಕಾ., *ಮೀನುಗಾರಿಕೆ*, ೧೯೮೫, ಆರಾ ಸಾಹಿತ್ಯ, ಬೆಂಗಳೂರು.

ದೇವೇಂದ್ರಕುಮಾರ ಸಿ. ಹಕಾರಿ., *ಡೊಂಬರ ಸಂಸ್ಕೃತಿ*, ೧೯೯೦, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ನಂಜಮ್ಮಣಿ ಎಂ., *ಸಾಮಾಜಿಕ ಮಾನವಶಾಸ್ತ್ರ*, ೧೯೭೪, ಕನ್ನಡ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾಗಯ್ಯ ಜೆ.ಎಂ., *ಬಳ್ಳಾರಿ ಜಿಲ್ಲೆಯ ಜನಗಳು*, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ನಾಗೇಶ ಎಚ್.ಎಂ., *ಗ್ರಾಮೀಣ ನ್ಯಾಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ನಾಯಕ ಡಿ.ಬಿ., *ಲಂಬಾಣಿ ಜನಪದ ಸಾಹಿತ್ಯ*, ೨೦೦೦, ಬಂಜಾರಾ ಪ್ರಕಾಶನ, ಗುಲ್ಬರ್ಗಾ.

ನಾರಾಯಣ ಎಂ., *ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ*, ೨೦೦೦, ಚೇತನ ಬುಕ್‌ಹೌಸ್, ಮೈಸೂರು.

ನಿಂಗಣ್ಣ ಸಣ್ಣಕ್ಕಿ., *ಬುಡಬುಡಕೆಯವರು*, ೧೯೮೦, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಪುರುಷೋತ್ತಮ ಬಿಳಿಮಲೆ., *ದಲಿತ ಜಗತ್ತು*, ೧೯೮೯, ಹೊಸದಿಕ್ಕು ಪ್ರಕಾಶನ, ಬೆಂಗಳೂರು.

ಪೋತೆ ಎಚ್.ಟಿ., ಹೈದ್ರಾಬಾದ್ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು, ೨೦೦೦, ಅಂಬು ಪ್ರಕಾಶನ ರಾಯಚೂರು.

ಬರಗೂರು ರಾಮಚಂದ್ರಪ್ಪ., *ಸಂಸ್ಕೃತಿ ಮತ್ತು ಸೃಜನಶೀಲತೆ* ೧೯೯೧, ಜನಸಿಂಹ ಪ್ರಕಾಶನ, ಬೆಂಗಳೂರು.

ಭಟ ಎಲ್.ಜಿ., *ಹಾಲಕ್ಕಿ ಒಕ್ಕಲಿಗರು*, ೧೯೮೦, ಐ.ಬಿ.ಎಚ್. ಪ್ರಸಾರಾಂಗ, ಬೆಂಗಳೂರು.

ಬೈರಪ್ಪ ಕೆ., *ಸಮಾಜಶಾಸ್ತ್ರದ ಮೂಲತತ್ವಗಳು*, ೧೯೯೫-೯೭, ಸುರೇಶ ಪಬ್ಲಿಕೇಷನ್, ಗದಗ

ಭೆರಪ್ಪ ಕೆ., *ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು*, ೧೯೯೭, ಗುಲ್ಬರ್ಗಾ.

ಭೈರಪ್ಪ ಕೆ., *ಶಿಕ್ಷಣ ಸಮಾಜಶಾಸ್ತ್ರ*, ೨೦೦೧, ಕೆಂಬ್ರೀಡ್ಜ್ ಪಬ್ಲಿಷ್, ಬೆಂಗಳೂರು.

ಭೈರಪ್ಪ ಕೆ., *ಸಾಮಾಜಿಕ ಸ್ತರವಿನ್ಯಾಸ ಹಾಗೂ ಸಂಚಲನೆ*, ಚೇತನ ಬುಕ್‌ಹೌಸ್, ಮೈಸೂರು.

ಭೈರಪ್ಪ ಕೆ.ಎಂ., *ಭಾರತೀಯ ಸಮಾಜ*, ಪ್ರಕಾಶ ಸಾಹಿತ್ಯ, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., *ಸಿದ್ಧಿಯರ ಸಂಸ್ಕೃತಿ*, ೧೯೯೦, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಬೋರಲಿಂಗಯ್ಯ ಹಿ.ಚಿ., *ಕರ್ನಾಟಕ ಜನಪದ ಕಲೆ ಕೋಶ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

ಮಧು ವೆಂಕಾರೆಡ್ಡಿ., *ಜನಪದ ಕಸೂತಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮಲ್ಲಿನಾಥಯ್ಯ ಡಿ.ಎಚ್., (ಅನು) *ಸಮಾಜಶಾಸ್ತ್ರದ ಕೈಪಿಡಿ*, ೧೯೮೫, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು.

ಮಹಾದೇವ ಸಿ., *ಬಳ್ಳಾರಿ ಜಿಲ್ಲೆಯ ಮರದ ವಾಸ್ತು*, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮೈತ್ರಿ ಕೆ.ಎಂ., *ಬುಡಕಟ್ಟು ಕುಲಕಸುಬುಗಳು*, ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಮೊಗಳ್ಳಿಗಣೇಶ., *ದಲಿತರು ಮತ್ತು ಜಾಗತೀಕರಣ*, ೧೯೯೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ರಮೇಶ ಸ.ಚಿ. ಸಂ ಅಲೆಮಾರಿಗಳ ಸ್ಥಿತಿಗತಿ, ೨೦೦೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ರವೀಂದ್ರ ಕೊಪ್ಪರ್., *ಭಾರತೀಯ ಸಮಾಜ ಅಧ್ಯಯನ*, ೧೯೮೬, ಸುರೇಶ ಪಬ್ಲಿಕೇಷನ್, ಗದಗ.

ರಾಘು ಕೆ., *ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ*, ೧೯೯೯, ಚೇತನ ಬುಕ್‌ಹೌಸ್, ಮೈಸೂರು.

ರಾಜಣ್ಣ ಆರ್., *ನಾಯಕ ಜನಾಂಗದ ಇತಿಹಾಸ*, ೧೯೮೨, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.

ರಾಜಶೇಖರ ಎಸ್., *ಸಾಮಾಜಿಕ ಸಂಶೋಧನೆ*, ೧೯೯೮, ಭ್ರಮರ ಪ್ರಕಾಶನ, ಶಿವಮೊಗ್ಗ.

ರಾಜಶೇಖರಯ್ಯ ಎ.ಎ., (ಸಂ) ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ೧೯೬೯, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ರಾಮ ಮನೋಹರ ಲೋಹಿಯ., *ಜಾತಿಪದ್ಧತಿ*, ೧೯೯೮, ಬೆಂಗಳೂರು.

ರಾಮಣ್ಣ ಕ್ಯಾತನಹಳ್ಳಿ., *ಗೊಂದಲಿಗರು : ಒಂದು ಅಧ್ಯಯನ* ೧೯೦೦, ಕನ್ನಡ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ರಾಮಯ್ಯ ಕೋಟಗನಹಳ್ಳಿ., *ಸಿಂದ್‌ಮಾದಿಗರ ಸಂಸ್ಕೃತಿ*, ೧೯೯೦, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ರೇಣುಕಾಚಾರ್ಯ ಸಿ.ಕೆ., *ಸಾಮಾಜಿಕ ಸಂಖ್ಯಾಶಾಸ್ತ್ರ*, ಚೇತನ ಬುಕ್‌ಹೌಸ್, ಮೈಸೂರು.

ಲಕ್ಕಪ್ಪಗೌಡ ಎಚ್.ಜೆ., (ಪ್ರ.ಸಂ). *ಕರ್ನಾಟಕ ಬುಡಕಟ್ಟುಗಳು ಸಂಪುಟ - ೨*, ಕರ್ನಾಟಕ ಜಾನಪದ ಯಕ್ಷಗಾನ ಆಕಾಡೆಮಿ, ಬೆಂಗಳೂರು

ಲಲಿತ ಎ.ಸಿ., *ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ*, ೧೯೦೦, ಕರ್ನಾಟಕ ಸಾಹಿತ್ಯ ಆಲೂರು, ಬೆಂಗಳೂರು

ಲಕ್ಷ್ಮೀಪತಿ ಕೋಲಾರ., *ಮಾಸ್ತಿಕರ ಸಂಸ್ಕೃತಿ*, ೧೯೯೩, ಕನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ವೆಂಕಟಗಿರಿ ದಳವಾಯಿ., *ಬಳ್ಳಾರಿ ಜಿಲ್ಲೆಯ ಸಮಕಾಲೀನ ಕಾವ್ಯ*, ೧೯೯೭, ಗೌತಮ ಪ್ರಕಾಶನ ಬಳ್ಳಾರಿ.

ಶರ್ಮ ಎ.ಆರ್., *ಸಾಮಾಜಿಕ ಚಿಂತನೆ ಇತಿಹಾಸ*, ಚೇತನ ಬುಕ್‌ಹೌಸ್, ಮೈಸೂರು.

ಶಿವಣ್ಣ ಡಿ.ಕೆ., *ಭಾರತದ ಪ್ರಚಲಿತ ಸಾಮಾಜಿಕ ಸಮಸ್ಯೆಗಳು*, ಕಲಾಪ್ರಕಾಶನ, ಬೆಂಗಳೂರು.

ಶ್ರೀಪಾದ ಅಮೃತ ಪಾಂಗೆ., (ಅನು) ಎಂ. ಅನಂತಕೃಷಿ ಹೆಬ್ಬಾರ, ಎನ್. ರಾಮಚಂದ್ರ ಉಡಪ., *ಭಾರತ ಸಂಘ ಜೀವನದಿಂದ ಗುಲಾಮಗಿರಿಗೆ*, ೧೯೮೩, ಅಭಿವ್ಯಕ್ತ ಪ್ರಕಾಶನ, ಮಂಗಳೂರು.

ಶ್ರೀಮತಿ ಎಚ್.ಎಸ್., *ಆಧುನಿಕ ಭಾರತದಲ್ಲಿ ಮಹಿಳೆ* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಶಂಕರರಾವ್ ಚ.ನ., *ಭಾರತೀಯ ಸಮಾಜ*, ೧೯೯೫, ಜೈಭಾರತ ಪ್ರಕಾಶನ, ಮಂಗಳೂರು.

ಶಂಕರರಾವ್ ಚ.ನ., *ಭಾರತೀಯ ಸಮಾಜ ಅಧ್ಯಯನ*, ೧೯೯೬, ಜೈ ಭಾರತ ಪ್ರಕಾಶನ, ಮಂಗಳೂರು.

ಶಂಕರರಾವ್ ಚ.ನ., *ಸಾಮಾಜಿಕ ಸಂಶೋಧನೆಯ ಕೈಪಿಡಿ*, ೧೯೯೭, ಜೈ ಭಾರತ ಪ್ರಕಾಶನ, ಬೆಂಗಳೂರು.

ಶಂಕರರಾವ್ ಚ.ನ., *ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘಟನೆ*, ೧೯೯೯, ಜೈಭಾರತ ಪ್ರಕಾಶನ, ಮಂಗಳೂರು.

ಶೇಷಾದ್ರಿ ಬಿ., *ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರೀಕರಣ ಮತ್ತು ಜನಾಂದೋಲನ*, ೧೯೯೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಷೇಮಾಲಿಂಗ ರಾನೂರ್., *ಯೋಜನೆ ಮತ್ತು ಬಡತನ ನಿವಾರಣೆ*, ೧೯೯೯, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಸವಿತಾ ನಾಯಕ., *ಬುಡಕಟ್ಟು ಮಹಿಳೆಯರ ಪ್ರಧಾನ ಕಲೆ*, ೨೦೦೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಹರಿಲಾಲ ಪವಾರ., *ಹೆಳವರ ಸಂಸ್ಕೃತಿ* ೧೯೯೩, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು.

ಹಿರೇಮಠ ಎಸ್.ಎಸ್., *ಬಳ್ಳಾರಿ ಜಿಲ್ಲೆಯ ಆಧುನಿಕ ಸಾಹಿತ್ಯ*, ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ, ಹೂವಿನಹಡಗಲಿ.

ನಿಘಂಟು ಮತ್ತು ಗ್ಯಾಸೆಟಿಯರ್

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೧, ೧೯೮೪.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ೧೯೮೬.

ಭಾರತ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೨, ೧೯೯೮.

ಕನ್ನಡ ಜಾನಪದ ವಿಶ್ವಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ವಿಶ್ವಕೋಶ : ೧೯೭೦: ಸಂಪುಟ-೨, ೧೯೭೩: ಸಂಪುಟ-೬, ೧೯೭೪: ಸಂಪುಟ-೭, ೧೯೭೫: ಸಂಪುಟ-೮, ಪ್ರಕಟಣೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಸೂರ್ಯನಾಥ ಕಾಮತ್ ಯು., (ಪ್ರ.ಸಂ.) ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಬೆಂಗಳೂರು, (ಕರ್ನಾಟಕ ಗ್ಯಾಸೆಟಿಯರ್ ಇಲಾಖೆ) ಪು. ೪-೫.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ವರದಿ ಸಂಪುಟ-೧, ಭಾಗ-೧ ಮುಖ್ಯ ವರದಿ, ೧೯೭೫, ಎಲ್.ಜಿ. ಹಾವನೂರು ಅಧ್ಯಕ್ಷರು (೧೯೫೨ರ ವಿವರಣಾ ಆಯೋಗಗಳ ಅಧಿನಿಯಮದ ಮೇರೆಗೆ ರಚಿತ ೧೯೫೨ರ ಕೇಂದ್ರ ಅಧಿನಿಯಮ)

Reference

Ananthakrishana Iyer L.K., *The Mysore Tribes Castes*, 1930, Mysore University, Mysore Vol.I, P.380

Basava K.D., *Marketing Management*, Vidyavahini Prakashana, Hubli.

Elwin Verrier., *The Religion of an Indian Tribes*, 1981, Oxford University press Bombay.

Frith, Raymaond, *The works of God*, 1967, London School of Economics, London.

Ghurye., *The Scheduled Tribes*, 1959, Bombay Popular Prakashan

Hawanur L.G., *Karnataka Backward Classes Commission Report*, 1975, Government Press, Bangalore.

Herskovits M.J., *Cultural Anthropology*, 1974, Inida Book House, New Delhi.

Nanjundayya H.V., *The Ethnographical Survey of Mysore*, 1960, Bangalore Govt. Press.

Nanjundaiah H.V. and Anathakrishana, The Mysore Tribles and Castes IV. vols, 1926-35, Bangalore, Mysore Govt. Press.

Nirmalkumar Bose., *Tribal Life in India*, 1971, National Book Trust, New Delhi

Singh K.S., *The Seheduled Tribes*, 1993, (People of India Series) Vol-II Oxford University Press, New Delhi.

Singh K.S., *India's Communities*, 1998, A.G. Vol-IV, Oxford University Press, New Delhi.

Singh K.S., (Ed), The Scheduled Tribes. 1994. National Series, Vol-III, Oxford University Press, New Delhi.

Srinivas M.N., *Social Change In Modern India*, 1966, Allied Publications, Bombay.

Srinivas M.N., *Collected Esaaya*, 2002, Oxford University Press, New Delhi.

Thurston., (Ed), *Ethongraphi Notes In Southern India*, 1906, Govt. Press, Madras.

Thurstan and Rangachar K., *Caste and Tribes of Southern*, Vol. IV, Asian Education Services, New Delhi.

Willam J., *The Family Foundation of Modern Sociology*, 1965, Series Prentice hall of India Pvt. Ltd, New Delhi.

ವಕ್ತೃಗಳ ಹೆಸರು ಮತ್ತು ವಿಳಾಸ	ಬೆಡಗು	ವಯಸ್ಸು	ಸಮುದಾಯ	ಕಸುಬು	ದಿನಾಂಕ
೧	೨	೩	೪	೫	೬
ನಾಗಪ್ಪ ತಂದೆ ಕರಿಮಾರೆಪ್ಪ ಭಾಗ್ಯನಗರ, ಕೀರ್ತಿ ಕಾಲೋನಿ ಕೊಪ್ಪಳ ತಾ. ಜಿಲ್ಲೆ.	ಸಿಂಧಾಲೋಳ್	೭೦	ಸಿಂಧೋಳ್ಳು	ಭೀಕ್ಷಾಟನೆ	೧೦.೦೫.೦೫
ಬೀಚಪ್ಪ ತಂದೆ ಸಣ್ಣ ಬೆಟ್ಟಪ್ಪ ಬಸವನಗರ, ಗುಲ್ಬರ್ಗ	ಸಿಂಧಾಲೋಳ್	೫೪	ಸಿಂಧೋಳ್ಳು	ಭೀಕ್ಷಾಟನೆ	೦೧.೧೦.೦೪
ಸುಕಪ್ಪ ತಂದೆ ಸುಂಕಪ್ಪ ಉರಕುಂದಿ ಈರಣ್ಣ ನಗರ ಅಶೋಕ ಡಿಪೋ, ರಾಯಚೂರು	ನಲಭೋತಲೋರು	೫೦	ಸಿಂಧೋಳ್ಳು	ಭಿಕ್ಷಾಟನೆ	೨೮.೦೯.೦೪
ರಾಹುಲ್ ನಾಗಪ್ಪ, ಅಧ್ಯಕ್ಷರು ಸಿಂಧೋಳ್ಳು ಸಮಾಜ ಕಲ್ಯಾಣ ಸಂಘ ಸಿಂಧೋಳ್ಳು ಆಶ್ರಯ ಕಾಲೋನಿ ಕಂಪ್ಲಿ, ಹೊಸಪೇಟೆ ತಾ. ಬಳ್ಳಾರಿ ಜಿ.	ರಾಹುಲೋಳ್	೪೦	ಸಿಂಧೋಳ್ಳು	ಭೀಕ್ಷಾಟನೆ	೦೮.೦೪.೦೪
ಕಿಪುಡು ಚಂದ್ರಪ್ಪ ಬಡೇಲಡಕು ಅಂಚೆ ಕೂಡ್ಲಿಗಿ ತಾ. ಬಳ್ಳಾರಿ ಜಿಲ್ಲೆ.	ಒಂಟಿತ್ರಿನಲ್	೭೦	ಸುಡುಗಾಡುಸಿದ್ಧರು	ಭೀಕ್ಷಾಟನೆ	೧೨.೦೭.೦೪

೧	೨	೩	೪	೫	೬
ಮರಿಯಪ್ಪ ಗಂಟಿ ಮಾಟಲದಿನ್ನಿ ಅಂಚೆ ಯಲಬುರ್ಗ ತಾ. ಕೊಪ್ಪಳ ಜಿಲ್ಲೆ	ವಿಭೂತಿಯವರ	೪೫	ಸುಡುಗಾಡು ಸಿದ್ದರು	ಭಿಕ್ಷಾಟನೆ	೧೧.೦೫.೦೫
ಗಂಗಮ್ಮ ಕೊಪ್ಪಳ ತಾ. ಜಿಲ್ಲೆ	ಮಾನಪಾಡಿ	೬೫	ಕೊರವರು	ಪೊರಕೆ ವ್ಯಾಪಾರ	೧೫.೦೫.೦೫
ಉಮಾ ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ.	ಮಾನಪಾಡಿ	೪೦	ಹಂದಿಜೋಗಿ	ಅಲಂಕಾರಿಕ ವ್ಯಾಪರ	೧೭.೦೫.೦೫
ಗಾಳೆಮ್ಮ ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ	ಮಾನಪಾಡಿ	೩೦	ಹಂದಿಜೋಗಿ	ವ್ಯಾಪಾರ	೨೦.೦೫.೦೫
ಶ್ರೀಕಾಂತ ಕಂಪ್ಲಿ, ಹೊಸಪೇಟೆ ತಾ. ಬಳ್ಳಾರಿ ಜಿ.	ಮೇವಾಡೋ	೩೩	ಹಕ್ಕಿಪಿಕ್ಕಿ	ಕೂಲಿ	೨೨.೦೫.೦೫
ಜಿ. ರಾಮಸ್ವಾಮಿ ಕೃಷ್ಣಳ್ಳಿ ಅಂಚೆ, ಕೂಡ್ಲಿಗಿ ತಾ.	ಗೋಧಿವಾಳ್ಳ	೫೧	ಕಿನ್ನರಿ ಜೋಗಿ	ಭಿಕ್ಷಾಟನೆ	೦೧.೦೬.೦೫
ಮುತ್ತಯ್ಯ ಬಸವಕಲ್ಯಾಣ, ಗುಲ್ಬರ್ಗ ಜಿಲ್ಲೆ	ಹೆಳಮಲ್ಲರು	೪೯	ಹೆಳವರು	ವಂಶಾವಳಿ	೧.೧೦.೦೪

೧	೨	೩	೪	೫	೬
ಕೆಂಚಯ್ಯ ಗಂಗಾವತಿ, ಕೊಪ್ಪಳ ಜಿಲ್ಲೆ	ಮಲ್ಲಭಕ್ತಲು	೬೬	ಹೆಳವರು	ವಂಶಾವಳಿ	೧೫.೦೫.೦೫
ಹುಚ್ಚಪ್ಪ ಡಿ. ವಡ್ಡರ ಹಟ್ಟಿ, ಗಂಗಾವತಿ ತಾ. ಕೊಪ್ಪಳ ಜಿಲ್ಲೆ	ಅಕ್ಕಲರ್	೬೫	ದೊಂಬರು	ಕೂಲಿ	೧೬.೦೫.೦೫
ಅಂಬ್ರಪ್ಪ ದೇವಪುರ ಗ್ರಾಮ, ಸುರುಪರು ತಾ. ಗುಲ್ಬರ್ಗ ಜಿಲ್ಲೆ	ಅಕ್ಕಲರ್	೪೫	ದೊಂಬರು	ಕೂಲಿ	೦೨.೧೦.೦೪
ರಂಗಪ್ಪ ಲಕ್ಷ್ಮಿ ಮಠ, ಮಾನ್ವಿ ರಾಯಚೂರು	ಗ್ಯಾದೊಳ್ಳು	೬೫	ಚನ್ನದಾಸರು	ಆಟದಾಸರು	೨೮.೦೯.೦೪
ಶಿವಣ್ಣ ಮೆಟ್ರಿ ಬಳ್ಳಾರಿ ಜಿಲ್ಲೆ.	ಕುಂದ್ರೊಲ್ಲು	೪೫	ಚನ್ನದಾಸರು	ಭಿಕ್ಷಾಟನೆ	೨೩.೦೫.೦೫
ಯಲ್ಲಪ್ಪ ಮುದಗಲ್ ಅಂಚೆ, ರಾಯಚೂರು ಜಿ.	ಕಟ್ಟಿಮನೆಯವರ್	೫೩	ದಕ್ಕಲಿಗರು	ಭಿಕ್ಷಾಟನೆ	೨೯.೦೯.೦೪

೧	೨	೩	೪	೫	೬
ದೊಕ್ಕಲು ಬಾಲಪ್ಪ ಗೌಡ ಮುದನಲ್ ಅಂ, ರಾಯಚೂರು ಜಿ.	ಕಟ್ಟಿಮನೆಯವರ್	೭೫	ದಕ್ಕಲಿಗರು	ಭಿಕ್ಷಾಟನೆ	೨೯.೦೯.೦೪
ಮೈಲವ್ವ ಕೊಡೇಕಲ್ಲು ಅಂ, ಸುರುಪುರ ತಾ. ಗುಲ್ಬರ್ಗ ಜಿಲ್ಲೆ.	ಕಟ್ಟಿಮನೆಯವರ್	೪೯	ದಕ್ಕಲಿಗರು	ಕೂಲಿ	೨೮.೦೯.೦೪
ಸೋದರ್‌ಸಿಂಗ್ ಹಳ್ಳದಕೇರಿ ಅಂ, ಬೀದರ್ ತಾ.ಜಿಲೆ.	ಹುಯಿಕಾ	೫೫	ರಾಜಗೊಂಡ	ಗಿಡಮೂಲಿಕೆ ವ್ಯಾಪಾರ	೦೫.೧೦.೦೪
ನಾಶುಮಾರಾಜ್ ಹಳ್ಳದ ಕೇರಿ ಅಂ., ಬೀದರ್ ತಾ.ಜಿಲೆ.	ಹುಯಿಕಾ	೬೫	ರಾಜಗೊಂಡ	ಗಿಡಮೂಲಿಕ ವ್ಯಾಪಾರ	೦೬.೧೦.೦೪
ಮಾಧವರಾವ್ ಬುಕ್ಕಸಾಗರ ಅಂ., ಕಂಪ್ಲಿ ಹೊಸಪೇಟೆ, ಬಳ್ಳಾರಿ ಜಿಲ್ಲೆ	ಪಡಿಯಾರ್	೬೮	ಗೋಸಂಗಿ	ಮೀನುಗಾರಿಕೆ	೧೯.೦೬.೦೫
ಸಂಪತ್ತುಬಾಯಿ ಬುಕ್ಕಸಾಗರ ಅಂ., ಕಂಪ್ಲಿ ಹೊಸಪೇಟೆ, ಬಳ್ಳಾರಿ ಜಿಲ್ಲೆ	ಪಡಿಯಾರ್	೪೫	ಗೋಸಂಗಿ	ಮೀನುಗಾರಿಕೆ	೨೩.೦೫.೦೫

೧	೨	೩	೪	೫	೬
ಕೆಂಗಣ್ಣ ಕೊಪ್ಪಳ ತಾ. ಜಿಲ್ಲೆ	ಮೊಹರೆ	೪೫	ಕಿಳ್ಳೇ/ಶಿಳ್ಳೆಕ್ಯಾತ್	ಮೀನುಗಾರಿಕೆ	೧೭.೦೫.೦೫
ಮಾರುತಿ ಬಾಗಟೆ ಕೊಪ್ಪಳ ತಾ. ಜಿಲ್ಲೆ	ಮೊಹರೆ	೪೧	ಕಿಳ್ಳೇ/ಶಿಳ್ಳೆಕ್ಯಾತ್	ಮೀನುಗಾರಿಕೆ	೧೭.೦೫.೦೫
ಲಕ್ಷ್ಮಣ್ಣಾ ಗುಲ್ಬರ್ಗ ಅಂ., ತಾ. ಜಿಲ್ಲೆ	ಕಬಸ್ತೋತ್	೪೬	ಬೈಲುಪತ್ತಾರ್	ಪತ್ತಾರಿಕೆ	೦೩.೧೦.೦೪
ಸುಕಮನಿ ಶಹಪುರ ಅಂ., ಗುಲ್ಬರ್ಗ ಜಿಲ್ಲೆ	ಗೌಡ್ಯ	೪೩	ಬೈಲುಪತ್ತಾರ್	ಪತ್ತಾರಿಕೆ	೦೩.೧೦.೦೪
ಶಂಕ್ರಪ್ಪ ಕುದುರೆಮೋತಿ, ಕೊಪ್ಪಳ ತಾ.	ವಿಭೂತಿ	೪೫	ಬುಡ್ಗಜಂಗಮ್	ವೇಷಗಾರಿಕೆ	೧೪.೦೫.೦೫
ಶೇಖಮ್ಮ ಕುದುರೆಮೋತಿ, ಕೊಪ್ಪಳ ತಾ.	ವಿಭೂತಿ	೪೩	ಬುಡ್ಗಜಂಗಮ್	ಬೀದಿ ವ್ಯಾಪಾರ	೧೪.೦೫.೦೫
ರಾಮಸಿಂಗ ಸಿಕ್ಕಲಿಗ ದೇವರಾಜ ಕಾಲೋನಿ ಕೊಪ್ಪಳ ತಾ. ಜಿ.	ತಿಲಪಾಡಿಯಾ	೪೫	ಸಿಕ್ಕಲಿಗಾರ	ಕಲಾಯಿ ವೃತ್ತಿ	೧೩.೦೫.೦೫

೧	೨	೩	೪	೫	೬
ಗುರುದೇವ್ ಸಿಂಗ್ ದೇವರಾಜ ಕಾಲೋನಿ ಕೊಪ್ಪಳ ತಾ. ಜಿ.	ಬಹುರಿ	೫೧	ಸಿಕ್ಕಲಿಗಾರ	ಕಲಾಯಿ ವೃತ್ತಿ	೧೩.೦೫.೦೫
ಪಾಚಂಗಿ ಜೆ.ಎಚ್. ಗೊಂದಲಿ ಗಲ್ಲಿ, ಗಾಂಧಿನಗರ ಕೊಪ್ಪಳ ತಾ.ಜಿ.	ಪಾಚಂಗಿ	೪೦	ಗೊಂದಲಿಗರು	ಬೀದಿ ವ್ಯಾಪಾರ	೧೪.೦೫.೦೫
ಪ್ರಭಾಕರ್ ಚೆಂಚು ಸೂಪರ್ ಮಾರ್ಕೆಟ್ ಗುಲ್ಬರ್ಗ ಜಿ.	ರೂಪಟಿಲ್ಲಾ	೩೮	ಅಡವಿಚೆಂಚರು	ಬೀದಿ ವ್ಯಾಪಾರ	೦೩.೧೦.೦೪

ಹೈದ್ರಾಬಾದ್ ಕರ್ನಾಟಕದ ಅಲೆಮಾರಿಗಳ ಸಮಾಜೋ-ಆರ್ಥಿಕ ವ್ಯವಸ್ಥೆ

ಪ್ರಶ್ನಾವಳಿ

ಎ. ಸಾಮಾನ್ಯ ಮಾಹಿತಿ

೦೧. ಸಂದರ್ಶನದ ದಿನಾಂಕ

೦೨. ಸಂದರ್ಶಿಸಲ್ಪಟ್ಟವರು

೦೩. ಗ್ರಾಮ

೦೪. ತಾಲ್ಲೂಕು

೦೫. ಜಿಲ್ಲೆ

೦೬. ಹೋಬಳಿ

೦೭. ಮನೆತನದ ಹೆಸರು :

೦೮. ಮಾತೃಭಾಷೆ :

೦೯. ಆಡುವ ಇತರೆ ಭಾಷೆಗಳು :

೧೦. ಬೆಡಗು / ಬಳಿ / ಗೋತ್ರ / ಚಿಹ್ನೆ :

೧೧. ಮನೆ ದೇವರು :

೧೨. ಪೂಜಿಸುವ ದೇವರುಗಳು :

೦೧.

೦೨.

೦೩.

೧೩. ಹಬ್ಬ ಜಾತ್ರೆಗಳು :

೧೪. ಕುಲಕಸುಬು :

೧೫. ಕುಲಗುರು ಇರುವರೇ? :

೧೬. ಭೂ ಹಿಡುವಳಿ (ಎಕರೆಗಳಲ್ಲಿ):

ಅ. ಒಣ ಭೂಮಿ

ಆ. ನೀರಾವರಿ

೧೯. ಮನೆ ಮಾದರಿ [ ]

೦೧. ಗುಡಾರ [ ]

೦೨. ಗುಡಿಸಲು [ ]

೦೩. ಟಿನ್ ಮನೆ [ ]

೦೪. ಧಾಬಾ (ಮಾಳಿಗೆ)

೦೫. ಆರ್.ಸಿ.ಸಿ. ಮನೆ

೦೬. ಹೆಂಚಿನ ಮನೆ

೨೦. ಸೌಲಭ್ಯಗಳು

೦೧. ಶಿಕ್ಷಣ [ ]

೦೨. ಪಡಿತರ ಚೀಟಿ

೦೩. ಮನೆ (ಸ್ವ [ ] / ಸ* [ ])

೦೪. ನಿವೇಶನ (ಸ್ವ [ ] / ಸ* [ ])

೦೫. ಜೀವವಿಮಾ [ ]

೦೬. ವಿದ್ಯುತ್ ದ್ವೀಪ (ಸ್ವ [ ] / ಸ* [ ])

೦೭. ಬಂಡಿ [ ]

೦೮. ಸೈಕಲ್ [ ]

೦೯. ಸ್ಕೂಟರ್ [ ]

೧೦. ಆಟೋ ರಿಕ್ಷಾ [ ]

೧೧. ರಿಕ್ಷಾ [ ]

೧೨. ಜೀಪ್ [ ]

೧೩. ಕಾರು [ ]

೧೪. ಟ್ರಾಕ್ಟರ್ [ ]

೧೫. ಲಾರಿ [ ]

೧೬. ರೇಡಿಯೋ [ ]

೧೭. ಟೇಪ್‌ರೆಕಾರ್ಡರ್ [ ]

೧೮. ಟಿ.ವಿ.

೧೯. ಟೆಲಿಫೋನ್

೨೦. ಫ್ರಿಝ್

೨೧. ವಾಷಿಂಗ್ ಮೆಷಿನ್

೨೨.

೨೩.

೨೧. ಸಾಕು ಪ್ರಾಣಿಗಳು : ಸಂಖ್ಯೆ

೦೧. ಎತ್ತು

೦೨. ಎಮ್ಮೆ

೦೩. ಆಕಳು

೦೪. ಕುರಿ, ಮೇಕೆ

ಬಿ. ವೈಯಕ್ತಿಕ ಮಾಹಿತಿ

ಕ್ರ. ಸಂ.	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ ಮುಖ್ಯಸ್ಥರು	ಲಿಂಗ	ವಯಸ್ಸು	ವಿವಾಹ ವಾಗಿದೆಯೇ	ಶೈಕ್ಷಣಿಕ ಮಟ್ಟ	ವೃತ್ತಿ	ವರಮಾನ	ಸರಕಾರಿ ಸೌಲಭ್ಯಗಳು ( )				೧೭ ವಲಸಿಗರೇ?( )	
									ವಿಧವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯವೇತನ	ಹೌದು	ಅಲ್ಲ
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩		
೦೧													೧೮ ವಲಸೆ ಬಂದದ್ದು ಎಲ್ಲಿಂದ, ಕಾರಣಗಳು?	
೦೨														
೦೩														
೦೪														
೦೫														
೦೬														
೦೭														
೦೮														
೦೯														
೧೦														

ಅಜ್ಜಯ್ಯ ಸಿ.
ಸಂಶೋಧನ ವಿದ್ಯಾರ್ಥಿ

ಡಾ.ಮೊಗಳ್ಳಿ ಗಣೇಶ್
ಮಾರ್ಗದರ್ಶಕರು

ಯಾವುದಾದರು ಪ್ರಶ್ನೆಗಳಿಗೆ ಪಕ್ಕಗಳು ಹೆಚ್ಚಿನ ಮಾಹಿತಿ ಕೊಟ್ಟಲ್ಲಿ ಪ್ರತ್ಯೇಕ ಹಾಳೆಯೊಂದರಲ್ಲಿ ಬರೆದು ಅದೇ



ಬಂಡಿ (ಗಾಡಿ) ಯಲ್ಲಿ ವಾಸ



ಅಲೆಮಾರಿಗಳ ಬಿಡಾರಗಳು



ಮರದ ಕೆಳಗಡೆ ವಾಸ



ಬಿಡಾರ ತಯಾರಿಸುತ್ತಿರುವುದು



ಹಾಳುಬಿದ್ದ ನಿಲ್ದಾಣದಲ್ಲಿ ವಾಸ




ಅರ್ಧಕ್ಕೆ ನಿಂತ ಕಟ್ಟಡದಲ್ಲಿ ವಾಸ



ಕಾಡಿನ ಸಮೀಪ ವಾಸ



ಸಂತೆಯಾ ಮಳಿಗೆ ಕೆಳಗೆ ವಾಸ



ಸಾಮಾನುಗಳು ಮರಕ್ಕೆ ನೇತಾಕಿರುವುದು



ಘಂಟೆ ಮೂಲಕ ವಂಶಾವಳಿ ಹೇಳುವುದು



ಬಿಡಾರ ನಿರ್ಮಾಣ ಹಂತದಲ್ಲಿ




ಮಲೀನ ಪರಿಸರದಲ್ಲಿ ವಾಸ



ಬಿಡಾರ ನಿರ್ಮಾಣದ ಸಿದ್ದತೆ



ವಂಶಾವಳಿ ಹೇಳುತ್ತಿರುವುದು



ಪೋತುರಾಜ ಭಿಕ್ಷೆ ಬೇಡುತ್ತಿರುವುದು



ಕೊಂಬೆಗೆ ನೇತು ಆಕಿರುವ ಸರಂಜಾಮು


ಕಾಯಕ ಮಾಡಲು ಹೊರಟಿರುವ ಕಿನ್ನರಿ ಜೋಗಿ


ಭವಿಷ್ಯ ನುಡಿಯಲು ಹೊರಟಿರುವ ರಾಮಕೊಂಡಿ


ತಂತಿಯ ಮೇಲಿನ ಕಸರತ್ತು


ಮರದ ಕೆಳಗೆ ವಿಶ್ರಾಂತಿ ಪಡೆಯುವ ಬಾಲಕರು


ಸಾಹಸ ಪ್ರದರ್ಶನ


ನೀರು ತರಲು ಹೊರಟಿರುವುದು


ಬಯಲಿನಲ್ಲಿ ಅಡಿಗೆ ತಯಾರಿಕೆ


ಭಿಕ್ಷೆಗೆ ಹೊರಟಿರುವುದು



ಪಂಚಾಯ್ತಿ ಸಮಾಲೋಚನೆ



ಭಿಕ್ಷೆಯ ಆಹಾರ ಸ್ವೀಕಾರ



ಗುಜರಿ ಸಾಮಾನು ಕೂಡಿ ಆಕಿರುವುದು



ಪತ್ತಾರಿಕೆ ತಯಾರಿಕೆ



ಸಂಗಾತಿ ನಾಯಿಮರಿಯೊಂದಿಗೆ ಆತ್ಮೀಯತೆ




ಬುಟ್ಟಿ ಎಣೆಯುತ್ತಿರುವುದು



ಬ್ಯಾಗ್ ಎಣಿಕೆ



ಪೊರಕೆ ತಯಾರಿಸುತ್ತಿರುವುದು



ಸಾಣೆ ಹಿಡಿಯುವುದು



ಕೌದಿ ತಯಾರಿಸುತ್ತಿರುವುದು



ಜರಡಿ ಮತ್ತು ದಬ್ಬಳ ತಯಾರಿಕೆ



ಪ್ಲಾಸ್ಟಿಕ್ ಹಾಳೆ ತಯಾರಿಕೆ



ಗೋಣಿ ಚೀಲ ಹೊಲೆಯುತ್ತಿರುವುದು



ಉತ್ಪಾದನ ಪರಿಕರಸಿದ್ದತೆಯಲ್ಲಿ



ಅನ್ನ ನೀಡುವ ಗಿಳಿಯೊಂದಿಗೆ ಆತ್ಮೀಯತೆ



ಗಿರಗಟ್ಟಿ ತಯಾರಿಸುತ್ತಿರುವುದು



ಹಗ್ಗ ತಯಾರಿಸುತ್ತಿರುವುದು



ತಟ್ಟೆ ಮತ್ತು ಪುಟ್ಟಿ ಮಾರಾಟ



ಗಿಡ ಮೂಲಿಕೆ ಮಾರಾಟ



ಕೊಡ ಮಾರಾಟಕ್ಕೆ ಹೊರಟಿರುವುದು



ಪಾತ್ರೆ ಮಾರಾಟ



ಜೇನು ಮಾರಾಟ



ಪ್ಲಾಸ್ಟಿಕ್ ಹಾಳೆ ಮಾರಾಟದಲ್ಲಿ



ಆಭರಣ ಮಾರಾಟ



ಚಿಂದಿ ಸಾಮಾನು ಬೇರ್ಪಡಿಸುತ್ತಿರುವುದು



ಹೂವು ಮತ್ತು ತೋರಣ ಮಾರಾಟ



ಸ್ಟೇಷನರಿ ಮಾರಾಟ



ಸರ ಮಾರಾಟ ಮಾಡುತ್ತಿರುವುದು



ರಿಪೇರಿ ಕೆಲಸಕ್ಕೆ ಕಾಯುತ್ತಿರುವುದು



ವ್ಯಾಪಾರಕ್ಕೆ ಹೊರಟಿರುವುದು



ಗಿರಗಟ್ಟಿ ಮಾರಾಟದಲ್ಲಿ ಬಾಲಕ



ವಸತಿ ನಿರ್ಮಿಸಲು ಜಾಗ ವೀಕ್ಷಣೆ



ವಸತಿಗಾಗಿ ಜಾಗಪರಿಶೀಲನೆ



ಚಾಪೆ ತಯಾರಿಕೆ



ಶಂಕು ಜಂಗಮ




ಗೊಂದಲಿ ಮೇಳ



ಕವಲೆತ್ತು ಆಟಪ್ರದರ್ಶನ



ಧಾರ್ಮಿಕ ಭಿಕ್ಷೆಗೆ ಹೊರಟಿರುವ ಸಿಂಧೊಳ್ಳು



ರಿಪೇರಿಯಲ್ಲಿ ತೊಡಗಿರುವುದು



ಕಾಯಕ ನಿರತ ಚನ್ನದಾಸ



ಬುರ್ರಕಥಾಮೇಳ



ಮೀನು ಮಾರಾಟ



ಮೀನು ಹಿಡಿಯುತ್ತಿರುವುದು



ಬಲೆ ಬೀಸಿ ಮೀನು ಹಿಡಿಯುತ್ತಿರುವುದು



ಹಗಲು ವೇಷ ಪ್ರದರ್ಶನ



ದೈವದೀನ ಹುಲುಗಪ್ಪ ಹೆಳವ



ಗುಡಾರ – ಗುಡಿಸಿ ಕಲ್ಯಾಣ ಸಂಘದ ಅಧ್ಯಕ್ಷ ಮಾಧವರಾವ್



ರಾಜ್ಯ ಅಲೆಮಾರಿ ಸಮುದಾಯಗಳ ಅಧ್ಯಕ್ಷ ಭಾಸ್ಕರ್ ದಾಸ್ ಎಕ್ಕಾರ್